ಕೊರಚರ ಭಾಷೆ: ಸಮಾಜೋಭಾಷಿಕ ಅಧ್ಯಯನ

(ಬಳ್ಳಾರಿ-ದಾವಣಗೆರೆ ಜಿಲ್ಲೆಗಳನ್ನು ಅನುಲಕ್ಷಿಸಿ)

(ಕನ್ನಡ ವಿಶ್ವವಿದ್ಯಾಲಯಕ್ಕೆ ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್.ಡಿ.) ಪದವಿಗಾಗಿ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು

ಬಸವರಾಜ ಕೆ. ಗಂಗಪ್ಪ

ಮಾರ್ಗದರ್ಶಕರು

ಡಾ. ಸಾಂಬಮೂರ್ತಿ

ಪ್ರಾಧ್ಯಾಪಕರು

ಕನ್ನಡ ಭಾಷಾಧ್ಯಯನ ವಿಭಾಗ

ಕನ್ನಡ ಭಾಷಾಧ್ಯಯನ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೭

ಕೊರಚರ ಭಾಷೆ: ಸಮಾಜೋಭಾಷಿಕ ಅಧ್ಯಯನ

(ಬಳ್ಳಾರಿ–ದಾವಣಗೆರೆ ಜಿಲ್ಲೆಗಳನ್ನು ಅನುಲಕ್ಷಿಸಿ)

(ಕನ್ನಡ ವಿಶ್ವವಿದ್ಯಾಲಯಕ್ಕೆ ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್.ಡಿ.)
ಪದವಿಗಾಗಿ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು
ಬಸವರಾಜ ಕೆ. ಗಂಗಪ್ಪ

ಮಾರ್ಗದರ್ಶಕರು
ಡಾ. ಸಾಂಬಮೂರ್ತಿ
ಪ್ರಾಧ್ಯಾಪಕರು
ಕನ್ನಡ ಭಾಷಾಧ್ಯಯನ ವಿಭಾಗ

ಕನ್ನಡ ಭಾಷಾಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ–೫೮೩ ೨೭೬
೨೦೧೭

ಸಂಶೋಧಕರ ಘೋಷಣಾ ಪತ್ರ

ಡಾ. ಸಾಂಬಮೂರ್ತಿ, ಪ್ರಾಧ್ಯಾಪಕರು ಅವರ ಮಾರ್ಗದರ್ಶನದಲ್ಲಿ **"ಕೊರಚರ ಭಾಷೆ: ಸಮಾಜೋಭಾಷಿಕ ಅಧ್ಯಯನ"** (ಬಳ್ಳಾರಿ–ದಾವಣಗೆರೆ ಜಿಲ್ಲೆಗಳನ್ನು ಅನುಲಕ್ಷಿಸಿ) ಎಂಬ ಸಂಶೋಧನಾ ಪ್ರಬಂಧವನ್ನು ಸಿದ್ಧಪಡಿಸಿ, ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಕನ್ನಡ ಭಾಷಾಧ್ಯಯನ ವಿಭಾಗಕ್ಕೆ ಸಾದರಪಡಿಸುತ್ತಿದ್ದೇನೆ.

ಈ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ. ಇದರ ಯಾವುದೇ ಭಾಗ ಎಲ್ಲಿಯೂ ಪ್ರಕಟಣೆಗೊಳಿಸಿಲ್ಲ. ಇದು ನನ್ನ ಸ್ವತಂತ್ರವಾದ ಸಂಶೋಧನಾ ಅಧ್ಯಯನವಾಗಿದೆ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸಂಶೋಧಕರು

[signature]

ಬಸವರಾಜ ಕೆ. ಗಂಗಪ್ಪ
ಪಿಎಚ್.ಡಿ. ಸಂಶೋಧನಾ ವಿದ್ಯಾರ್ಥಿ
ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ–೫೮೩ ೨೭೬

ದಿನಾಂಕ : 13/12/2017
ಸ್ಥಳ : ವಿದ್ಯಾರಣ್ಯ

ಮಾರ್ಗದರ್ಶಕರ ದೃಢೀಕರಣ ಪತ್ರ

ಬಸವರಾಜ ಕೆ. ಗಂಗಪ್ಪ ಅವರು ನನ್ನ ಮಾರ್ಗದರ್ಶನದಲ್ಲಿ **"ಕೊರಚರ ಭಾಷೆ: ಸಮಾಜೋಭಾಷಿಕ ಅಧ್ಯಯನ"** (ಬಳ್ಳಾರಿ-ದಾವಣಗೆರೆ ಜಿಲ್ಲೆಗಳನ್ನು ಅನುಲಕ್ಷಿಸಿ) ಎಂಬ ಸಂಶೋಧನಾ ಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಕನ್ನಡ ಭಾಷಾಧ್ಯಯನ ವಿಭಾಗಕ್ಕೆ ಪಿಎಚ್.ಡಿ. ಪದವಿಗಾಗಿ ಸಿದ್ಧಪಡಿಸಿರುತ್ತಾರೆ.

ಪ್ರಸ್ತುತ ಮಹಾಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಇಲ್ಲವೆ ಪ್ರಕಟಣೆಗಾಗಿ ಸಲ್ಲಿಸಿರುವುದಿಲ್ಲ ಎಂದು ಈ ಮೂಲಕ ದೃಢೀಕರಿಸಲಾಗಿದೆ.

ಮಾರ್ಗದರ್ಶಕರು

ಡಾ. ಸಾಂಬಮೂರ್ತಿ
ಪ್ರಾಧ್ಯಾಪಕರು
ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

ದಿನಾಂಕ :

ಸ್ಥಳ : ವಿದ್ಯಾರಣ್ಯ

ಪರಿವಿಡಿ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಮತ್ತು ಸ್ವರೂಪ

೧.೧. ಅಧ್ಯಯನದ ಉದ್ದೇಶ

೧.೨. ಅಧ್ಯಯನದ ವ್ಯಾಪ್ತಿ

೧.೩. ಅಧ್ಯಯನದ ವಿಧಾನ

೧.೪. ಅಧ್ಯಯನದ ಸ್ವರೂಪ

೧.೫. ಅಧ್ಯಯನದ ಮಿತಿ

ಅಧ್ಯಾಯ: ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಮತ್ತು ಸ್ವರೂಪ

ಕರ್ನಾಟಕದಲ್ಲಿ ನೆಲೆಸಿರುವ ಅಲೆಮಾರಿ ಬುಡಕಟ್ಟು ಸಮುದಾಯಗಳಲ್ಲಿ ಕೊರಚ ಸಮುದಾಯವು ಒಂದು ಪಶುಪಾಲಕ ವಲಸೆ ಜನ ಸಮುದಾಯಕ್ಕೆ ಸೇರಿದವರಾಗಿರುತ್ತಾರೆ. ಹಾಗೂ ಕರ್ನಾಟಕಕ್ಕೆ ವಲಸೆ ಬಂದ ಅಲೆಮಾರಿ ಬುಡಕಟ್ಟು ಸಮುದಾಯಗಳಲ್ಲಿ ಒಂದಾಗಿದೆ. ಮೂಲತಃ ತಮಿಳುನಾಡಿನ ಬುಡಕಟ್ಟು ಸಮುದಾಯವಾದ ಕೊರಚ ಸಮುದಾಯ ವಲಸೆಯಾಗಿ ಆಂಧ್ರಪ್ರದೇಶದ ಕರ್ನೂಲು, ಕಡಪ, ಅನಂತಪುರ ಇತ್ಯಾದಿ ಜಿಲ್ಲೆಗಳಲ್ಲಿ ಹಾಗೂ ಕರ್ನಾಟಕದ ಕೋಲಾರ, ಚಿತ್ರದುರ್ಗ, ಶಿವಮೊಗ್ಗ, ರಾಯಚೂರು, ಬಳ್ಳಾರಿ, ದಾವಣಗೆರೆ ಅಲ್ಲದೆ ಇತರೆ ಎಲ್ಲ ಜಿಲ್ಲೆಗಳಲ್ಲಿಯೂ ನೆಲೆಸಿದ್ದಾರೆ. ಇವರ ವಲಸೆಗೆ ಪ್ರಕೃತಿ ವಿಕೋಪಗಳು, ಫಲವತ್ತಾದ ಇವರ ಭೂಭಾಗಗಳ ಮೇಲೆ ಅನ್ಯರ ಆಕ್ರಮಣ ಹಾಗೂ ಪ್ಲೇಗು, ಮಾರಿಬೇನಿ ಇತ್ಯಾದಿ ರೋಗಗಳು ಕಾರಣವಾಗಿರಬಹುದು. ಹೀಗೆ ವಲಸೆ ಬಂದಂತಹ ಇವರನ್ನು ವೃತ್ತಿಯ ಅನುಸಾರ ಕರ್ನಾಟಕದಲ್ಲಿ ಎತ್ತಿನ ಕೊರಚರು, ಹಗ್ಗದ ಕೊರಚರು ಮತ್ತು ಮಲೆನಾಡು ಪ್ರದೇಶಗಳಲ್ಲಿ ವಾಸ ಮಾಡುವವರಿಗೆ ದಬ್ಬೆ ಕೊರಚರು ಎಂದು ಕರೆಯುತ್ತಾರೆ.

ಭಾರತದಲ್ಲಿ ಪ್ರಾದೇಶಿಕತೆಗನುಗುಣವಾಗಿ ಈ ಸಮುದಾಯದವರನ್ನು ಕೊರಚ, ಕೂರ್ಚ್, ಕುರುವನ್, ಕೈಕಾಡಿ, ಯರುಕುಲ ಎಂದು ಬೇರೆ ಬೇರೆ ಹೆಸರುಗಳಿಂದ ಗುರುತಿಸಲಾಗುತ್ತದೆ. ಮೂಲತಃ ಅಲೆಮಾರಿ ಬುಡಕಟ್ಟು ಸಮುದಾಯವಾದರೂ ಈ ಸಮುದಾಯದವರು ಇಂದು ಕೆಲವೊಂದು ಸ್ಥಳಗಳಲ್ಲಿ ಹಟ್ಟಿಗಳನ್ನು ಕಟ್ಟಿಕೊಂಡು ತಕ್ಕಮಟ್ಟಿಗೆ ಸ್ಥಿರವಾಗಿ ನೆಲೆನಿಂತಿದ್ದರೂ ಜೀವನಕ್ರಮದಲ್ಲಿ ತಮ್ಮದೇ ಆದ ಸಾಂಪ್ರದಾಯಿಕ ಗುಣಲಕ್ಷಣಗಳನ್ನು ಉಳಿಸಿಕೊಂಡೇ ಬದುಕುತ್ತಿರುವುದು ಕುತೂಹಲಕರವಾಗಿದೆ. ಪ್ರತ್ಯೇಕವಾದ ಭಾಷೆ, ವೃತ್ತಿ, ಆಚಾರ-ವಿಚಾರಗಳನ್ನು ರೂಢಿಸಿಕೊಂಡು ಮುಖ್ಯವಾಹಿನಿಯಿಂದ ಬಹುಪಾಲು ಹೊರಗೆ ಉಳಿದಿದ್ದಾರೆ. ಊರಾಚೆಗಿನ ಜಾಗದಲ್ಲಿ ಅಥವಾ ಗುಡ್ಡ-ಕಣಿವೆಗಳಿಗೆ ಹತ್ತಿರವಾದ ಸ್ಥಳಗಳು ಇವರ ವಾಸದ ಪ್ರಮುಖ ನೆಲೆಗಳಾಗಿವೆ. ಸಾಮಾನ್ಯವಾಗಿ ಗುಂಪು ಗುಂಪಾಗಿಯೇ ವಾಸಿಸುವ ಈ ಜನಾಂಗವು ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟಿಷ್ ಸರ್ಕಾರವು ಕ್ರಿಮಿನಲ್ ಟ್ರೈಬ್‌ಗಳೆಂದು ಪಟ್ಟಿಮಾಡಿ ಅವಮಾನವಿಯವಾಗಿ (ಹೀನಾಯವಾಗಿ)

ನಡೆಸಿಕೊಂಡ ಬುಡಕಟ್ಟುಗಳಲ್ಲಿ ಪ್ರಮುಖವಾದುದು. ಈ ಹಿನ್ನೆಲೆಯಿಂದಲೆ ಇಂದಿಗೂ ಕೂಡ ವ್ಯವಸ್ಥೆಯ ಕಣ್ಣಿನಲ್ಲಿ ಇವರು ಅಪರಾಧಿಗಳೆಂದೇ ಪರಿಗಣಿಸಲ್ಪಟ್ಟಿದ್ದಾರೆ. ಕಾನೂನುಬದ್ಧವಾಗಿ ಕ್ರಿಮಿನಲ್ ಟ್ರೈಬ್ ಕಾಯ್ದೆಯನ್ನು ತೆಗೆದು ಹಾಕಿದ್ದರೂ ನಾಗರಿಕರೆನ್ನಿಸಿದ ಜನ ಇಂದಿಗೂ ಕೊರಚರನ್ನು ಕಳ್ಳರೆಂಬ ದೃಷ್ಟಿಯಿಂದಲೇ ಅನುಮಾನಿಸುತ್ತ ಹೀನಾಯವಾಗಿ ಕಾಣುತ್ತಿರುವುದೂ ಉಂಟು. ಈ ಜನಾಂಗವು ಇಂದಿಗೂ ಕೀಳರಿಮೆಯಿಂದ ಸಮಾಜದ ಮುಖ್ಯವಾಹಿನಿಗೆ ಸೇರಿಕೊಳ್ಳುವ ನಿಟ್ಟಿನಲ್ಲಿ ತೊಳಲಾಡುತ್ತಿದೆ. 'ಕೊರಚ' ಎಂಬ ಸಮುದಾಯ ಸೂಚಕ ಹೆಸರೇ ಈ ಜನವರ್ಗದ ಪಾಲಿಗೆ ಅವಮಾನದ ಕೀಳರಿಮೆಯ ಸಂಕೇತವಾಗಿದ್ದು, ಭಯ ಮತ್ತು ಅಪಮಾನದ ನಡುವೆ ತತ್ತರಿಸುವಂತೆ ಮಾಡಿದೆ. ಇದರೊಟ್ಟಿಗೆ ಆಧುನಿಕತೆಯ ಆಕ್ರಮಣಶೀಲ ಕಾಣದ ಕೈಗಳು ಇವರ ಬದುಕಿನ ಮೂಲ ಸೆಲೆಯಾದ ಕುಲಕಸುಬಿನ ಮೇಲೆ ಎರಗಿ ಇನ್ನು ಭೀಕರವಾದ ಪರಿಣಾಮಗಳನ್ನುಂಟು ಮಾಡಿವೆ. ಇದೆಲ್ಲದರ ಹಿನ್ನೆಲೆಯಲ್ಲಿ ಕೊರಚ ಜನಾಂಗವು ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಶೈಕ್ಷಣಿಕವಾದ ಎಲ್ಲಾ ನಾಗರಿಕ ಸವಲತ್ತುಗಳಿಂದಲೂ ಬಹುಪಾಲು ವಂಚಿತಗೊಂಡು ಅತ್ಯಂತ ದುಸ್ತರ ಸ್ಥಿತಿಯಲ್ಲಿ ಬದುಕುತ್ತಿದ್ದಾರೆ. ಅಕ್ಷರಜ್ಞಾನ ಪಡೆದುಬಂದ ಈ ಜನಾಂಗದ ಬೆರಳೆಣಿಕೆಯಷ್ಟು ಜನ ವಿದ್ಯಾವಂತರೂ ಸಹ ಪಾರಂಪರಿಕವಾಗಿ ತಮ್ಮ ಸಮುದಾಯಕ್ಕೆ ಅಂಟಿರುವ ಕ್ರಿಮಿನಲ್ ಟ್ರೈಬ್ ಎಂಬ ಹಣೆಪಟ್ಟಿಯಿಂದ ಹೊರಬರಲಾಗದೆ ತೊಳಲಾಡುತ್ತಿದ್ದಾರೆ.

ಇಷ್ಟೆಲ್ಲದರ ನಡುವೆಯೂ ಈ ಜನಾಂಗ ತನ್ನ ಆದಿಮ ಬದುಕಿನ ಜೀವಂತಿಕೆಯನ್ನು ಆಶ್ಚರ್ಯಕರ ರೀತಿಯಲ್ಲಿ ಉಳಿಸಿಕೊಂಡು ಬಂದಿದೆ. ನವನಾಗರಿಕತೆಯ, ಆಧುನಿಕತೆಯ ಮಧ್ಯದಲ್ಲಿ ಕೊರಚರು ತಮ್ಮದೇ ಆದ ವೈಶಿಷ್ಟ್ಯಪೂರ್ಣ ಜೀವನಕ್ರಮವನ್ನು ಮತ್ತು ಸಮುದಾಯದ ಭಾಷೆಯನ್ನು ರೂಢಿಸಿಕೊಂಡು ಬಂದಿದ್ದಾರೆ. ಹುಟ್ಟು, ಸಾವು, ಮದುವೆ, ನ್ಯಾಯ ಮೊದಲಾದ ಸಂದರ್ಭಗಳಲ್ಲಿ ತಮ್ಮ ಅಸಲೀತನದ ಸಂಬಂಧಿತ ಭಾಷಿಕತೆಯನ್ನು ಉಳಿಸಿಕೊಂಡೆ ಬದುಕುತ್ತಿದ್ದಾರೆ. ಆ ಮೂಲಕ ತಮ್ಮ ಮೂಲ ಸಂಸ್ಕೃತಿಯ ಮೌಲ್ಯಗಳನ್ನು ಕಾಪಾಡಿಕೊಳ್ಳುತ್ತಲೇ ಇದ್ದಾರೆ. ಈ ಎಲ್ಲ ಅಂಶಗಳೂ ಸಾಂಸ್ಕೃತಿಕವಾಗಿ ಅತ್ಯಂತ ಪ್ರಮುಖವಾದವುಗಳಾಗಿವೆ. ತಮ್ಮ ಬದುಕಿನ ಅಸ್ತಿತ್ವವನ್ನು ಉಳಿಸಿಕೊಳ್ಳುವ ಸಲುವಾಗಿ ಪ್ರಾದೇಶಿಕವಾಗಿ ಹಾಗೂ ಕಾಲಾನುಕಾಲಕ್ಕೆ ತಕ್ಕಂತೆ ಇವರು ಮೂಲ ವೃತ್ತಿಯ ಜೊತೆಗೆ ಬೇರೆ ಬೇರೆ ವೃತ್ತಿಗಳನ್ನು ಅವಲಂಬಿಸಿರುವುದು ಕಂಡುಬರುತ್ತದೆ. ಅಭದ್ರತೆಯ ಕಾರಣದಿಂದಲೇ ಶೈಕ್ಷಣಿಕವಾಗಿ ಜನಾಂಗವು ಹಿಂದುಳಿದಿದೆ. ಸಮಾಜದ ಮುಖ್ಯವಾಹಿನಿಯ ಎಲ್ಲ ಬಗೆಯ ಸವಲತ್ತುಗಳಿಂದ ವಂಚಿತರಾಗಿರುವ ಈ ಜನಾಂಗವನ್ನು ಪ್ರಜಾಪ್ರಭುತ್ವ ವ್ಯವಸ್ಥೆಯ ಪ್ರತಿ ಹಂತದಲ್ಲಿ ಕಡೆಗಣಿಸಲಾಗಿದೆ.

ಕೊರಚರು ತಾವು ಮಾತನಾಡುವ ಭಾಷೆಯನ್ನು 'ಕುಳುವಾತ' ಅಥವಾ 'ಕುಡ್ರುವಾತ' ಎಂದು ಕರೆಯುತ್ತಾರೆ. ಇವರ ಈ ಭಾಷೆಯಲ್ಲಿ ತಮಿಳು, ತೆಲುಗು, ಕನ್ನಡ ಹಾಗೂ ಇತರೆ ದ್ರಾವಿಡ ಭಾಷೆಗಳ ಪದಗಳನ್ನು ಕೆಲವು ಬದಲಾವಣೆಗಳೊಂದಿಗೆ ಕಾಣಬಹುದು. ಈ ಭಾಷಿಕರು ಕರ್ನಾಟಕದಲ್ಲಿ ನೆಲೆಸಿದ ತರುವಾಯ ಪ್ರಾದೇಶಿಕವಾಗಿ ಕನ್ನಡ ಭಾಷೆಯನ್ನು ಕಲಿತು ವ್ಯವಹರಿಸುತ್ತಿದ್ದಾರೆ.

ಹಾಗೆಯೇ ತಮಿಳುನಾಡಿನಲ್ಲಿ 'ಕುಳುವರು' ಅಥವಾ 'ಕುಳುವ್ರು' ಎಂಬ ಪಂಗಡಕ್ಕೆ ಸೇರಿದ ಕೊರಚ, ಕೊರವ, ಕೊರಮ, ಕೊರಮಶೆಟ್ಟಿ, ಕುಂಚಿ ಕೊರವ ಪಂಗಡಗಳು ಮೂಲದಲ್ಲಿ ಒಂದೇ ಬುಡಕಟ್ಟಿನವರಾಗಿದ್ದಾರೆ ಎಂದು ಅನೇಕ ಪಾಶ್ಚಾತ್ಯ ವಿದ್ವಾಂಸರು ವಿವರಿಸಿದ್ದಾರೆ. ಆದರೆ ಕಾಲಾಂತರದಲ್ಲಿ ತಮಿಳುನಾಡಿನಿಂದ ವಲಸೆ ಹೊರಟು ತಮ್ಮ ಸಾಂಸ್ಕೃತಿಕ ಆಚರಣೆಗಳಲ್ಲಿ, ವೃತ್ತಿಯಲ್ಲಿ ಮತ್ತು ಭಾಷಿಕವಾಗಿ ಭಿನ್ನತೆಯನ್ನು ಹೊಂದಿದ್ದು ಸ್ಪಷ್ಟವಾದ ಸಾಂಸ್ಕೃತಿಕ ವ್ಯತ್ಯಾಸಗಳನ್ನು ಹೊಂದಿದ ಪಂಗಡಗಳಾಗಿವೆ. ಈ ವಿಚಾರವಾಗಿ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸಮುದಾಯದವರನ್ನು ಸಂದರ್ಶಿಸಿದಾಗ ಸಾಂಸ್ಕೃತಿಕವಾಗಿ ಅನೇಕ ಭಿನ್ನತೆಗಳು ಇರುವುದರಿಂದ ಕೇವಲ ಭಾಷೆಯ ದೃಷ್ಟಿಯಿಂದ ಒಂದೇ ಪಂಗಡಕ್ಕೆ ಸೇರಿದವರು ಎಂದು ಹೇಳಲಾಗದು ಎಂದು ವಿವರಿಸಿದ್ದಾರೆ. ಕರ್ನಾಟಕದಲ್ಲಿ ವಾಸಿಸುವ ಕೊರಚರು ವಿಶಿಷ್ಟ ಭಾಷೆಯನ್ನು ಹೊಂದಿದ್ದು ತಮ್ಮದೇ ಆದ ಕೌಟುಂಬಿಕ ಪರಿಸರದಲ್ಲಿ ಕೊರಚ ಭಾಷೆಯನ್ನು ಮಾತಾಡಿದರೂ ಹೊರಗಿನ ವ್ಯವಹಾರಿಕ ಪರಿಸರದಲ್ಲಿ ಕನ್ನಡವನ್ನು ಮಾತನಾಡುತ್ತಾರೆ. ಪ್ರಸ್ತುತ ಅಧ್ಯಯನದಲ್ಲಿ ಜಾಗತೀಕರಣ ಸಂದರ್ಭದಲ್ಲಿನ ಕೊರಚರ ಸಾಮಾಜಿಕ, ಸಾಂಸ್ಕೃತಿಕ, ಭಾಷಿಕ ವಿವರಗಳು ಮತ್ತು ವೃತ್ತಿ ಸಂಬಂಧಿತ ನಂಬಿಕೆ ನಿಷೇಧಗಳು ಹಾಗೂ ದೈವಗಳ ಕುರಿತು ಭಾಷಿಕ ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ. ಕನ್ನಡ ಹಾಗೂ ಸಮುದಾಯದ ಭಾಷೆ ಎರಡೂ ಭಾಷೆ ಬಲ್ಲವರಾದ ಇವರು ಪರಸ್ಪರ ಸಮುದಾಯದಲ್ಲಿ ಮತ್ತು ವ್ಯವಹಾರಿಕ ವಲಯದಲ್ಲಿ ಭಾಷೆಯನ್ನು ಹೇಗೆ ಬಳಸುತ್ತಾರೆ. ಮತ್ತು ಸಾಂಸ್ಕೃತಿಕ ಆಚರಣೆಗಳಾದ ಹುಟ್ಟು, ಸಾವು, ಮದುವೆ ಮುಂತಾದ ಹಬ್ಬ ಆಚರಣೆಗಳಲ್ಲಿ ಭಾಷಾ ಬಳಕೆಯನ್ನು ಅಧ್ಯಯನ ಮಾಡುವುದು, ಜೊತೆಗೆ ಗಾದೆಗಳು, ಒಗಟುಗಳು, ಸಂಬಂಧವಾಚಕಗಳು, ಸಂಬೋಧನೆಗಳು, ವ್ಯಕ್ತಿನಾಮಗಳು ಕುರಿತು ವಿಶ್ಲೇಷಿಸುವುದು ಮತ್ತು ವ್ಯಕ್ತಿಗಳ ಭಾಷಾ ಬಳಕೆಯಲ್ಲಿನ ಭಾಷಾ ಸಂಗೋಪನೆ, ನುಡಿಬೆರಕೆ, ನುಡಿಜಿಗಿತಗಳ ಕುರಿತು ವಿಶ್ಲೇಷಿಸಲಾಗಿದೆ. ಹೀಗಾಗಿ ಕೊರಚರ ವಿವಿಧ ನೆಲೆಗಳಲ್ಲಿ ಬಳಕೆಯಾಗುವ ಸಮುದಾಯದ ಭಾಷೆಯನ್ನು ಕುರಿತು ಸಮಾಜೋಭಾಷಿಕ ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ.

ಅಲೆಮಾರಿ ಬುಡಕಟ್ಟು ಸಮುದಾಯಗಳ ಇತಿಹಾಸ, ಸಂಸ್ಕೃತಿ ಮತ್ತು ಸಾಂಸ್ಕೃತಿಕ ಅಂಶಗಳ ಬಗೆಗೆ ಕೆಲವೊಂದು ಅಧ್ಯಯನಗಳು ನಡೆದಿವೆ. ಆದರೆ ಭಾಷೆಯ ಮುಖಾಂತರ ಬುಡಕಟ್ಟು ಸಮುದಾಯಗಳ ಅಧ್ಯಯನ ನಡೆದಿರುವುದು ತುಂಬಾ ವಿರಳ. ಈ ದಿಸೆಯಲ್ಲಿ ಅಲೆಮಾರಿ ಬುಡಕಟ್ಟು ಸಮುದಾಯವಾದ ಕೊರಚ ಭಾಷೆಯನ್ನು ಕುರಿತು ಸಮಾಜೋಭಾಷಿಕ ನೆಲೆಯಲ್ಲಿ ಅಧ್ಯಯನ ಮಾಡುವ ಕುತೂಹಲದಿಂದ ಅಧ್ಯಯನ ಕೈಗೊಳ್ಳಲಾಗಿದೆ. ಭಾಷೆ ಕೇವಲ ಸಂವಹನ ಮಾಧ್ಯಮವಷ್ಟೇ ಆಗಿರುವುದಿಲ್ಲ. ಜೊತೆಗೆ ಭಾಷೆಯಿಂದ ಒಂದು ಸಮುದಾಯದ ಒಬ್ಬ ವ್ಯಕ್ತಿಯ ಇತಿಹಾಸ, ಸಂಸ್ಕೃತಿ, ಬದುಕುವ ಕ್ರಮ, ಜೀವನಪದ್ಧತಿ, ಜೀವನಮೌಲ್ಯ, ಆಲೋಚನ ವಿಧಾನ, ಆಚಾರ–ವಿಚಾರ ಸಂಪ್ರದಾಯ, ದೈವದ ನಂಬಿಕೆ ಮೊದಲಾದ ಸಾಂಸ್ಕೃತಿಕ ಅಂಶಗಳಲ್ಲಿ ಬಳಕೆಯಾಗುವ ಹಿನ್ನೆಲೆಯಲ್ಲಿ ಕೊರಚ ಸಮುದಾಯದ ಭಾಷೆಯನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

೧.೧. ಅಧ್ಯಯನದ ಉದ್ದೇಶ

ಕೊರಚ ಸಮುದಾಯವು ತಮ್ಮದೇ ಆದ ವಿಶಿಷ್ಟ ಸಂಸ್ಕೃತಿಯನ್ನು ಹೊಂದಿದೆ. ಅವರ ಬದುಕಿನ ವಿವಿಧ ನೆಲೆಗಳಲ್ಲಿನ ಭಾಷೆಯ ವ್ಯವಹಾರಿಕಗಳ ಕುರಿತು ಅಧ್ಯಯನ ಮಾಡುವ ಉದ್ದೇಶ ಇಲ್ಲಿದೆ. ಈ ಸಮುದಾಯದ ಬಗೆಗೆ ಹೆಚ್ಚಿನ ಅಧ್ಯಯನಗಳು ಸಾಂಸ್ಕೃತಿಕತೆಗೆ ಸಂಬಂಧಿಸಿದಂತೆ ನಡೆದಿದೆ. ಮತ್ತು ಭಾಷಿಕವಾಗಿ ಡಾ.ಕೆ.ವಿ. ಜಯಪ್ಪ ಅವರು ಕೊರಚರ ಭಾಷೆ: ವರ್ಣನಾತ್ಮಕ, ತೌಲನಿಕ ಎಂಬುದು ವಿವರಣಾತ್ಮಕ ಅಧ್ಯಯನವನ್ನು ಒಳಗೊಂಡಿದೆ. ಇದು ರೂಪರಶ್ಮಿ ಪ್ರಕಾಶನ ಧಾರವಾಡದಿಂದ ಪ್ರಕಟವಾಗಿದೆ. ಈ ಕೃತಿಯನ್ನು ಹೊರತುಪಡಿಸಿದರೆ ಕೊರಚ ಭಾಷೆಯ ಕುರಿತು ಸಮಾಜೋಭಾಷಿಕ ನೆಲೆಯಲ್ಲಿ ಅಧ್ಯಯನಗಳು ನಡೆದಿಲ್ಲ. ಈ ಕಾರಣವಾಗಿ ಸಮಾಜೋಭಾಷಿಕ ನೆಲೆಯಲ್ಲಿ ಕೊರಚ ಭಾಷೆಯನ್ನು ಅಧ್ಯಯನ ಮಾಡಲು ಆಯ್ದುಕೊಂಡಿದ್ದೇನೆ.

ಕೊರಚ ಸಮುದಾಯದ ಸಂಸ್ಕೃತಿಗೆ ಸಂಬಂಧಿಸಿದಂತೆ ಸಮುದಾಯ ಸಂಬಂಧಿತ ಜೀವನಕ್ರಮ, ಸಾಂಪ್ರದಾಯಿಕ ವೃತ್ತಿ, ದೈವ ಸಂಬಂಧಿ ಆಚರಣೆಗಳು ಮೊದಲಾದವುಗಳನ್ನು ಕುರಿತು ವಿವರಿಸಲಾಗಿದೆ.

ಕೊರಚ ಸಮುದಾಯದ ಭಾಷೆಯು ಶಿಷ್ಟ ಕನ್ನಡಕ್ಕಿಂತ ಯಾವ ರೀತಿ ಭಿನ್ನವಾಗಿದೆ ಎಂಬುದನ್ನು ತಿಳಿಯಲು ಧ್ವನಿ ರಚನೆ, ಪದರಚನೆಯನ್ನು ಗಮನಿಸಿ ಸಮುದಾಯದ ಭಾಷೆ, ಭಾಷೆಯ ಸ್ವರೂಪ ಹಾಗೂ ವೈಶಿಷ್ಟ್ಯಗಳನ್ನು ವಿವರಿಸುವುದು.

ಕೊರಚ ಸಮುದಾಯದ ಭಾಷಿಕ ಅಧ್ಯಯನ ವಿವರಣಾತ್ಮಕ ಶೈಲಿಯಲ್ಲಿ ನಡೆದಿದೆ. ಆದರೆ ಸಮಾಜೋಭಾಷಿಕ ನೆಲೆಯಲ್ಲಿ ನಡೆದಿಲ್ಲ. ಈ ಹಿನ್ನೆಲೆಯಲ್ಲಿ ಸಮಾಜೋಭಾಷಿಕ ನೆಲೆಯಲ್ಲಿ ಸಮುದಾಯದ ಭಾಷಿಕ ವಿವರಗಳನ್ನು ತಿಳಿಯಲು ಕುಟುಂಬಗಳಲ್ಲಿ ಬಳಕೆಯಾಗುವ ಗಾದೆಗಳು, ಒಗಟುಗಳು, ಸಂಬಂಧವಾಚಕಗಳು, ಸಂಬೋಧನೆಗಳು, ಸಂಖ್ಯಾವಾಚಿಗಳು, ವ್ಯಕ್ತಿನಾಮಗಳು ಮೊದಲಾದವುಗಳನ್ನು ಕುರಿತು ಗಮನಿಸುವುದು.

ಕೊರಚ ಸಮುದಾಯದ ಸಾಂಸ್ಕೃತಿಕ ಆಚರಣೆಗಳು ಮತ್ತು ಭಾಷೆಯ ಅಂತರ್‌ಸಂಬಂಧವನ್ನು ಕುರಿತು ಸಂಬಂಧಿಸಿದ ನುಡಿಬೆರಕೆ, ನುಡಿಜಿಗಿತ, ಭಾಷಾ ಸಂಗೋಪನೆ ಮತ್ತು ಸಮುದಾಯದ ಸಾಂಸ್ಕೃತಿಕ ಪದಗಳನ್ನು ಸಮಾಜೋಭಾಷಿಕ ನೆಲೆಯಲ್ಲಿ ವಿವರಿಸುವುದು.

ಮೇಲಿನ ಅಂಶಗಳು ಈ ಅಧ್ಯಯನದ ಮುಖ್ಯ ಉದ್ದೇಶಗಳಾಗಿವೆ. ಈ ಮುಖ್ಯ ಅಂಶಗಳನ್ನಿಟ್ಟುಕೊಂಡು "ಕೊರಚರ ಭಾಷೆ: ಸಮಾಜೋಭಾಷಿಕ ಅಧ್ಯಯನ" ಎಂಬ ಈ ಅಧ್ಯಯನವನ್ನು ಕೊರಚರ ಭಾಷಾ ಬಳಕೆಯ ಸ್ವರೂಪವನ್ನು ಅನುಲಕ್ಷಿಸಿ ಅಧ್ಯಯನಕ್ಕೆ ಒಳಗು ಮಾಡಲಾಗಿದೆ. ಅಲ್ಲದೆ ಈವರೆಗಿನ ವರ್ಣನಾತ್ಮಕ ಮಾದರಿಗಳನ್ನು ಗಮನದಲ್ಲಿಟ್ಟುಕೊಂಡು ಒಟ್ಟು ಕೊರಚ ಸಮುದಾಯದ ಸಂಸ್ಕೃತಿಯ ವಿಭಿನ್ನ ಮುಖಗಳ ಕಡೆಗೆ ಗಮನಹರಿಸಲಾಗಿದೆ.

೧.೨. ಅಧ್ಯಯನದ ವ್ಯಾಪ್ತಿ

'ಕೊರಚರ ಭಾಷೆ: ಸಮಾಜೋಭಾಷಿಕ ಅಧ್ಯಯನ' ಎಂಬ ಈ ನಿಬಂಧದಲ್ಲಿ ಕರ್ನಾಟಕದಾದ್ಯಂತ ವಿವಿಧ ಪ್ರದೇಶಗಳಲ್ಲಿ ಕೊರಚರು ನೆಲೆಸಿದ್ದಾರೆ. ಆದರೆ ಅಧ್ಯಯನಕ್ಕಾಗಿ ಬಳ್ಳಾರಿ ಮತ್ತು ದಾವಣಗೆರೆ ಜಿಲ್ಲೆಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಹಾಗೆಯೇ ಈ ಪರಿಸರವನ್ನು ಮೀರಿಯೂ ಭೌಗೋಳಿಕ ವ್ಯಾಪ್ತಿಯನ್ನು ಗಮನಿಸಲಾಗಿದೆ. ಅಂದರೆ ಕೆಲವು ಮಾಹಿತಿಯ ಮಾದರಿಗಾಗಿ ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು, ಚಳ್ಳಕೆರೆ ತಾಲೂಕುಗಳ ಕೆಲ ಊರುಗಳು ಮತ್ತು ಶಿವಮೊಗ್ಗ ಜಿಲ್ಲೆಯ ಸೊರಬ ತಾಲೂಕಿನ ಕೆಲ ಊರುಗಳನ್ನು ಗಮನಿಸಲಾಗಿದೆ.

ಅಧ್ಯಯನದ ಉದ್ದಕ್ಕೂ ಬಳಸಿರುವ 'ಪರಿಸರ' ಎಂಬುದು ಬಳ್ಳಾರಿ ಜಿಲ್ಲೆಯ ಹೊಸಪೇಟೆ, ಕೂಡ್ಲಿಗಿ, ಸಂಡೂರು, ಹಗರಿಬೊಮ್ಮನಹಳ್ಳಿ, ಹಡಗಲಿ, ಬಳ್ಳಾರಿ ಮತ್ತು ದಾವಣಗೆರೆ ಜಿಲ್ಲೆಯ ಹರಿಹರ, ಹರಪನಹಳ್ಳಿ, ಚನ್ನಗಿರಿ, ಹೊನ್ನಳ್ಳಿ ತಾಲೂಕುಗಳನ್ನು ಒಳಗೊಂಡಿರುತ್ತದೆ. ಈ ಪರಿಸರದಲ್ಲಿ ನೆಲೆಸಿರುವ ಕೊರಚರ ಜನಜೀವನ, ಕಸಬು, ಆಚರಣೆ, ಸಂಪ್ರದಾಯ, ನಂಬಿಕೆ ಮುಂತಾದ ಅಂಶಗಳನ್ನು ಅಧ್ಯಯನದಲ್ಲಿ ಒಳಗು ಮಾಡಿಕೊಂಡು ಸಮಾಜೋಭಾಷಿಕ ನೆಲೆಯಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

೧.೩. ಅಧ್ಯಯನದ ವಿಧಾನ

'ಕೊರಚರ ಭಾಷೆ: ಸಮಾಜೋಭಾಷಿಕ ಅಧ್ಯಯನ' ಎಂಬ ಪ್ರಸ್ತುತ ಅಧ್ಯಯನ ಕ್ಷೇತ್ರಕಾರ್ಯ ಮತ್ತು ಕೆಲವು ಆನುಷಂಗಿಕ ಆಕರಗಳ ಮೂಲಕ ರೂಪುಗೊಂಡಿದೆ. ಮುಖ್ಯವಾಗಿ ಕ್ಷೇತ್ರಕಾರ್ಯ ಮಾಹಿತಿಯೇ ಈ ನಿಬಂಧಕ್ಕೆ ಪ್ರಮುಖ ಆಕರ. ಕೊರಚರ ಭಾಷಾ ಬಳಕೆಯಲ್ಲಿ ಅವರ ಉಚ್ಚಾರಣೆಯ ಸಂಗತಿಗಳನ್ನು ಸೂಕ್ಷ್ಮವಾಗಿ ಗಮನಿಸಿ ಸಮುದಾಯದ ಸಾಂಸ್ಕೃತಿಕ ಮತ್ತು ಸಾಮಾಜಿಕ ಅಂಶಗಳ ಹಿನ್ನೆಲೆಯಲ್ಲಿ ಪ್ರಶ್ನಾವಳಿಯ ಮೂಲಕ ಅಭಿರುಚಿ, ಅವಶ್ಯಕತೆಗಳ ಮಾಹಿತಿಯನ್ನು ಪಡೆಯಲಾಗಿದೆ. ಹಾಗೂ ಪದಕೋಶ, ಕತೆ, ಹಾಡು, ಸಂಭಾಷಣೆ, ಗಾದೆ, ಒಗಟು, ಒಡಪು ಮುಂತಾದ ಪ್ರಕಾರಗಳಿಂದ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ಕ್ಷೇತ್ರಕಾರ್ಯ ಸಂದರ್ಭದಲ್ಲಿ ಸಂದರ್ಶಿಸಿದ ಒಟ್ಟು ಹಳ್ಳಿಗಳಲ್ಲಿ ಆಯಾ ಗ್ರಾಮದ ಸುತ್ತ ಇರುವ ಭೂಮಿಯ ಗುಣ, ಬೆಟ್ಟ, ಗುಡ್ಡಗಳು, ಹಳ್ಳ, ನದಿ, ಕೆರೆ ಮೊದಲಾದ ಜಲಮೂಲಗಳು, ಆ ಊರಿನಲ್ಲಿರುವ ಇತರೆ ಸಮುದಾಯಗಳ ಭಾಷಿಕ ಸ್ವರೂಪ, ಅಲ್ಲಿನ ಮಾತೃಭಾಷೆ, ಶಿಕ್ಷಣದ ಮಟ್ಟ, ಸಾಮಾಜಿಕ ಜೀವನ ವಿಧಾನ, ಆರ್ಥಿಕ ಸಂಪನ್ಮೂಲಗಳು, ಹಬ್ಬ ಆಚರಣೆಗಳು ಮುಂತಾದ ವಿವರಗಳನ್ನು ಸಾಂದರ್ಭಿಕವಾಗಿ ಗಮನಿಸಲಾಗಿದೆ. ಇದರಿಂದ ಕೊರಚರ ಭಾಷಿಕ ಅಧ್ಯಯನದ ಮುಖಾಂತರ ಸಂಸ್ಕೃತಿಯನ್ನು ಕಟ್ಟಿಕೊಡಲು ಪ್ರಯತ್ನಿಸಲಾಗಿದೆ.

ಕೊರಚರ ಭಾಷಿಕ ಸ್ವರೂಪವನ್ನು ತಿಳಿಯಲು ಕೌಟುಂಬಿಕಾವರಣ ಮತ್ತು ಹೊರಾವರಣಗಳಾದ ಬಸ್ ನಿಲ್ದಾಣ, ಸಂತೆ ಮಾರುಕಟ್ಟೆ, ಹೋಟೆಲು, ಆಸ್ಪತ್ರೆ, ಶಾಲಾ-ಕಾಲೇಜು, ಜಾತ್ರೆ, ಧಾರ್ಮಿಕ

ಸ್ಥಳ, ಹೊಲಗದ್ದೆಗಳು ಮೊದಲಾದ ಆವರಣಗಳಿಂದ ಕ್ಷೇತ್ರಕಾರ್ಯದಿಂದ ಪಡೆದ ಮಾಹಿತಿಯೊಂದಿಗೆ ಕನ್ನಡ, ಇಂಗ್ಲಿಷ್‌ನಲ್ಲಿ ಬಂದ ಕೆಲವು ಅಧ್ಯಯನಗಳನ್ನು ಗಮನಿಸಿಕೊಂಡು ಪ್ರಸ್ತುತ ನಿಬಂಧವನ್ನು ಚರ್ಚಿಸುವ ಪ್ರಯತ್ನ ಮಾಡಲಾಗಿದೆ.

೧.೪. ಅಧ್ಯಯನದ ಸ್ವರೂಪ

ಪ್ರಸ್ತುತ ಈ ಮಹಾಪ್ರಬಂಧವು ಒಟ್ಟು ಏಳು ಅಧ್ಯಾಯಗಳನ್ನು ಒಳಗೊಂಡಿದೆ. ಅಧ್ಯಯನದ ದೃಷ್ಟಿಯಿಂದ ಈ ಕೆಳಗಿನಂತೆ ಅಧ್ಯಾಯಗಳು ವಸ್ತು-ವಿಷಯಗಳನ್ನು ಒಳಗೊಂಡಿವೆ.

ಮೊದಲನೆಯ ಅಧ್ಯಾಯವು 'ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಮತ್ತು ಸ್ವರೂಪ ಮತ್ತು ಮಹಾಪ್ರಬಂಧಕ್ಕೆ ಸಂಬಂಧಿಸಿದಂತೆ ಸಂಶೋಧನಾ ಚೌಕಟ್ಟನ್ನು ರೂಪಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಸಮುದಾಯಕ್ಕೆ ಸಂಬಂಧಿಸಿದಂತೆ ಇದುವರೆಗೂ ನಡೆದಿರುವ ಅಧ್ಯಯನಗಳ ಸಮೀಕ್ಷೆಯನ್ನು ವೈಧಾನಿಕತೆಯ ದೃಷ್ಟಿಯಿಂದ ಮಾಡಲಾಗಿದೆ. ಹಾಗೂ ನಡೆದಿರುವ ಅಧ್ಯಯನಗಳು ಯಾವ ಮಾದರಿಯಲ್ಲಿ ನಡೆದಿವೆ ಎಂದು ತಿಳಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಕೊರಚ ಪದದ ನಿಷ್ಪತ್ತಿ, ಭೌಗೋಳಿಕ, ಪೌರಾಣಿಕ, ಐತಿಹ್ಯಗಳು ಮತ್ತು ಭಾಷಿಕ ಪರಿಸರದ ಹಿನ್ನೆಲೆಯಲ್ಲಿ ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಕೊರಚರ ಭಾಷೆಯನ್ನು ವರ್ಣನಾತ್ಮಕ ಮಾದರಿಯಲ್ಲಿ ಧ್ವನಿ ರಚನೆ ಮತ್ತು ಪದರಚನೆಯನ್ನು ಗಮನಿಸಲಾಗಿದೆ. ಕೊರಚರ ಭಾಷೆ ಶಿಷ್ಟ ಕನ್ನಡಕ್ಕಿಂತ ಹೇಗೆ ಭಿನ್ನವಾಗಿದೆ ಎಂಬುದನ್ನು ಕೊರಚ ಭಾಷಾ ಧ್ವನಿಗಳು ಮತ್ತು ಅವುಗಳ ಸ್ವರೂಪ ಕುರಿತಂತೆ ಪರಿಚಯ ಮಾಡಿಕೊಡಲಾಗುವುದು. ಹಾಗೆಯೇ ಪದರಚನೆಯಲ್ಲಿ ನಾಮಪದ ನಾಮ ಪ್ರಕೃತಿ, ಲಿಂಗವ್ಯವಸ್ಥೆ, ವಚನ ವ್ಯವಸ್ಥೆ, ವಿಭಕ್ತಿ ಪ್ರತ್ಯಯ, ಸರ್ವನಾಮಗಳನ್ನು ಗಮನದಲ್ಲಿಟ್ಟುಕೊಂಡು ವಿಶ್ಲೇಷಿಸಲಾಗಿದೆ. ಕ್ರಿಯಾಪದ ಧಾತು ಆಖ್ಯಾತ ಪ್ರತ್ಯಯ, ಕಾಲಸೂಚಕ ಪ್ರತ್ಯಯ, ವಿಧ್ಯರ್ಥಕ, ನಿಷೇಧಾರ್ಥಕ ಕ್ರಿಯಾಪದಗಳನ್ನು ಗಮನಿಸಿ ಶಿಷ್ಟ ಕನ್ನಡಕ್ಕೂ ಕೊರಚರ ಭಾಷೆಗೂ ಸಂಬಂಧಿಸಿದ ಬದಲಾವಣೆಯನ್ನು ಚರ್ಚಿಸಲಾಗಿದೆ.

ಅಧ್ಯಾಯ ಐದರಲ್ಲಿ ಕೊರಚರ ಭಾಷೆ ಮತ್ತು ಸಂಸ್ಕೃತಿಯನ್ನು ಕುರಿತು ಕೌಟುಂಬಿಕ ವಲಯದಲ್ಲಿನ ಭಾಷಾ ಬಳಕೆ ಹಾಗೂ ಸಮುದಾಯದ ಮೂಲಭಾಷಾ ಬಳಕೆಯ ವಲಯವನ್ನು ಕುರಿತು ವಿವರಿಸುವುದರ ಜೊತೆಗೆ ಕೊರಚ ಸಮುದಾಯದಲ್ಲಿ ಬಳಕೆಯಲ್ಲಿರುವ ಗಾದೆಗಳು, ಒಗಟುಗಳು, ಸಂಬಂಧವಾಚಕಗಳು, ಸಂಬೋಧನೆಗಳು, ವ್ಯಕ್ತಿನಾಮಗಳು ಮೊದಲಾದವುಗಳನ್ನು ಕುರಿತು ಸಾಮಾಜಿಕ ಭಾಷಾಶಾಸ್ತ್ರದ ಆಧಾರದಲ್ಲಿ ಭಾಷಿಕವಾಗಿ ವಿವರಿಸಲಾಗಿದೆ. ಹಾಗೂ ಕೊರಚ ಸಮುದಾಯದವರು ಕೃಷಿ, ಮಾರುಕಟ್ಟೆ, ಹೋಟೆಲ್, ಆಸ್ಪತ್ರೆ ಮತ್ತು ಶಿಕ್ಷಣ ಸಂಸ್ಥೆಗಳಲ್ಲಿ ಮತ್ತಿತರ ಕ್ಷೇತ್ರಗಳಲ್ಲಿ ವ್ಯವಹಾರಿಕವಾಗಿ ಬಳಸುವ ಕನ್ನಡ ಭಾಷೆಯ ಸ್ವರೂಪವನ್ನು ಸಾಮಾಜಿಕ ನೆಲೆಯಲ್ಲಿ ವಿಶ್ಲೇಷಿಸಲಾಗಿದೆ.

ಅಧ್ಯಾಯ ಆರರಲ್ಲಿ ಕೊರಚರು ತಮ್ಮ ಭಾಷೆ (ಕೊರಚ ಭಾಷೆ) ಮತ್ತು ವ್ಯವಹಾರಿಕ ಭಾಷೆಗಳೊಂದಿಗೆ ಸಂಪರ್ಕಕ್ಕೆ ಒಳಗಾದಾಗ ಉಂಟಾಗುವ ಭಾಷಾ ಪಲ್ಲಟಗಳ ಅನುಗುಣವಾಗಿ ನುಡಿಬೆರಕೆ, ನುಡಿಜಿಗಿತ, ಭಾಷಾ ಮನೋಭಾವಗಳನ್ನು ಕುರಿತು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ ಏಳರಲ್ಲಿ ಸಮುದಾಯದ ವೃತ್ತಿ, ದೈವ, ಆಚರಣೆಗಳಿಗೆ ಸಂಬಂಧಿಸಿದ ಸಾಂಸ್ಕೃತಿಕ ಪದಕೋಶವನ್ನು ಕುರಿತು ವಿವರಿಸಲಾಗಿದೆ. ಜೊತೆಗೆ ಕೊರಚ ಸಮುದಾಯದ ಕೌಟುಂಬಿಕ ವಲಯದಲ್ಲಿ ಬಳಕೆಯಲ್ಲಿರುವ ಮೂಲ ಭಾಷಾ ರೂಪಗಳನ್ನು, ಸಮುದಾಯದ ಗೃಹೋಪಯೋಗಿ ವಸ್ತುಗಳು, ಪ್ರಾಣಿಗಳು ಮೊದಲಾದವುಗಳಿಗೆ ಸಂಬಂಧಿಸಿದ ಮೂಲಭಾಷೆಯ ಪದಗಳನ್ನು ಶಿಷ್ಟಕನ್ನಡದೊಂದಿಗೆ ಈ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಅಧ್ಯಾಯ ಎಂಟರಲ್ಲಿ ಒಟ್ಟಾರೆ ಅಧ್ಯಯನ ಸಮಾರೋಪ ಮತ್ತು ಅಧ್ಯಯನದ ಮೂಲಕ ಕಂಡುಕೊಂಡ ಫಲಿತಗಳು ಹಾಗೂ ಅನುಬಂಧದಲ್ಲಿ ಪ್ರಶ್ನಾವಳಿ, ಕಥೆಗಳು, ಹಾಡುಗಳು, ಪರಾಮರ್ಶನ ಗ್ರಂಥಗಳು, ವಕ್ತೃವಿವರ, ಮೊದಲಾದವುಗಳ ಸೂಚಿಯನ್ನು ನೀಡಲಾಗಿದೆ.

೧.೫. ಅಧ್ಯಯನದ ಮಿತಿ

'ಕೊರಚರ ಭಾಷೆ: ಸಮಾಜೋಭಾಷಿಕ ಅಧ್ಯಯನ' ಎಂಬ ಈ ಮಹಾಪ್ರಬಂಧವನ್ನು ಮುಖ್ಯವಾಗಿ ಸಮುದಾಯಕ್ಕೆ ಸಂಬಂಧಿಸಿದಂತೆ ಈವರೆಗೆ ಕನ್ನಡದಲ್ಲಿ ಬಂದ ಕೆಲವು ಮಾದರಿಗಳಿಗಿಂತ ಭಿನ್ನವಾಗಿ ಚರ್ಚೆಗೆ ಒಳಪಡಿಸಲಾಗಿದೆ. ಸಾಮಾಜಿಕ ಭಿನ್ನಾಂಶಗಳನ್ನೂ ಹಾಗೂ ಕುಟುಂಬ ಕುಟುಂಬೇತರ ಆವರಣಗಳನ್ನು ಮುಖ್ಯವೆಂದು ಪರಿಗಣಿಸಿ ಸಾಧ್ಯವಾದಷ್ಟು ಅವುಗಳ ವಿಭಿನ್ನ ಆಯಾಮಗಳನ್ನು ಒಂದು ಮಾದರಿಯಂತೆ ಚರ್ಚಿಸಲಾಗಿದೆ. ಕೆಲವೊಮ್ಮೆ ಕೊರಚರ ಭಾಷೆಗೂ ಇಲ್ಲಿ ಚರ್ಚಿಸಿದ ವಿಷಯಕ್ಕೆ ನೇರ ಸಂಬಂಧವಿಲ್ಲವೆಂದೆನಿಸಿದರೂ ತಕ್ಕಷ್ಟು ಅಂತಹ ಅಂಶಗಳನ್ನು ಸಮುದಾಯದ ಭಾಷೆಯ ಸ್ವರೂಪವನ್ನು ತಿಳಿಯಲು ಅನಿವಾರ್ಯ ಸಾಧ್ಯತೆಗಳೇ ಎಂಬಂತೆ ವಿವರಿಸಲಾಗಿದೆ.

ಕೊರಚರು ನೆಲೆಸಿರುವ ಕರ್ನಾಟಕದ ಇತರೆ ಪ್ರದೇಶಗಳನ್ನು ಗಮನಿಸಿ ಅಧ್ಯಯನವನ್ನು ಮತ್ತಷ್ಟು ವ್ಯಾಪಕಗೊಳಿಸಿ, ಇನ್ನು ಕೆಲವು ಒಳನೋಟಗಳನ್ನು ನೀಡಬಹುದಾಗಿತ್ತು ಆದರೆ ಸಮಯ ಮತ್ತು ಭೌಗೋಳಿಕ ವಲಯದ ಅತಿ ವ್ಯಾಪ್ತಿಯಿಂದಾಗಿ ಅಧ್ಯಯನವನ್ನು ಬಳ್ಳಾರಿ-ದಾವಣಗೆರೆ ಜಿಲ್ಲೆಗಳ ಪರಿಸರಕ್ಕೆ ಸೀಮಿತಗೊಳಿಸಲಾಗಿದೆ.

ಮುಖ್ಯವಾಗಿ ಈ ನಿಬಂಧದಲ್ಲಿ ಕೊರಚರ ಧ್ವನಿ ಮತ್ತು ಪದರಚನೆಯನ್ನು ಸರಳವಾಗಿ ಚರ್ಚಿಸಲಾಗಿದೆ. ಧ್ವನಿ ಮತ್ತು ಪದರಚನೆಯ ಸ್ವರೂಪವು ಸಾಮಾಜಿಕ ಅಧ್ಯಯನದಲ್ಲಿ ಸಾಂದರ್ಭಿಕವಾಗಿ ಚರ್ಚೆಯಾಗಿದೆ. ಕಾರಣ ಪುನರಾವರ್ತನೆಯ ದೃಷ್ಟಿಯಿಂದ ಅದನ್ನು ವಿವರಿಸಲಾಗಿಲ್ಲ.

ಅಧ್ಯಾಯ : ಎರಡು

ಈವರೆಗೆ ಕೊರಚ ಸಮುದಾಯದ ಕುರಿತು ನಡೆದ ಅಧ್ಯಯನಗಳ ಸಮೀಕ್ಷೆ

ಅಧ್ಯಾಯ: ಎರಡು

ಈವರೆಗೆ ಕೊರಚರ ಸಮುದಾಯದ ಕುರಿತು ನಡೆದ ಅಧ್ಯಯನಗಳ ಸಮೀಕ್ಷೆ

ಯಾವುದೇ ಒಂದು ನಿರ್ದಿಷ್ಟ ಜನ ಸಮುದಾಯವನ್ನು ಕುರಿತಂತೆ ಅಧ್ಯಯನವನ್ನು ಕೈಗೊಳ್ಳುವ ಮೊದಲು ಆ ಸಮುದಾಯಕ್ಕೆ ಸಂಬಂಧಿಸಿದಂತೆ ಸಾವಿರಾರು ವರ್ಷಗಳಿಂದ ನಡೆಸಿಕೊಂಡು ಬಂದಿರುವ ಆಚಾರ-ವಿಚಾರ, ಉದ್ಯೋಗ-ವ್ಯವಹಾರ, ಕಲೆ-ಸಾಹಿತ್ಯ ಹಾಗೂ ಜೀವನ ವಿಧಾನದ ಪರಿಚಯವಾಗುತ್ತದೆ. ಮತ್ತು ಅವರ ಮೂಲ ವಾಸಸ್ಥಳ, ಆಡುತ್ತಿದ್ದ ಭಾಷೆಗಳ ಮೇಲೆ ಬೆಳಕು ಚೆಲ್ಲುತ್ತದೆ. ಇಂಥ ದಾಖಲೆ ಇಲ್ಲದಿದ್ದರೆ ಅಲೆಮಾರಿ ಜನಾಂಗಗಳ ನಾಗರಿಕತೆಯು ಬದಲಾಗುತ್ತ ಬಂದಿರುವ ಇವರ ಪೂರ್ವ ಬದುಕಿನ ವಿವರಗಳು ಲಭ್ಯವಾಗುತ್ತಿರಲಿಲ್ಲ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಬದುಕುತ್ತಿರುವ ಅಲೆಮಾರಿ ಬುಡಕಟ್ಟಾದ ಕೊರಚರ ಜೀವನ ವಿಧಾನದಿಂದ ಅವರ ಹಿಂದಿನ ಬದುಕಿನ ಎಲ್ಲ ಅಂಶಗಳನ್ನು ಕಂಡುಕೊಳ್ಳಲು ಸಾಧ್ಯವಾಗುವುದಿಲ್ಲ. ಆದರೆ ಈ ಅಲೆಮಾರಿ ಬುಡಕಟ್ಟಿನ ಬಗೆಗೆ ಇರುವ ಐತಿಹಾಸಿಕ, ಸಾಹಿತ್ಯಿಕ, ಪೌರಾಣಿಕ, ಸಾಮಾಜಿಕವಾಗಿ ಮತ್ತು ಇತರೆ ಮೂಲಗಳಿಂದ ಲಭ್ಯವಾಗುವ ಆಧಾರಗಳನ್ನು ಮುಖ್ಯವಾಗಿ ಗಮನಿಸಬೇಕಾಗುತ್ತದೆ. ಈ ನಿಟ್ಟಿನಲ್ಲಿ ಇವರ ಸಾಂಸ್ಕೃತಿಕ ವಲಯದಲ್ಲಿ ಈವರೆಗೆ ನಡೆದಿರುವ ಅಧ್ಯಯನಗಳು ಮತ್ತು ಫಲಿತಗಳನ್ನು ಪರಿಶೀಲಿಸಿ ಅಧ್ಯಯನವನ್ನು ಮುಂದುವರೆಸುವುದು ತುಂಬಾ ಅಗತ್ಯವಾದುದು. ಆದ್ದರಿಂದಲೇ ಕರ್ನಾಟಕದಾದ್ಯಂತ ನೆಲೆಯನ್ನು ಕಂಡುಕೊಂಡಿರುವ ಕೊರಚರ ಸಮುದಾಯವನ್ನು ಕುರಿತಂತೆ ಕಳೆದ ಶತಮಾನದ ಆದಿಯಿಂದಲೂ ಕೆಲವು ಅಧ್ಯಯನಗಳು ನಡೆದಿವೆ. ಅದರಲ್ಲಿ ಆಂಗ್ಲ ಅಧಿಕಾರಿಗಳು, ಪ್ರವಾಸಿಗರು, ಸಂಸ್ಕೃತಿ ಚಿಂತಕರು ಮತ್ತು ಸಮಾಜಶಾಸ್ತ್ರಜ್ಞರು, ಮಾನವಶಾಸ್ತ್ರಜ್ಞರು ಮೊದಲಿಗರಾಗಿ ತುಂಬಾ ಜವಾಬ್ದಾರಿಯುತವಾದ ಅಧ್ಯಯನಗಳನ್ನು ನಡೆಸಿರುವುದು ಕಂಡುಬರುತ್ತದೆ.

ಹಿಂದಿನ ಅಧ್ಯಯನಗಳಲ್ಲಿ ಕೊರಚರ ಸಮುದಾಯವನ್ನು ಕುರಿತಾದ ಆಳವಾದ ವಿವರಣಾತ್ಮಕ ವಿಶ್ಲೇಷಣೆ ಇಲ್ಲದಿದ್ದರೂ, ಸಮುದಾಯದ ಪರಿಚಯಾತ್ಮಕ ವಿಶ್ಲೇಷಣೆಯಾತ್ಮಕವಾಗಿ ಚೌಕಟ್ಟನ್ನು ಕೊಡುವಂತ ಕೆಲಸ ನಡೆದಿರುವುದು ಒಂದು ಗಮನಾರ್ಹವಾದ ಸಂಗತಿಯಾಗಿದೆ. ಇಂತಹ ಕೆಲಸವನ್ನು ಮೊದಲಿಗೆ ಕೈಗೆತ್ತಿಕೊಂಡವರು ಎಚ್.ವಿ. ನಂಜುಂಡಯ್ಯ ಮತ್ತು ಎಲ್.ಕೆ. ಅನಂತಕೃಷ್ಣ

ಅಯ್ಯರ್ ಅವರು ಕರ್ನಾಟಕದಲ್ಲಿನ ಅನೇಕ ಬುಡಕಟ್ಟು ಸಮುದಾಯಗಳ ಸಾಂಸ್ಕೃತಿಕ ವಿವರಗಳನ್ನು ಜನಾಂಗಿಕ ವಿವರಗಳನ್ನು ಕುರಿತಾಗಿ The Mysore Tribes and Castes ಎಂಬ ಕೃತಿಯನ್ನು ೧೯೭೫ರಲ್ಲಿ ಐದು ಸಂಪುಟಗಳಲ್ಲಿ ಹೊರತಂದವರು ಇದರಲ್ಲಿ ಸಂಪುಟ ಮೂರನೆಯದರಲ್ಲಿ ಕೊರಚರ ಸಮುದಾಯದ ಕುರಿತಾಗಿ ವಿವರಿಸಲಾಗಿದೆ. ಅದು Korachas also konwn as Karavas and Korams are a tribe of hunters, fortune-tellers, cattle breaders carriers basket makers and theives (H.V. Nanjundaiah and L.K. Ananthakrishna Iyar, Voll-III, 1975, P- 583) ಎಂದು ಕೊರಚರು, ಕೊರವರು, ಕೊರಮರು ಎಂದೇ ಬೇರೆ ಬೇರೆ ಹೆಸರುಗಳಿಂದ ಕರೆಸಿಕೊಳ್ಳುವ ಇವರು ಬೇಟೆಗಾರರು, ಕಣಿ ಹೇಳುವವರು, ಪಶುಪಾಲಕರು, ಸಾಗಣಿದಾರರು, ಬುಟ್ಟಿ ಹೆಣೆಯುವವರು ಜೊತೆಗೆ ಹೊಟ್ಟೆಪಾಡಿಗಾಗಿ ಕಳ್ಳತನ ಮಾಡುವವರು ಆಗಿದ್ದರೆಂದು ಅವರ ವಿವಿಧ ವೃತ್ತಿ ಪ್ರವೃತ್ತಿಗಳನ್ನು ದಾಖಲಿಸಿದ್ದಾರೆ. ಅದರ ಜೊತೆಗೆ ಕೊರಚರ ಭಾಷೆ, ಹವ್ಯಾಸ, ವಿವಾಹ ಮುಂತಾದ ಕುಲಪದ್ಧತಿಗಳನ್ನು, ನಂಬಿಕೆಗಳನ್ನು ಮತ್ತು ಸಾಂಸ್ಕೃತಿಕ ಆಚರಣೆಗಳ ಬಗೆಗೆ ಪರಿಚಯಾತ್ಮಕ ಕೆಲಸವನ್ನು ಮಾಡಿದ್ದಾರೆ.

ದಕ್ಷಿಣ ಭಾರತದ ಅನೇಕ ಬುಡಕಟ್ಟು ಸಮುದಾಯಗಳ ಸಾಂಸ್ಕೃತಿಕ, ಜನಾಂಗಿಕ ವಿವರಗಳಿಗೆ ಸಂಬಂಧಿಸಿದಂತೆ ಕುರಿತ ಎಡ್ಗರ್ ಥರ್ಸ್ಟನ್ ಅವರು ೧೯೮೭ರಲ್ಲಿ ಸುಮಾರು ಏಳು ಸಂಪುಟಗಳಲ್ಲಿ Castes and tribes of southern India ಎಂಬಂತಹ ಕೃತಿಯಲ್ಲಿ ಮೂರನೇ ಸಂಪುಟದಲ್ಲಿ 'ಕೊರವ' ಎಂಬ ಶಿರೋನಾಮೆಯಲ್ಲಿ ಕೊರವ ಜನಾಂಗದ ಮೂಲ, ಜೀವನ ಪದ್ಧತಿ ಆಚರಣೆ ಇತರೆ ಪಂಗಡಗಳು, ಮದುವೆ, ದೈವ, ಆಚರಣೆ ಮತ್ತು ಕುಲಪದ್ಧತಿಗಳು, ಭಾಷೆಗಳ ಕುರಿತಾಗಿ ಸಾಕಷ್ಟು ವಿವರಗಳನ್ನು ಗಮನಿಸಬಹುದು. ''They are known as karava from the extreme south to the north of the north are lot District where they are called koracha are koreche and in the coded districts they become yerukula ro yarkala (Edger thurston, K. Rangachari, Caste and tribes of southern India 1987)'' ಎಂದು ಅಲೆಮಾರಿ ಬುಡಕಟ್ಟು ಸಮುದಾಯವಾದ ಕೊರಚರ ಕುರಿತಾಗಿ ಕೊರವ, ಕೊರಮ, ಯರುಕುಲ, ಕೊರಚ ಇವೆಲ್ಲ ಒಂದೇ ಮೂಲ ಬುಡಕಟ್ಟು ಎಂದು ಹೇಳುತ್ತ ಅವರ ಭೌಗೋಳಿಕ ನೆಲೆ ಮತ್ತು ವೃತ್ತಿಯನ್ನು ಕುರಿತು ಪರಿಚಯಿಸುತ್ತಾರೆ. ಮತ್ತು ಭಾಷೆಯ ಬಗೆಗೆ ಅವರು ಹೇಳುವುದು In communication amang themselves the koravas and the yarukulas speak a carrupt polygot, in which the words derived from several language been little resembalance to the original their words appear to be taken chifly from Tamil, Telugu and Canarise ಎಂದು ಕೊರಚರು ಒಂದೇ ಮೂಲದಿಂದ ವಲಸೆಯಾಗಿ ಆಂಧ್ರಪ್ರದೇಶದಿಂದ ಕರ್ನಾಟಕಕ್ಕೆ ಬಂದಿದ್ದರಿಂದಾಗಿ ಇವರಲ್ಲಿ ತಮಿಳು, ತೆಲುಗು, ಕನ್ನಡದ ಭಾಷಿಕಾಂಶಗಳನ್ನು ಕಾಣಬಹುದು.

ಎಂಥೋವನ್ ಆರ್.ಇ. ಅವರು Koravas also known as korar, korarer, koramar and korachar numbering 19364 (1901) including 9672 males and 9692 females are found

principaly in the Belgum Bijapur and Dharwad district and in the native states of the southern cattle agences they are wondering tribe of hunters furtune tellers cattle breeders, carriers, musicians, basket makers and thives (Enthovan R.E., The tribes and castes of Bombay Voll-II, P-266) ಎಂದಿದ್ದಾರೆ. ಇಲ್ಲಿ ಕೊರವರನ್ನು ಗುರುತಿಸುತ್ತ ಇತರೆ ಹೆಸರುಗಳು (ಪಂಗಡಗಳ), ೧೯೦೧ರ ಜನಗಣತಿಯ ಪ್ರಕಾರ ಮುಂಬಯಿ ಪ್ರಾಂತ್ಯದ ಜನಸಂಖ್ಯೆ ಮತ್ತು ಅವರ ಉದ್ಯೋಗ ವ್ಯವಹಾರ ಜೊತೆಗೆ ಬುಡಕಟ್ಟು ಸಮುದಾಯವಾದ ಕೊರಚರ ಮೂಲ ಮತ್ತು ಅವರಾಡುವ ಭಾಷೆ, ಕುಲಪದ್ಧತಿಗಳ ಪರಿಚಯ ಮಾಡಿಕೊಟ್ಟಿದ್ದಾರೆ. ಮತ್ತು ಜನವಾದ್ಯಕರಾಗಿದ್ದ ಬಗ್ಗೆ ವಿವರಿಸಿದ್ದಾರೆ. ಈ ಅಂಶಗಳು ಕೊರಚ ಸಮುದಾಯದ ಸಾಂಸ್ಕೃತಿಕ ಬೆಳವಣಿಗೆಯ ಪ್ರತೀಕವೆಂಬಂತೆ ನೋಡಬಹುದು. ಹಾಗೆ ಕರ್ನಾಟಕದ ಕರಾವಳಿ ಪ್ರದೇಶದಲ್ಲಿ ವಾಸವಾಗಿರುವ ಜಾತಿ ಶ್ರೇಣಿಕರಣದಲ್ಲಿ ಅಂತ್ಯಜರೆಂದು ಗುರುತಿಸಲ್ಪಟ್ಟಿರುವ 'ಕೊರಗ' ಸಮುದಾಯವನ್ನು ಕೊರಚ ಸಮುದಾಯದ ಪರಿಧಿಯೊಳಗೆ ಸೇರಿಸಿ ಕೊರವ, ಕೊರಮ, ಕೊಗಗರೆಲ್ಲರು ಒಂದೇ ಸಮುದಾಯದವರು ಎಂದು ಹೇಳಿರುವುದು ದೋಷಪೂರ್ಣವಾದಂತಹ ಸಂಗತಿಯಾಗಿದೆ. ಕೊರಗರು ಕೊರಚ–ಕೊರಮ, ಕೊರವರಿಗಿಂತ ಸಾಂಸ್ಕೃತಿಕ ಸಂಬಂಧದ ಜೊತೆಗೆ ಭಾಷಿಕವಾಗಿಯೂ ಸಂಪೂರ್ಣ ಭಿನ್ನತೆಯನ್ನು ಹೊಂದಿದ ಸಮುದಾಯವಾಗಿದ್ದು ಕರಾವಳಿ ಕರ್ನಾಟಕದಲ್ಲಿ ಮಾತ್ರ ಈ ಸಮುದಾಯದವರು ಕಂಡುಬರುತ್ತಾರೆ.

ಅಬ್ಬೆಡುಬಾಯ್ಸ್ ಅವರು ೧೯೦೬ರಲ್ಲಿ "Hindu manners customs and ceremonies" ಎಂದು ಮಹತ್ತರ ಕೃತಿಯಲ್ಲಿ ಕೊರಚರನ್ನು ಕುರಿತಂತೆ They as carriers and basket makers who were perpetualles wondering about and showed much affimity with the gypises of Europe, especially in telling fortune, the women were skillbuls tuttars about the tribes in his time has an evil reputation for theving and house breaking (Abbe Dubois, P. 65-66) ಎಂದು ಹೇಳುತ್ತ ಕೊರಚರ ಅಲೆಮಾರಿತನ ವೃತ್ತಿಪಲ್ಲಟ ವೈವಿಧ್ಯತೆ ಮತ್ತು ಕಳ್ಳತನದ ಕುರಿತಂತೆ ವಿವರಗಳನ್ನು ನೀಡಿದ್ದಾರೆ.

Rev.J. Coin ಅವರು among themselves call each other kuluvaru, but the Telugu peaple call them Frakalar or word eruka which means knowledge or tellers (Indian autiquaty ix, 1880 Quated, E. Thurstone, Caste and tribes of southern India- Voll-III, p. 443) ಕೊರಚರನ್ನು ತೆಲುಗರು ಎರುಕವಾರು ಅಥವಾ ಎರಕಲರು ಎಂದು ಕರೆಯುತ್ತಾರೆ. ತೆಲುಗಿನ ಈ ಹೆಸರು ಎರಕ ಶಬ್ದದಿಂದ ಬಂದಿದೆ. ಎರಕ ಎಂದರೆ ಜ್ಞಾನ ಅಥವಾ ಪರಿಚಯಸ್ಥ ಎಂಬ ಅರ್ಥವಿದೆ. ಈ ಹೇಳಿಕೆಯಿಂದ ತೆಲುಗು ನಾಡಿನಲ್ಲಿ ಪಡೆದ ಪ್ರಚಾರ ಮತ್ತು ತೆಲುಗರ ಬಾಯಲ್ಲಿ ಕೊರಚರು ಕಣಿ ಹೇಳುವ ಜ್ಞಾನದಿಂದ ಎರಕಲವರಾಗಿರುವುದು ತಿಳಿಯುತ್ತದೆ. ಆದರೆ ಕ್ಷೇತ್ರಕಾರ್ಯ ಸಂದರ್ಭದಲ್ಲಿ ಕೊರಚರೊಂದಿಗೆ ಈ ವಿಚಾರವಾಗಿ ಕೇಳಿದಾಗ "ನಮ್ಮ ಬಹುತೇಕವಾಗಿ ಕಣಿ ಹೇಳುವ ಕೆಲಸ ನಡೆದಿಲ್ಲ ಅದು ಕೊರವ (ಕಚ್ಚು ಕಟ್ಟರಾಯ)ರವರು ಎಂದು ಸಮುದಾಯದ

ಹಿರಿಯ ತಲೆಮಾರಿನವರು ಹೇಳಿದ್ದಾರೆ. (ಕಪ್ಪತಪ್ಪ, ಗರಗ ಗ್ರಾಮ, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ)

B.L. Rice ರವರು ಕೊರಗರು ಕೊರಮರು ಮತ್ತು ಕೊರಚರನ್ನು ಕುರಿತು ಹೀಗೆ ಹೇಳುತ್ತಾರೆ. ''The koragas, koramas, korachas moving with drous of cattle and asses carring salt and grain and making bomboo mats and baskets/ Rice B.L. Mysore Voll-I, P. 312-350 and Vol-III P. 214) ಇಲ್ಲಿ ಕೊರಗರು, ಕೊರಮರು, ಕೊರಚರು ಒಂದೇಯಾಗಿದ್ದು ಅವರು ಜೀವನೋಪಾಯವಾಗಿ ಉಪ್ಪು ಮಾರುತ್ತಿದ್ದರು ಮತ್ತು ಇತರೆ ಆಹಾರ ಸಾಮಾಗ್ರಿಗಳನ್ನು ಹಳ್ಳಿ ಹಳ್ಳಿಗೆ ಕೊಂಡೊಯ್ದು ಮಾರಿ ಶ್ರಮ ಜೀವನ ಸಾಗಿಸುತ್ತಿದ್ದರು ಎಂಬುದನ್ನು ಹೇಳಿದ್ದಾರೆ. ಇಲ್ಲಿ ಕೊರಗರು ಇನ್ನುಳಿದ ಎರಡು ಪಂಗಡಗಳಿಗಿಂತ, ಭಾಷೆ, ಸಾಂಸ್ಕೃತಿಕ ಬದುಕಿಗೆ ಭಿನ್ನವಾಗಿರುವುದನ್ನು ರೈಸ್ ಅವರು ತಿಳಿಸಿಲ್ಲದಿರುವುದಾಗಿದೆ. ಹಾಗೆಯೇ ಕೊರಚರು ಪ್ರಾದೇಶಿಕವಾಗಿ ದೊರೆಯುವಂತಹ ಕೆಲ ಸಂಪನ್ಮೂಲಗಳಿಂದ ಜೀವನೋಪಾಯ ನಡೆಸುತ್ತಿದ್ದರು ಎಂಬುದು ಗಮನಾರ್ಹವಾದುದ್ದು ಆಗಿದೆ.

ಫ್ರಾನ್ಸಿಸ್ ಅವರು Koruvas have usually been treeted as being the same as the yerukalas both castes are wondring gypisies both live by basket making and furtune telling both speak a corrupt Tamil and both may have sprung from one original stock (Madras census Report, 1901, Quoted, E. Thrustone, 1987, Voll-III, P. 441) ಇವರು ಕೊರಮ/ಕೊರಚ ಬುಡಕಟ್ಟಿನ ಸ್ವರೂಪ ಪರಿಚಯಿಸುತ್ತ ಯರುಕುಲ ಮತ್ತು ಕೊರಚ, ಕೊರಮರು ಒಂದೇ ಮೂಲದಿಂದ ಹೊರಟು ಬೇರೆ ಬೇರೆ ವೃತ್ತಿಗಳನ್ನು ಅನುಸರಿಸಿಕೊಂಡು ಬೇರೆ ಬೇರೆ ಹೆಸರುಗಳಿಂದ ಗುರುತಿಸಿಕೊಂಡಿರುವುದು ಮತ್ತು ಇವರಾಡುವ ಭಾಷೆ ಒಂದೇ ಮೂಲದ್ದು ಅದು ತಮಿಳಿನ (ಪೂರ್ವ) ಒಂದು ಉಪಭಾಷೆಯೆಂದು ಹೇಳಿದ್ದಾರೆ. ಅದು ಕೊರಚರ ಭಾಷೆಯಲ್ಲಿ ತಮಿಳಿನ ಬಹುತೇಕ ಭಾಷಿಕಾಂಶಗಳನ್ನು ನೋಡಬಹುದಾಗಿದೆ.

Oppert ಅವರು It is highly probable thet the name and the occuption of the forutune telling kuruvendlu or kuluvendles indeed the Telugu peaole to call this tribe yerukala vendlu (Madras, Jurnalist and Science, 1988-89, Queted, E. Thrustone, 1987, P. 441) ಎಂದು ದಾಖಲಿಸಿರುವುದರಲ್ಲಿ ಕಣಿ ಹೇಳುವ ಕುರುವೆಂಡಲು ಅಥವಾ ಕುಳುವೆಂಡ್ಲು ಎನ್ನುವ ಕೊರಮ ಬುಡಕಟ್ಟಿನ ಜನರನ್ನು ತೆಲುಗು ಜನ ಯರಕುಲ ವೆಂಡ್ಲು ಅಂದು ಕರೆಯುತ್ತಿದ್ದ ಬಗೆಗೆ ಮಾಹಿತಿಯನ್ನು ಒದಗಿಸಿದ್ದಾರೆ. ಬೇರೆ ಬೇರೆ ಪ್ರಾಂತ್ಯಗಳಲ್ಲಿ ಬದುಕುವ ಇವರಿಗೆ ಆಯಾ ಪ್ರಾಂತ್ಯದಲ್ಲಿ ಬೇರೆ ಬೇರೆ ಹೆಸರುಗಳಿದ್ದರೂ ಸಾಮಾನ್ಯವಾಗಿ ಭಾಷೆಯಲ್ಲಿ ಒಂದೇ ರೀತಿಯ ಭಾಷಿಕಾಂಶಗಳು ಕೆಲ ಕಂಡುಬಂದರು ಸಾಂಸ್ಕೃತಿಕವಾಗಿಯೂ ಕೆಲವಾರು ಅಂಶಗಳು ಸಾಮ್ಯತೆಯನ್ನು ಹೊಂದಿರುವುದನ್ನು ನೋಡಬಹುದು.

Koravas also known as kormas or korachas and kaikadi is are a tribe of hunters, cattle breaders, carriers, musicians, basket and agricultruist in olden days some of them are theives ಎಂಬುದಾಗಿ ತಮ್ಮ ಕೃತಿಯೊಂದರಲ್ಲಿ ಬರೆದಿರುವ ಶ್ರೀಮತಿ ವಿಮಲ ದೊರೆಸ್ವಾಮಿ ಮತ್ತು ಎಂ. ದೊರೆಸ್ವಾಮಿ ಇವರು ಕೊರಮ, ಕೊರಚ, ಯರುಕುಲ, ಕೈಕಾಡಿ ಎಲ್ಲರೂ ಬೇಟೆಗಾರರು, ಬೇಸಾಯಗಾರರು, ಪಶುಪಾಲಕರು, ವಾದ್ಯಗಾರರು, ಬುಟ್ಟಿ ಹೆಣೆಯುವ ಕಸುಬುದಾರರು ಎಂಬ ಅಭಿಪ್ರಾಯ ನೀಡಿದ್ದಾರೆ. ಇಲ್ಲಿ ಕೈಕಾಡಿ ತಮಿಳಿನ ಉಪಭಾಷೆ ಸೂಚಕ ಪದವಾಗಿದೆ. ಮತ್ತು ಕೊರಚರು ಕಳ್ಳತನದ ವೃತ್ತಿಯನ್ನು ಮಾಡುತ್ತಿದ್ದರು ಎಂದು ವಿವರವಿದೆ. ಇಲ್ಲಿ ಭೌಗೋಳಿಕ ಪರಿಸ್ಥಿತಿಗಳಿಗನುಗುಣವಾಗಿ ಕೊರಚರು, ಕೊರಮರು, ಕೊರವರು ಬೇರೆ ಬೇರೆ ಉದ್ಯೋಗಗಳಲ್ಲಿ ತೊಡಗಿದ್ದು ಕೇವಲ ವೃತ್ತಿ ಸಾಮ್ಯತೆಯೊಂದರಿಂದಲೇ ಎಲ್ಲ ಗುಂಪುಗಳು ಮತ್ತು ಅವರ ಸಂಸ್ಕೃತಿಯನ್ನು ಏಕೀಕರಣಗೊಳಿಸಿಕೊಂಡು ಅಧ್ಯಯನ ಮಾಡುವುದು ಸೂಕ್ತವಲ್ಲವೆನಿಸುತ್ತದೆ.

ಶ್ರೀಮತಿ ಜ್ಞಾನ ಮಾಣಿಕಮ್ಮಾಳ್ ಅವರು ಹೇಳುವ ಹಾಗೆ ''These people are the oborigans of hill and volies of south India most of them are how in plan's and a few in hills through Southern Stats and engage in varius occupations they are one and the same caste. The kala and Kothra are also the some with a people of this community. though they differn in their mother tungue (Smt. R. Gnanamanikammal, Kurrunjivelalor, Editor, Tamilnadu) ಎಂದು ದಕ್ಷಿಣ ಭಾರತದ ಬೆಟ್ಟಗುಡ್ಡ ಮತ್ತು ಕಣಿವೆಗಳ ಅರೆ-ಅಲೆಮಾರಿಗಳಾದ ಈ ಜನ ಈಗ ದಕ್ಷಿಣ ರಾಜ್ಯಗಳ ಬಯಲು ಪ್ರದೇಶಗಳಲ್ಲಿ ಕೆಲವರು ಬೆಟ್ಟಗುಡ್ಡಗಳಲ್ಲಿಯೇ ನೆಲೆಸಿರುವುದು ಇನ್ನು ಕೆಲವರು ಕುಲ-ಗೋತ್ರಗಳಿಂದ ಒಂದೇ ಆದ ಈ ಬುಡಕಟ್ಟಿನವರು ವಿವಿಧ ಉದ್ಯೋಗಗಳನ್ನು ಅವಲಂಬಿಸಿ ವಿವಿಧ ಪ್ರದೇಶದ ಭಾಷೆಗಳನ್ನು ಆಡುತ್ತ (ಮಾತಾಡುತ್ತ) ವಿವಿಧ ಹೆಸರುಗಳಿಂದ ಗುರುತಿಸಿಕೊಳ್ಳುತ್ತಿದ್ದರು ಹಾಗೂ ಗೋತ್ರ ಮತ್ತು ಬೆಡಗಿನಲ್ಲೂ ಕೊರಚ, ಕೊರಮ, ಕೊರವ, ಕುಂಜೀಕೊರವರ ಮಧ್ಯ ಸ್ಪಷ್ಟವಾದ ಭಿನ್ನತೆ ಇರುವುದು ಕಂಡುಬರುತ್ತದೆ. ಆದರೆ ಈ ಎಲ್ಲ ಪಂಗಡದವರು ಮಾತನಾಡುವ ಭಾಷೆಯಲ್ಲಿ ಮಾತ್ರ ಸ್ವಲ್ಪ ಹೋಲಿಕೆಗಳನ್ನು ಗುರುತಿಸಿ ಒಂದೇ ಮೂಲಕ್ಕೆ ಸೇರಿದವರು ಎಂದು ಇವರನ್ನು ಗುರುತಿಸಲಾಗಿದೆ.

ಚಿಕ್ಕಮಂಗಳೂರು ಗೆಝೆಟಿಯರ್‌ನಲ್ಲಿ ''The names of the koramas and korachas enumerated separately are local variations for one and the some state they aer called Banjanthris, some of theis women folk or koravanjies Traditionally female forutne teller Gazetter of India, Chikkamangalore, P. 81) ಕೊಟ್ಟಿರುವ ಮಾಹಿತಿಯನ್ನು ಗಮನಿಸಿ ಕೊರಮರು ಮತ್ತು ಕೊರಚರು ಬೇರೆ ಬೇರೆಯಾಗಿ ಗಣಿಸಿದರೆ ಕೆಲವು ವ್ಯತ್ಯಾಸಗಳನ್ನು ಬಿಟ್ಟು ಉಳಿದಂತೆ ಒಂದೇ ಆಗಿ ತೋರುತ್ತದೆ. ಇವರು ಭಜಂತ್ರಿ ಎನ್ನುವ ಹೆಸರಿನಿಂದಲೂ ಕರೆಸಿಕೊಳ್ಳುತ್ತಾರೆ. ಇಲ್ಲಿ ಮಹಿಳೆಯರು ಸಾಂಪ್ರದಾಯಿಕವಾಗಿ ಕಣಿ ಹೇಳುವುದನ್ನು ಉಳಿಸಿಕೊಂಡು ಬಂದಿದ್ದಾರೆ ಎನ್ನುವ ಅಂಶವನ್ನು ದಾಖಲಿಸಿದ್ದಾರೆ. ಮತ್ತು ಈ ಬುಡಕಟ್ಟುಗಳ ಹೆಸರುಗಳು ಬೇರೆಯಾದರೂ ಇವರೆಲ್ಲ

ಮೂಲದಲ್ಲಿ ಒಂದೇ ಎಂಬ ಅಂಶ ಗಮನಾರ್ಹವಾಗಿ ನಿಂತುಕೊಳ್ಳುತ್ತವೆ. ಆದರೆ ಪ್ರಸ್ತುತದಲ್ಲಿ ಇವರು ಬದುಕುವಂತಹ ಜೀವನ ಪದ್ಧತಿಗಳನ್ನು ಗಮನಿಸಿದರೆ ಹಲವು ಸಾಂಸ್ಕೃತಿಕ ಭಿನ್ನತೆಗಳು ಕಂಡುಬರುತ್ತವೆ. ಮತ್ತು ಭಾಷಿಕಾಂಶಗಳು ಹಾಗೇ ವಾಸದ ನೆಲೆಗಳಿಗನುಗುಣವಾಗಿಯೂ ಈ ಸಮುದಾಯಗಳಲ್ಲಿ ಸಾಕಷ್ಟು ಭಿನ್ನತೆಗಳನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಕೊಳ್ಳಲಾಗಿದೆ.

ಶ್ರೀ ಶ್ಯಾಮಪ್ರಸಾದ್ ಅವರು 'ಕುಳುವರ ಇತಿಹಾಸ' ಎಂಬ ಲೇಖನದಲ್ಲಿ ಕೊರಚರ ಈ ಜನಾಂಗದವರು ಪೂರ್ವದಲ್ಲಿ ಹೆಚ್ಚಾಗಿ ಅರಣ್ಯ ಮತ್ತು ಬೆಟ್ಟ-ಗುಡ್ಡಗಳಲ್ಲಿ ವಾಸಿಸುತ್ತಿದ್ದರು. ಕಾಡಿನಲ್ಲಿ ಹೇರಳವಾಗಿ ದೊರಕುತ್ತಿದ್ದ ಬಿದಿರು, ಈಚಲು ಗರಿಗಳಿಂದ ಮಕ್ಕರಿ, ಬುಟ್ಟಿ, ತೊಟ್ಟಿಲು, ಬಂಡಿಮಕ್ಕರಿ, ಮೊರ, ಚಾಪೆ ಇತ್ಯಾದಿ ಕಸುಬುಗಳಿಂದ ಜೀವನ ಸಾಗಿಸುತ್ತಿದ್ದರು. ನಂತರ ಕತ್ತಾಳೆ ನಾರಿನ ಹಗ್ಗ ಮಾಡಿ ಮಾರಿ ಜೀವನ ಸಾಗಿಸುತ್ತಿದ್ದರು. ಹೆಂಗಸರು ಕಣಿ (ಭವಿಷ್ಯ) ಹೇಳುವುದು, ಹಚ್ಚೆ ಹಾಕುವುದು ಈ ಕಲೆಗಳಿಂದ ಸಂಪಾದಿಸಿ ಜೀವನ ಸಾಗಿಸುತ್ತಿದ್ದರು. (ಶ್ಯಾಂ ಪ್ರಸಾದ್, ಕುಳುವರ ಇತಿಸಾಹ, Quated sourverir, July, 1983, Akila Karnataka Koramara Sanga) ಎಂದು ಹೇಳಿರುವುದರಲ್ಲಿ ಕೊರಮರ ಉದ್ಯೋಗಗಳು ಪರಿಚಯವಾಗುತ್ತದೆ. ಹಲವಾರು ವಿದ್ವಾಂಸರು ವಿವಿಧ ದಾಖಲೆಗಳಲ್ಲಿಯೂ ಈ ಅಂಶ ಪ್ರಧಾನವಾಗಿ ಕಾಣುವುದಲ್ಲದೆ ನಿರ್ದಿಷ್ಟತೆ ದೊರತಂತಾಗುತ್ತದೆ. ಇಲ್ಲಿ ಮುಖ್ಯವಾಗಿ ಗಮನಿಸುವುದೇನೆಂದರೆ "ಕೊರಚರ ಬಗೆಗೆ ಅವರು ಅವರಲ್ಲಿಯೇ ಗುರುತಿಸುವಂತೆ 'ಕುಳುವರು' ಎಂಬ ಶಿರೋನಾಮೆಯಿಂದಲೇ ಬರವಣಿಗೆಯಾದ ಮೊದಲ ಕೃತಿಯಾಗಿದೆ.

Buchanu's Mysore ಅವರು Koramas of Mysore an in pure caste who made baskets and carried solt ಎಂದು ಇವರು ಉಪ್ಪು ಸಾಗಿಸುವುದು ಮತ್ತು ಬುಟ್ಟಿ ತಯರಿಕೆಯಲ್ಲಿ ತೊಡಗಿದವರು ಎಂಬುದನ್ನು ಸೂಚಿಸುತ್ತದೆ. ಇಲ್ಲಿ ಕೊರಮರನ್ನು ಬುಡಕಟ್ಟು ಎಂದು ಪರಿಗಣಿಸದೇ ಜಾತಿಯಾಗಿ ಸೂಚಿಸಿರುವುದು ಜಾತಿ ವ್ಯವಸ್ಥೆಯ ವೃತ್ತಿ ಆಧಾರಿತವಾಗಿ ಬೆಳೆದುಬಂದಿರುವುದಕ್ಕೆ ಸಾಕ್ಷಿಯಾಗಿದೆ.

Stuart H.A. ಅವರು That the Koravas or yarukalas are a vagrant tribe found throught the presidency and in many parts of India. In the Telugu country they are called yarakala vandalu or koracha vandlu but they always speak of themselves as kuru and there is not the slightest room for the doubt that been expressed regarding the identity of koravas and yarukalas (Mudras censes report-189, Quated, E. Thrustone, 1987, Voll-III, P. 440) ಈ ದಾಖಲೆಯಲ್ಲಿ ಮದ್ರಾಸ್ ರಾಜ್ಯದಲ್ಲಿ ಮತ್ತು ಭಾರತದ ಇತರ ಭಾಗಗಳಲ್ಲಿದ್ದ ಅಲೆಮಾರಿಗಳಾದ ಕೊರಮ ಅಥವಾ ಯರಕುಲರನ್ನು ತೆಲುಗು ಪ್ರಾಂತ್ಯದಲ್ಲಿ ಎರಕಲವೆಂಡಲು ಅಥವಾ ಕೊರಚವೆಂಡ್ಲು ಎಂದು ಕರೆಯುತ್ತಿದ್ದರು. ಇವರು ತಮ್ಮನ್ನು ತಾವು 'ಕುರು' ಜನಾಂಗವೆಂದು ಕರೆದುಕೊಳ್ಳುತ್ತಿದ್ದರು. ಹಾಗೇ ಕುರು ಜನಾಂಗ ಬೇರೆ ಯಾರೋ ಆಗಿರದೆ ಅವರು ಯರಕುಲರೇ ಅಥವಾ ಕೊರಚರೇ ಆಗಿದ್ದರು ಎಂಬ ಬಗೆಗೆ ಯಾವ ಸಂಶಯವೂ ಇಲ್ಲ

ಎಂಬುದನ್ನು ಸ್ಪಷ್ಟಪಡಿಸುತ್ತಾರೆ. ಕುರು ಪ್ರದೇಶದವರಾದ ಕೊರಮರು ಬೇರೆಯವರಿಗೆ ತಮ್ಮನ್ನು ಕುರುವರು ಎಂದು ಪರಿಚಯಿಸಿಕೊಂಡರು. ಮುಂದೆ ಅವರು ಕುರುವರು ಕುಳುವರಾಗಿ ದೇಶದ ಇತರ ಭಾಗಗಳಲ್ಲಿ ತಾವು ಅನುಸರಿಸುತ್ತಿದ್ದ ಕಸುಬು ಮತ್ತು ವ್ಯವಹಾರದಿಂದ ಬೇರೆ ಬೇರೆಯಾಗಿ ಗುರುತಿಸಲ್ಪಟ್ಟಿರುವುದು ಕಂಡುಬರುತ್ತದೆ.

ತಮಿಳು, ತೆಲುಗು, ಕನ್ನಡ ನಾಡುಗಳಲ್ಲಿ ಕಂಡುಬರುವ ಕುರವರು (ಕೊರಚ, ಕೊರವ, ಕೊರಮ ಮುಂತಾದ) ಗುಡ್ಡಗಾಡು ಜನಾಂಗದವರಾಗಿ ಕಂಡುಬರುತ್ತಾರೆ. ಇವರು ತಮಿಳು ಮೂಲದ ಬುಡಕಟ್ಟು ಜನಾಂಗದವರಾಗಿ ಬೆಟ್ಟಗುಡ್ಡಗಳಲ್ಲಿ ಉಳಿದು ಪಶುಪಾಲನೆ ಅರಣ್ಯೋತ್ಪನ್ನಗಳನ್ನು ಅನುಸರಿಸಿ ಬುಟ್ಟಿ ಹೆಣೆಯುವುದು, ಬೇಟೆಯಾಡುವುದು ಮಾಡುತ್ತಾರೆ. ಹಾಗೂ ತಮಿಳಿನ ಉಪಭಾಷಾ (ಮೂಲ ತಮಿಳಿನ) ರೂಪದ ಭಾಷೆಯನ್ನಾಡುವ ಇವರನ್ನು ನೋಡಿದರೆ ಇವರು ಗುಡ್ಡಗಾಡು ಜನಾಂಗವೆಂದು ತಿಳಿದುಬರುತ್ತದೆ. ನಾಡಿನಾದ್ಯಂತ ಅನೇಕ ಹೆಸರುಗಳಿಂದ ಕರೆಸಿಕೊಳ್ಳುವ ಇವರು ಹೆಚ್ಚು ಕಡಿಮೆ ಏಕಪ್ರಕಾರದ ಭಾಷೆಯೇ ಅವರ ಮೂಲ ನೆಲೆ ಎಂಬುದು ಸ್ಪಷ್ಟವಾಗುತ್ತದೆ ಎಂದು ಕೊರಚರು ಮತ್ತು ಕೊರಚರ ಪದದ ಅರ್ಥದ ಕುರಿತಾಗಿ ಆರ್.ಎಸ್. ಕಿಟ್ಟೆಲ್ ಅವರು ''Kannada-English Dictionary''ಯಲ್ಲಿ The thievish wondering hill tribe that sell wooden combs and an upbrading man a blamer, a scorner, a bobbler ಎಂದು ಅರ್ಥವಿವರಣೆಯನ್ನು ನೀಡಿರುವುದನ್ನು ನೋಡಬಹುದಾಗಿದೆ. ಅಷ್ಟೇ ಅಲ್ಲದೆ ಎಂ.ಬಿ. ಎಮಿನೋ ಮತ್ತು ಬರೋ ಅವರು ರಚಿಸಿದ (DED) Dravidian Etmalagical dictionaryಯಲ್ಲಿ ಕೊರಚರ ಬಗೆಗೆ ಕುಳುವ ಭಾಷೆಯ ಬಗೆಗೆ ಅರ್ಥ ವಿವರಣೆಯನ್ನು ಕುರಿತಾಗಿ ಹೇಳಿದ್ದಾರೆ. Kuluvan ಎಂದರೆ Kuluvan fowlers attendent hillman kuluvai fowler's kuluvan hillman ಎಂಬಂತೆ ನೀಡಲಾಗಿದೆ. ಹಾಗೆಯೇ ಕೊರಚ (Koracha) ಪದವನ್ನು ಕುರಿತು a thievies wondring hill tribe ಎಂದಿದೆ. ಹೀಗೆ ಕೊರಚರು ಎಂದರೆ ಕಾಡು-ಮೇಡುಗಳಲ್ಲಿ ವಾಸಿಸುತ್ತ ಬಂದ ಜನಾಂಗವೆಂದು ತಿಳಿದುಬರುತ್ತದೆ. ಈ ರೀತಿಯಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟಿನಲ್ಲಿ ಶಿವರಾಮ ಕಾರಂತರ "ಸಿರಿಗನ್ನಡ ಅರ್ಥಕೋಶ"ದಲ್ಲಿಯೂ ಇವರ ಬಗ್ಗೆ ಮಾಹಿತಿಯನ್ನು ಮತ್ತು ಕೊರಚ ಪದದ ಅರ್ಥವನ್ನು ನೋಡಬಹುದಾಗಿದೆ.

ಈ ಮೇಲಿನ ಕೃತಿಗಳು ಇಂಗ್ಲಿಷಿನಲ್ಲಿ ದೊರೆಯುವ ಆಕರಗಳು ಒಂದು ರೀತಿಯಲ್ಲಿ ಇವು ಲೇಖನಗಳು ಮತ್ತು ವರದಿಗಳ ಸ್ವರೂಪದಲ್ಲಿದ್ದು, ಪರಿಚಯಾತ್ಮಕ ಮಾಹಿತಿಯನ್ನು ಮಾತ್ರ ನೀಡುವಂತವು. ಇವುಗಳ ಮೂಲಕ ಕೊರಚರ ಸಮಗ್ರ ಜೀವನ ಕ್ರಮವನ್ನಾಗಲಿ, ಸಂಸ್ಕೃತಿಯನ್ನಾಗಲಿ ತಿಳಿಯಲು ಸಾಧ್ಯವಿಲ್ಲ. ಇನ್ನು ಕನ್ನಡದ ಸಂದರ್ಭಕ್ಕೆ ಬಂದರೆ ಈ ಕುರಿತಂತೆ ಅಧ್ಯಯನಗಳು ನಡೆದೇ ಇಲ್ಲವೆನ್ನುವಷ್ಟರ ಮಟ್ಟಿಗೆ ವಿರಳವಾಗಿವೆ. ಅದರಲ್ಲಿ ಗಿರಿಧರರಾವ್ ಹವಾಲ್ದಾರ್ ಅವರ "ಕೊರಚರು: ಒಂದು ಸಾಂಸ್ಕೃತಿಕ ಅಧ್ಯಯನ" ಎಂಬ ಡಿ.ಲಿಟ್ ಮಹಾಪ್ರಬಂಧವು (ಅಪ್ರಕಟಿತ) ಮೊದಲ ಆಕರವಾಗಿ ಕಂಡುಬರುತ್ತದೆ. ತಮಿಳುನಾಡಿನ ಕುಳುವರು ಅಥವಾ ಕುಳುವ್ರ ಎಂಬ ಪಂಗಡಕ್ಕೆ

ಸೇರಿದ ಕೊರಚರು, ಕೊರವರು, ಕೊರಮರು, ಕುಂಚಿ ಕೊರಮರು, ಕೊರಮಶೆಟ್ರು ಮೂಲದಲ್ಲಿ ಒಂದೇ ಬುಡಕಟ್ಟಿನವರಾಗಿದ್ದರೂ ಕಾಲಾಂತರದಲ್ಲಿ ತಮಿಳುನಾಡಿನಿಂದ ವಲಸೆ ಹೊರಟು ತಮ್ಮ ವೃತ್ತಿಯಲ್ಲಿ, ಭಾಷೆಯಲ್ಲಿ, ಜೀವನ ವಿಧಾನಗಳಲ್ಲಿ ಸಾಕಷ್ಟು ಪ್ರತ್ಯೇಕತೆಯನ್ನು ಮೈಗೂಡಿಸಿಕೊಂಡು ಸ್ಪಷ್ಟವಾದ ಭಿನ್ನತೆಗಳನ್ನು ಹೊಂದಿದ ಪಂಗಡಗಳಾಗಿವೆ. ಆದರೂ ಇಲ್ಲಿವರೆಗೂ ಈ ಪಂಗಡಗಳಿಗೆ ಸಂಬಂಧಿಸಿದ ಸಾಂಸ್ಕೃತಿಕ ಅಧ್ಯಯನಗಳು ಕೊರಚ, ಕೊರವ, ಕೊರಮ, ಕುಂಚಿಕೊರಮ ಎಲ್ಲರನ್ನು ಒಟ್ಟಾಗಿ ಸೇರಿಸಿ ಈ ಎಲ್ಲರ ಸಂಸ್ಕೃತಿಯನ್ನು ಒಂದೇ ಎಂಬರ್ಥದಲ್ಲಿ ಅಧ್ಯಯನವನ್ನು ಮಾಡಲಾಗಿದೆ. ಆದರೆ ಈ ಕುರಿತು ಆಂಧ್ರದಲ್ಲಿ ಕೊರಚರನ್ನು ಮಾತ್ರವೇ ಯರುಕುಳರು ಅಥವಾ ಎರುಕುಳರು ಎಂಬುದಾಗಿ ಕರೆಯುತ್ತಿದ್ದರು. ಇವರು ಕೊರವ ಕೊರಮಕೊಟ್ಟಿಗೆ ಸ್ಪಷ್ಟವಾಗಿ ಭಿನ್ನತೆಯನ್ನು ಹೊಂದಿದ್ದಾರೆ.

ಗಿರಿಧರರಾವ್ ಹವಾಲ್ದಾರ್ ಅವರು "ಕೊರಚರು: ಒಂದು ಸಾಂಸ್ಕೃತಿಕ ಅಧ್ಯಯನ" ಎಂಬುದರಲ್ಲಿ ಕೊರಚರ ಕೌಟುಂಬಿಕ ಮತ್ತು ಸಾಮಾಜಿಕ ಜೀವನ, ಲೌಕಿಕ ವಿಧಿ-ವಿಧಾನಗಳು, ಧಾರ್ಮಿಕ ವಿಧಿ-ವಿಧಾನಗಳು, ಭಾಷೆ-ಸಾಹಿತ್ಯದ ಬಗೆಗೆ ವಿವರಿಸುವುದರೊಂದಿಗೆ ಕೊರಚರು ಇತರೆ ಪಂಗಡಗಳಿಗಿರುವ ಪ್ರಮುಖ ವ್ಯತ್ಯಾಸವನ್ನು ಭಾಷಿಕವಾಗಿ ಗುರುತಿಸಿರುವುದನ್ನು ನೋಡಬಹುದು. ಇವರು ಒಂದೇ ಮೂಲದ ಭಾಷೆಯನ್ನು ಮಾತಾಡಿದರು ಪ್ರಾದೇಶಿಕವಾಗಿ, ಸಾಂಸ್ಕೃತಿಕವಾಗಿ, ವೃತ್ತಿಯನುಗುಣವಾಗಿ ಬಳಸುವಂತಹ ಭಾಷೆಗಳಲ್ಲಿ ವ್ಯತ್ಯಾಸಗಳನ್ನು ಕಾಣಬಹುದು.

ಉದಾ. ಕನ್ನಡ	ಕೊರಚ	ಕೊರವ	ಕೊರಮ
ಗುಡಿಸಲು	ಗುಡಿಸಿ	ಊಡು	ಊಡು
ತಂದೆ	ಆವ/ಅಯ್ಯ/ಅಬ್ಬ	ಆವ	ಯಾವ
ಸಾರು	ಪುಳುಸು	ನಕಳಿ	ಸೊಕ್ಕಳಿ

ಇತ್ಯಾದಿಯಾಗಿ ಭಾಷಿಕ ಅಂಶಗಳನ್ನು ಅಲ್ಪ ಸ್ವಲ್ಪ ವ್ಯತ್ಯಾಸಗಳನ್ನು ಗುರುತಿಸಿರುವುದನ್ನು ನೋಡಬಹುದು. ಇದೇ ರೀತಿಯಾಗಿ ಸಾಂಸ್ಕೃತಿಕವಾಗಿ ಪ್ರಮುಖ ವ್ಯತ್ಯಾಸಗಳನ್ನು ಗಮನಿಸಲಾಗಿದೆ. ಇದಕ್ಕೆ ಪೂರಕವೆಂಬಂತೆ ಎಡ್ಗರ್ ಥರ್ಸ್ಟನ್‌ರು "ದಕ್ಷಿಣ ಭಾರತ ಜಾತಿ ಮತ್ತು ಬುಡಕಟ್ಟುಗಳು" ಕೃತಿಯಲ್ಲಿ ಈ ಪ್ರತ್ಯೇಕತೆಯನ್ನು ಕುರಿತಂತೆ The statistics of this year acdordingly show yerukula se[artely from korava, the report from the various districtete however give such discripant accounts of both caste, that the matter is clearly in need of further enquiry ಎಂದಿರುವುದನ್ನು ನೋಡಬಹುದು. ಈ ಮಾತು ಕೊರಚ, ಕೊರವ, ಕೊರಮರಲ್ಲಿರುವ ಸಂಸ್ಕೃತಿಯಲ್ಲಿನ ಭಿನ್ನತೆಯನ್ನು ಸ್ಪಷ್ಟಪಡಿಸುತ್ತದೆ.

ಚಂದ್ರಶೇಖರ ಕಂಬಾರ ಅವರ ಸಂಪಾದಕತ್ವದ ಕನ್ನಡ ಜಾನಪದ ವಿಶ್ವಕೋಶದಲ್ಲಿ 'ಕೊರವರು' ಎಂಬ ಶಿರೋನಾಮೆಯೊಡನೆ ಇರುವ ಲೇಖನವು ಕೊರವರ ಅಲೆಮಾರಿ ಬುಡಕಟ್ಟು ಜನ

ಸಮುದಾಯದವರು ಬೇರೆಬೇರೆ ಹೆಸರಿನಿಂದಲೂ ಕರೆಯುವುದನ್ನು ಉಲ್ಲೇಖಿಸಿದ್ದಾರೆ. ಆಂಧ್ರದಲ್ಲಿ ಯರುಕುಲು, ಯರಕಲ ಎಂದು ಕರೆಯುವ ಕೊರಚರು, ಕೊರಮರು, ಕೊರವರು ಬೇರೆಯಾದ ಭಾಷೆಯನ್ನೇ ಬಳಸುತ್ತಾರೆ. ಅದು ಅವರ ಸಾಂಸ್ಕೃತಿಕ ಭಿನ್ನತೆಗೆ ಅನುಗುಣವಾಗಿ ಇಲ್ಲಿ ಕೊರವ ಮತ್ತು ಕೊರಚರ ನಡುವಿರುವ ವ್ಯತ್ಯಾಸಗಳನ್ನು ತಿಳಿಸುತ್ತ ಪೂಜಿಸುವ ದೇವರು, ಮದುವೆ ಸಂಪ್ರದಾಯದಲ್ಲಿ ಕೊರವರು ಅರಿಸಿನದಾರ ಓಲಗವನ್ನು ಬಳಸಿದರೆ, ಕೊರಚರು ಕರಿಮಣಿಸರ ಕಟ್ಟುತ್ತಾರೆ. ಮತ್ತು ಮದುವೆಯಲ್ಲಿ ಓಲಗವನ್ನು ಬಳಸುವುದಿಲ್ಲ. ಇವರು ಬದಲಾಗಿ ಕಂಚಿನ ಗಂಗಳವನ್ನು ಮದುವೆಯ ಸಂದರ್ಭದಲ್ಲಿ ಬಾರಿಸುವುದು ಕಂಡುಬರುತ್ತದೆ. ಈ ಎರಡು ಪಂಗಡಗಳು ಅಲೆಮಾರಿಗಳಾಗಿ ಬುಟ್ಟಿ ಹೆಣೆಯುವ, ಭವಿಷ್ಯ ಹೇಳುವ ಮತ್ತು ಅಶುದ್ಧ ರೂಪದ ತಮಿಳು, ತೆಲುಗು ಮತ್ತು ಕನ್ನಡ ಮಿಶ್ರಿತ ಭಾಷೆಯನ್ನಾಡುವ ಒಂದೇ ಮೂಲವನ್ನು ಹೊಂದಿದ ಜನಸಮುದಾಯವಾಗಿದೆ ಎಂದು ಉಲ್ಲೇಖಿಸಿದ್ದಾರೆ. ಆದರೆ ಭವಿಷ್ಯ ಹೇಳುವ ಮತ್ತು ಓಲಗ ಊದುವ ಪದ್ದತಿಯು ಕೊರಚರಲ್ಲಿ ಕಂಡುಬರುವುದಿಲ್ಲ. ಮತ್ತು ಭಾಷೆಯ ವಿಚಾರವಾಗಿ ಅಶುದ್ಧವೆಂದು ಬಳಸಿದ್ದಾರೆ. ಈ ಭಾಷೆಯಲ್ಲಿ ಪೂರ್ವದ ತಮಿಳುನಾಡಿನ ಉಪಭಾಷೆಯಾಗಿದೆ. ಮತ್ತು ಇವರು ವಲಸೆಯಾಗಿ ಬಂದಂತೆ ಪ್ರಾದೇಶಿಕವಾಗಿ ಭಾಷೆಯನ್ನು ಬಳಸಿಕೊಂಡಿದ್ದಾರೆ. ಹಾಗಾಗಿ ಇವರ ಭಾಷೆಯಲ್ಲಿ ಪೂರ್ವ ಕನ್ನಡ, ತೆಲುಗು ಭಾಷಿಕಾಂಶಗಳು ಕಂಡುಬರುತ್ತವೆ. ಮತ್ತು ಕೊರಚರು ಬಳಸುವ ಭಾಷೆಗೂ ಕೊರಮ ಕೊರವ ಬಳಸುವ ಭಾಷೆಗೂ ಅಲ್ಪಸ್ವಲ್ಪ ವ್ಯತ್ಯಾಸಗಳು ಕಂಡುಬರುತ್ತದೆ.

ಲಕ್ಕಪ್ಪಗೌಡ ಹೆಚ್.ಜಿ. ಅವರ ಸಂಪಾದಕತ್ವದ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯಿಂದ ಕರ್ನಾಟಕದಲ್ಲಿ ನೆಲೆಸಿರುವ ಅಲೆಮಾರಿ ಅರೆಅಲೆಮಾರಿ ಬುಡಕಟ್ಟು ಸಮುದಾಯಗಳನ್ನು ಕುರಿತು ಒಂದು ಸಮಗ್ರವಾದ ಅಧ್ಯಯನಗಳನ್ನು ಕೈಗೊಳ್ಳಲಾಯಿತು. ಅದು "ಕರ್ನಾಟಕದ ಬುಡಕಟ್ಟುಗಳು" ಎಂದು ಎರಡು ಸಂಪುಟಗಳಲ್ಲಿ ಹೊರತಂದರು. ಇದರಲ್ಲಿ ಸಂಪುಟ ಎರಡರಲ್ಲಿ ಕರ್ನಾಟಕದ ಅರಣ್ಯವಾಸಿ ಬುಡಕಟ್ಟು ಸಮುದಾಯಗಳ ಸಾಂಸ್ಕೃತಿಕ ಆಚರಣೆ, ಪ್ರದರ್ಶನಕಲೆಗಳನ್ನು ಕುರಿತು ವಿವರಿಸಲಾಗಿದೆ. ಹಾಗೇ ಬುಡಕಟ್ಟುಗಳ ಬದುಕಿನ ಕ್ರಮ ಸಾಂಸ್ಕೃತಿಕ ಆಚರಣೆಗಳು ಅವರ ಆರ್ಥಿಕ ಸ್ಥಿತಿಗತಿ ವೃತ್ತಿಯ ಪಲ್ಲಟಗಳು ಕುರಿತಾಗಿ ಮತ್ತು ಭಾಷೆಯ ವಿಷಯವಾಗಿ ಸಂಬಂಧಿಸಿದಂತೆ ವಿವರಿಸುವ ಪ್ರಯತ್ನ ಮಾಡಲಾಗಿದೆ. ಮೇದರು, ಇರುಳರು, ಲಂಬಾಣಿ, ಕುರುಬ, ಹಕ್ಕಿಪಿಕ್ಕಿ, ದೊಂಬರು, ಹಾಗೂ ಕೊರವ, ಕೊರಚರು ಎಂಬ ಅಲೆಮಾರಿ, ಅರೆಅಲೆಮಾರಿ ಬುಡಕಟ್ಟು ಸಮುದಾಯಗಳ ಬಗೆಗೆ ಕುಲಕಸುಬುಗಳು, ಸಾಮಾಜಿಕ ಜೀವನ ಪದ್ಧತಿಯ ಬಗೆಗೆ ವಿವರಿಸಲಾಗಿದೆ. ಈ ಹಿನ್ನೆಲೆಯಲ್ಲಿ ಕೊರಮರ ಮೂಲಕ್ಕೆ ಸಂಬಂಧಿಸಿದಂತೆ ಒಂದು ಲೇಖನದಲ್ಲಿ ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ಇವರು ಗುಡ್ಡಗಾಡು ಪ್ರದೇಶಗಳಲ್ಲಿ ದೊರೆಯುವ ಬಿದಿರು, ಈಚಲುಗರಿಗಳಿಂದ ಪುಟ್ಟಿ ಮಂಕರಿ, ಕಸಬರಿಗೆ ಮಾಡುವ ಮತ್ತು ವಲಸೆಯಾಗಿ ನಾಡಿನಡೆಗೆ ಬರುವಾಗ ಕತ್ತಳೆ ನಾರಿನ ಹಗ್ಗ ತಯಾರಿಕೆ ಮಾಡಿರುವುದನ್ನು ವಿವರಿಸಲಾಗಿದೆ. (ಈ ಕತ್ತಳೆ ಹಗ್ಗವನ್ನು ಮಾಡುವುದು ನಾವು ಕೊರಚರಲ್ಲಿ ಮಾತ್ರ ನೋಡಲು ಸಾಧ್ಯ) ಮತ್ತು ಅವರ

ಕೌಟುಂಬಿಕ ಭಾಷೆಯಲ್ಲಿ ಕನ್ನಡ, ತಮಿಳು, ತೆಲುಗು ಭಾಷಿಕಾಂಶಗಳು ದೊರೆಯುವುದನ್ನು ನೋಡಬಹುದು.

ಹಾಗೆಯೇ ಕೊರಚ, ಕೊರಮ, ಕೊರವ, ಕುಂಚಿಕೊರಮರೆಂದು ಕರ್ನಾಟಕದಾದ್ಯಂತ ವಿವಿಧ ಹೆಸರುಗಳೊಂದಿಗೆ ಕಂಡುಬರುವ ಇವರ ಭಾಷಿಕ ದೃಷ್ಟಿಯಿಂದ ಒಂದೇ ಮೂಲಕ್ಕೆ ಸೇರಿದವರು ಆದರೆ ಇವರ ಕೆಲವು ಸಾಂಸ್ಕೃತಿಕತೆಗೆ ಬಂದರೆ ಅಲ್ಪ ಸ್ವಲ್ಪ ಭಿನ್ನತೆಗಳು ಕಂಡುಬರುತ್ತದೆ. ಹಾಗೇ ಇವರು ಕರ್ನಾಟಕ ಪರಿಸರಕ್ಕೆ ತಕ್ಕಂತೆ ಕೌಟುಂಬಿಕ ವಲಯದಲ್ಲಿ ಇವರು ತಮಿಳು, ತೆಲುಗು, ಕನ್ನಡ ಇತರೆ ದ್ರಾವಿಡ ಪರಿಸರದ ಭಾಷಿಕಾಂಶಗಳಿಂದ ಕೂಡಿದ ಕುಳುವ ಭಾಷೆಯನ್ನು ಮಾತಾಡಿದರೆ ವ್ಯವಹಾರ ಸಂದರ್ಭದಲ್ಲಿ ಕನ್ನಡವನ್ನೇ ಬಳಸುತ್ತಾರೆಂದು ವಿವರಿಸಿದ್ದಾರೆ.

ಮಾನಸ ಅವರು 'ಕೊರವರ ಸಂಸ್ಕೃತಿ' ಎಂಬ ಶೀರ್ಷಿಕೆ ಅಡಿಯಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ಅರ್ಪಿಸಿದ ಅಧ್ಯಯನ ಮಾಲೆಯಾಗಿದೆ. ಇದರಲ್ಲಿ ಒಟ್ಟು ಎಂಟು ಅಧ್ಯಾಯಗಳನ್ನು ಮಾಡಿಕೊಂಡು ಸಮುದಾಯದ ಹಿನ್ನೆಲೆ, ಜೀವನ ವಿಧಾನ, ಸಾಮಾಜಿಕ ವ್ಯವಸ್ಥೆ, ಆಚರಣೆ ಕಲೆ, ಧಾರ್ಮಿಕ ಆಚರಣೆಗಳು, ಕೌಟುಂಬಿಕ ವ್ಯವಸ್ಥೆಯ ಜೊತೆ ಭಾಷೆ ಸಾಹಿತ್ಯ ಮತ್ತು ಕ್ರೀಡೆ ಹೀಗೆ ಕೆಲವು ವಿಷಯಗಳ ಕುರಿತಾಗಿ ವಿವರಗಳನ್ನು ನೀಡಲಾಗಿದೆ. ಪುಸ್ತಕದ ಎಲ್ಲೆಡೆ ಕೊರವ, ಕೊರಚ, ಕೊರಮ, ಕುಂಚಿ ಕೊರಮರು ಆಡುವ ಭಾಷೆಯು ಒಂದೇ ಮೂಲ ಬುಡಕಟ್ಟಿನ ಭಾಷೆಯನ್ನು ಅನುಸರಿಸಿದ ಪಂಗಡಗಳಾಗಿವೆ. ಜೊತೆಗೆ ಈ ಪಂಗಡಗಳ ಸಂಸ್ಕೃತಿ ಆಚರಣೆಗಳು ಒಂದೇ ಎಂದು ತಿಳಿಸಲಾಗಿದೆ. ಆದರೆ ಇಲ್ಲಿ ಸಮುದಾಯದಲ್ಲಿ ಪಂಗಡಗಳು ಬಳಸುವಂತಹ ಭಾಷೆಯಲ್ಲಿ ಸಾಮ್ಯತೆಯನ್ನು ಕಂಡರೂ ಸಾಂಸ್ಕೃತಿಕ ಆಚರಣೆಗಳಲ್ಲಿ ಕೆಲವಾರು ಭಿನ್ನತೆಗಳನ್ನು ಗಮನಿಸಿಲ್ಲವಾಗಿದೆ ಎಂಬುದನ್ನು ಪ್ರಮುಖವಾಗಿ ಗಮನಿಸಿಕೊಳ್ಳಲಾಗಿದೆ.

ಅಂಗಡಿ ಎಸ್.ಎಸ್. ಅವರು 'ಕರ್ನಾಟಕ ಬುಡಕಟ್ಟು ಭಾಷೆ' ಕೃತಿಯಲ್ಲಿ ಮಾನವಶಾಸ್ತ್ರ ಮೂಲ ತತ್ವಗಳಿಗೆ ಒತ್ತುಕೊಡಲಾಗಿ ಭಾಷಾ ಮಾನವಶಾಸ್ತ್ರ ಅರ್ಥ, ಸ್ವರೂಪ, ಭಾಷೆ, ಜನಾಂಗ, ಬಂಧುತ್ವ ಮತ್ತು ಭಾಷಾ ಬಳಕೆಯ ಸಾಮಾಜಿಕ ಸ್ತರವಿನ್ಯಾಸ, ಆದಿವಾಸಿಗಳ ವಾಸಸ್ಥಾನ, ಅವರ ಸಮಾಜ ಮತ್ತು ಸಂಸ್ಕೃತಿಯಲ್ಲಿ ಭಾಷೆಯ ಬಳಕೆಗೆ ಸಂಬಂಧಿಸಿದಂತೆ ವಿವರಣೆ ನೀಡಲಾಗಿದೆ. ಹಾಗೆಯೇ ಬುಡಕಟ್ಟು ಸಮುದಾಯಗಳ ಭಾಷಾ ಅಭಿವೃದ್ಧಿಗೆ ರೂಪಿಸಬೇಕಾದ ಭಾಷಾ ಯೋಜನೆ ಭಾಷಾ ನೀತಿ ಹಾಗೂ ಕಲಿಕಾ ಪ್ರಕ್ರಿಯೆ ಮುಂತಾದ ವಿಷಯಗಳನ್ನು ಕುರಿತು ಚರ್ಚಿಸುತ್ತ, ಕ್ಷೇತ್ರದ ಅಧ್ಯಯನದ ತಾತ್ವಿಕ ಹಿನ್ನೆಲೆಯನ್ನು ರೂಪಿಸಿಕೊಂಡು ಕಾಡುಕುರುಬರು, ಕಾಡುಗೊಲ್ಲರು, ಮ್ಯಾಸಬೇಡರು, ಹಾಲಕ್ಕಿಗಳು ಮುಂತಾದ ಬುಡಕಟ್ಟು ಸಮುದಾಯಗಳ ಬಗೆಗೆ ಭಾಷೆಯ ಸಾಮಾಜಿಕ ಆಯಾಮಗಳನ್ನು ವಿವರಣಾತ್ಮಕವಾಗಿ ಚರ್ಚಿಸಲಾಗಿದೆ. ಮತ್ತು ಬುಡಕಟ್ಟು ಸಂಸ್ಕೃತಿಯನ್ನು ಅರಿಯುವಲ್ಲಿ ಆಯಾ ಸಮುದಾಯಗಳ ಭಾಷೆಯು ಅತ್ಯಂತ ಪ್ರಾಮುಖ್ಯತೆಯನ್ನು ಪಡೆಯುತ್ತೆಂಬುದನ್ನು ವಿವರಿಸಲಾಗಿದೆ.

ಮೇತ್ರಿ ಕೆ.ಎಂ. ಅವರು ಕನ್ನಡ ಭಾಷಾಭಿವೃದ್ಧಿ ಯೋಜನೆ ಅಡಿಯಲ್ಲಿ ಅಲೆಮಾರಿ ಬುಡಕಟ್ಟು ಸಮುದಾಯಗಳ ಭಾಷೆಯ ಕುರಿತಾಗಿ ಕರ್ನಾಟಕ ಅಲೆಮಾರಿ ಬುಡಕಟ್ಟುಗಳ ಭಾಷೆಯ ಹಿನ್ನೆಲೆಯಲ್ಲಿ ಬುಡಕಟ್ಟು ಸಂಸ್ಕೃತಿಯ ಬಗೆಗೆ ಬುಡಕಟ್ಟುಗಳು ಬಳಸುವ ಮರಗು ಪದಗಳ ಸಂಪಾದನೆಯ ಹಿತದೃಷ್ಟಿಯಿಂದ ಅಲೆಮಾರಿ ಬುಡಕಟ್ಟುಗಳ ಮರಗು ಭಾಷೆ ಕೃತಿಯು ತುಂಬಾ ಪ್ರಮುಖ ಪಾತ್ರವಹಿಸುತ್ತದೆ. ಈ ಕೃತಿಯಲ್ಲಿ ದ್ರಾವಿಡ ಮತ್ತು ದ್ರಾವಿಡೇತರ ಮರಗು ಭಾಷಿಕ ಅಲೆಮಾರಿಗಳಾಗಿ ವಿಂಗಡಿಸಿಕೊಂಡು ಅಧ್ಯಯನ ನಡೆಸಲಾಗಿದೆ. ಈ ಕೃತಿಯಲ್ಲಿ 'ಕೊರಮರು' ಕೊರವ ಕುಂಚಿಕೊರವರೆಂದು ವಿವಿಧ ಪಂಗಡಗಳಾಗಿರುವುದನ್ನು, ಭಾಷೆ ಮತ್ತು ಜೀವನಶೈಲಿಯನ್ನು ಗಮನಿಸಿ ಇವರು ತಮಿಳುನಾಡಿನಿಂದ ವಲಸೆಯಾಗಿ ಆಂಧ್ರದ ಮುಖಾಂತರ ಕರ್ನಾಟಕಕ್ಕೆ ಬಂದಿರುವುದನ್ನು ಗುರುತಿಸಿದ್ದಾರೆ.

ಭಾಷೆಯ ಕುರಿತಾಗಿ ವೃತ್ತಿಯನುಗುಣವಾಗಿ ಕಾಲಾಂತರದಲ್ಲಿ ಹಲವು ಪಂಗಡಗಳಾಗಿ ವಿಂಗಡನೆಯಾದ ಕೊರವ, ಕೊರಮ, ಕೊರಚರುಗಳ ಭಾಷಿಕವಾಗಿ ಅಷ್ಟಾಗಿ ಭಿನ್ನತೆಗಳು ಕಂಡುಬರುವುದಿಲ್ಲವೆಂದು ಹೇಳಲಾಗಿದೆ. ಸಾಮಾನ್ಯವಾಗಿ ಅಲೆಮಾರಿ ಸಮುದಾಯಗಳ ಭಾಷೆಗಳು ಲಿಪಿರಹಿತವಾದವುಗಳು. ಹೀಗಾಗಿ ಇವರಾಡುವ ಭಾಷೆಯು ತಮಿಳು, ತೆಲುಗು, ಕನ್ನಡ ಪದಗಳಿಂದ ಸಮ್ಮಿಳಿತಗೊಂಡು ಬಳಕೆಗೊಂಡರು, ಇವರು ಭಾಷೆಯಲ್ಲಿ ತಮಿಳು ಭಾಷಿಕಾಂಶಗಳು ಹೆಚ್ಚಾಗಿ ಕಂಡುಬರುತ್ತವೆ. ಉದಾ.

ಅರಸಿ – ಎರಸಿ – ಅಕ್ಕಿ

ವಿಳಕ್ಕು – ವಳಕು – ದೀಪ

ತಣ್ಣಿ – ತನ್ನಿ – ನೀರು

ತುನಿಯಾ – ತುಣಿವಾನ – ಬಟ್ಟೆ

ವೀಡು – ಮಾಡು – ಮನೆ

ಇತ್ಯಾದಿಯಾಗಿ ನೋಡಬಹುದಾಗಿದೆ. ಆದರೆ ಇಲ್ಲಿ ಮುಖ್ಯವಾಗಿ ಕೊರಚರು ಇತರೆ ಪಂಗಡಗಳು ಒಂದೇ ಎಂದು ಹೇಳಿದರು ಅನೇಕ ಸಾಂಸ್ಕೃತಿಕ ಅಂಶಗಳು, ಭಾಷಿಕಾಂಶಗಳು ಸಹ ಕಂಡುಬರುತ್ತವೆ.

ಮಲ್ಲಪುರ ಬಿ.ವಿ. ಅವರು ಕೊರವರು–ಕೊರವಂಜಿ ಎಂಬ ಲೇಖನದಲ್ಲಿ ಪುರಾಣ ಪ್ರಸಿದ್ಧವಾದ ಕೊರವಂಜಿಯ ಜನಪ್ರಿಯತೆಯನ್ನು ವಿವರಿಸುವುದರೊಂದಿಗೆ ಸಮುದಾಯದ ಬುಡಕಟ್ಟು ಬದುಕಿನ ಬಗೆಗೆ ಅವರ ಇತಿಹಾಸ, ಆಚಾರ, ವಿಚಾರ, ಸಂಪ್ರದಾಯ, ಕಟ್ಟುಪಾಡು ಮತ್ತು ಜೀವನ ವಿಧಾನಗಳನ್ನು ಪರಿಚಯಿಸುವ ಪ್ರಯತ್ನ ಮಾಡಿದ್ದಾರೆ. ನಂಬಿಕೆ, ಕಲೆ, ಸಾಹಿತ್ಯಕ್ಕೆ ಸಂಬಂಧಿಸಿದ ವಿಷಯಗಳು ಗೌಣವಾಗಿರುವುದನ್ನು ಗುರುತಿಸಿದ್ದಾರೆ. ಹಾಗೆಯೇ ತಮಿಳಿನ ಶಿಲಪ್ಪದಿಗಾರಮ್‌ನಷ್ಟು ಪ್ರಾಚೀನ ಕಾವ್ಯದಲ್ಲಿಯೇ ಕೊರವಂಜಿಯ ಅಲಂಕಾರದ ಬಗೆಗೆ ವಿವರವಿರುವುದು ಮತ್ತು ೧೧ನೇ

ಶತಮಾನದ ಕರ್ಣಪಾರ್ಯನ ನೇಮಿನಾಥ ಪುರಾಣಂನಲ್ಲಿಯು ಕೊರವಂಜಿ ವೇಷದ ಬಗ್ಗೆ ದಾಖಲೆಗಳು ದೊರೆಯುವುದರ ಬಗ್ಗೆ ನೋಡಲಾಗಿದೆ. ಹಾಗೆಯೇ ಜನಪದರಲ್ಲಿಯೂ ಕೊರವಂಜಿಯ ಉಡುಗೆ-ತೊಡುಗೆಗಳ ಬಗೆಗೆ ವಿವರಗಳನ್ನು ಇಲ್ಲಿ ಗುರುತಿಸಲಾಗಿದೆ.

ರಾಮಯ್ಯ ಬಿ.ಪಿ. ಅವರು 'ದಕ್ಷಿಣ ಕರ್ನಾಟಕದ ಕೊರಮರು ಒಂದು ಸಾಂಸ್ಕೃತಿಕ ಅಧ್ಯಯನ' ಎಂಬ ಕೃತಿಯನ್ನು ೨೦೦೨ರಲ್ಲಿ ಪ್ರಕಟಿಸಿದ್ದಾರೆ. ಇದರಲ್ಲಿ ಕೊರಮರು-ಕೊರಚರಲ್ಲ ಕುಳುವರೆಂಬ ಒಂದೇ ಮೂಲದವರು ಎಂದು ಅಧ್ಯಯನವನ್ನು ನಡೆಸಿ, ಪ್ರಾಚೀನ ಕಾಲದಿಂದಲೂ ತಮ್ಮದೇ ಕಟ್ಟುಪಾಡುಗಳಲ್ಲಿ ಬದುಕು ಸಾಗಿಸುತ್ತ ಬಂದ ಕೊರಮರ ಸಾಂಸ್ಕೃತಿಕ ರೂಪವನ್ನು ಹುಡುಕುವ ಮತ್ತು ಬುಡಕಟ್ಟು ಸಾಂಸ್ಕೃತಿಕತೆಯನ್ನು ಹುಡುಕುವ ಪ್ರಯತ್ನ ಮಾಡಲಾಗಿದೆ. ಅಧ್ಯಾಯ ಆರರಲ್ಲಿ ಪ್ರಮುಖವಾಗಿ ಕೊರಮ ಭಾಷೆಯ ಬಗ್ಗೆ ಹೇಳುತ್ತ ಇವರಾಡುವ ಭಾಷೆ 'ಕುಳುವ' ಭಾಷೆಯೆಂದು ಇದು ತಮಿಳಿನ ಉಪಭಾಷೆಯೆಂದು ತಿಳಿಸಲಾಗಿದೆ. ಈ ಭಾಷೆಯನ್ನು ಇತರೆ ಪಂಗಡಗಳಾದ ಕೊರಚ, ಕೊರವ, ಕುಂಚಿಕೊರಮಗಳು ಮಾತಾಡುತ್ತಾರೆಂದು ಹೇಳಿದ್ದಾರೆ. ಅಲ್ಲದೆ ಇವರ ಸಾಂಸ್ಕೃತಿಕ ಬದುಕು, ವೃತ್ತಿ, ಸಾಹಿತ್ಯ ಮತ್ತು ಪ್ರದರ್ಶನ ಕಲೆಗಳು ಮತ್ತು ವಿಮುಕ್ತಿ ಬುಡಕಟ್ಟುಗಳ ಸಮಸ್ಯೆ-ಸಂಘಟನೆ ಪರಿಹಾರಗಳ ಕುರಿತಾಗಿಯೂ ಚರ್ಚಿಸಿರುವುದನ್ನು ಕೃತಿಯಲ್ಲಿ ಗಮನಿಸಲಾಗಿದೆ.

ಸ್ವಾಮಿ ಎಚ್.ಆರ್. ಅವರು 'ಕೊರಚ ಜನಾಂಗ ಒಂದು ಅಧ್ಯಯನ' ಎಂಬ ಕೃತಿಯಲ್ಲಿ ಐದು ಅಧ್ಯಾಯಗಳನ್ನಾಗಿ ಮಾಡಿಕೊಂಡು ಕೊರಚ ಜನಾಂಗದ ಮೂಲ ಹಿನ್ನೆಲೆಯನುಸಾರವಾಗಿ ಪ್ರವೇಶಿಕೆಯೆನ್ನುವಂತೆ, ಜೀವನ ವಿಧಾನ, ಸಾಮಾಜಿಕ ಆಯಾಮಗಳ ಬಗೆಗೆ ಸಾಂಸ್ಕೃತಿಕ ವಿಚಾರಗಳನ್ನು ಮತ್ತು ಅವರ ಸ್ಥಿತಿಗತಿಗಳನ್ನು ಕುರಿತಾಗಿ ವಿವರಿಸಿದ್ದಾರೆ. ಕೊರಚರ ಭಾಷೆ ಮತ್ತು ಅವರ ಸಾಹಿತ್ಯದ ಬಗೆಗೆ, ಆಧುನಿಕ ಸ್ಥಿತ್ಯಂತರಗಳು ಬದುಕಿನ ಸಂದರ್ಭದ ಏಕಕಾಲದಲ್ಲಿ ವರವಾಗಿಯೂ, ಶಾಪವಾಗಿಯೂ ಪರಿಣಮಿಸಿರುವುದು ಕೊರಚ ಜನಾಂಗದ ಮೇಲೆ ಬೀರಿದ ಕರಿನೆರಳಿನ ಬಗೆಗೆ ಕುರಿತು ಚರ್ಚಿಸಿರುವುದು ಮತ್ತು ಈ ಆಧುನಿಕ ನಾಗರಿಕತೆಯೊಳಗೆ ಬುಡಕಟ್ಟುಗಳು ತಮ್ಮ ಬದುಕನ್ನು ಉಳಿಸಿಕೊಳ್ಳಬೇಕಾದ ಅನಿವಾರ್ಯತೆಯೇನು? ಅವುಗಳ ಘನತೆಯಿಂದ ಬದುಕಲು ಸೂಕ್ತ ನೆಲೆಯಾವುದು, ಈ ಹಿನ್ನೆಲೆಯಲ್ಲಿ ಕೊರಚ ಜನಾಂಗದ ಸಾಂಸ್ಕೃತಿಕತೆಯನ್ನು ಪ್ರಶ್ನಿಸಿಕೊಂಡು ಸಂಶೋಧನೆಯನ್ನು ಕೈಗೊಂಡ ಕೃತಿಯಾಗಿದೆ.

ಜಯಪ್ಪ ಕೆ.ವಿ. ಅವರು 'ಕೊರಚ ಭಾಷೆ: ವರ್ಣನಾತ್ಮಕ, ತೌಲನಿಕ ಅಧ್ಯಯನ' ಎಂಬ ಕೃತಿಯಲ್ಲಿ ಕೊರಚರ ಭಾಷೆಯನ್ನು ಕೇಂದ್ರವಾಗಿಟ್ಟುಕೊಂಡು ಒಟ್ಟು ೧೫ ಅಧ್ಯಾಯಗಳಲ್ಲಿ ಕೊರಚರ ಸಂಸ್ಕೃತಿ, ಐತಿಹ್ಯಗಳು ಪದನಿಷ್ಪತ್ತಿ, ಕುಲಗೋತ್ರ ಮತ್ತು ಭೌಗೋಳಿಕ ಹಿನ್ನೆಲೆ ಜನಸಂಖ್ಯೆಗಳ ಕುರಿತಾಗಿ ವಿವರಣೆಯನ್ನು ನೀಡಿದ್ದಾರೆ. ಹಾಗೆಯೇ ಭಾಷಿಕವಾಗಿ ವರ್ಣನಾತ್ಮಕ ವ್ಯಾಕರಣಾಂಶಗಳ ಬಗೆಗೆ ಕೊರಚರ (ಕುಳುವ) ಭಾಷೆಯನ್ನು ಅಳವಡಿಸಿ ಭಾಷೆಯ ರಚನೆಯ ವಿವರಣೆಯನ್ನು ಮಾಡಿದ್ದಾರೆ. ಈ ಬಗೆಯ ವಿವರಣೆಯನ್ನು ನೀಡುವಲ್ಲಿ ಸಾಂಸ್ಕೃತಿಕ, ವೃತ್ತಿಯಾಧಾರಿತ ಭಾಷಿಕಾಂಶಗಳನ್ನು ಗಮನಿಸಲಾಗಿದೆ. ಇಲ್ಲಿ ಬಹುಮುಖ್ಯವಾಗಿ ಲಿಪಿ ರೂಪಿಸಿಕೊಂಡ ಭಾಷೆಗಳ

ಕಾಲ-ಕಾಲದ ಬೆಳವಣಿಗೆ ಬದಲಾವಣೆಯನ್ನು ಆಯಾ ಭಾಷೆ ಮತ್ತು ಸಾಹಿತ್ಯದ ಹಿನ್ನೆಲೆಯಲ್ಲಿ ಅರಿಯಬಹುದು. ಆದರೆ ಲಿಪಿಯೇ ಇಲ್ಲದ ಭಾಷೆ ಬಗ್ಗೆ ಬದಲಾವಣೆ ಇತಿಹಾಸ ಅರಿಯುವುದು ಕಷ್ಟಸಾಧ್ಯ. ಈ ದಿಸೆಯಲ್ಲಿ ಕೊರಚ ಭಾಷೆಯನ್ನು ಕನ್ನಡದೊಂದಿಗೆ ಸಮೀಕರಿಸಿ ಸಮುದಾಯದ ಭಾಷಿಕಾಂಶಗಳನ್ನು ಹಿಡಿದಿಡುವ ಭಾಷಿಕ ರಚನಾ ಕೌಶಲ್ಯ, ಬಳಕೆಯ ಬಗೆಗೆ ಹೇಳುತ್ತ ಕೊರಚರ ಭಾಷಿಕತೆಯ ಪ್ರಾಮುಖ್ಯತೆಯನ್ನು ವಿವರಿಸಿದ್ದಾರೆ. ಇಲ್ಲಿ ಇತರ ಪಂಗಡಗಳಾದ ಕೊರವ, ಕೊರಮ, ಕೊರಮಶೆಟ್ಟಿಗಳಿಗಿಂತ ಭಾಷಿಕಾಂಶಗಳು ಭಿನ್ನವಾಗಿವೆ ಎಂಬುದನ್ನು ಸ್ಪಷ್ಟೀಕರಿಸುತ್ತಾರೆ. ಹಾಗೂ ಪ್ರಮುಖವಾಗಿ ಕೊರಚ ಭಾಷೆಯ ಧ್ವನಿಗಳು, ಧ್ವನಿಮಾಗಳು, ಧ್ವನಿಮಾ ಪ್ರಕ್ರಿಯೆಗಳು, ಆಕೃತಿಮಾ ವಿಚಾರಗಳು, ವಾಕ್ಯಗಳು, ಸ್ಪಷ್ಟೀಕರಣಗಳು ಕುರಿತಾಗಿ ವಿವರಣಾತ್ಮಕ ಅಧ್ಯಯನವನ್ನು ಕೈಗೊಂಡಿದ್ದು, ಇತರೆ ದ್ರಾವಿಡ ಪರಿವಾರದ ಭಾಷೆಗಳೊಂದಿಗೆ ಕೊರಚರ ಭಾಷೆಯನ್ನು ತೌಲನಿಕ ಅಧ್ಯಯನಕ್ಕೆ ಒಳಪಡಿಸಿ ಅಧ್ಯಯನವನ್ನು ಮಾಡಿದ್ದಾರೆ. ಈ ಮಾದರಿಯಲ್ಲಿನವು ಅತ್ಯಂತ ಉಪಯುಕ್ತ ಅಧ್ಯಯನ ಮಾದರಿಯಾಗಿದೆ.

ಸಂಗಮೇಶ ಸವದತ್ತಿಮಠರವರು ಕೊರಚರು, ಕೊರವರು ಮತ್ತು ಕುಂಚಿಕೊರವರ ನಡುವೆ ಸಾಕಷ್ಟು ಸಾಂಸ್ಕೃತಿಕ ಮತ್ತು ಭಾಷಿಕ ಭಿನ್ನತೆ ಇರುವುದು ಸ್ಪಷ್ಟವಾಗಿದೆ. ಜೊತೆಗೆ ಕೊರಚ ಭಾಷೆಯ ರಚನಾ ವೈಲಕ್ಷಣಗಳು ಬ್ರಾಹ್ಮಣ ಮಾಲ್ತೋ ಎಂಬ ಉತ್ತರ ದ್ರಾವಿಡ ಭಾಷೆಗಳ ವೈಲಕ್ಷಣಗಳನ್ನು ಹೋಲುತ್ತವೆಯಾದರೂ ದಕ್ಷಿಣ ದ್ರಾವಿಡ ಭಾಷೆಗಳಾದ ತಮಿಳಿನ ಹಲವಾರು ಪದಗಳು ಕೊರಚರ ಭಾಷೆಯಲ್ಲಿ ಕಂಡುಬರುತ್ತವೆ. ಈ ಹಿನ್ನೆಲೆಯಲ್ಲಿ ಕೊರಚ ಭಾಷೆ ಒಂದು ವೈಶಿಷ್ಟ್ಯಪೂರ್ಣವಾದ ದ್ರಾವಿಡ ಭಾಷೆಯಾಗಿದ್ದು, ಈ ಭಾಷೆಯ ಭಾಷಿಕ ಜನ ಉತ್ತರ ಭಾರತದಿಂದ ವಲಸೆ ಬಂದಿರುವ ಸಾಧ್ಯತೆಯಿದೆ. ಸಂಗಮೇಶ ಸವದತ್ತಿಮಠ, ೨೦೦೧, Study reoprt of the short term research project (ಅಪ್ರಕಟಿತ) ಎಂದು ಕೊರಚರನ್ನು ಕುರಿತು ಇತ್ತೀಚಿಗೆ ಸಂಶೋಧನೆ ಮಾಡಿ ತಮ್ಮದೇ ಆದ ಅಭಿಪ್ರಾಯವನ್ನು ನೀಡಿದ್ದಾರೆ.

ಭಜಂತ್ರಿ ಎಂ.ವೈ. ಅವರು The study of korama speach spoken at mundargi taluk and Influence of other languages an it ಎಂಬ ಪಿಎಚ್.ಡಿ. ಪ್ರಬಂಧದಲ್ಲಿ (ಅಪ್ರಕಟಿತ) ಕೊರಚರ ಸಮುದಾಯದ ಪಂಗಡವಾದ ಕೊರಮ ಎಂಬುದನ್ನು ಶೀರ್ಷಿಕೆಯನ್ನಾಗಿ ಮಾಡಿಕೊಂಡು ಸಮುದಾಯದ ಮೂಲ ಧಾರ್ಮಿಕತೆ, ಭೌಗೋಳಿಕತೆ, ಶಿಕ್ಷಣ, ಹವಮಾನ, ಆಚರಣೆಗಳು, ಆಹಾರ ಪದ್ಧತಿಗಳನ್ನು ಭಾಷೆಯಲ್ಲಿನ ಧ್ವನಿ, ಧ್ವನಿಮಾ, ಆಕೃತಿಗಳ ಕುರಿತಾಗಿ ಪದ ಮತ್ತು ಪದಗಳ ಸಂಗ್ರಹಣೆ, ವಾಕ್ಯಗಳ ಬಗೆಗೆ ವಿವರಿಸುತ್ತ, ಒಂದು ಲಿಪಿರಹಿತ ಭಾಷೆಯನ್ನು ಕನ್ನಡದ ಪರಿಸರದೊಂದಿಗೆ ಸಮೀಕರಿಸಿಕೊಂಡು ಕೊರಮರ ಭಾಷೆಯನ್ನು ಕುರಿತು ಅಧ್ಯಯನ ಮಾಡಿದ್ದಾರೆ. ಹಾಗೆಯೇ ಮಲ್ಲಿಕಾರ್ಜುನ ಬಿ. ಮಾನ್ಪಡೆ ಅವರು ಅಲೆಮಾರಿ ಸಮುದಾಯಗಳ ಅಧ್ಯಯನ ಮಾಲೆ ಅಡಿಯಲ್ಲಿ 'ಕೊರಮ' ಎಂಬ ಕೃತಿಯೊಂದರಲ್ಲಿ ಕೊರಮರ ಮೂಲ ಜೀವನ ಪದ್ಧತಿಗಳು, ಆಚರಣೆಗಳು, ಚರ್ಚಿಸುತ್ತ ಪ್ರಮುಖವಾಗಿ ಕೊರಮರ ಆರ್ಥಿಕ ಜೀವನದ ಕುರಿತು ಚರ್ಚಿಸುತ್ತ ಸಾಹಿತ್ಯ ಮತ್ತು

ಭಾಷೆಯ ಕುರಿತಾಗಿಯೂ ಅಧ್ಯಯನವನ್ನು ಕೈಗೊಂಡಿದ್ದಾರೆ. ಅದು ವಿಮುಕ್ತಿ ಬುಡಕಟ್ಟುಗಳ ಸಮಸ್ಯೆ, ಸಂಘಟನೆ ಪರಿಹಾರಗಳ ಹಿನ್ನೆಲೆಯಲ್ಲಿ ಅಧ್ಯಯನ ಅತ್ಯಂತ ಗಮನಾರ್ಹವಾಗಿದೆ.

ರಾಧಮ್ಮ ಅವರು 'ಕೊರವರ ಸಮುದಾಯದ ಮಹಿಳೆ' ಎಂಬ ಮಹಾಪ್ರಬಂಧದಲ್ಲಿ (ಅಪ್ರಕಟಿತ) ಮಹಿಳೆಯರನ್ನು ಕೇಂದ್ರವಾಗಿಟ್ಟುಕೊಂಡು ಸಿದ್ಧಪಡಿಸಿದ ಪ್ರಬಂಧವಾಗಿದೆ. ಕೊರವರ ಸಮುದಾಯದಲ್ಲಿ ಮಹಿಳೆಯರ ಸ್ಥಾನಮಾನ, ಸಂಸ್ಕೃತಿ, ಧರ್ಮಗಳಲ್ಲಿ ಮತ್ತು ಸಮುದಾಯದ ಜೀವನವರ್ತನ, ಆಚರಣೆ ಮತ್ತು ಪ್ರಮುಖವಾಗಿ ಆರ್ಥಿಕ ಚಟುವಟಿಕೆಗಳ ನಿರ್ವಹಣೆಯಲ್ಲಿ ಮತ್ತು ಉತ್ಪಾದನಾ ವ್ಯವಸ್ಥೆಯಲ್ಲಿ ಮಹಿಳೆಯ (ಕೊರವರ)ರ ಸ್ಥಾನಮಾನದ ಕುರಿತಾಗಿ ವಿವರಿಸಿದ್ದಾರೆ. ಸಮುದಾಯದ ಭಾಷೆಯ ಬಳಕೆಯಲ್ಲಿ ಮಹಿಳೆಯರ ಸ್ಥಾನಮಾನ ಪ್ರಮುಖವೆನಿಸುತ್ತದೆ. ಹಾಗೂ ಪದಕೋಶದ ಬಗೆಗೆ ಮಾಹಿತಿಯನ್ನು ನೀಡಿದ್ದಾರೆ.

ಶ್ರೀನಿವಾಸ ಎನ್. ಅವರು 'ಮೇದರು ಮತ್ತು ಕೊರಚರು ವೃತ್ತಿ ಪದಕೋಶ' ಎಂಬುದಾಗಿ ಚಿತ್ರದುರ್ಗ ಪರಿಸರವನ್ನು ಅನುಲಕ್ಷಿಸಿಕೊಂಡು ಎಂ.ಫಿಲ್. ಪ್ರಬಂಧ (ಅಪ್ರಕಟಿತ)ವನ್ನು ಸಿದ್ಧಪಡಿಸಿದ್ದಾರೆ. ಇಲ್ಲಿ ಮೇದರು ಮತ್ತು ಕೊರಚರುಗಳಿಗೆ ಸಂಬಂಧಿಸಿದಂತೆ ಪದನಿಷ್ಪತ್ತಿಯು, ಸಾಮಾಜಿಕ ಹಿನ್ನೆಲೆಯ, ವೃತ್ತಿಯ ಬಗೆಗೆ ಮತ್ತು ಸಾಮಾಜಿಕ ಸ್ಥಿತಿಗತಿಗಳ ಕುರಿತು ಚರ್ಚಿಸಲಾಗಿದೆ. ಹಾಗೂ ಕೊರಚ ಸಮುದಾಯದ ವೃತ್ತಿಪದಕೋಶದ ಹಿನ್ನೆಲೆ ಮತ್ತು ಇತಿಹಾಸ ನಿಘಂಟು, ಪದಕೋಶಕ್ಕಿರುವ ವ್ಯತ್ಯಾಸ ಮತ್ತು ಅದರ ಬೆಳವಣಿಗೆಗೆ ಕುರಿತಾಗಿಯೂ ಚರ್ಚಿಸಲಾಗಿದೆ. ಹಾಗೆಯೇ ವೃತ್ತಿ ಪದಕೋಶದ ಪಟ್ಟಿಯನ್ನು ನೀಡಲಾಗಿದೆ. ಹಾಗೆಯೇ ರಾಜಣ್ಣ ಡಿ. ಅವರು 'ಕೊರಚ ಸಮುದಾಯ: ಸಮಾಜಶಾಸ್ತ್ರೀಯ ಅಧ್ಯಯನ' ಎಂಬುದರಲ್ಲಿ ಸಮುದಾಯದ ಮೂಲ ಮತ್ತು ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ ಸ್ಥಿತಿಗತಿಗಳು ಕುರಿತಾಗಿ ಸಂಕ್ಷಿಪ್ತವಾಗಿ ವಿವರಿಸಿದ್ದಾರೆ. ಹಾಗೂ ಆಧುನಿಕತೆಯಿಂದಾಗಿ ಅವರ ಜೀವನ ನಿರ್ವಹಣೆಯ ಕುರಿತಾಗಿಯು ಚರ್ಚಿಸಿರುವುದು ಗಮನಾರ್ಹ ಸಂಗತಿಯಾಗಿದೆ.

ರವಿ ಎಂ.ವಿ. ಅವರು (೨೦೦೦) "ಹಾಸನ ಜಿಲ್ಲೆಯ ಕೊರಮರು: ಒಂದು ಸಾಂಸ್ಕೃತಿಕ ಅಧ್ಯಯನ" ಎಂಬ ಸಂಶೋಧನಾ ಪ್ರಬಂಧದಲ್ಲಿ ಕೊರಮರ ಸಮುದಾಯದ ಹಿನ್ನೆಲೆ, ಅವರ ಸಾಮಾಜಿಕ ವ್ಯವಸ್ಥೆ ಮತ್ತು ಜೀವನ ವಿಧಾನ, ಆಚರಣೆ ಮತ್ತು ಕಲೆ, ಭಾಷೆ, ಸಾಹಿತ್ಯ, ಕ್ರೀಡೆಗಳು ಮತ್ತು ಸಾಮಾಜಿಕ ಪರಿವರ್ತನೆ ಕುರಿತಾಗಿ ಹಾಸನ ಜಿಲ್ಲೆಯನ್ನು ವ್ಯಾಪ್ತಿಯಾಗಿಸಿಕೊಂಡು ಅಧ್ಯಯನವನ್ನು ನಡೆಸಿದ್ದಾರೆ.

ಹಾಗೆಯೇ ಸಂಶೋಧನೆಗೆ ಪೂರಕವೆಂಬಂತೆ ಇತರೆ ಕೃತಿಗಳು ಮತ್ತು ಸಮುದಾಯದ ಅಧ್ಯಯನಗಳನ್ನು ಬಳಸಿಕೊಳ್ಳಲಾಗಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಉಪಸಂಸ್ಕೃತಿ ಅಧ್ಯಯನ ಮಾಲೆಯಡಿಯಲ್ಲಿಯ ಕೆಲವು ಸಮುದಾಯಗಳ ಪುಸ್ತಕಗಳನ್ನು ಗಮನಿಸಲಾಗಿದೆ. ಮೈಸೂರು ವಿಶ್ವವಿದ್ಯಾಲಯದ ಪ್ರಚಾರ ಪುಸ್ತಕ ಮಾಲೆ ಅಡಿಯಲ್ಲಿಯ ರಾಮಕೃಷ್ಣ ಆರ್. ಅವರ (೨೦೦೭) ಕರ್ನಾಟಕದ ಬುಡಕಟ್ಟುಗಳು ಈ ಕೃತಿಯಲ್ಲಿ ಒಟ್ಟು ಬುಡಕಟ್ಟು

ಸಮುದಾಯಗಳ ಕುರಿತಾಗಿ ಅವರ ಜೀವನ ವಿಧಾನಗಳು ಮತ್ತು ಸಂಕ್ಷಿಪ್ತ ಇತಿಹಾಸದ ಕುರಿತಾಗಿ ವಿವರಿಸಿದ್ದಾರೆ. ಜೊತೆಗೆ ಇಂದಿನ ಬದಲಾಗುತ್ತಿರುವ ಅವರ ಬದುಕಿನ (ಜೀವನ)ಕ್ರಮಗಳ ಬಗೆಗೆ ಅವರ ವೃತ್ತಿಗಳ ಆಧುನಿಕತೆಯ ಪ್ರಭಾವದ ಕುರಿತಾಗಿಯೂ ವಿವರಿಸಿದ್ದಾರೆ.

ಸೋಮಶೇಖರ ಗೌಡ ಅವರ (೨೦೦೭) ಸಾಮಾಜಿಕ ಭಾಷಾ ವಿಜ್ಞಾನ, ಪ್ರಸಾರಾಂಗ, ಮೈಸೂರು ಈ ಪುಸ್ತಕದಲ್ಲಿ ಸಮಾಜೋಭಾಷಿಕ ಅಧ್ಯಯನದ ವಿವಿಧ ಆಯಾಮಗಳ ಬಗೆಗೆ ವಿವರಿಸಿದ್ದಾರೆ ಮತ್ತು ಈ ಅಧ್ಯಯನಕ್ಕೆ ಅಗತ್ಯವಾದ ಪೂರಕ ಮಾಹಿತಿಗಳ ಕುರಿತಾಗಿ ಹೇಳಿದ್ದಾರೆ. ಇದರೊಂದಿಗೆ ಸಾಮಾಜಿಕ ಭಾಷಾ ವಿಜ್ಞಾನ ಅಧ್ಯಯನದ ವಿಭಿನ್ನ ನೆಲೆಗಳನ್ನು ಕುರಿತು ಚರ್ಚೆ ನಡೆಸಿದ್ದಾರೆ. ಸಮಾಜ ಮತ್ತು ಸಂಸ್ಕೃತಿಯಲ್ಲಿ ಅಡಕಗೊಂಡಿರುವ ಭಾಷೆಯ ಅನನ್ಯತೆಯನ್ನು ಕುರಿತಾಗಿ ಅಧ್ಯಯನ ಮಾಡುವಲ್ಲಿ ಉಪಯುಕ್ತ ಕೃತಿಯಾಗಿದೆ.

ಪಾಂಡುರಂಗಬಾಬು ಡಿ. ಅವರ (೨೦೦೫) 'ನುಡಿನೋಟ' ಕೃತಿಯು ಹಲವಾರು ದೃಷ್ಟಿಕೋನಗಳಿಂದ ಗಮನ ಸೆಳೆಯುವಂತಹದು. ಈ ಲೇಖನ ಟಿಪ್ಪಣಿಗಳು ಭಾಷೆಯ ರಚನೆಗೆ ಸಂಬಂಧಿಸಿದ ವಿಚಾರಗಳಿಗಿಂತ ಭಾಷೆಯ ಸಾಮಾಜಿಕ ನೆಲೆಗಳನ್ನು ಗ್ರಹಿಸಿ ಅರ್ಥಮಾಡಿಕೊಳ್ಳುವ ದೃಷ್ಟಿಯಿಂದ ಬರೆದಂತವು. ಭಾಷೆಯ ಸಾಮಾಜಿಕ ಚಹರೆಗಳು, ಬಯ್ಗುಳ ಸಾಮಾಜಿಕ ಸಾಂಸ್ಕೃತಿಕ ವಿನ್ಯಾಸ, ಣೇ, ಮೀ, ಲೇ ಅಂದರೆ.... ಕನ್ನಡದೊಳಗಣ ಇಂಗ್ಲೀಷ್, ಭಾಷಾ ತಂತ್ರಜ್ಞಾನ ಮತ್ತು ಸಮಾಜ, ಅಲೆಮಾರಿಗಳು ಮತ್ತು ಭಾಷೆ, ಮಂತ್ರವಿದ್ಯೆ ಮತ್ತು ಭಾಷೆ ಇಲ್ಲಿ ಪ್ರತಿಯೊಂದು ವಿಷಯವನ್ನು ದೇಸೀ ನೆಲೆಯಲ್ಲಿ ಸಮಾಜ ಮುಖಿಯಾಗಿ ಚಿಂತಿಸುವ ಆಲೋಚಿಸುವಂತಹದ್ದಾಗಿದೆ. ಹಾಗೆಯೇ ಎಲ್ಲ ಲೇಖನಗಳು ಸಮಾಜೋಭಾಷಿಕ ನೆಲೆಯ ವಸ್ತು ವಿಷಯವನ್ನೇ ಪ್ರಸ್ತುತಿಸುವುದನ್ನು ಗಮನಿಸಬಹುದಾಗಿದೆ.

ಕೃಷ್ಣ ಪರಮೇಶ್ವರ ಭಟ್ಟ ಅವರ (೨೦೧೩) "ಭಾಷೆ ಮತ್ತು ಸಾಮಾಜಿಕ ಸಂದರ್ಭ" ಕೃತಿಯಲ್ಲಿ ಭಾಷೆಯ ಆಂತರಿಕ ವ್ಯವಸ್ಥೆಯನ್ನು ಸ್ವಯಂಪೂರ್ಣ ವ್ಯವಸ್ಥೆಯೆಂಬಂತೆ ಭಾವಿಸಿ ಭಾಷಾ ವಿವೇಚನೆಯ ಒಂದು ದಿಕ್ಕಿನಲ್ಲಿ ಸಮಾಜ ಮತ್ತು ಭಾಷೆಗಳನ್ನು ಬೆಸೆಯುವ ಸಾಮಾಜಿಕ ಭಾಷಾವಿಜ್ಞಾನ ಎಂಬುದು ಈಗ ಹೊಸದಾಗಿ ಹುಟ್ಟಿಕೊಂಡಿದೆ. ಈ ಹಿನ್ನೆಲೆಯಲ್ಲಿ ಕೆಲವೊಂದು ಸಮಾಜೋಭಾಷಿಕ ವಿಷಯಗಳನ್ನು ಸಂಕ್ಷೇಪವಾಗಿ ಹೇಳುವ ಪರಿಚಯಾತ್ಮಕವಾದ ಕೃತಿಯಾಗಿದೆ. ಇಲ್ಲಿ ವಿಷಯಗಳ ಮನವರಿಕೆಗಾಗಿ ಸಾಧ್ಯವಾದ ಎಡೆಗಳಲ್ಲಿ ಕನ್ನಡ-ನೆರೆಯ ಭಾಷೆಗಳಿಂದಲೇ ವಿವರಿಸಲು ಪ್ರಯತ್ನಿಸಿದ್ದಾರೆ. ಹಾಗೂ ಹವ್ಯಕ ಕನ್ನಡದೊಂದಿಗೂ ಅಲ್ಲಲ್ಲಿ ಉದಾಹರಣೆಗಳನ್ನು ನೀಡುತ್ತ ಬಂದಿದ್ದಾರೆ. ಈ ರೀತಿಯಾಗಿ ಸಮಾಜ ಮತ್ತು ಭಾಷೆಗಳ ಸಂಬಂಧವನ್ನು ಕುರಿತು ಚಿಂತನೆ ನಡೆಸಿದ್ದಾರೆ.

ಶ್ರೀಧರ ಎಸ್.ಎನ್. ಅವರು (೨೦೧೧) "ಇಂದಿನ ಕನ್ನಡ ರಚನೆ ಮತ್ತು ಬಳಕೆ" ಈ ಪುಸ್ತಕದಲ್ಲಿ ಭಾಷೆಯನ್ನು ಕುರಿತು ಸಾಮಾಜಿಕ ಮತ್ತು ಮಾನವಶಾಸ್ತ್ರ ಹಿನ್ನೆಲೆಯಲ್ಲಿ ಚರ್ಚಿಸಿದ್ದಾರೆ.

ಈ ಕೃತಿಯು ಅನ್ಯಭಾಷೆ ಬಳಕೆ ಹಾಗೂ ನುಡಿಬೆರಕೆ ಮತ್ತು ನುಡಿಜಿಗಿತಗಳ ಬಗ್ಗೆ ಒಂದು ತಾತ್ವಿಕ ಆಯಾಮಗಳನ್ನು ಕಟ್ಟಿಕೊಡುವಲ್ಲಿ ತುಂಬಾ ಸಹಕಾರಿಯಾಗಿದೆ. ಕನ್ನಡ ಭಾಷೆಯನ್ನು ಜಾಗತಿಕ ಚಿಂತನೆಗಳಲ್ಲಿ ತೊಡಗುವಂತೆ ಈ ಕೃತಿಯು ವಿಷಯವನ್ನು ನೀಡುತ್ತದೆ. ಅಧ್ಯಯನಕ್ಕೆ ಸಂಬಂಧಪಟ್ಟಂತೆ ನುಡಿಬೆರಕೆ ಮತ್ತು ನುಡಿ ಜಿಗಿತಗಳು ಯಾವ ಯಾವ ಸಂದರ್ಭಗಳಲ್ಲಿ ಹೇಗೆ ಆಗುತ್ತವೆ ಎಂಬುದನ್ನು ಸಂಪೂರ್ಣವಾದ ಮಾಹಿತಿಯನ್ನು ನೀಡಿದ್ದಾರೆ. ಜಾಗತೀಕರಣಕ್ಕೆ ಸಂಬಂಧಿಸಿದಂತೆ ಈ ಕೃತಿಯು ಸಂಶೋಧನೆಗೆ ಪೂರಕವಾದ ಮಾಹಿತಿಯನ್ನು ನೀಡವ ಆಕರ ಗ್ರಂಥವಾಗಿದೆ.

ಲಾವಣ್ಯ ಸಿ.ಪಿ. ಅವರ (೨೦೧೫-೧೬) "ಕೊಡಗಿನ ಗೌಡ ಕನ್ನಡದ ಭಾಷಿಕ ನೆಲೆಗಳು" ಅಪ್ರಕಟಿತ ಸಂಶೋಧನಾ ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ. ಈ ಪ್ರಬಂಧದಲ್ಲಿ ಕೊಡಗು ಜಿಲ್ಲೆಯಲ್ಲಿ ವಾಸಿಸುವಂತಹ ಗೌಡ ಸಮುದಾಯದವರು ಬಳಸುವ ಕನ್ನಡವನ್ನು ಕುರಿತು ಇಲ್ಲಿ ಗೌಡ ಕನ್ನಡದ ಭಾಷಾ ವೈಶಿಷ್ಟ್ಯ, ಭಾಷಾ ಸ್ವರೂಪ ಮತ್ತು ಭಾಷೆಯ ಚಾರಿತ್ರಿಕ ಬೆಳವಣಿಗೆಯ ಹಿನ್ನೆಲೆಯಲ್ಲಿ ಮತ್ತು ಈ ಗೌಡ ಸಮುದಾಯದವರು ಕನ್ನಡ ಪರಿಸರದ ಒಂದು ಉಪಭಾಷಾ ಸಮುದಾಯವಾದುದರಿಂದಾಗಿ ಅವರ ಭಾಷಿಕ ನೆಲೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಗಾದೆಗಳು, ಒಗಟುಗಳು, ನುಡಿಗಟ್ಟುಗಳು, ಬಂಧು ವಾಚಕಗಳು, ಸಂಬೋಧನಾ ರೂಪಗಳು, ಬಾಲಭಾಷೆ, ವ್ಯಕ್ತಿನಾಮಗಳು, ಮನೆಹೆಸರುಗಳು ಮತ್ತು ಇತರೆ ವಲಯಗಳಲ್ಲಿ ಗೌಡ ಸಮುದಾಯದ ಭಾಷಾ ಬಳಕೆಯನ್ನು ಗಮನದಲ್ಲಿರಿಸಿಕೊಂಡು ಸಮಾಜೋಭಾಷಿಕ ಅಧ್ಯಯನ ನೆಲೆಯಲ್ಲಿ ಅಧ್ಯಯನವನ್ನು ಮಾಡಿದ್ದಾರೆ. ಮತ್ತು ಈ ಸಮುದಾಯದ ಕನ್ನಡದ ಮೇಲೆ ಇತರೆ ಭಾಷೆಗಳ ಪ್ರಭಾವದ ಹಿನ್ನೆಲೆಯಲ್ಲಿ ನುಡಿಬೆರಕೆ–ನುಡಿಜಿಗಿತಗಳ ಚರ್ಚೆಯನ್ನು ಮಾಡಲಾಗಿದೆ.

ಸೋಮಶೇಖರಗೌಡ ಅವರು (೨೦೧೦) "ಭಾಷೆ ರಚನೆ ಮತ್ತು ಬಳಕೆ" ಈ ಕೃತಿಯಲ್ಲಿ ಭಾಷೆಯ ಬಳಕೆ ಕಾಲಕಾಲಕ್ಕೆ ತಕ್ಕಂತೆ ಬೆಳವಣಿಗೆಯಾಗುತ್ತಿದೆ. ಜೊತೆಗೆ ಭಾಷಾ ವಿಜ್ಞಾನದ ಇನ್ನಿತರ ಅನ್ವಯಿಕ ಶಾಖೆಗಳನ್ನು ಪರಿಚಯ ಮಾಡಿಕೊಡಲಾಗಿದೆ. ಆಧುನಿಕ ಸಂದರ್ಭದಲ್ಲಿ ಕನ್ನಡ ಲಿಪಿಯು ಹೆಚ್ಚು ಹೆಚ್ಚು ಸಂಸ್ಕರಣೆ ಆಗುತ್ತದೆ. ಇದಕ್ಕೆ ಕಾರಣಗಳನ್ನು ಚರ್ಚಿಸಲಾಗಿದೆ. ಹಾಗೆಯೇ ಈ ಆಧುನಿಕ ಭಾಷಾಶಾಸ್ತ್ರವು ದ್ವಿಭಾಷಿಕತೆ ಮತ್ತು ಭಾಷಾ ಮಿಶ್ರಣ ಹಾಗೂ ನುಡಿಬೆರಕೆ, ನುಡಿಪಲ್ಲಟ ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಹಾಗಾಗಿ ಈ ಹಿನ್ನೆಲೆಯಲ್ಲಿ ಕೃತಿಯು ನನ್ನ ಸಂಶೋಧನಾ ವಿಷಯಕ್ಕೆ ಪೂರಕ ಆಕರವಾಗಿ ಬಳಸಿಕೊಳ್ಳಲಾಗಿದೆ.

ಆಂಜನೇಯ ಅವರು (೨೦೦೬) "ಮ್ಯಾಸಬೇಡರ ಕನ್ನಡ: ಸಮಾಜೋಭಾಷಿಕ ಅಧ್ಯಯನ" ಎಂಬ ಅಪ್ರಕಟಿತ ಸಂಶೋಧನಾ ಪ್ರಬಂಧ ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ ಪ್ರಬಂದಧಲ್ಲಿ ಚಿತ್ರದುರ್ಗ ಜಿಲ್ಲೆಯಲ್ಲಿ ವಾಸಿಸುವ ಮ್ಯಾಸಬೇಡರು ಬಳಸುವಂತ ಕನ್ನಡವನ್ನು ಸಾಮಾಜಿಕ ಭಾಷಾ ವೈಜ್ಞಾನಿಕ ಹಿನ್ನೆಲೆಯಲ್ಲಿ ಅಧ್ಯಯನವನ್ನು ಕೈಗೊಂಡಿದ್ದಾರೆ. ಮ್ಯಾಸಬೇಡರು

ಬಳಸುವ ಕೌಟುಂಬಿಕ ವಲಯದಲ್ಲಿ ಯಾವ ರೀತಿ ಭಾಷೆಯನ್ನು ಬಳಸುತ್ತಾರೆ ಎಂಬುದನ್ನು ತಿಳಿಸಿದ್ದಾರೆ. ಹಾಗೂ ವ್ಯವಹಾರಿಕವಾಗಿ ಬಳಸುವ ಕನ್ನಡ ಭಾಷೆಗೂ ಮತ್ತು ಸಮುದಾಯದೊಳಗೆ ಮಾತನಾಡುವ ಭಾಷೆಗೂ ಯಾವ ರೀತಿ ವ್ಯತ್ಯಾಸವಾಗುತ್ತದೆ ಎಂಬುದನ್ನು ಭಾಷಾ ವೈಜ್ಞಾನಿಕ ಹಿನ್ನೆಲೆಯಲ್ಲಿ ಅಧ್ಯಯನ ಮಾಡಿದ್ದು ಇಂತಹ ದ್ವಿಭಾಷಿಕ ಸನ್ನಿವೇಶದಲ್ಲಿ ಉಂಟಾಗುವ ನುಡಿಬೆರಕೆ ಮತ್ತು ನುಡಿಮಿಶ್ರಣ ಯಾವ ಒಂದು ಸಂದರ್ಭದಲ್ಲಿ ಬಳಸುತ್ತಾರೆ ಎಂಬುದನ್ನು ಇಲ್ಲಿ ವಿಶ್ಲೇಷಿಸಿದ್ದಾರೆ. ಬಹುಮುಖ್ಯವಾಗಿ ಇಲ್ಲಿ ಕೌಟುಂಬಿಕ ವಲಯ ಮತ್ತು ವ್ಯವಹಾರಿಕ ವಲಯವನ್ನು ಪರಿಗಣಿಸಿ ಸಮಾಜೋಭಾಷಿಕ ಹಿನ್ನೆಲೆಯಲ್ಲಿ ಅಧ್ಯಯನ ಮಾಡಿದ್ದಾರೆ.

ಕೆಂಪೇಗೌಡ ಕೆ. ಅವರು (೧೯೯೬) "ಸಾಮಾನ್ಯ ಭಾಷಾ ವಿಜ್ಞಾನ" ಎಂಬ ಕೃತಿಯಲ್ಲಿ ಭಾಷೆ ಮಾನವನ ಜೀವನದಲ್ಲಿ ಒಂದು ಅತ್ಯುತ್ತಮವಾದ ಸಾಧನ. ಸಾಹಿತ್ಯ, ಜಾನಪದ, ಮಾನವಶಾಸ್ತ್ರ, ಸಮಾಜಶಾಸ್ತ್ರ ಮುಂತಾದ ಅಧ್ಯಯನದಲ್ಲಿ ಭಾಷೆಯ ನೆರವು ಅಗತ್ಯವಾದುದಾಗಿದೆ. ಭಾಷೆಗಳ ಅಧ್ಯಯನ ಹೆಚ್ಚು ವಿದ್ವಾಂಸರನ್ನು ಆಕರ್ಷಿಸುತ್ತದೆ. ಇದಕ್ಕೆ ಭಾಷೆ ಮತ್ತು ಭಾಷಾ ವಿಜ್ಞಾನಗಳಲ್ಲಿ ಸಾಮಾನ್ಯ ತಿಳುವಳಿಕೆ ಅವಶ್ಯಕವಾಗಿರುತ್ತದೆ. ಈ ದೃಷ್ಟಿಯಿಂದ ಭಾಷೆ ಎಂದರೇನು? ಭಾಷಾ ವಿಜ್ಞಾನ ಎಂದರೇನು? ಭಾಷೆಯ ಸ್ವರೂಪ, ಲಕ್ಷಣ ಮತ್ತು ಪ್ರಭಾವ ಭಾಷೆಯಿಂದ ಪ್ರಯೋಜನಗಳು ಭಾಷೆಯ ವಿವಿಧ ರೂಪಗಳು ಭಾಷೆ ಮತ್ತು ಬರಹದ ಭಾಷೆ, ಸಮಾಜ ಮತ್ತು ಸಂಸ್ಕೃತಿಗೆ ಹೇಗೆ ಅಧ್ಯಯನಗಳಾಗಿ ರೂಪಿಸಿಕೊಂಡಿವೆ ಎಂಬುದನ್ನು ಸಮಗ್ರವಾಗಿ ನಿರೂಪಿಸಿದ್ದಾರೆ. ಹೀಗಾಗಿ ಭಾಷೆಗಳ ಅಧ್ಯಯನಕ್ಕೆ ಇದು ಉತ್ತಮವಾದ ಆಕರಗ್ರಂಥವಾಗಿದೆ.

ಮಹಾದೇವಯ್ಯ ಪಿ. (೨೦೧೪) "ಕನ್ನಡ ನುಡಿ ಬಳಕೆಯ ನೆಲೆಗಳು" ಎಂಬ ಕೃತಿಯಲ್ಲಿ ಮುಖ್ಯವಾಗಿ ಮೂರು ಲೇಖನಗಳು ಭಾಷೆಗೆ ಸಂಬಂಧಪಟ್ಟಂತ ಮಾಹಿತಿಯನ್ನು ನೀಡುವಂತಹ ಲೇಖನಗಳಾಗಿವೆ. ಭಾಷೆ, ಸಮಾಜ ಮತ್ತು ಸಂಸ್ಕೃತಿ, ರಾಜಕೀಯ ಮತ್ತು ಭಾಷೆ, ಸಮೂಹ ಮಾಧ್ಯಮಗಳು ಮತ್ತು ಭಾಷೆ ಈ ಲೇಖನಗಳು ಪ್ರಸ್ತುತ ಸಂದರ್ಭವನ್ನು ಕುರಿತಾದವುಗಳಾಗಿವೆ. ವಿವಿಧ ವಲಯಗಳಲ್ಲಿ ಬಳಕೆಯಾಗುತ್ತಿರುವ ಭಾಷಾ ಬಳಕೆಯನ್ನು ಗುರಿಯಾಗಿಸಿಕೊಂಡು ಈ ಲೇಖನಗಳನ್ನು ರಚಿಸಲಾಗಿದೆ. ಹಾಗಾಗಿ ಭಾಷೆ ಸಮಾಜ ಮತ್ತು ಸಂಸ್ಕೃತಿಗೆ ಹೇಗೆ ಅವಲಂಬಿತವಾಗಿದೆ ಎಂಬುದನ್ನು ಈ ಕೃತಿಯಿಂದ ತಿಳಿದುಬರುತ್ತದೆ.

ನಾಗರಾಜಯ್ಯ ಹಂಪ ಅವರು (೧೯೬೬) "ದ್ರಾವಿಡ ಭಾಷಾ ವಿಜ್ಞಾನ" ಎಂಬ ಕೃತಿಯು ಸಕಲ ದ್ರಾವಿಡ ಭಾಷೆಗಳ ಸಮಗ್ರ ಪರಿಚಯ ಮಾಡಿಕೊಡುವ ಗ್ರಂಥ ಇದಾಗಿದೆ. ಈವರೆಗೆ ದ್ರಾವಿಡದ ಕುರಿತಾದ ಗ್ರಂಥ ಮತ್ತು ಲೇಖನಗಳು ಈ ಗ್ರಂಥದ ರಚನೆಗೆ ಕಾರಣವಾಗಿದೆ. ಇಲ್ಲಿ ದ್ರಾವಿಡ ಭಾಷೆಗಳ ಉಗಮ, ವಿಕಾಸ, ವರ್ಗೀಕರಣ ಅವುಗಳ ಪ್ರಾಚೀನತೆ, ಅವುಗಳ ಸ್ವರೂಪ, ಲಕ್ಷಣ, ಪರಸ್ಪರ ಸಂಬಂಧಗಳ ನಿರೂಪಣೆ, ತೌಲನಿಕ ಧ್ವನಿಮಾ ಮತ್ತು ಆಕೃತಿಮಾ ವಿಜ್ಞಾನಗಳ ವಿವರಣೆ ಮುಂತಾದ ವಿಷಯಗಳನ್ನೊಳಗೊಂಡಿದೆ. ಹಂಪನಾ ಅವರ ದೀರ್ಘಾಧ್ಯಯನದ

ಚಿಂತನಮಂಥನ ಮತ್ತು ಆಲೋಚನೆಯ ಫಲ ಇದಾಗಿದೆ. ಜೊತೆಗೆ ಭಾಷಾಶಾಸ್ತ್ರ ಸಂಬಂಧವಾದ ಅವರ ಆಧಾರ ಪೂರ್ವಕ ಚಿಂತನೆಗಳು ಈ ಕೃತಿಯಲ್ಲಿ ಪ್ರತಿಬಿಂಬಿತವಾಗಿದೆ. ಹೀಗಾಗಿ ಒಂದು ದ್ರಾವಿಡ ಭಾಷಿಕ ಮಾದರಿಯನ್ನು ಹೊಂದಿರುವ ಕೊರಚರ ಭಾಷಿಕ ಅಧ್ಯಯನ ಮಾಡುವಲ್ಲಿ ಈ ಕೃತಿಯು ಉಪಯುಕ್ತವಾಗಿದೆ.

ಸಂಗಮೇಶ ಸವದತ್ತಿಮಠ ಅವರು (೧೯೭೯) "ಕನ್ನಡ ಭಾಷಾ ವ್ಯಾಸಂಗ" ಕೃತಿಯು ಭಾಷಾ ವಿಜ್ಞಾನ ಮತ್ತು ಪಾರಂಪರಿಕ ವ್ಯಾಕರಣ ಅಂಶಗಳನ್ನು ಕನ್ನಡ ಭಾಷೆಯ ಸಮಗ್ರವೂ ಸಂಕ್ಷೇಪವೂ ಆದ ವಿಶ್ಲೇಷಣೆಗೆ ಒಳಪಡಿಸುವುದರಿಂದ ಕನ್ನಡ ಭಾಷೆಯ ರಚನೆಯ ಒಳತಿರುಳನ್ನು ಸ್ಪಷ್ಟವಾಗಿ ಹೇಳುತ್ತದೆ. ಮತ್ತು ಶಬ್ದಮಣಿದರ್ಪಣದ ವಿಷಯಗಳನ್ನು ಬರೀ ಪ್ರಶಂಸಿಸಿದರೆ ಅದರ ದೋಷಗಳನ್ನು ತೋರಿಸುತ್ತದೆ. ಆದ್ದರಿಂದ ಇದೊಂದು ವಿಶಿಷ್ಟ ಕೃತಿಯಾಗಿದೆ. ಇಲ್ಲಿ ವ್ಯಾಕರಣಾಂಶ ಮತ್ತು ಭಾಷಾವಿಜ್ಞಾನ ಎರಡೂ ದೃಷ್ಟಿಯಿಂದ ಅಧ್ಯಯನ ಮಾಡುವವರಿಗೆ ಇದು ಅತ್ಯಂತ ಉಪಯುಕ್ತ ಕೃತಿಯಾಗಿದೆ.

ಭಾರತದಲ್ಲಿ ಸುಮಾರು ಎಪ್ಪತ್ತಕ್ಕೂ ಹೆಚ್ಚು ದ್ರಾವಿಡ ಭಾಷೆಗಳು ಬಳಕೆಯಲ್ಲಿರಬಹುದೆಂದು ಕೆಲವು ವಿದ್ವಾಂಸರು ಅಭಿಪ್ರಾಯಿಸಿದ್ದಾರೆ. ಇಲ್ಲಿಯವರೆಗೆ ಕೇವಲ ಮೂವತ್ತು ದ್ರಾವಿಡ ಭಾಷೆಗಳು ಮಾತ್ರ ಬೆಳಕಿಗೆ ಬಂದಿವೆ. ಇನ್ನೂ ಬೆಳಕಿಗೆ ಬಾರದ ಬೇರೆ ಬೇರೆ ಭಾಷೆಗಳು ಹಲವಾರು ಇವೆ. ಈ ದಿಸೆಯಲ್ಲಿ ದ್ರಾವಿಡ ಭಾಷೆಗಳ ಕುರಿತು ವಿವಿಧ ಮುಖಗಳಲ್ಲಿ ಸಂಶೋಧನೆ ನಡೆದು ಹೊಸ ಹೊಸ ಭಾಷೆಗಳು-ಉಪಭಾಷೆಗಳು ಹೊರಬಂದಿವೆ. ಹಾಗೆಯೇ ತೌಲನಿಕ ಮಾದರಿಯಲ್ಲಿ ಅಧ್ಯಯನಗಳು ನಡೆದಿರುವುದು ತುಂಬಾ ಕಡಿಮೆ. ಹೀಗಾಗಿ ಈ ದಿಸೆಯಲ್ಲಿ ದ್ರಾವಿಡ ಭಾಷೆ ಮತ್ತು ಉಪಭಾಷೆಗಳ ಸಮರ್ಪಕ ಹಾಗೂ ವೈಜ್ಞಾನಿಕ ಅಧ್ಯಯನಗಳು ಕೆಲವೊಂದು ಕೃತಿಗಳು ಕಂಡುಬರುತ್ತವೆ. ಅವುಗಳೆಂದರೆ ಕೆ. ಕೆಂಪೇಗೌಡ "ತೌಲನಿಕ ದ್ರಾವಿಡ ಭಾಷಾ ವಿಜ್ಞಾನ" (೧೯೯೬) ಸಂಗಮೇಶ ಸವದತ್ತಿಮಠ ಅವರ "ತೌಲನಿಕ ದ್ರಾವಿಡ ಭಾಷಾ ವಿಜ್ಞಾನ" (೧೯೭೬), ತಂಗಮಣಿಯನ್ ಅವರ "ದ್ರಾವಿಡ ಭಾಷೆಗಳ ತೌಲನಿಕ ಅಧ್ಯಯನ" (೨೦೦೩) ಮುಂತಾದ ಕೃತಿಗಳನ್ನು ಗಮನಿಸಬಹುದಾಗಿದೆ. ಆದರೆ ಈ ಕೃತಿಗಳು ಉಲ್ಲೇಖಿಸಿದ ನಿರ್ಣಯಗಳೇ ಅಂತಿಮವೆಂದು ನಿರ್ಧರಿಸಲಾಗದು. ಆದರೂ ಕೃತಿಗಳು ಒಂದು ಬುಡಕಟ್ಟು ಸಮುದಾಯಗಳ ಅಧ್ಯಯನ ಮಾಡುವಲ್ಲಿ ಮಾದರಿ ಗ್ರಂಥಗಳಾಗಿ ಬಳಕೆಗೊಳ್ಳುತ್ತವೆ. ಮತ್ತು ಕೆಲವು ಉಪಯುಕ್ತ ಮಾಹಿತಿಯನ್ನು ಸಹ ಒದಗಿಸುತ್ತವೆ.

ಶೇಖರಾಚಾರಿ ಕೆ. ಅವರು (೨೦೦೯-೧೦) "ಪಾಂಚಾಳರ ಭಾಷೆ ಮತ್ತು ಸಂಸ್ಕೃತಿ" ಎಂಬ ಅಪ್ರಕಟಿತ ಸಂಶೋಧನಾ ಪ್ರಬಂಧ ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ ಪ್ರಬಂಧದಲ್ಲಿ ಪಾಂಚಾಳ ಸಮುದಾಯದ ಬದುಕು, ವೃತ್ತಿ ಈ ಹಿನ್ನೆಲೆಯಲ್ಲಿಯೇ ಬೆಳೆದುಬಂದಿರುವ ಆಚರಣೆ ನಂಬಿಕೆ, ನಿಷೇಧ, ಸಾಮಾಜಿಕ ನಡವಳಿಕೆ, ಧಾರ್ಮಿಕ ನಡವಳಿಕೆಯಂತಹ ಸಾಂಸ್ಕೃತಿಕ ವಿವರಗಳನ್ನು ಸಮಾಜೋಭಾಷಿಕ ವಿವರಗಳ ನೆಲೆಯಲ್ಲಿ ಭಾಷೆಯ ಮೂಲಕ ತಿಳಿಯಲು ಸಾಧ್ಯವಾಗುತ್ತದೆ. ಇಲ್ಲಿ

ಪ್ರತಿಯೊಂದು ಸಮುದಾಯಗಳು ಆಚರಣೆಯಲ್ಲಿ ಭಾಷೆಯನ್ನು ತನ್ನೊಳಗಡೆ ಅಡಗಿಸಿಟ್ಟುಕೊಂಡಿರುವುದಾಗಿ ಸಮುದಾಯದ ಅಧ್ಯಯನ ಮಾಡುವಾಗ ಅವರ ಭಾಷೆಯನ್ನು ಗಮನಿಸುವುದು ಅತ್ಯವಶ್ಯವಾಗಿದೆ. ಈ ದಿಸೆಯಲ್ಲಿ ಈ ಪ್ರಬಂಧವು ಉಪಯುಕ್ತವಾಗಿದೆ.

ಮರಿಸ್ವಾಮಿ ಆರ್. ಅವರು (೨೦೧೪) "ಸೋಲಿಗ: ಸಮಾಜೋಭಾಷಿಕ ಅಧ್ಯಯನ" ಎಂಬ ಅಪ್ರಕಟಿತ ಸಂಶೋಧನಾ ಪ್ರಬಂಧ, ಮೈಸೂರು ವಿಶ್ವವಿದ್ಯಾಲಯ, ಮೈಸೂರು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ ಪ್ರಬಂಧದಲ್ಲಿ ಸೋಲಿಗ ಭಾಷೆಯು ಒಂದು ಕನ್ನಡದ ಸಾಮಾಜಿಕ ಉಪಭಾಷೆಯಾಗಿದೆ. ಇದು ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಜಾನಪದೀಯವಾಗಿ ಮತ್ತು ಪ್ರಾದೇಶಿಕವಾಗಿ ತಮ್ಮದೇ ಆದ ವೈಶಿಷ್ಟ್ಯವನ್ನು ಉಳಿಸಿಕೊಂಡಿದೆ. ಈ ಬುಡಕಟ್ಟು ಸಮುದಾಯದಲ್ಲಿ ಸಾಮಾಜಿಕ ಸ್ಥಿತಿಗತಿಗಳಿಗೆ ಅನುಗುಣವಾಗಿ ಭಾಷಾ ಬಳಕೆಯು ಹೇಗೆ ಬಳಕೆಯಾಗುತ್ತದೆ ಮತ್ತು ಸೋಲಿಗರ ಕೌಟುಂಬಿಕ ವಲಯ ಮತ್ತು ವ್ಯವಹಾರಿಕ ವಲಯ ಭಾಷೆಯು ಬಳಕೆಯಲ್ಲಾಗುವ ಬದಲಾವಣೆ ಹಾಗೂ ಭಾಷೆಯನ್ನು ಬಳಸುವಾಗ ಉಂಟಾಗುವ ನುಡಿಬೆರಕೆ ಮತ್ತು ನುಡಿಜಿಗಿತವನ್ನು ಪ್ರಸ್ತುತ ಅಧ್ಯಯನದಲ್ಲಿ ಸಮಾಜೋಭಾಷಿಕ ಅಧ್ಯಯನವನ್ನು ಮಾಡಲಾಗಿದೆ.

ಕೊರಚರ ಸಮುದಾಯದ ಇದುವರೆಗಿನ ಅಧ್ಯಯನ ಸಮೀಕ್ಷೆಯಿಂದ ಅವರ ಪಾರಂಪರಿಕ ಜ್ಞಾನ ಹಾಗೂ ಭಾಷೆ ಮತ್ತು ಅವರ ಬದುಕು (ವಲಸೆ ಬದುಕು), ಸಾಮಾಜಿಕ ಸ್ಥಾನಮಾನಗಳನ್ನು ಕುರಿತು ಈ ಸಮೀಕ್ಷೆಯಲ್ಲಿ ಒಂದು ಸ್ಥೂಲವಾದ ಚಿತ್ರಣವನ್ನು ಒದಗಿಸಿಕೊಡುತ್ತದೆ. ಕೊರಚರು ಮೂಲವಾಗಿ ತಮಿಳುನಾಡಿನ ಒಂದು ದಟ್ಟ ಅರಣ್ಯದಿಂದ ಹಲವು ಕಾರಣಗಳಿಂದಾಗಿ ವಲಸೆ ಪ್ರವೃತ್ತಿಯನ್ನು ಕೈಗೊಳ್ಳಬೇಕಾಗಿ ಬರುತ್ತದೆ. ಆದರು ಇವರ ಆಚರಣೆ, ಸಂಪ್ರದಾಯಗಳು, ಅವರ ಭಾಷೆ ವಿಶೇಷವಾಗಿ ಕಂಡುಬರುತ್ತದೆ. ನಂತರ ಸಮುದಾಯದವರು ನಾಡಿನ ಜನ ಸಮುದಾಯದವರೊಂದಿಗೆ ಬದುಕಲು ಪ್ರಾರಂಭ ಮಾಡಿದಂದಿನಿಂದ ಇವರ ಬದುಕು ಮತ್ತು ಭಾಷೆಯಲ್ಲಿ ಕೆಲವಾರು ಬದಲಾವಣೆಗಳು ಕಂಡುಬಂದವು. ವ್ಯವಹಾರ ಹಾಗೂ ಮಾರುಕಟ್ಟೆ ಗ್ರಾಹಕರೊಂದಿಗೆ ವ್ಯವಹಾರ ಮುಂತಾದವುಗಳಿಂದಾಗಿ ನಾಡಿನ ಜನರೊಂದಿಗೆ ಒಡನಾಟ ಬೆಳೆಯುತ್ತಿರುವುದರಿಂದ ಕರ್ನಾಟಕ ಪ್ರದೇಶದಲ್ಲಿ ವಾಸಿಸುವ ಕೊರಚರ ಭಾಷೆಯಲ್ಲಿ ಅನೇಕ ಕನ್ನಡದ ಅಂಶಗಳು ಕಂಡುಬರುತ್ತವೆ. ಆಧುನಿಕತೆಯೊಂದಿಗೆ ತಮ್ಮ ಬದುಕನ್ನು ಪ್ರಾರಂಭಿಸಿದ ಕೊರಚರು ವೃತ್ತಿ, ಭಾಷೆ, ಬದುಕುಗಳು ಸಹಜವಾಗಿಯೇ ಬದಲಾವಣೆ ಮಾಡಿಕೊಂಡು ಜೀವನವನ್ನು ನಡೆಸುತ್ತಿದ್ದಾರೆ. ಹೀಗಾಗಿ ಸಂಸ್ಕೃತಿ ಮತ್ತು ಭಾಷೆಯ ಅಧ್ಯಯನ ಮಾಡುವುದು ತುಂಬಾ ಅವಶ್ಯಕವಾಗಿದೆ.

ಅಧ್ಯಾಯ : ಮೂರು

ಕೊರಚ ಸಮುದಾಯದ ಹಿನ್ನೆಲೆ ಮತ್ತು ಭಾಷಿಕ ಪರಿಸರ

ಅಧ್ಯಾಯ: ಮೂರು

ಕೊರಚರ ಸಮುದಾಯದ ಹಿನ್ನೆಲೆ ಮತ್ತು ಭಾಷಿಕ ಪರಿಸರ

೩.೧. ಸಮುದಾಯದ ಹಿನ್ನೆಲೆ

ಜಗತ್ತಿನಲ್ಲಿ ಭಾರತವು ಹಲವು ಸಂಸ್ಕೃತಿಗಳು, ಧರ್ಮಗಳು ಮತ್ತು ವಿಭಿನ್ನ ಭಾಷೆಗಳ ನೆಲೆಬೀಡಾಗಿದೆ. ಅದರಂತೆಯೇ ಕರ್ನಾಟಕ ರಾಜ್ಯವು ಸಾಂಸ್ಕೃತಿಕವಾಗಿ ಶ್ರೀಮಂತವಾದುದು. ಬುಡಕಟ್ಟುಗಳ ಸಂಸ್ಕೃತಿಯ ಕುರುಹುಗಳೆನಿಸಿದ ಅನೇಕ ಸಮುದಾಯಗಳನ್ನು ತನ್ನ ಒಡಲಲ್ಲಿ ಹೊಂದಿದೆ. ನಾಗರಿಕ ಸಮಾಜದಿಂದ ದೂರವಾಗಿದ್ದು ಶಿಷ್ಟ ಸಮಾಜದ ಸಂಸ್ಕೃತಿಗಿಂತ ಭಿನ್ನವಾದ ಜೀವನಕ್ರಮವನ್ನು ಅನುಸರಿಸುತ್ತ, ಕಾಡುಮೇಡುಗಳಲ್ಲಿ ವಾಸವಾಗಿದ್ದು, ವಿಶಿಷ್ಟವಾದ ಸಾಂಸ್ಕೃತಿಕ ಮೌಲ್ಯಗಳನ್ನು ಉಳಿಸಿ ಬೆಳೆಸಿಕೊಂಡು ಬಂದಿರುವ ಬದುಕಿನ ಅನಿವಾರ್ಯ ಕಾರಣಗಳಿಂದಾಗಿ ದೇಶದ ಹಲವು ಭಾಗಗಳಿಗೆ ಚದುರಿ ಹೋಗಿ (ವಲಸೆ) ಬೇರೆ ಬೇರೆ ಹೆಸರುಗಳಿಂದ (ತಮಿಳು–ಕುಳುವನ್–ಕುರುವನ್, ತೆಲುಗು–ಯರಕುಲ, ಕರ್ನಾಟಕ–ಕೊರಚ, ಮಹಾರಾಷ್ಟ್ರ–ಕೈಕಾಡಿ, ಕೇರಳ–ಕುರಚ್ಚೆ, ಒರಿಸ್ಸಾ–ಓಡು ಇತ್ಯಾದಿಯಾಗಿ) ಕರೆಸಿಕೊಳ್ಳುತ್ತ ಜೀವನ ಸಾಗಿಸುತ್ತಿರುವ ಕೊರಚರ ಸಮುದಾಯವು ತನ್ನ ಮೂಲ ಸ್ವರೂಪದಿಂದ ಪ್ರಸ್ತುತ ತಾನು ಬದುಕುತ್ತಿರುವ ಸಮಾಜದ ಸಾಮೂಹಿಕ ಕಟ್ಟುಪಾಡುಗಳ ಪ್ರಭಾವಕ್ಕೆ ಒಳಗಾಗಿ ತಮ್ಮ ಮೂಲದ ಎಷ್ಟೋ ಅಂಶಗಳನ್ನು ಕಳೆದುಕೊಂಡಿದೆ. ಆದರೂ ಒಂದು ವಿಶಿಷ್ಟವಾದ ಭಾಷೆ, ಸಂಪ್ರದಾಯ, ಆಚರಣೆಗಳನ್ನು ಹೊಂದಿರುವುದರಿಂದ ಇಂದಿಗೂ ಪರಂಪರೆಯ ಅನನ್ಯತೆಯನ್ನು ಕಾಪಾಡಿಕೊಂಡು ಬಂದಿರುವುದನ್ನು ನೋಡಬಹುದು.

ಸೃಷ್ಟಿಯಲ್ಲಿ ಮಾನವ ಜೀವನದ ವಿಕಾಸಕ್ರಮ ಈಗಲೂ ಸೋಜಿಗವನ್ನುಂಟು ಮಾಡುತ್ತದೆ. ಸೃಷ್ಟಿಯ ಮೊದಲಲ್ಲಿ ಗೆಡ್ಡೆ–ಗೆಣಸು, ಹಣ್ಣು–ಹಂಪಲು, ಮಾಂಸ ಮೊದಲಾದವು ಆಹಾರಗಳಾಗಿದ್ದವು. ಮತ್ತು ಮರದ ಪೊಟರೆ, ಗುಹೆ, ತಪ್ಪಲು ಪ್ರದೇಶಗಳು ಒಟ್ಟಾರೆಯಾಗಿ ಸಾಟು (ರಕ್ಷಣೆಗಾಗಿ ಪೊಟರೆಗಳಲ್ಲಿ ಇರುತ್ತಿದ್ದರು) ಇದ್ದ ಕಡೆಗಳಲ್ಲಿ ತಂಗುತ್ತಿದ್ದರು. ಪ್ರಾಣಿಗಳಂತೆ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಸಂಚರಿಸುತ್ತಿದ್ದುದರಿಂದ ಸ್ಥಿರವಾದ ನೆಲೆಗಳೇ ಇರಲಿಲ್ಲ. ಪ್ರಾಯಶಃ ಈ ಅವಧಿಯಲ್ಲಿ ಒಬ್ಬರು ಇಲ್ಲವೆ ಕೆಲವೇ ಜನರು ಚಿಕ್ಕ ಚಿಕ್ಕ ಗುಂಪುಗಳಾಗಿ ಜೀವಿಸುತ್ತಿದ್ದರು.

ನಂತರದ ಕಾಲದಲ್ಲಿ ಮಾನವ ಆಹಾರಕ್ಕಾಗಿ ಸಂಚರಿಸುತ್ತಿದ್ದ ಅಲೆಮಾರಿತನವನ್ನು ಬಿಟ್ಟು ಆಹಾರ ಉತ್ಪಾದನೆ ಅಥವಾ ಕೃಷಿಯನ್ನು ಕಂಡುಕೊಂಡನು. ಮುಂದೆ ವಿಕಾಸ ಹೊಂದುತ್ತ ಒಂದೊಂದು ಸಮುದಾಯಗಳು ಶ್ರೇಣೀಕೃತಗೊಂಡವು. ಕೆಲವು ಶತಮಾನಗಳ ತರುವಾಯ ಊರು, ಹಳ್ಳಿ, ಪುರ, ಗ್ರಾಮ, ನಗರ, ಪಟ್ಟಣಗಳನ್ನು ಸೇರಿ ನಾಗರೀಕತೆಯ ಜೀವನ ಕಂಡುಕೊಂಡನು. ಹೀಗೆ ಬೆಟ್ಟ ಗುಡ್ಡಗಳಲ್ಲಿ ವಾಸಿಸುತ್ತ ನಾಗರೀಕತೆಯೆಡೆಗೆ ಸಾಗಿದ ಹಲವು ಸಮುದಾಯಗಳಲ್ಲಿ ಕೊರಚ ಸಮುದಾಯವು ಒಂದಾಗಿದೆ.

೩.೧.೧. ಕೊರಚರ ಪದನಿಷ್ಪತ್ತಿ

ಕೊರಚ ಇದೊಂದು ಜಾತಿ ಸೂಚಕ ಪದ. ಈ ಶಬ್ದದ ಬಗೆಗೆ ಸಾಕಷ್ಟು ಚರ್ಚೆಗಳು ನಡೆದಿವೆ. ಕೊರಚ ಶಬ್ದದ ನಿಷ್ಪತ್ತಿಯ ವಿಚಾರ ತುಸು ತೊಡಕಿನದಾಗಿದೆ. ಮೂಲತಃ ಇವರು ದ್ರಾವಿಡ ಹಿನ್ನೆಲೆಯ ಅಲೆಮಾರಿ ಬುಡಕಟ್ಟು ಸಮುದಾಯದವರು. ದ್ರಾವಿಡ ಭಾಷಾ ಪರಿವಾರದಲ್ಲಿ ಈ ಶಬ್ದವು ವಿಭಿನ್ನ ಅರ್ಥಗಳನ್ನು ಹೊಂದಿದೆ. ಎಂತಲೇ ಇದು ವೃತ್ತಿ ಮೂಲದ್ದೋ ಅಥವಾ ಭೌಗೋಳಿಕತೆಯ ಹಿನ್ನೆಲೆಯಿಂದ ರೂಢಿಗೆ ಬಂದದ್ದೋ ಎಂಬುದರ ಕುರಿತು ಸಾಕಷ್ಟು ಜಿಜ್ಞಾಸೆಗಳು ನಡೆದಿವೆ. ಕೊರಚ, ಕೊರವ, ಕುರುವನ್, ಕುಳುವ, ಕೈಕಾಡಿ, ಯರುಕುಲ ಇವೆಲ್ಲ ಒಂದೇ ಜನಾಂಗ ಸೂಚಕ ಪದಗಳಾಗಿ ಬಳಕೆಯಾಗುತ್ತಿದ್ದು ಬೇರೆ ಬೇರೆ ಪ್ರದೇಶಗಳಲ್ಲಿ ಚಲಾವಣೆಯಲ್ಲಿವೆ. 'ಕೊರಚ' ಪದನಿಷ್ಪತ್ತಿಯ ಕುರಿತಾಗಿ ವಿವೇಚಿಸುವಲ್ಲಿ ಅನೇಕ ವಿದ್ವಾಂಸರು ಈ ಕುರಿತಂತೆ ವಿವಿಧ ನೆಲೆಯಲ್ಲಿ ತಮ್ಮ ಅಭಿಪ್ರಾಯಗಳನ್ನು ನೀಡಿದ್ದಾರೆ. ಆ ಎಲ್ಲ ಅಭಿಪ್ರಾಯಗಳನ್ನು ಅವಲೋಕಿಸುವುದರ ಜೊತೆ ಈ ಕೊರಚ ಪದನಿಷ್ಪತ್ತಿಯ ಬಗೆಗೆ ಸ್ಪಷ್ಟ ಅಭಿಪ್ರಾಯಕ್ಕೆ ಬರಬಹುದಾಗಿದೆ.

ಎಡ್ಗರ್ ಥರ್ಸ್ಟನ್‌ರವರು The appevation korachara or koracha appear to be later date than korava and is said to be derived from the Hindustani kori (sly) Korinligga (sly look) becoming corrupted into koracha (Edger Thurston, Rangachari, 1987 Caste and Tribes of Southern India, Vol-III, P. 440) ಕೊರಚ, ಕೊರ್ಚ್ ಎಂಬ ಪದವು ಕೊರವ ಪದದ ನಂತರ ಬಂದ ಜಾತಿವಾಚಕ ಶಬ್ದವೆಂದು ಇದು ಹಿಂದೂಸ್ತಾನಿಯ ಕೋರಿ (ಕಳ್ಳ) ಕೂರನಿಗ್ಗ (ಕಳ್ಳನೋಟ) ಎಂಬ ಪದದ ಅಶುದ್ಧ ರೂಪವೆಂದು ವಿವರಣೆ ನೀಡಿದ್ದಾರೆ. ಹಾಗೆಯೇ ಹೊರೆ ಹೊರುವವರು (corriers) ಮಾರಾಟಗಾರರು (sevildores) ಎಂಬುದಾಗಿ ತಿಳಿಸಿದ್ದಾರೆ. ಹಾಗೆಯೇ ರೆವರೆಂಡ್ ಎಫ್. ಕಿಟೆಲ್‌ರ ಶಬ್ದಕೋಶದಲ್ಲಿ ಕೊರಚ ಶಬ್ದವು ''A Thievish wandring hill tribe, they sell wooden comb... etc. ಮತ್ತು An upbranding manta blamer a scanner, a habbler (Kittel's Kannada English Dictionary Vol-II, P. 521) ಎಂಬರ್ಥದಲ್ಲಿ ನಿರ್ವಚಿಸಲ್ಪಟ್ಟಿದೆ.

ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟಿನಲ್ಲಿ ಬಾಚಣಿಕೆ ಮೊದಲಾದ ಸಾಮಾನುಗಳನ್ನು ಮಾರುತ್ತ ಊರೂರು ಅಲೆಯುವ ಗುಡ್ಡಗಾಡು ಜನ ಎಂಬರ್ಥದಲ್ಲಿ ವಿವರಣೆಯಿದೆ. ಅದೇ ರೀತಿ

'ಕುರುವ' ಪದಕ್ಕೆ ದಿಬ್ಬ, ಗುಡ್ಡ, ದಿಣ್ಣೆ ಎಂತಲೂ ಕುರುಚ ಪದಕ್ಕೆ ಕುರುಚಾಡು, ಕುರುಚುಕಾಡು, ಕುರುಚಲು ಕಾಡು, ಚಿಕ್ಕಕಾಡು (ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ನಿಘಂಟು ಸಂ-೨, ಪು. ೩೨೫) ಎಂತಲೂ ಅರ್ಥ ವಿವರಣೆಯಿದೆ. ಹಾಗೆಯೇ ಕನ್ನಡ ರತ್ನಕೋಶದಲ್ಲಿ 'ಕುರು' ಎಂಬುದಕ್ಕೆ ಗುರುತು, ಸಣ್ಣದಾದ, ಚಿಕ್ಕದಾದ ಎಂಬರ್ಥಗಳಿವೆ. ಮತ್ತು ಕುರುವ ಪದಕ್ಕೆ ದ್ವೀಪ, ದಿಬ್ಬ ಎಂತಲೂ, ಕುರುಚು, ಪದಕ್ಕೆ ಕುರುಚುಕಾಡು, ಕುರುಚಲುಕಾಡು ಎಂತಲೂ, 'ಕುರುವ' ಪದಕ್ಕೆ ನಡುಗಡ್ಡೆ, ಕುಕ್ಕೆ, ಬುಟ್ಟಿ ಎಂತಲೂ, ಕೂರ್ಚ್ ಪದಕ್ಕೆ ಕುಚ್ಚು ಕರ್ಜಿ ಎಂತಲೂ, ಕೊರಚು ಪದಕ್ಕೆ 'ತೆಗಳು' (ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕನ್ನಡ ರತ್ನಕೋಶ, ಪು. ೫೫) ಎಂತಲೂ ಅರ್ಥಗಳಿವೆ.

ಎಂ.ಬಿ. ಎಮಿನೊ ಟಿ.ಬರೋ ಅವರ (DED) "ದ್ರಾವಿಡಿಯನ್ ಎಟ್‌ಮಾಲಜಿಕಲ್ ಡಿಕ್ಷನರಿ"ಯಲ್ಲಿ ಕುಳುವ ಪದದ ರೂಪಕ್ಕೆ Kuluvan ಎಂದಿದೆ. ಇದಕ್ಕೆ Kuluvan fowlers attendent hillman, Kuluvai fowlers kuluvan hillman ಎಂಬ ಅರ್ಥವನ್ನು ನೀಡಿದ್ದಾರೆ. ಹಾಗೆಯೇ ಪದವನ್ನು ನೋಡಿದಾಗ a thievish wandering hill tribes (ಎಂ.ಬಿ. ಎಮಿನೋ ಮತ್ತು ಟಿ. ಬರೋ, ದ್ರಾವಿಡಿಯನ್ ಎಟಮಾಲಜಿಕಲ್ ಡಿಕ್ಷನರಿ) ಎಂದಿದೆ.

ಓಪರ್ಟ್ ಅವರು Kuru with the root ku a mountain and in a Timil work of the ninth century, kuru of kuru (Kurumagal) is given as the name of a hill tribe (Oppart, Quated; Edger Thurston, Caste and Tribes of Southern India, P. 441) ಎಂದು ವಿವರಿಸಿದ್ದಾರೆ. ಕೊರಚ ಪದವು ಕುರು, ಕುರುಚು, ಪದದಿಂದ ನಿಷ್ಪತ್ತಿ ಹೊಂದಿರಬಹುದೆಂದು ಊಹಿಸಬಹುದಾಗಿದೆ ಎಂದು ಹೇಳಿದ್ದಾರೆ. ಕುರುಚಲು ಕಾಡಿನಲ್ಲಿ ವಾಸಿಸುತ್ತಿದ್ದ ಈ ಜನರನ್ನು ಕುರುಚರು ಎಂದು ಕರೆದಿರಬಹುದಾದ ಸಾಧ್ಯತೆಯು ಇದೆ. ಕುರುಚರು ಶಬ್ದ ಅಪಭ್ರಂಶಗೊಂಡು ಕೊರಚರು ಆಗಿರಬಹುದು. ಇದಕ್ಕೆ ಪೂರಕವಾಗಿ ತಮಿಳಿನ ಕುರುಂಜಿ, ಮಲೆಯಾಳಂ, ಕುರುಚ್ಚಿ ಎಂಬ ಶಬ್ದಗಳನ್ನು ಗಮನಿಸಿದರೆ hill country ಎಂಬ ಅರ್ಥವಿದೆ. ಹಾಗೆಯೇ ತೆಲುಗಿನ ಕೊರಚವಾಡು, ಯರಕವಾಡು ಪದಗಳಿಗೆ ಕೂಡ ಇದೇ ಅರ್ಥವಿದೆ. ಇದಕ್ಕೆ ಪೂರಕವಾಗಿ ನೋಡುವುದಾದರೆ The yerukulas were said tobe hill people living in the area's. They were nomodic in character they used to move from one place to another place. A very old yerukulas man stated we were living in the vinukonda hills infact we did not have any permanent abode, though we were coming back to go vinukonda now and then. wen used to go out as a group with wikes and children and make out own basa (a temporary place of cooking and sleeping) in the outskirts a village after we finished our job. We were leaving that place searching for another place after a period five or six months. We were going bock to uinukonda. we hardly lived in the villages we have our language, but we also learned the local language through which we could tolk to other people whenever it was necessary ಎಂದಿದ್ದಾರೆ.

ಸಿಂಹಾದ್ರಿ ಅವರ ಪ್ರಕಾರ Many old people in the village supported the above statement that the yerukulas were homadic people and many of the people around this area were inhabiting the vinukonda hills (V.C. Simhadri; Ex-Criminal tribes of India, P. 88).

ಈ ಎಲ್ಲ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಕೊರಚ ಪದವು 'ಕುರು' ಪದದಿಂದ ನಿಷ್ಪತ್ತಿ ಹೊಂದಿದ್ದು ಕೊರಚರು ಬೆಟ್ಟ-ಗುಡ್ಡಗಳಲ್ಲಿ ವಾಸಿಸುತ್ತಿದ್ದ ಜನ ಎಂಬರ್ಥದಲ್ಲಿ ಭೌಗೋಳಿಕತೆಯ ಹಿನ್ನೆಲೆಯಿಂದ ಚಾಲ್ತಿಗೆ ಬಂದಿರಬಹುದೆಂದು ಊಹಿಸಬಹುದಾಗಿದೆ. ಹಾಗೆಯೇ ಕೊರಚ, ಕೊರ್ಚ್, ಕುಳುವ, ಯರಕುಲ, ಕೈಗಾಡಿ, ಕುರುವನ್ ಹೀಗೆ ಬೇರೆ ಬೇರೆ ಪ್ರಾದೇಶಿಕ ಹೆಸರುಗಳಿಂದ ಕರೆಯಿಸಿಕೊಳ್ಳುತ್ತ ದಕ್ಷಿಣ ಭಾರತದ ರಾಜ್ಯಗಳಲ್ಲಿ ಹರಡಿಕೊಂಡಿರುವ ಕೊರಚರ ಮೂಲವನ್ನು ಕುರಿತಂತೆ ಅಧ್ಯಯನ ನಡೆದಿವೆ. ಭಾಷೆಯ ಹಿನ್ನೆಲೆಯಿಂದ ತಮಿಳಿಗೆ ಹತ್ತಿರದಲ್ಲಿರುವ ಈ ಸಮುದಾಯವು ತಮಿಳುನಾಡು ಮೂಲದ್ದೆಂದು ಕೆಲ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಈ ಎಲ್ಲ ಅಭಿಪ್ರಾಯಗಳ ಮುಖಾಂತರ ಜನಾಂಗದ ಮೂಲವನ್ನು ಹುಡುಕುತ್ತ ಹೊರಟರೆ, ಅದು ನಮ್ಮನ್ನು ಬೆಟ್ಟಗುಡ್ಡಗಳ ಕಡೆಗೆ ಕರೆದೊಯ್ಯುತ್ತದೆ. ಬುಡಕಟ್ಟುಗಳು ಮತ್ತು ಅಲೆಮಾರಿ ಸಮುದಾಯಗಳ ನೆಲೆ ಸರ್ವೇಸಾಮಾನ್ಯವಾಗಿ ಗುಡ್ಡಗಾಡು ಎಂಬ ಪ್ರಚಲಿತ ವಿಚಾರದೊಟ್ಟಿಗೆ ಈಗಾಗಲೇ ತಿಳಿದಿರುವಂತೆ ಕೊರಚ ಶಬ್ದದಲ್ಲಿರುವ 'ಕುರು' ಪದಕ್ಕೆ ತಮಿಳಿನಲ್ಲಿ ಗುಡ್ಡಗಾಡು-ಕಾಡು ಎಂಬರ್ಥವಿದೆ. ಈ ಅರ್ಥದ ಹಿನ್ನೆಲೆಯಲ್ಲಿ ನೋಡಿದರೆ ಕೊರಚರ ಮೂಲ ತಮಿಳುನಾಡು ಎಂಬುದು ಸ್ಪಷ್ಟವಾಗುತ್ತದೆ. ಈ ಕುರಿತಂತೆ ಈವರೆಗೆ ನಡೆದಿರುವ ಅಧ್ಯಯನಗಳೂ ಸಹ ಈ ವಿಷಯಕ್ಕೆ ಪೂರಕವಾಗಿಯೇ ಇರುವುದು ಕಂಡುಬರುತ್ತದೆ.

ಎಡ್ಗರ್ ಥರ್‌ಸ್ಟನ್ ಅವರು They are known as korava from extreme south to the north of the north arcot district where they are called korach or koracha and in the coded districts they become yerukula or yarakulu (Edgar Thruston, caste and tribes of southern India voll-III, page-439) ಎಂದು ಹೇಳಿದ್ದಾರೆ. ಹಾಗೆಯೇ ಮುಂದುವರೆದು Cognute with the kepmories is a class of korava pujaris (as they cell the mselves in their own village) wheo emenating from one small hamlet in the Tanjavore district are spread more or less all over India (Edgar Thruston, caste and tribes of southern India voll-III, page-440) ಎಂದು ಹೇಳಿರುವುದು ಕೂಡ ಕೊರಚರು ತಮಿಳುನಾಡಿನ ಮೂಲದವರು ಎಂಬ ನಿಟ್ಟಿನಲ್ಲಿ ಗಮನಾರ್ಹವಾದ ಅಂಶವಾಗಿದೆ.

'ಫ್ರಾನ್ಸಿಸ್' ಅವರು A gipsy tribe found all over the Tamil country but chiefly in kurnool, salam, coimbatare and south arcot Quoted from (Edgar Thruston, caste and tribes of southern India voll-III, page-441) ಎಂದು ಕೊರಚರ ಮೂಲ ನೆಲೆಯನ್ನು ತಮಿಳುನಾಡಿನಲ್ಲೇ ಗುರುತಿಸಿದ್ದಾರೆ. ಹಾಗೇ 'ಬುಚನನ್' ಅವರು Koravaras a mild tribe of

coimbatare Quoted from R.E. Enthoran, caste and tribes of bombay, vol-II page-267) ಎಂದು ಹೇಳಿರುವುದು ಸಹ ಕೊರಚರು ತಮಿಳುನಾಡಿನ ಮೂಲದವರು ಎಂಬ ವಾದವನ್ನು ಪುಷ್ಟೀಕರಿಸುತ್ತದೆ. ಇವರಂತೆಯೇ "ಹಿರೇಂದ್ರ ಕೆ. ರಕ್ಷಿತ್" ಅವರು The rest are the idigu a drawing caste the bestha a fisherman group and the yerukula, a migrates group tribe are a part of the larger papulation found also in Tamilnadu and Mysore where they are know as korachu, korama etc. (Hirendra K. Rakshit, Language culture and race in south India, page-223) ಎಂದು ಕೊರಚರು ತಮಿಳುನಾಡಿನಲ್ಲಿ ಹೆಚ್ಚಾಗಿ ಕಂಡುಬರುತ್ತಿದ್ದು ಮೈಸೂರು ಪ್ರಾಂತದಲ್ಲಿ ಕೊರಚ, ಕೊರಮ ಎಂದು ಇವರನ್ನು ಕರೆಯುತ್ತಾರೆ ಎಂಬುದು ತಿಳಿದುಬರುತ್ತದೆ.

R.E. Enthovan ಅವರು They are immigrants from mysore and Tamil speaking districts of Karnool, Salam, South Arcot and coimbatore in Madras where they generally known by the name of Kuruvan (R.E. Enthovan, the caste and tribe of bombay, voll-Ii, p-267) ಎಂದೇಳಿರುವುದು ಕೂಡ ಕುರುವ ಜನರು ತಮಿಳುನಾಡಿನಿಂದ ಬೇರೆ ಬೇರೆ ಕಡೆಗೆ ಚದುರಿದ್ದ ಇವರನ್ನು ಕುರುವನ್ ಎಂದು ಕರೆಯುತ್ತಾರೆ ಎಂಬ ಸಂಗತಿಯನ್ನು ದೃಢಪಡಿಸುತ್ತಾರೆ.

ಈ ಹಿನ್ನೆಲೆಯಲ್ಲಿ ಓಪರ್ಟ್, ಶ್ರೀ ಪುಷ್ಪರಾವ್ ನಾಯ್ಡು, ಸಿಂಹಾದ್ರಿ, ಜಿಲ್‌ಪೂರ್ ಮುಂತಾದ ಅನೇಕ ವಿದ್ವಾಂಸರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಕೊರಚರು ತಮಿಳುನಾಡಿನ ಮೂಲದವರೆಂದು ನಿರ್ಧರಿಸಬಹುದಾಗಿದೆ. ಇವರು ಮೂಲತಃ ತಮಿಳುನಾಡಿನ ಯಾವುದೋ ಒಂದು ಗುಡ್ಡಗಾಡು ನೆಲೆಯಿಂದ ಹೊರಟು ಆಂಧ್ರ ಪ್ರದೇಶ ಕರ್ನಾಟಕಗಳಿಗೆ ವಲಸೆ ಬಂದಿರುವುದರ ಸಾಧ್ಯತೆಗಳು ಇವೆ. ಎಂತಲೇ ಇವರ ಭಾಷೆಯು ಸ್ಪಷ್ಟವಾಗಿ ತಮಿಳು ಮೂಲದ ಅನೇಕ ಭಾಷಿಕಾಂಶಗಳನ್ನು ಹೊಂದಿರುವುದು ಕೂಡ ಇವರು ತಮಿಳು ನಾಡಿನವರು ಎಂಬ ವಾದಕ್ಕೆ ಪ್ರೇರಣೆ ನೀಡುತ್ತದೆ.

ಈ ಎಲ್ಲ ಆಧಾರಗಳು ತಮಿಳುನಾಡಿನ ತಂಜಾವೂರು, ದಕ್ಷಿಣ ಆರ್ಕಾಟ್ ತಿರುಚನಾಪಳ್ಳಿ, ಸೇಲಂ ಮತ್ತು ಕೊಯಮತ್ತೂರು ಜಿಲ್ಲೆಗಳು ಕೊರಚರ ಮೂಲ ನೆಲೆಗಳು ಎಂಬುದಕ್ಕೆ ಸಾಕಷ್ಟು ಪುರಾವೆಗಳನ್ನು ಒದಗಿಸುತ್ತದೆ. ಇದಕ್ಕೆ ಪೂರಕವಾಗಿ ಕೊರಚ ಜನಾಂಗದ ವಕ್ತೃಗಳು ಹೇಳಿರುವ ಮಾತುಗಳು ಕೂಡ ಇರುವುದು ಮಹತ್ವಪೂರ್ಣವಾದ ಸಂಗತಿಯಾಗಿದೆ. ಈ ಸಮುದಾಯದ ಬಹಳಷ್ಟು ಹಿರಿಯರು ತಾವು ತಮಿಳು ಮೂಲದವರಾಗಿದ್ದು ಆಂಧ್ರದ ಕಡೆಯಿಂದ ಕರ್ನಾಟಕಕ್ಕೆ ವಲಸೆ ಬಂದವರೆಂದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ದೊರೆತಂತ ಮಾಹಿತಿಯಾಗಿದೆ. ಮೂಲತಃ ಅಲೆಮಾರಿ ಬುಡಕಟ್ಟು ಸಮುದಾಯಕ್ಕೆ ಸೇರಿದವರಾದ ಇವರು ವಿದ್ವಾಂಸರು ಗುರುತಿಸುವಂತೆ ಬೆಟ್ಟಗುಡ್ಡಗಳಲ್ಲಿ ವಾಸಿಸುತ್ತಿದ್ದು ಕಾಲಾಂತರದಲ್ಲಿ ಅನೇಕ ಕಾರಣಗಳಿಂದ ತಮ್ಮ ಮೂಲ ನೆಲೆಯಿಂದ ಚದುರಿ ಆಂಧ್ರದ ಗೋದಾವರಿ ಸೀಮೆಯ ಕಡೆಗೆ ಹೋಗಿರಬಹುದು. ತಮ್ಮ ಅಲೆಮಾರಿ ಪ್ರವೃತ್ತಿಯಿಂದ ಮತ್ತು ಹೊಟ್ಟೆಪಾಡಿನ ಅನಿವಾರ್ಯತೆಯಿಂದ ಅಲ್ಲಿಂದ ಹೊರಟು, ಕರ್ನಾಟಕ, ಕೇರಳ, ಮಹಾರಾಷ್ಟ್ರ

ಹೀಗೆ ದೇಶದ ನಾನಾ ಭಾಗಗಳಿಗೆ ಚದುರಿ ಹೋಗಿ ನೆಲೆಯನ್ನು ಕಂಡುಕೊಂಡಿದ್ದಾರೆ. ಕರ್ನಾಟಕದಲ್ಲಿ ಇವರು ಬಳ್ಳಾರಿ, ಕೋಲಾರ, ದಾವಣಗೆರೆ, ಚಿತ್ರದುರ್ಗ, ರಾಯಚೂರು, ಶಿವಮೊಗ್ಗ, ಬೆಂಗಳೂರು, ಮೈಸೂರು, ಚಿಕ್ಕಮಗಳೂರು ಇತ್ಯಾದಿ ಜಿಲ್ಲೆಗಳಲ್ಲಿ ಕಂಡುಬರುತ್ತಾರೆ.

೩.೧.೨. ಕೊರಚರ ಕುರಿತಾದ ಪೌರಾಣಿಕ ಮತ್ತು ಐತಿಹ್ಯಗಳು

ಕೊರಚರು ಬಹು ಕಾಲದಿಂದಲೂ ಇದ್ದರೆಂಬುದಕ್ಕೆ ಪೌರಾಣಿಕವಾಗಿ ಮತ್ತು ಚಾರಿತ್ರಿಕವಾಗಿ ಅನೇಕ ಅಂಶಗಳು ದೊರೆಯುತ್ತವೆ. ಬಹುತೇಕ ಬುಡಕಟ್ಟುಗಳಲ್ಲಿ ಒಂದೊಂದು ಜನಾಂಗವೂ ತನ್ನ ಜನಾಂಗದ ಮೂಲವೇ ಅತ್ಯಂತ ಪ್ರಾಚೀನವಾದುದು ಮತ್ತು ಪವಿತ್ರವಾದುದು ಎಂಬುದನ್ನು ಸಾರುವಲ್ಲಿ ಪೌರಾಣಿಕ ಕಲ್ಪನೆಗಳು ಸೃಷ್ಟಿಗೊಂಡವು. ಹಾಗೆಯೇ ಪ್ರತಿಯೊಂದು ಜನಾಂಗವು ತಮಗೊಬ್ಬ ಮೂಲ ಪುರುಷನನ್ನು ಗುರುತಿಸಿಕೊಳ್ಳಲು ಹವಣಿಸುತ್ತವೆ. ಈ ಮಹಾಪುರುಷರಿಂದಲೇ ತಮ್ಮ ಜನಾಂಗ ಪ್ರಾರಂಭವಾಯಿತ್ತೆಂದು ಕಥೆ ಕಟ್ಟಿ ಹೇಳುತ್ತಾರೆ. ಇದರ ಜೊತೆಗೆ ಸಾಂಸ್ಕೃತಿಕ ವೀರರನ್ನು ಗುರುತಿಸಿಕೊಂಡು ತಮ್ಮ ಜನಾಂಗವು ಅಭಿವೃದ್ಧಿ ಹೊಂದಿರುವುದರ ಕುರಿತಾಗಿ ಹೇಳುತ್ತಾರೆ ಎಂಬುದನ್ನು ಪ್ರಮುಖವಾಗಿ ಗುರುತಿಸಬೇಕು.

ಜಗತ್ತಿನಾದ್ಯಂತ ಮಾನವನ ಉಗಮ ಮತ್ತು ವಿಕಾಸದ ಬಗೆಗೆ ಚಿಂತನ ಮಂಥನಗಳು ನಡೆದಿವೆ. ಮಂಗನಿಂದ ಮಾನವನಾದುದರ ಬಗೆಗೆ ಡಾರ್ವಿನ್ನನು ತನ್ನ ವಾದವನ್ನು ಮಂಡಿಸಿದರೆ, ಇತಿಹಾಸವು ಮಾನವನ ಉಗಮ ಮತ್ತು ಬೆಳವಣಿಗೆಯ ಎಲ್ಲ ಹಂತಗಳ ವಿಮೋಚನೆಯನ್ನು ಕಾಲದಿಂದ ಕಾಲಕ್ಕೆ ಆದಂತಹ ಬದಲಾವಣೆಗಳನ್ನು ತಿಳಿಸುತ್ತದೆ. ಈ ಹಿನ್ನೆಲೆಯಲ್ಲಿ ಪರಂಪರಾಗತವಾಗಿ ಸಾಗಿ ಬಂದಿರುವ ಪುರಾಣಗಳು, ಐತಿಹ್ಯಗಳು, ಜನಸಮುದಾಯದ ಸಾಂಸ್ಕೃತಿಕ ಅಧ್ಯಯನದಲ್ಲಿ ಮತ್ತು ಸಮುದಾಯಗಳ ಸ್ಮೃತಿಯಲ್ಲಿ ಮಹತ್ವಪೂರ್ಣವಾದ ಪಾತ್ರವನ್ನು ನಿರ್ವಹಿಸುತ್ತವೆ. ಸಮುದಾಯದ ಮೂಲ, ಹಿನ್ನೆಲೆ, ಬದುಕಿನ ರೀತಿ–ನೀತಿಗಳೇ ಮೊದಲಾದವನ್ನು ಈ ಪುರಾಣಗಳು ಮತ್ತು ಐತಿಹ್ಯಗಳು ತಮ್ಮದೇ ಆದ ನೆಲೆ–ನಿಲುವುಗಳಲ್ಲಿ ಕಟ್ಟಿಕೊಡುತ್ತವೆ. ಒಂದು ಕಾಲಕ್ಕೆ ಪುರಾಣಗಳೆಂದರೆ ಅದು ಕಟ್ಟುಕಥೆ ಅದು ವಿಜ್ಞಾನ ಪೂರ್ವ ಯುಗದ ಪ್ರಾಗೈತಿಹಾಸಿಕ ಕಾಲದ ಅವಿದ್ಯಾವಂತ, ಅನಾಗರಿಕ ಸಮುದಾಯಗಳ ಕಾಲ್ಪನಿಕ ಸೃಷ್ಟಿ ಎಂಬ ಅಭಿಪ್ರಾಯ ಇತ್ತು ಇಂದು ಪ್ರತಿಯೊಂದು ಸಮುದಾಯದ ಅಧ್ಯಯನ ಮಾಡಬೇಕಾದರೆ ಆ ಸಮುದಾಯಗಳಲ್ಲಿರುವ ಪುರಾಣಗಳ ಅಧ್ಯಯನ ಅತ್ಯಂತ ಅವಶ್ಯಕವೆಂದು ವಿದ್ವಾಂಸರು ಮನಗಂಡಿದ್ದಾರೆ. ಪುರಾಣಗಳೆಂದರೆ ಅವು ಕಟ್ಟುಕಥೆಗಳಲ್ಲಿ ಅಥವಾ ವಿಜ್ಞಾನ ಪೂರ್ವಯುಗದ ಪ್ರಾಗೈತಿಹಾಸಿಕ ಕಾಲದ ಅನಕ್ಷರಸ್ಥ ಜನಸಮುದಾಯಗಳ ಕಾಲ್ಪನಿಕ ಸೃಷ್ಟಿಯೂ ಅಲ್ಲ. ಒಂದು ಸಮುದಾಯದ ಸಂದೇಶ, ಘಟನೆ, ಇತಿಹಾಸ, ಪರಂಪರೆ, ಸಂಸ್ಕೃತಿ, ವಿಶಿಷ್ಟ ನಂಬಿಕೆಗಳು ಮತ್ತು ಅವುಗಳಿಂದ ರೂಪುಗೊಂಡ ಸೃಜನಶೀಲ ಸೃಷ್ಟಿಗಳು ಆಗಿವೆ. ಮತ್ತು ಸುತ್ತಲ ಜಗತ್ತನ್ನು ಕುರಿತು ಆ ಸಮುದಾಯಗಳು ಕಂಡುಕೊಂಡ ದರ್ಶನ ಹಾಗೂ ಕಾಪಾಡಿಕೊಂಡು ಬಂದ ಮೌಲ್ಯಗಳಿಗೆಲ್ಲ ಪುರಾಣಗಳೇ ಮೂಲ ಆಕರಗಳಾಗಿರುತ್ತವೆ. (ಗಂಗಾಧರ ದೈವಜ್ಞ, ಬುಡಕಟ್ಟು ಸಮಾಜ ಹುಟ್ಟು–ಸಾವಿನ ನಡುವೆ, ಪುಟ–೩)

ಪ್ರಕೃತಿಯ ನಿಗೂಡತೆಗೆ ಉತ್ತರ ಸಿಗದೆ ಇದ್ದಾಗ ಆ ಎಲ್ಲವನ್ನು ದೇವರು ಮತ್ತು ಧರ್ಮದ ಹೆಸರಿನಲ್ಲಿ ನಂಬಿ ಜನ ಅದರ ನೆರಳಿನಲ್ಲಿಯೇ ಬದುಕಿದರು. ಆ ನಿಗೂಡ ಅಂಶಗಳ ಬಗೆಗೆ ಭಕ್ತಿ ಮತ್ತು ಗೌರವವನ್ನು ಬೆಳಸಿಕೊಂಡರು. ಆ ಅತೀಂದ್ರಿಯ ಶಕ್ತಿಗೆ ಮಣಿದು ಮನುಷ್ಯನ ಹುಟ್ಟು-ಸಾವಿಗೆ ಬದುಕಿನ ಎಲ್ಲ ಆಗು-ಹೋಗುಗಳಿಗೆ ಅದೇ ಕಾರಣವೆಂದು ನಂಬಿದರು. ಆ ನಂಬಿಕೆಗಳೇ ಮುಂದೆ ಹಲವು ರೂಪದ ಕಥೆ ಕಾವ್ಯಗಳಾಗಿ ರೂಪಗೊಂಡವು. ಅವು ಜಾತಿಯ ಭಾಷೆಯ ವಿಷಯಗಳನ್ನು ಒಳಗೊಂಡವು. ಈ ನಿಟ್ಟಿನಲ್ಲಿ ವಿಚಾರ ಮಾಡಿ ನೋಡಿದಾಗ ಪ್ರತಿಯೊಂದು ಗುಂಪು ತಮ್ಮನ್ನು ಅತ್ಯಂತ ಪ್ರಾಚೀನವಾಗಿ ಗುರುತಿಸಿಕೊಳ್ಳಲು ಮೇಲಾಗಿ ರೂಪಿಸಿಕೊಳ್ಳಲು ಪ್ರಯತ್ನಿಸಿವೆ. ಎಂತಲೇ ಕೊರಚ ಸಮುದಾಯದಲ್ಲಿ ಕೂಡ ತಮ್ಮ ಸೃಷ್ಟಿ ಮೂಲವನ್ನು ಕುರಿತಾದ ಕುತೂಹಲಕರ ಪುರಾಣ ಐತಿಹ್ಯಗಳು ಮನೆ ಮಾಡಿವೆ. ಅವುಗಳನ್ನು ಅವಲೋಕಿಸುವುದು ಕೂಡ ಈ ಅಧ್ಯಯನದ ವಸ್ತುನಿಷ್ಠತೆಯ ದೃಷ್ಟಿಯಿಂದ ಅಗತ್ಯವಾದದ್ದೇ ಆಗಿದೆ. ಮತ್ತು ಸಾಮಾಜಿಕ ಸಂದರ್ಭದಲ್ಲಿ ಇವು ಅಗತ್ಯವೂ ಆಗಿದೆ. ಈ ವಿಷಯದಲ್ಲಿ ಕೊರಚರು ಹಿಂದೆ ಬಿದ್ದಿಲ್ಲ. ತಮ್ಮ ಜಾತಿಯ ಹುಟ್ಟಿನ ಬಗೆಗೆ ಭಾಷೆಯ ಬಗೆಗೆ ಹಲವು ಕಥೆಗಳನ್ನು ರೂಪಿಸಿಕೊಂಡು ಸಾಮಾಜಿಕವಾಗಿ ಉತ್ತಮ ಸ್ಥಾನ-ಮಾನ ಗಳಿಸಿಕೊಳ್ಳುವ ಪ್ರಯತ್ನ ಮಾಡಿದ್ದಾರೆ. ಜಾತಿಯ ಅಥವಾ ಆ ಪಂಗಡದ ಹುಟ್ಟು ದೈವ ನಿರ್ಮಿತವಾದದ್ದು ಎಂಬುದೇ ಅವರ ನಂಬಿಕೆ. ಈ ಬಗೆಯ ನಂಬಿಕೆ ಹಲವಾರು ಕಥೆಗಳಲ್ಲಿ ಕಂಡುಬರುತ್ತವೆ. ಅಂತ ಕಥೆಗಳಲ್ಲೊಂದು ಪಾರ್ವತಿ ಕೊರವಂಜಿ ಕಥೆ ಪಾರ್ವತಿಯ ವಂಶೀಯರೇ ಕೊರವರಾದದ್ದು (ಜಾನಪದ ಸಾಹಿತ್ಯ ದರ್ಶನ ಭಾಗ-೬, ಪು.೨೦೦).

ಶ್ರೀ ಬಿ.ವಿ. ಮಲ್ಲಾಪುರ ಅವರು ಇಂಥದ್ದೇ ಕಥೆಯನ್ನು ಉದಾಹರಿಸುವುದರ ಜೊತೆಗೆ "ಅರ್ಜುನನ ತಪಸ್ಸನ್ನು ಪರೀಕ್ಷಿಸಲು ಶಿವನು ಕಿರಾತನಾದಾಗ ಪಾರ್ವತಿ ಕೊರವಂಜಿಯ ವೇಷ ಧರಿಸಿದಳು ಅವಳೇ ಮುಂದೆ ಕೊರವಿ ಎಂದು ಹೇಳುವವರೂ ಇದ್ದಾರೆ. (ಜಾನಪದ ಸಾಹಿತ್ಯ ದರ್ಶನ ಭಾಗ-೬, ಪು.೨೦೦) ಒಮ್ಮೆ ಶಿವನ ಹೆಂಡತಿ ಪಾರ್ವತಿಯು ಒಂದು ಸರ್ಪವನ್ನು ಸೀಳಿ ಅದರ ಹೊಟ್ಟೆಯಲ್ಲಿ ವಜ್ರ-ವೈಢೂರ್ಯಗಳನ್ನು ತುಂಬಿ ಅದನ್ನು ತನ್ನ ಮಗುವಿನಂತೆ ಭಾವಿಸಿ ಅದಕ್ಕೊಂದು ತೊಟ್ಟಿಲನ್ನು ಮಾಡಿಕೊಡೆಂದು ಮೇದರವನನ್ನು ಕೇಳಿದರೆ ಹಾವಿಗೆ ಹೆದರಿದ. ಅದೇ ಮಾತನ್ನು ಪಾರ್ವತಿಯು ಕೊರಚನಿಗೆ ಹೇಳುತ್ತಾಳೆ. ತಕ್ಷಣ ಕೊರಚರವನು ತೊಟ್ಟಿಲನ್ನು ಮಾಡಿಕೊಡುತ್ತಾನೆ. ಮೇದಾರವನು ಮಾಡದಿದ್ದ ಕೆಲಸವನ್ನು ಶಿರಸಾವಹಿಸಿ ಮಾಡಿಕೊಟ್ಟ ಕಾರಣವಾಗಿ ಪಾರ್ವತಿ ಸಂತೃಪ್ತಳಾಗಿ ಕೊರಚರವನಿಗೆ ತನ್ನ ಮಂತ್ರದಂಡವನ್ನು ಬುಟ್ಟಿಯನ್ನು ಮೊರವನ್ನು ನೀಡಿ ಭವಿಷ್ಯ ಹೇಳುವುದನ್ನು ಅನುಗ್ರಹಿಸುತ್ತಾಳೆ. ಇದರಿಂದ ಕೊರಚರ ಹೆಣ್ಣು ಮಕ್ಕಳು ಕಣಿ ಹೇಳುವುದನ್ನು ರೂಢಿಸಿಕೊಂಡರೆಂದು ತಿಳಿಸಲಾಗಿದೆ.

ಮಹಾಭಾರತದ ಕೌರವರು ಮತ್ತು ಪಾಂಡವರ ನಡುವಿನ ವೈಮನಸ್ಸು ದ್ವೇಷ ದಿನದಿಂದ ದಿನಕ್ಕೆ ಬೆಳೆದು ಧರ್ಮರಾಜನು ಸೋದರರ ಜೊತೆ ವನವಾಸಕ್ಕೆ ಹೋದಾಗ ಅವನನ್ನು ಪ್ರೀತಿಸಿದ

ಓರ್ವ ಹೆಣ್ಣು ಮಗಳು ಕಣಿ ಹೇಳುವ ವೇಷ ಧರಿಸಿ ಹೋಗಿ ಅವನನ್ನು ವರಿಸಿದಳಂತೆ ಆಕೆಯ ಸಂತಾನವೇ ಕೊರವರೆಂದು ನಂಬಲಾಗುತ್ತದೆ. (ಮಾನಸ, ಕೊರವರ ಸಂಸ್ಕೃತಿ, ಪುಟ–೨೯–೩೦) ಇಂದಿನ ಕೊರಚರ/ಕೊರವರ ಚಾಣಾಕ್ಷತನ ಹಾಗೂ ಸಾಹಸಗಳನ್ನು ಹೋಲುವ ಕಾರ್ಯನಿರತ, 'ಕುರು' ಎಂಬ ಜನಾಂಗದ ಹೆಸರು ಮಹಾಭಾರತದಲ್ಲಿ ಬರುವುದಾದರೂ ಮೇಲಿನ ಕಥೆಯನ್ನು ನಂಬಲು ಅನುಮಾನಿಸಬೇಕಾಗುತ್ತದೆ. ಕೊರವರು/ಕೊರಚರು ಮೂಲತಃ ಉತ್ತರವರೆಂದು ಸೂಚಿಸುವ ಪ್ರಯತ್ನ ಇಲ್ಲಿದೆ. ಇವೆಲ್ಲ ಚಮತ್ಕಾರವಾದ ವಾದವೇ ಹೊರತು ವಾಸ್ತವಾಂಶವಲ್ಲ. ಕೊರಚರು ದಕ್ಷಿಣದ ದ್ರಾವಿಡ ವರ್ಗಕ್ಕೆ ಸೇರಿದವರೆಂಬುದನ್ನು ಸೂಚಿಸುವ ಅನೇಕ ಪುರಾವೆಗಳು ಇವೆ. ಜಾತಿಯೇ ಪ್ರಧಾನವಾದ ಸಮಾಜದಲ್ಲಿ ರಾಜಮಹಾರಾಜರಿಗೆ ಕಣಿ ಹೇಳುತ್ತಿದ್ದ ಈ ಜನ ತಮ್ಮನ್ನು ಕೀಳು ಎಂದು ಹೇಳಿಕೊಳ್ಳುವಂತಿಲ್ಲ. ಆದ್ದರಿಂದ ತಮ್ಮ ಬುಡಕಟ್ಟಿಗೆ ಸಾಮಾಜಿಕವಾಗಿ ಗೌರವ ರೂಢಿಸಿಕೊಳ್ಳಲು ಕುರುವಂಶದ ಜೊತೆ ತಮ್ಮ ಬಂಧುತ್ವವನ್ನು ಗುರುತಿಸಿಕೊಂಡು ಕಥೆ ಕಟ್ಟಿರಬಹುದು.

ಹಿಂದೆ ದಶರಥ ಮತ್ತು ಕೌಸಲ್ಯದೇವಿಯರಿಗೆ ಮಕ್ಕಳಿರಲಿಲ್ಲ. ಅವರು ಮಕ್ಕಳಿಗಾಗಿ ಹಗಲಿರುಳೂ ಪರಿತಪಿಸುತ್ತಿದ್ದರು. ಶಿವ–ಪಾರ್ವತಿಯರ ಪ್ರಾರ್ಥನೆಯಲ್ಲಿಯ ಕಾಲ ಕಳೆಯುತ್ತಿದ್ದರು. ಇವರ ಭಕ್ತಿಯ ಮೊರೆ ಕೈಲಾಸದವರೆಗೂ ಮುಟ್ಟಿತು. ಶಿವ–ಪಾರ್ವತಿಯರು ಭೂಲೋಕಕ್ಕೆ ಬರುವಾಗ ಶಿವ ಕೊರಮನ ವೇಷವನ್ನು ಪಾರ್ವತಿಯು ಕೊರವಂಜಿಯ ವೇಷ ಧರಿಸಿ ಬಂದರು. ಪಟ್ಟಣದ ಹೊರಗೆ ಒಂದು ಮರದಡಿಯಲ್ಲಿ ಶಿವನನ್ನು ಬಿಟ್ಟು ತಾನೊಬ್ಬಳೇ ತಲೆಯ ಮೇಲೆ ಬಿದಿರಿನ ಬುಟ್ಟಿಯನ್ನು ಹೊತ್ತು ಗಗ್ರದ ಕೋಲನ್ನು (ಮಂತ್ರದ ಕೋಲು) ಕೈಯಲ್ಲಿ ಹಿಡಿದು ಪಟ್ಟಣದ ರಾಜಬೀದಿಯಲ್ಲಿ ಕಣಿ ಹೇಳುತ್ತೇನೆಂದು ಸಾರುತ್ತ ಬಂದಳು. ಆಕೆಯನ್ನು ನೋಡಿದ ರಾಜರು ಪರಿವಾರದವರು ಆಕೆಯನ್ನು ಕರೆತಂದರು. ಆ ಕೊರವಂಜಿ ಕೌಸಲ್ಯಾದೇವಿಯ ಕೈ ನೋಡಿ ಕಣಿ ಹೇಳಿ ಮಕ್ಕಳ ಫಲಕೊಟ್ಟು ಹೊರಟಳು. ಮಹಾರಾಣಿ ಮುತ್ತು, ರತ್ನ, ವಜ್ರ, ವೈಢೂರ್ಯಗಳನ್ನೆಲ್ಲ ಕೊಡಲು ಹೋದರೂ ಆಕೆ ಅವೆಲ್ಲವನ್ನು ತಿರಸ್ಕರಿಸಿ ಅಮ್ಮ ಮುತ್ತು, ರತ್ನ, ವಜ್ರ, ವೈಢೂರ್ಯಗಳೆಲ್ಲ ನಮ್ಮ ಮನೆಯ ಹುಳುಕು ಜೋಳ ಇದೆಲ್ಲ ನನಗೆ ಬೇಡ ನಿನ್ನಲ್ಲಿಯೇ ಇರಲಿ. ಫಲ ಆದ ನಂತರ ಕೊಡುವಿಯಂತೆ ಎಂದು ಹೇಳಿ ಹೊರಟಳಂತೆ. ಅದೇ ಸಮಯಕ್ಕೆ ಈಶ್ವರ ಒಂದು ಬಿದಿರು ದಬ್ಬೆಯನ್ನು ಹೆಗಲ ಮೇಲಿಟ್ಟುಕೊಂಡು ಮಚ್ಚನ್ನು ಸೊಂಟದಲ್ಲಿ ಸಿಕ್ಕಿಸಿಕೊಂಡು ಸಿಂಗೀ ಓ ಸಿಂಗೀ ಎಂದು ಕೂಗುತ್ತ ಪಟ್ಟಣದ ಬೀದಿಗಳಲ್ಲಿ ಕೊರವಂಜಿಯನ್ನು ಹುಡುಕುತ್ತ ಬಂದು ಆಕೆಯನ್ನು ಕೂಡಿಕೊಂಡು ಕೈಲಾಸದತ್ತ ಹೋಗುವಾಗ ಪಾರ್ವತಿ ಶಿವನನ್ನು ಕುರಿತು ಸ್ವಾಮಿ ನಾವು ಈ ವೇಷ ಧರಿಸಿದ್ದಕ್ಕೆ ಗುರುತು ಉಳಿಸಬೇಕು ಎಂದಾಗ ಶಿವ ಇಬ್ಬರು ಮಕ್ಕಳನ್ನು ಸೃಷ್ಟಿಸಿ ತನ್ನ ಸೊಂಟದಲ್ಲಿದ್ದ ಮಚ್ಚನ್ನು ತೆಗೆದು ಆ ಮಚ್ಚಿಗೆ ಗೆಜ್ಜೆ ಕಟ್ಟಿ ಅಂಗೈ ಮೇಲೆ ಕುಣಿಸುತ್ತ ಆ ಮಕ್ಕಳಿಗೆ ಮಚ್ಚು ಹಿಡಿಯಲು ಹೇಳಿದನಂತೆ. ಒಬ್ಬನು ಮಚ್ಚಿನ ಮೇಲ್ಭಾಗವನ್ನು ಹಿಡಿದರೆ ಮತ್ತೊಬ್ಬನು ಕೆಳಭಾಗವನ್ನು ಹಿಡಿದನಂತೆ. ಅದರಂತೆಯೇ ತನ್ನ ಹೆಗಲ ಮೇಲೆ ಬಿದಿರ ದಬ್ಬೆಯನ್ನು ಹಿಡಿಯಲು ಹೇಳಿದಾಗ ಮಚ್ಚಿನ ಮೇಲ್ಭಾಗ ಹಿಡಿದ ಹುಡುಗ ದಬ್ಬೆಯ ತುದಿಯನ್ನು ಇನ್ನೊ ಒಬ್ಬ ದಬ್ಬೆಯ ಬುಡಭಾಗವನ್ನು

ಹಿಡಿದನಂತೆ. ಮಚ್ಚಿನ ಭಾಗ ಹಿಡಿದವನಿಗೆ ಗಂಗೆ ಮಗನಾಗು ಎಂದು ವರವನ್ನು ಕೊಟ್ಟು ಇಬ್ಬರು ಹೆಣ್ಣನ್ನು ಸೃಷ್ಟಿಸಿ ಅವರಿಬ್ಬರಿಗೆ ಒಪ್ಪಿಸಿ ಗೌರಿಯ ಮಗ ಕೊರಮ (ಕೊರಚ, ಕೊರವ) ನಾಗಲಿ, ಗಂಗೆಯ ಮಗ ಮೇದಾರನಾಗಲಿ ಎಂದು ಹರಸಿದರಂತೆ. (ಮಾನಸ, ಕೊರವ ಸಂಸ್ಕೃತಿ, ಪುಟ– ೩೧–೩೨)

ಎಡ್ಗರ್ ಥರ್ಸ್ಟನ್ ಅವರು ಸಂಗ್ರಹಿಸಿದ ಐತಿಹ್ಯವೊಂದು ಈ ರೀತಿಯಾಗಿ ಹೇಳುತ್ತದೆ. ಸೃಷ್ಟಿಕರ್ತನಾದ ಬ್ರಹ್ಮನಿಂದ ನೇರವಾಗಿ ಭೂಮಿಗೆ ಬಂದ ಅಗ್ನಿ ಶ್ವೇತುವಿನ ಮಗ ವೇನಾ (ವೇಣುಡು) ಇಡೀ ಭೂಮಂಡಲವನ್ನು ಆಳುತ್ತಿದ್ದನು. ಆದರೆ ಆತನ ನಂತರ ಸಿಂಹಾಸನವನ್ನು ಏರಲು ಆತನಿಗೆ ಉತ್ತರಾಧಿಕಾರಿಗಳಿರಲಿಲ್ಲ. ಬಹಳ ಕಾಲ ವೈಭವೋಪೇತವಾಗಿ ರಾಜ್ಯವಾಳಿದ ವೇನಾ ಸತ್ತುಹೋದ. ಅವನಿಗೆ ಮಕ್ಕಳಿಲ್ಲವಾದ್ದರಿಂದ ಸಿಂಹಾಸನಕ್ಕೆ ಯಾರು ಎಂಬ ಪ್ರಶ್ನೆ ತಲೆದೋರಿದಾಗ ಆತನ ದೇಹವನ್ನು ಮಣ್ಣಲ್ಲಿ ಹೂಳದೆ, ಬೆಂಕಿಯಲ್ಲಿ ಸುಡದೆ ರಕ್ಷಿಸಿಡಲಾಯಿತು. ಈ ಜಟಿಲ ಸಮಸ್ಯೆಯನ್ನು ಬಗೆಹರಿಸಲು ಏಳು ಗ್ರಹಗಳು ಕೂಡಿ ವೇನುವಿನ ಮೃತದೇಹದ ಬಲತೊಡೆಯಿಂದ ಒಂದು ಜೀವಿಯನ್ನು ಸೃಷ್ಟಿಸಿದರು. ಆದರೆ ಸೃಷ್ಟಿಯನ್ನು ಪಡೆದ ಜೀವಿಯು ವಿಕೃತ ಶರೀರವನ್ನು ಹೊಂದಿ ಮುಖವು ಅತ್ಯಂತ ವಿಕಾರವಾಗಿತ್ತು ಆದ್ದರಿಂದ ಅವನನ್ನು ಸಿಂಹಾಸದ ಮೇಲೆ ಕುಳ್ಳಿರಿಸಲಿಲ್ಲ ಈ ವಿಕಾರರೂಪಿಯೇ ನಿಶಧು.

ನಂತರ ಏಳು ಗ್ರಹಗಳು ಮತ್ತೊಮ್ಮೆ ವೇನುವಿನ ಬಲತೊಡೆಯಿಂದ ಮತ್ತೊಂದು ಜೀವಿಯನ್ನು ಸೃಷ್ಟಿಸಿದರು. ಈ ಜೀವಿಯು ಅತ್ಯಂತ ಸುಂದರವಾಗಿತ್ತು. ಈತನಿಗೆ ಪೃತು ಚಕ್ರವರ್ತಿ ಎಂದು ನಾಮಕರಣ ಮಾಡಿ ಸಿಂಹಾಸನದ ಮೇಲೆ ಕುಳ್ಳಿರಿಸಿದರು. ಇದರಿಂದ ಹಿರಿಯಣ್ಣನಾದ ನಿಶಧು ಅಸಂತುಷ್ಟನಾಗಿ ನನಗೆ ಅಧಿಕಾರವಿಲ್ಲವೆಂದಾದರೆ ನನ್ನನ್ನು ಸೃಷ್ಟಿಸಿದ್ದಾರು ಏಕೆ? ಎಂದು ಗ್ರಹಗಳಿಗೆ ಪ್ರಶ್ನಿಸಿದಾಗ ಈತನ ನ್ಯಾಯಬದ್ಧ ಮನುವಿಗೆ ಓಗೊಟ್ಟು ದೇವರು ಈಗಾಗಲೇ ಪೃತು ಚಕ್ರವರ್ತಿಯು ಸಿಂಹಾಸನಾಧೀಶ ಆಗಿರುವುದರಿಂದ ಈಗ ನಿನ್ನನ್ನು ಸಿಂಹಾಸನದಲ್ಲಿ ಕುಳ್ಳಿರಿಸಲು ಬರುವುದಿಲ್ಲ. ನೀನು ನಾಡನ್ನು ಆಳುವುದರ ಬದಲು ಕಾಡನ್ನು ಆಳು ಎಂಬುದಾಗಿ ಹೇಳಿ ನಿಶಧುವನ್ನು ಕಾಡಿಗೆ ಕಳುಹಿಸಿದರು. ಅಂದಿನಿಂದ ನಿಶಧು ಕಾಡಿಗೆ ರಾಜನಾದವನು. ಇವನಿಗೆ ಬೋಯ, ಚೆಂಚು, ಯಾನಾಡಿ ಮತ್ತು ಕೊರಚ ಎಂಬ ನಾಲ್ಕು ಮಕ್ಕಳು ಇವರಲ್ಲಿ ಬೋಯರು ಮಾತ್ರವೇ ಮಗನಾಗಿದ್ದು ಚೆಂಚು, ಯಾನಾಡಿ ಮತ್ತು ಕೊರವ/ಕೊರಚ ಇವರು ಧರ್ಮಬಾಹಿರವಾಗಿ ಹುಟ್ಟಿದವರು ತಮ್ಮ ಸೃಷ್ಟಿಯನ್ನು ತಿಳಿಯುವ ಸಲುವಾಗಿ ತಮ್ಮನ್ನು ಯರುಕುಲರು ಎಂದು ಕರೆದುಕೊಂಡು ಹೀಗೆ ಯರುಕುಲರು ಎಂಬ ಹೆಸರು ಕೊರಚರಿಗೆ ಬಂದಿತು ಎಂಬುದಾಗಿ ಭಾಗವತದಲ್ಲಿನ ಐತಿಹ್ಯ ತಿಳಿಸುತ್ತದೆ. (E. Thurston, Caste and tribes of Southern India, Voll-III, K.P. 445, Transletedby Prof K.H. Prabhu) ಇಲ್ಲಿ ಸಾಮಾನ್ಯ ಚೌಕಟ್ಟು ಭಾಗವತಂ, ಇದರಲ್ಲಿ ಹೇಳುವ ಕಥೆಗೆ ಹೆಚ್ಚು ಕಡಿಮೆ ಅನುದೋತಕವಾಗಿದೆ. ಅದೇನೆ ಇರಲಿ ಚಾರಿತ್ರಿಕವಾಗಿ ನಿಶಧು ಇದ್ದದ್ದೇ ಆದರೆ ಅರಣ್ಯಗಳ ಮೇಲಿನ ಒಡೆತನ ಪಡೆದದ್ದೇ ಆದರೆ ಅವನ ನಿಯಂತ್ರಣಕ್ಕೊಳಪಟ್ಟ ಈ ಜನ

ಅಥವಾ ಅವನ ಸಂತತಿಯು ಆತನನ್ನೇ ತಮ್ಮ ಮೂಲ ಪುರುಷನೆಂದು ಕಲ್ಪಿಸಿಕೊಂಡಿರುವುದರಲ್ಲಿ ಆಶ್ಚರ್ಯವಿಲ್ಲ.

ಬಳ್ಳಾರಿ ಮತ್ತು ದಾವಣಗೆರೆ ಜಿಲ್ಲೆಗಳಲ್ಲಿ ಕೊರಚರ ನೆಲೆಗಳಿಗೆ ಕ್ಷೇತ್ರಕಾರ್ಯ ಸಂದರ್ಭದಲ್ಲಿ ಭೇಟಿ ನೀಡಿದಾಗ ದೊರೆತ ಮಾಹಿತಿಗೂ ಮತ್ತು ವಿದ್ವಾಂಸರಾದ ಗಿರಿಧರರಾವ್ ಹವಾಲ್ದಾರ, ಎಚ್.ಆರ್. ಸ್ವಾಮಿ ಮತ್ತು ಕೆ.ವಿ. ಜಯಪ್ಪ ಅವರು ಸಂಶೋಧನಾ ಕೃತಿಗಳಲ್ಲಿ ದೊರೆತ ಮಾಹಿತಿಗಳಿಗೂ ಹೆಚ್ಚು ಸಾಮ್ಯವಿದೆ. ಇಲ್ಲಿ ಕೊರಚರ ಬದುಕು, ಅವರಾಡುವ ಭಾಷೆಗೆ ಮತ್ತು ಅವರು ಮಾಡುವ ವೃತ್ತಿಗೆ ಸಂಬಂಧಿಸಿದಂತೆ ಅತ್ಯಂತ ಹೆಚ್ಚು ಸಾಮ್ಯವಿರುವ ಐತಿಹ್ಯವನ್ನು ನೋಡಬಹುದಾಗಿದೆ. ಒಮ್ಮೆ ಜಗತ್ತಿನ ಎಲ್ಲ ಜಾತಿ ಜನಾಂಗಗಳೂ ದೇವರ ಹತ್ತಿರ ಜಾತಿ ಮತ್ತು ಭಾಷೆಯನ್ನು ಕೇಳಲು ಹೋದರಂತೆ. ಕೊರಚರವನು ಅವರೊಡನೆ ಹೋಗದೆ ಹಿಂದುಳಿದನಂತೆ ದಾರಿಯಲ್ಲಿ ಹೋಗುವಾಗ ಒಂದು ನೀರಿನ ಗುಂಡಿಯಲ್ಲಿ ಚಿಕ್ಕ ಚಿಕ್ಕ ಮೀನುಗಳು ಆಟವಾಡುತ್ತಿದ್ದವಂತೆ. ಅವುಗಳನ್ನು ನೋಡಿದವನೇ ಎಲ್ಲರೊಡನೆ ಹೋಗದೇ ಗುಂಡಿಯಲ್ಲಿದ್ದ ಮೀನುಗಳನ್ನು ಹಿಡಿದು ತಿಂದು ನಿದ್ದೆ ಮಾಡತೊಡಗಿದರಂತೆ. ಆಮೇಲೆ ಎಚ್ಚರವಾಗಿ ಎದ್ದು ನೋಡಿದರೆ ದೇವರು ಮುಂದೆ ಹೋದವರಿಗೆಲ್ಲರಿಗೂ ಜಾತಿ, ಭಾಷೆ ಮತ್ತು ವೃತ್ತಿಯನ್ನು ಕೊಟ್ಟು ವಾಪಸ್ಸು ಹೊರಡಲು ಸಿದ್ಧರಾಗಿದ್ದರಂತೆ. ಆಗ ಈತನು ನನಗೆ ಏನನ್ನು ಕೊಟ್ಟಿಲ್ಲ ನಮಗೆ ಕೊಡಿರಿ ಎಂದು ಕೇಳಿದಾಗ ಆತನಿಗೆ ಒಂದು ಉದ್ದದ ಹಿಡಿಯ ಕುಡುಗೋಲವನ್ನು ಕೊಟ್ಟು ನೀನು ಈಚಲು ಗರಿ ಮತ್ತು ಕತ್ತಾಳೆಯನ್ನು ಕೊಯ್ದು, ಚಾಪೆ ಹೆಣೆಯುವ ಕೆಲಸ ಮತ್ತು ಹಗ್ಗ ಮಾಡುವ ಕೆಲಸವನ್ನು ನಿರ್ವಹಿಸು ಮತ್ತು ಕೊಚ್ಚೆಗುಂಡಿಯಲ್ಲಿಯ ಮೀನನ್ನು ಹಿಡಿದು ತಿಂದವರಾದ್ದರಿಂದ ಕೊರಚರವನು ಆಗಿ ಕೊರಚ ಜಾತಿಯವರೆಂದು ಕರೆದರು. ಮತ್ತು ಭಾಷೆಯ ವಿಷಯವಾಗಿ ಎಲ್ಲ ಭಾಷೆಯನ್ನು ಬೇರೆಯವರಿಗೆ ನೀಡಿರುವುದರಿಂದ ನೀನು ಅವೆಲ್ಲರ ಭಾಷೆಯ ಶಬ್ದಗಳನ್ನೇ ಬಳಸಿಕೊಂಡು ಒಂದು ಭಾಷೆಯನ್ನಾಗಿ ಮಾಡಿಕೊಂಡು ಮಾತನಾಡಿರಿ ಎಂದು ಹೇಳಿದರಂತೆ. ಹೀಗಾಗಿ ಇವರ ಭಾಷೆಯಲ್ಲಿ ದಕ್ಷಿಣದ ದ್ರಾವಿಡ ಪರಿವಾರ ಭಾಷಿಕಾಂಶಗಳನ್ನು ನೋಡಬಹುದಾಗಿದೆ. ಈ ಐತಿಹ್ಯವು ಇತ್ತೀಚಿನ ದಿನಗಳಲ್ಲಿ ಬಾಯಿಂದ ಬಾಯಿಗೆ ಬೆಳೆದುಬಂದ ಐತಿಹ್ಯವೆಂದು ಕಂಡುಬರುತ್ತದೆ (ಕ್ಷೇತ್ರ ಮಾಹಿತಿ ಮತ್ತು ಕೆಲವು ಕೃತಿಗಳಲ್ಲಿನ ಉಲ್ಲೇಖದಂತೆ).

ಮೇಲಿನ ಎಲ್ಲ ಐತಿಹ್ಯಗಳ ಆಧಾರಗಳನ್ನು ಗಮನಿಸಿದರೆ ಕೊರಚರು ಮಹಾಭಾರತ ಮತ್ತು ರಾಮಾಯಣಕ್ಕೆ ಸಂಬಂಧಪಟ್ಟವರಾಗುತ್ತಾರೆ. ಶಿವ-ಪಾರ್ವತಿಯರ ಜೊತೆ ಸಂಬಂಧ ಕಲ್ಪಿಸುವ, ಭೂಮಿಯ ಒಡೆಯನಾದ ಪೃಥ್ವಿರಾಜನ ಜೊತೆ ಸಂಬಂಧವಿರುವ ಐತಿಹ್ಯಗಳು ಇವೆ. ಆದರೆ ಕುಳುವ ಜನಾಂಗವು ಉತ್ತರ ಭಾರತದಲ್ಲಿನ ಚಾರಿತ್ರಿಕ ಘಟನೆಗಳಿಗೆ ಸಂಬಂಧಪಟ್ಟ ಮಹಾಭಾರತದ ಜೊತೆ, ರಾಮಾಯಣದ ಜೊತೆ ತಮ್ಮ ಮೂಲ ನೆಲೆಯನ್ನು ಕಂಡುಕೊಳ್ಳಲು ಪ್ರಯತ್ನಿಸಿರುವುದು ಇಲ್ಲಿ ತಿಳಿದುಬರುತ್ತದೆಯೇ ಹೊರೆತು ನಿಜವಾಗಿ ಅಂತಹ ಯಾವ ಸಂಬಂಧವೂ ಈ ಅಲೆಮಾರಿ ಬುಡಕಟ್ಟು ಸಮುದಾಯಕ್ಕೆ ಇಲ್ಲದಿರುವುದನ್ನು ಗಮನಿಸಬೇಕಾಗಿದೆ. ತಮಿಳುನಾಡಿನಿಂದ ಬೇರಡೆಗೆ

ವಲಸೆ ಹೊರಟ ನಂತರ ಅನ್ಯರ ಸಂಪರ್ಕದಿಂದ ಅಲ್ಲಲ್ಲಿ ಪ್ರಚಲಿತವಿರುವ ಪುರಾಣಗಳು ಕಥೆಗಳು ಜೊತೆಗೆ ತಮ್ಮ ಮೂಲವನ್ನು ತಳುಕು ಹಾಕಿಸುವ ಕೆಲಸವನ್ನು ಮಾಡಿದ್ದಾರೆ ಎಂದು ತಿಳಿಯಬೇಕಾಗಿದೆ.

ಒಟ್ಟಾರೆಯಾಗಿ ಪುರಾಣಗಳು, ಐತಿಹ್ಯಗಳು ಎಲ್ಲ ಜಾತಿ ಜನಾಂಗಗಳಲ್ಲಿ ಕಂಡುಬರುವಂತೆ ಕೊರಚರಲ್ಲಿಯೂ ಕಂಡುಬರುತ್ತಿದ್ದು ಅವು ಕಾಲ ಕಾಲಕ್ಕೆ ಮಾರ್ಪಾಡು ಹೊಂದುವ ಸಾಧ್ಯತೆಗಳೂ ಇವೆ. ಸಮಾಜದಲ್ಲಿ ಉನ್ನತ ಸ್ಥಾನಮಾನಗಳನ್ನು ಪಡೆಯಲು ಶ್ರೇಣೀಕೃತ ಹಿಂದೂ ಸಮಾಜದಲ್ಲಿ ಶೂದ್ರರೆನಿಸಿಕೊಳ್ಳದಂತಿರಲು ಈ ಐತಿಹ್ಯಗಳು ಬಳಕೆಯಾಗುತ್ತಿರುವುದನ್ನು ನಾವು ನೋಡಬಹುದಾದರೂ ಈ ಎಲ್ಲ ಐತಿಹ್ಯಗಳು ಸತ್ಯಕತೆಗಳಲ್ಲ. ಇವುಗಳ ಮೂಲ ಆಶಯ ತಮ್ಮ ವೃತ್ತಿ ಮತ್ತು ಮೂಲಗಳು ಗೌರವಾನ್ವಿತವೆಂದು ಹೇಳಿಕೊಳ್ಳುವುದೇ ಹೊರೆತು ಬೇರೇನೂ ಅಲ್ಲವೆಂಬುದನ್ನು ಮನಗಾಣಬೇಕಿದೆ.

೩.೧.೩. ಭೌಗೋಳಿಕ ಹಿನ್ನೆಲೆ

ದ್ರಾವಿಡ ದೇಶದ ದಕ್ಷಿಣ ತುದಿಯಿಂದ ಹೊರಟ ದ್ರಾವಿಡ ತಮಿಳು ಮೂಲದ ಕೊರಚರು ಇತರೆ ರಾಜ್ಯಗಳಲ್ಲಿ ಬಂದು ಉಳಿದು ಕಾಲಾಂತರದಲ್ಲಿ ಏನೇ ಬದಲಾವಣೆ ಹೊಂದಿದ್ದರೂ ಈಗಲೂ ಅವರಲ್ಲಿ ಕಂಡುಬರುವ ಕೆಲವೊಂದು ಕುರುಹುಗಳು ಅವರ ತಮಿಳು ಮೂಲವನ್ನು ಪುಷ್ಟೀಕರಿಸುತ್ತವೆ. ಪಶುಪಾಲನಾ ದ್ರಾವಿಡದ ಅಲೆಮಾರಿ ಬುಡಕಟ್ಟು ಸಮುದಾಯವಾದ ಕೊರಚರು ತಮಿಳುನಾಡಿನಿಂದ ವಲಸೆಯಾಗಿ ಆಂಧ್ರ ಪ್ರದೇಶಕ್ಕೆ ಹೋಗಿ ಅಲ್ಲಿ ನೆಲೆಸಿ ನಂತರದಲ್ಲಿ ಕರ್ನಾಟಕಕ್ಕೆ ಬಂದು ನೆಲೆಸಿರುವುದನ್ನು ಅವರಾಡುವ ಭಾಷೆಯಲ್ಲಿನ ತೆಲುಗು ಮಿಶ್ರಿತ ಭಾಷೆಯನ್ನು ನೋಡಬಹುದು. ಕರ್ನಾಟಕದಲ್ಲಿ ಕೊರಚರ ಜನಾಂಗವೂ ಇಂದಿನ ಕರ್ನಾಟಕದಲ್ಲಿ ಹೆಚ್ಚಾಗಿ ಬಳ್ಳಾರಿ, ದಾವಣಗೆರೆ, ಚಿತ್ರದುರ್ಗ, ರಾಯಚೂರು, ಶಿವಮೊಗ್ಗ, ಕೋಲಾರ ಮುಂತಾದ ಜಿಲ್ಲೆಗಳಲ್ಲಿ ಕಂಡುಬರುತ್ತಾರೆ. ತಮ್ಮ ಮೂಲ ನೆಲೆಯನ್ನು ತೊರೆದು ಕರ್ನಾಟಕಕ್ಕೆ ಆಗಮಿಸಿದ ಇವರು ಪಟ್ಟಣ ಪ್ರದೇಶಗಳಲ್ಲಿ ನೆಲೆಸದೆ ತಮ್ಮ ಬುಡಕಟ್ಟು ಪ್ರವೃತ್ತಿಗೆ ಅನುಸಾರವಾಗಿ ಕಾಡು ಮೇಡುಗಳಲ್ಲಿ ನೆಲೆಸಿ ಪ್ರಕೃತಿಯೊಡನೆ ತಮ್ಮ ಕಂಡುಕೊಂಡವರಾದ್ದರಿಂದ ಅವರು ಹೆಚ್ಚಾಗಿ ಹಳ್ಳಿಗಳ ಕಡೆ ಹೋದರು ನೇರವಾಗಿ ಹಳ್ಳಿಗಳಿಗೆ ತಮ್ಮ ಬುಡಕಟ್ಟು ಪ್ರಜ್ಞೆಯಲ್ಲಿಯೇ ಹಳ್ಳಿಯಿಂದ ಸ್ವಲ್ಪ ದೂರದಲ್ಲಿ ಹಟ್ಟಿಗಳನ್ನು ನಿರ್ಮಿಸಿಕೊಂಡಿರುತ್ತಾರೆ.

ಹೀಗೆ ನೆಲೆಸಿರುವ ಪ್ರದೇಶಗಳಿಗೆ ಅಥವಾ ಸ್ಥಳಗಳಿಗೆ ಕರ್ನಾಟಕದಲ್ಲಿ ಕನ್ನಡದ ಜನತೆ ಅಥವಾ ಇತರ ಜಾತಿ ಜನಾಂಗದ ಜನರು 'ಹಟ್ಟಿ'ಗಳೆಂದು ಗುರುತಿಸಿ ಕೊರಚರ ಹಟ್ಟಿಗಳೆಂದು ಕರೆಯುವುದನ್ನು ನೋಡಬಹುದು. ಕರ್ನಾಟಕದಲ್ಲಿ ಕೊರಚರ ಹಟ್ಟಿಗಳನ್ನು ಗುರುತಿಸುವುದಾದರೆ ಬಳ್ಳಾರಿ ಜಿಲ್ಲೆಯಲ್ಲಿ ಬಳ್ಳಾರಿಯ ಗುಗ್ರಿಹಟ್ಟಿ, ಬಂಡಿಹಟ್ಟಿ, ಬಂಡಿಮೋಟು, ಸಂಡೂರು, ಅಂತಪುರ ಕೊರಚರ ಹಟ್ಟಿ, ಮೊರಾಟ್ಲು, ತಿಮ್ಮಲಾಪುರ, ಸಿರುಗುಪ್ಪ, ಕುರುಗೋಡು, ಕೂಡ್ಲಿಗಿ, ಬತ್ತನಹಳ್ಳಿ, ಗಜಾಪುರ, ಕಲ್ಲಹಳ್ಳಿ, ನಿಂಗೇನಹಳ್ಳಿ, ಕಸಾಪುರ, ಹೂವಿನಹಡಗಲಿ, ಶಿವಪುರ, ಹೊಸಪೇಟೆ, ಕಂಪ್ಲಿ, ಗರಗ, ಚಿಲಕನಹಟ್ಟಿ ಹಾಗೆಯೇ ದಾವಣಗೆರೆಯ ಜಿಲ್ಲೆಯಲ್ಲಿ ಬಂದರಕಿ ಕ್ಯಾಂಪ್ ೧೧ನೇ ಕ್ರಾಸ್,

ಚನ್ನಗಿರಿ, ಚಿಕ್ಕ ಅಬ್ಬಿಗೆರೆ, ಎಸ್.ಬಿ.ಆರ್. ಕಾಲೋನಿ, ಸಿಗಿಬೆನ್ನೂರು, ಕುರುಬನಹಳ್ಳಿ, ದೊಡ್ಡ ಅಬ್ಬಿಗೆರೆ, ಗೆದ್ಲಹಟ್ಟಿ, ವನಕಾಲಿ, ಹೊನ್ನಳ್ಳಿ, ದಾನಳ್ಳಿ, ನಾಮ್ತಿ, ಹರಪನಹಳ್ಳಿಯ ಅಗ್ರಹಾರ, ಬಿಕ್ಕಿಹಟ್ಟಿ, ಮಾಚಿಹಳ್ಳಿ, ಪವನಪುರ, ಅಗಸನಹಳ್ಳಿ, ಉಲಿಕಟ್ಟೆ, ಯಲ್ಲಾಪುರ, ಜಗಳೂರು, ಕಸವನಹಳ್ಳಿ, ಸಿಂಗ್ರೇಹಳ್ಳೆ, ಆನೆಹಳ್ಳಿ, ಸವಳಂಗ ಇತ್ಯಾದಿ ಕಡೆಯಲ್ಲೆಲ್ಲ ಕೊರಚರ ನೆಲೆಗಳು ಕರ್ನಾಟಕದಾದ್ಯಂತ ನೋಡಬಹುದಾಗಿದೆ. ಹೀಗೆ ತಮಿಳುನಾಡಿನ ಮೂಲ ನೆಲೆಯಿಂದ ವಲಸೆಬಂದ ಇವರು ತಮಿಳುನಾಡಿನಲ್ಲಿ ಪುರುಷಸೂಚಿಯಾಗಿ 'ಕುರವನ್' ಎಂದು ಆಂಧ್ರಪ್ರದೇಶದಲ್ಲಿ ಯರುಕುಲರು ಮತ್ತು ಕರ್ನಾಟಕದಲ್ಲಿ ಕೊರಚರು ಎಂದು ಕರೆಯುವುದನ್ನು ನೋಡಬಹುದಾಗಿದೆ.

೩.೧.೪. ವಾಸಸ್ಥಾನ (ಹಟ್ಟಿಗಳು)

ಅಲೆಮಾರಿ ಬುಡಕಟ್ಟು ಸಮುದಾಯದವರಾದ ಕೊರಚರು ಇಂದಿಗೂ ಬುಡಕಟ್ಟು ಸ್ಥಿತಿಯನ್ನು ಕೆಳಮಟ್ಟಿಗೆ ಉಳಿಸಿಕೊಂಡು ಬಂದಿದ್ದಾರೆ. ಪಶುಪಾಲಕ ದ್ರಾವಿಡ ವಲಸೆಗಾರ ಜನರಾದ ಇವರು ಇತರೆ ಬುಡಕಟ್ಟುಗಳಾದ ಕಾಡುಗೊಲ್ಲರು, ಕಾಡುಕುರುಬರು, ಸೋಲಿಗರುಗಳಂತೆ ಊರುಗಳಿಂದ ಸ್ವಲ್ಪ ದೂರದಲ್ಲಿ ಪ್ರತ್ಯೇಕ ಹಟ್ಟಿಗಳನ್ನು ಮಾಡಿಕೊಂಡು ವಾಸ ಮಾಡುತ್ತಾರೆ. ಇವುಗಳನ್ನು ಕೊರಚರ ಹಟ್ಟಿಗಳೆಂದು ಕರೆಯುತ್ತಾರೆ. ಇಲ್ಲಿ 'ಹಟ್ಟಿ' ಎಂಬುದಕ್ಕೆ ದನಕರುಗಳನ್ನು ಕಟ್ಟುವ ಕೊಟ್ಟಿಗೆ, ಮನೆ, ಅಂಗಳ, ಒಂದು ಗುಂಪಿನವರು ವಾಸಿಸುವ ಸ್ಥಳ ಇತ್ಯಾದಿ ಅರ್ಥಗಳಿವೆ. ಹಾಗೇ ಚಿಕ್ಕಹಳ್ಳಿ ಎಂಬ ಅರ್ಥವೂ ಇದೆ. ಕೊರಚರ ಹಟ್ಟಿಗಳಿಗೆ ಪ್ರತ್ಯೇಕವಾದ ಹೆಸರುಗಳಲ್ಲದೇ ಪಕ್ಕದ ಹಳ್ಳಿಯ ಹೆಸರನ್ನು ಸೇರಿಸಿ ಹೇಳುವುದು ಆಗಿದೆ. ಉದಾಹರಣೆಗೆ ಹಿಕ್ಕಿಂಗೆರೆ ಕೊರಚರಹಟ್ಟಿ, ಯಲ್ಲಾಪುರ ಕೊರಚರ ಹಟ್ಟಿ, ನಿಂಗನಹಳ್ಳಿ, ಕೊರಚರಹಟ್ಟಿ, ತಿಮ್ಮಲಾಪುರ ಕೊರಚರ ಹಟ್ಟಿ ಮೊದಲಾದಂತೆ ಕೊರಚರ ಹಟ್ಟಿಗಳನ್ನು ಪಕ್ಕದೂರಿನೊಂದಿಗೆ ಗುರುತಿಸಿಕೊಂಡು ಹೇಳುವುದನ್ನು ನೋಡಬಹುದು.

ಹಳ್ಳಿಗಳಿಂದ ಒಂದೆರಡು ಕಿಲೋಮೀಟರಗಳ ಅಂತರದಲ್ಲಿರುವ ಹಟ್ಟಿಗಳು ಇವು ಹತ್ತಿಪ್ಪತ್ತು ಗುಡಿಸಿಲಿನ ಸಣ್ಣ ಹಟ್ಟಿಗಳು, ನಲವತ್ತು, ಐವತ್ತು ಗುಡಿಸಲಿನ ದೊಡ್ಡ ಹಟ್ಟಿಗಳೂ ಇವೆ. ತಮ್ಮ ಹಟ್ಟಿಯ ಸುತ್ತ ಮುಳ್ಳುಗಳ ಬೇಲಿಯನ್ನು ಹಿಂದೆ ಹಾಕುತ್ತಿದ್ದರು. ಈಗ ನಾಗರಿಕತೆಯ ಪ್ರಭಾವದಿಂದ ಬೇಲಿಯನ್ನು ಹಾಕದಿರುವುದನ್ನು ಗಮನಿಸಬಹುದಾಗಿದೆ. ಹಿಂದೆ ಬಹುತೇಕ ಹಟ್ಟಿಗಳು ಗುಡಿಸಲುಗಳಿಂದಲೇ ಕೂಡಿದ್ದವು. ಬಾದೆ ಹುಲ್ಲು, ಕಾಚಿಹುಲ್ಲು, ತಾಳೆಗರಿ, ನೀರಿನಲ್ಲಿ ಬೆಳೆಯುವ ಆಪು ಇತ್ಯಾದಿಗಳನ್ನು ಮೇಲು ಹೊದಿಕೆಯಾಗಿ ಬಳಸುತ್ತಿದ್ದರು. ಈಗ ಇವುಗಳು ಬದಲಾಗಿದ್ದು ಹಂಚಿನ ಮನೆ, ಮಾಳಿಗೆ ಮನೆ, ತಾರಸಿ ಮನೆಗಳನ್ನು ಕಾಣಬಹುದಾಗಿದೆ. ಆರಂಭದಲ್ಲಿಯ ಹಟ್ಟಿಗಳು ತಾತ್ಕಾಲಿಕವಾಗಿ ಜನರು ನೆಲೆನಿಲ್ಲುತ್ತಿದ್ದರಿಂದಾಗಿ, ಸಣ್ಣದಾಗಿ ಗಾಳಿಗೆ ಹಾರಿ ಹೋಗದಂತೆ ಇರಲು ಎತ್ತರವನ್ನು ಕಡಿಮೆ ಮಾಡುತ್ತಿದ್ದರು ಎಂಬ ವೈಜ್ಞಾನಿಕ ಅಂಶವನ್ನು ಇಲ್ಲಿ ಗಮನಿಸಬಹುದಾಗಿದೆ. ಹೀಗೆ ಕೊರಚರು ಹಟ್ಟಿಗಳಲ್ಲಿ ನೆಲೆ ನಿಲ್ಲುವ ಮೊದಲು ನಾಲ್ಕಾರು ಕುಟುಂಬಗಳು ಒಂದೆಡೆ

ಇರುತ್ತಿದ್ದರು ಇದನ್ನು 'ಪೆಂಟಾ' ಎಂದು ಕರೆಯುತ್ತಿದ್ದು, ಆ ನಾಲ್ಕು ಕುಟುಂಬಗಳಲ್ಲಿನ ಹಿರಿಯನ ಹೆಸರಿನಿಂದ ಇಂತಹವರ 'ಪೆಂಟಾ' ಎಂದು ಅಂದರೆ, ಬಕ್‌ನಾಗಪ್ಪಟ ಪೆಂಟ (ಬಡಕಲು ನಾಗಪ್ಪನವರ ಹಟ್ಟಿ), ರಾಮಪ್ಪಟ ಪೆಂಟಾ, ಚೌಡಪ್ಪಟ ಪೆಂಟಾ ಇತ್ಯಾದಿ (ಪೆಂಟಾ-ಗುಂಪು) ಕರೆಯುತ್ತಿದ್ದುದು ತಿಳಿದುಬರುತ್ತದೆ. ಎರಡು ಪೆಂಟಗಳ ಮಧ್ಯೆ ಸೌಹಾರ್ದಯುತ ಸಂಬಂಧವನ್ನು ಧಾರ್ಮಿಕ ಅಥವಾ ಲೌಕಿಕ ಆಚರಣೆಗಳ ಸಂದರ್ಭದಲ್ಲಿ ಎಲ್ಲ ಪೆಂಟಾದವರು ಒಗ್ಗೂಡುತ್ತಿದ್ದುದು ಹಾಗೂ ಪೆಂಟಾದಲ್ಲಿನ ಹಿರಿಯರಿಗೆ ಪ್ರಾಮುಖ್ಯತೆ ಕೊಡುತ್ತಿದ್ದುದು ಗಮನಿಸಬೇಕಾದ ಅಂಶವಾಗಿದೆ.

ಕೊರಚರು ಮೂಲತಃ ಕಾಡಿಗರು ಬೆಟ್ಟಗುಡ್ಡಗಳು, ಕುರುಚಲು ಕಾಡುಗಳಲ್ಲಿ ಇವರದು ಮೊದಲು ಅಲೆಮಾರಿ ಬದುಕು. ಕಾಡಿನ ಕೆಲವು ಸಂಪನ್ಮೂಲಗಳನ್ನು ಬೇರ್ಪಡಿಸಿ ರೂಪಾಂತರಿಸಿ ನಾಡಿಗರಿಗೆ ನೀಡಿ ಬದುಕಿದವರು ಇವರು ಆರಂಭದಿಂದಲೂ ಪಶುಪಾಲಕರು ಹಾಗೂ ಕೃಷಿಕರಾಗಿರುವ ಇವರು ಈಚಲು ಗರಿಯಿಂದ ತಯಾರಿಸಿದ ಈಚಲು ಚಾಪೆ, ಪೊರಕೆ, ಕತ್ತಾಳೆ ನಾರಿನ ಹಗ್ಗ, ನೆಲವು, ಕಣ್ಣಿ, ಚಿಕ್ಕ ಮುಂತಾದವುಗಳನ್ನು ತಯಾರಿಸಿ ಹತ್ತಿರದ ಹಳ್ಳಿಯ ಜನರಿಗೆ ಮಾರಿ ಬದುಕುತ್ತಿದ್ದರು. ಇವರು ತಯಾರಿಸಿದ ವಸ್ತುಗಳಿಗೆ ಹಳ್ಳಿಗಳೇ ಪ್ರಮುಖವಾದ ಮಾರುಕಟ್ಟೆಗಳಾಗಿರುವುದರಿಂದ ಇವರು ಹಳ್ಳಿಗಳ ಹತ್ತಿರವೇ ನಿರ್ಮಿಸಿಕೊಳ್ಳುತ್ತಿದ್ದು ನೆಲೆಗಳನ್ನು ಕೊರಚರ ಹಟ್ಟಿಗಳೆಂದು ಕರೆಯುತ್ತಿದ್ದರು. ಮೂಲತಃ ಕೊರಚರು ಹಟ್ಟಿಗಳನ್ನು ನಿರ್ಮಿಸುವಲ್ಲಿ ನೀರಿನ ಸೌಕರ್ಯವನ್ನು ನೋಡಿಕೊಂಡು ನೆಲೆಯನ್ನು ಕಂಡುಕೊಳ್ಳುತ್ತಿದ್ದರು.

ಸಾಮಾನ್ಯವಾಗಿ ಕೊರಚರು ಗುಡಿಸಲುಗಳನ್ನು (ಹಟ್ಟಿಗಳನ್ನು) ಮೂಡಲ ಕಡೆಗೆ ಮುಖ ಮಾಡಿ ಕಟ್ಟುತ್ತಿದ್ದರು. ಗಾಳಿ ಬರುವ ದಿಕ್ಕಿಗೆ ಚಾಪೆಗಳನ್ನು ಅಡ್ಡ ಕಟ್ಟುತ್ತಿದ್ದರು. ಮತ್ತು ಅಡಿಗೆಯನ್ನು ಗುಡಿಸಿಲಿನ ಹೊರಗೆ ಮಾಡುತ್ತಿದ್ದು, ಮಲಗಲು ಮಾತ್ರ ಅವುಗಳನ್ನು ಬಳಸುತ್ತಿದ್ದರು. ತಮ್ಮ ಸಾಕು ಪ್ರಾಣಿಗಳಾದ ದನಕರು, ಕುರಿ, ಮೇಕೆಗಳನ್ನು ಕೂಡ ಗುಡಿಸಿಲಿನ ಹತ್ತಿರವೇ ಪ್ರತ್ಯೇಕ ಬೇಲಿಯಿಂದ ಹಟ್ಟಿ ನಿರ್ಮಾಣ ಮಾಡಿ ಕೂಡಿ ಹಾಕುತ್ತಿದ್ದರು. ಹಾಗೂ ಹತ್ತು ಹನ್ನೆರಡು ಜನ ಒಂದೇ ಗುಡಿಸಲಿನಲ್ಲಿ ವಾಸವಾಗುತ್ತಿದ್ದರು. ನಂತರ ವಲಸೆಯಾಗಿ ಹೋಗುವಾಗ ಯಾವುದೇ ನಷ್ಟ ಅವರಿಗೆ ಸಂಭವಿಸುತ್ತಿರಲಿಲ್ಲ. ಅದು ಸುಲಭವಾಗುತ್ತದೆ.

ಯಾವುದೇ ಒಂದು ಬುಡಕಟ್ಟು ಜನ ಸಮುದಾಯ ಪ್ರತ್ಯೇಕವಾಗಿ ವಾಸವಾಗಿದ್ದಾಗ ಮಾತ್ರ ಅದು ಹಟ್ಟಿ ಎನಿಸಿಕೊಳ್ಳುವುದು ಇತರೆ ಜಾತಿ ಜನಾಂಗಗಳು ಸಮ್ಮಿಳಿತಗೊಂಡಾಗ ಹಳ್ಳಿ ಎನಿಸಿಕೊಳ್ಳುತ್ತದೆ. ಕೊರಚರ ಹಟ್ಟಿಗಳಲ್ಲಿ ಇದುವರೆಗೂ ಅನ್ಯ ಜಾತಿ ಜನಾಂಗದವರು ವಾಸಿಸುತ್ತಿಲ್ಲದಿರುವುದು ಕಂಡುಬರುತ್ತದೆ. ಆದರೂ ಕೆಲವು ಕಡೆ (ಸರಕಾರ ನಿರ್ಮಿಸಿದ ಇತ್ತೀಚಿನ ನೆಲೆಗಳು) ಕೊರಚರು, ಲಂಬಾಣಿ ಹಾಗೂ ಬೇಡರು ಒಟ್ಟಿಗೆ ವಾಸಿಸುತ್ತಿದ್ದು ಆ ವಸತಿ ಪ್ರದೇಶಗಳಿಗೆ ಹಟ್ಟಿ ಎನ್ನದೇ ಪ್ರತ್ಯೇಕ ಹೆಸರಿಟ್ಟು ಕರೆಯುತ್ತಿರುವುದು (ಅಗ್ರಹಾರ, ಶಿವಪುರ, ಚಿಲಕನಹಟ್ಟಿ, ಅಗಸನಹಳ್ಳಿ, ಗರಗ ಇತ್ಯಾದಿ) ಕಂಡುಬಂದಿದೆ.

ಹಟ್ಟಿ ಹಾಕಿಕೊಂಡು ನೆಲೆ ನಿಲ್ಲಲು ಕೊರಚರಿಗೆ ಕೆಲವೊಮ್ಮೆ ಹತ್ತಿರದ ಹಳ್ಳಿಗಳ ಗೌಡ-ಶ್ಯಾನುಭೋಗರಿಂದ ಅಡೆತಡೆಗಳು ಬರುತ್ತಿದ್ದು ಆಗ ಅವರು ಅಲ್ಲಿ ನೆಲೆ ನಿಲ್ಲದೇ ಮುಂದು ಹೋಗುತ್ತಿದ್ದರಂತೆ. ಕೊರಚರು ಕಳ್ಳತನದಲ್ಲಿ ಪ್ರಸಿದ್ಧರೆಂಬ ನಂಬಿಕೆಯಿಂದ ಹಳ್ಳಿಯ ಜನರು ಇವರನ್ನು ತಮ್ಮ ಹಳ್ಳಿಗಳ ಹತ್ತಿರದಲ್ಲಿ ನೆಲೆ ನಿಲ್ಲಲು ಬಿಡುತ್ತಿರಲಿಲ್ಲವಂತೆ. ಹೀಗಾಗಿ ಕೆಲವೊಮ್ಮೆ ಇವರು ತಮ್ಮ ನೆಲೆಗಳನ್ನು ಅನಿವಾರ್ಯವಾಗಿ ಬದಲಿಸುತ್ತ ಹೋಗುತ್ತಿದ್ದರು ಎಂದು ತಿಳಿದುಬರುತ್ತದೆ. ಇಂತಹ ಸಂದರ್ಭದಲ್ಲಿ ಹಾಗಲೇ ನೆಲೆಯನ್ನು ಕಂಡುಕೊಂಡಂತಹ ಬುಡಕಟ್ಟು (ತಳಸಮುದಾಯಗಳು) ಸಮುದಾಯಗಳ ಜನರು ಇವರಿಗೆ ಸಹಕಾರ ನೀಡಿರುವುದು ಕಂಡುಬರುತ್ತದೆ. ಹೀಗಾಗಿಯೇ ಬುಡಕಟ್ಟು ಜನರಿಗೆ ಬುಡಕಟ್ಟು ಜನರೇ ನೆರವಾಗುತ್ತಿದ್ದರೆಂಬುದನ್ನು ಸ್ಪಷ್ಟವಾಗಿ ತಿಳಿದುಬರುತ್ತದೆ.

ಈ ಹಿನ್ನೆಲೆಯಲ್ಲಿ ಕೊರಚರು ತಮ್ಮ ವಲಸೆಗಾರಿಕೆಯನ್ನು ಕೈಬಿಟ್ಟು ಒಂದೆಡೆ ನೆಲೆಸುಗಾರರಾಗಿ ಕೃಷಿಕ ಜೀವನವನ್ನು ಪ್ರಾರಂಭಿಸಿದ ಇತ್ತೀಚಿನ ಒಂದು ನೂರು ವರ್ಷಗಳಲ್ಲಿ ಇವರು ಹಟ್ಟಿಗಳಲ್ಲಿ, ಹಳ್ಳಿಗಳಲ್ಲಿ ನೆಲೆ ನಿಂತಿದ್ದಾರೆ. ಶಿಕ್ಷಣ ಮಾಧ್ಯಮ, ಸಂಪರ್ಕ ಸಾಧನಗಳು ಸಹ ಇವರಲ್ಲಿ ಹಟ್ಟಿಗಳಿಂದ ಹೊರಬಂದು ಊರುಗಳಲ್ಲಿ ನೆಲೆಸುವಂತೆ ಮಾಡಿದೆ. ಈ ರೀತಿಯಾಗಿ ಹಟ್ಟಿಗಳೇ ಹಳ್ಳಿಗಳಾಗಿ, ಹಳ್ಳಿಗಳೇ ಪಟ್ಟಣಗಳಾಗಿ ಮಾರ್ಪಡುತ್ತವೆ ಎಂಬಂತ ಹೇಳಿಕೆಯನ್ನು ವಿವೇಚಿಸಬಹುದು. ಇಂದಿನ ಎಲ್ಲ ನಾಗರೀಕ ಜಾತಿ ಜನಾಂಗಗಳೂ ಕೂಡ ಒಂದು ಕಾಲದಲ್ಲಿ ಬುಡಕಟ್ಟು ಜನರೇ ಆಗಿದ್ದು ಕಾಲಾಂತರದಲ್ಲಿ ಬದಲಾವಣೆ ಹೊಂದುತ್ತಾ ಇಂದು ನಾಗರೀಕ ಉನ್ನತ ಸ್ಥಿತಿಯಲ್ಲಿ ಬದುಕುತ್ತಿರುವುದನ್ನು ಕಾಣಬಹುದಾಗಿದೆ.

೩.೧.೫. ಬೆಡಗುಗಳು ಮತ್ತು ಉಪಪಂಗಡಗಳು

ಮಾನವ ಜನ್ಮತಾಳಿದ ನಂತರ ಒಂದಲ್ಲಾ ಒಂದು ರೀತಿಯ ಬೆಳವಣಿಗೆಯನ್ನು ಹೊಂದುತ್ತ ಬಂದಿದ್ದಾನೆ. ಸಮಾಜದಲ್ಲಿ ವೈವಾಹಿಕ ಜೀವನವು ಒಂದು ಮಹತ್ವದ ಘಟ್ಟವಾಗಿರುವುದರಿಂದ ಯೌವ್ವನಾವಸ್ಥೆಗೆ ಬಂದ ನಂತರವೇ ವೈವಾಹಿಕ ಜೀವನ ನಡೆಸಲು ಮುಂದಾಗುತ್ತಾನೆ. ಹೀಗಾಗಿ ಪ್ರತಿಯೊಂದು ಜಾತಿ ಸಮುದಾಯಗಳಲ್ಲಿ ರೂಢಿ ಸಂಪ್ರದಾಯಗಳನುಗುಣವಾಗಿ ವೈವಾಹಿಕ ಜೀವನ ನಡೆಸಲು ಮುಂದಾಗುತ್ತಾನೆ. ಇಂದು ಶಿಕ್ಷಣ ಮಾಧ್ಯಮ ಮತ್ತು ದೂರದರ್ಶನಗಳಲ್ಲಿ ಪ್ರಸಾರವಾಗುವ ಕೆಲ ಕಾರ್ಯಕ್ರಮಗಳ ಪ್ರಭಾವದಿಂದಾಗಿ ರೂಢಿ-ಸಂಪ್ರದಾಯಗಳಲ್ಲಿ ಕೆಲವೊಂದು ಬದಲಾವಣೆಗಳು ಕಂಡುಬಂದರೂ ಕೂಡ ಮತ್ತು ಆಧುನೀಕರಣದತ್ತ ಮುಖ ಮಾಡಿದರು ತಮ್ಮ ವೈವಾಹಿಕ ಜೀವನಕ್ಕೆ ಸಂಬಂಧಿಸಿದಂತೆ ಬೆಡಗುಗಳ ವಿಚಾರದಲ್ಲಿ ಪ್ರತಿಯೊಂದು ಸಮುದಾಯಗಳಲ್ಲಿ ಬದಲಾವಣೆ ಕಂಡುಬರುವುದಿಲ್ಲ. ಹೀಗಾಗಿ ಒಂದು ಬುಡಕಟ್ಟು ಪರಂಪರೆಯಿಂದ ಬಂದಂತಹ ಕೊರಚ ಸಮುದಾಯವು ರೂಢಿಸಂಪ್ರದಾಯ ಆಚಾರ-ವಿಚಾರ, ನೀತಿ-ನಿಯಮಗಳನ್ನು ಪಾಲಿಸಿಕೊಂಡು ಬಂದಿರುವುದು ಕಂಡುಬರುತ್ತದೆ. ಇಂದಿಗೂ ಇವರಲ್ಲಿ ಬೆಡಗಗಳು ಜೀವಂತವಾಗಿ ಇರುವುದನ್ನು ನೋಡಬಹುದು.

ಕೊರಚರಲ್ಲಿ ಸಾತ್ಪಾಡಿ, ಕಾವಾಡಿ, ಮೇನ್ಪಾಡಿ ಮತ್ತು ಮೇಂಡ್ರಗುತ್ತಿ ಎಂಬ ನಾಲ್ಕು ಕುಲಗೋತ್ರಗಳಿವೆ. ಇದು ಕೊರಚ ಸಮುದಾಯದ ಮೂಲ ಕುರುಹು ಆಗಿದೆ. ಇಲ್ಲಿ ಸಾತ್ಪಾಡಿ ಮತ್ತು ಕಾವಾಡಿಗಳು ಮೂಲ ಗೋತ್ರಗಳೆಂದು ಉಳಿದೆರಡು ಗೋತ್ರಗಳಾದ ಮೇನ್ಪಾಡಿ ಮೇಂಡ್ರಗುತ್ತಿ ಗೋತ್ರಗಳು ನಂತರದಲ್ಲಿ ಅನೈತಿಕ ಸಂಬಂಧಗಳಿಂದಾಗಿ ಹುಟ್ಟಿಕೊಂಡವುಗಳೆಂದು ಹೇಳುತ್ತಾರೆ. (ಎಚ್.ಆರ್. ಸ್ವಾಮಿ, ಕೊರಚ ಜನಾಂಗ ಒಂದು ಅಧ್ಯಯನ, ೨೦೧೦, ಪುಟ-೧೧೦) ಈ ಗೋತ್ರಗಳ ಶಬ್ದದ ಅರ್ಥ ಕೊರಚರಲ್ಲಿ ಯಾರೊಬ್ಬರಿಗೂ ತಿಳಿದಿಲ್ಲ. ಆದರೆ ಬೆಡಗುಗಳನ್ನು ತುಂಬಾ ಕಟ್ಟುನಿಟ್ಟಾಗಿ ಪಾಲಿಸುತ್ತ ಬಂದಿದ್ದಾರೆ. ಕೊರಚರಲ್ಲಿ ಪ್ರತಿಯೊಬ್ಬ ಸ್ತ್ರೀ ಪುರುಷರ ವಿವಾಹ ಸಂದರ್ಭದಲ್ಲಿ ಬೆಡಗುಗಳಿಗೆ ಅಪಾರವಾದಂತಹ ಪ್ರಾಮುಖ್ಯತೆಯಿದೆ. ಈ ಸಮುದಾಯದಲ್ಲಿ ಜನರು ತಮ್ಮ ಕುಲದ ಇತರೆ ಸಂಬಂಧಿಕರೊಂದಿಗೆ ವಿವಾಹ ಸಂಬಂಧವನ್ನು ಏರ್ಪಡಿಸುವಾಗ ಕುಲ-ವ್ಯವಸ್ಥೆಯಲ್ಲಿ ನಿರ್ಮಾಣವಾಗಿರುವ ಕುಲಗೋತ್ರ ಪದ್ಧತಿಯನ್ನು ಕಡ್ಡಾಯವಾಗಿ ಅನುಸರಿಸಬೇಕಾಗುತ್ತದೆ. ಇವರಲ್ಲಿ ಸಗೋತ್ರಗಳಲ್ಲಿ ವಿವಾಹ ಸಂಬಂಧವನ್ನು ಏರ್ಪಡಿಸುವುದಿಲ್ಲ. ಒಂದೇ ಬೆಡಗಿಗೆ ಸೇರಿದವರು ಅಣ್ಣ-ತಮ್ಮಂದಿರು ಎಂಬ ಭಾವನೆ ಇವರಲ್ಲಿದೆ. ಇವರಲ್ಲಿ ತಮ್ಮ ಮೂಲದ ಶುದ್ಧತೆಯನ್ನು ಕಾಪಾಡಿಕೊಳ್ಳುವಲ್ಲಿ ಬೆಡಗುಗಳು ಪ್ರಮುಖವಾದ ಪಾತ್ರವಹಿಸಿವೆ. ಮತ್ತು ಆ ಕಾರಣಕ್ಕಾಗಿಯೇ ಹಿಂದೆ ಈ ಬೆಡಗುಗಳು ರೂಪುಗೊಂಡಿವೆ. ಕೊರಚರು ಬುಡಕಟ್ಟುಗಳಲ್ಲಿ ಯಾವುದೇ ಹೆಸರಿನಿಂದ ಕರೆಸಿಕೊಂಡರು ಅಥವಾ ಯಾವುದೇ ಪರಿಸರದಲ್ಲಿ ವಾಸವಿದ್ದರೂ ನಂಟಸ್ತಿಕೆಗಳನ್ನು ಬೆಡಗುಗಳ ಮೂಲಕವೇ ನಡೆಸುತ್ತಾರೆ ಎಂಬುದನ್ನು ಗಮನಿಸಬಹುದಾಗಿದೆ. (ಕ್ಷೇತ್ರಕಾರ್ಯ ಸಂದರ್ಭದಲ್ಲಿ ಕೊರಚರ ಸ್ತ್ರೀ-ಪುರುಷರು ನೀಡಿದ ಮಾಹಿತಿ).

ಬೆಡಗುಗಳ ರಚನೆಯು ಕೊರಚರಲ್ಲಿ ತುಂಬಾ ಸಂಕೀರ್ಣವಾಗಿದೆ. ಈ ಬೆಡಗುಗಳು ಕೊರಚ ಭಾಷೆಯ ಪದಗಳೇ ಆಗಿವೆ. ಇವು ವ್ಯಕ್ತಿ ಹಿನ್ನೆಲೆಯಿಂದ ಬಂದಂತವುಗಳೋ ಅಥವಾ ಧಾರ್ಮಿಕ ಆಚರಣೆಯ ನೆಲೆಗಟ್ಟಿನಿಂದ ರೂಪತಾಳಿದವುಗಳೋ ಎಂಬುದನ್ನು ಕುರಿತಂತೆ ಸ್ಪಷ್ಟವಾದ ಅಭಿಪ್ರಾಯಕ್ಕೆ ಬರುವುದು ಕಷ್ಟದ ಸಂಗತಿಯಾಗಿದೆ. ಹೀಗಾಗಿ ಈ ಕುರಿತು ಅಧ್ಯಯನ ನಡೆಸಿರುವ ವಿದ್ವಾಂಸರೆಲ್ಲ ಧಾರ್ಮಿಕ ಆಚರಣೆಯ ಹಿನ್ನೆಲೆಯಲ್ಲಿ ಹುಟ್ಟಿದವೆಂಬ ಅಭಿಪ್ರಾಯಕ್ಕೆ ಹೆಚ್ಚು ಒತ್ತು ನೀಡಿದ್ದಾರೆ. ಈ ನಿಟ್ಟಿನಲ್ಲಿ ಆಂಧ್ರದ ಕೊರಚ (ಯರಕುಲ)ರನ್ನು ಕುರಿತು ಅಧ್ಯಯನ ನಡೆಸಿದ ಜಕ್ಕ ಪಾರ್ಥಸಾರಥಿ ಅವರು ಹೇಳುವಂತೆ, The above mentioned exogmaus divisions clearly show that the yerukula obtained their gotra names from the perticulas religious services affered to their god. It is said that the people who belongs to kavadi are so colled becouse they carry their afferings in kavadi to lard venkateshwara at Tirupathi, a town in Andra pradesh. Kavadi is a carrying divice in which at each ends of a pole, a basket is suspended. According to infromants the people who belong to sathapadk clan are so colled becouse they adorn their god with flowers and jewels in Tamil style called satpadi. Which is eqvalent to samarpane in sanskrit language. The people who belong

to mendragutti or menapadi clan sing songs before god, stitch shoes to the idol and drag the temple cart an specific ceremohal occasions (Jakka Parthasarathy, The yerukula, Page. 57) ಇಲ್ಲಿ ಕೊರಚರ ಬೆಡಗುಗಳು ದೇವರಿಗೆ ಹೂವು ಮತ್ತು ಆಭರಣಗಳನ್ನು ತೆಗುದುಕೊಂಡು ಹೋಗಿ ಅಲಂಕಾರ ಮಾಡುವವರು ಸಾತ್ಪಾಡಿಗಳು, ಅಡ್ಡೆಯಲ್ಲಿ ನೈವೇದ್ಯವನ್ನು ಒಯ್ಯುವರು ಕಾವಾಡಿಗಳು, ದೇವರನ್ನು ಕುರಿತು ಹಾಡಿ ಹೊಗಳುವವರು ಮತ್ತು ಕುಣಿಯುವವರು ಮೇನ್ಪಾಡಿಗಳು ಮತ್ತು ದೇವರಿಗೆ ಚಪ್ಪಲಿಯನ್ನು ಹೊಲಿದು ಅರ್ಪಿಸುವವರು ಮೇಂಡ್ರಗುತ್ತಿಯವರು ಎಂದು ತಿಳಿಸಿರುವ ಈ ಅಭಿಪ್ರಾಯಕ್ಕೆ ಪೂರಕವೆಂಬಂಥ ಶ್ರೀ ಎಚ್.ವಿ. ನಂಜುಂಡಯ್ಯ ಮತ್ತು ಎಲ್.ಕೆ. ಅನಂತಕೃಷ್ಣ ಅಯ್ಯರ್, ಪೂಪಾ ರಾವ್ ನಾಯ್ಡು, ಕೆ.ಎಸ್. ಸಿಂಗ್ ಮೊದಲಾದವರು ಕೊರಚರ ಬೆಡಗುಗಳ ಕುರಿತು ಏಕಾಭಿಪ್ರಾಯವನ್ನು ಮಂಡಿಸಿದ್ದಾರೆ.

ಕೊರಚರಲ್ಲಿ ಮೂಲ ಗೋತ್ರಗಳಾದ ಸಾತ್ಪಾಡಿ, ಕಾವಾಡಿ ಬಿಟ್ಟು ಉಳಿದ ಎರಡು ಗೋತ್ರಗಳಾದ ಮೇನ್ಪಾಡಿ ಮತ್ತು ಮೇಂಡ್ರಗುತ್ತಿ ಗೋತ್ರಗಳು ಅನೈತಿಕ ಸಂಬಂಧದಿಂದ (ಅಣ್ಣ–ತಂಗಿಯರ ದೈಹಿಕ ಸಂಪರ್ಕದಿಂದ) ಹುಟ್ಟಿದವುಗಳಾಗಿವೆ. ಇದಕ್ಕೆ ಸಮುದಾಯದವರು ನೀಡುವ ಪುರಾವೆ ಇಂತಿದೆ. ಒಬ್ಬ ಕೊರಚ ಹೆಂಗಸು ದೇಶಾಂತರ ತಾನು ಹೋಗಬೇಕಾದ ಸಂದರ್ಭದಲ್ಲಿ ತನ್ನ ಒಂದು ಗಂಡು, ಒಂದು ಹೆಣ್ಣು ಎರಡು ಮಕ್ಕಳನ್ನು ಚಿಕ್ಕವರಿರುವಾಗಲೇ ತಾನಿದ್ದ ಊರಿನ ಧಣಿಯ ಮನೆಯಲ್ಲಿ ಹೆಣ್ಣು ಮಗುವನ್ನು ಇನ್ನೊಂದು ಊರಿನಲ್ಲಿ ಗಂಡು ಮಗುವನ್ನು ಕೆಲಸಕ್ಕೆ ಇರಿಸಿ ತಾನು ಬರುವವರೆಗೆ ದುಡಿಸಿಕೊಂಡು ಅನ್ನ ಹಾಕಬೇಕೆಂದು ಕೇಳಿಕೊಂಡು ಬಿಟ್ಟು ಹೋದಳಂತೆ. ಹಾಗೇ ಮಕ್ಕಳನ್ನು ಬಿಟ್ಟು ಹೋದ ಆ ಹೆಂಗಸು ಅನೇಕ ವರ್ಷಗಳಾದ ಮೇಲೆ ಹಿಂತಿರುಗಿ ಬರುವಷ್ಟರೊಳಗೆ ಆ ಎರಡು ಊರ ದಣಿಗಳು ಸೇರಿ ಆ ಕೊರಚ ಮಕ್ಕಳಿಗೆ ವಿವಾಹ ಮಾಡಿಸಿದ್ದರಂತೆ. ಅವರಿಬ್ಬರು ಅಣ್ಣ–ತಂಗಿಯರೆಂದು ಧಣಿಗಳಲ್ಲದೆ ಆ ಇಬ್ಬರು ಮಕ್ಕಳಿಗೂ ತಿಳಿದಿರಲಿಲ್ಲವಂತೆ. ಆಗ ದೇಶಾಂತರ ಹೋಗಿದ್ದ ತಾಯಿ ಒಂದು ದಿನ ಬಂದಳು ಆಗ ಆಕೆಯ ಮಕ್ಕಳಿಬ್ಬರು ಗಂಡ–ಹೆಂಡತಿಯರಾಗಿ ಬಾಳುತ್ತಿದ್ದರು. ಅದನ್ನು ಕಂಡು ಆಕೆಗೆ ದಿಕ್ಕು ತೋಚದಂತಾಗಿ ಕುಲಪಂಚಾಯ್ತಿಗೆ ಹೋಗಿ ಅಲ್ಲಿ ಅವರಿಬ್ಬರಿಗೆ ಹುಟ್ಟಿದ ಮಕ್ಕಳ ಬೇರೆ ಬೆಡಗಿನವರಾಗಲಿ ಎಂದು ತೀರ್ಮಾನಿಸಿದರು. ಅಂದಿನಿಂದ ಮೇಂಡ್ರಗುತ್ತಿ ಗೋತ್ರ ಹುಟ್ಟಿಕೊಂಡಿತು ಎಂಬುದು ಕ್ಷೇತ್ರಕಾರ್ಯ ಸಂದರ್ಭದಲ್ಲಿ ದೊರೆತ ಮಾಹಿತಿಯನ್ನು ಸಾಮಾಜಿಕ ಹಿನ್ನೆಲೆಯಲ್ಲಿ ಗ್ರಹಿಸುವ ಅಗತ್ಯ ಇದೆ.

ಈ ರೀತಿಯ ವಿಚಾರಗಳನ್ನು ಬದಿಗಿಟ್ಟು ಕೊರಚರ ಗೋತ್ರಗಳನ್ನು ವೃತ್ತಿ ಮತ್ತು ಸ್ಥಳಗಳ ಆಧಾರವಾಗಿ ಅವಲೋಕಿಸಿದರೆ ಅವುಗಳ ಸ್ಪಷ್ಟತೆಯನ್ನು ತಿಳಿಯಬಹುದು. ಮೂಲದಲ್ಲಿ ಎರಡೇ ಗೋತ್ರಗಳು ಇದ್ದು ನಂತರದಲ್ಲಿ ಇನ್ನೆರಡು ಗೋತ್ರಗಳು ಹುಟ್ಟಿರುವುದನ್ನು ಗಮನಿಸಿದರೆ ಆ ಎರಡು ಗೋತ್ರಗಳು ತಮಿಳುನಾಡಿನಿಂದ ಕೊರಚರು ಆಂಧ್ರಪ್ರದೇಶಕ್ಕೆ ವಲಸೆ ಬಂದ ನಂತರ ಹುಟ್ಟಿಬಂದವುಗಳೆಂದು ಸ್ಪಷ್ಟವಾಗಿ ನಿರ್ಣಯಿಸಬಹುದಾಗಿದೆ. ಮೇನ್ಪಾಡಿ ಎಂಬುದು ಮೆಹಬೂಬನಗರ ಜಿಲ್ಲೆಯ ಅಲಂಕೂರು ತಾಲೂಕಿನ (ಕರ್ನೂಲ ಹತ್ತಿರ) ಒಂದು ಊರಾಗಿದ್ದು ಮೈನ್‌ವಾರಿಂಗರು

ತಿಳಿಸಿರುವ ದೇವರಕೊಂಡ ಗೋತ್ರವೇ ಮೇನ್ಪಾಡಿಯ ಇನ್ನೊಂದು ಹೆಸರು ಆಗಿದೆ. ದೇವರಕೊಂಡವು ನಾಗಾರ್ಜುನ ಸಾಗರದ ಹತ್ತಿರದ ಊರಾಗಿದೆ. ಈ ಪ್ರದೇಶದಿಂದ ವಲಸೆ ಹೊರಟು ಕರ್ನಾಟಕಕ್ಕೆ ಬಂದಿರುವ ಕೊರಚರಲ್ಲಿ ಮೇನ್ಪಾಡಿ ಬೆಡಗಾಗಿ ನೋಡಬಹುದಾಗಿದೆ. ಇದೇ ರೀತಿಯಾಗಿ ಮೇಂಡ್ರಗುತ್ತಿ ಗೋತ್ರವು ಸಹ ಬಹುಶಃ ಆಂಧ್ರ ಪ್ರದೇಶದ ಯಾವುದೋ ಒಂದು ಊರಿನ (ಬಹುಶಃ ಮಹೇಂದ್ರಗುತ್ತಿ) ಹೆಸರಾಗಿದ್ದು ಅಲ್ಲಿಂದ ವಲಸೆ ಬಂದ ಜನರು ತಾವು ಆ ಪ್ರದೇಶದಿಂದ ಬಂದವರು ಎಂಬುದನ್ನು ಸೂಚಿಸಲು ಮಹೇಂದ್ರಗುತ್ತಿ ಮುಂದೆ ಮೇಂಡ್ರಗುತ್ತಿ ಗೋತ್ರವಾಗಿರುವುದಾಗಿದೆ ಎಂದು ಊಹಿಸಲಾಗಿದೆ ಎಂಬ ಗಿರಿಧರ್‌ರಾವ್ ಹವಾಲ್ದಾರ್‌ರ ಅಭಿಪ್ರಾಯವನ್ನು ಗಮನಾರ್ಹವಾಗಿ ಒಪ್ಪತಕ್ಕದ್ದಾಗಿದೆ.

ಕೊರಚರಲ್ಲಿರುವ ನಾಲ್ಕು ಬೆಡಗುಗಳೊಟ್ಟಿಗೆ ಒಂದೊಂದು ಬೆಡಗಿನಲ್ಲಿಯೂ ಅನೇಕ ಉಪಬೆಡಗು (ಮನೆತನದ ಹೆಸರುಗಳು)ಗಳು ಇವೆ. ಇವರಲ್ಲಿ ಸಂಗಾತಿಗಳ ಆಯ್ಕೆಯಲ್ಲಿ ಈ ಬೆಡಗುಗಳು ಅವಶ್ಯವಾಗಿವೆ. ಅವು

೧. **ಸಾತ್ಪಾಡಿ ಗೋತ್ರದಲ್ಲಿನ ಉಪಬೆಡಗುಗಳು:** ಗಲಾಟೆಯ, ಪೋಲಾಯ, ಮೋಟಾಯ, ನಂಜಪೇಲಾಯ, ಜಟೆಂಗೇಯ, ಪನ್ನಾರಸಾಯ, ವಳಬಾಯ, ರಾಗಿರಾಯ ಅನಿಗೇನಾಯ, ಸವುಡಾಯ, ಕೊಮರೇಯ, ಕಾಂಡ್ರುಗುಂಡಾಯ, ಬೆದ್ದೆಡಾಯ, ಪೂರ್ವಸಾಯ

೨. **ಕಾವಾಡಿ ಗೋತ್ರದಲ್ಲಿನ ಬೆಡಗುಗಳು:** ಮುಂಗಾಯ, ಗೊಜ್ಜ್ಯಾಯ, ವಳ್ಳಗಾಯ, ಲೋಕ್ಯನಾಯ, ರಾಮೇಶ್ವರಾಯ, ಸಿತ್ತೂರಾಯ, ಮಲ್ಯಾಯ, ಕೊಮ್ಯಾಯ, ವಜ್ಜಿಗೀರಾಯ, ಕೊಂಜಾಯ, ಅಂಬ್ಯಾಯ, ಉಯ್ಯಾಲೇಯ ಇತ್ಯಾದಿ.

೩. **ಮೇನ್ಪಾಡಿ ಗೋತ್ರದಲ್ಲಿನ ಬೆಡಗುಗಳು:** ಕೆರವಾದೆಯ, ಗ್ವಾದಾಲಾಯ, ಬಂದ್ಯೇಯ, ಪರಿಶ್ಯಾಯ

೪. **ಮೇಂಡ್ರಗುತ್ತಿ ಗೋತ್ರದಲ್ಲಿನ ಬೆಡಗುಗಳು:** ಆವಲಾಯ, ಪೆನುಗುಂಡಾಯ, ಬಿಳಿಮಿಂಚಿಯಾ, ಪೆರುಮಾಯಾ, ನಲಬಾಯಾ, ದೇವರಕೊಂಡಾಯ, ಗೊಜ್ಜಾಯ, ಪುಲಿಗಟ್ಟಾಯ ಇತ್ಯಾದಿ.

ಹೀಗೆ ಸಾತ್ಪಾಡಿ ಗೋತ್ರದಲ್ಲಿನ ಪೋಲಾಯ, ನಂಜುಬಲಾಯ, ಉಪಪಂಗಡಗಳು ಮತ್ತು ಕಾವಾಡಿ ಗೋತ್ರದಲ್ಲಿನ ಸಿತ್ತೂರು, ವಜ್ಜೇರಾಯ, ಮೇಂಡ್ರಗುತ್ತಿ ಗೋತ್ರದಲ್ಲಿನ ಪೆನುಗೊಂಡಾಯ ಎಂಬ ಹೆಸರುಗಳು ಆಂಧ್ರ ಪ್ರದೇಶದಲ್ಲಿನ ಸ್ಥಳನಾಮಗಳೇ ಆಗಿದ್ದು ಆ ಪ್ರದೇಶಗಳಿಂದ ಬಂದವರೆಂದು ಗುರುತಿಸಲು ಮತ್ತು ಸ್ಥಳನಾಮಗಳೇ ಮುಂದೆ ಬೆಡಗುಗಳಾಗಿರುವುದನ್ನು ನಾವು ಇಲ್ಲಿ ಗಮನಿಸಬಹುದಾಗಿದೆ.

ಸಮುದಾಯದ ಉಪಪಂಗಡಗಳೊಂದಿಗಿನ ವ್ಯತ್ಯಾಸಗಳು

ಕೊರಚರ ಸಮುದಾಯವು ವೃತ್ತಿ ಮತ್ತು ಸಾಂಸ್ಕೃತಿಕ ಆಚರಣೆಗಳಿಂದ ಇತರೆ ಪಂಗಡಗಳಾದ

ಕೊರವ/ಕೊರಮ, ಕುಂಚೀಕೊರವ, ಕೊರಮಶೆಟ್ಟರುಗಳ ಒಟ್ಟಿಗೆ ಕೆಲವು ಸ್ಪಷ್ಟವಾದ ಭಿನ್ನತೆಗಳನ್ನು ಹೊಂದಿದ್ದಾರೆ. ಅದು ನಾವು ಲೌಕಿಕ ಮತ್ತು ಧಾರ್ಮಿಕ ವಿಧಿ ವಿಧಾನಗಳಲ್ಲಿ ಮತ್ತು ಭಾಷೆಯಲ್ಲಿಯು ನೋಡಬಹುದು. ಕೊರಚರು ಮಾತ್ರ ಕಾಡುದನಗಳನ್ನು ಹಿಡಿದು ಪಳಗಿಸಿ ಮಾರುವ ಮತ್ತು ಎತ್ತುಗಳ ವ್ಯಾಪಾರದಲ್ಲಿಯೂ ತೊಡಗಿರುವುದರಿಂದ ಇವರು ಎತ್ತಿನ ಕೊರಚರು ಎಂದೂ, ಕತ್ತಾಳೆಯ ಬಿಳಿನಾರಿನ ಹಗ್ಗ ತಯಾರಿಕೆಯು ಕೊರಚರನ್ನು ಹಗ್ಗದ ಕೊರಚರೆಂದೂ ಕರೆಯುತ್ತಾರೆ. ಈಚಲು ಚಾಪೆ, ಪೊರಕೆ ತಯಾರಿಕೆಯೂ ಇವರ ಮುಖ್ಯ ಕಸುಬಾಗಿದೆ. ಆದರೆ ಕೊರವ, ಕುಂಚೀಕೊರವ, ಕೊರಮಶೆಟ್ಟರಲ್ಲಿ ಈ ವೃತ್ತಿಗಳಿಲ್ಲದಿರುವುದನ್ನು ಗಮನಿಸಬಹುದಾಗಿದೆ.

ಕಾಡಿಗರಾದ ಕೊರಚರು ಇಂದಿಗೂ ಪ್ರತ್ಯೇಕವಾದ ತಮ್ಮ ಹಟ್ಟಿಗಳಲ್ಲಿಯೇ ವಾಸಿಸುತ್ತಿದ್ದು ಕೊರವ, ಕುಂಚೀಕೊರವ, ಕೊರಮಶೆಟ್ಟರುಗಳು ಊರುಗಳಲ್ಲಿ ಇತರೆ ಜನಾಂಗದೊಂದಿದೆ ಬಹು ಹಿಂದಿನಿಂದಲೂ ವಾಸಿಸುತ್ತಿದ್ದಾರೆ. ಹಾಗೆಯೇ ಕೊರಚರು ಈ ಪಂಗಡಗಳೊಂದಿಗೆ ಒಕ್ಕಳ ಬಳ್ಳಿ ಸಂಬಂಧವನ್ನು ಹೊಂದಿಲ್ಲದಿರುವುದು ಗಮನಿಸಬೇಕಾದ ಅಂಶವಾಗಿದೆ. ಹಾಗೆಯೇ ಭಾಷೆಯು ಯರುಕುಲ ಭಾಷೆಯಾಗಿದ್ದು, ಕೊರವ ಮತ್ತು ಕುಂಚೀ ಕೊರವರ ಭಾಷೆಗಳು ಬೇರೆಯಾಗಿವೆ. (ಕೊರ್ವಿ, ಕೈಕಾಡಿ) ಈ ವ್ಯತ್ಯಾಸಗಳನ್ನು ನಾವು ಈ ಪಂಗಡಗಳ ಭಾಷೆಗಳಿಂದ ಸಂಗ್ರಹಿಸಿದ ಶಬ್ದಗಳ ಆಧಾರದ ಮೇಲೆ ನಿರ್ಧರಿಸಬಹುದಾಗಿದೆ.

ಕೊರಮಶೆಟ್ಟಿ ಪಂಗಡವು ಕೊಡಗಿನಲ್ಲಿ ಕಂಡುಬರುತ್ತಿದ್ದು ಈ ಪಂಗಡವೂ ಕೊರಚರೇ ಎಂಬ ಅಂಶ ಕೆಲವೆಡೆ ಕಂಡುಬಂದಿದ್ದು ಇದು ಸರಿಯಲ್ಲವೆಂದು ವೃತ್ತಿ ಆಧಾರಿತವಾಗಿ ನೋಡಿದಾಗ ಕಂಡುಬರುತ್ತದೆ. ಕೊರಮಶೆಟ್ಟಿಯು ಕಬ್ಬಿಣದ ವ್ಯವಸಾಯ ಸಲಕರಣೆಗಳಾದ ಕುಳ, ಕೊಡಲಿ, ಮಚ್ಚು, ಭೈರಿಗೆ, ರಂಪ ಇತ್ಯಾದಿಗಳನ್ನು ಹಳ್ಳಿಗಳಿಗೆ ಹೊತ್ತು ಮಾರಾಟ ಮಾಡುವ ಆ ಮೂಲಕ ಜೀವನ ನಡೆಸುವ ಅಲೆಮಾರಿ ವರ್ತಕ ಜಾತಿ (ಕನ್ನಡ ಜಾನಪದ ವಿಶ್ವಕೋಶ, ಸಂಪುಟ-೧, ಪು-೫೩೭) ಎಂಬ ಉಲ್ಲೇಖವು ದೊರೆತಿದ್ದು ಇದು ಕೊರಚರು ಪ್ರತ್ಯೇಕವೇ ಎಂಬುದನ್ನು ದೃಢೀಕರಿಸುತ್ತದೆ.

ಕೊರವರನ್ನು ಭಜಂತ್ರಿ, ಪುಟ್ಟಿ, ಊರ, ಪಾಮುಲ, ಕೈಕಾಡಿ, ಪಾತ್ರದ, ಸೂಳೆ, ಸೂಲಿ, ಉಯಲೋ ಇತ್ಯಾದಿ ಹೆಸರುಗಳಿಂದ ಈ ಪಂಗಡಕ್ಕೆ ಮಾತ್ರ ಕರೆಯುತ್ತಾರೆ. ಈ ಯಾವ ಹೆಸರುಗಳಿಂದಲೂ ಕೊರಚರನ್ನು ಸಂಬೋಧಿಸುವುದಿಲ್ಲ ಎಂಬುದನ್ನು ಗಮನಿಸಬಹುದಾಗಿದೆ. ಕಾಡಿನ ಮರದ ಬೇರಿನಿಂದ ಕುಚ್ಚು ತಯಾರಿಸುವ ಕುಂಚಿಗೆ (ಬ್ರಷ್) ಕೊರವರನ್ನು ಕುಂಚು, ಕುಂಚೀ, ಕುಂಚಿಲ, ಕುಂಚಗಿ ಇತ್ಯಾದಿಯಾಗಿ ಕೊರವರಲ್ಲಿ ಕಂಡುಬರುತ್ತದೆ ಹೊರೆತು ಕೊರಚರಲ್ಲಿ ಎಲ್ಲಿಯೂ ಕಂಡುಬರುವುದಿಲ್ಲ.

ಮದುವೆ ಪದ್ಧತಿಗಳಲ್ಲಿ ಅನೇಕ ಮೂಲ ಬುಡಕಟ್ಟು ಲಕ್ಷಣಗಳನ್ನು ನಾವು ಕೊರಚರಲ್ಲಿ ಕಾಣಬಹುದಾಗಿದ್ದು, ಕೊರವರಲ್ಲಿ ಅವುಗಳನ್ನು ಕಾಣಲಾರೆವು. ಕೊಮ್‌ತರುವ, ಗಂಗಾಳ ಬಡಿಯುವ, ಚಾಪೆ ಗುಡ್ಲು ಹಾಕುವ, ಕೋಲಾಟ ಆಡುವ ಪದ್ಧತಿಗಳು ಕೊರಚರಲ್ಲಿ ಮಾತ್ರವೇ ಕಂಡುಬರುತ್ತಿದ್ದು

ಕೊರವರು ತಮ್ಮ ಮದುವೆಗಳನ್ನು ಶಹನಾಯಿ ಊದುವುದರೊಂದಿಗೆ, ಹಂದರ ಹಾಕಿ ಉಳಿದ ಜಾತಿ ಜನಾಂಗಗಳು ಮಾಡುವ ಆಚರಣೆಗಳನ್ನೇ ಮಾಡಿ ನಡೆಸುತ್ತಾರೆ. ಹಾಗೆಯೇ ಋತುಮತಿ ಆಚರಣೆಗಳಲ್ಲಿಯೂ ವ್ಯತ್ಯಾಸಗಳನ್ನು ಗಮನಿಸಬಹುದು.

ಶವಸಂಸ್ಕಾರ ಪದ್ಧತಿಗಳಲ್ಲಿ ನಾವು ಸ್ಪಷ್ಟವಾದ ಭಿನ್ನತೆಯನ್ನು ಗಮನಿಸಬಹುದಾಗಿದ್ದು, ಮಂಡೇ (ಜವುಳ) ಕೊಡುವ ಸಂಪ್ರದಾಯವು ಕೊರಚರಲ್ಲಿ ಇತರೆ ಸಮುದಾಯಗಳೊಂದಿಗೆ ಬದುಕಲು ಪ್ರಾರಂಭ ಮಾಡಿದ ನಂತರದಲ್ಲಿ ಕಂಡುಬರುತ್ತದೆ ಹೊರತು ಆರಂಭದಲ್ಲಿ ಇರಲಿಲ್ಲ. ಹಾಗೂ ಹಂದಿಯ ಸಾಕಾಣಿಕೆಯು ಕೊರವರಲ್ಲಿ ಕುಂಚೀ ಕೊರವರಲ್ಲಿ ಮಾತ್ರ ಕಂಡುಬರುತ್ತಿದ್ದು ಕೊರಚರು ತಮ್ಮ ಹಟ್ಟಿಗಳಲ್ಲಿ ಎಲ್ಲಿಯೂ ಹಂದೀ ಸಾಕಣಿಕೆ ಮಾಡದೇ ಇರುವುದನ್ನು ನೋಡಬಹುದು. ಆದರೆ ಇಂದಿನ ಆಧುನಿಕ ಯುಗದಲ್ಲಿ ಹಂದಿಯ ಸಾಕಣಿಕೆಯು ಒಂದು ಆರ್ಥಿಕ ಸಬಲೀಕರಣ ಸಾಧನವಾಗಿರುವುದರಿಂದಾಗಿ ನಗರ ಪ್ರದೇಶಗಳಲ್ಲಿ ವಾಸಿಸುವಂತಹ ಕೊರಚರು ಕೆಲವು ಕಡೆ ಈ ಹಂದಿ ಸಾಕಣಿಕೆಯನ್ನು ಪ್ರಾರಂಭ ಮಾಡಿದ್ದಾರೆ. ಮತ್ತು ಬೇಟೆಯ ಸಂಸ್ಕೃತಿಯು ಕೊರವರಲ್ಲಿ ಪೂರ್ಣವಾಗಿ ಮರೆಯಾಗಿದ್ದು ಕೊರಚರಲ್ಲಿ ಇಂದಿಗೂ ಕೆಲ ವಿಶೇಷ ಸಂದರ್ಭದಲ್ಲಿ ಬೇಟೆಯಾಡುವುದನ್ನು ಕಾಣಬಹುದು.

ಪೂಜಿಸುವ ದೇವರುಗಳಲ್ಲಿಯೂ ನಾವು ವ್ಯತ್ಯಾಸವನ್ನು ಕಾಣಬಹುದಾಗಿದ್ದು ಕೊರವರು ನಾಗರಕಲ್ಲಿಗೆ ಹಾಲು ಹಾಕಿದರೆ, ಕೊರಚರು ಹುತ್ತಿಗೇ ಹಾಲು ಹಾಕುತ್ತಾರೆ. ಸತ್ಯನಂತಹ, ಸಲ್ಲಮ್ಮನಂತಹ ವಿಶೇಷ ಪೂಜೆಯು ಕೊರಚರ ಹಟ್ಟಿಗಳಲ್ಲಿ ಮಾತ್ರ ಕಂಡುಬರುತ್ತದೆ. ಕೊರಚರ ಒಳಾಡಳಿತ ಪದ್ಧತಿಯಾದ ನ್ಯಾಯಪಂಚಾಯತಿಯಲ್ಲಿ ಕೊರಚರು ಮಾತ್ರವೇ ಇರುತ್ತಾರೆ. ಕೊರವರಲ್ಲಿ ತಮ್ಮೊಡನೆ ಪಂಚ(ಐದು ಜನ ಮುಖಂಡರು)ರಾಗಿ ಇತರ ಜಾತಿ ಜನಾಂಗದವರನ್ನು ಸೇರಿಸಿಕೊಳ್ಳುವುದನ್ನು ನೋಡಬಹುದು.

ಬಹುಮುಖ್ಯವಾಗಿ ಬೆಡಗಿನ ವಿಷಯವನ್ನು ಗಮನಿಸಿದಾಗ ನಾವು ಮೇನಪಡಿ ಮತ್ತು ಮೇಂಡ್ರಗುತ್ತಿ ಗೋತ್ರಗಳು ಕೊರಚರಲ್ಲಿ ಮಾತ್ರವೇ ಕಂಡುಬರುತ್ತದೆ. ಇದು ಮೂಲ ಬೆಡಗುಗಳಲ್ಲಿಯೂ ಕೊರಚರು ಉಳಿದವರಿಗಿಂತ ಭಿನ್ನರಾಗಿದ್ದಾರೆ ಎಂದು ಹೇಳಲು ಆಧಾರವಾಗುತ್ತದೆ. ಮತ್ತು ಈ ಎಲ್ಲ ಪಂಗಡಗಳನ್ನು ಪ್ರತ್ಯೇಕವಾಗಿ ಜನಗಣತಿಯಲ್ಲಿ ಗಣತಿ ಮಾಡುತ್ತಿರುವುದು ಈ ಪಂಗಡಗಳಲ್ಲಿ ಆಂತರಿಕವಾಗಿ ಕೆಲವು ವ್ಯತ್ಯಾಸಗಳಿವೆ ಎಂಬುದನ್ನು ದೃಢೀಕರಿಸುತ್ತದೆ. ಈ ಮಾತಿಗೆ ಪೂರಕವಾಗಿ ಎಡ್ಗರ್ ಥರ್ಸ್ಟನ್, ಎಲ್.ಕೆ. ಅನಂತಕೃಷ್ಣ ಅಯ್ಯರ್ ಮುಂತಾದವರು ತಮ್ಮ ಕೃತಿಗಳಲ್ಲಿ ಈ ಪಂಗಡಗಳಿರುವ ವ್ಯತ್ಯಾಸದ ಕುರಿತು ತಿಳಿಸಿರುವುದನ್ನು ನೋಡಬಹುದಾಗಿದೆ.

ಹೀಗೆ ಕೊರಚರು ಇತರ ಪಂಗಡಗಳಾದ ಕೊರವರು, ಕೊರಮರು, ಕೊರಮಶೆಟ್ಟಿ, ಕುಂಚೀ ಕೊರವರೊಟ್ಟಿಗೆ ಹೊಂದಿರುವ ಸಾಂಸ್ಕೃತಿಕ ಭಿನ್ನತೆಗಳನ್ನು ನಾವು ಪಟ್ಟಿ ಮಾಡುತ್ತ ಹೋಗಬಹುದಾಗಿದ್ದು ಇವೆಲ್ಲವುಗಳ ಆಧಾರದ ಮೇಲೆ ಕೊರಚರು ಉಳಿಧ ಪಂಗಡಗಳಿಗಿಂತ ಬುಡಕಟ್ಟು ಗುಣಲಕ್ಷಣಗಳನ್ನು

ಹೆಚ್ಚಾಗಿ ಉಳಿಸಿಕೊಂಡಿದ್ದು ಅವುಗಳ ಉಳಿಕೆಗಾಗಿ ಅವರ ಶತಾಯಗತಾಯ ಪ್ರಯತ್ನಿಸುತ್ತಿರುವುದನ್ನು ಕಾಣಬಹುದಾಗಿದೆ.

೩.೨. ಭಾಷಿಕ ಪರಿಸರ

ಭಾಷೆ ಮನುಷ್ಯನಿಗೆ ದೊರೆತ ಒಂದು ಅಮೂಲ್ಯವಾದ ಸಾಧನ. ಭಾಷೆ ಇಲ್ಲದಿದ್ದರೆ ಪ್ರಾಣಿಗಳಂತೆಯೇ ಬದುಕುತ್ತಿದ್ದ. ಭಾಷೆ ಒಂದು ಸಾಮಾಜಿಕ ಕ್ರಿಯೆ. ಭಾಷೆಯಿಲ್ಲದಿದ್ದರೆ ಸಮಾಜದ ಜೀವನವೇ ಅಸಾಧ್ಯ. ಅದು ಇಲ್ಲದೆ ಹೋಗಿದ್ದರೆ ಜಗತ್ತೆಲ್ಲ ಕತ್ತಲೆಯಲ್ಲಿ ಇರುತ್ತಿತ್ತು ಎಂದು 'ದಂಡಿ' ಹೇಳಿದ್ದಾರೆ. ಭಾಷೆ ಬೆಳೆದಂತೆ ಸಂಸ್ಕೃತಿಯೂ ಬೆಳೆಯುತ್ತ ಹೋಗುತ್ತದೆ. ಮೂಲದ ಒಂದು ಭಾಷೆಯಿಂದ ಅನೇಕ ಉಪಭಾಷೆಗಳು ಬೆಳೆದುಬರುತ್ತವೆ. ಅವು ಕಾಲಾಂತರದಲ್ಲಿ ಬೇರೆ ಬೇರೆ ಭಾಷೆಯೇನೋ ಎಂಬಷ್ಟು ಬದಲಾವಣೆಯನ್ನು ಪಡೆಯುತ್ತವೆ. ಯಾವುದೇ ಜನಾಂಗ ಆಡುವ ಭಾಷೆ ಅವರವರ ಪರಿಸರದ್ದು, ಬದುಕಿನದ್ದು, ಮನುಷ್ಯ ಮಾತನ್ನು ರೂಢಿಸಿಕೊಂಡಾಗಲೇ ಆ ಮಾತಿನೊಂದಿಗೆ ಸಾಹಿತ್ಯವೂ ಜನ್ಮತಾಳಿತು. ಈ ಹಿನ್ನೆಲೆಯಲ್ಲಿ ಕಾಡು ಮೇಡುಗಳಲ್ಲಿ ವಾಸಿಸುತ್ತಿದ್ದು ನಂತರದಲ್ಲಿ ಬದುಕಿನ ನಿರ್ವಹಣೆ ಕಷ್ಟವಾದಲ್ಲಿ ನಿರಂತರ ವಲಸೆಯನ್ನು ಕೈಗೊಂಡ ಅಲೆಮಾರಿಗಳಾಗಿ ಸಂಚರಿಸಿ ನೆಲೆಯನ್ನು ಕಂಡಂತ ಕೊರಚರಿಗೆ ಅವರದೇ ಆದ ನಿರ್ದಿಷ್ಟ ಭಾಷೆ ಇಲ್ಲ. ತಮಿಳು, ತೆಲುಗು, ಕನ್ನಡ ಮಿಶ್ರಿತ ಭಾಷೆಯನ್ನು ಆಡುತ್ತಾರೆ. ಲಿಪಿಯನ್ನು ರೂಢಿಸಿಕೊಂಡಿರುವ ಭಾಷೆಗಳು ಕಾಲಕಾಲದ ಬೆಳವಣಿಗೆಯನ್ನು ಆಯಾ ಭಾಷೆಯ ಬದಲಾವಣೆ ಅಥವಾ ಅವರ ಇತಿಹಾಸವನ್ನು ಅರಿಯುವುದು ಸುಲಭ ಆದರೆ ಲಿಪಿಯನ್ನು ಹೊಂದಿರದ ಭಾಷೆಗಳ ಬದಲಾವಣೆ ಮತ್ತು ಇತಿಹಾಸವನ್ನು ಅರಿಯುವುದು ಸುಲಭವಲ್ಲ. ಈ ದಿಸೆಯಲ್ಲಿ ಕೊರಚರ ಭಾಷೆಯನ್ನು ವಿವೇಚಿಸಬೇಕಾಗಿದೆ.

ಕೊರಚ ಜನಾಂಗದ ಇತಿಹಾಸವನ್ನು ಸಮೀಕ್ಷಿಸುವ ಈ ವೊತ್ತಿನಲ್ಲಿ ಅವರ ಭಾಷೆ ಮತ್ತು ಸಂಸ್ಕೃತಿ ಹಲವು ಬಿಕ್ಕಟ್ಟುಗಳನ್ನು ಎದುರಿಸುತ್ತ ಬರುತ್ತಿರುವುದನ್ನು ದಾಖಲಿಸಬೇಕಾಗುತ್ತದೆ. ನಿರಂತರ ಅಲೆಮಾರಿತನದ ಕಾರಣದಿಂದಾಗಿ ಕೊರಚರು ಮಿಶ್ರಿತ ಭಾಷೆಯನ್ನು, ಸಂಸ್ಕೃತಿಯನ್ನು ರೂಢಿಸಿಕೊಂಡಿರುವುದನ್ನು ಕಾಣಬಹುದು. ತಮಿಳುನಾಡಿನಲ್ಲಿ ಕೊರಚರನ್ನು 'ಕುಳುವರು' ಎಂದು ಕರೆಯುತ್ತಾರೆ. ಈ ಕುಳುವರು ಸಾವಿರಾರು ವರ್ಷಗಳ ಹಿಂದೆಯೇ ತಮಿಳುನಾಡಿನಿಂದ ಬೇರೆ ಬೇರೆ ರಾಜ್ಯಗಳ ಕಡೆಗೆ ವಲಸೆ ಹೋಗಿರುವ ಸಾಧ್ಯತೆಗಳಿವೆ. ದಕ್ಷಿಣ ಭಾರತದಲ್ಲಿ ಕೊರಚರ ನೆಲೆಗಳನ್ನು ಶೋಧಿಸುತ್ತ ಬಂದವರಿಗೆ ಕೊರಚರು ತಮಿಳುನಾಡಿನ ತಮ್ಮ ಮೂಲ ನೆಲೆಯಿಂದ ಹೊರಟು ಆಂಧ್ರಪ್ರದೇಶದಲ್ಲಿ ಅಲ್ಲಲ್ಲಿ ನೆಲೆನಿಂತು ಅಲ್ಲಿಂದ ಕರ್ನಾಟಕಕ್ಕೆ ಬಂದು ಮಹಾರಾಷ್ಟ್ರದ ಕಡೆಗೆ ಹೊರಟ ಲಕ್ಷಣಗಳು ಹೆಚ್ಚಾಗಿ ಕಂಡುಬರುತ್ತವೆ. ತಮಿಳುನಾಡಿನ 'ಕುಳುವ'ರನ್ನು ಆಂಧ್ರಪ್ರದೇಶದಲ್ಲಿ 'ಯರಕುಲ'ರೆಂದೂ, ಕರ್ನಾಟಕದಲ್ಲಿ 'ಕೊರಚ'ರೆಂದೂ, ಮಹಾರಾಷ್ಟ್ರದಲ್ಲಿ 'ಕೈಕಾಡಿ'ಗಳೆಂದೂ, ಒರಿಸ್ಸಾದಲ್ಲಿ ಒಡ್ರುಗಳೆಂದೂ ಕರೆಯಲಾಗುತ್ತದೆ.

ಮೂಲತಃ ಅಲೆಮಾರಿಗಳು, ಸಾಹಸಿಗರು ಬದುಕನ್ನು ಎದುರುಗೊಳ್ಳುವ ಮಾರ್ಗದಲ್ಲೇ ಕೊಂಡೊಯ್ಯುವ ಸಾಮರ್ಥ್ಯವುಳ್ಳವರು ಕೊರಚರು. ಆಯಾ ಪ್ರದೇಶಗಳಿಗೆ ಅನುಗುಣವಾಗಿ ತಮಿಳನ್ನೋ, ತೆಲುಗನ್ನೋ, ಕನ್ನಡವನ್ನೋ ಬಲ್ಲವರಾಗಿರುತ್ತಾರೆ. ಆದರೆ ತಮ್ಮ ತಮ್ಮಲ್ಲಿ ಮಾತನಾಡಿಕೊಳ್ಳಬೇಕಾದ ಸಂದರ್ಭದಲ್ಲಿ ಮಾತ್ರ ಒಂದು ನಿರ್ದಿಷ್ಟ ಭಾಷೆಯನ್ನು ಬಳಸುತ್ತಾರೆ. ಮೇಲ್ನೋಟಕ್ಕೆ ಅದು ತಮಿಳಿನಂತೆಯೇ ತಮಿಳಿನ ಉಪಭಾಷೆಯಂತೆಯೋ ಕಾಣುತ್ತದೆ. ಇದನ್ನೇ ತಪ್ಪಾಗಿ ಕೇಳಿಸಿಕೊಂಡ, ಅರ್ಥೈಸಿಕೊಂಡ ಕೆಲವು ವಿದ್ವಾಂಸರು ತಮಿಳಿನ ಅಶುದ್ಧ ರೂಪವೆಂದು, ವಿಚಿತ್ರ ಬೆರಕೆ ಭಾಷೆಯೆಂದೂ ಕರೆದಿದ್ದಾರೆ. ಆದರೆ ಸೂಕ್ಷ್ಮವಾಗಿ ನೋಡಿದಾಗ ಇದು ದಕ್ಷಿಣ ಆರ್ಕಾಟ್ ಪ್ರದೇಶದಲ್ಲಿ ಬಳಕೆಯಲ್ಲಿದ್ದ ತಮಿಳಿನ ಒಂದು ಉಪಭಾಷೆಯೆಂಬುದು ತಿಳಿಯುತ್ತದೆ. ಅದು ಕಾಲ ಮತ್ತು ಪ್ರದೇಶಕ್ಕೆ ತಕ್ಕ ಹಾಗೆ ರೂಪಾಂತರ ಹೊಂದಿರುವುದು ಕಂಡುಬರುತ್ತದೆ.

ಕೊರಚರು ತಮ್ಮ ತಮ್ಮಲ್ಲಿ ಬಳಸುವಂತಹ ಭಾಷೆಯನ್ನು 'ಕುಳುವ' ಭಾಷೆಯೆಂದು ಕರೆದುಕೊಳ್ಳುತ್ತಾರೆ. ಈ ಬಗ್ಗೆ ರವಿ. ಜೆ.ಕೇನ್ ಅವರು "Among themselves they call each other kuluru" ಎಂದು ಉಲ್ಲೇಖಿಸಿದ್ದಾರೆ. ಹಾಗೇ ಫ್ರಾನ್ಸಿಸ್ ಅವರು "It is note warthy in this connection that the yerukalas are said to call one another kurru ar kuru" ಎಂದು ಮತ್ತು ಎಚ್.ಸಿ. ಸ್ಟೋಅರ್ಟ್ ಅವರು But they always speak of themselves as kuru ಎಂದಿದ್ದಾರೆ. ತಮಿಳುನಾಡಿನ ಎಲ್ಲ ಕಡೆಯೂ ಕುರುವರು (ಕೊರಚರು) ಗುಡ್ಡಗಾಡು ಜನಾಂಗದವರಾಗಿ ಕಂಡುಬರುವುದರಿಂದ ಇವರು ತಮಿಳು ಮೂಲಕ್ಕೆ ಸೇರಿದ ಬುಡಕಟ್ಟು ಸಮುದಾಯ ಮತ್ತು ಇವರು ಆಡುವ ಭಾಷೆಯನ್ನು ಕುಳುವ, ಕುರ್ರು, ಕುರು, ಕುಡ್ರು ಎಂದು ವಿದ್ವಾಂಸರು ಗುರುತಿಸಿದ್ದಾರೆ. ಹಾಗೆಯೇ ಇವರಲ್ಲಿ ಕೆಲವರು ತಮ್ಮ ಭಾಷೆಯನ್ನು ಕೊಂಗ ಭಾಷೆ ಎನ್ನುತ್ತಾರೆ. ಇಲ್ಲಿ ಕೊಂಗರು ಎಂದರೆ ತಮಿಳು (ತಮಿಳುನಾಡಿನವರು) ಎಂಬುದು ಮುಖ್ಯವಾಗುತ್ತದೆ.

ಕೊರಚರ ಭಾಷೆಗೆ ಸಂಬಂಧಿಸಿದಂತೆ ದಕ್ಷಿಣ ಭಾರತದ ನೂರಾರು ಬುಡಕಟ್ಟು ಮತ್ತು ಜಾತಿಗಳ ಅಧ್ಯಯನಗಳಿಗೆ ಅಡಿಗಲ್ಲು ಹಾಕಿದ ಎಡ್ಗರ್ ಥರ್ಸ್ಟನ್ ಅವರು "In communication among themselves the koravas and the yerukulas speak a corrept oloygot, in which the words dervied from several language bear little resembalance to the original theri words appear to be taken from Tamil, Telugu and Canariese ಎಂದು ಕೊರವರು, ಕೊರಚರು, ತಮಿಳು, ತೆಲುಗು, ಕನ್ನಡ ಭಾಷೆಗಳ ಒಂದು ಭಾಷಾರೂಪವನ್ನು ತಮ್ಮ ನಡುವೆ ಬಳಸುತ್ತಾರೆ. ಇದು ಪ್ರತ್ಯೇಕವಾದ ಭಾಷಾರೂಪವಾಗಿ ಪರಿಗಣಿಸದೆ ಒಂದು ಬೆರಕೆ ಭಾಷೆಯಾಗಿದೆ ಎಂದಿದ್ದಾರೆ. ಹಾಗೇ ಆರ್.ವಿ. ಎಂಥೋವೆನ್ ಅವರು Their home tongue mixture of Telugu, Tamil and Kanarese, indicating the country of their origin ಎಂದು ಮತ್ತು ಎಚ್.ವಿ. ನಂಜುಂಡಯ್ಯ ಅನಂತಕೃಷ್ಣ ಅಯ್ಯರ್ ಅವರು The koravas are a koramas speak Tamil, Telugu and Kanarese according to the lolatities in which they live but in communication among

themselves the koravas and yerukulas speak a corrupt polygot in which the words derived from different language bear little resumbalance, the words appears to be leng to the three language above mountained ಎಂದು ಹೇಳಿದ್ದಾರೆ.

ಈವರೆಗೆ ಕೊರಚರ ಭಾಷೆಗೆ ಸಂಬಂಧಿಸಿದಂತೆ ನಡೆದಿರುವ ಅಧ್ಯಯನಗಳು ಇವರ ಭಾಷೆಯನ್ನು ತಮಿಳಿನ ಉಪಭಾಷೆಯಾಗಿ, ಅಶುದ್ಧ ರೂಪವಾಗಿ, ಚರ್ಚಿಸಿರುವುದನ್ನು ನೋಡಲಾಗಿದೆ. ಆದರೆ ಕೊರಚರು ಭಾಷೆಯನ್ನು ಕುಳುವಾತ ಅಥವಾ ಕುಡ್ರುವಾತ ಎಂಬ ಹೆಸರಿನಿಂದ ಗುರುತಿಸಿದ್ದೇನೆ. ತಮ್ಮ ತಮ್ಮ ಹಟ್ಟಿಗಳಲ್ಲಿ ತಮ್ಮನ್ನು ಕುಡು, ಕುಳು, ಕುಡ್ರು ಎಂದು ಕರೆದುಕೊಳ್ಳುತ್ತಾರೆ. ಹಾಗೇ ನಮ್ಮ ಹಟ್ಟಿಗಳನ್ನು ಕುಡ್ರೂಡುಗ ಎಂದೂ, ಕೊರಚರ ಮಂದಿಯನ್ನು ಕುಡ್ರು ಜನಾಂಗ, ಕುಡ್ರುಮಾಣ್ಯುರಗ ಎಂದೂ ಕರೆಯುತ್ತಾರೆ. ಅದು ಗಂಡು ಆಗಿದ್ದರೆ ಕುಡ್ರುಮೊಣ್ಸು, ಹೆಣ್ಣು ಆಗಿದ್ದರೆ ಕುಡ್ರುಮಾಣ್ಸಿ ಎಂದು ಪ್ರತ್ಯೇಕ ಸಂದರ್ಭದಲ್ಲಿ ಗುರುತಿಸುತ್ತಾರೆ. ಹಾಗೂ ಭಾಷೆಯನ್ನು ಕುಡ್ರವಾತ/ಕುಳುವಾತ ಎಂದು ಕರೆಯುತ್ತಾರೆ.

ಇದು ತಮಿಳಿನ ಉಪಭಾಷೆಯಂತೆ ಕಂಡರೂ, ಅಲ್ಲಿಂದ ಅದು ಕವಲೊಡೆದು ಸ್ವತಂತ್ರವಾಗಿ ಬೆಳೆದಿರುವುದನ್ನು ಗುರುತಿಸಬಹುದು. ಒಂದೇ ಮೂಲದಿಂದ ಹೊರಟ ತಮಿಳು, ಕನ್ನಡ, ತೆಲುಗು, ಮಲೆಯಾಳಿ, ಭಾಷೆಗಳು ಸ್ವತಂತ್ರ್ಯ ಅಸ್ತಿತ್ವ ಪಡೆದಿರುವಂತೆ ಕೊರಚ ಭಾಷೆಯನ್ನು ಪ್ರತ್ಯೇಕವಾಗಿ ಜೀವಂತವಾಗಿ ಬಳಕೆಯಲ್ಲಿದೆ. ಹಾಗಾಗಿ ಇದು ಯಾವುದೇ ರೀತಿಯ ಅಶುದ್ಧ ರೂಪವಲ್ಲ. ಸ್ವತಂತ್ರ ಅಸ್ತಿತ್ವವುಳ್ಳ ಭಾಷೆಯಾಗಿದೆ. ಕೊರಚರು ಹಟ್ಟಿಗಳಲ್ಲಿ ತಮ್ಮ ಭಾಷೆಯು ಹುಟ್ಟಿಕೊಂಡ ರೀತಿಯನ್ನು ಕತೆಯೊಂದರ ಮೂಲಕ ವರ್ಣಿಸುತ್ತಾರೆ. ಆ ಕತೆಯಲ್ಲಿ ಅವರ ಭಾಷೆ, ಕಸಬು, ಅಲೆಮಾರಿತನಗಳನ್ನು ಕುರಿತು ಸಣ್ಣ ಸಣ್ಣ ವಿವರಗಳಿವೆ. ಅವೆಲ್ಲಕ್ಕಿಂತ ಕುಡ್ರುವಾತ ಎಂಬ ಶಬ್ದದ ಬಗೆಗೆ ಕತೆಯಲ್ಲಿರುವುದು ಗಮನಾರ್ಹ ಸಂಗತಿ. ಕತೆ ಹೀಗಿದೆ. ದೇವರು ದೊಡ್ಡೋನು ಕೇಳಿದ್ದೆಲ್ಲ ನೀಡುತ್ತಾನೆ ಅಂತೇಳಿ ಭೂಲೋಕದ ಜನರೆಲ್ಲ ಸೇರಿ ನಮಗೊಂದು ಜಾತೀನೂ ಜೊತೆಗೆ ಭಾಷೇನೂ ನೀಡಿ ಅಂತ ಕೇಳೋಕ ಹೋದರಂತೆ. ಈ ನಮ್ಮ ಕೊಗಸರವನು ಹೋದನಂತೆ. ಹೋಗುವಾಗ ಒಂದು ಕೆರೆ ದಾರಿಯಲ್ಲಿ ಕಂಡಿತಂತೆ. ಮೊದಲೆ ಊರಿಂದೂರಿಗೆ ಅಲೆದು ಸುಸ್ತಾಗಿರುವಾತನಿಗೆ ಹಸಿವು ಆಗಿದೆ ಏನಾರ ಹಿಡಿದು ತಿಂದರಾಯಿತೆಂದು ಕೆರೆಗೆ ಇಳಿದು ಮೀನು ಏಡಿ ಹಿಡಿದು ತಿಂದು ನಿದ್ದೆ ಹೋದನಂತೆ. ಸ್ವಲ್ಪ ಹೊತ್ತಿಗೆ ಎಚ್ಚರವಾಗಿ ಬಂದ ಕೆಲಸ ನೆನಪಾಗಿ ದೇವರ ಹತ್ರ ಹೋಗಿ ನನಗೆ ಒಂದು ಜಾತಿ ಮತ್ತು ಭಾಷೆಯನ್ನು ಕೊಡಿ ಅಂತ ಕೇಳಿದನಂತೆ. ಅಷ್ಟೊತ್ಗೆ ದೇವರು ಎಲ್ಲ ಜಾತಿ ಮತ್ತು ಭಾಷೆಗಳನ್ನೂ ನೀಡಿ ಖಾಲಿ ಆಗಿದ್ವಂತೆ. ಅದಕ್ಕೆ ದೇವರು ಒಂದು ಉಪಾಯ ಮಾಡಿ ಒಂದು ಉದ್ದ ಹಿಡಿಕೆಯ ಕುಡಗೋಲು ಕೊಟ್ಟು, ನೀನು ಈಚಲು ಗರಿ, ಕತ್ತಾಳೆ ಕೊಯ್ದು ಚಾಪೆ ಹೆಣೆಯೋ ಕೆಲ್ಸ ಮತ್ತು ಹಗ್ಗ ಮಾಡುವ ಕೆಲಸ ಮಾಡು. ಮತ್ತು ಅಷ್ಟೊತ್ತಿಗೆ ನನ್ನತ್ರ ಇದ್ದಂತ ಭಾಷೆಯನ್ನೆಲ್ಲ ಕೊಟ್ಟಿರೋದ್ರಿಂದ ನೀನು ಅವರೆಲ್ಲರ ಭಾಷೆಯ ಒಂದೊಂದು ಶಬ್ದ ಸೇರಿಸಿ ಮಾತಾಡಿಕೋ ಹೋಗು ಅಂದನಂತೆ. ಆಗ ಕೊರಸರವನು ತನ್ನ ದಡ್ಡತನಕ್ಕೆ ಶಾಪ

ಹಾಕ್ಕೊಂಡು ಸಿಕ್ಕಿದ್ದೇ ಸೀರುಂಡೆ ಎನ್ನುವಂತೆ ಆವೊತ್ತಿನಿಂದ ನಾವು ಕೊರಸು ಈಚಲು ಗರಿ ಚಾಪೆ ಹೆಣೆದುಕೊಂಡು, ಕತ್ತಾಳೆ ಹಗ್ಗ ನೇಯ್ಕಂಡು, ಅವರಿವರ ಒಂದೊಂದು ಭಾಷೆಯನ್ನು ತೆಕ್ಕೊಂಡು ಕಲಸು–ಪಲಸು ಕುಡ್ರುವಾತ್ ಮಾತಾಡ್ಕೊಂಡು ಜೀವನ ನಡೆಸುತ್ತಿದ್ದಾರೆ. ಹೀಗೆ ಕೊರಚರ ವೃತ್ತಿ, ಜಾತಿ, ಭಾಷೆಯ ಬಗೆಗೆ ಕತೆಯನ್ನು ನೋಡಬಹುದು. ಆದ್ದರಿಂದಾಗಿ ಇವರ ಭಾಷೆಯಲ್ಲಿ ದ್ರಾವಿಡ ಪರಿವಾರದಲ್ಲಿರುವ ಅನೇಕ ಭಾಷಿಕರ ಭಾಷಿಕಾಂಶಗಳನ್ನು ನೋಡಬಹುದಾಗಿದೆ. ಅದು ಇವರ ಭಾಷೆಯಲ್ಲಿ ತಮಿಳು, ತೆಲುಗು, ಕನ್ನಡ ಮತ್ತು ಇತರೆ ಕೆಲವು ಭಾಷಿಕಾಂಶಗಳು ಕಂಡುಬರುವುದರಿಂದಾಗಿ ಈ ದಂತಕತೆ ಕಟ್ಟಿರಬಹುದು. ಕತೆಯಲ್ಲಿ ಎರಡು ಅಂಶಗಳು ಕಂಡುಬರುತ್ತದೆ. ಒಂದು ದೇವರು ಭಾಷೆಯನ್ನು ಕೊಟ್ಟಿದ್ದು ಎರಡು ನೆರೆಹೊರೆಯ ಜನ ಸಮುದಾಯಗಳಿಂದ ನುಡಿಯ ಪಡೆದು ಭಾಷೆಯನ್ನು ಕಟ್ಟಿಕೊಂಡಿರುವುದು ಮುಖ್ಯವಾಗಿ ತಮಿಳು, ತೆಲುಗು, ಕನ್ನಡ ಪರಿಸರಗಳಲ್ಲಿ ಕೊರಚರು ಕಂಡುಬರುವುದರಿಂದಾಗಿ ಇವರು ಮಾತನಾಡುವ ಭಾಷೆಯಲ್ಲಿ ಈ ಭಾಷೆಗಳ ಭಾಷಿಕಾಂಶಗಳು ಕಂಡುಬರುತ್ತವೆ.

ಹೀಗೆ ಕೊರಚರು ಮೂಲನೆಲೆಯಿಂದ ಚದುರಿ ಸಂಚಾರಿಗಳಾಗಿ ಉಳಿದು ಹೊಟ್ಟೆ ಹೊರಕೊಳ್ಳುವುದರಲ್ಲಿಯೇ ಬಹಳಷ್ಟು ಕಾಲ ಕಳೆದುದುರಿಂದಾಗಿ ತಮ್ಮ ಭಾಷೆಯನ್ನು ಸಮರ್ಪಕವಾದ ರೀತಿಯಲ್ಲಿ ಬೆಳೆಸಲು ಸಾಧ್ಯವಾಗಲಿಲ್ಲ ಎಂದು ತೋರುತ್ತದೆ. ಲಿಪಿಯನ್ನು ಗುರುತಿಸಿ ಗ್ರಂಥಸ್ಥ ಸಾಹಿತ್ಯವನ್ನು ನಿರ್ಮಾಣ ಮಾಡಲೂ ಸಾಧ್ಯವಾಗಲಿಲ್ಲ. ತಮಿಳು ಲಿಪಿಯ ಶೋದಕ್ಕಿಂತಲೂ ಮುಂಚೆಯೇ ಈ ಅಲೆಮಾರಿ ಬುಡಕಟ್ಟು ಸಮುದಾಯವು ಮೂಲ ನೆಲೆಯಿಂದ ಚದುರಿದ್ದರಿಂದಲೇ ತಮಿಳು ಲಿಪಿಯನ್ನು ಬಳಸಲೂ ಇವರಿಗೆ ಸಾಧ್ಯವಾಗಲಿಲ್ಲ. ಇಲ್ಲದಿದ್ದರೆ ಒಂದು ಕಾಲದ ತಮಿಳು ಲಿಪಿಯ ಒಂದು ರೂಪವಾದರೂ ಇವರಲ್ಲಿ ಉಳಿಯಬೇಕಿತ್ತು. ಕೊರಚರ ಭಾಷೆ ಗ್ರಂಥಸ್ಥ ರೂಪವನ್ನು ಪಡೆಯದೇ ಇರುವುದರಿಂದ ತಮಿಳಿನ ಹಾಗೆ ಬೆಳೆಯಲು ಸಾಧ್ಯವಾಗಲಿಲ್ಲ. ಸಾವಿರ ವರ್ಷಗಳ ಹಿಂದೆಯೇ ಕನ್ನಡ ಹೇಗಿತ್ತೆಂದು ಹೇಳಲು ನಮಗೆ ಆಧಾರಗಳಿವೆ ಆದರೆ ಇನ್ನೂರು ವರ್ಷಗಳ ಹಿಂದೆ ತುಳು ಹೇಗಿತ್ತೆಂದು ಹೇಳಲಾಗುವುದಿಲ್ಲ. (ಹಾ.ಮಾ. ನಾಯಕ, ಸಂಚಯ, (ಭಾಷೆಗಳ ಪ್ರಪಂಚ)) ಈ ಹಿನ್ನೆಲೆಯಲ್ಲಿ ಸಾವಿರಾರು ವರ್ಷಗಳಿಂದಲೂ ಆಡು ಭಾಷೆಯಾಗಿ ಮಾತನಾಡಿಕೊಂಡು ಬಂದಿರುವ ಕೊರಚರ ಭಾಷೆಯನ್ನು ಕುಳುವ ಭಾಷೆಯನ್ನು ನೋಡಬಹುದು. ತಮಿಳಿನ ಸಾವಿರ ವರ್ಷಗಳಷ್ಟು ಚರಿತ್ರೆ ಅರಿಯಬಹುದು. ಆದರೆ ಕೊರಚರ ಬಗೆಗೆ ನೂರು ವರ್ಷಗಳ ಇತಿಹಾಸ ಅರಿಯಲು ಸಾಧ್ಯವಿಲ್ಲ ಕಾರಣವೆಂದರೆ ಭಾಷೆಗೆ ಲಿಪಿಯಿದ್ದು ಸಾಹಿತ್ಯಿಕ ಕೃತಿಗಳಿದ್ದರೆ ಆ ಬಗ್ಗೆ ಯೋಚನೆ ಮಾಡಬಹುದಾಗಿತ್ತು. ಕೊರಚರ ಭಾಷೆ ಒಂದು ಲಿಪಿಯಿಲ್ಲದ ಸ್ವತಂತ್ರ ಉಪಭಾಷೆಯಂತೆ ತೋರಿದರೂ ಇದರ ಬೇರು ತಮಿಳಿನಲ್ಲಿಯೇ ಅವಿತುಕೊಂಡಿದೆ. ಒಂದು ಭಾಷೆಯನ್ನು ಆಡುವ ಎರಡು ಸಮಾಜಗಳು ಒಂದರಿಂದೊಂದು ಎಷ್ಟು ಸಮಯ ಮತ್ತು ಎಷ್ಟು ದೂರ ಬೇರೆ ಬೇರೆಯಾಗಿರುತ್ತವೆಯೋ ಅಷ್ಟೇ ಅವುಗಳೊಳಗಿನ ಭಾಷಾ ವ್ಯತ್ಯಾಸವೂ ಹೆಚ್ಚಾಗುತ್ತವೆ. ಆದ್ದರಿಂದ ತಮಿಳು ಮತ್ತು ಕೊರಚರ ಭಾಷೆಗಳನ್ನು ಹೋಲಿಸಿ ನೋಡುವಾಗ

ಅವುಗಳ ರೂಪ ವ್ಯತ್ಯಾಸ ಮತ್ತು ಅವು ಒಂದರಿಂದೊಂದು ಪಡೆದ ಭಿನ್ನತೆಯ ಬಗ್ಗೆ ಅರಿವಾಗುತ್ತದೆ. ಈ ವ್ಯತ್ಯಾಸಗಳಿಗೆ ಪ್ರಮುಖವಾದ ಕಾರಣವೆಂದರೆ ಅವರ ನಿರಂತರ ವಲಸೆ(ಅಲೆಮಾರಿ) ಪ್ರವೃತ್ತಿ, ಅನ್ಯ ಭಾಷಾ ಸಂಪರ್ಕ ಮತ್ತು ಭಿನ್ನ ಸಂಸ್ಕೃತಿಗಳು ಪ್ರಭಾವವೂ ಬಹುಮುಖ್ಯ ಕಾರಣಗಳಾಗುತ್ತದೆ ಎಂಬುದನ್ನು ಒಪ್ಪಬೇಕಾಗುತ್ತದೆ. ತಮಿಳಿನಲ್ಲಿ ಕೈಕಾಡಿ, ಕೊರ್ವಿ ಮತ್ತು ಯರಕುಲ ಮೊದಲಾದ ಉಪಭಾಷೆಗಳಿವೆ. ಇವೆಲ್ಲ ಕೊರಚರ ಜಾತಿಯ ಹಲವು ಹೆಸರುಗಳು ಕೂಡ ಆಗಿವೆ. ಹಾಗಾಗಿ ಭಾಷೆ ಒಂದೇ ಆದರೂ ಜಾತಿಯು ಹಲವು ಹೆಸರುಗಳು ಈ ಭಾಷೆಗೂ ಬಂದಿದೆ.

ಈ ರೀತಿಯಾಗಿ ಭಾಷೆ ಎನ್ನುವುದು ಮನುಷ್ಯ ಮತ್ತು ಇತರೆ ಪ್ರಾಣಿಗಳಿರುವ ಭಿನ್ನತೆಯನ್ನು ಸೂಚಿಸುವ ಒಂದು ವಿಶೇಷ ಅಂಶವಾಗಿದೆ. ಈ ಹಿನ್ನೆಲೆಯಲ್ಲಿ ಕಾಡುಮೇಡುಗಳಲ್ಲಿ ವಾಸಿಸುತ್ತ ವಲಸೆಯಾಗಿ ಸಂಚರಿಸುತ್ತ ಜೀವನ ನಿರ್ವಹಣೆ ಮಾಡುತ್ತ ಸಾಗಿದ ಕೊರಚರ ಸಮುದಾಯ ತಮಿಳು, ಭಾಷೆಯ ಜೊತೆಗೆ ತೆಲುಗು, ಕನ್ನಡ ಮತ್ತು ಇತರೆ ದ್ರಾವಿಡ ಪರಿವಾರದ ಭಾಷೆಗಳ ಭಾಷಿಕಾಂಶಗಳನ್ನು ಬಳಸಿಕೊಂಡು ಒಂದು ಸ್ವತಂತ್ರ ಭಾಷೆಯನ್ನು ಮಾತನಾಡುತ್ತಾರೆ. ಅದು ವಕ್ತೃಗಳ ಹೇಳಿಕೆ ಮತ್ತು ಲಭ್ಯವಾಗಿ ಸಿಗುವ ಆಧಾರ ಹಾಗೂ ಇವರು ತಮ್ಮ ತಮ್ಮಲ್ಲಿ ಮಾತನಾಡಿಕೊಳ್ಳುವ ಭಾಷೆಯ ಆಧಾರದ ಮೇಲೆ ಹೇಳಬಹುದು. ಇವರು ತಮ್ಮ ಮೂಲನೆಲೆಯ ತಮಿಳು ಭಾಷೆಯನ್ನು ಮರೆಯದೆ ಪ್ರಾದೇಶಿಕವಾಗಿ ಅವರು ಅಲೆಮಾರಿಗಳಾಗಿ ವಲಸೆ ಬಂದಂತೆ ಪ್ರಾದೇಶಿಕ ಭಾಷೆಯ ಭಾಷಿಕಾಂಶಗಳನ್ನು ತಮಿಳಿನೊಡನೆ ಮಿಶ್ರಮಾಡಿಕೊಂಡು ಬಳಸಿರುವುದು ಈ ಜನಾಂಗ ಬಳಸುವ ಭಾಷೆಯನ್ನು ನೋಡಿ ತಿಳಿಯಬಹುದು. ಹೀಗಾಗಿ ಕೊರಚರ ಭಾಷೆಯಲ್ಲಿ ತಮಿಳು ಮೂಲದ ಶಬ್ದಕೋಶವೂ ತೆಲುಗು ಕನ್ನಡಗಳಿಂದ ಸ್ವೀಕೃತಗೊಂಡ ಪದಸಂಪತ್ತು ಮತ್ತು ಉತ್ತರ ದ್ರಾವಿಡವನ್ನು ಹೋಲುವ ವ್ಯಾಕರಣಾಂಶಗಳು ಸೇರಿಸಿಕೊಂಡಿರುವುದನ್ನು ಕಾಣುತ್ತೇವೆ.

ಅಧ್ಯಾಯ : ನಾಲ್ಕು

ಕೊರಚರ ಸಮುದಾಯದ ಭಾಷಾ ವೈಶಿಷ್ಟ್ಯ

ಅಧ್ಯಾಯ: ನಾಲ್ಕು

ಕೊರಚರ ಸಮುದಾಯದ ಭಾಷಾ ವೈಶಿಷ್ಟ್ಯ

ಭಾಷೆ ಒಂದು ಸಾಮಾಜಿಕ ಕ್ರಿಯೆಯಾಗಿದೆ. ಇದರ ಹಟ್ಟು ವಿಕಾಸ ಬಳಕೆ ಎಲ್ಲ ನಡೆಯುವುದು ಸಮಾಜದಲ್ಲಿಯೇ, ಭಾಷೆ ನಿಂತ ನೀರಲ್ಲ ಸದಾ ಹರಿಯುವ ನದಿಯಿದ್ದಂತೆ ಹಾಗಾಗಿ ನಿರಂತರವಾಗಿ ಬದಲಾಗುತ್ತ ಬೆಳೆಯುತ್ತಿರುತ್ತದೆ. ಬಳಕೆ ಮತ್ತು ಉಚ್ಚಾರಣೆಯಲ್ಲಿ ಆದಷ್ಟು ಸರಳ ಹಾಗೂ ಸುಲಭಗೊಳಿಸುವುದು ಈ ಬದಲಾವಣೆಯ ಮುಖ್ಯ ಉದ್ದೇಶ. ಮೊದಲು ಧ್ವನಿ ರಚನೆ, ಪದ ರಚನೆಯಲ್ಲಿ ಕಾಣಿಸಿಕೊಂಡ ತರುವಾಯ ಉಪಭಾಷೆಗಳ ಅಸ್ತಿತ್ವಕ್ಕೆ ಬರುವುದು, ಒಂದು ಭಾಷಾ ರಚನೆಯಲ್ಲಿ ಕಂಡುಬರುವ ಬದಲಾವಣೆಗೆ ಆ ಭಾಷೆಯಲ್ಲಿ ಧ್ವನಿ ಬದಲಾವಣೆ ಪ್ರಮುಖ ಪಾತ್ರ ವಹಿಸುತ್ತದೆ. (ಅಂಗಡಿ ಎಸ್.ಎಸ್., ಶೋಧನ, ಪುಟ–೭೩, ೧೯೯೮) ಇದಕ್ಕೆ ಸುತ್ತಮುತ್ತಲಿನ ಪರಿಸರ, ಕಾಲ, ಸಾಮಾಜಿಕ ವರ್ಗಗಳು ಕಾರಣವಾಗಿ ತತ್ಪರಿಣಾಮ ಧ್ವನಿ ವ್ಯತ್ಯಾಸಗಳು ಉಂಟಾಗಿ ಭಾಷಾ ಬಳಕೆಯಲ್ಲಿ ಭಿನ್ನತೆ ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಬುಡಕಟ್ಟು ಭಾಷೆಗಳನ್ನು ನೋಡುವಾಗ ಅಲೆಮಾರಿ ಬುಡಕಟ್ಟು ಸಮುದಾಯಗಳು ತಮ್ಮದೇಯಾದ ಸಂಸ್ಕೃತಿ ಕಲೆಗಳನ್ನು ಹೊಂದಿರುತ್ತವೆ. ಅದೇ ರೀತಿಯಲ್ಲಿ ಭಾಷೆಯನ್ನು ಹೊಂದಿರುತ್ತದೆ.

ಅಲೆಮಾರಿಗಳ ಭಾಷೆ ಅವರೇ ರೂಪಿಸಿಕೊಂಡಂತಹ ಭಾಷೆಯಾಗಿರುವುದರಿಂದಾಗಿ ಸಹಜವಾಗಿ ಅದು ಬೇರೆಯವರಿಗೆ ಅರ್ಥವಾಗುವುದಿಲ್ಲ. ಎಲ್ಲಾ ಭಾಷೆಗಳಿಗಿಂತ ಸ್ವತಂತ್ರವಾಗಿ ಅವರು ಮಾತನಾಡುವುದನ್ನು ಕಾಣುತ್ತೇವೆ. ಆದರೆ ಆ ಭಾಷೆಗಳಿಗೆ ಲಿಪಿಯೊಂದಿಲ್ಲ. ಭಾಷೆಯ ಮೂಲಕ ತಮ್ಮ ವ್ಯವಹಾರಗಳನ್ನು ದಿನನಿತ್ಯದ ಕೆಲಸ ಕಾರ್ಯಗಳನ್ನು ಪೂರೈಸುತ್ತಾರೆ. ಈ ಭಾಷೆಯನ್ನು ತಾವು ಆಡುವುದರ ಜೊತೆಗೆ ತನ್ನ ಸುತ್ತಮುತ್ತಲಿನ ಪ್ರದೇಶದ ಭಾಷೆಗಳನ್ನು ಅವರು ಅಲ್ಪ ವ್ಯವಹಾರಕ್ಕಾದರೂ ಕಲಿಯಬೇಕಾಗುತ್ತದೆ, ಕಲಿತಿರುತ್ತಾರೆ. ಇಲ್ಲಿ ಬುಡಕಟ್ಟಿನ ಭಾಷೆಗೆ ಲಿಪಿ ಇಲ್ಲದ್ದರಿಂದ ಅವರು ಶೈಕ್ಷಣಿಕವಾಗಿ ಹಿಂದುಳಿಯಲು ಕಾರಣವಾಗಿದೆ. ಬೇರೆ ಬೇರೆ ಪ್ರದೇಶ ನೆರೆಹೊರೆಯ ಪ್ರದೇಶಗಳ ಪ್ರಭಾವ ಇವರ ಮೇಲೆ ಸಾಕಷ್ಟು ಆಗಿರುವುದು ಕಂಡುಬರುತ್ತದೆ. ಕರ್ನಾಟಕದಲ್ಲಿರುವ ಬುಡಕಟ್ಟುಗಳಾದ ಬೇಡರು, ವಡ್ಡರು, ಇರುಳಿಗರು, ಜೇನುಕುರುಬರು, ಬೆಟ್ಟಕುರುಬರು, ಗೊಲ್ಲರು, ಕೊರಚರು ಇತ್ಯಾದಿಯಾಗಿ ತಮಿಳು, ತೆಲುಗು, ಕನ್ನಡ, ಮಲೆಯಾಳಂ ಭಾಷೆಗಳನ್ನು ಮಿಶ್ರಣ

ಮಾಡಿಕೊಂಡು ಮಾತಾಡುವುದು ನಮಗೆ ಕಂಡುಬರುತ್ತದೆ. ಅದು ನೀಲಗಿರಿಯ ಬೆಟ್ಟಗಳಲ್ಲಿ ವಾಸವಿದ್ದಂತಹ ಬಹುತೇಕ ಬುಡಕಟ್ಟುಗಳು ಒಂದೋ, ಎರಡೋ ಭಾಷೆಗಳನ್ನು ಮಿಶ್ರಣ ಮಾಡದೆ ಹಲವು ಭಾಷೆಗಳ ಶಬ್ದಗಳನ್ನು ಸೇರಿಸಿಕೊಂಡು ಮಾತಾಡುವುದುಂಟು. ಬುಡಕಟ್ಟುಗಳಲ್ಲಿ ಕಾಣಬಹುದಾದ ಕನ್ನಡ, ತೆಲುಗು, ತಮಿಳು, ಮಲೆಯಾಳಂ ಭಾಷೆಗಳ ಶಬ್ದಗಳನ್ನು ಒಟ್ಟು ಮಾಡಿಕೊಂಡು ಬುಡಕಟ್ಟುಗಳ ಸಾಮಾನ್ಯ ಭಾಷೆಯನ್ನಾಗಿ ಮಾಡಿಕೊಂಡಿವೆ. ಬುಡಕಟ್ಟಿಗರು ನಾಡಿಗೆ ತೆರೆಕೊಂಡಂತೆ ಇವರು ಯಾವುದೇ ಸ್ವತಂತ್ರ ಭಾಷೆಯನ್ನು ಹೊಂದಿದ್ದರೂ ಕೂಡ ಪ್ರಾದೇಶಿಕ ಭಾಷೆಯೊಂದಿಗೆ ಮಾತನಾಡುತ್ತಾರೆ. ಮತ್ತು ಸಂವಹನಗೊಳಿಸುತ್ತಾರೆ. ಅದು ಸುದೀರ್ಘವಾಗಿ ನೆಲೆನಿಂತ ಸ್ಥಳಗಳಲ್ಲಿಯ ಪ್ರಾದೇಶಿಕ ಭಾಷೆಯನ್ನು ಮಾತಾಡುತ್ತಾರೆ. ಅದು ತಮ್ಮ ಮೂಲ ಕಸುಬಿನ ವ್ಯಾಪಾರದಂತಹ ಸಂದರ್ಭಕ್ಕೆ ಕಲಿಯುವುದು ಅವಶ್ಯ, ಇಲ್ಲದಿದ್ದರೆ ಉಪಜೀವನಕ್ಕೆ ಕಷ್ಟವಾಗುತ್ತದೆ.

ಈ ಹಿನ್ನೆಲೆಯಲ್ಲಿ ಕನ್ನಡ ಪರಿಸರದಲ್ಲಿರುವ ಕೊರಚರು ಒಂದು ವಿಶಿಷ್ಟವಾದ ಭಾಷೆಯನ್ನು (ಕೊರಚರ ಭಾಷೆ) ಬಳಸುತ್ತಿದ್ದು, ಇವರ ಆಪ್ತ ವಲಯದಲ್ಲಿ ಭಾಷೆಯನ್ನು 'ಕುದ್ರುವಾತ' ಅಥವಾ 'ಕುಳುವಾತ' ಎಂದು ಪರಿಚಯಿಸಿಕೊಂಡು ಮತ್ತು ವ್ಯವಹಾರಿಕ ವಲಯದಲ್ಲಿ ಕನ್ನಡವನ್ನು ಬಳಸುತ್ತಾರೆ. ಈ ಹಿನ್ನೆಲೆಯಲ್ಲಿ ಕೊರಚರ ಭಾಷೆಯ ಬಗೆಗೆ ಸಮುದಾಯದ ಬಗೆಗೆ ಮತ್ತು ವಿವಿಧ ಆಯಾಮಗಳಲ್ಲಿ ಅಧ್ಯಯನ ಮಾಡುವುದು ಅನಿವಾರ್ಯವಾಗಿದೆ. ಪ್ರಸ್ತುತದಲ್ಲಿ ಧ್ವನಿರಚನೆ ಮತ್ತು ಪದರಚನೆಗಳನ್ನು ಆಯ್ದುಕೊಂಡು ಆ ಎರಡು ಸ್ತರಗಳಲ್ಲಿ ಭಿನ್ನ ಧ್ವನಿ ರಚನೆಗಳಿಂದ ಭಾಷಾ ವೈವಿಧ್ಯತೆಗಳು ಹೇಗೆ ಘಟಿಸುತ್ತವೆ ಎಂಬುದನ್ನು ಕುರಿತು ಅಧ್ಯಯನ ಮಾಡಲಾಗಿದೆ.

ಭಾಷಾ ವೈಶಿಷ್ಟ್ಯ

ಧ್ವನಿ ರಚನೆ

ಧ್ವನಿ ರಚನೆಯಲ್ಲಿ ಸ್ವತಃ ಅರ್ಥವಿಲ್ಲದ ಧ್ವನಿ ರಚನೆಗಳು ಒಂದು ರೀತಿಯಲ್ಲಿ ಬಳಕೆಯಲ್ಲಿದ್ದರೆ, ಅರ್ಥಸಹಿತವಾದ ಧ್ವನಿ ರಚನೆಗಳು ಮತ್ತೊಂದು ರೀತಿಯಲ್ಲಿ ಬಳಕೆಯಲ್ಲಿರುತ್ತವೆ. ಪದಗಳು ಸೇರಿ ಪದಗುಚ್ಚಗಳು ನಿರ್ಮಾಣವಾಗಿ ಅವು ಮುಂದೆ ವಾಕ್ಯಗಳಾಗಿ ರೂಪಗೊಳ್ಳುವುದು ಪ್ರಸ್ತುತ ಅಧ್ಯಾಯದಲ್ಲಿ ಕೊರಚರ ಭಾಷಾ ಧ್ವನಿ ರಚನೆಯನ್ನು ಗಮನದಲ್ಲಿಟ್ಟುಕೊಂಡು ಆ ಮೂಲಕ ಅವರ ಭಾಷಾ ರಚನೆಯಲ್ಲಿ ಕಾಣಬರುವ ಸಂಗತಿಗಳನ್ನು ವಿಶ್ಲೇಷಿಸಲಾಗಿದೆ. ಇಲ್ಲಿ ಕೊರಚರ ಭಾಷಾ ಧ್ವನಿ ರಚನಾ ಕ್ರಮವು ದ್ರಾವಿಡ ಪರಿವಾರದ ಶಿಷ್ಟ ಧ್ವನಿ ರಚನಾ ಕ್ರಮಕ್ಕಿಂತ ಯಾವ ರೀತಿಯಾಗಿ ವಿಶಿಷ್ಟವಾಗಿದೆ ಎಂಬುದನ್ನು ಧ್ವನಿ ರಚನಾ ನಿಯಮದಡಿಯಲ್ಲಿ ವಿವರಿಸಲು ಪ್ರಯತ್ನಿಸಲಾಗಿದೆ.

ಪ್ರತಿಯೊಂದು ಭಾಷೆಯೂ (ಸಾಮಾಜಿ, ಪ್ರಾದೇಶಿಕ) ನಿರ್ದಿಷ್ಟ ಸಂಖ್ಯೆಯ ಧ್ವನಿಗಳನ್ನೊಳಗೊಂಡಿರುತ್ತದೆ. ಈ ಧ್ವನಿಗಳ ಸಂಖ್ಯೆಯು ಭಾಷೆಯಿಂದ ಭಾಷೆಗೆ ಬೇರೆ ಬೇರೆಯಾಗಿರುತ್ತವೆ. ಹಾಗೆಯೇ ಒಂದು ಭಾಷೆಯಲ್ಲಿ ಪ್ರಾದೇಶಿಕ ಮತ್ತು ಸಾಮಾಜಿಕ ಪ್ರಭೇದಗಳಿಗೆ ಅನುಸಾರವಾಗಿ ಧ್ವನಿಗಳ ಸಂಖ್ಯೆಯಲ್ಲಿ ವ್ಯತ್ಯಾಸವಿರುತ್ತದೆ. ಧ್ವನಿಗಳನ್ನು ಬಳಸುವ ವಿಷಯದಲ್ಲಿ ಭಾಷೆಗಳು

ಬೇರೆಯಾಗಿರುತ್ತವೆ. ಹೀಗಾಗಿ ಕೊರಚರ ಭಾಷೆಯಲ್ಲಿನ ಸ್ವರ ಧ್ವನಿಮಾಗಳು, ವ್ಯಂಜನ ಧ್ವನಿಮಾಗಳು ಬಳಕೆಯಲ್ಲಿರುವುದನ್ನು ಬಳ್ಳಾರಿ ಮತ್ತು ದಾವಣಗೆರೆ ಜಿಲ್ಲೆಗಳ ಪರಿಸರದಲ್ಲಿಯ ಕೊರಚರ ಹಟ್ಟಿಗಳಿಗೆ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಭೇಟಿ ನೀಡಿದಾಗ ದೊರೆತ ಮಾಹಿತಿಯಿಂದ ಕಂಡುಕೊಳ್ಳಲಾಗಿದೆ. ಮತ್ತು ಸಂಶೋಧನೆಯ ಅಗತ್ಯತೆಯ ಅನುಸಾರವಾಗಿ 'ಕೆ.ವಿ. ಜಯಪ್ಪ' ಅವರ "ಕೊರಚರ ಭಾಷೆ: ವರ್ಣನಾತ್ಮಕ, ತೌಲನಿಕ ಅಧ್ಯಯನ" ಎಂಬ ಸಂಶೋಧಿತ ಕೃತಿಯನ್ನು ಬಳಸಿಕೊಳ್ಳಲಾಗಿದೆ.

ಯಾವುದೇ ಭಾಷೆಯ ನಿಜವಾದ ಸ್ವರೂಪವನ್ನು ಅರಿಯುವಲ್ಲಿ ಲಿಪಿಯುಕ್ತ ವರ್ಣಮಾಲೆ ಪ್ರಯೋಜನಕಾರಿಯಾಗುತ್ತದೆ. ಆದ್ದರಿಂದ ಧ್ವನಿಯೇ ಭಾಷೆಗೆ ಮೂಲ. ಮಾತಿನ ಘಟಕಗಳಾಗುವ ಧ್ವನಿಗಳ ಅಧ್ಯಯನವನ್ನೇ ಧ್ವನಿ ಶಾಸ್ತ್ರಾಧ್ಯಯನವು ಒಳಗೊಂಡಿರುತ್ತದೆ. ಈ ಕುರಿತು ಕೆ.ಎಲ್. ಪೈಕ ಎಂಬ ಭಾಷಾ ವಿಜ್ಞಾನಿ Phonetics collects raw material and phonemics cooks it ಎಂದರೆ ಧ್ವನಿಶಾಸ್ತ್ರವು ಕಚ್ಚಾ ಸಾಮಗ್ರಿಯನ್ನು ಕೂಡಿಸಿದರೆ ಧ್ವನಿಮಾಶಾಸ್ತ್ರವು ಅದನ್ನು ಪಾಕಗೊಳಿಸುತ್ತದೆ ಎಂಬ ಮಾತಿನಲ್ಲಿ ಯಾವುದೇ ಭಾಷೆಯನ್ನು ವಿವರಿಸಬೇಕಾದರೆ ಮೊಟ್ಟಮೊದಲು ಧ್ವನಿಶಾಸ್ತ್ರದ ಅಭ್ಯಾಸ ಎಷ್ಟು ಅಗತ್ಯವೆಂಬುದನ್ನು ಸೂಚಿಸಿದ್ದಾನೆ. ಮನುಷ್ಯ ಹೊರಡಿಸುವ ಎಲ್ಲಾ ಧ್ವನಿಗಳಿಗೆ ವ್ಯವಸ್ಥಿತವಾಗಿ ಅವುಗಳಿಗೆ ನಿರ್ದಿಷ್ಟ ಸಂಕೇತಗಳನ್ನು ಕೊಡಲಾಗುವುದು. ಅಂತರಾಷ್ಟ್ರೀಯ ಧ್ವನ್ಯಾಲೇಖ (International phonetic script) ಒಂದು ಇಂತಹ ಸಂಕೇತಗಳನ್ನು ಒಳಗೊಂಡು ರಚಿತವಾಗಿದೆ. ಈ ಧ್ವನಿ ಲಿಪಿ ಸಂಕೇತಗಳನ್ನು ಸಾಮಾನ್ಯವಾಗಿ ಭಾಷಾ ವಿಜ್ಞಾನಿಗಳು ಬಳಸುತ್ತಾರೆ. ಧ್ವನಿಶಾಸ್ತ್ರದಲ್ಲಿ ಧ್ವನಿಗಳು ಹುಟ್ಟುವ ರೀತಿ, ಸ್ಥಾನ, ಕರಣಗಳ ಪಾತ್ರ, ಧ್ವನಿಗಳ ಗುಣಧರ್ಮ, ವರ್ಗೀಕರಣ ಇತ್ಯಾದಿಗಳು ಶಾಸ್ತ್ರೀಯ ವಿವರಣೆಯಾಗಿದೆ (ಸಂಗಮೇಶ ಸವದತ್ತಿಮಠ, ೧೯೭೭, ಪುಟ-೮೪).

ಹೀಗಾಗಿ ಧ್ವನ್ಯುತ್ಪಾದನಾ ಶಾಸ್ತ್ರವು ಪ್ರತಿಯೊಂದು ಧ್ವನಿಯನ್ನು ಅತಿಸೂಕ್ಷ್ಮವಾಗಿ ನಿರೀಕ್ಷಿಸಿ, ಪರಿಶೀಲಿಸಿ ಅವುಗಳನ್ನು ಗುರುತಿಸುತ್ತದೆ. ಈ ಹಿನ್ನೆಲೆಯಲ್ಲಿ ಕೊರಚರ ಭಾಷೆಯನ್ನು ನೋಡುವುದಾದರೆ, ಕೊರಚರ ಭಾಷೆಯ ವರ್ಣಗಳನ್ನು ವ್ಯಂಜನಗಳು, ಸ್ವರಗಳು ಎಂಬುದಾಗಿ, ವ್ಯಂಜನಗಳಲ್ಲಿ ವರ್ಗೀಯ ಮತ್ತು ಅವರ್ಗೀಯವೆಂದು ಸ್ವರಗಳನ್ನು ಹ್ರಸ್ವ, ದೀರ್ಘವೆಂದು ಸ್ಥೂಲವಾಗಿ ವಿವರಿಸಿಕೊಳ್ಳಬಹುದು. ಇಲ್ಲಿ ವ್ಯಂಜನಗಳನ್ನು ಸ್ವರದ ಸಹಾಯವಿಲ್ಲದೆ ಉಚ್ಚರಿಸಲಾಗದು, ಸ್ವರದ ಬೆಳಕಿನಲ್ಲಿ ವ್ಯಂಜನಗಳ ವಸ್ತು ಕಾಣುತ್ತವೆ ಎನ್ನುತ್ತಾರೆ. ಇಲ್ಲಿ ಸ್ವರಗಳ ಪ್ರಾಮುಖ್ಯತೆ ವ್ಯಕ್ತವಾಗುತ್ತದೆ. 'ಸ್ವರ' ಎಂದರೆ 'ಸ್ವ' ಎಂದರೆ ಸ್ವತಃ ರ ಎಂದರೆ ಆಳುವ ಎಂಬರ್ಥವೆಂದು ಹೇಳುತ್ತಾರೆ. ಸ್ವರ-ಚಕ್ರವರ್ತಿ ಇದ್ದಂತೆ, ವ್ಯಂಜನ ದುರ್ಬಲ ಅರಸನಂತೆ ರಾಜ ತನ್ನ ಸರ್ವಸ್ವವನ್ನು ಚಕ್ರವರ್ತಿಗೆ ನೀಡಿ ತಾನು ಕಾಣಿಸಿಕೊಳ್ಳುತ್ತಾನೆ. "ದುರ್ಬಲಸ್ಯೆ ಯಥಾ ರಾಷ್ಟ್ರ ಹರತೇ ಬಲವಾನ್ ನೃಪಃ ದುರ್ಬಲಂ ವ್ಯಂಜನಂ ತದ್‌ವತ್ ಹರತೆ ಬಲವಾನ್ ಸ್ವರಃ ಸ್ವಯಂ ವಾಜಂತೇ ಸ್ವರಃ" ಎಂದು ಪತಂಜಲಿ ಅವರು ವ್ಯಂಜನಗಳೆಂಬ ಮಣಿಗಳನ್ನು ಸ್ವರಗಳೆಂಬ ಸೂತ್ರದಲ್ಲಿ ಪೋಣಿಸಲಾಗುತ್ತದೆ ಎನ್ನುತ್ತಾರೆ. ಹೀಗೆ ಪ್ರಾಚೀನರು ವ್ಯಂಜನಗಳನ್ನು ಅಧೀನ ಧ್ವನಿಗಳೆಂದೂ ಸ್ವರಗಳು ಸ್ವತಂತ್ರವೆಂದೂ ಅಭಿಪ್ರಾಯ ಪಡುತ್ತಾರೆ.

ಈ ಹಿನ್ನೆಲೆಯಲ್ಲಿ ಅಲೆಮಾರಿ ಬುಡಕಟ್ಟು ಸಮುದಾಯವಾದ ಕೊರಚರ ಭಾಷೆಯನ್ನು ಗಮನಿಸುವುದಾದರೆ ಆ ಭಾಷೆಯಲ್ಲಿ ಒಟ್ಟು ೩೩ ವರ್ಣಗಳಿವೆ. ಅವುಗಳಲ್ಲಿ ಒಟ್ಟು ೧೦ ಸ್ವರಗಳು ಹಾಗೂ ೨೪ ವ್ಯಂಜನಗಳು ಬಳಕೆಯಾಗುವುದು ಗೋಚರವಾಗುತ್ತದೆ.

ಸ್ವರಗಳು

ಹ್ರಸ್ವ ಸ್ವರಗಳು : ಅ,ಇ,ಉ,ಎ,ಒ –೫

ಧೀರ್ಘಸ್ವರಗಳು : ಆ,ಈ,ಊ,ಏ,ಓ –೫

ಸ್ವರ ಧ್ವನಿಮಾಗಳನ್ನು ಉಚ್ಚಾರಣೆ ಮಾಡುವಾಗ ನಾಲಗೆಯಲ್ಲಿ ಆಗುವ ಬದಲಾವಣೆಗಳನ್ನು ಗಮನಿಸಿ ಉನ್ನತ, ಮಧ್ಯ, ಅವನತ, ಎತ್ತರವನ್ನಾಧರಿಸಿ, ನಾಲಗೆಯ ಅಗ್ರ, ಮಧ್ಯ, ಮತ್ತು ಪಶ್ಚ ಚಲನೆಯನ್ನಾಧರಿಸಿ ಗುರುತಿಸಲಾಗಿದೆ. ಜೊತೆಗೆ ಉಚ್ಚಾರಣೆಯ ಅವಧಿಗನುಗುಣವಾಗಿ ಹ್ರಸ್ವಸ್ವರ, ದೀರ್ಘಸ್ವರಗಳೆಂದೂ, ತುಟಿಗಳ ಸ್ಥಿತಿಯನ್ನಾಧರಿಸಿ, ಸ್ವರಗಳನ್ನು ಗೋಳ, ಅಗೋಳ ಸ್ವರಗಳೆಂದು ವರ್ಗೀಕರಿಸಿಕೊಳ್ಳಲಾಗಿದೆ. ಇಲ್ಲಿ ಸ್ವರಗಳಲ್ಲಿ ವೈವಿಧ್ಯವನ್ನುಂಟು ಮಾಡುವ ಮುಖ್ಯ ಅಂಶಗಳೆಂದರೆ ನಾಲಗೆ ಮತ್ತು ತುಟಿಗಳು ಮಾತ್ರ. ಹೀಗಾಗಿ ಪುಪ್ಪಸದಿಂದ ಹೊರಟ ಹವೆ ಮುಖ ವಿವರದಲ್ಲಿ ಯಾವ ಬಗೆಯ ಅಡೆತಡೆಗಳಿಗೆ ಒಳಗಾಗದೆ ಉನ್ನತವಾಗುವ ಧ್ವನಿಗಳೇ ಸ್ವರಗಳು. ಇದೇ ವ್ಯಂಜನಗಳಿಗೂ ಸ್ವರಗಳಿಗೂ ಇರುವ ಭಿನ್ನತೆ ಅಂತೆಯೇ ಸ್ವರೋಚ್ಚಾರಣೆ ಬಹುಸುಲಭ. ಸ್ವರಗಳನ್ನು ಸ್ಪಷ್ಟವಾಗಿ ಸ್ವತಂತ್ರವಾಗಿ ಉಚ್ಚರಿಸಬಹುದು. ಉದಾಹರಣೆಗೆ.

ಧ್ವನಿ ವರ್ಣನೆ	**ಉದಾಹರಣೆ**
(ಇ) ಉನ್ನತ ಹ್ರಸ್ವ (ಅಗ್ರ)	ಇರು (ನಿಲ್ಲು), ಇಟಿ (ಇಲ್ಲಿ)
(ಈ) ಉನ್ನತ ದೀರ್ಘ (ಅಗ್ರ)	ಈಫ (ಬೆನ್ನು), ಈದ (ಚಳಿ)
(ಉ) ಉನ್ನತ ಹ್ರಸ್ವ (ಪಶ್ವ)	ಉರಿ (ಸಂಕಟ), ಪುರಿ (ನೂಲು)
(ಊ) ಉನ್ನತ ದೀರ್ಘ (ಪಶ್ವ)	ಊಡು (ಮನೆ), ಊರ (ಊರು)
(ಎ) ಉನ್ನತ ಮಧ್ಯಹ್ರಸ್ವ (ಅಗ್ರ)	ಎಮೆ (ಏನಮ್ಮ), ಕೆರು (ಹುಡುಗ)
(ಏ) ಉನ್ನತ ಮಧ್ಯ ದೀರ್ಘ (ಅಗ್ರ)	ಏಸ (ಯಾರದು), ಏರಿ (ಕೆರೆ)
(ಒ) ನಡುಮಧ್ಯ ಹ್ರಸ್ವ (ಪಶ್ವ)	ಒದುಡು (ತುಟಿ), ಒಟೆ (ಹಾಕಿದೆ)
(ಓ) ನಡುಮಧ್ಯ ದೀರ್ಘ (ಪಶ್ವ)	ಓಡೋ (ಓಡು), ಕೊಮ್ಮ (ರೆಂಬೆ)
(ಅ) ಅವನತ ಹ್ರಸ್ವ (ಮಧ್ಯ)	ಅಡಪು (ಒಲೆ), ಅಯ್ಯ (ಅವರು)

(ಆ) ಅವನತ ದೀರ್ಘ (ಮಧ್ಯ) ಆಮಾ (ಆಮೆ), ಆವ (ತಂದೆ)
ಪಾಮು (ಹಾವು), ಪಾಸಿ (ಎಳೆ)

ಕೊರಚ ಭಾಷೆಯ ಸ್ವರ ಧ್ವನಿಗಳ ಪ್ರಸಾರ ಮತ್ತು ಪರಿಸರ

೧. ಪದಾದಿ (+ – –)

೨. ಪದಮಧ್ಯ (– + –)

೩. ಪದಾಂತ್ಯ (– – +)

ಧ್ವನಿಗಳು	ಪರಿಸರ	ಉದಾಹರಣೆ	ಕನ್ನಡದಲ್ಲಿ ಅರ್ಥ
ಅ.	+ – –	ಅಡಪ, ಅಯ್ಯ	ಒಲೆ, ಅವರು
	– + –	ನಕ್ಕ, ನಾನು	ನರಿ, ನಾನು
	– – +	ನಿಂಗ, ಅಮ್ಮ	ನೀವು, ತಾಯಿ
ಆ.	+ – –	ಆಮಾ, ಆವ	ಆಮೆ, ತಂದೆ
	– + –	ಪಾಮು, ಸೆನಾಯಿ	ಹಾವು, ಬಹಳ
	– – +	–	–
ಇ.	+ – –	ಇಸರ, ಇಪ್ಪ, ಇನುಮು	ಬೀಸು, ಈಗ, ಪಾತ್ರೆ ಕೆರೆಯಲು ಬಳಸುವ ಸಾಧನ
	– + –	ಪಿಸಿಗು, ಮಿಸ	ಹಿಚಕು, ಮೀಸೆ
	– – +	ಕೀಯಿ, ಸೊಯಿ	ಕೈ, ಕಿವಿ
ಉ.	+ – –	ಉಲಿಗೆಡ್ಡ, ಉಡುಮು	ಈರುಳ್ಳಿ, ಉಡ
	– + –	ಸುಳಿ, ಪುರಿ	ಸುಳಿ, ನಾರಿನ ದಾರ
	– – +	ಪೂವು, ಪಾಮು, ನೆರ್ರು	ಹೂವು, ಹಾವು, ಬೆಂಕಿ
ಊ.	+ – –	ಊರ್ಮಿಂಡಿ, ಊಡು	ಚಟ್ನಿ, ಮನೆ
	– + –	ದೊಡ, ಪೂನ	ಆಕಳ ಕರು, ಬೆಕ್ಕು
	– – +	–	–
ಎ.	+ – –	ಎಲಾಕ, ಎದ	ವೀಳ್ಯದೆಲೆ, ಎದೆ
	– + –	–	–
	– – +	ಸೊನ್ನೆ, ಪಾತೆ	ಹೇಳಿದೆ, ನೋಡಿದೆ

ಐ.	+ – –	ಏಸ್ಯಾ, ಏರಿ	ಯಾರದು, ಕೆರೆ
	– + –	ಕೇವ್ರು, ನೇಮು	ರಾಗಿ, ಹಸನುಗೊಳಿಸು
	– – +	–	–
ಒ.	+ – –	ಒಂಡು, ಒಂಬದಿ	ಒಂದು, ಒಂಭತ್ತು
	– + –	ಕೊಡಪಾನ, ಸೊಂಬು	ಕೊಡ, ಚೆಂಬು
	– – +	ಕೇಪಯ್ಯ, ಮಾಮಾ	ಮುದುಕ, ಮಾವ
ಓ.	+ – –	ಓಟೆನಾಯಿ, ಓಡಿಪೊ	ಬೇಟೆನಾಯಿ, ಓಡಿಹೋಗು
	– + –	ಕೋಣಿಪಟ್ಟ, ಕೋಣಿಸಿ	ಗೋಣಿಚೀಲ, ಡಬಣ
	– – +	–	–
ಈ.	+ – –	ಈಪ, ಈಗ	ಬೆನ್ನು, ನೊಣ
	– + –	ಪೀಸು, ನೀನು	ಈಚಲಗರಿ, ನೀನು
	– – +	–	–

ಕೊರಚ ಭಾಷೆಯ ಸ್ವರ ಧ್ವನಿಗಳ ಪ್ರಸಾರ ಮತ್ತು ಪರಿಸರ

ಧ್ವನಿಗಳು	**ಪದಾದಿ**	**ಪದಮಧ್ಯ**	**ಪದಾಂತ್ಯ**
ಅ	+	+	+
ಆ	+	+	–
ಇ	+	+	+
ಈ	+	+	–
ಉ	+	+	+
ಊ	+	+	–
ಎ	+	+	+
ಏ	+	+	–
ಒ	+	+	+
ಓ	+	+	–

ಈ ರೀತಿಯಲ್ಲಿ ಕೊರಚರ ಭಾಷೆಯನ್ನು ಗಮನಿಸಿದಾಗ ಸ್ವರಗಳಲ್ಲಿಯೂ ಸಹ ಹ್ರಸ್ವಸ್ವರಗಳು ಮೂರು ಪರಿಸರದಲ್ಲಿ ಕಂಡುಬರುತ್ತಿದ್ದು ದೀರ್ಘ ಸ್ವರಗಳು ಪದಾದಿ, ಪದಮಧ್ಯ ಪರಿಸರದಲ್ಲಿ ಮಾತ್ರ ಬಳಕೆಗೊಂಡಿರುವುದನ್ನು ಗಮನಿಸಬಹುದಾಗಿದೆ.

ವ್ಯಂಜನಗಳು

೧. ವರ್ಗೀಯ ವ್ಯಂಜನಗಳು : ಕ್,ಗ್, ಚ್, ಜ್, ಟ್, ಡ್, ತ್, ದ್, ಪ್, ಬ್– ೧೦

೨. ಅನುನಾಸಿಕಗಳು : ಣ್, ನ್, ಮ್ – ೦೩

೩. ಅನುನಾಸಿಕ ಉಪ ಧ್ವನಿಗಳು : ಙ್, ಞ್ – ೦೨

೪. ಅವರ್ಗೀಯ ವ್ಯಂಜನಗಳು: ಯ್, ರ್, ಲ್, ವ್, ಶ್, ಸ್, ಹ್, ಳ್ –೦೮

ವ್ಯಂಜನ ಧ್ವನಿಮಾಗಳನ್ನು ಉಚ್ಚಾರಣಾಸ್ಥಾನ ಮತ್ತು ಉಚ್ಚಾರಣಾ ರೀತಿಗನುಗುಣವಾಗಿ ವಿವರಿಸಲಾಗಿದೆ. ಉಚ್ಚಾರಣಾ ಸ್ಥಾನಗನುಗುಣವಾಗಿ ಉಭಯೋಷ್ಠ್ಯ, ದಂತ್ಯೋಷ್ಠ್ಯ, ದಂತ್ಯ, ಮೂರ್ಧನ್ಯ, ತಾಲವ್ಯ, ಕಂಠ್ಯ ಮತ್ತು ಗಲೀಯ ಎಂದು ಏಳು ಬಗೆಯ ಧ್ವನಿಮಾಗಳನ್ನು ಗುರುತಿಸಿಕೊಂಡು, ಘೋಷ ಮತ್ತು ಅಘೋಷ ಎಂಬ ಎರಡು ರೀತಿಯ ಧ್ವನಿಮಾಗಳಲ್ಲಿ ವಿವರಿಸಲಾಗಿದೆ. ಉಚ್ಚಾರಣಾ ರೀತಿಗನುಗುಣವಾಗಿ ವ್ಯಂಜನ ಧ್ವನಿಮಾಗಳನ್ನು ಅಲ್ಪಪ್ರಾಣ, ಅನುನಾಸಿಕ, ಸಂಘರ್ಷಗಳು, ಪಾರ್ಶ್ವಕಗಳು, ಕಂಪಿತ ಹಾಗೂ ಅರ್ಧಸ್ವರ ಎಂದು ಆರು ಬಗೆಯ ವ್ಯಂಜನ ಧ್ವನಿಮಾಗಳನ್ನು ಗುರುತಿಸಲಾಗಿದೆ. ಅವುಗಳನ್ನು ಈ ಮುಂದಿನಂತೆ ನೋಡಬಹುದಾಗಿದೆ.

೧. **ಅಲ್ಪಪ್ರಾಣ (ಸ್ಪರ್ಶಗಳು):** ಶ್ವಾಸಕೋಶದಿಂದ ಹೊರಬರುವ ಉಸಿರನ್ನು ಆಸ್ಯದ ಯಾವುದೇ ಭಾಗದಲ್ಲಿ ಸ್ವಲ್ಪ ಕಾಲ ಪೂರ್ಣ ತಡೆದು ಒಮ್ಮೆಲೆ ಬಿಟ್ಟಾಗ ಉಂಟಾಗುವ ಧ್ವನಿಗಳನ್ನು ಸ್ಪರ್ಶಗಳು ಎನ್ನುತ್ತಾರೆ. ಶ್ವಾಸವು ಸ್ಫೋಟಗೊಂಡಂತೆ ಹೊರಬೀಳುವುದರಿಂದ ಇವುಗಳಿಗೆ ಸ್ಫೋಟಗಳೆಂದೂ ಕರೆಯುತ್ತಾರೆ. ಪ್,ತ್,ಚ,ಕ್, ಅಘೋಷ ಸ್ಪರ್ಶಗಳಾದರೆ, ಬ್,ದ್,ಡ್,ಗ್ ಇವು ಘೋಷ ಸ್ಪರ್ಶಗಳಾಗುತ್ತವೆ. ಹೀಗೆಯೇ ಕೊರಚ ಭಾಷೆಯಲ್ಲಿನ ಮಹತ್ವದ ಸ್ಪರ್ಶ (ಅಲ್ಪಪ್ರಾಣ) ಧ್ವನಿಗಳನ್ನು ವಿವರಿಸಲಾಗಿದೆ. ಉದಾಹರಣೆಗೆ,

ಧ್ವನಿ ವರ್ಣನೆ	**ಉದಾಹರಣೆ**
(ಕ್) ಕಂಠ್ಯ ಅಘೋಷ ಸ್ಪರ್ಶ	ಕರಗು (ಹಗ್ಗ) ಸುಕ್ಕ (ಸುಕ್ಕ) ನಕ್ಷತ್ರ
(ತ್) ದಂತ್ಯ ಅಘೋಷ ಸ್ಪರ್ಶ	ತಾತ (ಕೋಡು), ಪಾತ (ನೋಡಿದೆ)
(ತ್) ವತ್ಸ್ಯ ಅಘೋಷ ಸ್ಪರ್ಶ	ತಲಕಾಯಿ (ತಲೆ) ಸೊತ್ತೆ (ಸತ್ತೆ)
(ದ್) ದಂತ್ಯ ಅಘೋಷ ಸ್ಪರ್ಶ	ದಿನಾಲು (ಪ್ರತಿದಿನ) ದಿಗಲಿ (ಕೆಳಗೆ)
(ದ್) ವತ್ಸ್ಯ ಅಘೋಷ ಸ್ಪರ್ಶ	ದೆಬ್ಬು (ತಳ್ಳು), ಸೆದ್ದು (ಗಲಾಟೆ)

(ಟ್) ಪರಿವೇಷ್ಠಿತ ಅಘೋಷ ಸ್ಪರ್ಶ	ಗೆಟ್ಟಿ (ಗಟ್ಟಿ) ಟೆಂಕಾಯಿ (ತೆಂಗಿನಕಾಯಿ)
(ಡ್) ಪರಿವೇಷ್ಠಿತ ಅಘೋಷ ಸ್ಪರ್ಶ	ಗೆಡ್ಡ (ಹಲ್ಲು), ಗಡ್ಡ (ಗಡ್ಡೆ)
(ಗ್) ಕಂಠ್ಯ ಅಘೋಷ ಸ್ಪರ್ಶ	ಗಾವಡಿ (ಯುವಕ) ಪಗ (ಹಣ್ಣು)

ಅನುನಾಸಿಕಗಳು

ನಾಸಾ ಕುಹರ ಹಾಗೂ ಆಸ್ಯದ ಮೂಲಕ ಏಕಕಾಲಕ್ಕೆ ಹವೆಯನ್ನು ಕಳಿಸುವುದರ ಮೂಲಕ ಉಚ್ಚರಿಸಲ್ಪಡುವ ಸ್ಪರ್ಶ ಧ್ವನಿಗಳೇ ನಾಸಿಕ ಧ್ವನಿಗಳೆಂದೆನಿಸುತ್ತವೆ. ನಾಸಿಕ ಮಾರ್ಗದಿಂದಲೂ ಹವೆ ಹೊರಡುವುದರಿಂದ ಸ್ಪರ್ಶ ಧ್ವನಿಯಲ್ಲಿ ಒಂದು ಬಗೆಯ ನಾದವಿರುತ್ತದೆ. ಅಂತೆಯೇ ನಾಸಿಕ ಧ್ವನಿ ಸಾಮಾನ್ಯವಾಗಿ ಘೋಷವೇ ಆಗಿರುವುದು ವಾಡಿಕೆ. ಕೊರಚ ಭಾಷೆಯಲ್ಲಿರುವ ಪ್ರಮುಖ ನಾಸಿಕ ಧ್ವನಿಗಳು ಉದಾಹರಣೆಗೆ.

ಧ್ವನಿ ವರ್ಣನೆ	**ಉದಾಹರಣೆ**
ಮ್ – ಉಭಯೋಷ್ಠ ಅನುನಾಸಿಕ	ಮರ್ರೂ (ಮರ), ಮಾಮೊ (ಮಾಮ), ಅಮ್ಮ (ತಾಯಿ), ಜಾಮ (ಅಜ್ಜಿ)
ನ್ – ದಂತ್ಯ ಅನುನಾಸಿಕ	ಸಂತ (ಸಂತೆ), ವಂದ (ಬಂದ), ನಂಗ (ನಾವು) ನಿಂಗ (ನೀವು)
ನ್ – ವತ್ಸ್ಯ ಅನುನಾಸಿಕ	ತನ್ನಿ (ನೀರು), ಸೊನ್ನೆ (ಹೇಳಿದೆ)
ಣ್ – ಪರಿವೇಷ್ಟಿತ ಅನುನಾಸಿಕ	ಪಣಿ (ಕೆಲಸ), ಅಣ್ಣ (ಸಹೋದರ) ಕಣ್ (ಕಣ್ಣು)
ಞ್ – ತಾಲವ್ಯ ಅನುನಾಸಿಕ	ಅಂಚು (ಹೆಂಚು), ಪೆಂಚು (ಹೆಂಚು)
ಙ್ – ಕಂಠ್ಯ ಅನುನಾಸಿಕ	ಬಂಗು (ಅಂಟು), ಅಂಗಿ (ಅಂಗಿ)

ಘರ್ಷಗಳು–ಅನುಘರ್ಷಗಳು

ಶ್ವಾಸವು ಅತಿ ಸಂಕುಚಿತವಾಗಿ ಇಕ್ಕಟ್ಟಾದ ಸ್ಥಾನದಲ್ಲಿ ಘರ್ಷಣೆಗೊಂಡು ಹೊರಬಂದಾಗ ಉಂಟಾಗುವ ಧ್ವನಿಗಳೇ ಘರ್ಷಗಳು. ಕೊರಚರ ಭಾಷೆಯಲ್ಲಿ ಪ್, ಸ್, ಶ್, ಹ್, ಮುಂತಾದವು ಘರ್ಷ ಧ್ವನಿಗಳು. ಇವುಗಳಲ್ಲಿ ಹ್, ಒಂದನ್ನುಳಿದು ಉಳಿದೆಲ್ಲವು ಅಘೋಷಗಳು ಹ್ ಮಾತ್ರ ಘೋಷವಾಗಿದೆ. (ಹ್ ದ ಘೋಷತ್ವ ಸ್ವರದಷ್ಟು ಅಲ್ಲವೆಂದು ಅದನ್ನು ವ್ಯಂಜನವೆಂದು ಪರಿಗಣಿಸುತ್ತಾರೆ. ಉಚ್ಚಾರದ ರೀತಿಯ ದೃಷ್ಟಿಯಿಂದ ಅದು ವಾಸ್ತವಿಕವಾಗಿ ಅಘೋಷ ಸ್ವರ ಆಗುತ್ತದೆ. ಉದಾ.

ಧ್ವನಿ ವರ್ಣನೆ	**ಉದಾಹರಣೆ**
ಸ್ – ವರ್ತ್ಸ್ಯ ಅಘೋಷ ಘರ್ಷ	ಸಲ್ಲಾಡು (ನಿಕ್ಕಾರು) ಸಾಲಿ (ಶಾಲೆ), ಏಸ (ಯಾರದು)

ಶ್ – ತಾಲವ್ಯ ಅಘೋಷ ಘರ್ಷ	ಶನಾಯಿ (ಬಹಳ) ಶಾನ (ಸಾಕು)
ಹ್ – ಗಲೀಯ ಘೋಷ ಘರ್ಷ	ಹೊರಗು (ಕಟ್ಟಿಗೆ) ಹೇರಿಕೋರಿ (ಕೆರೆಯ್ಯು) ಹಲಕನಗಂಪ (ಬಳಿದ ಪುಟ್ಟಿ), ಹಾಸು (ಆಯಿತು) ಹೋಸು (ಹೋದ).

ಪಾರ್ಶ್ವಿಕಗಳು

ನಾಲಗೆಯ ತುದಿ ವರ್ತ್ಸ್ಯ ಇಲ್ಲವೆ ತಾಲುವಿಗೆ ಸಂಪರ್ಕವಾಗಿ ಶ್ವಾಸವನ್ನು ತಡೆದು ನಾಲಗೆಯ ಪಾರ್ಶ್ವದಿಂದ ಗಾಳಿ ಪಾರಾಗುತ್ತದೆ. ಆಗ ಹುಟ್ಟುವ ಧ್ವನಿಗಳೇ ಪಾರ್ಶ್ವಿಕಗಳು ಲ್ ಹಾಗೂ ಳ್ ಇವು ಪಾರ್ಶ್ವಿಕ ಧ್ವನಿಗಳು. ಉದಾ.

ಧ್ವನಿ ವರ್ಣನೆ	**ಉದಾಹರಣೆ**
ಲ್ – ವರ್ತ್ಸ್ಯ ಪಾರ್ಶ್ವಿಕ	ಕೊಲ್ಲ (ಹೊಲ), ನಲ್ಲ (ಒಳ್ಳೆಯ) ತೊಲು (ಚರ್ಮ), ಲೆಕ್ಕ (ಹಣ)
ಳ್ –ಪರಿವೇಷ್ಟಿತ (ಮಾರ್ಧ್ಯನ್ಯ) ಪಾರ್ಶ್ವಿಕ	ಕಳಿ (ಊಟ/ಮುದ್ದೆ), ಸುಳಿ (ಚಕ್ರ) ಮಳಿ (ಸರಳು), ನೆಳ್ಳಿ–ಮಧ್ಯ ವಾಳ (ಬಾರೋ)

೫. ಕಂಪಿತ ಹಾಗೂ ತಾಡಿತಗಳು

ನಾಲಗೆಯ ತುದಿಯ ಅಥವಾ ಮುಂಭಾಗದ ಕಂಪನದಿಂದ ಉಂಟಾಗುವ ಧ್ವನಿಗಳೇ ಕಂಪಿತಗಳು. ರ್ ಧ್ವನಿ ಉಚ್ಚರಿಸುವಾಗ ನಾಲಗೆಯ ತುದಿ ವರ್ತ್ಸ್ಯಕ್ಕೆ ತಾಗಿದಂತಾಗಿ ನಾಲಗೆಯ ಮುಂಭಾಗ ಕಂಪನಗೊಳ್ಳುತ್ತದೆ. ಈ ಕಂಪನ ಹೆಚ್ಚು ಸಲ ಆಗದೆ ಒಮ್ಮೆ ಮಾತ್ರ ಆಗುವುದರಿಂದಾಗುವ ಧ್ವನಿಯನ್ನು ತಾಡಿತವೆಂದು ಕರೆಯುತ್ತಾರೆ.

ಧ್ವನಿ ವರ್ಣನೆ	**ಉದಾಹರಣೆ**
ರ್ – ಮತ್ಸ್ಯತಾಡಿತ	ನರ್ರೋ (ನರ), ಕರ್ರಿ (ಮಾಂಸ)

ಅರ್ಧ ಸ್ವರಗಳು

ಸಂಪೂರ್ಣ ವ್ಯಂಜನ ಅತವಾ ಸಂಪೂರ್ಣ ಸ್ವರದ ಲಕ್ಷಣಗಳನ್ನು ಹೊಂದಿರದೆ ಎರಡರ ಲಕ್ಷಣಗಳನ್ನು ಹೊಂದಿ ಒಂದೊಂದು ಭಾಷೆಯಲ್ಲಿ ಅವುಗಳ ರಚನೆಗನುಗುಣವಾಗಿ ಸ್ವರವೋ, ವ್ಯಂಜನವೋ ಆಗಿ ಬಳಕೆಗೊಳ್ಳುವ ವೈಶಿಷ್ಟ್ಯವನ್ನು ಪರಿಗಣಿಸಿದ್ದಾರೆ. ಯ್ ಹಾಗೂ ವ್ ಅರ್ಧಸ್ವರಗಳಲ್ಲಿ ಸೇರಿಸಲಾಗುತ್ತದೆ.

ಧ್ವನಿ ವರ್ಣನೆ	**ಉದಾಹರಣೆ**
ಯ್ – ಅರ್ಧಸ್ವರ	ಯೇಟಾಗ (ಯಾವ ಕಡೆಯಿಂದ), ಯೇಪ್ಪಾದು (ಯಾವಾಗ)
ವ್ – ಅರ್ಧಸ್ವರ	ವೇಳೆಲೆ (ಏನಲೆ), ವೇಸ (ವೇಷ)

ಕೊರಚರ ಭಾಷೆಯಲ್ಲಿ ಶಿಷ್ಟಕನ್ನಡದಂತೆ ಮಹಾಪ್ರಾಣಗಳ ಬಳಕೆಯನ್ನು ಮಾಡುವುದಿಲ್ಲ. ಅಲ್ಪಪ್ರಾಣಗಳು ಮಾತ್ರ ಬಳಕೆಯಾಗುವುದು ಕಂಡುಬರುತ್ತದೆ. ಉದಾ. ಹಠ–ಹಟ, ಪಂಥ–ಪಂತ, ಅರ್ಥ–ಅರ್ತ ಇತ್ಯಾದಿ.

ಕೊರಚರ ಭಾಷೆಯ ಅವರ್ಗೀಯ ವ್ಯಂಜನಗಳಲ್ಲಿ ಸ್,ಶ್,ಷ್ ಎಂಬ ಪ್ರಬೇಧಗಳಲ್ಲಿ ಸಂಘರ್ಷ (ಘರ್ಷ) ದಂತ್ಯ ಅಘೋಷ ಧ್ವನಿಮಾ 'ಸ್' ಮಾತ್ರ ಬಳಕೆಯಲ್ಲಿದೆ. ಉದಾ. ಬಾಸೆ, ಕುಸಿ, ಆಸೆ, ಸೆನಾಯಿ, ಇತ್ಯಾದಿ.

ಯ್, ರ್, ಲ್, ವ್, ಹ್, ಳ್, ಗಳು ಸಹಜ ಬಳಕೆಯಲ್ಲಿರುವುದು ಕೊರಚರ ಭಾಷೆಯಲ್ಲಿ ಕಂಡುಬರುತ್ತವೆ. ಒಂದು ವೇಳೆ ಇಲ್ಲಿ ಮಹಾಪ್ರಾಣ ಅಥವಾ ಶ್, ಷ್‌ಗಳು ಕಂಡುಬಂದರೆ ಅದು (ಶಿಕ್ಷಿತರ) ಕಲಿತವರ ಮಾತಿನಲ್ಲಿರುವ ಎರವಲು ಪದಗಳೆಂದು ಪರಿಗಣಿಸಬಹುದು.

ವ್ಯಂಜನ ಧ್ವನಿಗಳ ಪರಿಸರ ಮತ್ತು ಪ್ರಸಾರ ವಿವರಣೆ

೧. ಪದಾದಿ (+ – –)

೨. ಪದಮಧ್ಯ (– + –)

೩. ಪದಾಂತ್ಯ (– – +)

ಧ್ವನಿಗಳು	ಪರಿಸರ	ಉದಾಹರಣೆ	ಕನ್ನಡದಲ್ಲಿ ಅರ್ಥ
ಕ್	+ – –	ಕರಗು	ಹಗ್ಗ
	– + –	ಕಾಕ, ನಾಕು	ಕಾಗೆ, ನನಗೆ
	– – +	–	–
ಗ್	+ – –	ಗಂಪ, ಗದ್ದ	ಪುಟ್ಟಿ, ಹದ್ದು
	– + –	ನಂಗ, ಪಗ	ನಾವು, ಹೊಗೆ
	– – +	ಎನುಗ	ಹೇಗೆ
ಚ್	+ – –	–	–
	– + –	ಮಚ್ಚಾಡು, ನೆಚ್ಚಿ	ಅಳಿಯ, ಹಣೆ
	– – +	–	–
ಜ್	+ – –	ಜಮಾನು, ಜಾಮ	ಆರಕ್ಷಕ, ಅಜ್ಜಿ
	– + –	ಉಂಜಿ, ಜೇಜಿ	ಬಟ್ಟಲು, ಅಜ್ಜ
	– – +	–	–

ಟ್	+ – –	ಟೆಂಕಾಯಿ	ತೆಂಗಿನಕಾಯಿ
	– + –	ನಟಾದು	ನನ್ನದು
	– – +	ಕಟ್, ಸೆಮಟ	ಕಟ್ಟು, ಬೆವರು
ಡ್	+ – –	–	–
	– + –	ಮಡೆ, ಸೆಡಿ, ನಡ	ಮತ್ತೆ, ಗಿಡ, ನಡೆ
	– – +	–	–
ತ್	+ – –	ತನ್ನಿ	ನೀರು
	– + –	ಅತ್ತ, ಇತ್ತ	ಅದನ್ನು, ಇದನ್ನು
	– – +	ನತ್	ಮೂಗಿನ ಒಡವೆ
ನ್	+ – –	ನಂಗ, ನಿಂಗ	ನಾವು, ನೀವು
	– + –	ಸ್ಯಾನ, ಸೆನ	ಸಾಕು, ಬಹಳ
	– – +	ನಾನ್, ನೀನ್	ನಾನು, ನೀನು
ಣ್	+ – –	–	–
	– + –	ಮಾಣ, ಅಣ್ಣ	ಬೇಡ, ಅಣ್ಣ
	– – +	ಕಣ್, ಕೆಬ್ಬಣ	ಕಣ್ಣು, ಕಬ್ಬಿಣ
ಪ್	+ – –	ಪಾರಿವಾಳ	ಪಾರಿವಾಳ
	– + –	ಪಲಪ್ಪು, ಎಪ್ಪು	ಕಣ್ಣೆ, ಯಾವಾಗ
	– – +	ಮೊಪು	ಹೊರೆ
ಬ್	+ – –	ಬಾನ, ಬೆದ್ದಿ	ಗಡಿಗೆ, ದೊಡ್ಡಪ್ಪ
	– + –	ಡಬ್ಬು, ಮೊಬ್ಬು	ದೂಕು, ಕತ್ತಲು
	– – +	–	–
ಮ್	+ – –	ಮಾಮಾ, ಮೇನತ್ತ	ಮಾವ, ಸೋದರತ್ತೆ
	– + –	ಪಾಮು	ಹಾವು
	– – +	–	–

ಯ್	+ – –	ಯರಕ, ಯರ್ರ	ಬೆರಳು, ಕೆಂಪು
	– + –	–	–
	– – +	ಮಾಂಗಾಯಿ, ಸೆನಾಯಿ	ಮಾವಿನಕಾಯಿ, ಬಹಳ
ರ್	+ – –	ರೆಗು, ರ್ವಾಸೋ	ರಕ್ತ, ಕೋಪ
	– + –	ಪರಕ, ವರ್ರ	ಪರಕೆ, ವಳ್ಳು
	– – +	–	–
ಲ್	+ – –	–	–
	– + –	ನಲ್ಲ, ಪೆಲ್ಲು, ಕೊಲ್ಲ	ಒಳ್ಳೆಯ, ಹಲ್ಲು, ಹೊಲ
	– – +	ಕೆಲ್, ನಿಲ್	ಕಲ್ಲು, ನಿಲ್ಲು
ವ್	+ – –	ವಸೇರು, ವಾಯಿ	ಎತ್ತರ, ಬಾಯಿ
	– + –	ಆವ, ಸೊನ್ನಾವ	ತಂದೆ, ಹೇಳಪ್ಪ
	– – +	–	–
ಸ್	+ – –	ಸಿನ್ನೇದು, ಸಿನಕೇರು	ಸಣ್ಣದು, ಸಣ್ಣ ಹುಡುಗ
	– + –	ತಸ್ಸಿ, ಅಸ್ಯ	ತಂಗಿ, ಅವರದು
	– – +	–	–
ಳ್	+ – –	–	–
	– + –	ವಳ್ಳ, ಪುಳ್ಳ, ನೆಳ್ಳಿ	ಬಿಳಿ, ಮಗಳು, ನಡುವೆ
	– – +	–	–
ಹ್	+ – –	ಹಾಸು, ಹೊಸು, ಹಲಕು	ಆಯಿತು, ಹೋದರು, ನೆಲಸಾರಿಸು
	– + –	–	–
	– – +	–	–

ಕೊರಚ ಭಾಷೆಯ ವ್ಯಂಜನ ಧ್ವನಿಗಳ ಪರಿಸರ ಮತ್ತು ಪ್ರಸಾರ

೧. ಪದಾದಿ (+ – –)

೨. ಪದಮಧ್ಯ (– + –)

೩. ಪದಾಂತ್ಯ (– – +)

ಧ್ವನಿಗಳು	ಪದಾದಿ	ಪದಮಧ್ಯ	ಪದಾಂತ್ಯ
ಕ್	+	–	+
ಗ್	+	–	+
ಚ್	+	–	–
ಜ್	+	–	+
ಟ್	+	+	+
ಡ್	–	+	–
ತ್	+	+	+
ನ್	+	+	+
ಣ್	–	+	+
ಬ್	+	+	–
ಮ್	+	+	–
ಯ್	+	–	+
ರ್	+	+	–
ಲ್	–	+	+
ವ್	+	+	–
ಸ್	+	+	–
ಳ್	–	+	–
ಹ್	+	–	–

ಈ ರೀತಿಯಾಗಿ ಕೊರಚರ ಭಾಷಾ ವ್ಯವಸ್ಥೆಯಲ್ಲಿ ಧ್ವನಿಗಳು ಪದಾದಿ, ಮಧ್ಯ, ಪದಾಂತ್ಯ ಪರಿಸರಗಳಲ್ಲಿ ಕಂಡುಬರುವುದನ್ನು ನೋಡಬಹುದಾಗಿದೆ.

ಕೊರಚರ ಭಾಷೆಯಲ್ಲಿ ಅ, ಇ, ಉ, ಎ, ಒ ಇವು ಪದಾದಿ, ಪದಮಧ್ಯ, ಪದಾಂತ್ಯ ಪರಿಸರದಲ್ಲಿ ಕಾಣಿಸಿಕೊಳ್ಳುತ್ತವೆ. ಮತ್ತು ಆ, ಈ, ಊ, ಏ, ಓ ಇವುಗಳು ಪದಾಂತ್ಯ ಪರಿಸರದಲ್ಲಿ ಕಾಣಿಸಿಕೊಳ್ಳುವುದಿಲ್ಲ.

ಕೊರಚರ ಭಾಷೆಯಲ್ಲಿ ಚ್, ಡ್, ಣ್, ಪ್, ಲ್, ಳ್ ವ್ಯಂಜನಗಳು ಪದಾದಿಯ ಪರಿಸರದಲ್ಲಿ ಕಂಡುಬರುವುದಿಲ್ಲ.

ಕೊರಚರ ಭಾಷೆಯಲ್ಲಿ ಟ್, ತ್, ನ್, ಪ್, ಈ ವ್ಯಂಜನಗಳು ಪದಾದಿ, ಪದಮಧ್ಯ, ಪದಾಂತ್ಯ ಪರಿಸರದಲ್ಲಿ ಕಂಡುಬರುತ್ತವೆ.

ಕೊರಚರ ಭಾಷೆಯಲ್ಲಿ ಕ್, ಗ್, ಚ್, ಜ್, ಪ್, ಬ್ ಮ್, ಳ್, ಸ್, ವ್, ರ್ ಈ ವ್ಯಂಜನಗಳು ಪದಾಂತ್ಯ ಪರಿಸರಗಳಲ್ಲಿ ಕಂಡುಬರುವುದಿಲ್ಲ.

ಪದಾದಿ ಮತ್ತು ಪದಾಂತ್ಯ ಪರಿಸರದಲ್ಲಿ ಳ್, ಪ್, ಚ್, ಡ್ ವ್ಯಂಜನಗಳು ಕಂಡುಬರುವುದಿಲ್ಲ.

ಡ್, ಪ್, ಳ್, ವ್ಯಂಜನಗಳು ಕೊರಚರ ಭಾಷೆಯಲ್ಲಿ ಪದಮಧ್ಯ ಪರಿಸರದಲ್ಲಿ ಮಾತ್ರ ಕಂಡುಬರುತ್ತದೆ.

ಕೊರಚರ ಭಾಷೆಯ ಅವರ್ಗೀಯ ವ್ಯಂಜನಗಳಾದ ಸ್, ಶ್ ಗಳಲ್ಲಿ ಘರ್ಷ ದಂತ ಅಘೋಷ ಧ್ವನಿಮಾ ಸ ಮಾತ್ರ ಬಳಕೆಯಲ್ಲಿದೆ.

ಕೊರಚ ಭಾಷೆಯಲ್ಲಿ ಬಹು ವಿಶೇಷವಾಗಿ ಶಬ್ದಾದಿಯ 'ಚ್' ಕಾರವು 'ಸ' ಕಾರವಾಗಿ ಪರಿವರ್ತಿತವಾಗಿ ಉಳಿದುಕೊಂಡಿರುವುದನ್ನು ನೋಡಬಹುದಾಗಿದೆ. ಅದು ದ್ರಾವಿಡ ಗ್ರಂಥಸ್ಥ ಭಾಷೆಗಳಾದ ತಮಿಳು, ಕನ್ನಡ, ತೆಲುಗು, ಭಾಷೆಗಳಲ್ಲಿ 'ಚ್'ಕಾರವು ಶಬ್ದಾದಿಯಲ್ಲಿ ಇನ್ನೂ ಉಳಿದುಕೊಂಡು ಬಂದಿರುವುದನ್ನು ನೋಡಬಹುದು. ಉದಾಹರಣೆಗೆ.

ತಮಿಳು	ಕನ್ನಡ	ತೆಲುಗು	ಕೊರಚ
ಚಕ್ಕೈ	ಚೆಕ್ಕೆ	ಚಕ್ಕ	ಸೆಕ್ಕ
ಚಾಪ್ಪೈ	ಚಾಪೆ	ಸಾಪ/ಚಾಪ	ಸ್ಯಾಪ
ಚಪ್ಪಿ	ಚಿಪ್ಪು	ಚಿಪ್ಪ	ಸಿಪ್ಪ
ಚೀರು	ಚೀರು	ಚೀರು	ಸೀರು
ಚಲ್ವಂ	ಚಂದ	ಚಲ್ವಮು	ಸೆಂದ

ಈ ರೀತಿಯಾಗಿ ಬಹಳಷ್ಟು ದ್ರಾವಿಡ ಭಾಷಾ ಪದಗಳಲ್ಲಿ 'ಚ್' ಕಾರವು ಶಬ್ದಾದಿಯಲ್ಲಿ ಉಳಿದುಕೊಂಡು ಬಂದಿದ್ದರೂ ಗೊಂಡಿ, ತುಳು, ಕೊಲಾಮ, ಕುಇ, ನಾಯ್ಕಿ, ಗದಬ, ಕೊಂಡ ಹಾಗೂ ಕುವಿ ಕೆಲವೆಡೆ ಮೂಲದ್ರಾವಿಡದ 'ಚ್'ಕಾರವನ್ನು 'ಸ್' ಕಾರವನ್ನಾಗಿ ಮಾರ್ಪಡಿಸಿರುವುದು ಕಂಡುಬರುತ್ತದೆ. ಅಂತೆಯೇ ಕೊರಚ ಭಾಷೆಯು ಕೆಲವು ಪರಿಸರದಲ್ಲಿ 'ಸ್'ಕಾರವನ್ನು ಪರಿವರ್ತನೆ ಮಾಡಿಕೊಂಡಿದೆ. ಇಲ್ಲಿ ವಿಶೇಷವಾಗಿ ಗಮನಿಸಬೇಕಾದ ಅಂಶವೆಂದರೆ ಉಳಿದ ದ್ರಾವಿಡ ಭಾಷೆಗಳು ಮೂಲ ದ್ರಾವಿಡ 'ಚ್' ಕಾರವನ್ನು ಮುಂದೆ 'ಸ್' ಕಾರವಾಗಿ ಪರಿವರ್ತಿಸಿಕೊಂಡು ಕೆಲವು

ಪರಿಸರದಲ್ಲಿ 'ಸ್' ಕಾರವನ್ನು ಲೋಪಗೊಳಿಸಿಕೊಂಡು ಮೂಲ ದ್ರಾವಿಡ 'ಚ್' ಕಾರವನ್ನು ಉಳಿಸಿಕೊಂಡಿದೆ. ಆದರೆ ಕೊರಚ ಭಾಷೆ ಮಾತ್ರ 'ಸ'ಕಾರ ಪರಿವರ್ತನೆಯನ್ನು ಎಲ್ಲಿಯೂ ಬದಲಾಯಿಸಿಕೊಂಡಿಲ್ಲ. ಉದಾಹರಣೆಗೆ ಕನ್ನಡ ಪರಿಸರದಲ್ಲಿ ಬಳಕೆಗೊಳ್ಳುವ 'ಚ್' ಕಾರಕ್ಕೆ 'ಸ್' ಕಾರ ಪರಿವರ್ತನೆಯನ್ನು ಮಾತ್ರ ಇಲ್ಲಿ ನೀಡಲಾಗಿದೆ.

ಕನ್ನಡ	**ಕೊರಚರ ಭಾಷೆ**
ಚೆಂಡು	ಸೆಂಡು
ಚಾಪೆ	ಸ್ಯಾಪ
ಚಪ್ಪರ	ಸಪ್ಪರ
ಚೂರಿ	ಸೂರಿ
ಚಿಂತೆ	ಸಿಂತ
ಚಕ್ಕೆ	ಸೆಕ್ಕ
ಚಟ	ಸೆಟ
ಚಡ್ಡಿ	ಸೆಡ್ಡಿ
ಚಿಕ್ಕ	ಸಿನ್ನ
ಚಿಗುರು	ಸಿಗುರು
ಚಿಕ್ಕಪ್ಪ	ಸಿನ್ನಾನ
ಚಿಕ್ಕಮ್ಮ	ಸಿನ್ನಮ್ಮ
ಚಿಮ್ಮು	ಸಿಮ್ಮು
ಚುರುಕು	ಸುರುಕು
ಚೆಲ್ಲು	ಸೆಲ್ಲು

ಈ ರೀತಿಯಾಗಿ ಕೊರಚರ ಭಾಷೆಯಲ್ಲಿ ಕನ್ನಡದ ಪದಾದಿಯ 'ಚ್'ಕಾರವು 'ಸ್' ಕಾರವಾಗಿ ಬಳಕೆಯಾಗುವುದು ಕಂಡುಬರುತ್ತದೆ. ಈ ಪ್ರಕ್ರಿಯೆ ಸಾಮಾನ್ಯವಾಗಿ ಹಿರಿಯ ತಲೆಮಾರಿನವರಲ್ಲಿ ಹಾಗೂ ಕೊರಚ ಕೃಷಿ ಕಾರ್ಮಿಕರಲ್ಲಿ ಕಂಡುಬರುತ್ತದೆ. ಹೊಸ ತಲೆಮಾರಿನವರಲ್ಲಿ 'ಚ್' ಕಾರವು 'ಸ್' ಕಾರವಾಗುವುದು ತೀರಾ ಕಡಿಮೆ ಪ್ರಮಾಣದಲ್ಲಿ ಬಳಕೆಯಾಗುವುದು ಕಾಣಬರುತ್ತದೆ.

ಭಾಷೆಯ ಮೂಲ ಸಾಮಾಗ್ರಿ ಧ್ವನಿ. ಮನುಷ್ಯನ ಮುಖ್ಯ ವಿವರದಿಂದ ಹೊರಡುವ ಧ್ವನಿಗಳಿಗೆಲ್ಲ ಭಾಷೆಯಲ್ಲಿ ಅರ್ಥವಿಲ್ಲ. ಉಚ್ಚಾರಿತ ಧ್ವನಿಗಳಿಗೆ ಮಾತ್ರ ಭಾಷೆಯಲ್ಲಿ ಸ್ಥಾನವಿದೆ.

ತಾನು ಹೊರಡಿಸುವ ಧ್ವನಿಗಳನ್ನು ತನ್ನ ಭಾಷೆಯಲ್ಲಿ ಸಂಕೇತಾತ್ಮಕವಾಗಿ ಅಂದರೆ ಧ್ವನಿ ಅಥವಾ ಧ್ವನಿ ಸರಣಿಯನ್ನು ಅರ್ಥವಂತಿಕೆಯೊಂದಿಗೆ ಬಳಸುತ್ತಾನೆ. ಮನುಷ್ಯನು ಹೊರಡಿಸಬಹುದಾದ ಅಸಂಖ್ಯಾತ ಧ್ವನಿಗಳನ್ನು ತನ್ನ ಮಾತೃಭಾಷೆಯಲ್ಲಿ ಅಥವಾ ಇತರ ಭಾಷೆಗಳಲ್ಲಿ ಅಳವಡಿಸಿಕೊಂಡಿರುವುದಿಲ್ಲ. ಅಂತೆಯೇ ಅಪರಿಮಿತ ಧ್ವನಿಗಳಲ್ಲಿ ತನ್ನ ಅನುಕೂಲತೆಗೆ ತಕ್ಕಂತೆ ಕೆಲವು ಧ್ವನಿಗಳನ್ನು ಮಾತ್ರ ಆಯ್ದುಕೊಂಡು ಅವುಗಳನಷ್ಟೇ ತಮ್ಮ ಆಡುನುಡಿಯಲ್ಲಿ ಬಳಸುತ್ತಾನೆ. ಹೀಗೆಯೇ ಧ್ವನಿ ನಿಯಮಗಳನ್ನು ನೋಡಿದರೆ ದ್ರಾವಿಡ ಪರಿವಾರದ ತಮಿಳು, ತೆಲುಗು, ಕನ್ನಡ ಭಾಷೆಗಳ ಭಾಷಿಕಾಂಶಗಳನ್ನು ಕ್ರೂಢೀಕರಿಸಿಕೊಂಡು ರಚನೆಗೊಂಡಂತಹ ಕೊರಚರ ಭಾಷೆಯು ಸ್ವತಂತ್ರ ಭಾಷಾ ರೂಪದಂತೆ ಬಳಕೆಯಾಗುವುದನ್ನು ಕಾಣಬಹುದು. ಆದ್ದರಿಂದ ಜಗತ್ತಿನ ಪ್ರತಿಯೊಂದು ಭಾಷೆಯಲ್ಲಿಯೂ ಭಿನ್ನ ಭಿನ್ನ ಧ್ವನಿ ಮೊತ್ತಗಳು ಇರುವುದು ಕಂಡುಬರುತ್ತದೆ. ಪ್ರಸ್ತುತ ಈ ಅಧ್ಯಾಯದಲ್ಲಿ ಕೊರಚರ ಭಾಷೆಯಲ್ಲಿನ ಉಚ್ಚಾರಣೆಯ ಸಂದರ್ಭದಲ್ಲಿ ಉಂಟಾಗುವ ಧ್ವನಿ ರಚನಾಕ್ರಮದ ವೈಶಿಷ್ಟ್ಯತೆಯನ್ನು ಧ್ವನಿ ನಿಯಮಗಳ ಅಡಿಯಲ್ಲಿ ಗುರುತಿಸಲಾಗಿದೆ. ಇಲ್ಲಿ ಕೊರಚರ ಹಿರಿಯ ತಲೆಮಾರಿನವರಲ್ಲಿ ಅವಿದ್ಯಾವಂತರಲ್ಲಿ (ಪುರುಷ ಮತ್ತು ಮಹಿಳೆಯರಲ್ಲಿ) ಈ ಭಾಷಾ ಬಳಕೆಯನ್ನು ಕಾಣಬಹುದು. ಇತ್ತೀಚಿನ ಹೊಸ ತಲೆಮಾರಿನ ವಿದ್ಯಾವಂತ ಪುರುಷ–ಮಹಿಳೆಯರನ್ನು ಗಮನಿಸಿದಾಗ ಪ್ರಾದೇಶಿಕವಾಗಿ ಶಿಷ್ಟಕನ್ನಡಕ್ಕೆ ಹೊಂದಿಕೊಂಡಿರುವುದು ಕ್ಷೇತ್ರಕಾರ್ಯದ ಮಾಹಿತಿಯಿಂದ ತಿಳಿದುಬರುತ್ತದೆ. ಇದಕ್ಕೆ ಹಲವು ಕಾರಣಗಳಿವೆ. ಇತ್ತೀಚಿನ ಆಧುನೀಕರಣ, ನಗರೀಕರಣ, ಶೈಕ್ಷಣಿಕ, ಪ್ರಾದೇಶಿಕತೆ, ರಾಜಕೀಯ, ಸಾಮಾಜಿಕ ಅಂಶಗಳ ಪ್ರಭಾವವೆಂದು ತಿಳಿಯುತ್ತದೆ.

ಪದರಚನೆ

ಸಂಸ್ಕೃತ ವ್ಯಾಕರಣದಲ್ಲಿ ಪದ ಮತ್ತು ಶಬ್ದ ಎಂಬ ಎರಡು ಬೇರೆ ಬೇರೆ ಪದಗಳನ್ನು ಹೆಚ್ಚು ಕಡಿಮೆ ಒಂದೇ ಅರ್ಥದಲ್ಲಿ ಬಳಸುವ ಕ್ರಮವಿದೆ. ಈ ಬಳಕೆಯನ್ನು ಅನುಸರಿಸಿ ಕನ್ನಡ ವ್ಯಾಕರಣದಲ್ಲೂ ಪದ ಮತ್ತು ಶಬ್ದ ಎಂಬ ಈ ಎರಡು ಪದಗಳು ಬಳಕೆಗೆ ಬಂದಿವೆ. ಸಂಸ್ಕೃತದಲ್ಲಿ ಪದ ಎಂಬುದಕ್ಕೆ ಹೆಚ್ಚಿನ ಸಂದರ್ಭಗಳಲ್ಲಿ ಶಬ್ದ ಎಂಬರ್ಥ ಇದೆ. ಆದರೆ ಕೆಲವು ಸಂದರ್ಭಗಳಲ್ಲಿ ಮಾತ್ರ ವಿಶಿಷ್ಟವಾದ ಪ್ರತ್ಯಯಗಳೊಂದಿಗೆ ಬರುವ ಶಬ್ದ ಎಂಬ ಅರ್ಥವೂ ಇದೆ. ವಿಭಕ್ತಿ ಪ್ರತ್ಯಯ ಇಲ್ಲವೇ ಆಖ್ಯಾತ ಪ್ರತ್ಯಯಗಳನ್ನೊಳಗೊಂಡ ರಚನೆಗಳಿಗೆ ಮಾತ್ರ ಸಂಸ್ಕೃತದಲ್ಲಿ ಪದಗಳೆಂದು ಕರೆಯಲಾಗುವುದು. ಬೇರೆ ಬೇರೆ ಪ್ರತ್ಯಯಗಳೊಂದಿಗೆ ಬಂದಿರುವ ಪದಗಳನ್ನು ಪದರೂಪಗಳೆಂದು ಕರೆಯಬಹುದು. ಈ ಹಿನ್ನೆಲೆಯಲ್ಲಿ ದತ್ತ ಮಾಹಿತಿಯನ್ನು ಆಧರಿಸಿ ಕೊರಚರ ಭಾಷೆಯಲ್ಲಿನ ಪದರಚನೆಯಲ್ಲಿ ನಾಮಪದ, ಕ್ರಿಯಾಪದಗಳ ಸ್ವರೂಪವನ್ನು ಕನ್ನಡ ಭಾಷೆಯ ಪದಗಳೊಂದಿಗೆ ಸಮೀಕರಿಸಿಕೊಂಡು ಈ ರೀತಿ ವಿಶ್ಲೇಷಿಸಲು ಪ್ರಯತ್ನಿಸಲಾಗಿದೆ.

ನಾಮಪದ

ಒಂದು ಭಾಷೆಯಲ್ಲಿರುವ ಶಬ್ದಗಳಲ್ಲಿ ಬಗೆ ಬಗೆಯ ಹೆಸರುಗಳನ್ನು ತಿಳಿಸುವ ಪದಗಳಿಗೆ

ನಾಮ ಪ್ರಕೃತಿ ಅಥವಾ ನಾಮಪದ ಎಂದು ಕರೆಯುತ್ತಾರೆ. ಕೊರಚರ ಭಾಷೆಯಲ್ಲಿ ನಾಮ ಪ್ರಕೃತಿಗಳನ್ನು ಸಹಜ, ಸಾಧಿತ ಎಂದು ಎರಡು ವಿಧಗಳಾಗಿ ವಿಂಗಡಿಸಿಕೊಳ್ಳಲಾಗಿದೆ.

೧. ಸಹಜ (ಸರಳ) ನಾಮ ಪ್ರಕೃತಿಗಳು

ಸಹಜ ನಾಮಪ್ರಕೃತಿಗಳನ್ನು ವಿಭಜಿಸಲು ಸಾಧ್ಯವಿಲ್ಲದ ಮೂಲರೂಪಗಳು ಅವುಗಳ ವ್ಯಕ್ತಿಗಳ ಹೆಸರನ್ನು ಸೂಚಿಸುತ್ತದೆ. ವಸ್ತುಗಳ ಗುಣ, ಕಾಲ, ಸ್ಥಾನ, ಅಳತೆ, ದಿಕ್ಕು, ಸಂಖ್ಯೆಯನ್ನು ಸೂಚಿಸುವ ಶಬ್ದಗಳೆಲ್ಲವು ಸಹಜನಾಮ ಪ್ರಕೃತಿಗಳಾಗುವುದುಂಟು. ಇವುಗಳಲ್ಲಿ ನಿರ್ದೇಶಕ ಪ್ರಶ್ನಾರ್ಥಕ ಮೂಲರೂಪದಿಂದ ಸಿದ್ಧವಾದ ನಾಮಪ್ರಕೃತಿಗಳನ್ನು ಚರ್ಚಿಸಲಾಗಿದೆ. ನಿರ್ದೇಶಕ ಮೂಲರೂಪದಿಂದ ಸಿದ್ಧವಾದ ನಾಮಪ್ರಕೃತಿಗಳು ಉದಾ.

ಕನ್ನಡ	**ಕೊರಚರ ಭಾಷೆ**
ಅವರು	ಅದು/ಅತು
ಅವಳು	ಅದು/ಅತ
ಅವರು	ಅಯ್ಯ
ಅದು	ಅದು

ಪ್ರಶ್ನಾರ್ಥಕ ಮೂಲರೂಪದಿಂದ ಸಿದ್ಧವಾದ ನಾಮಪ್ರಕೃತಿಗಳು ಕಂಡುಬರುತ್ತವೆ. ಉದಾ.

ಕನ್ನಡ	**ಕೊರಚರ ಭಾಷೆ**
ಯಾರು	ಏದು
ಯಾವನು	ಏದು
ಯಾವಳು	ಏದು
ಯಾವುದು	ಎಂದದು

ವಿಶೇಷವಾಗಿ ಕೊರಚರ ಭಾಷೆಯಲ್ಲಿ ಯಾರು, ಯಾವನು, ಯಾವಳು ಎಂಬ ಪ್ರಶ್ನಾರ್ಥಕ ಸರ್ವನಾಮಗಳಿಗೆ ಏದು ಎಂಬ ಪ್ರಶ್ನಾರ್ಥಕ ಸರ್ವನಾಮ ಪದ ಬಳಕೆಯಾಗುತ್ತದೆ.

೨. ಸಾಧಿತ (ನಿಷ್ಪನ್ನ) ನಾಮಪ್ರಕೃತಿಗಳು

ನಾಮ, ಕ್ರಿಯಾ ಹಾಗೂ ವಿಶೇಷಣ ಪ್ರಕೃತಿಗಳಿಗೆ ಕೆಲವು ಪ್ರತ್ಯಯಗಳನ್ನು ಸೇರಿಸುವುದರ ಮೂಲಕ ಸಾಧಿತ ನಾಮಪ್ರಕೃತಿಗಳನ್ನಾಗಿ ಮಾಡಲಾಗುವುದು. ಅಂದರೆ ನಾಮಪದ, ಕ್ರಿಯಾಪದ, ವಿಶೇಷಣಗಳಿಗೆ ಪ್ರತ್ಯಯಗಳು ಸೇರಿದರೆ ಸಾಧಿತ ನಾಮಪ್ರಕೃತಿಗಳಾಗುವುದುಂಟು. ಪ್ರತ್ಯಯಗಳಲ್ಲಿ ಬಳಕೆಯಾಗಿರುವ (ಪು.ವಾ) (ಸ್ತ್ರೀ ವಾ) (ನ.ವಾ) ಇವು ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕಲಿಂಗ ವಾಚಕಗಳನ್ನು ಸೂಚಿಸುತ್ತವೆ.

ಪ್ರತ್ಯಯ	ಕನ್ನಡ	ಕೊರಚರ ಭಾಷೆ
ಅ (ಪು.ವಾ)	ಹುಡುಗ, ಕುರುಡ, ಕುಂಟ	ಕೆರು, ಕುಲ್ಡ, ಕುಂಟ
ಇ (ಸ್ತ್ರೀ.ವಾ)	ಹುಡುಗಿ, ಕುರುಡಿ, ಕುಂಟಿ	ಸಿನಮುಂಡ, ಕುಲ್ಡಿ, ಕುಂಟಿ
ಗಾರ (ಪು.ವಾ)	ಕೊಲೆಗಾರ, ಮೋಡಿಗಾರ	ಕೊಲೆಗಾರ, ಮೋಡಿಗಾರ
ವಂತ (ಪು.ವಾ)	ಬುದ್ಧಿವಂತ	ಬುದ್ಧಿವಂತ
ತನ (ನ.ವಾ)	ಮನೆತನ	ಮಂತೇನು (ಮನ್ತೆನ)
ತಿ (ಸ್ತ್ರೀ.ವಾ)	ಸಾಹುಕಾರ್ತಿ	ಸಾಹುಕಾರ್ತಿ
ಕು (ನ.ವಾ)	ಹರಕು, ಮುರುಕ	ಹರ್ಕ, ಮುರ್ಕ
ಲು (ನ.ವಾ)	ಹರಕಲು, ಮುರುಕಲು	ಅರಕ್ಲು, ಮುರುಕ್ಲು

ಕೊರಚರ ಭಾಷೆಯಲ್ಲಿ ಬಳಕೆಯಾಗುವ ಸಾಧಿತ ನಾಮಪ್ರಕೃತಿಗಳು ಕನ್ನಡ ಪರಿಸರದಂತೆಯೇ ಅಲ್ಪಸ್ವಲ್ಪ ಭಿನ್ನತೆಯೊಂದಿಗೆ ಬಳಕೆಯಾಗುತ್ತದೆ. ಅದು ಹಿರಿಯ ತಲೆಮಾರಿನವರು, ಕೃಷಿ ಕಾರ್ಮಿಕರು ಬಳಸುವ ಆಡುನುಡಿಯಲ್ಲಿ ಮಾತ್ರ ವ್ಯತ್ಯಾಸಗಳು ಕಂಡುಬರುತ್ತವೆ. ಆದರೆ ಹೊಸ ತಲೆಮಾರಿನವರಲ್ಲಿ ಅಲ್ಪ ಪ್ರಮಾಣದಲ್ಲಿ ಸಮಾನವಾಗಿ ಬಳಕೆಯಾಗುವುದು ಕಂಡುಬರುತ್ತದೆ.

ನಾಮಪ್ರಕೃತಿಗಳು

ಕೊರಚರ ಭಾಷೆಯಲ್ಲಿನ ಕೆಲವು ನಾಮ ಪ್ರಕೃತಿಗಳನ್ನು ಮಾತ್ರ ಗಮನಿಸಲಾಗಿದೆ.

೧. ವಸ್ತು ವಾಚಕಗಳು

ವಸ್ತುಗಳ ಹೆಸರುಗಳನ್ನು ಹೇಳುವ ಶಬ್ದಗಳು ವಸ್ತುವಾಚಕಗಳೆನಿಸುತ್ತವೆ. ಇವುಗಳನ್ನು ಮೂರು ವಿಧದಲ್ಲಿ ನೋಡಬಹುದು.

ರೂಢನಾಮ: ರೂಢಿಯಿಂದ ಬಂದ ಸಾಮಾನ್ಯವಾಚಕಗಳಿಗೆ ರೂಢನಾಮಗಳೆಂದು ಕರೆಯಲಾಗುವುದು. ಉದಾ.

ಕನ್ನಡ	ಕೊರಚರ ಭಾಷೆ
ಹೊಳಿ	ವಳಿ
ಮನುಷ್ಯ	ಮೊಣಸು
ಹೆಂಗಸು	ಪೊಂಬುಳ್ಳ
ಹುಡುಗ	ಕೆರು ಇತ್ಯಾದಿ

ಅಂಕಿತನಾಮ: ಯಾವುದೇ ವಸ್ತು ಪ್ರಾಣಿಗಳನ್ನು ಸಮೂಹದಿಂದ ಬೇರ್ಪಡಿಸಿ ನಿಖರವಾಗಿ ಗುರುತಿಸಲು ನಿರ್ದೇಶನ ಮಾಡುವ ಹೆಸರಿಗೆ ಅಂಕಿತನಾಮ ಎಂದು ಕರೆಯುವುದುಂಟು. ಉದಾ.

ಕನ್ನಡ	**ಕೊರಚರ ಭಾಷೆ**
ಶಂಕರ	ಸೆಂಕರಿ
ಪರಮೇಶ	ಪರಮೇಸಿ
ರಮೇಶ	ರಮೇಸಿ ಇತ್ಯಾದಿ.

ಈ ಪ್ರಕಾರವಾಗಿ 'ಅ'ಕಾರಾಂತ ಅಂಕಿತನಾಮಗಳು 'ಇ'ಕಾರಂತವಾಗಿ ಬಳಕೆಯಾಗುವುದು ಕೊರಚರ ಭಾಷಾ ವಿಶೇಷತೆ.

ಅನ್ವರ್ಥನಾಮ: ಸ್ವಭಾವಕ್ಕನುಗುಣವಾಗಿ ಇಟ್ಟ ಹೆಸರುಗಳನ್ನು ಅನ್ವರ್ಥಕ ನಾಮಗಳೆಂದು ಕರೆಯಲಾಗುತ್ತದೆ. ಕೊರಚರಲ್ಲಿ ಯಾವುದೇ ವ್ಯಕ್ತಿ ಅಂಕಿತನಾಮಕ್ಕಿಂತ ಅನ್ವರ್ಥನಾಮದಿಂದಲೇ ಸಂಬೋಧಿಸುವುದು ಹೆಚ್ಚು ಕಂಡುಬರುತ್ತದೆ.

ಕನ್ನಡ	**ಕೊರಚರ ಭಾಷೆ**
ಕುಂಟ	ಕುಂಟ (ಮೇಳಿ)
ಕಿವುಡ	ಸೆವುಟ
ಲಂಬ	ಕೋಲಾ
ಡುಮ್ಮ	ದುಬ್ಬ
ಕುರುಡ	ಕುಲ್ಡ (ಕಣ್) ಇತ್ಯಾದಿ.

೨. ಗುಣವಾಚಕಗಳು

ವಸ್ತು, ವ್ಯಕ್ತಿಗಳ ಗುಣ, ಸ್ವಭಾವ, ರೀತಿಗಳನ್ನು ವರ್ಣಿಸುವ ಅಥವಾ ವಿಶ್ಲೇಷಿಸುವ ಶಬ್ದಗಳನ್ನು ಗುಣವಾಚಕ ಅಥವಾ ವಿಶೇಷಣಗಳೆಂದು ಕರೆಯುತ್ತಾರೆ. ಉದಾ.

ಕನ್ನಡ	ಕೊರಚರ ಭಾಷೆ (ವಸ್ತುವಾಚಕ)
ಚಿಕ್ಕ	ಸಿನ್ನೆದು
ಒಳ್ಳೆಯ	ನಲ್ಲದು
ಡೊಂಕು	ಸೊಟ್ಟು
ಹೆಚ್ಚು	ಸೇನಾ (ಜಗ್ಗಿ)

ಕುಳ್ಳ	ಗಿಡ್ಡ
ಹೊಸ	ಪುದಿ
ಹಳೆಯ	ಪಗನದು
ಬಿಸಿ	ಉಡುಕು
ಗಟ್ಟಿ (ಬಿರುಸು)	ಗೆಟ್ಟಿ ಇತ್ಯಾದಿ.

ವರ್ಣವಾಚಕ ವಿಶೇಷಣಗಳು:

ಕನ್ನಡ	**ಕೊರಚರ ಭಾಷೆ**
ಬಿಳಿ	ವಳ್ಳ
ಹಸಿರು	ಪಸರು
ಕಪ್ಪು/ಕರಿ	ಕರ್ತ (ಕರ್‍ತ)
ಕೆಂಪು	ಎರ್‍ರ
ಹಳದಿ/ಅರಿಶಿಣ	ಮಂಜಗಮ್ಮ/ಮಂಜ

ರುಚಿಸೂಚಕ ವಿಶೇಷಣಗಳು

ಶಿಷ್ಟಕನ್ನಡ	**ಕೊರಚರ ಭಾಷೆ**
ಹುಳಿ	ಪುಲುಪು
ಸಿಹಿ	ತೀಪ
ಕಹಿ	ಕೆಚ್ಚು
ಒಗರು	ಒಗರು

ಆಕಾರ ಸೂಚಕ ವಿಶೇಷಣಗಳು

ಕನ್ನಡ	**ಕೊರಚರ ಭಾಷೆ**
ದೊಡ್ಡ	ಬೇರು/ಬೆರ್ದು
ಸಣ್ಣ	ಸಿನ್ನ
ಅಗಲ	ಅಗಲ
ತೆಳ್ಳನೆಯ	ತೆಳ್ಳಗ

ಉದ್ದ	ವಸರ
ಇಷ್ಟೇ	ಇತ್ನೆ
ಗಿಡ್ಡ	ಗಿಡ್ಡ

ಸ್ಥಾನ/ನಿರ್ದೇಶನಾ ಸೂಚಕ ವಿಶೇಷಣಗಳು

ಕನ್ನಡ	**ಕೊರಚರಲ್ಲಿ**
ಅಲ್ಲಿಯ	ಅಟಿಕ್ಕಿರದು
ಇಲ್ಲಿಯ	ಇಟಕ್ಕಿರದು
ಎಲ್ಲಿಯ	ಎಟಿಕ್ಕಿರದು

ದೂರ/ಅಂತರಸೂಚಕ ವಿಶೇಷಣಗಳು

ಕನ್ನಡ	**ಕೊರಚರಲ್ಲಿ**
ದೂರ	ತೂರ
ಸಮೀಪ	ಪಕ್ಕಲೆ
ಮಧ್ಯ	ನೆಳ್ಳಿ
ಇಲ್ಲೆ	ಇಟೆ

೩. ಸಂಖ್ಯಾವಾಚಕಗಳು

ಸಂಖ್ಯೆಗಳನ್ನು ಸೂಚಿಸುವ (ತಿಳಿಸುವ) ಶಬ್ದಗಳನ್ನು ಸಂಖ್ಯಾವಾಚಕಗಳೆಂದು ಕರೆಯುವರು. ಸಂಖ್ಯಾವಾಚಿಗಳು ಬಹಳಷ್ಟು ಬದಲಾಗದೆ ಅಲ್ಪ ಸ್ವಲ್ಪ ಸ್ವ ಬದಲಾವಣೆಗಳೊಂದಿಗೆ ಬಳಕೆಗೊಳ್ಳುತ್ತವೆ. ಭಾಷೆಯ ಅನುವಂಶಿಕ ಅನುಬಂಧವನ್ನು ಗುರುತಿಸುವಲ್ಲಿ ಇದು ಮಹತ್ವಪೂರ್ಣವಾಗುತ್ತದೆ. ದ್ರಾವಿಡ ಸಂಖ್ಯಾವಾಚಿಗಳು ಈ ನಿಟ್ಟಿನಲ್ಲಿ ಒಳ್ಳೆಯ ಆಧಾರಗಳಾಗಿವೆಯಾದರೂ ಇವುಗಳಲ್ಲೂ ಸ್ವೀಕರಣ ನಡೆದಿರುವುದನ್ನು ಮರೆಯುವಂತಿಲ್ಲ. ಸಂಖ್ಯಾವಾಚಿಗಳನ್ನು ಸ್ವತಂತ್ರ ನಾಮಪದ ವರ್ಗಗಳಲ್ಲಿ ಬೇದವನ್ನು ಗಮನಿಸಬಹುದಾಗಿದೆ. ಸಂಖ್ಯಾ ವಿಶ್ಲೇಷಣೆಯೊಡನೆ ನಾಮಪದ ಸೇರಿ ವಾಕ್ಯ ರಚನೆಯೂ ಸಾಧ್ಯವಿದೆ. ಉದಾ. ಒಂಡು ಕೆರು (ಒಬ್ಬ ಹುಡುಗ) ಸಂಖ್ಯಾ ವಿಶೇಷಣಗಳನ್ನು ನಾಮಗಳ ಹಿಂದೆ ಮುಂದೆ ಬೇಕಾದ ಹಾಗೆ ಬಳಸಬಹುದು. ಉದಾ. ರೊಂಡಾಳು ತೆಕ್ಕರು/ ತೆಕ್ಕರು ರೊಂಡಾಳು (ಇಬ್ಬರು ಕಳ್ಳರು/ಕಳ್ಳರು ಇಬ್ಬರು)

ಕೊರಚ ಭಾಷೆಯಲ್ಲಿ ಬಳಕೆಗೊಳ್ಳುವ ಪ್ರಮುಖ ಸಂಖ್ಯಾವಾಚಿ ರೂಪಗಳು

ಅ. ಏಕಾಕೃತಿಮಾ ಸಂಖ್ಯಾವಾಚಿಗಳು ೨. ಸಂಯುಕ್ತ ಸಂಖ್ಯಾವಾಚಿಗಳು

ಏಕಾಕೃತಿಯ ಸಂಖ್ಯಾವಾಚಿಗಳು

ಕನ್ನಡ	**ಕೊರಚರಲ್ಲಿ**
ಒಂದು	ಒಂಡು
ಎರಡು	ರೊಂಡು
ಮೂರು	ಮೂಡು
ನಾಲ್ಕು	ನಾಲು
ಐದು	ಅಂಜು
ಏಳು	ಏಗು
ಹತ್ತು	ಪೊತ್ತು
ಸಾವಿರ	ಸಾವ್ರ

೨. ಸಂಯುಕ್ತ ಸಂಖ್ಯಾವಾಚಕಗಳು

ಕನ್ನಡ	**ಕೊರಚರಲ್ಲಿ**
ಒಂಬತ್ತು	ಒಂಬಿದಿ
ಹನ್ನೊಂದು	ಪೊದನ್ನೊಂಡು
ಹನ್ನೆರಡು	ಪನ್ನೆಂಡು
ಹದಿಮೂರು	ಪದಮೂಡು
ಹದಿನಾಲ್ಕು	ಪದ್ನಾಲು
ಹದಿನೈದು	ಪೊದುನಂಜು
ಹದಿನಾರು	ಪಾದಾರು
ಹದಿನೇಳು	ಪೊದಿನೇಗು
ಹದಿನೆಂಟು	ಪೊದಿನೆಟ್ಟು
ಹತ್ತೊಂಭತ್ತು	ಪೊದಿನೊಂಬದಿ
ಇಪ್ಪತ್ತು	ಇರ್ದಿ
ಐವತ್ತು	ಅಂಜಗಾಪತ್ತು
ನೂರು	ನೂರು (ಕೋಲು)

ಈ ರೀತಿಯಾಗಿ ಕೊರಚ ಭಾಷೆಯಲ್ಲಿ ಸಂಖ್ಯೆಗಳಿಗೆ ಈ ರೂಪಗಳಿಂದ ಕರೆಯಲಾಗುತ್ತದೆ.

೪. ಪ್ರಮಾಣ ವಾಚಕಗಳು

ವಸ್ತುಗಳು, ಪ್ರಾಣಿಗಳ ತೂಕ, ಅಳತೆ, ಗಾತ್ರ ಪರಿಮಾಣಗಳನ್ನು ವರ್ಣಿಸುವ ಶಬ್ದಗಳು ಪ್ರಮಾಣವಾಚಕಗಳಾಗುತ್ತದೆ. ಈ ಪ್ರಮಾಣವಾಚಕ ಪದಗಳು ವಿಶೇಷಣಗಳಂತೆ ವರ್ತಿಸುತ್ತವೆ. ಈ ಪರಿಕಲ್ಪನೆಯ ಪ್ರಮಾಣವಾಚಕಗಳು ಕೊರಚರಲ್ಲಿ ಸಹ ಬಳಕೆಗೊಳ್ಳುತ್ತವೆ. ಅವು

ಕನ್ನಡ	ಕೊರಚರಲ್ಲಿ
ಅಷ್ಟು	ಅತ್ನ
ಇಷ್ಟು	ಇತ್ನ
ಎಷ್ಟು	ಎತ್ನ
ಸ್ವಲ್ಪ	ರೊತ್ನ/ರೊವ್ವ
ಬಹಳ	ಸೆನಾಯಿ
ಹೆಚ್ಚು	ಸೆನಾ
ಜಾಸ್ತಿ	ಜಗ್ಗಿ
ನೂರರಷ್ಟು	ನೂರತ್ನ ಇತ್ಯಾದಿಯಾಗಿ.

ಹೀಗೆ ಪ್ರಮಾಣವಾಚಕಗಳು ಕನ್ನಡದ ಪರಿಸರಕ್ಕಿಂತ ಭಿನ್ನವಾಗಿ ಬಳಕೆಯಾಗುವುದನ್ನು ನೋಡಬಹುದು.

೫. ಪ್ರಕಾರವಾಚಕಗಳು

ವಸ್ತುಗಳ ನಿಜಸ್ಥಿತಿ ಅಥವಾ ರೀತಿಗಳನ್ನು ತಿಳಿಸುವ ಶಬ್ದಗಳು ಪ್ರಕಾರವಾಚಕಗಳು ಈ ಪ್ರಕಾರವಾಚಕಗಳೂ ಸಹ ವಿಶೇಷಣ ಪದಗಳಂತೆಯೇ ವರ್ತಿಸುತ್ತವೆ. ಅದು ಕೊರಚರಲ್ಲಿಯು ಈ ಮಾದರಿಯಾಗಿ ನೋಡಬಹುದು.

ಕನ್ನಡ	ಕೊರಚರಲ್ಲಿ
ಎಂಥದು/ಎಂತಹದು/ಎಂಥದ್ದು	ಎಂತರದು/ಎಂತದು
ಇಂಥದು/ಇಂಥಹದು/ಇಂಥದ್ದು	ಇಂತರದು/ಇಂತದು
ಅಂಥದು/ಅಂಥಹದು/ಅಂಥದ್ದು	ಅಂತರದು/ಅಂತದು

೬. ದಿಗ್ವಾಚಕಗಳು

ದಿಕ್ಕುಗಳ ಹೆಸರನ್ನು ಸೂಚಿಸುವ ಶಬ್ದಗಳನ್ನು ದಿಗ್ವಾಚಕಗಳೆಂದು ಹೇಳುವರು. ಕೊರಚರು

ಸಹ ದಿಕ್ಕುಗಳನ್ನು ಸಂಬೋಧಿಸುತ್ತಾರೆ. ಅವುಗಳಿಗೆ ಬೇರೆ ಹೆಸರುಗಳಿಟ್ಟು ಕರೆಯುವುದನ್ನು ನೋಡಬಹುದಾಗಿದೆ. ಉದಾ.

ಕನ್ನಡ	**ಕೊರಚರಲ್ಲಿ**
ಪೂರ್ವ	ತೂರ್ಪಟು
ಪಶ್ಚಿಮ	ಪರ್ಮಟು
ಉತ್ತರ	ಗಂಗಿದಿಕ್ಕು
ದಕ್ಷಿಣ	ಹನುಮುದಿಕ್ಕು

೪.೨. ಲಿಂಗ ಮತ್ತು ವಚನ ವಿಚಾರ

ವ್ಯಾಕರಣ ಶಾಸ್ತ್ರದಲ್ಲಿ ಲಿಂಗ ಮತ್ತು ವಚನಗಳಿಗೆ ಬಹಳ ಮುಖ್ಯವಾದ ಸ್ಥಾನವಿದೆ. ಜಗತ್ತಿನ ಪ್ರತಿಯೊಂದು ಭಾಷೆಗೂ ಒಂದಲ್ಲ ಒಂದು ಬಗೆಯ ಲಿಂಗ ವಚನ, ವಿವಕ್ಷೆ ಇದ್ದೇ ಇರುತ್ತದೆ. ಆದರೆ ಅವುಗಳ ಸ್ವರೂಪ ಮಾತ್ರ ಬೇರೆ ಬೇರೆಯಾಗಿ ಕಾಣಿಸಿಕೊಳ್ಳುತ್ತದೆ. ಯಾವ ಭಾಷೆಯಲ್ಲಿ ಲಿಂಗ ವ್ಯವಸ್ಥೆ ಇರುತ್ತದೆಯೋ ಅಂತಹ ಭಾಷೆಗಳಲ್ಲಿ ವಚನ ವ್ಯವಸ್ಥೆಯೂ ಇರುತ್ತದೆ. ಇವು ಭಾಷೆಯಿಂದ ಭಾಷೆಗೆ ಬೇರೆಬೇರೆಯಾಗಿ ಕಾಣಿಸಿಕೊಳ್ಳುವ ಸಾಧ್ಯತೆಯಿದೆ. ಇಲ್ಲಿ ನಾಮ ಪ್ರಕೃತಿಗಳಲ್ಲಿ ಲಿಂಗ-ವಚನಗಳು ಪರಸ್ಪರ ಒಂದನ್ನೊಂದು ಹೊಂದಿಕೊಂಡು ಆದ್ಯತೆಯನ್ನು ಪಡೆಯುತ್ತವೆ ಆದುದರಿಂದ ಈ ಎರಡು ಲಕ್ಷಣಗಳು ಪರಸ್ಪರ ಒಂದರಲ್ಲಿಯೇ ಕಾಣಿಸಿಕೊಳ್ಳಲು ಸಾಧ್ಯವಿದೆ.

ಯಾವುದೇ ಭಾಷೆಯಲ್ಲಿ ಲಿಂಗ ವಿವಕ್ಷೆ ಇದ್ದರೆ ಅದರೊಂದಿಗೆ ವಚನ ವಿವಕ್ಷೆಯೂ ಇರುವುದು ಭಾಷೆಯ ಸಾರ್ವತ್ರಿಕ ನಿಯಮ. ನಾಮ ಪ್ರಕೃತಿಗಳನ್ನು ಮಾನವ, ಮಾನವೇತರ, ಪುರುಷ, ಸ್ತ್ರೀ ಎಂದು ಮುಂತಾಗಿ ಅರ್ಥವನ್ನಾಧರಿಸಿ ವಿಭಾಗಿಸಲು ಯಾವ ಭಾಷೆಯಲ್ಲಿ ಸಾಧ್ಯವೋ ಆ ಭಾಷೆಯಲ್ಲಿ ಸಾಮಾನ್ಯವಾಗಿ ಲಿಂಗ-ವಚನ ವ್ಯವಸ್ಥೆಯಿರುತ್ತದೆ. ಲಿಂಗ ವಚನ ಪರಸ್ಪರ ಹೊಂದಿಕೊಂಡು ಭಾಷೆಯ ವಾಕ್ಯ ವ್ಯವಸ್ಥೆಯನ್ನು, ಅರ್ಥ ವ್ಯವಸ್ಥೆಯನ್ನು ಸ್ವೀಕರಿಸುವುದರಿಂದ ಒಂದನ್ನು ಬಿಟ್ಟು ಇನ್ನೊಂದು ಇರುವುದಿಲ್ಲ. ಜಗತ್ತಿನ ಕೆಲವು ಭಾಷೆಗಳಲ್ಲಿ ಲಿಂಗ ವಿವೇಚನ ಇಲ್ಲವೆಂದು ವಿದ್ವಾಂಸರಿಂದ ಸಾಮಾನ್ಯವಾಗಿ ಹೇಳಲಾಗುತ್ತದೆಯಾದರೂ ಈ ಭಾಷೆಗಳಲ್ಲಿ ಈಗ ಇರುವ ಪ್ರಥಮ ಪುರುಷ ನಪುಂಸಕ ಲಿಂಗ ರೂಪವೇ ಅರ್ಥಾನುಗುಣವಾಗಿ ಎಲ್ಲೆಡೆ ಬಳಕೆಗೊಳ್ಳುತ್ತಿರುವುದನ್ನು ಗಮನಿಸಬೇಕು ಬ್ರಾಹುಈಯಲ್ಲಿ "ಓದ್" ಎಂದರೆ ಅವನು/ಅವಳು/ಅದು, 'ಓಪೇಕ್' ಅಂದರೆ ಅವರು/ಅವು ಎಂದಾಗುತ್ತದೆ. ಈ ನೆಲೆಯಲ್ಲಿ ಕೊರಚ ಭಾಷೆಯ ಲಿಂಗ ವ್ಯವಸ್ಥೆಯಲ್ಲಿ ಪ್ರಥಮ ಪುರುಷ ಏಕವಚನ ಮತ್ತು ಬಹುವಚನಗಳಲ್ಲಿ ಪುಲ್ಲಿಂಗ ಮತ್ತು ಸ್ತ್ರೀಲಿಂಗಕ್ಕೆ ಪ್ರತ್ಯೇಕ ರೂಪ ಇರದೆ, ಪ್ರಥಮ ಪುರುಷ ನಪುಂಸಕ ಲಿಂಗವೇ ಅರ್ಥಾನುಗುಣವಾಗಿ ಬಳಕೆಯಾಗುತ್ತದೆ. ಇದನ್ನು ಗಮನಿಸಿದಾಗ ಲಿಂಗವ್ಯವಸ್ಥೆ ತೀರ ಸಂಕ್ಷಿಪ್ತವಾಗಿ ಕೊರಚ ಭಾಷೆಯಲ್ಲಿದೆಯೆಂದು ಹೇಳಬಹುದೇ

ಹೊರತು ಸಂಪೂರ್ಣವಾಗಿ ಇಲ್ಲವೆ ಇಲ್ಲ ಎಂದೇಳುವುದು ಕಷ್ಟಸಾಧ್ಯ. ದ್ರಾವಿಡ ಭಾಷೆಗಳಲ್ಲಿ ನಾಮಪ್ರಕೃತಿಗಳ ರೂಪಕ್ಕಿಂತ ಅರ್ಥಕ್ಕೆ ಅನುಗುಣವಾಗಿಯೇ ಲಿಂಗ ವಿವಕ್ಷೆಯಿದೆ.

ಲಿಂಗ–ವಚನ ವಿಚಾರ

ತಮಿಳು, ಕನ್ನಡ ಭಾಷೆಗಳು ಏಕವಚನದಲ್ಲಿ ಪುಲ್ಲಿಂಗ, ಸ್ತ್ರೀಲಿಂಗ ಹಾಗೂ ನಪುಂಸಕ ಲಿಂಗಗಳ ಸ್ಪಷ್ಟ ವ್ಯವಸ್ಥೆಯನ್ನು ಹೊಂದಿದ್ದು, ಬಹುವಚನದಲ್ಲಿ ಮಾತ್ರ ಮಾನವ/ಮಾನವೇತರ ಎಂಬ ಲಿಂಗ ಬೇಧವನ್ನು ಬಳಸಿಕೊಂಡು ಬಂದಿರುವುದನ್ನು ಗಮನಿಸಬಹುದು. ಆದರೆ ಕೊರಚ ಭಾಷೆಯು ಈ ಲಿಂಗ, ವಚನ ವ್ಯವಸ್ಥೆಯ ವಿಚಾರವಾಗಿ ತಮಿಳು, ಕನ್ನಡಗಳಿಗಿಂತ ಭಿನ್ನವಾದ ವ್ಯವಸ್ಥೆಯನ್ನು ಬೆಳೆಸಿಕೊಂಡು ಬಂದಿರುವುದನ್ನು ನಾವು ನೋಡಬಹುದು. ಆದರೆ ತೆಲುಗಿನ ಸ್ತ್ರೀಲಿಂಗ ಮತ್ತು ನಪುಂಸಕಲಿಂಗ ಪ್ರಥಮ ಪುರುಷ ಸರ್ವನಾಮಗಳಲ್ಲಿ ಒಂದೇ ರೀತಿಯಾಗಿ ಅನುಸರಿಸಿರುವುದು ಕಂಡುಬರುತ್ತದೆ. ಆದರೆ ಪ್ರಥಮ ಪುರುಷ ಸರ್ವನಾಮ ಪುಲ್ಲಿಂಗದಲ್ಲಿ ಭಿನ್ನತೆಯನ್ನು ಕಾಣುತ್ತೇವೆ. ಅದು ತೆಲುಗಿನಲ್ಲಿ ಏಕವಚನದಲ್ಲಿ 'ವಾಡು' ಎಂದು ಬಹುವಚನದಲ್ಲಿ 'ವಾರು' ಎಂದು ಕರೆಯುವುದನ್ನು ನೋಡಬಹುದು.

ಪ್ರಥಮ ಪುರುಷ (ಸರ್ವನಾಮಗಳಲ್ಲಿ)

	ಪುಲ್ಲಿಂಗ	ಸ್ತ್ರೀಲಿಂಗ	ನಪುಂಸಕಲಿಂಗ
೧. ತಮಿಳು:	ಅವನ್ (ಅವನು)	ಅವಳ್ (ಅವಳು)	ಅದು (ಅದು) – ಏಕವಚನ
	ಅವರ್ (ಅವರು)	ಅವರ್ (ಅವರು)	ಅವೈ (ಅವು) – ಬಹುವಚನ
೨. ತೆಲುಗು:	ವಾಡು	ಅದಿ	ಅದಿ – ಏಕವಚನ
	ವಾರು	ಅವಿ	ಅವಿ ಬಹುವಚನ
೩. ಕನ್ನಡ:	ಅವನು	ಅವಳು	ಅದು ಏಕವಚನ
	ಅವರು	ಅವರು	ಅವು ಬಹುವಚನ
೪. ಕೊರಚ:	ಅದು	ಅದು	ಅದು ಏಕವಚನ
	ಅಯ್ಯ	ಅಯ್ಯ	ಅಯ್ಯ ಬಹುವಚನ

ಈ ಮೇಲಿನಂತೆ ಪ್ರಥಮ ಪುರುಷ ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕಲಿಂಗ ಏಕವಚನ ಹಾಗೂ ಬಹುವಚನದಲ್ಲಿ ತಮಿಳು, ಕನ್ನಡಗಳಿಗಿಂತ ಭಿನ್ನವಾದ ವ್ಯವಸ್ಥೆಯನ್ನು (ರೂಪಗಳನ್ನು) ಕೊರಚ ಭಾಷೆ ಅನುಸರಿಸಿರುವುದು ಕಂಡುಬರುತ್ತದೆ. ಇಲ್ಲಿ ಕೊರಚ ಭಾಷೆಯು ಪ್ರಥಮ ಪುರುಷ ಏಕವಚನ ಮತ್ತು ಬಹುವಚನ ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕ ಲಿಂಗಕ್ಕೆಲ್ಲಾ ತಮಿಳು, ಕನ್ನಡಗಳಂತೆ ಪ್ರತ್ಯೇಕವಾದ ರೂಪವನ್ನು ಅನುಸರಿಸದೇ ಮೂರು ಮಾದರಿಗೂ ಒಂದೇ ರೂಪವನ್ನು ಅನುಸರಿಸಿರುವುದು ಕಂಡುಬರುತ್ತದೆ.

ಇಲ್ಲಿ ಕೊರಚ ಭಾಷೆಯು ತಮಿಳು, ಕನ್ನಡಗಳ ನಡುವೆ ಭಿನ್ನತೆಯನ್ನು ತೋರಿಸುತ್ತದೆಯಾದರೂ ಪುರುಷ ವಾಚಕ ಸರ್ವನಾಮಗಳಾದ ಉತ್ತಮ ಪುರುಷ ಹಾಗೂ ಮಧ್ಯಮ ಪುರುಷ ಏಕವಚನ ಹಾಗೂ ಬಹುವಚನಗಳಲ್ಲಿ ಪ್ರಯೋಗಗೊಳ್ಳುವ ರೂಪಗಳಲ್ಲಿ ಪರಸ್ಪರ ಸಾಮ್ಯತೆ ಕಂಡುಬರುತ್ತದೆ. ಉದಾಹರಣೆಗೆ.

		ಉತ್ತಮ ಪುರುಷ	ಮಧ್ಯಮ ಪುರುಷ
೧.	ತಮಿಳು:	ಯಾನ್, ನಾನ್	ನೀ, ನೀನ್ – ಏಕವಚನ
		ಯಾಮ್ ನಾಂಗಳ್	ನಿಂಗಳ್, ನೀಮ್ – ಬಹುವಚನ
೨.	ತೆಲುಗು:	ನೇನು	ನೂವು – ಏಕವಚನ
		ಮೇಮು	ಮೀರು – ಬಹುವಚನ
೩.	ಕನ್ನಡ:	ನಾ, ನಾನು	ನೀ ನೀನು – ಏಕವಚನ
		ನಾವು	ನೀವು – ಬಹುವಚನ
೪.	ಕೊರಚ:	ನಾ, ನಾನ್	ನೀ ನೀನ್ – ಏಕವಚನ
		ನಂಗ	ನಿಂಗ – ಬಹುವಚನ

ಈ ಮೇಲಿನಂತೆ ತಮಿಳು, ಕನ್ನಡ ಮತ್ತು ಕೊರಚ ಭಾಷೆಯಲ್ಲಿ ಪುರುಷವಾಚಕ ಸರ್ವನಾಮ ಉತ್ತಮ ಪುರುಷ ಮತ್ತು ಮಧ್ಯಮ ಪುರುಷ ಏಕವಚನ, ಬಹುವಚನದಲ್ಲಿ ಸಾಮ್ಯತೆ ಕಂಡುಬರುತ್ತದೆ. ಈ ಮಾದರಿಯಲ್ಲಿ ಮಧ್ಯ ದ್ರಾವಿಡ ಭಾಷೆಯ ಪ್ರಕಾರಕ್ಕೆ ಸೇರಿದ ತೆಲುಗು ಭಾಷಿಕಾಂಶಗಳು ಕೊರಚರ ಭಾಷೆಯಲ್ಲಿ ಕಂಡುಬರುತ್ತವೆಯಾದರೂ ಪುರುಷ ವಾಚಕ ಸರ್ವನಾಮಗಳಾದ ಉತ್ತಮ, ಮಧ್ಯಮ ಪುರುಷವಾಚಕಗಳ ಮೇಲೆ ಯಾವುದೇ ಪ್ರಭಾವವನ್ನು ಬೀರಿಲ್ಲ. ಇಲ್ಲಿ ಈ ಸಾಮ್ಯತೆಗಳ ಹಿನ್ನೆಲೆಯಲ್ಲಿ ಕೊರಚರ ಭಾಷೆಯು ಉತ್ತಮ ಪುರುಷ ಮತ್ತು ಮಧ್ಯಮ ಪುರುಷವಾಚಕಗಳ ಬಳಕೆಯಲ್ಲಿ ತಮಿಳು ಕನ್ನಡಗಳನ್ನು ಅನುಸರಿಸಿದೆ. ಪುರುಷವಾಚಕ ಸರ್ವನಾಮಗಳನ್ನು ಕುರಿತಂತೆ ಉತ್ತಮ ಪುರುಷ, ಮಧ್ಯಮ ಪುರುಷ ಏಕವಚನ ಮತ್ತು ಬಹುವಚನ ವ್ಯವಸ್ಥೆಯಲ್ಲಿ ಹೆಚ್ಚಿನ ದ್ರಾವಿಡ ಭಾಷೆಗಳು ಪರಸ್ಪರ ಪ್ರಭಾವದಿಂದ ಅಲ್ಪಸ್ವಲ್ಪ ವ್ಯತ್ಯಾಸದೊಂದಿಗೆ ಒಂದೇ ತೆರನಾದ ರೂಪಗಳನ್ನೇ ಇಲ್ಲಿ ಅನುಸರಿಸಿರುವುದನ್ನು ನೋಡಬಹುದು. ಉದಾ. ಮಲೆಯಾಳಂ– ನಾನ್, ನಾಮ್, ನೀ, ಏನ್, ಯಾನ್, ಕೊಡವ – ನಾ, ಎಂಗ, ನೀ, ನಿಂಗ, ತುಳು– ಏನ್, ಯಾನ್, ನಾವು, ನಮ, ಈ, ಇನ್ನಳು, ಈರ್ ಇತ್ಯಾದಿಯಾಗಿ ನೋಡಬಹುದು.

ಈ ದಿಸೆಯಲ್ಲಿಯೇ ದ್ರಾವಿಡ ಭಾಷಾ ಪರಿವಾರಕ್ಕೆ ಸಮೀಪವಾದ ಭಾಷೆಯ ಸರ್ವನಾಮಗಳಲ್ಲಿ ಉತ್ತರ ದ್ರಾವಿಡ ಭಾಷಾ ವರ್ಗಕ್ಕೆ ಸೇರಿದ ಬ್ರಾಹೋಈಯನ್ನು ಒಳಗೊಂಡಂತೆ ಮಾಲ್ತೋ ಕುರಖ್ ಭಾಷೆಗಳ ಅಂಶಗಳು ಕೂಡ ಕಂಡುಬರುತ್ತದೆ. ಉದಾ.

	ಪುಲ್ಲಿಂಗ	ಸ್ತ್ರೀಲಿಂಗ	ನಪುಂಸಕ ಲಿಂಗ
ಬ್ರಾಹೋಈ:	ಓದ್	ಓದ್	ಓದ್–ಏಕವಚನ
	ಓಫೆಕ್	ಓಫೆಕ್	ಓಫೆಕ್ – ಬಹುವಚನ
ಕೊರಚರು:	ಅದು	ಅದು	ಅದು – ಏಕವಚನ
	ಅಯ್ಯ	ಅಯ್ಯ	ಅಯ್ಯ – ಬಹುವಚನ

ಈ ಮೇಲಿನಂತೆ ಈ ಎರಡೂ ಭಾಷೆಗಳಲ್ಲಿ ಏಕವಚನ, ಬಹುವಚನ, ಪುಲ್ಲಿಂಗ, ಸ್ತ್ರೀಲಿಂಗ ಪ್ರತ್ಯೇಕ ವ್ಯವಸ್ಥೆ ಇಲ್ಲ ಆದರೆ ಇಲ್ಲಿ ಪ್ರಥಮ ಪುರುಷ ನಪುಂಸಕಲಿಂಗವೇ ಅರ್ಥಾನುಗುಣವಾಗಿ ಎಲ್ಲೆಡೆ ಬಳಕೆಯಾಗುವುದನ್ನು ನೋಡಬಹುದಾಗಿದೆ.

ಈ ರೀತಿಯಾಗಿ ಲಿಂಗ ವಚನ ವಿಚಾರವಾಗಿ ಕೊರಚರಲ್ಲಿ ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕ ಲಿಂಗಗಳಿಗೆ ಒಂದೇ ಮಾದರಿಯ ವಚನಗಳನ್ನು ಬಳಕೆ ಮಾಡುವುದು ಕಂಡುಬರುತ್ತದೆ. ಉದಾ.

೧. ಉತ್ತಮ ಪುರುಷ: ಪುಲ್ಲಿಂಗ, ಸ್ತ್ರೀಲಿಂಗ ಏಕವಚನಕ್ಕೆ ಸಂಬಂಧಿಸಿದಂತೆ ನಾ ಊರುಕು ಹೋಕ್ರೇ (ನಾನು ಊರಿಗೆ ಹೋಗುತ್ತೇನೆ.) ನಾನು ಓದಂಗ ವದ್ಕಿರಿ (ನಾನು ಓದುವುದಕ್ಕೆ ಬಂದಿದ್ದೇನೆ)

ಬಹುವಚನಕ್ಕೆ ಸಂಬಂಧಿಸಿದಂತೆ – ನಂಗ ಸಾಲಿಗಿ ವಂದ್ಕೀರೋ (ನಾವು ಶಾಲೆಗೆ ಬಂದಿದ್ದೇವೆ.) ನಂಗ ಜಾತ್ರಿಕಿ ವಾರೋ (ನಾವು ಜಾತ್ರೆಗೆ ಬರುತ್ತೇವೆ)

೩. ಮಧ್ಯಮ ಪುರುಷ – ಏಕವಚನಕ್ಕೆ ಸಂಬಂಧಿಸಿದಂತೆ ನೀನ್ ಕೊಲ್ಲಿಗಿ ಪೋ (ನೀನು ಹೊಲಕ್ಕೆ ಹೋಗು), ನೀನ್ ಊಟುಗ್ ನಡಾ (ನೀನು ಮನೆಗೆ ನಡೆ)

ಬಹುವಚನಕ್ಕೆ ಸಂಬಂಧಿಸಿದಂತೆ– ನಿಂಗಡ್ಡಿ ನಲ್ಲಕಿರಂಗ (ನೀವೆಲ್ಲಾ ಚನ್ನಾಗಿದ್ದಿರಾ) ನಿಂಗಡ್ಡಿ ದಬಾನ ಬಾಂಗೋ (ನೀವೆಲ್ಲಾ ಬೇಗ ಬನ್ನಿ).

ಪ್ರಥಮ ಪುರುಷ ಏಕವಚನಕ್ಕೆ ಸಂಬಂಧಿಸಿದಂತೆ– ಅದು ನಂಗ ಮಣಾಗು (ಅವನು ನನ್ನ ಗಂಡ), ಅದು ನಂಗ ಮೊಂಡು (ಅವಳು ನನ್ನ ಹೆಂಡತಿ), ಅದು ನಂಗ್ಪ ಮಾಡು (ಅದು ನಮ್ಮ ದನ).

ಬಹುವಚನಕ್ಕೆ ಸಂಬಂಧಿಸಿದಂತೆ– ಅಯ್ಯ ನಂಗಳ ನೆಂಟ್ರು (ಅವರು ನಮ್ಮ ನೆಂಟರು), ಅಯ್ಯ ನಂಗಲ್‌ದಾಟಯ (ಅವರು ನಮ್ಮ ಕಡೆಯವರು) ಅಯ್ಯಡ್ಡಿ ಕೆಲ್ಲಂಗ (ಅವೆಲ್ಲಾ ಕಲ್ಲುಗಳು).

ಕೊರಚ ಭಾಷೆಯಲ್ಲಿನ ಬಹುವಚನ ಪ್ರತ್ಯಯಗಳು

ನಾಯ, ಅಂಗ, ಗ, ಅಯ್, ಉ, ಆಳ್, ಓ.

ನಾಯ: ಸಂಬಂಧವಾಚಕ ನಾಮಗಳಿಗೆ ಅನ್ವಯವಾಗುವ ಬಹುವಚನ ಪ್ರತ್ಯಯ

* ಅಣ್ಣನಾಯ (ಅಣ್ಣಂದಿರು) = ಅಣ್ + ನಾಯ

* ಅಕ್ಕನಾಯ (ಅಕ್ಕಂದಿರು) = ಅಕ್ + ನಾಯ

* ಮಾಮನಾಯ (ಮಾವಂದಿರು) = ಮಾಮ್ + ನಾಯ

* ಅತ್ತನಾಯ (ಅತ್ತೆಂದಿರು) = ಅತ್ + ನಾಯ

* ತೆಂಬಿನಾಯ (ತಮ್ಮಂದಿರು) = ತಮ್ + ನಾಯ

* ತಸ್ಸಿನಾಯ (ತಂಗಿಯರು) = ತಸ್ + ನಾಯ

ಅಂಗ: ಪ್ರತ್ಯಯ ನಪುಂಸಕದ ನಾಮಗಳಿಗೆ ಅನ್ವಯವಾಗುತ್ತದೆ.

* ಸೆಡೆಂಗ (ಗಿಡಗಳು) ಸೆಡಿ + ಅಂಗ

* ಕೆಲ್ಲಂಗ (ಕಲ್ಲುಗಳು) ಕಲ್ + ಅಂಗ

* ಮರ್‍ರಂಗ (ಮರಗಳು) ಮರ್ + ಅಂಗ

* ಊರಂಗ (ಊರುಗಳು) ಊರ್ + ಅಂಗ

ಗ, ಪ್ರತ್ಯಯಕ್ಕೆ

* ಪುರುವಗ (ಹುಳುಗಳು) ಪುರುವ್ + ಗ

(ಮಾಡಗ (ದನಗಳು) ಮಾಡ್ + ಗ

ಊಡಗ (ಮನೆಗಳು) ಊಡ್ + ಗ

ದೊಡುಗ (ಕರುಗಳು) ದೊಡ್ + ಗ

ಎದ್ದಗ (ಎತ್ತುಗಳು) ಎದ್ + ಗ

ಅಯ್: ಪ್ರತ್ಯಯ ವಿಶೇಷಣಾ ಹಾಗೂ ಇತರೆ ನಾಮಗಳಿಗೆ ಅನ್ವಯವಾಗುತ್ತವೆ.

* ಕಮ್ಮರಾಯ (ಕಮ್ಮಾರರು) ಕಮ್ + ಅಯ್

* ಬೆರಾಯ (ದೊಡ್ಡವರು) ಬೆರ್ + ಅಯ್

* ಅಗರಾಯ (ಅಳುವವರು) ಅಗರ್ + ಅಯ್

* ಸಿನ್ನೆಯ (ಸಣ್ಣವರು) ಸಿನ್ + ಅಯ್

ಉ: ಪ್ರತ್ಯಯ ಸಂಖ್ಯಾವಾಚಿಗಳಿಗೆ ಸಂಬಂಧಿಸಿದಂತೆ

* ಒಂಡು (ಒಂದು) ಒಂಡ್ + ಉ

* ರೊಂಡು (ಎರಡು) ರೊಂಡ್ + ಉ

* ಮೂಡು (ಮೂರು) ಮೂಡ್ + ಉ

* ನಾಲು (ನಾಲ್ಕು) ನಾಲ್ + ಉ

ಅಳ್: ಪ್ರತ್ಯಯ

* ಒಂಡಾಳ್ (ಒಬ್ಬರು) ಒಂಡ್ + ಅಳ್

* ರೊಂಡಾಳ್ (ಇಬ್ಬರು) ರೊಂಡ್ + ಅಳ್

* ಮೂಡಾಳ್ (ಮೂವರು) ಮೂಡ್ + ಅಳ್

* ನಾಲಳ್ (ನಾಲ್ವರು) ನಾಲ್ + ಅಳ್ ಇತ್ಯಾದಿ.

ವಿಭಕ್ತಿ ವಿಚಾರ (ಕೊರಚರ)

ಒಂದು ವಾಕ್ಯದ ರಚನೆಯಲ್ಲಿ ವಿಭಕ್ತಿ ಪ್ರತ್ಯಯಗಳು ಬಹುಮುಖ್ಯ ಸ್ಥಾನವನ್ನು ಪಡೆದುಕೊಂಡಿವೆ. ವಾಕ್ಯದಲ್ಲಿನ ಪದಗಳ ಸ್ಥಾನಮಾನವನ್ನು ಅವು ಕ್ರಿಯಾ ಪದದೊಡನೆ ಹೊಂದಿರಬಹುದಾದ ಅರ್ಥಸಂಬಂಧವನ್ನು ಸೂಚಿಸಲು ಸಹಾಯ ಮಾಡುತ್ತದೆ. ವಾಕ್ಯಗಳ ಮಟ್ಟದಲ್ಲಿ ಪ್ರತ್ಯಯಗಳ ಸ್ಥಾನಮಾನವನ್ನು ಬದಲಿಸಿದರೆ ಅವುಗಳ ಅರ್ಥ ವ್ಯತ್ಯಾಸವಾಗುತ್ತದೆ. ಇಲ್ಲಿ ನಾಮಪದ ಮತ್ತು ಕ್ರಿಯಾಪದಗಳ ನಡುವಿನ ಸಂಬಂಧವನ್ನು ಕಾರಕ ಎನ್ನುತ್ತಾರೆ. ಕಾರಕ ಸಂಬಂಧ ಎಂತಹದ್ದು ಎಂಬುದನ್ನು ವಿಭಕ್ತಿ ಪ್ರತ್ಯಯಗಳಿಂದ ತಿಳಿಯಬಹುದಾಗಿದೆ. ಪ್ರತ್ಯಯಗಳು ನಾಮಪುಂಜ ಹಾಗೂ ವಾಕ್ಯದಲ್ಲಿಯ ಕ್ರಿಯಾಪದಗಳ ನಡುವಿನ ಸಂಬಂಧವನ್ನು ಸಂಕೇತಿಸುವುದಾಗಿದೆ. ಹೀಗಾಗಿ ಒಂದೊಂದು ವಿಭಕ್ತಿಯೂ ಒಂದೊಂದು ಕಾರಕಾರ್ಥವನ್ನು ಹೊಂದಿರುವುದು ಅದಕ್ಕನುಗುಣವಾಗಿ ವಿಭಕ್ತಿ ಪ್ರತ್ಯಯಗಳು ಬಳಕೆಯಾಗುವುದನ್ನು ನೋಡತಕ್ಕದು. ಈ ಹಿನ್ನೆಲೆಯಲ್ಲಿ ತಮಿಳು, ತೆಲುಗು, ಕನ್ನಡ ಮೊದಲಾದ ದ್ರಾವಿಡ ಭಾಷೆಗಳಲ್ಲಿಯೂ ಪ್ರತ್ಯಯವು ಪ್ರಧಾನವಾಗಿ ಬಳಕೆಯಾಗುವಂತೆ ದ್ರಾವಿಡ ಪರಿವಾರದ ಅಲೆಮಾರಿ ಬುಡಕಟ್ಟು ಸಮುದಾಯವಾದ ಕೊರಚರ ಭಾಷೆಯಲ್ಲಿಯೂ ವಿಭಕ್ತಿಯ ಪ್ರತ್ಯಯಗಳು ಮುಖ್ಯವಾದ ಸ್ಥಾನಮಾನ ಪಡೆದಿರುವುದನ್ನು ಗಮನಿಸಬಹುದಾಗಿದೆ.

೧. ಪ್ರಥಮಾ ವಿಭಕ್ತಿ

ಕೊರಚರ ಭಾಷೆಯಲ್ಲಿ 'ಒ' ಪ್ರಥಮ ವಿಭಕ್ತಿ ಪ್ರತ್ಯಯವಾಗಿದೆ. ಇಲ್ಲಿ ದ್ರಾವಿಡ ಭಾಷೆಗಳಲ್ಲಿ ಪ್ರಥಮ ವಿಭಕ್ತಿಗೆ ಪ್ರತ್ಯೇಕ ಪ್ರತ್ಯಯವಿಲ್ಲ. ಮೂಲ ದ್ರಾವಿಡ ವ್ಯಂಜನಾಂತ ಶಬ್ದಗಳಿಗೆ ಮತ್ತು ಅ, ಎ, ಇ ಸ್ವರಾಂತ ಶಬ್ದಗಳಿಗೆ 'ಉ' ಸ್ವರವನ್ನು ಸೇರಿಸಲಾಗಿ ಪ್ರಥಮ ವಿಭಕ್ತಿ ಪ್ರತ್ಯಯವೆಂದು ಗುರುತಿಸಿದಂತೆ ತೋರುತ್ತದೆ. (ಕೆ.ವಿ. ಜಯಪ್ಪ, ೨೦೧೬, ಪುಟ-೧೭೦) ತೆಲುಗಿನಲ್ಲಿ ಡು.ಮು.ಉ. ಕಾರಂತ ಅಕ್ಷರಗಳೇ ಸೇರಿವೆ. ಕನ್ನಡದಲ್ಲಿಯೂ 'ಉ' ಕಾರಂತ ಶಬ್ದಗಳಿಗೆ 'ಉ' ಸ್ವರವನ್ನು ಪ್ರಥಮ ವಿಭಕ್ತಿಗೆ ಪ್ರತ್ಯಯ ಸೇರಿಸಲಾಗಿದೆ. ಈ ಮಾದರಿಯಲ್ಲಿಯೇ ಕೊರಚ ಭಾಷೆಯಲ್ಲಿ 'ಒ'

ಸ್ವರವನ್ನು ಪ್ರಥಮ ವಿಭಕ್ತಿಯಾಗಿ ನೋಡಬಹುದಾಗಿದೆ. ಉದಾ. ರಾಮಾ ಊರುಂಡ ವಂಚು (ರಾಮನು ಊರಿಂದ ಬಂದನು) = ರಾಮ + ಒ, ಭೀಮೊ ಊರು ಹೋಸು (ಭೀಮನು ಊರಿಗೆ ಹೋದನು) = ಭೀಮ + ಒ ಆದರೂ ಇಲ್ಲಿ ನಾಮ ಪ್ರಕೃತಿ ತನ್ನ ಸಹಜ ಸ್ಥಿತಿಯಲ್ಲಿ ಇಲ್ಲವೆ ಸ್ವರಾಂತಗೊಂಡು ಬಳಕೆಗೊಳ್ಳುವುದರಿಂದಾಗಿ ಪ್ರಥಮ ವಿಭಕ್ತಿಗೆ ಪ್ರತ್ಯೇಕವಾದ ಪ್ರತ್ಯಯ ಸೂಚನೆ ಇಲ್ಲವೆನಿಸುತ್ತದೆ. ಉದಾಹರಣೆಗೆ ಭಾರತಿ ನಡದಗುಂಡು ಹೋಸು (ಭಾರತಿ ನಡೆಯುತ್ತ ಹೋದಳು), ರವೀಂದ್ರ ನಿಂಡ್ರಗುಂಡಕೀದು (ರವೀಂದ್ರನು ನಿಂತುಕೊಂಡಿದ್ದಾನೆ) ಪ್ರಪುಲ್ಲ ನಲ್ಲಕೀದು (ಪ್ರಪುಲ್ಲ ಸುಂದರಿಯಾಗಿದ್ದಾಳೆ) ಮುಂತಾದ ಅನೇಕ ವಾಕ್ಯಗಳಲ್ಲಿ ಭಾರತಿ, ರವೀಂದ್ರ, ಕೆಲ್ಲು, ಪ್ರಪುಲ್ಲ ಇವುಗಳಿಗೆ ಯಾವ ವಿಭಕ್ತಿ ಪ್ರತ್ಯಯವೂ ಹತ್ತಿಲ್ಲ, ಆದರೂ ಆ ಕರ್ತೃಗಳ ಕಾರಕ ಸಂಬಂಧ ಸ್ಪಷ್ಟವಿದೆ. ಆದುದರಿಂದ ಇಲ್ಲಿ ಆಳ ರಚನಾ ಮಟ್ಟದಲ್ಲಿ ವಿಭಕ್ತಿ ಇದೆ. ಆದರೆ ಹೊರಗೆ ಪ್ರತ್ಯಯ ಕಾಣುವುದಿಲ್ಲ. ಪ್ರತ್ಯಯ ಶೂನ್ಯದ ಸ್ಥಿತಿಯಲ್ಲಿದ್ದು ಭಾಷೆಯ ರಚನೆಯ ಕಾರ್ಯವನ್ನು ನಿರ್ವಹಿಸುತ್ತದೆ.

೨. ದ್ವಿತೀಯಾ ವಿಭಕ್ತಿ

ಕೊರಚ ಭಾಷೆಯಲ್ಲಿ 'ಎಂದು' (ಅನ್ನು) ಪ್ರತ್ಯಯ ದ್ವಿತೀಯಾ ವಿಭಕ್ತಿಯನ್ನು ಸೂಚಿಸುತ್ತದೆ. ಮೂಲ ದ್ರಾವಿಡಕ್ಕೆ ಅನ್, ಆಯ್ ಹಾಗೂ ನ್‌ಕ್ ಎಂಬ ಮೂರು ಪ್ರತ್ಯಯಗಳನ್ನು ಪುನರಚಿಸಲಾಗಿದೆ. ಆದರೆ ಬಹಳಷ್ಟು ದ್ರಾವಿಡ ಭಾಷೆಗಳು 'ಅನ್' ಪ್ರತ್ಯಯವನ್ನು ಹೊಂದಿರುವುದರಿಂದಾಗಿ 'ಅನ್' ಒಂದನ್ನೇ ಮೂಲ ದ್ರಾವಿಡಕ್ಕೆ ಇಟ್ಟುಕೊಂಡರೆ ಸಾಕೆನಿಸುತ್ತದೆ ಎಂದು 'ಸಂಗಮೇಶ ಸವದತ್ತಿ ಮಠರು ಅಭಿಪ್ರಾಯಿಸಿದ್ದಾರೆ'. ಆದರೆ ಈ ದ್ರಾವಿಡ ಪರಿವಾರಕ್ಕೆ ಸೇರಿದ ಕೊರಚರ ಭಾಷೆಯಲ್ಲಿ 'ಎಂದು' ಎಂಬ ಪ್ರತ್ಯಯವನ್ನು ಬಳಸಿರುವುದನ್ನು ನೋಡಬಹುದಾಗಿದೆ.

ಉದಾ. ಜನಾಂಗಳೆತ್ತಂದು (ಜನರನ್ನು) = ಜನಂಗಳ + ಎತ್ + ಎಂದು

ಮಾಳೆತ್ತೆಂದು (ದನಗಳನ್ನು) = ಮಾಳ್ + ಎತ್ + ಎಂದು

ಮರ್ರತ್ತೆಂದು (ಮರವನ್ನು) = ಮರ + ಎತ್ + ಎಂದು

ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ದ್ರಾವಿಡ ಭಾಷಾ ಪರಿಸರದಲ್ಲಿರುವ ಕೊರಚ ಭಾಷೆಯು, ಯಾವ ದ್ರಾವಿಡ ಭಾಷೆಗಳ ದ್ವಿತೀಯ ವಿಭಕ್ತಿ ಪ್ರತ್ಯಯವನ್ನು ಅನುಸರಿಸದೆ ಸ್ವತಂತ್ರ ಪ್ರತ್ಯಯವನ್ನು ಅನುಸರಿಸಿದೆ.

೩. ತೃತೀಯಾ ವಿಭಕ್ತಿ

ಮೂಲ ದ್ರಾವಿಡ ಅನ್/ಅಲ್,- ಒಡು/ಓಡು ಹಾಗೂ 'ನ್' ಈ ತೃತೀಯಾ ವಿಭಕ್ತಿ ಪ್ರತ್ಯಯಗಳಲ್ಲಿ ಒಂದನ್ನು ಅಥವಾ ಎರಡನ್ನು ದ್ರಾವಿಡ ಭಾಷೆಗಳು ಆಯ್ದುಕೊಂಡು ಬೆಳವಣಿಗೆ ಮಾಡಿಕೊಂಡಿವೆ. ಇದರಂತೆ ಕನ್ನಡವು 'ಇಂದ' ಪ್ರತ್ಯಯವನ್ನು ಬಳಸಿಕೊಂಡಿದೆ. ಕೊರಚ ಭಾಷೆಯಲ್ಲಿ

ಉಂಡು, ಇಂಡು ಮತ್ತು ಇಟಿ (ಇಂದ) ಪ್ರತ್ಯಯಗಳು ತೃತೀಯಾ ವಿಭಕ್ತಿಯನ್ನು ಸೂಚಿಸುತ್ತದೆ. ಉದಾಹರಣೆಗೆ

ರಾಮನುಂಡು = ರಾಮ್ + ಉಂಡು (ರಾಮನಿಂದ)

ಪೆನ್ನುಂಡು = ಪೆನ್ + ಉಂಡು (ಪೆನ್ನಿಂದ)

ಸಾಲಿಂಡು = ಸಾಲಿ + ಇಂಡ (ಶಾಲೆಯಿಂದ)

ಊಟುಂಡು = ಊಟ್ + ಉಂಡು (ಮನೆಯಿಂದ)

ಕೋಲುಟಿ = ಕೋಲ್ + ಇಟಿ (ಕೋಲಿಂದ)

ಕೆಲ್ಲುಟಿ = ಕೆಲ್ + ಇಟಿ (ಕಲ್ಲಿಂದ)

ರಾಮನುಂಡು ಪಣಿ ಆಗನ್ನು (ರಾಮನಿಂದ ಕೆಲಸ ಆಗಬಹುದು)

ಪೆನ್ನುಂಡು ಬರೆನ್ನು (ಪೆನ್ನಿಂದ ಬರೆಯಬಹುದು)

ಸಾಲಿಂಡು ಸಿನ್ನೆಯ ವಂಚು (ಶಾಲೆಯಿಂದ ಹುಡುಗರು ಬಂದರು)

ಊಟುಂಡು ವಂಚು (ಮನೆಯಿಂದ ಬಂದನು)

ಕೋಲುಟಿ ಮಾಚ್ಚು (ಕೋಲಿಂದ ಬಡಿದನು)

ಕೆಲ್ಲಿಟಿ ಬೆಟಸು (ಕಲ್ಲಿಂದ ಎಸೆದನು)

ಈ ರೀತಿಯಾಗಿ ಕೊರಚ ಭಾಷೆಯು ತೃತೀಯಾ ವಿಭಕ್ತಿಯಲ್ಲೂ ತನ್ನದೇ ಆದ ಪ್ರತ್ಯಯವನ್ನು ಬೆಳೆಸಿಕೊಂಡಿದೆ.

೪. ಚತುರ್ಥಿ ವಿಭಕ್ತಿ

ಕೊರಚ ಭಾಷೆಯಲ್ಲಿ ಕಿ, ಕೆ, ಕು ಪ್ರತ್ಯಯಗಳು ಚತುರ್ಥಿ ವಿಭಕ್ತಿ ಪ್ರತ್ಯಯಗಳಾಗಿವೆ. ಚತುರ್ಥಿ ವಿಭಕ್ತಿಯೂ ಸಾಮಾನ್ಯವಾಗಿ ನಿರ್ದೇಶನಾರ್ಥವನ್ನು ಹೊಂದಿದ್ದರೂ ಉದ್ದೇಶ, ಹೋಲಿಕೆ ಅವುಗಳ ಅರ್ಥವನ್ನು ಕೆಲವಡೆ ವ್ಯಕ್ತಪಡಿಸುತ್ತದೆ. ಸ್ಥಳ ಸಂಬಂಧವಾಚಕ, ಕಾಲವಾಚಕ, ನಾಮಗಳಿಗೆ ಬಂದಾಗ ಕೆಲವು ಸಲ ಷಷ್ಠಿ ಅರ್ಥವನ್ನು ಹೊಂದಿರುತ್ತದೆ. ಕೆಲವೆಡೆ ತೃತೀಯ ವಿಭಕ್ತಿಯಾರ್ಥವನ್ನು ಹೊರಗೆಡುಹುತ್ತದೆ. ಇಲ್ಲಿ 'ಕ್ಕ' (ಸ್ವರ) ಚತುರ್ಥಿ ವಿಭಕ್ತಿ ಪ್ರತ್ಯಯವನ್ನು ಮೂಲ ದ್ರಾವಿಡಕ್ಕೆ ಪುನರಚಿಸಲು ಪಂಡಿತರಿಗೆ ಸುಲಭವಾದುದಕ್ಕೆ ಸಾಮಾನ್ಯವಾಗಿ ಎಲ್ಲ ದ್ರಾವಿಡ ಭಾಷೆಗಳು ಈ ವಿಭಕ್ತಿಯಲ್ಲಿರುವ 'ಕ್' ಕಾರ ಉಳಿಸಿಕೊಂಡುದಲ್ಲದೆ ಬೇರೆ ಪ್ರತ್ಯಯಗಳನ್ನು ಬಳಸಿಕೊಳ್ಳದಿರುವುದೇ ಇದಕ್ಕೆ ಕಾರಣವಾಗಿರಬಹುದು. ಈ ಚತುರ್ಥಿ ವಿಭಕ್ತಿಯಲ್ಲಿ ಕೊರಚ ಭಾಷೆ ಎಲ್ಲಾ ದ್ರಾವಿಡ ಭಾಷೆಗಳಂತೆಯೇ ಮೂಲ ದ್ರಾವಿಡ ಲಕ್ಷಣವನ್ನು ಉಳಿಸಿಕೊಂಡಿರುವುದು ಬಹು ವಿಶೇಷವಾಗಿದೆ. ಉದಾಹರಣೆಗೆ.

ಸೆಡಿಕಿ (ಗಿಡಕ್ಕೆ) ಸೆಡಿ + ಕಿ

ಮರ್ತಕೆ (ಮರಕ್ಕೆ) ಮರ್ತ + ಕೆ

ಕೊಲ್ಕಿ (ಹೊಲಕ್ಕೆ) ಕೊಲ್ + ಕಿ

ರಾಮನುಕು (ರಾಮನಿಗೆ) ರಾಮನ್ + ಕು

ಈ ಮೇಲೆ ತಿಳಿಸಿದಂತೆ ಕೊರಚ ಭಾಷೆಯಲ್ಲಿ ಕಿ, ಕೆ, ಕು ವಿಭಕ್ತಿಗಳು ಬಳಕೆಗೊಳ್ಳುವ ಕ್ರಮದಲ್ಲಿಯೇ 'ಗ' ಪ್ರತ್ಯಯವು ಹತ್ತುವ ಸಾಧ್ಯತೆಗಳು ಕೊರಚರಲ್ಲಿ ಕಂಡುಬರುತ್ತದೆ. ಉದಾ. ಕೊಲ್ಲಿಗಿ, ಊಟುಗು, ಸೆಡಿಗಿ, ಮರ್ತಗು, ರಾಮನುಗ ಇತ್ಯಾದಿಯಾಗಿ ಬಳಕೆಯಾಗುವುದನ್ನು ನೋಡಬಹುದಾಗಿದೆ.

೫. ಪಂಚಮಿ ವಿಭಕ್ತಿ

ಇಂದು-ಅಂದು ಎಂಬ ಮೂಲ ಪ್ರತ್ಯಯಗಳು ದ್ರಾವಿಡ ಭಾಷೆಗಳಲ್ಲಿ ಕಂಡುಬರುತ್ತದೆ. ಈ ಪಂಚಮಿ ವಿಭಕ್ತಿಗೆ ಪ್ರತ್ಯೇಕ ಪ್ರತ್ಯಯವಿಲ್ಲದಿರುವುದೂ ತೃತೀಯಾ ವಿಭಕ್ತಿ ಪ್ರತ್ಯಯಗಳೇ ಪಂಚಮಿಯ ಕಾರ್ಯವನ್ನು ನಿರ್ವಹಿಸುವುದರಿಂದಲೂ ಈ ವಿಭಕ್ತಿಯನ್ನು ಬಿಟ್ಟರೂ ಯಾವ ನಷ್ಟವಿಲ್ಲವೆಂಬ ಅಭಿಪ್ರಾಯವಿದೆ. ಇಂಡು-ಉಂಡು-ಇಟಿ ಎಂಬ ಪ್ರತ್ಯಯಗಳು ಕೊರಚ ಭಾಷೆಯ ಪಂಚಮಿ ವಿಭಕ್ತಿಗೆ ಪ್ರತ್ಯಯವಾಗಿದೆ. ಈ ಪ್ರತ್ಯಯಗಳು ತೃತೀಯ ವಿಭಕ್ತಿಯಲ್ಲೂ ಸಹ ಬರುವುದನ್ನು ಗಮನಿಸಿದರೆ ಈ ಎರಡು ವಿಭಕ್ತಿ ಒಂದೇ ರೂಪವುಳ್ಳ ಪ್ರತ್ಯಯಗಳು ಬಳಕೆಗೊಳ್ಳುವುದನ್ನು ಉದಾಹರಣೆಗಳಿಂದ ಗಮನಿಸಲಾಗುತ್ತದೆ. ಉದಾಹರಣೆ.

ಸೆಡಿಂಡು (ಗಿಡದಿಂದ) ಸೆಡ್ + ಇಂಡು

ಊಡುಂಡು (ಮನೆಯಿಂದ) ಊಡ್ + ಉಂಡು

ಸಾಲಿಂಡು (ಶಾಲೆಯಿಂದ) ಸಾಲ್ + ಇಂಡು

ಊಟುಂಡು (ಮನೆಯಿಂದ) ಉಟ್ + ಇಂಡು

ಈ ರೀತಿಯಾಗಿ ಕೊರಚ ಭಾಷೆಯಲ್ಲಿ ತೃತೀಯ ಮತ್ತು ಪಂಚಮಿ ವಿಭಕ್ತಿಗಳೆರಡರಲ್ಲೂ ಒಂದೇ ರೂಪವುಳ್ಳ ವಿಭಕ್ತಿಗಳು ಬಳಕೆಯಾಗುತ್ತವೆ. ದ್ರಾವಿಡ ಭಾಷೆಗಳಲ್ಲಿ ಪಂಚಮಿ ವಿಭಕ್ತಿ ಇಲ್ಲ ಎಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ. ಈ ಹಿನ್ನೆಲೆಯಲ್ಲಿ ಕೊರಚ ಭಾಷೆಯಲ್ಲಿ ಪಂಚಮಿ ವಿಭಕ್ತಿ ಇಲ್ಲವೆಂದೇ ಅನಿಸುತ್ತದೆ.

೬. ಷಷ್ಠಿ ವಿಭಕ್ತಿ

ದ್ರಾವಿಡ ಭಾಷಾ ಪರಿವಾರದಲ್ಲಿ ಷಷ್ಠಿ ವಿಭಕ್ತಿ ಪ್ರತ್ಯಯ 'ಅ' ಅಥವಾ ಅದು, ಇವುಗಳನ್ನು ಬಳಸಿಕೊಂಡು ಬಂದಿರುವುದನ್ನು ಆಗಿನ ದ್ರಾವಿಡ ಭಾಷೆಗಳಲ್ಲಿ ಕಂಡುಬರುತ್ತದೆ. ಕೊರಚ ಭಾಷೆಯ

ಷಷ್ಠಿ ವಿಭಕ್ತಿಯಲ್ಲಿಯೂ ‘ಅ’ ಅಥವಾ ‘ಅದು’ ಪ್ರತ್ಯಯಗಳನ್ನು ಬಳಸಿಕೊಂಡಿರುವುದನ್ನು ಗಮನಿಸಲಾಗಿದೆ. ಇಲ್ಲಿ ಅದು ಪ್ರತ್ಯಯ ಕೊರಚ ಭಾಷೆಯಲ್ಲಿ ಪುರುಷವಾಚಕ ಸರ್ವನಾಮಗಳೊಡನೆ ಬಳಕೆಯಾಗುವುದನ್ನು ಗಮನಿಸಲಾಗಿದೆ. ಉದಾಹರಣೆಗೆ.

‘ಅ’ ಪ್ರತ್ಯಯಕ್ಕೆ – ರಾಮನ (ರಾಮನ) ರಾಮನ್ + ಅ

ನಟ (ನನ್ನ) ನಟ್ + ಅ

ತೇಪನಟ (ತಂದೆಯ) ತೇಪನ್ + ಅ

ನಿಟ (ನಿನ್ನ) ನಿಟ್ + ಅ

ಜಾನಕಿಟ (ಜಾನಕಿಯ) ಜಾನಕಿಟ್ + ಅ

ಕನ್ನಡದಲ್ಲಿ ಷಷ್ಠಿ ವಿಭಕ್ತಿಯು ರಾಮ + ಅ= ರಾಮನ ಎಂದು ಆಗುವಲ್ಲಿ ‘ನ್’ ಅನ್ನುವ ಪ್ರತ್ಯಯ ಬರುತ್ತದೆ. ಹಾಗೆಯೇ ಕೊರಚರಲ್ಲಿ ರಾಮ + ಅ = ರಾಮಟ ಎಂದು ಆಗಿ ‘ಟ್’ ಅನ್ನುವುದು ಬರುತ್ತದೆ. ಇಲ್ಲಿ ‘ಟ’ ಅನ್ನುವುದು ಕೊರಚರಲ್ಲಿ ಎಲ್ಲ ಕಡೆಯಲ್ಲಿ ಷಷ್ಠಿ ವಿಭಕ್ತಿ ರೂಪವಾಗಿ ಬಳಕೆಯಾಗುತ್ತದೆ. ಮತ್ತು ಕೊರಚ ಭಾಷೆಯು ಮೂಲದ್ರಾವಿಡ ಭಾಷೆಯ ಲಕ್ಷಣವನ್ನು ಇಲ್ಲಿಯೂ ಉಳಿಸಿಕೊಂಡಿರುವುದಲ್ಲದೆ ಕನ್ನಡದಂತೆ ಪ್ರತ್ಯಯ ಕೇವಲ ಪುರುಷವಾಚಕ ಸರ್ವನಾಮಗಳೊಡನೆ ಬಳಕೆಯಾಗುವುದು.

೭. ಸಪ್ತಮಿ ವಿಭಕ್ತಿ

ಕೊರಚ ಭಾಷೆಯಲ್ಲಿ ಸಪ್ತಮಿ ವಿಭಕ್ತಿ ರೂಪಗಳಾಗಿ ಅಚ್ಚಿ/ಕೋರು ಎಂಬ ಪ್ರತ್ಯಯಗಳನ್ನು ಬಳಸಲಾಗಿದೆ. ಉದಾಹರಣೆಗೆ. ಕೋರಿ ಪ್ರತ್ಯಯಕ್ಕೆ

ಮಾಬ್ಬುಕೋರು (ಕತ್ತಲಲ್ಲಿ) ಮಾಬ್ಬು + ಕೋರು

ಊಟುಕೋರು (ಮನೆಯಲ್ಲಿ) ಊಟ್ + ಕೋರು

ಕೊಲ್ಲಕೋರು (ಹೊಲದಲ್ಲಿ) ಕೊಲ್ಲ + ಕೋರು

ಮಟ್ಟಿಕೋರು (ಮಟ್ಟಿಯಲ್ಲಿ) ಮಟ್ಟಿ + ಕೋರು

‘ಅಚ್ಚಿ’ ಪ್ರತ್ಯಯಕ್ಕೆ: ಯೆದಚ್ಚಿ (ಯಾರಲ್ಲಿ)

ಅದಚ್ಚಿ (ಅವಳಲ್ಲಿ/ನಲ್ಲಿ)

ಇದಚ್ಚಿ (ಇವಳಲ್ಲಿ/ನಲ್ಲಿ)

ಕೊಲ್ಲಚ್ಚಿ (ಹೊಲದಲ್ಲಿ)

ಈ ರೀತಿಯಾಗಿ ಕೊರಚ ಭಾಷೆಯಲ್ಲಿಯ ಬೆಳವಣಿಗೆಗೆ ಇತರೆ ದ್ರಾವಿಡ ಭಾಷೆಗಳ ಪ್ರಭಾವವೇ ಕಾರಣ ಇರಬಹುದಾಗಿದೆ. ಏಕೆಂದರೆ ಅನೇಕ ದ್ರಾವಿಡ ಭಾಷೆಗಳು ಈ ವಿಭಕ್ತಿಯಲ್ಲಿ ಪ್ರತ್ಯಯಗಳಲ್ಲದೆ, ಇದೇ ಅರ್ಥವನ್ನೇ ಸೂಚಿಸುವ ಪದೋತ್ತರ ರೂಪಗಳನ್ನು ಬಳಸುತ್ತದೆ. ಅದು ದ್ರಾವಿಡ ಭಾಷೆಗಳಲ್ಲಿ ಸಪ್ತಮಿ ವಿಭಕ್ತಿ ಪ್ರತ್ಯಯಗಳ ಗುಂಪಿನಲ್ಲಿ ಮೂಲ ದ್ರಾವಿಡಕ್ಕೆ ಅನ್-ಇನ್/ಆಲ್ ಹಾಗೂ ತ್ತ್ ಎಂಬ ನಾಲ್ಕು ಪ್ರತ್ಯಯಗಳನ್ನು ಪುನರಚಿಸಲಾಗಿದೆ. ಈ ಪ್ರತ್ಯಯಗಳ ಹೊರತಾಗಿಯೂ ಕೆಲವು ಕಡೆ ಮೂಲ ದ್ರಾವಿಡಕ್ಕೆ ಉಳ್, ಕಣ್ ಪುಕ್ಕಲ್ ಎಂಬ ಪದೋತ್ತರ ರೂಪಗಳನ್ನು ಸಪ್ತಮಿ ಅರ್ಥಕ್ಕೆ ಬಳಸಿರುವಂತೆಯೇ ಕೊರಚರ ಭಾಷೆಯಲ್ಲಿ ಸಪ್ತಮಿ ವಿಭಕ್ತಿ ಅರ್ಥವನ್ನು ನೀಡುವ ಪದೋತ್ತರ ರೂಪವನ್ನು ಬಳಸಿಕೊಂಡಿರುವುದನ್ನು ನೋಡಬಹುದಾಗಿದೆ.

೮. ಸಂಭೋದನಾ ವಿಭಕ್ತಿ

'ಏ' ಹಾಗೂ 'ಓ' ಪ್ರತ್ಯಯಗಳನ್ನು ಮೂಲ ದ್ರಾವಿಡಕ್ಕೆ ಸಂಬಂಧಿಸಿದಂತೆ ಪುನರಚಿಸಲಾಗಿದೆ. ಇಲ್ಲಿ ಕೆಲವು ಭಾಷೆಗಳು ಈ 'ಇಕ್' ಮುಂತಾದ ಕೆಲವು ಸ್ವತಂತ್ರ್ಯ ಪ್ರತ್ಯಯಗಳನ್ನು ಬಳಸಿಕೊಂಡಿವೆ. ಇದೇ ರೀತಿಯಾಗಿ ಕೊರಚರ ಭಾಷೆಯಲ್ಲಿ ಬೇರೆಯವರನ್ನು ತಮ್ಮ ಕಡೆಗೆ ಕರೆಯುವಾಗ ಅಥವಾ ಎಚ್ಚರಿಸುವಾಗ ಆಯಾ ನಾಮಗಳಿಗೆ ಕೊನೆಗೆ ಆ, ಏ, ಈ ಎಂಬ ಪ್ರತ್ಯಯಗಳು ಸಂಬೋಧನಾ ವಿಭಕ್ತಿ ಅರ್ಥದಲ್ಲಿ ಬಳಕೆಗೊಳ್ಳುವುದನ್ನು ನೋಡಬಹುದು. ಉದಾಹರಣೆಗೆ.

'ಆ' ಪ್ರತ್ಯಯಕ್ಕೆ	–	ಅಣ್ಣಾ (ಅಣ್ಣಾ) ಅಣ್ + ಆ
ಅವಾ (ತಂದೆ)	–	ಅವ್ + ಆ
ರಾಮಾ (ರಾಮ)	–	ರಾಮ್ + ಆ
'ಏ' ಪ್ರತ್ಯಯಕ್ಕೆ	–	ಪುಳ್ಳೇ (ಮಗಳೆ)
ಮಕಳೇ (ಮಕ್ಕಳೇ)	–	ಮಕ್ಕಳ್ + ಏ
ತೇಪನೇ (ತಂದೆಯೇ)	–	ತೇಪನ್ + ಏ

ಈ ರೀತಿಯಾಗಿ ಸಂಬೋಧನಾ ರೂಪ ಕೊರಚ ಭಾಷೆಯಲ್ಲಿ ವ್ಯಕ್ತವಾಗುತ್ತದೆ.

೯. ಸಹತ್ವ ವಿಭಕ್ತಿ

ಮೂಲ ದ್ರಾವಿಡದಲ್ಲಿ ಅನ್-ಆಲ್ ಹಾಗೂ ಓಡು-ಒಡು ಪ್ರತ್ಯಯಗಳನ್ನು ಪುನರಚಿಸಲಾಗಿದೆ. ಬಹಳಷ್ಟು ದ್ರಾವಿಡ ಭಾಷೆಗಳು ಈ ಮೂಲ ರೂಪವನ್ನೇ ಈ ಸಹತ್ವ ವಿಭಕ್ತಿಯಲ್ಲಿ ಅನುಸರಿಸಿದೆ. ಆದರೆ ಕೊರಚರ ಭಾಷೆ 'ಒಟಿ' ಎಂಬ ಪ್ರತ್ಯಯವನ್ನು ಬಹು ವಿಶೇಷವಾಗಿ ಬೆಳೆಸಿಕೊಂಡಿದೆ. ಇಲ್ಲಿ ಕರ್ತೃವಿನ ಜೊತೆಗೆ ಇರುವಿಕೆಯ ಸಹತ್ವವನ್ನು ಸೂಚಿಸುವ ವಿಶಿಷ್ಟ ಅರ್ಥವನ್ನು ನೀಡುವ ವಿಭಕ್ತಿಯನ್ನು ಪ್ರತ್ಯೇಕವಾಗಿ ಕೊರಚ ಭಾಷೆಯಲ್ಲಿಯೂ ಗುರುತಿಸಲಾಗಿದೆ. 'ಓಟಿ' (ಒಡನೆ) ಸಹತ್ವ ಪ್ರತ್ಯಯವಾಗಿದೆ. ಉದಾಹರಣೆಗಳು.

ಜತಗಾರನೋಟಿ ಉರ್ಕು ಹೋಕ್ರೇ (ಜೊತೆಗಾರನೊಡನೆ ಊರಿಗೆ ಹೋಗುತ್ತೇನೆ)

ಗಾಯಿತ್ರಿ ನೋಟಿ ಗೀತಾ ವಂಚು (ಗಾಯಿತ್ರಿಯೊಡನೆ ಗೀತಾ ಬಂದಳು)

ಅಣ್ಣನೋಟಿ ವಾಸ್ತಕ್ಕದು (ಅಣ್ಣನೊಡನೆ ಮಾತಾಡುತ್ತಿದ್ದಾನೆ)

ಎದ್ದೋಟಿ ವಾರಕೆ (ಎತ್ತಿನೊಡನೆ ಬರ್ತಿನಿ)

ಅದು ನಿನ್ನೋಟ ವಾರದೂನು (ಅವನು ನಿನ್ನೊಡನೆ ಬರುತ್ತಾನಂತೆ)

ಕೊಚರ ಭಾಷೆಯ ವಿಭಕ್ತಿ ಪ್ರತ್ಯಯಗಳ ಅಂಕಣ ಪಟ್ಟಿ

ಪ್ರಕೃತಿ	**ವಿಭಕ್ತಿಗಳು**	**ಪ್ರತ್ಯಯಗಳು**	**ಕೊರಚ ಭಾಷೆಯಲ್ಲಿ**	**ಕನ್ನಡದಲ್ಲಿ**
ರಾಮ	ಪ್ರಥಮ	ಓ	ರಾಮೊ	ರಾಮ
ರಾಮ	ದ್ವಿತೀಯಾ	ಎಂದು	ರಾಮನೆತ್ತೆಂದು	ರಾಮನನ್ನು
ರಾಮ	ತೃತೀಯಾ	ಇಟಿ–ಇಂಡು–ಉಂಡು	ರಾಮನಿಟಿ	ರಾಮನಿಂದ
			ರಾಮನಿಂಡು	
			ರಾಮನುಂಡು	
ರಾಮ	ಚತುರ್ಥಿ	ಕೆ.ಕು.ಕಿ.ಗೆ	ರಾಮನಕೆ/ಗೆ	ರಾಮನಿಗೆ
			ರಾಮನಕು/ಗು	
			ರಾಮನಕಿ/ಗಿ	
ರಾಮ	ಪಂಚಮಿ	ಇಂಡು/ಉಂಡು/ಇಟಿ	ರಾಮನುಂಡು	ರಾಮನಿಂದ
			ರಾಮನಿಟಿ,	
			ರಾಮನಿಂಡು	
ರಾಮ	ಷಷ್ಠಿ	ಅ, ಅದು	ರಾಮನ	ರಾಮನ
			ರಾಮನಟಿದು	ರಾಮ
ರಾಮ	ಸಪ್ತಮಿ	ಅಚ್ಚಿ/ಕೋರು	ರಾಮನಚ್ಚಿ	ರಾಮನಲ್ಲಿ
ಕೊಲ್ಲ			ಕೊಲ್ಲಕೋರಿ	ಹೊಲದಲ್ಲಿ
ರಾಮ	ಸಂಭೋದನೆ	ಆ,ಏ	ರಾಮಾ, ರಾಮನೇ	ರಾಮಾ, ರಾಮನೇ
ತಂಗಿ			ತಸ್ಸೀ	ತಂಗಿ

ರಾಮ	ಸಹತ್ವ	ಓಟಿ	ರಾಮನೋಟಿ	ರಾಮನೊಡನೆ
ನಿನ್ನ			ನಿನ್ನೋಟಿ	ನಿನ್ನೊಡನೆ

ಈ ರೀತಿಯಲ್ಲಿ ಬಳಕೆಯಲ್ಲಿರುವ ವಿಭಕ್ತಿ ಪ್ರತ್ಯಯಗಳು ಮೌಖಿಕ ಸಂದರ್ಭದಲ್ಲಿ, ವಾಕ್ಯದಲ್ಲಿನ ವಿಭಕ್ತಿ ರೂಪದ ಸ್ಥಾನ, ವಾಕ್ಯಗಳನ್ನು ಬಳಸುವ ಔಪಚಾರಿಕ ಅಥವಾ ಅನೌಪಚಾರಿಕ ಸಂದರ್ಭ, ಬಳಸುವವನ ಮನಸ್ಸು ಇತ್ಯಾದಿಗಳಿಗೆ ಬದ್ಧವಾಗಿರುತ್ತದೆ. ಕೊರಚರ ಭಾಷೆಯಲ್ಲಿ ಶಿಷ್ಟ ಕನ್ನಡದಲ್ಲಿ ಬಳಕೆಗೊಳ್ಳುವ ಪ್ರಥಮ, ದ್ವಿತೀಯ, ತೃತೀಯ, ಚತುರ್ಥಿ, ಪಂಚಮಿ, ಷಷ್ಠಿ, ಸಪ್ತಮಿ, ಸಂಬೋಧನೆಗೆ ಮತ್ತು ಸಹತ್ವದಲ್ಲಿ ಬಳಕೆಗೊಳ್ಳುವ ಉ, ಅನ್ನು, ಇಂದ, ಇಗೆ–ಕ್ಕೆಗೆ, ಕೆ,ಕಿ,ಕು,ಗೆ, ಇಟಿ–ಇಂಡು–ಉಂಡು, ಅ–ಅದು, ಅಚ್ಚಿ–ಕೋರಿ, ಆ–ಏ–ಈಗಳನ್ನು ಬಳಸಿರುವುದನ್ನು ನೋಡಬಹುದು. ಮತ್ತು 'ಒಡನೆ' ಎಂಬ ಸಹತ್ವ ವಿಭಕ್ತಿಗೆ ಸಂಬಂಧಿಸಿದಂತೆ 'ಓಟಿ' ಎಂಬ ಪ್ರತ್ಯಯವನ್ನು ಬಳಸುವುದು ಸಹ ಕೊರಚರ ಭಾಷೆಯ ವೈಶಿಷ್ಟ್ಯಕ್ಕೆ ಸಾಕ್ಷಿಯಾಗಿದೆ.

ಸರ್ವನಾಮಗಳು

ಸರ್ವನಾಮಗಳೆಂದರೆ ನಾಮಪದಗಳಿಗೆ ಬದಲಾಗಿ ಬಳಸುವ ನಾಮಪದಗಳೇ ಸರ್ವನಾಮಗಳು. ಸರ್ವನಾಮಗಳು ಭಾಷೆಯ ಅಚಲವಾದ, ಅಬೇದ್ಯವಾದ ಭಾಗಗಳು. ಭಾಷೆಯ ಸಂಬಂಧವನ್ನು ಸ್ವರೂಪವನ್ನು ನಿರ್ಧರಿಸುವಲ್ಲಿ ನೆರವಾಗುವ ವ್ಯಾಕರಣಾಂಶಗಳಲ್ಲಿ ಸರ್ವನಾಮ ಸಹಕಾರಿಯಾಗಿವೆ. ಸರ್ವನಾಮ ಭಾಷೆಯ ಸಂಬಂಧವನ್ನು ಕುರಿತು ನಿರ್ದಿಷ್ಟ ನಿಲುವನ್ನು ಸೂಚಿಸುತ್ತದೆ. ಭಾಷೆಯಲ್ಲಿ ಸರ್ವನಾಮಗಳ ಬಳಕೆ ಹೆಚ್ಚು. ಸಂಖ್ಯಾವಾಚಿ ಹಾಗೂ ವಿಭಕ್ತಿ ಪ್ರತ್ಯಯಗಳಿಂದ ಸರ್ವನಾಮ ರೂಪಗಳು ಸ್ಥಿರ, ಸರ್ವನಾಮ ರೂಪಗಳಲ್ಲಿ ಧ್ವನಿ ವ್ಯತ್ಯಾಸಗಳಾಗಿದ್ದರೂ ಮೂಲರೂಪಗಳು ಮುಂದುವರೆದಿರುತ್ತವೆ. (ಹಂಪ ನಾಗರಾಜಯ್ಯ, ೧೯೬೬, ಪು. ೧೩೦). ಸರ್ವನಾಮಗಳನ್ನು ಅನ್ಯ ಭಾಷೆಯಿಂದ ಸ್ವೀಕರಿಸಿರುವುದು ಅಪರೂಪ. ಭಾಷೆಯಲ್ಲಿ ಮೊಟ್ಟ ಮೊದಲು ಕಾಣಿಸಿಕೊಂಡ ರೂಪಗಳೇ ಸರ್ವನಾಮಗಳು. ಹೀಗಾಗಿ ದ್ರಾವಿಡ ಭಾಷೆಗಳ ಸರ್ವನಾಮಗಳು ಉತ್ತಮ ಮತ್ತು ಮಧ್ಯಮ ಪುರುಷಗಳಲ್ಲಿ ವಚನಗಳನ್ನು ಪ್ರಥಮ ಪುರುಷರಲ್ಲಿ ಲಿಂಗ ಹಾಗೂ ವಚನಗಳೆರಡನ್ನು ಸೂಚಿಸುತ್ತದೆ. ದ್ರಾವಿಡ ಭಾಷೆಯಲ್ಲಿ ಪುರುಷವಾಚಕ ಸರ್ವನಾಮಗಳೇ ರೂಪಾಂತರಗೊಂಡು ಅಖ್ಯಾತ ಪ್ರತ್ಯಯಗಳೆಂಬ ಹೆಸರಿನ ಪುರುಷವಾಚಕ ಪ್ರತ್ಯಯವಾಗಿ ದಾತುಗಳಿಗೆ ಹತ್ತುವುದನ್ನು ಗಮನಿಸಬಹುದು.

ಮೂಲ ದ್ರಾವಿಡ ಸರ್ವನಾಮಗಳೇ ಹೆಚ್ಚಿನ ಮಟ್ಟಿಗೆ ಇದ್ದಕ್ಕಿದ್ದಂತೆ ಉಳಿಸಿಕೊಂಡು ಬಂದಿರುವ ಭಾಷೆಗಳೆಂದರೆ ಉತ್ತರ ದ್ರಾವಿಡ ಭಾಷೆಗಳು, ಮಧ್ಯ ಹಾಗೂ ದಕ್ಷಿಣ ದ್ರಾವಿಡ ಭಾಷಾ ಗುಂಪುಗಳು ಅನೇಕ ಸಮಾನ ಹಾಗೂ ಕೆಲವಡೆ ಸ್ವತಂತ್ರ ಬೆಳವಣಿಗೆಯನ್ನು ಮಾಡಿಕೊಂಡಿವೆ. ಉದಾ. ತೆಲುಗು ಮಧ್ಯಮ ಪುರುಷ ಏಕವಚನದಲ್ಲಿ 'ನುವ್ವು' ಪ್ರಥಮ ಪುರುಷ ಏಕವಚನದಲ್ಲಿ ಪುಲ್ಲಿಂಗಕ್ಕೆ ಆತನು, ಆಯನ, ಸ್ತ್ರೀಲಿಂಗಕ್ಕೆ ಆಮೆ, ಆನಿಡಾ, ಪ್ರಥಮ ಪುರುಷ ಬಹುವಚನದಲ್ಲಿ 'ವಾಳ್ಳು' ಎಂಬ

ರೂಪಗಳನ್ನು ಹೊಸದಾಗಿ ರೂಪಿಸಿಕೊಂಡಿದೆ. ದ್ರಾವಿಡ ಭಾಷೆಗಳಲ್ಲಿ ಸಮಾವೇಶಕ (Inclusive) ಅಸಮಾವೇಶಕ (Exclusive) ಸರ್ವನಾಮಗಳಿರುವುದು ವಿಶಿಷ್ಟವಾಗಿದೆ. ಇನ್ನು ತೋದ, ಬ್ರಾಹುಈ ಭಾಷೆಗಳಂತೆ ಕೊರಚರ ಭಾಷೆಯನ್ನು ಬಿಟ್ಟು ಬಹು ಸಂಖ್ಯಾ ದ್ರಾವಿಡ ಭಾಷೆಗಳಲ್ಲಿ ಸಮಾವೇಶಕ, ಅಸಮಾವೇಶಕ ಸರ್ವನಾಮಗಳು ದೊರೆಯುವುದರಿಂದ ಅವುಗಳನ್ನು ಮೂಲ ದ್ರಾವಿಡಕ್ಕೆ ಪುನಃ ರಚಿಸಲಾಗಿದೆ. ಈ ಸರ್ವನಾಮಗಳನ್ನು ಅನ್ಯ ಭಾಷೆಗಳಿಂದ ಸ್ವೀಕರಿಸಿರಬಹುದೆಂದು ಹೇಳುವುದಕ್ಕೆ ಖಚಿತ ಆಧಾರಗಳಿಲ್ಲ.

"ಸರ್ವನಾಮಗಳು ಭಾಷೆಯ ಅಚಲವಾದ ಅಂಶಗಳಾಗಿರುವುದರಿಂದ ಹಾಗೆಯೇ ಸಿದ್ಧಮಾಡುವುದು ಸುಲಭವಲ್ಲ" ಎಂದು ಸಂಗಮೇಶ ಸವದತ್ತಿಮಠರು ಅಭಿಪ್ರಾಯ ಪಟ್ಟಿದ್ದಾರೆ. (ದ್ರಾವಿಡ ಭಾಷಾ ವ್ಯಾಸಂಗ, ಪುಟ-೧೩೪)

ಕೊರಚರ ಭಾಷೆಯಲ್ಲಿನ ಪುರುಷವಾಚಕ ಏಕವಚನ ಸರ್ವನಾಮಗಳು

	ಉತ್ತಮ ಪುರುಷ	ಮಧ್ಯಮ ಪುರುಷ	ಪ್ರಥಮ ಪುರುಷ
ಕೊರಚ :	ನ, ನಾನ್, ನಾ	ನಿ, ನೀನ್ ನೀನು	ಅದು, ಅದು ಅದು

ಈ ರೀತಿಯಾಗಿ ಕೊರಚರ ಭಾಷೆಯನ್ನೊಳಗೊಂಡಂತೆ ದ್ರಾವಿಡ ಪುರುಷವಾಚಕ ಏಕವಚನ ಸರ್ವನಾಮಗಳನ್ನು ನೋಡಬಹುದು.

ಕೊರಚರ ಭಾಷೆಯಲ್ಲಿ ಪುರುಷವಾಚಕ ಬಹುವಚನ ಸರ್ವನಾಮಗಳು

	ಉತ್ತಮ ಪುರುಷ	ಮಧ್ಯಮ ಪುರುಷ	ಪ್ರಥಮ ಪುರುಷ
ಕೊರಚ:	ನಂಗ, ನಾನ್	ನಿಂಗ್, ನೀನ್	ಅಯ್ಯ, ಅಯ್ಯ

ಹೀಗೆ ಕೊರಚರ ಭಾಷೆಯ ಪುರುಷವಾಚಕ ಬಹುವಚನ ಸರ್ವನಾಮ ರೂಪಗಳನ್ನು ಗಮನಿಸಿದಾಗ ಭಾಷೆಯಲ್ಲಿ ಪುರುಷವಾಚಕ ಬಹುವಚನ ಸರ್ವನಾಮಗಳಲ್ಲಿ ಉತ್ತಮ, ಮಧ್ಯಮ, ಪ್ರಥಮ ಪುರುಷವಾಚಕ ರೂಪಗಳು ವಿಶೇಷವಾಗಿ ತಮಿಳು, ಮಲೆಯಾಳಂ, ಕೊಡವ ಭಾಷೆಗಳಲ್ಲಿನ ಉತ್ತಮ, ಮಧ್ಯಮ, ಪ್ರಥಮ ಪುರುಷವಾಚಕ (ನಾಂಗಳ್, ನೀಮ್, ಅವೈ, ಮಲೆಯಾಳಿ, ನಾಮ್, ನಿಂಗಳ್, ಅಲೈ, ಕೊಡವ-ಎಂಗ, ನಿಂಗ, ಅಯ್‌ಂಗ) ಬಹುವಚನ ರೂಪಗಳಂತೆಯೇ ಇರುವುದನ್ನು ಗಮನಿಸಬಹುದು. ಈ ಹಿನ್ನೆಲೆಯಲ್ಲಿ ಕೊರಚ ಭಾಷೆ ತಮಿಳು, ಮಲೆಯಾಳಂ ಭಾಷೆಯ ಬಹುವಚನ ಪುರುಷವಾಚಕ ಸರ್ವನಾಮ ಪದಗಳನ್ನು ಅನುಸರಿಸಿರುವುದು ಸಹಜ. ಆದರೆ ಕನ್ನಡ ಭಾಷಾ ಪರಿಸರದಲ್ಲಿನ ಕೊಡವ ಭಾಷೆಯ ಬಹುವಚನ ಪುರುಷವಾಚಕ ಸರ್ವನಾಮಗಳ ರೂಪ ಮತ್ತು ಕೊರಚರ ಭಾಷೆಯ ಈ ಸರ್ವನಾಮ ರೂಪಗಳು ಪರಸ್ಪರ ಅಲ್ಪಸ್ವಲ್ಪ ಬದಲಾವಣೆಯೊಂದಿಗೆ ಒಂದೇ ರೀತಿಯಲ್ಲಿ ಇರುವುದು ಕುತೂಹಲಕಾರಿಯಾದುದಾಗಿದೆ. ಈ ರೀತಿಯಾದ ಬೆಳವಣಿಗೆಗೆ ಕಾರಣ ಕೊರಚರು ಕೊಡವ, ಕನ್ನಡ, ತಮಿಳು ಪರಿಸರದಲ್ಲಿರುವುದೇ ಆಗಿದೆ.

ಆತ್ಮಾರ್ಥಕ ಸರ್ವನಾಮಗಳು

ಏಕವಚನ-ಬಹುವಚನಗಳಲ್ಲಿ ಆತ್ಮಾರ್ಥಕ ಸರ್ವನಾಮಗಳನ್ನು ಗಮನಿಸಿದಾಗ ಕೊರಚರಲ್ಲಿ ಪ್ರಥಮ ಪುರುಷ ಏಕವಚನದಲ್ಲಿ ಮಾತ್ರ ಕಂಡುಬರುತ್ತದೆ. ಆದರೆ ಮಧ್ಯಮ ಪುರುಷ ಬಹುವಚನ ಸರ್ವನಾಮಕ್ಕೆ ಪ್ರತ್ಯೇಕ ರೂಪವಿಲ್ಲ. ಅದು ಇತರೆ ದ್ರಾವಿಡ ಭಾಷೆಗಳಾದ ತುಳು, ಪೆಂಗೋ, ಬ್ರಾಹುಈ ಗಳಲ್ಲಿಯು ಸಹ ಇಲ್ಲ. ಈ ಅಂಶವನ್ನು ಗಮನಿಸಿದಾಗ ಕೊರಚರ ಭಾಷೆ ದ್ರಾವಿಡ ಭಾಷಾ ಪರಿವಾರದ ಭಾಷೆಯಾಗಿದೆ ಎಂಬುದನ್ನು ನಿಸ್ಸಂದೇಹವಾಗಿ ಹೇಳಬಹುದಾಗಿದೆ ಎಂಬುದನ್ನು ಗಮನಿಸಬಹುದಾಗಿದೆ. ಹಾಗೆಯೇ ಉಳಿದ ದ್ರಾವಿಡ ಭಾಷೆಗಳಲ್ಲಿ ಏಕವಚನ, ಬಹುವಚನಗಳೆರಡಕ್ಕು ಪ್ರತ್ಯೇಕ ಆತ್ಮಾರ್ಥಕ ಸರ್ವನಾಮ ರೂಪಗಳಿವೆ. ಉದಾ.

	ಏಕವಚನ	**ಬಹುವಚನ**
ಕೊರಚ–	ತಾನ್ +	–
ತುಳು –	ತಾನು +	–
ಪೆಂಗೋ –	ತಾನ್ +	–
ತಮಿಳು –	ತಾನ್ +	ತಾಮ್
ಕನ್ನಡ –	ತಾನು +	ತಾವು
ಮಲೆಯಾಳಂ–	ತಾನ್ +	ತಾಮ್
ತೆಲುಗು –	ತಾನು +	ತಾಮು, ಇತ್ಯಾದಿ.

ಈ ರೀತಿಯಾಗಿ ಆತ್ಮಾರ್ಥಕ ಸರ್ವನಾಮಗಳನ್ನು ಕೊರಚರಲ್ಲಿ ನೋಡುವಾಗ ಏಕವಚನ ಸಂದರ್ಭದಲ್ಲಿ 'ತಾನ್' ಎಂದು ಬಳಸಲಾಗುತ್ತದೆ. ಆದರೆ ಕನ್ನಡದಲ್ಲಿಯ ತನ್ನವರು, ತಮ್ಮವರು ಎಂಬುದಕ್ಕೆ 'ತನ್ನದಾಟಯ' ಎಂದು ಬಳಕೆ ಮಾಡಲಾಗುತ್ತದೆ.

ಪ್ರಶ್ನಾರ್ಥಕ ಸರ್ವನಾಮಗಳು

ಪ್ರಶ್ನಾರ್ಥಕ ಸರ್ವನಾಮಗಳು ಮೂಲ ದ್ರಾವಿಡದಲ್ಲಿ 'ಯಾ'ದಿಂದ ಮೂಡಿರಬೇಕೆಂದು ಕಾಲ್ಡವೆಲ್‌ರು ಹೇಳಿದ್ದಾರೆ. ಮೂಲದ 'ಯಾ' ಅನೇಕ ಭಾಷೆಗಳಲ್ಲಿ 'ಎ' ಆಗಿ ಪರಿವರ್ತಿತವಾಗಿದೆ. ಕೆಲವೊಂದು ಭಾಷೆಗಳಲ್ಲಿ 'ಯ್' ಲೋಪವಾಗಿರುವುದು ಇದೆ. ಕನ್ನಡದಲ್ಲಿಯ ರೂಪದ 'ಯ'ಕಾರದ ಬದಲಿಗೆ ಕೊರಚರು 'ಎ'ಕಾರವನ್ನು ಆರಂಭದಲ್ಲಿ ಬಳಸುವುದನ್ನು ನೋಡಬಹುದಾಗಿದೆ. ಉದಾ.

ಕನ್ನಡದಲ್ಲಿ	**ಕೊರಚರಲ್ಲಿ**
ಯಾವನು	ಎದು/ಏದು – ಎಪ್ಪು (ಯಾವಾಗ)
ಯಾವಳು	ಏದು

ಯಾವುದು ಎಂದದು – ಯಂಡ್ರು (ಯಾವತ್ತು/ಎಂದು)

ಯಾರು ಎದು

ಏನು ಎಂದ

ಏಕೆ ಎಂತಗು (ಯಂದಾತಕು)

ಈ ರೀತಿಯ ರೂಪಗಳನ್ನು ನಾವು ನೋಡಬೇಕಾಗುತ್ತದೆ. ಕನ್ನಡ, ತಮಿಳು, ಇತರೆ ದ್ರಾವಿಡ ಭಾಷೆಗಳಂತೆ ಪುಲ್ಲಿಂಗಕ್ಕೆ ಮತ್ತು ಸ್ತ್ರೀಲಿಂಗಕ್ಕೆ ಪ್ರತ್ಯೇಕವಾದ ಸರ್ವನಾಮಗಳನ್ನು ಕೊರಚರ ಭಾಷೆಯಲ್ಲಿ ಕಂಡುಬರುವುದಿಲ್ಲ.

ದರ್ಶಕ ಸರ್ವನಾಮಗಳು

ದರ್ಶಕ ಸರ್ವನಾಮಗಳಲ್ಲಿ ಸಮೀಪದರ್ಶಕ, ದೂರದರ್ಶಕ ಎಂಬ ಎರಡೇ ಭೇದಗಳನ್ನು ಗುರುತಿಸಲಾಗಿದ್ದು, ಮಧ್ಯದರ್ಶಕ ಸರ್ವನಾಮಗಳನ್ನು ಮೂಲದ್ರಾವಿಡ ಭಾಷೆಯಲ್ಲಿರಬೇಕೆಂದೂ ಅವು 'ಉ' ಸ್ವರದಿಂದೊಡಗೂಡಿದವುಗಳಾಗಿರಬೇಕೆಂದೂ ಹೇಳಲಾಗಿದೆ. ಅದು ಕೊರಚರ ಭಾಷೆಯಲ್ಲಿ ದರ್ಶಕ ಸರ್ವನಾಮಗಳಿಗೆ 'ಇ' ಮತ್ತು 'ಅ' ಸ್ವರಗಳೇ ಮೂಲವಾಗಿರುವುದು ಕಂಡುಬರುತ್ತದೆ.

ಕೊರಚರ ಭಾಷೆಯ ಏಕವಚನ ದರ್ಶಕ ಸರ್ವನಾಮಗಳು

ದರ್ಶಕ ಸರ್ವನಾಮ – ಸಮೀಪದರ್ಶಕ – ದೂರದರ್ಶಕ– ಮಧ್ಯದರ್ಶಕ

ಏಕವಚನ

ಪುಲ್ಲಿಂಗ– ಇದ್, ಈದ್ ಇದು – ಅದು, ಅದು, ಅದು – ಓದ್, ಔದ್

ಸ್ತ್ರೀಲಿಂಗ – ಇದ್, ಈದ್ ಇದು – ಅದು, ಅದು, ಅದು – ಓದ್, ಔದ್

ನಪುಂಸಕ ಲಿಂಗ – ಇದ್, ಈದ್ ಇದು – ಅದು, ಅದು, ಅದು – ಓದ್,ಔದ್

ಪ್ರಯೋಗ

ದರ್ಶಕ ಏಕವಚನ ಪುಲ್ಲಿಂಗ: ಇದ್ ನಂಗ ಮಣಗ (ಇವನು ನನ್ನ ಗಂಡ), ಅದ್ ನಂಗ ಮಗೋ (ಅವನು ನನ್ನ ಮಗ), ಓದು ನಂಗ ಮೆರಿಮಗು (ಅವನು ನನ್ನ ಅಳಿಯ)

ಸ್ತ್ರೀಲಿಂಗಕ್ಕೆ: ಇದ್+ಈದ್ (ನಂಬುಳ್ಳಿ) (ಅವಳು ನನ್ನ ಮಗಳು), ಅದ್ ನಂಬುಳ್ಳ (ಅವಳು ನನ್ನ ಮಗಳು) ಓದ್ ನಂಬುಳ್ಳಿ (ಅವಳೇ ನನ್ನ ಮಗಳು)

ಕೊರಚರ ಭಾಷೆಯ ಬಹುವಚನ ದರ್ಶಕ ಸರ್ವನಾಮಗಳು

ದರ್ಶಕ ಸರ್ವನಾಮ – ಸಮೀಪದರ್ಶಕ – ದೂರದರ್ಶಕ – ಮಧ್ಯದರ್ಶಕ

ಬಹುವಚನ

ಪುಲ್ಲಿಂಗ – ಇಯ್ಯ (ಇವರು) – ಅಯ್ಯ (ಅವರು) – ಅಯಲೇ (ಅವರೇ)

ಸ್ತ್ರೀಲಿಂಗ – ಇಯ್ಯ (ಇವರು) – ಅಯ್ಯ (ಅವರು) – ಅಯಲೇ (ಅವರೇ)

ನಪುಂಸಕ ಲಿಂಗ – ಇಯ್ಯ (ಇವರು) – ಅಯ್ಯ (ಅವರು) – ಓಯಲೇ (ಅವರೇ)

ಪ್ರಯೋಗ

ಪುಲ್ಲಿಂಗ : ಇಯ್ಯ ನಟ ಮಕ್ಯ (ಇವರು ನನ್ನ ಮಕ್ಕಳು), ಅಯ್ಯ ನಟ ಮಕ್ಯ (ಅವರು ನನ್ನ ಮಕ್ಕಳು), ಓಯ್ಯ ನಟ ಮಕ್ಯ (ಅವರೇ ನನ್ನ ಮಕ್ಕಳು)

ಬಹುವಚನ ಸ್ತ್ರೀಲಿಂಗ ಮತ್ತು ನಪುಂಸಕಲಿಂಗಗಳಿಗೆ ಪ್ರತ್ಯೇಕ ವ್ಯವಸ್ಥೆ ಇಲ್ಲ, ಬಹುವಚನ ಪುಲ್ಲಿಂಗ ವ್ಯವಸ್ಥೆಯು ಸ್ತ್ರೀಲಿಂಗ ಮತ್ತು ನಪುಂಸಕಲಿಂಗಕ್ಕೆ ಅನ್ವಯಿಸುತ್ತದೆ.

ಅವ್ಯಯಗಳು

ನಾಮಪದಗಳಂತೆ ಕ್ರಿಯಾಪದಗಳಂತೆ ಲಿಂಗ, ವಚನ, ವಿಭಕ್ತಿ ಪದಗಳಿಂದ ರೂಪ ಬೇಧವನ್ನು ಹೊಂದದೆ (ಬದಲಾಗದೇ) ಏಕರೂಪವಾಗಿರುವ ಶಬ್ದಗಳು ಅವ್ಯಯಗಳೆನಿಸುತ್ತವೆ. ಇಂತಹ ಅನೇಕ ಶಬ್ದಗಳು ಕೊರಚರ ಭಾಷೆಯಲ್ಲಿ ಕಂಡುಬರುತ್ತವೆ. ಉದಾಹರಣೆಗೆ.

ಮೆನ್ನೇಗ (ಮೆಲ್ಲಗೆ) : ಈ ಶಬ್ದವನ್ನು ಲಿಂಗ, ವಚನ, ವಿಭಕ್ತಿಗಳಿಂದ ರೂಪ ಬೇಧವನ್ನು ಹೊಂದಲಾರದ ಶಬ್ದವೆಂದು ಗುರುತಿಸುತ್ತೇವೆ. ಹೇಗೆಂದರೆ

೧. ಲಿಂಗ : ಪುಲ್ಲಿಂಗ– ಅದು ಮೆನ್ನೇಗ ವಾರದು (ಅವನು ಮೆಲ್ಲಗೆ ಬರುತ್ತಾನೆ)

ಸ್ತ್ರೀಲಿಂಗ – ಅದು ಮೆನ್ನೇಗ ತಿಂಗ್ಯಾದು (ಅವಳು ಮೆಲ್ಲಗೆ ತಿನ್ನುತ್ತಾಳೆ)

ನಪುಂಸಕ ಲಿಂಗ – ಅದು ಮೆನ್ನೇಗ ಹೋಕುದು (ಅದು ಮೆಲ್ಲಗೆ ಹೋಗುತ್ತದೆ)

೨. ವಚನ: ಏಕವಚನ – ಮೆನ್ನೇಗ ವಂಚು (ಮೆಲ್ಲಗೆ ಬಂದನು)

ಬಹುವಚನ – ಮೆನ್ನೇಗ ವಂಚು (ಮೆಲ್ಲಗೆ ಬಂದರು)

೩. ವಿಭಕ್ತಿ: ಪ್ರಥಮ – ಅದು ಮೆನ್ನೇಗ (ಅವನು ಮೆಲ್ಲಗೆ)

ದ್ವಿತೀಯ – ಅತ್ತೆಂದೆಂದು ಮೆನ್ನೇಗ (ಅವನನ್ನು ಮೆಲ್ಲಗೆ)

ತೃತೀಯ – ಅದುಂಡು ಮೆನ್ನೇಗ (ಅವನಿಂದ ಮೆಲ್ಲಗೆ)

ಚತುರ್ಥಿ – ಅದಿಂಡು ಮೆನ್ನೇಗ (ಅವನಿಂದ ಮೆಲ್ಲಗೆ)

ಷಷ್ಠಿ – ಅದ ಮೆನ್ನೇಗ (ಅವನು ಮೆಲ್ಲಗೆ)

ಸಪ್ತಮಿ – ಅದಚ್ಚಿ ಮೆನ್ನೇಗ (ಅವನಲ್ಲಿ ಮೆಲ್ಲಗೆ)

ಸಂಬೋಧನೆ – ಅದೇ ಮೆನ್ನೇಗ (ಅವನೇ ಮೆಲ್ಲಗೆ)

ಸಹತ್ವ – ಅದೋಟಿ ಮೆನ್ನೇಗ (ಅವನೊಡನೆ ಮೆಲ್ಲಗೆ)

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಮೆನ್ನೇಗ ಮೆಲ್ಲಗೆ ಎಂಬ ಶಬ್ದವನ್ನು ಲಿಂಗ, ವಚನ, ವಿಭಕ್ತಿಗಳ ಎಲ್ಲಾ ರೂಪಗಳಲ್ಲಿ ಪ್ರಯೋಗಿಸಿದಾಗ್ಯೂ ಅದು ರೂಪ ಬೇಧವನ್ನು ಹೊಂದಲಿಲ್ಲ ಎಂಬಂಶ ಸ್ಪಷ್ಟವಾಗುತ್ತದೆ. ಹೀಗೆಯೇ ಲಿಂಗ, ವಚನ, ವಿಭಕ್ತಿಗಳಿಂದ ರೂಪ ಬೇದ ಹೊಂದದೆ ಕೊರಚರ ಭಾಷಾ ಶಬ್ದಗಳೇ ಇಲ್ಲಿ ಅವ್ಯಯಗಳೆನಿಸುತ್ತವೆ. ಇಂತ ಅನೇಕ ಶಬ್ದಗಳು ಕೊರಚರ ಭಾಷೆಯಲ್ಲಿವೆ. ಅವಗಳನ್ನು ವಿವೇಚಿಸಿ ಅವ್ಯಯಗಳಲ್ಲಿ ಈ ಕೆಳಗಿನ ಪ್ರಕಾರಗಳನ್ನು ಗುರುತಿಸಲಾಗಿದೆ.

೧. ಸಾಮಾನ್ಯ ವ್ಯಯಗಳು

ಕ್ರಿಯಾ ವಿಶೇಷಣವೆನಿಸುವ ಅವ್ಯಯಗಳು ಸಾಮಾನ್ಯ ಅವ್ಯಯಗಳೆನಿಸುತ್ತವೆ. ಯಾವುದಾದರೊಂದು ಕ್ರಿಯೆ ನಡೆದ ರೀತಿಯನ್ನು ಇವು ವರ್ಣಿಸುತ್ತವೆ. ಈ ಕೆಳಗಿನ ಉದಾಹರಣೆಯನ್ನು ಗಮನಿಸಿ ಉದಾ. ನಲ್ಲಗ ಪಾಡದದು (ಸೊಗಸಾಗಿ ಹಾಡುತ್ತಾಳೆ) ಈ ಉದಾಹರಣೆಯಲ್ಲಿ ಸ್ತ್ರೀಯೊಬ್ಬಳು ಹಾಡನ್ನು ಚನ್ನಾಗಿ ಹಾಡುವ ಬಗೆ ಅಥವಾ ರೀತಿಯನ್ನು ವರ್ಣಿಸಲಾಗಿದೆ. ಹಾಡುವ ಕ್ರಿಯೆಗೆ ವಿಶೇಷಣವಾಗಿ ನಲ್ಲಗ (ಸೊಗಸಾಗಿ) ಎಂಬ ಶಬ್ದವನ್ನು ಉಪಯೋಗಿಸಲಾಗಿದೆ. ಉದಾಹರಣೆಗೆ.

೧. ಅನಗು ಸೊನ್ನುಂಗುದು (ಹಾಗೆ ಹೇಳಬಾರದು)

೨. ಅಂತು ಕತ ಮುಗಿಸು (ಅಂತು ಕಥೆ ಮುಗಿತು)

೩. ದಬಾನ ಊಟ ಸೇರ್ರು (ಬೇಗನೆ ಮನೆ ಸೇರಿದನು/ಳು)

೪. ಇನ್ನು ಮೇಲಿ ಒದಂಗೊ (ಇನ್ನು ಮುಂದೆ ಓದಿರಿ)

೨. ಅನುಕರಣಾವ್ಯಯಗಳು

ತಾನು ಕೇಳಿರುವ ಅರ್ಥವಿಲ್ಲದ ಧ್ವನಿ ವಿಶೇಷಣಗಳನ್ನು ಅನುಸರಿಸಿ ಹೇಳಲು ಉಪಯೋಗಿಸುವ ಶಬ್ದಗಳು ಅನುಕರಣಾವ್ಯಯಗಳೆನಿಸುತ್ತವೆ. ಉದಾ. ಚಟಪಟ ಸಿಡ್ಯಾದು (ಚಟಪಟ ಸಿಡಿಯುವುದು) ಇಲ್ಲಿ ಸಿಡಿಯುವ ಕ್ರಿಯೆ ನಡೆದಾಗ ಉಂಟಾಗುವ ಶಬ್ದವನ್ನು 'ಚಟಪಟ' ಎಂಬ ಶಬ್ದದ ಸಹಾಯದಿಂದ ಅನುಕರಣೆ ಕೊರಚರ ಭಾಷೆಯಲ್ಲಿ ಇಂತಹ ಕ್ರಿಯಾರ್ಥಕಾವ್ಯಯ ಪದಗಳು ಇಲ್ಲಿವೆ.

೧. ಕೀದು (ಉಂಟು) – ಅತಗು ಜ್ವರ ಕೀದು (ಅವನಿಗೆ ಜ್ವರವುಂಟು)

೨. ಮಾಣ (ಬೇಡ) – ಅತಗು ಸೊಣಮಾಣ (ಅವನಿಗೆ ಹೇಳಬೇಡ)

೩. ಅಲ್ಲ (ಅಲ್ಲ) – ಅದು ನಲ್ಲದಲ್ಲ (ಅವನು ಒಳ್ಳೆಯವನಲ್ಲ)

೪. ಅಂಬೊ (ಹೌದು) – ಅಂಬೊ ಅದು ನಲಗಿಲ್ಲ (ಹೌದು ಅದು ಸರಿಯಿಲ್ಲ)

೫. ಸ್ಯಾನ (ಸಾಕು) – ಇನ್ನು ತಿಂಗಿರುದು ಸ್ಯಾನ (ಇನ್ನು ತಿನ್ನುವುದು ಸಾಕು)

೬. ಇಲ್ಲ (ಇಲ್ಲ) – ಚಿದಾನಂದ ವಾರೋಕುಲ್ಲ (ಚಿದಾನಂದ ಬರುವುದಿಲ್ಲ)

೩. ಸಂಬಂಧಾರ್ಥಕಾವ್ಯಗಳು

ಎರಡು ಅಥವಾ ಅನೇಕ ಪದ, ವಾಕ್ಯ ಪದ ಸಮುಚ್ಚಯ ಮುಂತಾದವುಗಳನ್ನು ಜೋಡಿಸಿ ಸಂಬಂಧ ಕಲ್ಪಿಸುವ ಅವ್ಯಯಗಳು ಸಂಬಂಧಾರ್ಥಕಾವ್ಯಗಳು. ಉದಾ. ೧. ಕುಬೇರ ಅಂಗುಂಡು ಜಾತಪ್ಪ (ಕುಬೇರ ಮತ್ತು ಜಾತಪ್ಪ) (ಇಲ್ಲಿ ಕುಬೇರ ಮತ್ತು ಜಾತಪ್ಪ ಎಂಬ ಎರಡು ಪದಗಳನ್ನು ಜೋಡಿಸುವ ಸಂಬಂಧ ಕಲ್ಪಿಸುವ ಕೆಲಸವನ್ನು 'ಅಂಗುಂಡು' ಎಂಬುದು ಮಾಡಿದೆ.)

೨. ಜನಂಗಳಟು ಗುಂಪು ಪಾತೆ ಆನಿಗ್ಯಾ ಅತ್ತಕೋರು ಅದಕ್ಕಿಲ್ಲ (ಜನಜಂಗುಳಿಯನ್ನು ನೋಡಿದೆ ಆದರೂ ಅದರಲ್ಲಿ ಅವನು ಇದ್ದಿಲ್ಲ).

ಇಲ್ಲಿ ಜನಜಂಗುಳಟು ಗುಂಪು ಪಾತೆ (ಜನಜಂಗುಳಿ ನೋಡಿದೆ) ಎಂಬ ಪದ ಸಮುಚ್ಚಯವನ್ನು ಇನ್ನೊಂದು ಪದ ಸಮುಚ್ಚಯವಾದ ಅತ್ತಕೋರು ಅದಿಕ್ಕಿಲ್ಲ (ಅದರಲ್ಲಿ ಅವನು ಇದ್ದಿಲ್ಲ) ಎಂಬುವುದರೊಡನೆ ಸೇರಿಸುವ ಕ್ರಿಯೆಯನ್ನು 'ಆಗಿಗ್ಯಾ' (ಆದರೆ) ಎಂಬ ಅವ್ಯಯ ಮಾಡಿದೆ.

೩. ನೀನು ಸಾಲಿಕಿ ಪೊ ಇಲ್ಲ ಊಟಕೋರು ಓದಿಗುಂಡು ಕೊಂದುಗೋ (ನೀನು ಶಾಲೆಗೆ ಹೋಗು ಇಲ್ಲವೆ ಮನೆಯಲ್ಲಿ ಓದುತ್ತ ಕುಳಿತಿರು)

ಇಲ್ಲಿ ಕೊರಚರ ಭಾಷೆಯ ಎರಡು ವಾಕ್ಯಗಳನ್ನು ಸೇರಿಸುವ ಕ್ರಿಯೆಯನ್ನು ಇಲ್ಲವೆ ಎಂಬ ಅವ್ಯಯ ಮಾಡಿರುವುದನ್ನು ಗಮನಿಸಬಹುದು. ಇಂತ ಸಂಬಂಧಾರ್ಥಕಾವ್ಯಯಗಳು ಮುಂದಿನಂತಿವೆ.

೧. ನೀನು ಸೊನ್ನುಲ್ಲ ಅನಗಾಯಿ ನಾಕ ತೆಳಿಲ್ಲ (ನೀನು ಹೇಳಲಿಲ್ಲವಾದ್ದರಿಂದ ನನಗೆ ತಿಳಿಯಲಿಲ್ಲ)

೨. ನೀನು ವಾರನ್ನು ಆನಿಗ್ಯ ಅದು ಸಿಕ್ಕರ್‍ೊಕ್ಕಲ (ನೀನು ಬರಬಹುದು ಆದರೆ ಅವನು ಸಿಗಲ್ಲ)

೩. ನಿಟ ಪಣಿ ನೀ ಪಾತಗು ಇನ್ನೂ ನಾ ವಾರ್‍ಯ (ನಿನ್ನ ಕೆಲಸ ನೀ ನೋಡಿಕೊ ಇನ್ನೂ ನಾನು ಬರತ್ತೀನಿ)

೪. ನಲ್ಲ ಪಣಿ ಸಿಕ್ಕಬೇಕಾ ಅನಗಾನಿಗ್ಯ ನಲ್ಲಕ ಓದು (ಒಳ್ಳೆಯ ಕೆಲಸ ಸಿಗಬೇಕಾ ಹಾಗಾದರೆ ಚನ್ನಾಗಿ ಓದು).

೫. ಜಗ್ಗು ಅಂಗುಂಡು ಸಿದ್ದು, ಹುಲುಗು ನಟ ಪಾಣ (ಜಗ್ಗು ಮತ್ತು ಸಿದ್ದ, ಹುಲುಗ ನನ್ನ ಪ್ರಾಣ)

೬. ಜಗ್ಗು ಇಲ್ಲ ಜಗದೀಶ ಇಂಡಿಗ್ಯ ಅದೇ (ಜಗ್ಗು ಅಥವಾ ಜಗದೀಶ ಅಂದರೆ ಅವನೇ)

೭. ಸಿದ್ದು ಪಾಪ ಅಗಂಚು ಅಪ್ಪ ಅದಗ ಜತಗಾರ ಹುಲುಗು ವಂಚು (ಸಿದ್ದು ಪಾಪ ಅಳುತ್ತಿದ್ದ ಆಗ ಅವನ ಗೆಳೆಯ ಹುಲುಗ ಬಂದನು).

ಇಲ್ಲಿ ಅನಗಾಯಿ, ಆನಿಗ್ಯ, ಇನ್ನೂ, ಅನಗಾನಿಗ್ಯ, ಅಂಗುಂಡು, ಇಂಡಿಗ್ಯ, ಅಪ್ಪ ಎಂಬುವವು ಎರಡು ವಾಕ್ಯಗಳನ್ನು ಸೇರಿಸುವ ಕ್ರಿಯೆಯನ್ನು ಮಾಡುತ್ತವೆ.

೪. ಅವಧಾರಣಾರ್ಥಕಾವ್ಯಯ: ಹಲವಾರು ವಸ್ತುಗಳಲ್ಲಿ ಒಂದನ್ನು ನಿಶ್ಚಯಿಸಿ ಹೇಳುವ ಅವ್ಯಯವು ನಿಶ್ಚಯಾರ್ಥದಲ್ಲಿ ಪ್ರಯೋಗಿಸಲ್ಪಡುತ್ತದೆ. ಇದನ್ನು ಅವಧಾರಣಾರ್ಥಾಕಾವ್ಯಯ ಎನ್ನುತ್ತಾರೆ. ಉದಾ. ಅತ್ನಟ ಸಿನುಮುಂಡಗಳ ಕೋರು ಅದೇ ನಂಗ ತಸ್ಸೀ (ಅಷ್ಟು ಹುಡುಗಿಯರಲ್ಲಿ ಅವಳೇ ನನ್ನ ತಂಗಿ) ಇಲ್ಲಿರುವ ಅದೇ ಎಂಬ ಶಬ್ದವನ್ನು ವಿಗ್ರಹಿಸಿದಾಗ ಅದ್+ಏ=ಅದೇ ಎಂಬ ರೂಪವು ಲಭಿಸುತ್ತದೆ. ಏ ಎಂಬುದು ಕೊರಚ ಭಾಷೆಯಲ್ಲಿ ಪ್ರಾಯೋಗಿಕ ಅವ್ಯಯವಾಗಿದೆ. ಇದನ್ನು ಲಿಂಗ ವಚನಗಳಲ್ಲಿಯೂ ಪ್ರಯೋಗಿಸಿದಾಗ ಇದರ ರೂಪವು ಬದಲಾಗುವುದಿಲ್ಲ. ಉದಾ.

ಪುಲ್ಲಿಂಗ	**ಸ್ತ್ರೀಲಿಂಗ**	**ನಪುಂಸಕಲಿಂಗ**
ಏಕವಚನ–ಬಹುವಚನ	ಏಕವಚನ–ಬಹುವಚನ	ಏಕವಚನ–ಬಹುವಚನ
ಅದೇ–ಅಯ್ಯಲೇ	ಅದೇ–ಅಯ್ಯಲೇ	ಅದೇ–ಅಯ್ಯಲೇ
(ಅವನೇ–ಅವರೇ)	(ಅವಳೇ–ಅವರೇ)	(ಅದೇ–ಅವೇ)

ಈ ಮೇಲಿನ ಎಲ್ಲ ಪ್ರಯೋಗಗಳಲ್ಲಿಯೂ 'ಏ' ಎಂಬುದು ಯಾವ ರೂಪ ಬದಲಾವಣೆ ಇಲ್ಲದೆ ಪ್ರಯೋಗಿಸಲ್ಪಟ್ಟಿರುವುದನ್ನು ಗಮನಿಸಿದರೆ 'ಏ' ಎಂಬುದು ನಿಶ್ಚಿತಾರ್ಥದಲ್ಲಿ ಆದರೆ ಇಂಥದೇ, ಇಂಥವನೇ ಎಂದು ಖಂಡಿತವಾಗಿ ಹೇಳುವ ಪ್ರಸಂಗಗಳಲ್ಲಿ ಮಾತ್ರ ಪ್ರಯೋಗಿಸಲ್ಪಡುತ್ತದೆ. ಹೀಗೆ ನಿಶ್ಚಯಿಸಿ ಹೇಳುವುದನ್ನು ಅವಧಾರಣ ಎನ್ನುತ್ತಾರೆ. ಆದ್ದರಿಂದ ಏ ಎಂಬುದು ಕೊರಚ ಭಾಷೆಯ ಅವಧಾರಣಾರ್ಥ ಅವ್ಯಯವಾಗಿದೆ.

ಕ್ರಿಯಾಪದಗಳು

ಕ್ರಿಯೆಯನ್ನು ತಿಳಿಸುವ ಪದಗಳೇ ಕ್ರಿಯಾಪದಗಳು. ಧಾತು ಧಾತುಗಳಿಗೆ ಪ್ರತ್ಯಯಗಳು ಸೇರಿ ಕ್ರಿಯೆಯ ಮೂಲರೂಪ ಕ್ರಿಯಾಪದಗಳಾಗುತ್ತವೆ. ಕ್ರಿಯಾಪದಗಳು ಯಾವುದೇ ಭಾಷೆಯ ವಾಕ್ಯದಲ್ಲಿ ಮುಖ್ಯ ಘಟಕಗಳು, ವಾಕ್ಯದಲ್ಲಿಯ ಅಖ್ಯಾತ ಭಾಗದ ಕೇಂದ್ರಬಿಂದು ಕ್ರಿಯಾಪದವೆನಿಸುತ್ತದೆ. ಕ್ರಿಯಾಪದಗಳು ಭಾಷೆಯ ಸ್ಥಿರವಾದ ಅಂಶಗಳು. ದ್ರಾವಿಡ ಭಾಷೆಗಳಲ್ಲಿ ಬಹಳಷ್ಟು ಧಾತುಗಳು

ನಾಮಪದಗಳಂತೆಯೆ ವರ್ತಿಸುವವು ಅಂದರೆ ಪ್ರತ್ಯಯಗಳು ನಾಮಪದಗಳಿಗೆ ಹತ್ತುವಂತೆ, ಧಾತುಗಳಿಗೆ ಹತ್ತುವುದು ಅಥವಾ ಅನೇಕ ಸಲ ನಾಮಗಳೇ ಕ್ರಿಯಾರ್ಥವನ್ನು ನೀಡುವುದರಿಂದ ಅವುಗಳಿಂದಲೇ ವಾಕ್ಯ ರಚನೆ ಸಾಧ್ಯ. ನ್ಯಾಯವಾಗಿ ದ್ರಾವಿಡ ಭಾಷೆಗಳಲ್ಲಿ ಕ್ರಿಯಾಪದವೇ ಇಲ್ಲ ಎಂಬ ಅಭಿಪ್ರಾಯವುಂಟಾಗಿದೆ. ಕ್ರಿಯಾರ್ಥವನ್ನು ಒಳಗೊಂಡಿರುವ ಎಲ್ಲಾ ರೂಪಗಳ ಭಾಷೆಯಲ್ಲಿ ಬಳಕೆಗೊಂಡಿರುವ ವ್ಯವಸ್ಥೆಯನ್ನು ವರ್ಣಿಸುವುದಕ್ಕಾಗಿ ಕ್ರಿಯಾಪದಗಳನ್ನು ವ್ಯಾಕರಣದಲ್ಲಿ ಪರಿಗಣಿಸುವುದು ಅವಶ್ಯವಾಗಿದೆ. (ಆಂಜನೇಯ, ೨೦೦೬, ಪುಟ-೬೦, ಪಿಎಚ್.ಡಿ. ಪ್ರಬಂಧ, ಅಪ್ರಕಟಿತ) ಕ್ರಿಯಾರ್ಥವನ್ನು ಕೊಡುವುದಾಗಿಯೂ, ಪ್ರತ್ಯಯವನ್ನು ಹೊಂದದೆಯೂ ಇರುವ ಶಬ್ದಕ್ಕೆ ಕ್ರಿಯಾ ಪ್ರಕೃತಿ ಅಥವಾ ಧಾತು ಎನ್ನುವರು. ಪ್ರಸ್ತುತ ಭಾಗದಲ್ಲಿ ಕೊರಚರ ಭಾಷೆಯಲ್ಲಿ ಬಳಕೆಯಾಗುವ ಕ್ರಿಯಾಪದಗಳ ಸ್ವರೂಪವನ್ನು ಚರ್ಚಿಸಲಾಗಿದೆ.

ಧಾತುಗಳಲ್ಲಿ ಎರಡು ವಿಧ.

ಅ. ಮೂಲಧಾತು: ಕ್ರಿಯೆಯನ್ನು ತಿಳಿಸುವ ಮೂಲರೂಪಗಳು ಮೂಲಧಾತುಗಳಾಗುತ್ತವೆ.

ಶಿಷ್ಟಕನ್ನಡ	**ಕೊರಚರಲ್ಲಿ**
ಮಲಗು	ಬುದುಗು
ಕಳು	ಅಂಪ
ಹುಟ್ಟು	ಪರ್ದ
ಹಿಡಿ	ಪುಡಿ
ಕೊಡು	ಕುಡು
ಹರಡು	ಅಲ್ಡ
ಮಾಡು	ಸೆಯಿ
ತಿನ್ನು	ತಿನು
ಬರೆ	ಬರಿ

ಇತ್ಯಾದಿಯಾಗಿ ಕೊರಚರಲ್ಲಿ ಧಾತುಗಳು ಇವೆ. ಈ ಎಲ್ಲ ಧಾತುಗಳಿಂದ ಆದ ವಿವಿಧ ಪ್ರತ್ಯಯಗಳನ್ನು ಹೊಂದಿ ವರ್ತಮಾನ, ಭೂತಕಾಲಗಳಲ್ಲಿ ವಿಧ್ಯರ್ಥ, ನಿಷೇಧಾರ್ಥಗಳಲ್ಲಿ ಅನೇಕ ಕ್ರಿಯಾಪದಗಳನ್ನು ಪ್ರತಿನಿತ್ಯ ಭಾಷೆಯಲ್ಲಿ ಬಳಸುತ್ತಾರೆ.

ಆ. ಪ್ರತ್ಯಯಾಂತ ಧಾತ (ಸಾಧಿತ ಧಾತು): ಕನ್ನಡ ಮತ್ತು ಕೊರಚರ ಭಾಷೆಯ ಕೆಲವು ನಾಮ ಪ್ರಕೃತಿಗಳ ಮೇಲೂ ಧಗಧಗ, ಭಟಭಟ ಮೊದಲಾದ ಅನುಕರಣ ಶಬ್ದಗಳ ಮೇಲೂ

ಕನ್ನಡದಲ್ಲಿ 'ಇಸು' ಎಂಬ ಪ್ರತ್ಯಯ ಸೇರಿದಂತೆ, ಕೊರಚರಲ್ಲಿ ಪಿಕ್ಕಿ ಎಂಬ ಪ್ರತ್ಯಯ ಸೇರುವುದನ್ನು ನೋಡಬಹುದು. ಈಗ ಧಾತುಗಳಿಗೆ ಪ್ರತ್ಯಯಗಳು ಸೇರಿದಾಗ ಅವು ಪ್ರತ್ಯಯಾಂತ ಧಾತುಗಳೆನಿಸುತ್ತವೆ. ಇವಕ್ಕೆ ಸಾಧಿತ ಧಾತುಗಳೆಂದೂ ಕರೆಯಲಾಗುವುದು. ಉದಾ.

ಕನ್ನಡದಲ್ಲಿ	**ಕೊರಚರಲ್ಲಿ**
ಮಾಡು+ಇಸು = ಮಾಡಿಸು	ಸೇಯ್+ಪಿಕ್ಕಿ = ಸೇಪಿಕ್ಕಿ
ತಿನ್ನು+ಇಸು = ತಿನ್ನಿಸು	ತಿನು+ಪಿಕ್ಕಿ = ತಿನುಪಿಕ್ಕಿ
ಬರೆ+ಇಸು = ಬರೆಸು	ಬರಿ+ಪಿಕ್ಕಿ = ಬರಿಪಿಕ್ಕಿ
ಕಲಿ+ಇಸು = ಕಲಿಸು	ಕೆಚ್+ಪಿಕ್ಕಿ = ಕೆಚಪಿಕ್ಕಿ
ಮಲಗು+ಇಸು = ಮಲಗಿಸು	ಬುದುಗ+ಪಿಕ್ಕಿ = ಬುದಗಪಿಕ್ಕಿ
ಕರೆ+ಇಸು = ಕರೆಸು	ಕೂಡು+ಪಿಕ್ಕಿ = ಕೂಡಪಿಕ್ಕಿ
ಕೊಡು+ಇಸು = ಕೊಡಿಸು	ಕುಡು+ಪಿಕ್ಕಿ = ಕುಡಪಿಕ್ಕಿ
ಹಿಡಿ+ಇಸು = ಹಿಡಿಸು	ಪುಡಿ+ಪಿಕ್ಕಿ = ಪುಡಿಪಿಕ್ಕಿ ಇತ್ಯಾದಿ.

ಕನ್ನಡ ಅಥವಾ ಕೊರಚ ಭಾಷೆಯಲ್ಲಿ ಕರ್ಮಪದವನ್ನು ಅಪೇಕ್ಷಿಸುವ ಧಾತುಗಳಿಗೆ ಸಕರ್ಮಕ ಧಾತುಗಳೆಂದು ಮತ್ತು ಕರ್ಮಪದದ ಅಪೇಕ್ಷೆಯಿಲ್ಲದೆ ಬಳಕೆಯಾಗುವ ಧಾತುಗಳನ್ನು ಅಕರ್ಮಕ ಧಾತುಗಳೆಂದು ಕರೆಯುತ್ತಾರೆ. ಉದಾ.

ಸಕರ್ಮಕ ಧಾತುಗಳು	ಅಕರ್ಮಕ ಧಾತುಗಳು
ಕುಡು (ಕೊಡು)	ಬುದುಗ (ಮಲಗು)
ಕೊಡು (ಕರೆ)	ವೋಡು/ಓಡು (ಓಡು)
ವುಡು (ಬಿಡು)	ಜೀವನ (ಬದುಕು)
ತಿನು (ಉಣ್ಣು)	ಇಗಿ (ಇಳಿ)
ತಿದ್ದು (ತಿದ್ದು)	

ಕಾಲಸೂಚಕ ಪ್ರತ್ಯಯಗಳು

ಕನ್ನಡ ಮತ್ತು ಕೊರಚರ ಭಾಷೆಯಲ್ಲಿ ಕಾಲವನ್ನು ಸೂಚಿಸುವ ಕ್ರಿಯಾ ಪ್ರಕೃತಿಗಳಿಗೆ ಸೇರುವ ಪ್ರತ್ಯಯಗಳೇ ಕಾಲಸೂಚಕ ಪ್ರತ್ಯಯಗಳು. ಕೊರಚರಲ್ಲಿ ಕನ್ನಡ ಪರಿಸರಕ್ಕಿಂತ ಭಿನ್ನವಾಗಿ ಬಳಕೆಯಾಗುವುದನ್ನು ನೋಡಬಹುದು. ಕನ್ನಡದಲ್ಲಿ 'ಉತ್' ಪ್ರತ್ಯಯ ಸೇರಿ ವರ್ತಮಾನ ಕಾಲ ಸೂಚಿಸಿದರೆ ಕೊರಚರಲ್ಲಿ 'ಅಕ್' ಪ್ರತ್ಯಯ ಸೇರುತ್ತದೆ. ಭೂತಕಾಲಕ್ಕೆ 'ದ' ಪ್ರತ್ಯಯ ಸೇರಿದರೆ

ಕೊರಚರಲ್ಲಿ 'ಅಸ್' ಪ್ರತ್ಯಯ, ಭವಿಷತ್ ಕಾಲದಲ್ಲಿ 'ವ' ಪ್ರತ್ಯಯ ಸೇರಿದರೆ ಕೊರಚರಲ್ಲಿ ಅದ್ ಪ್ರತ್ಯಯಗಳು ಸೇರಿ ಕಾಲಸೂಚಕ ಪ್ರತ್ಯಯಗಳಾಗಿ ಬಳಕೆಗೊಳ್ಳುವುದನ್ನು ನೋಡಬಹುದು. ಉದಾ.

೧. ವರ್ತಮಾನ ಕಾಲ ಪ್ರತ್ಯಯ : ಅಕ್

ವಾರ್ + ಅಕ್ + ಅದು = ವಾರಕ್ಕದು (ಬರುತ್ತಾನೆ/ಳೆ)

ಓಡ್ + ಅಕ್ + ಅದು = ಓಡಕ್ಕದು (ಓಡುತ್ತಿದ್ದಾನೆ/ಳೆ)

ನಕ್ + ಅಕ್ + ಅದು = ನಕ್ಕಕದು (ನೆಕ್ಕುತ್ತದೆ)

ಓದ್ + ಅಕ್ + ಅದು = ಓದಕ್ಕದು (ಓದುತ್ತಾನೆ/ಳೆ)

ಪಾಕ್ + ಅಕ್ + ಅದು = ಪಾಕಕ್ಕದು (ನೋಡುತ್ತಾನೆ/ಳೆ)

೨. ಭೂತಕಾಲ ಪ್ರತ್ಯಯ : ಅಸ್

ತೆಂಗ್ + ಅಸ್ + ಉ = ತೆಂಗಸು (ತಂಗಿದನು)

ಬೇಡ್ + ಅಸ್ + ಉ = ಬೇಡಸು (ಬೇಡಿದನು)

ಕಟ್ + ಅಸ್ + ಉ = ಕಟ್ಟಸು (ಕಟ್ಟಿದನು)

ಓದ್ + ಅಸ್ + ಉ = ಓದಸು (ಓದಿದನು)

ಕಾಂಗ್ + ಅಸ್ + ಉ = ಕಾಂಗಸು (ಕಂಡನು)

೩. ಭವಿಷತ್ ಕಾಲ ಪ್ರತ್ಯಯ: ಅದ್

ಸೆಯ್ + ಅದ್ + ಉ = ಸೆಯ್ಯದು (ಮಾಡುವನು)

ಕಾಂಗ್ + ಅದ್ + ಉ = ಕಾಂಗದು (ಕಾಣುವುದು)

ವಾರ್ + ಅದ್ + ಉ = ವಾರಾದು (ಬರುವುದು)

ಓಡ್ + ಅದ್ + ಉ = ಓಡಾದು (ಓಡುವುದು)

ವಿಧ್ಯರ್ಥಕ ಕ್ರಿಯಾಪದಗಳು

ಕನ್ನಡದಲ್ಲಿ ಅಪ್ಪಣೆ, ಆಜ್ಞೆ, ಹಾರೈಕೆ ಪದಗಳನ್ನು ಬಳಸುವಾಗ ಧಾತುಗಳಿಗೆ ಅಖ್ಯಾತ ಪ್ರತ್ಯಯಗಳು ಸೇರಿ ವಿಧ್ಯರ್ಥಕ ಕ್ರಿಯಾಪದಗಳಾಗುವುದುಂಟು. ಧಾತುವಿಗೆ ವಿಧ್ಯರ್ಥಕ ಆಖ್ಯಾತ ಪ್ರತ್ಯಯಗಳು ಸೇರಿ ವಿಧ್ಯರ್ಥಕ ಕ್ರಿಯಾಪದ ರೂಪಗಳಾಗುವವು. ಇವುಗಳಿಗೆ ಕಾಲಸೂಚಕ ಆಗಮ ಬರುವುದಿಲ್ಲ. ಉದಾ. 'ಮಾಡು' ಧಾತುವಿನ ಕ್ರಿಯಾರೂಪವು ಮಾಡು + ಅಲಿ = ಮಾಡಲಿ ಎಂದಾಗುವುದು. ಈ ರೀತಿಯಲ್ಲಿ ದ್ರಾವಿಡ ಪರಿವಾರದ ಭಾಷೆಯಾದ ಕೊರಚರ ಭಾಷೆಯಲ್ಲಿ 'ಒಟು' ಎಂಬ ಪ್ರತ್ಯಯ ಸೇರುತ್ತದೆ. ಉದಾ.

ಸೆಯ್ + ಒಟು = ಸೆಯಾಟು (ಮಾಡಲಿ)

ಪಾಕ್ + ಒಟು = ಪಾಕೋಟು (ನೋಡಲಿ)

ತಾರ್ + ಒಟು = ತಾರೋಟು (ಕೊಡಲಿ) ಇತ್ಯಾದಿಯಾಗಿ ನೋಡಬಹುದು.

ಸಂಭಾವನಾರ್ಥಕ ಕ್ರಿಯಾಪದಗಳು

ಸಂಭಾವನೆ ಎಂದರೆ ಸಂಶಯ, ಊಹೆ, ತರ್ಕ ಎಂದರ್ಥ. ಈ ಅರ್ಥದ ಕ್ರಿಯಾಪದಗಳು ಸಂಭಾವನಾರ್ಥಕ ಕ್ರಿಯಾಪದಗಳು. ಅಂದರೆ ಕ್ರಿಯೆಯು ನಡೆಯವಲ್ಲಿ ಸಂಶಯವನ್ನು ಅಥವಾ ನಡೆಯಬಹುದೆಂಬ ಊಹೆಯನ್ನು ಸೂಚಿಸುವ ಕ್ರಿಯಾಪದಗಳು ಸಂಭಾವನಾರ್ಥಕ ಕ್ರಿಯಾಪದಗಳು. ಶಿಷ್ಟಕನ್ನಡದಲ್ಲಿ ಆಯ, ಏನು, ಏವು, ಆರು, ಈಯ ಮೊದಲಾದ ಆಖ್ಯಾತ ಪ್ರತ್ಯಯಗಳು ಧಾತುವಿಗೆ ಸೇರಿ ಸಂಭಾವನಾರ್ಥಕ ಕ್ರಿಯಾಪದಗಳಾಗಿವೆ. ಆದರೆ ಕೊರಚರಲ್ಲಿ 'ಅನ್' ಎಂಬ ಆಖ್ಯಾತ ಪ್ರತ್ಯಯಗಳು ಸೇರಿ ಸಂಭಾವನಾರ್ಥಕ ಕ್ರಿಯಾಪದಗಳಾಗುತ್ತವೆ.

ಪ್ರಯೋಗ:

ಲಿಂಗ	ಏಕವಚನ	ಬಹುವಚನ
ಪ್ರಥಮ ಪುರುಷ:		
ಪುಲಿಂಗ (ಅವನು)	ಹೋಗನ್ನು	ಹೋಗನ್ನು (ಅವರು)
ಸ್ತ್ರೀಲಿಂಗ (ಅವಳು)	ಹೋಗನ್ನು	ಹೋಗನ್ನು (ಅವರು
ನಪುಂಸಕ ಲಿಂಗ (ಅದು)	ಹೋಗನ್ನು	ಹೋಗನ್ನು (ಅವು)

ಮಧ್ಯಮ ಪುರುಷ:

ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕ ಲಿಂಗ (ನೀನು) ಹೋಕ್ರ್ಯಾ) – ಹೋಕ್ರಂಗ (ನೀವು)

ಉತ್ತಮ ಪುರುಷ: ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕ ಲಿಂಗ (ನಾನು) ಹೋಕ್ರ್ಯಾ) – ಹೋಗನ್ನು (ನಾವು) ಉದಾ.

ಹೋಗ್ + ಅನ್ + ಉ = ಹೋಗನು (ಹೋದಾನು)

ಸೋಲ್ + ಅನ್ + ಉ = ಸೋಲನ್ನು (ಸೋತಾನು)

ವಾರ್ + ಅನ್ + ಉ = ವಾರನ್ನು (ಬಂದಾನು)

ಕೊಡಕ್ + ಅನ್ + ಉ = ಕುಡುಕನ್ನು (ಕೊಟ್ಟಾನು) ಇತ್ಯಾದಿಯಾಗಿ.

ಸಂಭಾವನಾರ್ಥಕ ಕ್ರಿಯಾಪದಗಳು ಇಲ್ಲಿ ಕಂಡುಬರುತ್ತವೆ. ಹಾಗೂ ಪ್ರಸ್ತುತ ಸಮುದಾಯದಲ್ಲಿ ಬಳಸುವುದು ಕ್ಷೇತ್ರಕಾರ್ಯ ಸಂದರ್ಭದಲ್ಲಿ ತಿಳಿದುಬಂದಿದೆ.

ನಿಷೇದಾರ್ಥಕ ಕ್ರಿಯಾರೂಪಗಳು

ಕ್ರಿಯೆಯು ನಡೆಯಲಿಲ್ಲ ಅಥವಾ ನಡೆಯುವುದಿಲ್ಲ ಎಂಬ ಅರ್ಥವನ್ನು ತಿಳಿಸುವ ಕ್ರಿಯಾಪದಗಳಿಗೆ ನಿಷೇದಾರ್ಥಕ ಕ್ರಿಯಾಪದಗಳು ಎನ್ನುವರು. ಕೊರಚರ ಭಾಷೆಯಲ್ಲಿ ನಿಷೇದಾರ್ಥಕ ಸೂಚಿಸುವ ಧಾತುವಿಗೆ ಮಾಟೆ, ಇಲ್ಲ ಎಂಬ ಪ್ರತ್ಯಯಗಳು ಮಾತ್ರ ಹತ್ತುತ್ತವೆ. ಉದಾಹರಣೆಗೆ ಕೊರಚರ ಭಾಷೆಯಲ್ಲಿನ ಕೆಲವು ಧಾತುಗಳು ನಿಷೇದಾರ್ಥ ರೂಪಗಳು.

ಧಾತು	ನಿಷೇದಾರ್ಥಕ ರೂಪ
ಸಿಕ್	ಸಿಕ್ಕದಿಲ್ಲ – ಸಿಕ್ಕಮಾಟೆ (ಸಿಗುವುದಿಲ್ಲ)
ಪಾಕ್	ಪಾಕಮಾಟೆ – ಪಾಕದಿಲ್ಲ (ನೋಡುವುದಿಲ್ಲ)
ಕುಡು (ಕೊಡು)	ಕುಡುಮಾಟೆ – ಕುಡುಕದಿಲ್ಲ (ಕೊಡುವುದಿಲ್ಲ)
ಹೋಗ್ (ಹೋಗು)	ಹೋಗಮಾಟೆ – ಹೋಗದಿಲ್ಲ (ಹೋಗುವುದಿಲ್ಲ)
ತಪ್ (ತಪ್ಪು)	ತಪ್ಪಮಾಟೆ – ತಪ್ಪದಿಲ್ಲ (ತಪ್ಪುವುದಿಲ್ಲ)
ಕೇಕ್ (ಕೇಳು)	ಕೇಕಮಾಟೆ – ಕೇಕದಿಲ್ಲ (ಕೇಳುವುದಿಲ್ಲ)
ಸೋಣ್ (ಹೇಳು)	ಸೋಣಮಾಟೆ – ಸೋಣದಿಲ್ಲ (ಹೇಳುವುದಿಲ್ಲ)
ವಾರ್ (ಬರು)	ವಾರಮಾಟೆ – ವಾರದಿಲ್ಲ (ಬರುವುದಿಲ್ಲ)

ಇತ್ಯಾದಿಯಾಗಿ ನಿಷೇದಾರ್ಥಕವಾಗಿ ಕೊರಚರ ಭಾಷೆಯಲ್ಲಿ ನೋಡಬಹುದು.

ಈ ರೀತಿಯಾಗಿ ಕೊರಚರ ಭಾಷಾ ವೈಶಿಷ್ಟ್ಯದಲ್ಲಿ ಕನ್ನಡ ಭಾಷೆಯೊಂದಿಗೆ ಕೊರಚರಲ್ಲಿ ಬಳಕೆಗೊಳ್ಳುವ ನಾಮಪದದ ನಾಮಪ್ರಕೃತಿ, ಲಿಂಗ ವ್ಯವಸ್ಥೆ, ವಚನ ವ್ಯವಸ್ಥೆ, ವಿಭಕ್ತಿ ಪ್ರತ್ಯಯ, ಸರ್ವನಾಮಗಳನ್ನು ಶಿಷ್ಟಕನ್ನಡದೊಂದಿಗೆ ವರ್ಣನಾತ್ಮಕ ಮಾದರಿಯಲ್ಲಿ ವಿಶ್ಲೇಷಿಸಲಾಗಿದೆ. ಹಾಗೆಯೇ ಕ್ರಿಯಾಪದದ ಧಾತು, ಕಾಲಸೂಚಕ ಪ್ರತ್ಯಯಗಳು, ವಿದ್ಯರ್ಥಕಗಳು, ಸಂಭಾವನಾರ್ಥಕಗಳು, ನಿಷೇದಾರ್ಥಕಗಳ ಸ್ವರೂಪವನ್ನು ಕೊರಚರ ಭಾಷೆಯನ್ನು ಅರಿಯುವ ಸಲುವಾಗಿ ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ. ಕೊರಚರ ಭಾಷೆಯಲ್ಲಿ ಬಳಕೆಯಾಗುವ ಸಾಧಿತ ನಾಮಪ್ರಕೃತಿಗಳು ಕನ್ನಡ ಪರಿಸರದಂತೆ ಅಲ್ಪಸ್ವಲ್ಪ ಭಿನ್ನತೆಯೊಂದಿಗೆ ಬಳಕೆಯಾಗುತ್ತದೆ. ಕೊರಚರ ಭಾಷೆಯಲ್ಲಿ ಯಾರು, ಯಾವನು, ಯಾವಳು ಎಂಬ ಪ್ರಶ್ನಾರ್ಥಕ ಸರ್ವನಾಮಗಳಿಗೆ 'ಏದು' ಎಂಬ ಪ್ರಶ್ನಾರ್ಥಕ ಸರ್ವನಾಮ ಪದ ಬಳಕೆಯಾಗುತ್ತದೆ. ಹಾಗೆಯೇ ಪ್ರಮಾಣವಾಚಕಗಳು ಕನ್ನಡದ ಪರಿಸರಕ್ಕಿಂತ ಭಿನ್ನವಾಗಿ ಬಳಕೆಯಾಗುವುದನ್ನು ನೋಡಬಹುದು. ಉದಾ. ಅಷ್ಟು–ಅತ್ನ, ಇಷ್ಟು–ಇತ್ನ, ಎಷ್ಟು–ಎತ್ನ, ಸ್ವಲ್ಪ–ರೊತ್ನ ಇತ್ಯಾದಿಯಾಗಿ.

ಕೊರಚರ ಭಾಷೆ ತಮಿಳು ಕನ್ನಡಗಳ ನಡುವೆ ಭಿನ್ನತೆಯನ್ನು ತೋರುತ್ತದೆಯಾದರೂ

ಪುರುಷವಾಚಕ ಸರ್ವನಾಮಗಳಾದ ಉತ್ತಮ ಪುರುಷ ಹಾಗೂ ಮಧ್ಯಮ ಪುರುಷ ಏಕವಚನ ಹಾಗೂ ಬಹುವಚನಗಳಲ್ಲಿ ಬಳಕೆಯಾಗುವ ರೂಪಗಳಲ್ಲಿ ಪರಿಸರ ಸಾಮ್ಯತೆ ಕಂಡುಬರುತ್ತದೆ. ಉದಾ. ನಾ, ನಾನ್, ನೀ, ನೀನ್ (ಕನ್ನಡದಲ್ಲಿ ನಾ, ನಾನು, ನೀ, ನೀನು) (ತಮಿಳುನಲ್ಲಿ ಯಾನ್, ನಾನ್, ನೀ, ನೀನ್) ಹಾಗೆಯೇ ಕೊರಚರ ಭಾಷೆಯಲ್ಲಿ ವಚನರೂಪ ವಿಶಿಷ್ಟವಾಗಿ ಕಂಡುಬರುತ್ತದೆ. ಬಹುವಚನ ರೂಪವು ಇವರಲ್ಲಿ ಸಮುದಾಯದ ಸಾಮಾಜಿಕ ಭಿನ್ನಾಂಶದಲ್ಲಿ ಬಹುವಚನ ಪ್ರತ್ಯಯವು ಸ್ತ್ರೀ–ಪುರುಷ ಲಿಂಗಗಳಿಗೆ 'ನಾಯ' ಎಂದು ನಪುಂಸಕ ಲಿಂಗಗಳಿಗೆ 'ಲಿಂಗ' ಎಂದು ಬಳಕೆಯಾಗುತ್ತದೆ. ಉದಾಹರಣೆಗೆ ಸ್ತ್ರೀ–ಪುರುಷ ಲಿಂಗಗಳಿಗೆ ಸಂಬಂಧಿಸಿದಂತೆ ಅಣ್ಣನಾಯ–ಅಣ್ಣಂದಿರು, ತೆಂಬಿನಾಯ–ತಮ್ಮಂದಿರು, ಅಕ್ಕನಾಯ–ಅಕ್ಕಂದಿರು, ತಸ್ಸಿನಾಯ–ತಂಗಿಯರು ಇತ್ಯಾದಿ ಬಳಕೆಯಾಗುತ್ತದೆ. ನಪುಂಸಕ ಲಿಂಗದಲ್ಲಿ ಸೆಂಡೆಂಗ–ಗಿಡಗಳು, ಮಾಡಂಗ–ದನಗಳು, ಊಡಂಗ–ಮನೆಗಳು ಇತ್ಯಾದಿಯಾಗಿ ಬಳಕೆಯಾಗುತ್ತದೆ.

ಕೊರಚ ಭಾಷೆಯಲ್ಲಿ ಬಳಕೆಯಾಗುವ ವಿಭಕ್ತಿ ಪ್ರತ್ಯಯಗಳು ಮೌಖಿಕ ಸಂದರ್ಭದಲ್ಲಿ, ವಾಕ್ಯದಲ್ಲಿನ ವಿಭಕ್ತಿ ರೂಪದ ಸ್ಥಾನ, ವಾಕ್ಯಗಳಲ್ಲಿ ಬಳಸುವ ಔಪಚಾರಿಕ ಅಥವಾ ಅನೌಪಚಾರಿಕ ಸಂದರ್ಭ ಬಳಸುವವನ ಮನಸ್ಸು ಇತ್ಯಾದಿಗಳಿಗೆ ಬದ್ಧವಾಗಿರುತ್ತದೆ. ಕೊರಚರ ಭಾಷೆಯಲ್ಲಿ ಶಿಷ್ಟ ಕನ್ನಡದಲ್ಲಿ ಬಳಕೆಗೊಳ್ಳುವ ಪ್ರಥಮ, ದ್ವಿತೀಯ, ತೃತೀಯ, ಚತುರ್ಥಿ, ಪಂಚಮಿ, ಷಷ್ಠಿ, ಸಪ್ತಮಿ, ಸಂಬೋಧನಾ, ಸಹತ್ವಗಳಲ್ಲಿ ಬಳಕೆಯಾಗುವಂತೆ ಆಗದೆ ಒ, ಎಂದು, ಇಂಟಿ, ಇಂಡು–ಉಂಡು, ಕೆ–ಕು, ಇಂಡು–ಉಂಡು–ಇಟಿ, ಅ–ಅದು, ಅಚ್ಚಿ–ಕೋರು, ಆ–ಏ, ಓಟಿ ಬಳಸುವುದನ್ನು ನೋಡಬಹುದು.

ಹಲವಾರು ವಸ್ತು, ವ್ಯಕ್ತಿ, ಸಂಗತಿಗಳಲ್ಲಿ ಒಂದನ್ನೆ ನಿಶ್ಚಯಿಸಿ ಹೇಳುವುದನ್ನು ಅವಧಾರಣಾರ್ಥಕಾವ್ಯಾಯ ಎಂದು ಕರೆಯುತ್ತಾರೆ. ಹಾಗಾಗಿ ಕೊರಚರಲ್ಲಿ 'ಏ' ಎಂಬುದು ಅವಧಾರಣಾರ್ಥಕಾವ್ಯಾಯವಾಗಿದೆ. ಉದಾ. ಅವರೇ, ಅವರೇ, ಅವೇ ಎಂಬುದಕ್ಕೆ 'ಅಯಿಲೇ' ಎಂದು ಅವನೇ, ಅವಳೇ, ಅದೇ ಎಂಬುದಕ್ಕೆ 'ಅದೇ' ಎಂಬುದು ಬಳಕೆಯಾಗುವುದನ್ನು ನೋಡಬಹುದು.

ಕನ್ನಡದ ನಾಮಪ್ರಕೃತಿಗಳ ಮೇಲೆ ಧಗಧಗ, ಭಟಭಟ ಮೊದಲಾದ ಅನುಕರಣ ಶಬ್ದಗಳ ಮೇಲೆ 'ಇಸು' ಪ್ರತ್ಯಯ ಸೇರಿದಂತೆ ಕೊರಚರಲ್ಲಿ 'ಪಿಕ್ಕಿ' ಎಂಬ ಪ್ರತ್ಯಯ ಸೇರುವುದನ್ನು ನೋಡಬಹುದು. ಹೀಗೆ ಧಾತುಗಳಿಗೆ ಪ್ರತ್ಯಯಗಳು ಸೇರಿದಾಗ ಅವು ಪ್ರತ್ಯಯಾಂತ ಧಾತುಗಳೆನಿಸುತ್ತವೆ. ಇವಕ್ಕೆ ಸಾಧಿತ ಧಾತುಗಳೆಂದು ಕರೆಯಲಾಗುತ್ತದೆ. ಉದಾ.

ಮಾಡು + ಇಸು= ಮಾಡಿಸು – ಸೇಯ್ + ಪಿಕ್ಕಿ = ಸೇಪಿಕ್ಕಿ

ತಿನ್ನು + ಇಸು = ತಿನ್ನಿಸು – ತಿನು + ಪಿಕ್ಕಿ = ತಿನುಪಿಕ್ಕಿ

ಕಾಲಸೂಚಕ ಪ್ರತ್ಯಯದಲ್ಲಿ ಕನ್ನಡ ಮತ್ತು ಕೊರಚರ ಭಾಷೆಯಲ್ಲಿ ಸೂಚಿಸುವ ಕ್ರಿಯಾ ಪ್ರಕೃತಿಗಳಿಗೆ ಸೇರುವ ಪ್ರತ್ಯಯಗಳೇ ಕಾಲಸೂಚಕ ಪ್ರತ್ಯಯಗಳು. ಕೊರಚರಲ್ಲಿ ಕನ್ನಡ ಪರಿಸರಕ್ಕಿಂತ ಭಿನ್ನವಾಗಿ ಬಳಕೆಯಾಗುವುದನ್ನು ನೋಡಬಹುದು. ಕನ್ನಡದಲ್ಲಿ 'ಉತ್' ಪ್ರತ್ಯಯ ಸೇರಿ ವರ್ತಮಾನ ಕಾಲ ಸೂಚಿಸಿದರೆ ಕೊರಚರಲ್ಲಿ 'ಅಕ್' ಪ್ರತ್ಯಯ ಸೇರುತ್ತದೆ. ಭೂತಕಾಲಕ್ಕೆ 'ದ' ಪ್ರತ್ಯಯ ಸೇರಿದರೆ ಕೊರಚರಲ್ಲಿ 'ಅಸ್' ಪ್ರತ್ಯಯ ಸೇರುತ್ತದೆ, ಭವಿಷತ್ ಕಾಲದಲ್ಲಿ 'ವ' ಪ್ರತ್ಯಯ ಸೇರಿದರೆ ಕೊರಚರಲ್ಲಿ 'ಅದ್' ಪ್ರತ್ಯಯ ಸೇರುವುದನ್ನು ಕಾಲಸೂಚಕ ಪ್ರತ್ಯಯಗಳಲ್ಲಿ ನೋಡಬಹುದು.

ಉದಾ. ವಾರ್ + ಅಕ್ + ಅದು = ವಾರಕ್ಕದು (ಬರುತ್ತಾನೆ/ಳೆ)

ತೆಂಗ್ + ಅಸ್ + ಉ = ತೆಂಗಸು (ತಂಗಿದನು/ಳು)

ಸೇಯ್ + ಅದ್ + ಉ = ಸೇಯದು (ಮಾಡುವನು/ಳು)

ಅಪ್ಪಣೆ, ಆಜ್ಞೆ, ಹಾರೈಕೆ ಪದಗಳನ್ನು ಬಳಸುವಾಗ ಧಾತುಗಳಿಗೆ ಅಖ್ಯಾತ ಪ್ರತ್ಯಯಗಳು ಸೇರಿ ವಿಧ್ಯರ್ಥಕ ಕ್ರಿಯಾಪದಗಳಾಗುತ್ತದೆ. ಕನ್ನಡದಲ್ಲಿ 'ಮಾಡು' ಧಾತುವಿನ ಕ್ರಿಯಾರೂಪವು ಮಾಡು + ಅಲಿ = ಮಾಡಲಿ ಎಂದಾದರೆ ಕೊರಚರಲ್ಲಿ ಸೇಯ್ + ಓಟು = ಸೇಯೋಟು (ಮಾಡಲಿ) ಎಂದಾಗುತ್ತದೆ. ಕೊರಚರಲ್ಲಿ ಧಾತುವಿನ ಕ್ರಿಯಾರೂಪ 'ಓಟು' ಬಳಕೆಯಾಗುತ್ತದೆ.

ಸಂಭಾವನಾರ್ಥಕ ಕ್ರಿಯಾಪದದಲ್ಲಿ ಸಾಮಾನ್ಯವಾಗಿ ಕನ್ನಡದಲ್ಲಿ ಆಯಾ, ಏನು, ಏವು, ಆರು, ಈಯ ಮೊದಲಾದ ಅಖ್ಯಾತ ಪ್ರತ್ಯಯಗಳು ಧಾತುವಿಗೆ ಸೇರಿ ಸಂಭಾವನಾರ್ಥಕ ಕ್ರಿಯಾಪದಗಳಾದರೆ ಕೊರಚರಲ್ಲಿ ಪ್ರಥಮ ಪುರುಷ ಮತ್ತು ಉತ್ತಮ ಪುರುಷದಲ್ಲಿ 'ಅನ್ನು' ಪ್ರತ್ಯಯ ಸೇರಿದರೆ ಮಧ್ಯಮ ಪುರುಷದಲ್ಲಿ 'ಆ್ಯ' ಪ್ರತ್ಯಯ ಸೇರಿ ಸಂಭಾವನಾರ್ಥಕ ಕ್ರಿಯಾಪದಗಳಾಗುತ್ತದೆ. ಉದಾ. ಹೋಗನ್ನು, ಹೋಗನ್ನು, ಹೊಕ್ರ್ಯಾ ಇತ್ಯಾದಿ. ಹಾಗೆಯೇ ನಿಷೇಧಾರ್ತಕ ಕ್ರಿಯಾರೂಪಗಳು ಕೊರಚರ ಭಾಷೆಯಲ್ಲಿ ನಿಷೇಧಾರ್ಥಕ ಸೂಚಿಸುವ ಧಾತುವಿಗೆ 'ಮಾಟೆ' ಇಲ್ಲ ಎಂಬ ಪ್ರತ್ಯಯಗಳು ಮಾತ್ರ ಹತ್ತುತ್ತವೆ. ಉದಾ. ತಪ್ಪುಮಾಟೆ, ಕೇಕಮಾಟೆ ಸೋಣದಿಲ್ಲ, ವಾರದಿಲ್ಲ.

ಈ ಮಾಹಿತಿಯಿಂದ ಕೊರಚರ ಭಾಷೆಯು ದ್ರಾವಿಡ ಪರಿವಾರದ ಭಾಷೆಗಳಿಗಿಂತ ಭಿನ್ನವಾಗಿರದೆ ಅದೊಂದು ದ್ರಾವಿಡ ಪರಿವಾರದ ಭಾಷೆಯಾಗಿದೆ. ಇಂತಹ ಒಂದು ವಿಶಿಷ್ಟ ಭಾಷೆಯು ಕೊರಚರ ಹಿರಿಯ ತಲೆಮಾರಿನವರಲ್ಲಿ, ಅವಿದ್ಯಾವಂತರಲ್ಲಿ, ಕೃಷಿಕಾರ್ಮಿಕರ ಆಡುನುಡಿಯಲ್ಲಿ ದಿನಂಪ್ರತಿ ಬಳಕೆಗೊಳ್ಳುವುದನ್ನು ನೋಡಬಹುದು. ಅದು ವಿಶೇಷವಾಗಿ ಮಹಿಳೆಯರಲ್ಲಿ ಆದರೆ ಇತ್ತೀಚಿನ ಹೊಸ ತಲೆಮಾರಿನವರಲ್ಲಿ ಈ ಭಾಷೆಯ ಬಳಕೆಯು ಅತ್ಯಂತ ಕಡಿಮೆ ಪ್ರಮಾಣವನ್ನು ಕಾಣಬಹುದಾಗಿದೆ ಎಂಬುದು ಕ್ಷೇತ್ರಕಾರ್ಯದ ಮಾಹಿತಿಯಿಂದ ತಿಳಿದುಬರುತ್ತದೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದದ್ದು. ಏಕೆಂದರೆ ಈ ಅಧ್ಯಾಯದ ಭಾಗವಾಗಿ ಕ್ಷೇತ್ರಕಾರ್ಯದ ಮಾಹಿತಿಯು ಮತ್ತು ಜಯಪ್ಪ ಕೆ.ವಿ. ಅವರ "ಕೊರಚರ ಭಾಷೆ: ವರ್ಣನಾತ್ಮಕ, ತೌಲನಿಕ ಅಧ್ಯಯನ" ಎಂಬ ಸಂಶೋಧಿತ ಕೃತಿಯನ್ನು ಬಳಕೆಗೊಳಪಡಿಸಲಾಗಿದೆ.

ಅಧ್ಯಾಯ : ಐದು

ಕೊರಚ ಸಮುದಾಯದ ಭಾಷಿಕ ನೆಲೆಗಳು

೫.೧. ಗಾದೆಗಳು

೫.೨. ಒಗಟುಗಳು

೫.೩. ಒಡಪುಗಳು

೫.೪. ಕೌಟುಂಬಿಕ ವಲಯ ಮತ್ತು ಭಾಷಾ ಬಳಕೆ

೫.೪.೧. ಸಂಬಂಧವಾಚಕಗಳು

೫.೪.೨. ಸಂಬೋಧನಾ ರೂಪಗಳು

೫.೫. ವ್ಯಕ್ತಿನಾಮಗಳು

೫.೬. ಮನೆ ಹೆಸರುಗಳು

೫.೭. ವ್ಯವಹಾರಿಕ ವಲಯ

೫.೭.೧. ಕೃಷಿ ಭಾಷಾ ಬಳಕೆ

೫.೭.೨. ಆಸ್ಪತ್ರೆ ಭಾಷಾ ಬಳಕೆ

೫.೭.೩. ಮಾರುಕಟ್ಟೆ ಭಾಷಾ ಬಳಕೆ

೫.೭.೪. ಹೋಟೆಲ್ ಭಾಷಾ ಬಳಕೆ

೫.೭.೫. ಶಾಲಾ ಕಾಲೇಜು ಭಾಷಾ ಬಳಕೆ

೫.೮. ಸಂಬೋಧನಾ ರೂಪಗಳು

ಅಧ್ಯಾಯ: ಐದು

ಕೊರಚರ ಸಮುದಾಯದ ಭಾಷಿಕ ನೆಲೆಗಳು

ಸಮಾಜ ಮತ್ತು ಭಾಷೆ ಇವೆರಡರ ಆಂತರಿಕ ಸಂಬಂಧ ವಿಶಿಷ್ಟವಾದುದು. ಸಾಮಾನ್ಯವಾಗಿ ಸಾಮಾಜಿಕ ಭಾಷಾವಿಜ್ಞಾನ ಅಧ್ಯಯನ ಸಾಮಾಜಿಕ ಅಧ್ಯಯನಕ್ಕೆ ಪೂರಕ ಹಾಗೂ ಸಹಾಯಕವಾಗಿರುವುದು. ಜಗತ್ತಿನಲ್ಲಿ ಸಮಾಜವಿಲ್ಲದೆ ಭಾಷೆಯಿಲ್ಲ; ಭಾಷೆ ಇಲ್ಲದ ಸಮಾಜವಿಲ್ಲ. ಬದುಕಿನ ನಿರಂತರ ಬದಲಾವಣೆ ಭಾಷೆಯಿಂದ ಮಾತ್ರ ಸಾಧ್ಯ. ಸಮಾಜ ಅಭಿವೃದ್ಧಿ ಹೊಂದಿದಂತೆ ಭಾಷಾಭಿವೃದ್ಧಿ ಹೊಂದುವುದು. ಭಾಷೆಯಿಂದ ಸಾಮಾಜಿಕ ರಚನಾವಿನ್ಯಾಸ ಮತ್ತು ಅದರ ವಿಶೇಷತೆಯನ್ನು ಸಮರ್ಪಕ ರೀತಿಯಲ್ಲಿ ಸೂತ್ರೀಕರಿಸಿ ವಿವರಿಸಬಹುದು. ಸಮಾಜದಲ್ಲಿ ವ್ಯಕ್ತಿ ತನ್ನಷ್ಟಕ್ಕೆ ಸರ್ವ ಸ್ವತಂತ್ರನಾಗಿರದೆ, ಆಯಾ ಸಮುದಾಯದ ಅವಿಚ್ಛಿನ್ನ ಘಟಕವಾಗಿರುವನು. ಭಾಷೆ ಸಂಸ್ಕೃತಿಯ ಅಂಗವಲ್ಲದೆ, ಸಮಾಜದ ಎಲ್ಲ ಜೀವಂತ ನೈಜ ಚಟುವಟಿಕೆಯ ಮೂಲ. ಸಮಾಜದಿಂದ ವ್ಯಕ್ತಿಯನ್ನು ವ್ಯಕ್ತಿಯಿಂದ ಭಾಷೆಯನ್ನು ಬೇರ್ಪಡಿಸಲಾಗದು. ಆಯಾ ಸಮೂಹದ ಸಂಸ್ಕೃತಿ ಭಾಷೆಯೊಂದಿಗೆ ಬೆರೆತು ಅಲ್ಲಿನ ಭಾಷೆಯನ್ನು ಬೆಳೆಸುವಂತಿರುತ್ತದೆ. ವ್ಯಕ್ತಿಯ ಭಾವನೆಗಳನ್ನು ಸಾಮಾಜಿಕರೊಂದಿಗೆ ಹಂಚಿಕೊಳ್ಳುವುದರ ಜೊತೆಗೆ ಸಾಮಾಜಿಕ ಹಾಗೂ ಸಾಂಸ್ಕೃತಿಕ ಮೇಲ್ಮೈಯನ್ನು ಸಾಧಿಸುವ ಪ್ರಯತ್ನ ತೀವ್ರವಾಗಿರುವುದು ಸಮಾಜದ ಬೆಳವಣಿಗೆಗೆ ಹಾಗೂ ಬದಲಾವಣೆಗೆ ಭಾಷೆ ಅನಿವಾರ್ಯ. ಅಲ್ಲದೆ ಅದು ಸಮಾಜದ ಎಲ್ಲಾ ಅಂಶಗಳೊಡನೆ ಸಮಪ್ರಮಾಣದಲ್ಲಿ ಬಳಕೆಯಾಗಿ ಸಹಜತೆಯೊಂದಿಗೆ ಪೀಳಿಗೆಯಿಂದ ಪೀಳಿಗೆಗೆ ವ್ಯಕ್ತಿಯ ನಂಬಿಕೆ, ಆಚರಣೆ, ಸಂಪ್ರದಾಯ, ಸಾಮಾಜಿಕ, ಸಾಂಸ್ಕೃತಿಕ ಇತ್ಯಾದಿಯನ್ನು ಉಳಿಸಿಕೊಂಡುಬಂದಿದೆ. ಹೀಗಾಗಿ ವ್ಯಕ್ತಿ ಸಂಘಜೀವಿಯಾಗಿ ಪರಿವರ್ತನೆ ಹೊಂದಲು ತನ್ನ ಸಮಾಜದ ರೀತಿ ನೀತಿ ಹಾಗೂ ಸಮಾಜದಲ್ಲಿನ ಸ್ಥಾನಮಾನಗಳನ್ನು ಖಚಿತವಾಗಿ ತಿಳಿಯಲು ಭಾಷಾ ಮಾಧ್ಯಮವು ಅತ್ಯಗತ್ಯವಾಗಿದೆ. (ಶ್ರೀಧರ ಎಸ್.ಎನ್., ೧೯೯೫, ಪು–೨)

ಭಾಷಾ ವಿಜ್ಞಾನದ ಕಾರ್ಯಕ್ಷೇತ್ರ ಇಂದು ಬಹುವ್ಯಾಪಕವಾಗಿ ಬೆಳೆಯುತ್ತದೆ. ವಿಜ್ಞಾನ, ಸಮಾಜವಿಜ್ಞಾನ ಮಾನವಿಕ ವಿಭಾಗಗಳಿಗೆ ಪಸರಿಸಿಕೊಂಡಿದೆ. ಭಾಷಾ ವಿಜ್ಞಾನಿಗಳು, ಸಮಾಜಶಾಸ್ತ್ರಜ್ಞರು, ಮಾನವಶಾಸ್ತ್ರಜ್ಞರು ಮತ್ತು ಉಪಭಾಷಾ ವಿಜ್ಞಾನಿಗಳು ಸಮಾಜ ಮತ್ತು ಸಂಸ್ಕೃತಿಯಲ್ಲಿ ಇರುವ ಅನನ್ಯತೆಯನ್ನು ಕಂಡುಹಿಡಿಯಲು ಮಾಡಿದ ಪ್ರಯತ್ನಗಳ ಫಲವಾಗಿ ಸಾಮಾಜಿಕ ಭಾಷಾ

ವಿಜ್ಞಾನ (Sociolinguistics) ಎಂಬ ಹೆಸರನ್ನು ಮೊದಲು ಬಳಸಿದವರು ಹ್ಯಾವರ್ ಸಿ. ಕ್ಯೂರಿ ಅವರು South Speach Journal ಗೆ ಬರೆದ A projection of sociolinguistics; the relationship of speach to social status ಎಂಬ ಲೇಖನದಲ್ಲಿ ಮೊದಲಬಾರಿಗೆ Souciolinguistics ಎಂಬ ಹೆಸರನ್ನು ದಾಖಲಿಸಿದ್ದಾರೆ. ಹಾಗಾಗಿ ಸಮಾಜ ಮತ್ತು ಭಾಷೆಯ ಸಂಕೀರ್ಣ ಸಂಬಂಧದಿಂದ "ಸಾಮಾಜಿಕ ಭಾಷಾ ವಿಜ್ಞಾನ" ಎಂಬ ಅಧ್ಯಯನ ಶಾಖೆ ಭಾಷಾ ವಿಜ್ಞಾನದಲ್ಲಿ ಸ್ಥಾನ ಪಡೆದುಕೊಂಡಿದೆ.

ಸಮಾಜದಲ್ಲಿ ಪ್ರತಿಯೊಂದು ಸಮುದಾಯ ತನ್ನದೇ ಭಾಷೆ, ಸಮಾಜ ಮತ್ತು ಸಂಸ್ಕೃತಿಯನ್ನು ಹೊಂದಿರುತ್ತದೆ. ಹಾಗಾಗಿ ಸಾಮಾಜಿಕ ಭಾಷಾ ವಿಜ್ಞಾನದ ಕೆಲಸ ಸಮಾಜ ಮತ್ತು ಸಂಸ್ಕೃತಿಯಲ್ಲಿ ಅನಾವರಣಗೊಂಡಿರುವ ಭಾಷೆಯ ವಿವರಣೆಯೇ ಆಗಿದೆ. ಸಮಾಜ ಎನ್ನುವುದು ಸಾಮಾಜಿಕ ಸಂಬಂಧಗಳಿಂದ ನೇಯ್ದ ಬಲೆ. ಈ ಸಾಮಾಜಿಕ ಸಂಬಂಧವನ್ನು ನೇಯ್ದಿರುವ ಮುಖ್ಯ ಅಂಶ ಭಾಷೆ. ಈ ಹಿನ್ನಲೆಯಲ್ಲಿ ಭಾಷೆ ಸಮಾಜವನ್ನಾಗಲಿ, ಭಾಷೆಯನ್ನಾಗಲಿ ಬಿಟ್ಟು ಕಲ್ಪಿಸಿಕೊಳ್ಳಲಾಗುವುದಿಲ್ಲ. ಸಾಮಾಜಿಕ ಭಾಷಾ ವಿಜ್ಞಾನದ ವಸ್ತುವಿಷಯ ಸಮಾಜ ಮತ್ತು ಸಂಸ್ಕೃತಿಯಲ್ಲಿ ಅನಾವರಣಗೊಂಡ ಭಾಷೆಯ ವಿವರಣೆಯೇ ಆಗಿದೆ. ಇಲ್ಲಿ ಸಾಮಾಜಿಕ ಭಾಷಾ ವಿಜ್ಞಾನವು ಭಾಷೆ-ಸಮಾಜ, ಭಾಷೆ-ಸಾಮಾಜಿಕ ವರ್ಗ, ಭಾಷೆ-ಸಂದರ್ಭ, ಭಾಷೆ-ಪರಸ್ಪರ ವರ್ತನೆ ಮೊದಲಾದ ವಿಷಯಗಳ ಬಗೆಗೆ ಬೆಳಕು ಚೆಲ್ಲುತ್ತದೆ. ಒಂದು ಗೊತ್ತಾದ ಸಮಾಜ ಅಥವಾ ಸಂಸ್ಕೃತಿಯಲ್ಲಿ ಆಡುಗ-ಕೇಳುಗರ ಸಂಬಂಧ ಸಾಮಾಜಿಕ ವರ್ಗ ಮುಂತಾದವುಗಳಿಗೆ ಸಂಬಂಧಿಸಿದಂತೆ ಉಂಟಾಗುವ ಭಾಷಿಕ ವ್ಯತ್ಯಯಗಳು ಇಲ್ಲಿ ಕಂಡುಕೊಳ್ಳಬಹುದು. ಹಾಗೆಯೇ ಇಂತ ಭಾಷಿಕ ಭಿನ್ನತೆಯ ಸ್ವರೂಪವನ್ನು ಜಾತಿ (ಸಾಮಾಜಿಕ) ಉಪಭಾಷೆಗಳಲ್ಲಿ ಕಾಣಬಹುದು. ಈ ಚೌಕಟ್ಟಿನ ಒಳಗೆ ಸ್ತ್ರೀ-ಪುರುಷರ ನಡುವಣ ಭಾಷಿಕ ವ್ಯತ್ಯಾಸಗಳು, ಸಮಾಜದಲ್ಲಿ ಗಣ್ಯರನ್ನು, ಗುರುಹಿರಿಯರನ್ನು ಸಂಬೋಧಿಸುವಾಗ ಬಳಸುವಂತಹ ಗೌರವದ ನುಡಿಗಳು, ಮಕ್ಕಳನ್ನು ರಮಿಸುವಾಗ, ಸಂತ್ಯರಿಸುವಾಗ ಹಿರಿಯರು ಮಕ್ಕಳೊಂದಿಗೆ ಆಡುವ ಮಾತಿನ ಶೈಲಿ, ಹಿರಿಯರು, ಮಕ್ಕಳು, ಕಿರಿಯರು, ಸ್ತ್ರೀ-ಪುರುಷರು ಸಂಬೋಧಿಸುವಂತಹ ವಿಶೇಷ ರೂಪಗಳನ್ನು ಗಮನಿಸಬಹುದು.

ಈ ಹಿನ್ನಲೆಯಲ್ಲಿ ಕೊರಚ ಸಮುದಾಯದ ಜನರ ಸಾಮಾಜಿಕ ಲಕ್ಷಣ, ಸಾಂಸ್ಕೃತಿಕ ಹಿನ್ನಲೆ ಹಾಗೂ ಬದುಕಿನ ಪರಿಸರದಲ್ಲಿ ಅವರು ನಡೆಸುವ ಚಟುವಟಿಕೆಗಳಲ್ಲಿ ಕೌಟುಂಬಿಕ ಮತ್ತು ಸಾಮಾಜಿಕ ಸನ್ನಿವೇಶಗಳಲ್ಲಿ ಸಮುದಾಯದ ಭಾಷೆಯಲ್ಲಿ ವ್ಯವಹರಿಸುವುದು ಕಂಡುಬರುತ್ತದೆ. ಸಮುದಾಯದ ಭಾಷಾರೂಪಗಳನ್ನು ಸಾಮಾಜಿಕ ಭಾಷಿಕ ಘಟಕಗಳಾದ ಗಾದೆಗಳು, ಒಗಟುಗಳು, ಒಡಪುಗಳು, ಸಂಬಂಧವಾಚಕಗಳು, ಸಂಬೋಧನಾರೂಪಗಳು, ವ್ಯಕ್ತಿನಾಮಗಳು, ಮತ್ತು ವ್ಯವಹಾರಿಕ ಸಂದರ್ಭದ ಭಾಷಿಕಾಂಶಗಳ ಮೂಲಕ ಕೊರಚ ಜನಾಂಗದ ಸಮಾಜ, ಸಂಸ್ಕೃತಿ ಮತ್ತು ಭಾಷೆಯ ಕುರಿತು ಪ್ರಸ್ತುತ ಅಧ್ಯಯನದಲ್ಲಿ ವಿವರಿಸಲಾಗಿದೆ.

೫.೧. ಗಾದೆಗಳು

ಗಾದೆಗಳು ಒಂದು ಜೀವಂತ ಸಂಸ್ಕೃತಿಯ ಚಲನಶೀಲ ಪಳೆಯುಳಿಕೆಗಳು ಸಾವಿರಾರು ವರ್ಷಗಳ ಜೀವನಾನುಭವ, ಯಾವುದೇ ಒಂದು ಕ್ಷಣದಲ್ಲಿ ಕೆನೆಗಟ್ಟಿ ಪಡೆಯುವ ವಿಶಿಷ್ಟರೂಪ. ತನ್ನ ಮುಂದಿನವರಿಗಾಗಿ ಶ್ರಮವಹಿಸಿ ಕೂಡಿಟ್ಟ ವಿವೇಕ ಅವುಗಳನ್ನು ಮುಟ್ಟಿದ ತಕ್ಷಣ ಮಿಡಿಯುತ್ತದೆ. ಇಲ್ಲಿ ಬಹುಮುಖ್ಯವಾಗಿ ವಿವೇಕವನ್ನು ತಿದ್ದುವುದು, ನೀತಿಹೇಳುವುದು, ಸರಿದಾರಿ ತೋರುವುದು ಗಾದೆಗಳ ಪ್ರಮುಖ ಉದ್ದೇಶ. ಗಾದೆಗಳ ಹುಟ್ಟು ವಿಕಾಸದೊಡನೆ ಅವುಗಳ ಬಳಕೆಯ ಸಂದರ್ಭಗಳೂ ಪರಂಪರೆಯಿಂದ ಪ್ರಾಪ್ತವಾಗಿವೆ. ಹೀಗಾಗಿ ಜನಸಾಮಾನ್ಯರ ಬದುಕು ಮತ್ತು ಭಾಷೆಯೊಡನೆ ಅವಿನಾಭಾವ ಸಂಬಂಧವನ್ನು ಹೊಂದಿರುವ ಗಾದೆಗಳು ಸಾಂಸ್ಕೃತಿಕ ಪರಂಪರೆಯ ಅನನ್ಯ ಅಭಿವ್ಯಕ್ತಿಗಳಾಗಿ ಕಾಣಿಸಿಕೊಳ್ಳುತ್ತವೆ. ಗಾದೆಗಳು ಕಾಲಕಾಲಕ್ಕೆ ಸಮಾಜವು ತೆಗೆದುಕೊಳ್ಳುವ ನಿಲುವುಗಳು, ನೀತಿ ನಿರ್ಣಯಗಳು, ಅಲಿಖಿತ ಕಟ್ಟಳೆಗಳು ಅಲ್ಲ, ಅವು ಹೋಲಿಕೆಗಾಗಿ ಬಳಸುವ ಉಲ್ಲೇಖಗಳು. ಸಮಾಜದಲ್ಲಿ ಒಬ್ಬ ವ್ಯಕ್ತಿ ತಾನು ಜೀವನದಲ್ಲಿ ಕಂಡುಂಡ ಸತ್ಯವನ್ನೋ ತನಗೆ ಸರಿ ಅಥವಾ ತಪ್ಪು ಎನಿಸಿದನ್ನೋ ಮಾನವ ಸ್ವಭಾವ ಸಹಜವಾಗಿ ತನ್ನ ಮಕ್ಕಳಿಗೋ, ಮುಂದಿನವರಿಗೋ ಮಾರ್ಗದರ್ಶಿಯಾಗಲೆಂದು ಹೇಳಲು ಪ್ರಯತ್ನಿಸಿದವು ಆಗಿವೆ. ಅದು ಹೇಗೆ ಹೇಳಿದರೆ ನೆನಪಿನಲ್ಲಿ ಉಳಿಯುತ್ತದೆ. ಮನಸ್ಸಿಗೆ ನಾಟುತ್ತದೆ. ಮತ್ತೊಬ್ಬರಿಗೆ ಅಥವಾ ತಲೆಮಾರಿನಿಂದ ತಲೆಮಾರಿಗೆ ಮುನ್ನಡೆಯುತ್ತದೆ ಎಂದೆಲ್ಲಾ ಯೋಚಿಸಿ ತನ್ನ ಅನುಭವಕ್ಕೆ ಅಭಿವ್ಯಕ್ತಿ ಕೊಡಲು ಯತ್ನಿಸಿದ್ದಾನೆ. ಆ ಪ್ರಯತ್ನದ ಫಲವೇ ಸೂತ್ರಪ್ರಾಯವಾದ, ಪ್ರಾಸಬದ್ಧವಾದ ಅಲಂಕಾರಯುಕ್ತವಾದವು ಎಂದರೆ ಗಾದೆಗಳು.

ಭಾಷಾ ಹಿನ್ನೆಲೆಯಲ್ಲಿ ನೋಡುವುದಾದರೆ ಗಾದೆಗಳು ಒಂದು ವಿಶಿಷ್ಟ ಭಾಷಿಕ ಘಟಕಗಳಾಗಿವೆ. ಮತ್ತು ಭಾಷಾ ಸಮುದಾಯದಲ್ಲಿ ಹೆಚ್ಚು ಕ್ರಿಯಾಶೀಲವಾಗಿ ಬಳಕೆಯಲ್ಲಿರುವ ಭಾಷಾ ರೂಪಗಳು ಸಹ ಆಗಿವೆ. ಗಾದೆಗಳನ್ನು ಜನವಾಣಿ, ಅನುಭವ ಜನ್ಯವಾದ ಮಾತು, ನಾಣ್ಣುಡಿ (ನಾಡಿನನುಡಿ) ಲೋಕೋಕ್ತಿ (ಲೋಕದಲ್ಲಿನ ಮಾತು) ಲೋಕರೂಢಿಗಳು ಎಂದು ಅನೇಕ ರೀತಿಯಲ್ಲಿ ವಿದ್ವಾಂಸರು ವಿವರಿಸಿದ್ದಾರೆ. ಗಾದೆಗಳನ್ನು ಭಾಷಾ ಸಮುದಾಯಗಳಲ್ಲಿ ಯಾರೂ ಕೂಡ ಓದಿ ಅಥವಾ ಕಲಿತು ಬಳಸುವುದಿಲ್ಲ. ಗಾದೆಗಳು ಸಿದ್ದರೂಪಗಳಾಗಿದ್ದು ಪ್ರತೀ ಸಮುದಾಯದಲ್ಲೂ ಸಂದರ್ಭಾನುಸಾರವಾಗಿ ಬಳಕೆಗೊಳ್ಳುವುದು ಕಂಡುಬರುತ್ತದೆ. ಇಲ್ಲಿ ಗಾದೆಗಳ ಬಳಕೆ ಇಲ್ಲದ ಭಾಷಾ ಸಮುದಾಯವನ್ನು ಕಲ್ಪಿಸಿಕೊಳ್ಳಲು ಅಸಾಧ್ಯ. ಅಷ್ಟು ಪ್ರಮಾಣದಲ್ಲಿ ಅವುಗಳ ಬಳಕೆ ಇರುವುದನ್ನು ಭಾಷಾ ಸಮುದಾಯಗಳಲ್ಲಿ ಗುರುತಿಸಲಾಗಿದೆ. ಸಮುದಾಯಗಳಲ್ಲಿ ವ್ಯಕ್ತಿಗಳು ಮಾತಿಗೊಂದು ಗಾದೆ ಬಳಸುವುದನ್ನು ನೋಡಬಹುದು. ಹೀಗಾಗಿ ಗಾದೆಗಳು ಮಾತಿನ ಒಂದು ಕ್ರಮವಾಗಿರುವುದು ಕಂಡುಬರುತ್ತದೆ. ಗಾದೆಗಳ ಸ್ವರೂಪವನ್ನು ಗಮನಿಸಿದರೆ ಗಾದೆಗಳು ಒಳಗೊಳ್ಳದ ವಿಷಯಗಳೇ ಇಲ್ಲ. ಗಾದೆಗಳು ವ್ಯಕ್ತಿಯ ಗುಣಸ್ವಭಾವಗಳನ್ನು ಕುರಿತು ವರ್ಣಿಸುವಂತಹವುಗಳಾಗಿವೆ. ಇವುಗಳ

ಜೊತೆಗೆ ಗಾದೆಗಳು ಪುರುಷ ಮತ್ತು ಮಹಿಳೆಯರ ಸ್ವಭಾವಕ್ಕೆ ಸಂಬಂಧಿಸಿದ ವಿವರಗಳನ್ನು ಒಳಗೊಂಡಿರುತ್ತದೆ.

ಗಾದೆಗಳು ಮಾನವ ಜೀವನಾನುಭವದ ರಸಕೋಶ, ಕಿರುವಳ್ಳದಂತೆ ಕಂಡುಬರುವ ಗಾದೆ ಮಳೆಗಾಲದ ತುಂಬಿ ತೇಲಾಡುವ ನದಿ. ಜನಪದರ ಜೀವನ ವೈವಿಧ್ಯವನ್ನು ಅದಕ್ಕೆ ಹೊಂದಿದ ನೀತಿ ನಿಯಮಗಳನ್ನು ವ್ಯಕ್ತಿಯ ಗುಣಸ್ವಭಾವಗಳನ್ನು ಅಷ್ಟೇ ಅಲ್ಲ ಇಡಿಯಾಗಿ ಮಾನವ ಬದುಕನ್ನೇ ತನ್ನ ಒಡಲಲ್ಲಿ ಅಡಿಗಿಸಿಟ್ಟುಕೊಂಡಿರುವ ಗಾದೆಗಳು ದೈನಂದಿನ ಬದುಕಿನಲ್ಲಿ ಪಡೆದುಕೊಳ್ಳುವ ಸ್ಥಾನ ಅತಿ ಮಹತ್ವವಾದುದು. ಒಂದು ಕಾಲದ ಸಾಮಾಜಿಕ ಜೀವನ, ಚಾರಿತ್ರಿಕ ಸಂಗತಿ ಧಾರ್ಮಿಕ ಅಂಶ, ಕುಲಾಚಾರ, ನಂಬಿಕೆಗಳು ಮುಂತಾದ ಸಂಸ್ಕೃತಿಯಲ್ಲಿನ ಅಂಶಗಳು ಇಂದು ತಮ್ಮ ಅಸ್ಥಿತ್ವವನ್ನು ಕಳೆದುಕೊಳ್ಳುತ್ತಿವೆ. ಇವುಗಳನ್ನು ಅರಿಯುವಲ್ಲಿ ಗಾದೆಗಳು ಪ್ರಮುಖ ಪಾತ್ರ ವಹಿಸುತ್ತವೆ. ಹಾಗೂ ಸಮಾಜದಲ್ಲಿ ಹಾಸುಹೊಕ್ಕಾಗಿ ಸೇರಿಕೊಂಡಿರುವ ಮೇಲು-ಕೀಳು, ಸಿಹಿ-ಕಹಿ, ಕಟ್ಟು-ನಿಟ್ಟು, ಸಂಸಾರ, ರೀತಿ-ನೀತಿಗಳು, ಪ್ರೀತಿ-ಗೌರವ ಮುಂತಾದವುಗಳನ್ನು ಗಾದೆಗಳು ಒಳಗೊಂಡಿರುತ್ತದೆ. ಹೀಗಾಗಿ ಗಾದೆ ಆಕಾರದಲ್ಲಿ ಚಿಕ್ಕದಾದರೂ ಸಾವಿರಾರು ಮಾತಿನಲ್ಲಿ ಹೇಳಬಹುದಾಗಿದ್ದನ್ನು ನಾಲ್ಕು ಮಾತುಗಳಲ್ಲಿಯೇ ಒಳಗೊಂಡಿರುತ್ತದೆ.

ಸಮಾಜದಲ್ಲಿ ಪ್ರತಿಯೊಂದು ಭಾಷೆಯಲ್ಲಿಯೂ ಜಾತಿಗೆ ಸಂಬಂಧಿಸಿದಂತೆ ಕೆಲವು ಗಾದೆಗಳಿರುವುದು ಕಂಡುಬರುತ್ತವೆ. ಅಲ್ಲಿ ಪರಿಸರದ ಪ್ರಭಾವ ಸಮಾಜ, ಸಂಸ್ಕೃತಿಗಳು ಮೇಳೈಸಿರುತ್ತ ಅಂತೆಯೇ ಕೊರಚರ ಸಮುದಾಯದಲ್ಲಿರುವ ಗಾದೆಗಳು ಕೂಡ ಆ ಭಾಷೆಯ, ಪ್ರದೇಶದ ಸಮಾಜ ಸಂಸ್ಕೃತಿಗಳ ಕುರಿತ ವಿಷಯಗಳನ್ನು ಒಳಗೊಂಡಿರುತ್ತದೆ. ಇತರ ಭಾಷೆಗಳಲ್ಲಿರುವ ಗಾದೆಗಳಿಗೆ ಸಮಾನ ಗಾದೆಗಳು ಕೊರಚರಲ್ಲೂ ಕಂಡುಬರುತ್ತವೆ. ಕೊರಚರ ಗಂಡಸರು, ಹೆಂಗಸರು, ಎಲ್ಲರಲ್ಲಿಯೂ ಪ್ರಚಲಿತದಲ್ಲಿದ್ದು ಲಿಖಿತ ರೂಪದಲ್ಲಿಲ್ಲ. ಮಾತಿನ ಸಂದರ್ಭದಲ್ಲಿ ಗಾದೆಗಳನ್ನು ಉಪಯೋಗಿಸುತ್ತಾರೆ. ಇದು ಇವರ ಜೀವನದ ಒಂದು ಅವಿಭಾಜ್ಯ ಅಂಗವಾಗಿ ಸಂಸ್ಕೃತಿ ಮತ್ತು ಸಂಪ್ರದಾಯಗಳ ಅಖಂಡ ಭಾಗಗಳಾಗಿ ಉಳಿದಿದೆ. ಆದರೆ ಇಲ್ಲಿ ಹಳೆಯ ತಲೆಮಾರಿನವರಲ್ಲಿ ಇಂದಿಗೂ ಗಾದೆಗಳು ಅವರ ನಿತ್ಯ ಜೀವನದಲ್ಲಿ ಅಡಕವಾಗಿರುವುದು ಕಂಡುಬಂದರೆ, ಇಂದಿನ ಪೀಳಿಗೆಯವರಲ್ಲಿ ಗಾದೆಗಳು ಅಷ್ಟಾಗಿ ಪ್ರಚಲಿತವಿಲ್ಲದೇ ಇರುವುದು ಕಂಡುಬಂದಿದೆ. ಇವರು ಅದೆಂದೂ ಸೊಣ್ಣದೇ ಅನಗ (ಅದೇನೋ ಹೇಳತರಲ್ಲ ಹಾಗೆ) ಎಂದು ಮಾತಿನ ಮಧ್ಯದಲ್ಲಿ ಹೇಳುತ್ತಾರೆಯೇ ಹೊರತು ಸ್ಪಷ್ಟವಾಗಿ ಗಾದೆಗಳನ್ನು ಹೇಳುವವರು ಇಂದಿನ ಪೀಳಿಗೆಯಲ್ಲಿ ತುಂಬಾ ವಿರಳ.

ಗಾದೆಗಳು ಸಮುದಾಯವೊಂದರ ಪರಂಪರೆ, ವೃತ್ತಿ, ಜೀವನಕ್ರಮ ಹೀಗೆ ಅನೇಕ ವಿವರಗಳನ್ನು ಕುರಿತು ವಿವರಿಸುವುದನ್ನು ನೋಡಬಹುದು. ಇಲ್ಲಿ ಅಧ್ಯಯನಕ್ಕೆ ಕೊರಚರ ಸಮುದಾಯ ಸಂಬಂಧಿಯಾದ ಗಾದೆಗಳ ಕುರಿತು ವಿವರಿಸುವುದು ಪ್ರಮುಖ ಉದ್ದೇಶವಾಗಿರುತ್ತದೆ. ಜೊತೆಗೆ

ಕೊರಚರ ಸಮುದಾಯದಲ್ಲಿ ಬಳಕೆಯಲ್ಲಿರುವ ಕೆಲವು ಗಾದೆಗಳನ್ನು ಗುರುತಿಸಿ ವಿವರಿಸುವ ಪ್ರಯತ್ನ ಮಾಡಲಾಗಿದೆ. ಕೊರಚರು ಭಾಷಿಕವಾಗಿ ತಮಿಳು, ತೆಲುಗು, ಕನ್ನಡ ಮೂರು ಭಾಷೆಗಳ ಭಾಷಿಕಾಂಶಗಳನ್ನು ಹೊಂದಿದ ಭಾಷೆಯನ್ನಾಡುತ್ತಾರೆ. ಕೊರಚರ ಸಮುದಾಯ ಕುರಿತು ಸ್ಥಳೀಯ ಇತರೆ ಸಮುದಾಯದಲ್ಲಿ ಬಳಕೆಯಲ್ಲಿರುವ ಕೆಲವು ಗಾದೆಗಳನ್ನು ರೂಪಾಂತರಿಸಿ ಕೆಲವನ್ನು ಇವರು ಬಳಸಿದರು. ಇನ್ನೂ ಕೆಲವನ್ನು ನೇರವಾಗಿ ಶಿಷ್ಟಕನ್ನಡದಂತೆ ಬಳಸುತ್ತಾರೆ. ಹಾಗಾಗಿಯೇ ಕೊರಚರಲ್ಲಿ ಕನ್ನಡದ ಗಾದೆಗಳು ಹೆಚ್ಚು ಕಂಡುಬರುತ್ತವೆ.

ಸಮುದಾಯದ ಸಂಬಂಧಿಯಾದ ಕೆಲವು ಪ್ರಮುಖ ಗಾದೆಗಳನ್ನು ಈ ಕೆಳಗಿನಂತೆ ಕಾಣಬಹುದು.

ಕೊರಚ ಕೂಡಿಕೆಟ್ಟ, ದೊಂಬಿ ಅಗಲಿ ಕೆಟ್ಟ

ಈ ಗಾದೆಯನ್ನು ಕೊರಚರು ತಮ್ಮ ಭಾಷೆಯಲ್ಲಿ "ಕುಡು ಕೂಡಿ ಕೆಟ್ಟು, ಡಂಬ ಅಗಲಿ ಕೆಟ್ಟು" ಎಂದು ಬಳಸುತ್ತಾರೆ. ಇಲ್ಲಿ ನಿತ್ಯ ಅಲೆಮಾರಿತನ ಹೊಂದಿದಂತ ಕೊರಚರು ಊರಿಂದ ದೂರ ಅಡವಿಯಲ್ಲಿ ಉಳಿಯುತ್ತಿದ್ದರು ಮತ್ತು ಅಂದಿನ ದುಡಿಮೆ ಅಂದಿಗೆ ಎಂಬಂತೆ ಇದ್ದ ಅವರು ದುಡಿದು ಬಂದು ಅವರು ರಾತ್ರಿ ಖಂಡ–ಹೆಂಡದೊಂದಿಗೆ ದಿನ ಕಳೆಯುತ್ತಿದ್ದರು. ಮತ್ತು ನಿತ್ಯ ಗಲಾಟೆ–ಜಗಳ ಮಾಡುತ್ತಿದ್ದರು. ಹಾಗಾಗಿಯೇ ಇವರಲ್ಲಿ ಅವಿಭಕ್ತ ಕುಟುಂಬವನ್ನು ಕಾಣಲಾಗುವುದಿಲ್ಲ. ಒಂದು ವೇಳೆ ಅವಿಭಕ್ತ ಕುಟುಂಬವಾಗಿ ಇದ್ದರೆ ನಿತ್ಯ ಜಗಳ ಮಾಡಿಕೊಂಡು ಇರುತ್ತಾರೆ. ಹಾಗಾಗಿಯೇ ಕೊರಚರು ಕೂಡಿದರೆ ಅಲ್ಲಿ ಜಗಳ ಇದ್ದೇ ಇರುತ್ತದೆ. ಆದರೆ ದೊಂಬರು ಒಬ್ಬರಿಗೊಬ್ಬರು ಇದ್ದರೆ ಆಟ ಊಟ ಇಲ್ಲದಿದ್ದರೆ ಬದುಕು ದುಸ್ತರ ಆಗುತ್ತದೆ. ಹೀಗಾಗಿಯೇ ಕೊರಚರು ಕೂಡಿದರೆ ಕೆಡುತ್ತಾರೆ. ದೊಂಬರು ಅಗಲಿದರೆ ಕೆಡುತ್ತಾರೆ ಎಂಬಂತ ಗಾದೆಯು ಅರ್ಥ ನೀಡುತ್ತದೆ.

"ಕೊರಚನಿಗೆ ಒಂದು ಊರಲ್ಲ ಕೊಕ್ರೆಗೆ ಒಂದು ಕೆರೆಯಲ್ಲ" ಇದು ಕೊರಚರ ಅಲೆಮಾರಿತನವನ್ನು ಬಿಂಬಿಸುವ ಗಾದೆಯಾಗಿದೆ. ಅಲೆಮಾರಿ ಜನಾಂಗದ ಕೊರಚರು ಪ್ರಕೃತಿ ವಿಕೋಪದಿಂದಲೋ, ಅನ್ಯರ ಆಕ್ರಮಣದಿಂದಲೋ ಉದ್ಯೋಗದ ನಿಮಿತ್ತವಾಗಿಯೂ ಒಂದು ಕಡೆಯಿಂದ ಮತ್ತೊಂದು ಕಡೆ ವಲಸೆ ಹೋಗುವುದು ಇದೆ. ಹಾಗೇ ನಿತ್ಯ ಆಹಾರಕ್ಕಾಗಿ ಅಲೆದಾಡುತ್ತಿದ್ದ ಕೊಕ್ರೆಗೆ ಒಂದೇ ಕೆರೆಯಲ್ಲ ಸಂಪೂರ್ಣವಾದ ಆಹಾರ ದೊರೆಯುವುದಿಲ್ಲವಲ್ಲ. ಹಾಗೆಯೇ ಕೆರೆಯಿಂದ ಕೆರೆಗೆ ವಲಸೆ ಹೋಗುತ್ತದೆ. ಹಾಗೆಯೇ ಕೊರಚರು ತಮ್ಮ ಬದುಕಿನ ನಿರ್ವಹಣೆಗಾಗಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವಲಸೆ ಹೋಗುತ್ತಿದ್ದರಿಂದ ಈ ಗಾದೆಯು ಕೊರಚರ ಅಲೆಮಾರಿ ಬದುಕನ್ನು ಪ್ರತಿನಿಧಿಸುವಂತಿದೆ.

"ಕೋತಿಯ ಶವವನ್ನು ಕೊರಚರ ಸ್ಮಶಾನವನ್ನು ಕಂಡವರುಂಟೆ" ಎಂಬ ಗಾದೆ ಮಾತು ಹೇಳುವುದೇನೆಂದರೆ ಒಂದು ಅಲೆಮಾರಿ ಪ್ರವೃತ್ತಿ ಹೊಂದಿದ ಸಮುದಾಯವಾದುದರಿಂದ ಇವರಿಗೆ ಒಂದೇ ಕಡೆ ಇವರ ವಾಸ ಇರದೆ ಇರುವುದರಿಂದಾಗಿ ಸ್ಮಶಾನವನ್ನು ಕಾಣಲಾಗುವುದಿಲ್ಲ.

ಕೋತಿಯ ಶವವನ್ನು ಹಾಗೇ ಕಾಣಲಾಗುವುದಿಲ್ಲ. ಆದ್ದರಿಂದ ಒಂದೆಡೆ ನೆಲೆ ನಿಂತರೆ ಸ್ಮಶಾನವನ್ನು ಕಾಣಲು ಸಾಧ್ಯವಾಗುತ್ತದೆ.

"ಜಂಗಮನಿಗೆ ಜೋಳಿಗೆ ತಪ್ಪಿಲ್ಲ ಕೊರಚನಿಗೆ ಗುಳೆ ತಪ್ಪಿಲ್ಲ" ಈ ಗಾದೆ ಮಾತು ಸಹ ಮೇಲಿನ ಗಾದೆ ಮಾತುಗಳಂತೆ ಕೊರಚರ ವಲಸೆಯನ್ನು ಕುರಿತು ಹೇಳುತ್ತದೆ. ಮತ್ತು ಸಮುದಾಯ ಕುರಿತಾದ ಕೆಲವು ಗಾದೆಗಳನ್ನು ಮುಂದಿನಂತೆ ನೋಡಬಹುದಾಗಿದೆ.

ಕೊರಚನಿಗೆ ಕಟ್ಟೆಯಿಲ್ಲ ನಾಯಿಗೆ ಹಿಟ್ಟಿಲ್ಲ

ಕೊರಚರ ಜಾಲ ಮನೆಗೆ ಮೂಲ

ನರಮನುಷ್ಯರಲ್ಲೆಲ್ಲ ಕೊರಚ ಚಾಂಡಾಲ, ಪಕ್ಷಿಗಳಲ್ಲಿ ಕಾಗೆ ಚಾಂಡಾಲ

ಕೊರಚನಿಗೆ ದಾರಿಕೇಳೋ ಹೊತ್ತಿಗೆ ಹಳ್ಳಗುಂಟೋಗು ಅದ್ನಂತೆ

ಕೊರಚ ನ್ಯಾಯಕ್ಕೂ ಕುಂಚಿಟಿಗರ ಮದುವೆಗೂ ನನ್ನ ಎಕ್ಕಡನೂ ಹೋಗಲ್ಲ

ಕೊರಚರಿಗೇಕೆ ಕೋಲು ಕುಕ್ಕೆ ಎಣೆದೋದ್ಮೆಲೆ

ಕೊರಚನಿಗೊಂದು ಬೆಕ್ಕು ಪಂಡಿತನಿಗೊಂದು ಆನೆ.

ಈ ಮೇಲಿನ ಗಾದೆಗಳು ಕೊರಚರ ಸಮುದಾಯದ ಕುರಿತು ಇತರೆ ಸಮುದಾಯಗಳು ಅವರ ಸಮಾಜಿಕ ಸಂಸ್ಕೃತಿಯ ಕುರಿತಂತೆ ಬಳಕೆ ಮಾಡುವಂತಹ ಗಾದೆಗಳು ಆಗಿವೆ. ಹಾಗೆಯೇ ಯಾರಾದರು ತರ್ಲೆ ಮಾಡುತ್ತಿದ್ದರೆ ಅಥವಾ ಹೊಲಸು ಹೊಲಸಗಾಗಿ ಕಂಡರೆ ಅಂತವರನ್ನು "ಏನಲೇ ಒಳ್ಳೇ ಕೊರಚಾಡಿದಂಗೆ ಆಡಿತ್ತಿದಿಯಾ" ಕೊರಚರಿಗೆ ಹೋಲಿಸಿ ಇತರೆ ಸಮುದಾಯದವರು ಮಾತಾಡುತ್ತಾರೆ.

ಇಲ್ಲಿ ಕೊರಚರ ಬದುಕಿನ ಅನುಭವದ ಹಿನ್ನೆಲೆಯಲ್ಲಿ ಸೃಷ್ಟಿಯಾದ ಮತ್ತು ಗ್ರಾಮಸಮಾಜದಲ್ಲಿ ಚಲಾವಣೆಯಲ್ಲಿದ್ದ ಗಾದೆಗಳು ಇವರ ಬಾಯಲ್ಲಿ ಎಲೆಯಡಿಕೆಯಾಗಿದ್ದವು. ಶಿಷ್ಟ ಕನ್ನಡದ ಗಾದೆಗಳಂತೆ ಅರ್ಥಗಳು ಅವೇ ನುಡಿಗಟ್ಟುಗಳು ಕೊರಚರ ಗಾದೆಗಳಲ್ಲೂ ಪುನರಾವರ್ತನೆ ಆಗುವುದನ್ನು ನೋಡಬಹುದು. ಅವು ಈ ಕೆಳಗಿನಂತೆ ಇವೆ.

"ಕೇಟ್‌ಗುಂಡು ತಿಂಡ್ರಿಗು ಪೆಸ್ತುಗುಂಡ ತಿನು" (ಕೇಳಿ ತಿಂದ್ರೂ ಅಸಗಂಡು ತಿನ್ನು) ಈ ಗಾದೆಯಲ್ಲಿ ಕೊರಚರು ಅಲೆಮಾರಿ ಜೀವನ ಮಾಡುತ್ತಿದ್ದಾರೆಂದು ತಿಳಿಸುತ್ತದೆ. ಇವರು ಒಂದು ಊರಿನಿಂದ ಇನ್ನೊಂದು ಊರಿಗೆ ವಲಸೆಯಾಗಿ ಹೋಗುತ್ತಿದ್ದಂತ ಸಂದರ್ಭದಲ್ಲಿ ಮನೆಮನೆ ತಿರುಗಿ ಊಟ ಕೇಳಿ ತಂದು ತಿನ್ನುತ್ತಿದ್ದರು. ಹೀಗೆ ತಿನ್ನುತ್ತಿದ್ದ ಕೊರಚರಲ್ಲಿ ಒಂದು ನಂಬಿಕೆ ಕೇಳಿ ತಿಂದರೂ ಹೊಟ್ಟೆ ಅಸಿವಾದಗಲೇ ತಿನ್ನಬೇಕು ಎಂಬುದು ಸಮುದಾಯದ ನಿಷ್ಟೆಯಾಗಿದೆ.

"ತಿರಿ–ತಿರಿಗಿ ತಿಂಡ್ರಿಗೂ ಕೊಡಿಗುಂಡು ತಿನು" ಈ ಗಾದೆಯ ಅರ್ಥ "ತಿರಿಗಿಕೊಂಡು ತಿನ್ನೋದಾದರೂ ಕರೆದುಕೊಂಡು ತಿನ್ನು" ಎಂದು ತಮ್ಮ ಜೀವನಯಾತನೆಯ ಸಂದರ್ಭದ ತಿರುಗುವ ಪ್ರತಿಭೆ ಇಲ್ಲಿಯೂ ಬೆನ್ನುಬಿಟ್ಟಿಲ್ಲ. ಅದಕ್ಕಿಂತ ಮುಖ್ಯವಾಗಿ ತಾನೇ ಹಸಿವಿನಿಂದ ತತ್ತರಿಸುತ್ತಿರುವ ಜನಾಂಗ, ತನ್ನೊಳಗೆ ಇರುವಂತಹ ವಿವೇಕ ಮಾತ್ರ ಅಪರೂಪದ್ದಾಗಿದೆ. ತಂದ ಊಟದಲ್ಲಿ ಬೇರೊಬ್ಬರನ್ನು ಕರೆದುಕೊಂಡು ತಿನ್ನು ಎನ್ನುವುದಾಗಿದೆ. ಒಬ್ಬರನ್ನೊಬ್ಬರ ಸುಲಿದುಕೊಂಡು ತಿನ್ನುವುದನ್ನೇ ಕಲಿಸುತ್ತಿರುವ ಇಂದಿನ ದಿನಮಾನದಲ್ಲಿ ಈ ತತ್ವ ಬಹಳ ಮುಖ್ಯವಾಗುತ್ತದೆ. ಊರಿಂದೂರಿಗೆ ಅಲೆದಲೆದು ತಿರಿದುಕೊಂಡು ತಂದಿದ್ದರಲ್ಲೇ ಹಂಚಿಕೊಂಡು ಬದುಕಬೇಕೆಂಬ ಆಶಯ ಇಲ್ಲಿದೆ. ಪರಸ್ಪರ ದುಡಿದು ಹಂಚುಣ್ಣುವ ಕಾಡುವಾಸರ ವಿವೇಕ ಈ ಗಾದೆಯ ಸೃಷ್ಟಿಯಲ್ಲಿ ಅಡಗಿದೆ.

ಅದೇ ರೀತಿಯಾಗಿ ಕೊರಚರು ಒಂದು ಸೋಮಾರಿ ಪ್ರವೃತ್ತಿಯುಳ್ಳವರು ಹೆಚ್ಚು ಶ್ರಮವಹಿಸುವವರಲ್ಲ ಎಂಬುದಕ್ಕೆ ಸಂಬಂಧಿಸಿದಂತೆ ಒಂದು ಗಾದೆ ಇದೆ "ಸೇಂದ್‌ಗುಂಡ ತಿಂಗ್ರಿತಗಿಂತ ತಿರಜುಗುಂಡು ತಿಂಗ್ರಿದ ವಾಸಿ" (ಮಾಡಿಕೊಂಡು ಉಣ್ಣುವುದಕ್ಕಿಂತ ತಿರಿದು ತಿನ್ನೋದು ಲೇಸು) ಎಂಬ ಮಾತು ಕೊರಚರ ಜನಾಂಗದ ತಿರುಗುವ ಪ್ರಕ್ರಿಯೆಯನ್ನು ಗಾದೆಯಾಗಿಸಿಬಿಟ್ಟಿದೆ. ಊರಾಚೆ ಹಟ್ಟಿಕಟ್ಟುವ ಅಲೆದು ತಂದದ್ದನ್ನು ಬೇಯಿಸುವ, ಆತಂಕದ ನೆರಳಲ್ಲಿ ಬೇಯಿಸಿದ್ದನ್ನು ತಿನ್ನುವ ಕ್ಷಣಗಳು ಅವರನ್ನು ಇನ್ನಿಲ್ಲದಂತೆ ಪಾಡಾಗಿ ಕಾಡಿವೆ. ಹಾಗಾಗಿ 'ತಿರಿದು ತಿನ್ನೋದೆ ವಾಸಿ' ಎಂಬ ಅನುಭವವನ್ನು ಅವರಿಗೆ ಕಲಿಸಿಬಿಟ್ಟಿದೆ.

"ಅಡವಿಕೋರ್ ಇಕ್ಕರ್ಯೆಲ್‌ಕಿ ಸೆಳ್ಳಿ ಆಸರೆ" (ಕಾಡೊಳಗೆ ಇದ್ದವರಿಗೆ ಮರಗಿಡಗಳೇ ಆಧಾರ) ಈ ಗಾದೆಯು ಕೊರಚರ ಬುಡಕಟ್ಟು ಬದುಕಿನ ನೆನಪನ್ನು ಮಾಡಿಕೊಡುತ್ತದೆ. ದಟ್ಟವಾಗಿ ಬೆಳೆದ ಕಗ್ಗತ್ತಲಿನ ಕಾಡಿನೊಳಗೆ ಬೆರಗು ಹುಟ್ಟಿಸುವಂತೆ ತೋರುವ ಕೆಲವು ಮರಗಿಡಗಳೇ ಮುಖ್ಯವಾಗಿ ಆಲ, ಅರಳಿ, ಬೇಲ, ಮತ್ತಿ, ನೀರಳೆ ಇತ್ಯಾದಿ ಬುಡಕಟ್ಟು ಜನರಿಗೆ ದೈವವಾಗಿ ಕಂಡಿವೆ. ಅವು ತಮ್ಮ ಸಂತತಿಯನ್ನು ಅನಾದಿ ಕಾಲ ಕೈಹಿಡಿದು ಕಾಪಾಡಬಲ್ಲವು ಎಂಬ ಭರವಸೆಯ ಮೇಲೆ ಈ ಗಾದೆ ರೂಪ ತಳೆದಿದೆ. ಹಾಗೆಯೇ ಕೊರಚರ ಬದುಕು ಬಹುತೇಕ ಇಂದಿಗೂ ಸಹ ಯಾವುದೇ ಊರಿನಲ್ಲಿ ಅವರ ವಾಸವನ್ನು ಕಾಣುವುದು ತುಂಬಾ ವಿರಳವಾಗುತ್ತದೆ. ಊರಿಂದ ದೂರ ಐದಾರು ಮೈಲು ದೂರದಲ್ಲಿ ಹಟ್ಟಿಗಳನ್ನು ನಿರ್ಮಾಣ ಮಾಡಿಕೊಂಡಿರುವುದನ್ನು ಕಂಡುಬರುತ್ತದೆ. ಹಾಗೆಯೇ ಯಾವುದೇ ತರಹದ ಮೂರ್ತಿ ಪೂಜೆಗಳು ಇಲ್ಲದ ಕೊರಚರು ಪ್ರಕೃತಿ ಆರಾಧನೆಯನ್ನು ಗಾದೆ ಪ್ರತಿಮೀಕರಿಸಿದೆ. ಆದರೆ ಇತ್ತೀಚಿಗೆ ಇತರೆ ಸಮುದಾಯಗಳೊಂದಿಗೆ ಬದುಕನ್ನು ಮಾಡಲು ಪ್ರಾರಂಭಿಸಿದಂದಿನಿಂದ ಕೆಲವು ಮೂರ್ತಿಪೂಜೆಯನ್ನು ಮಾಡುವುದು ಕಂಡುಬರುತ್ತದೆ.

"ತಾನ್ ತಿಂಗ್ರಿದೇ ತೌಡು ಜತಿಗಿ ದುಂಡ್ರ ಮಾಡಗೆ ಬೇರೆ" (ತಾನು ತಿನ್ನೋದೆ ತೌಡು ಜೊತೆಗೆ ದನಗಳು ಬೇರೆ) ಈ ಗಾದೆಯಲ್ಲಿ ಕೊರಚರ ಬದುಕಿನ ಬಗೆಗೆ ಮಾಹಿತಿ ದೊರೆಯುತ್ತದೆ.

ಇಲ್ಲಿ ಕೊರಚರವನು ತಾನೇ ಮನೆ ಮನೆ ತಿರುಗಿ ಅನ್ನ ಉಣಬೇಕಾದರೆ ತಾನು ದನಗಳ ಸಾಕಿದಂತೆ ಒಂದು ಅಲೆಮಾರಿ ಪ್ರವೃತ್ತಿಯನ್ನು ಹೊಂದಿದ ಇವರು ಜವಾಬ್ದಾರಿಯನ್ನು ನಿಭಾಯಿಸುವ ಶಕ್ತಿ ಇಲ್ಲದಿರುವಾಗ ಹೆಚ್ಚುವರಿ ಕೆಲಸವನ್ನು ವಹಿಸಿಕೊಂಡಂತೆ ಆಗುತ್ತದೆ ಎಂಬ ಅಂಶವನ್ನು ಈ ಗಾದೆ ಮಾತು ತಿಳಿಸಿ ಹೇಳುತ್ತದೆ.

"ಊಡಡಡ್ಡಿ ಹಾರೋಟಿ ಏರಿಗಿ ಹೋಗರಪ್ಪ ಈಗೇಲು ದುಬೇಸ್ನು ಮಾತಿಂಡು ಸರಿತ್ತಿಂಚೋನು" (ಮನೆಯಲ್ಲಾ ಹಳ್ಳಗುಂಟ ಕೆರೆಗೆ ಹೋಗುವಾಗ ಸೀರುಣಿಕೆ, ಬಾಚಣಿಗೆಗೆ ಬಡಿದಾದ್ದರಂತೆ) ಈ ಗಾದೆ ಮಾತು ಕೊರಚರು ಪರಂಪರೆಯಿಂದ ಮಾಡಿಕೊಂಡು ಬಂದಿದ್ದ ವೃತ್ತಿಯನ್ನು ಜ್ಞಾಪಿಸುತ್ತದೆ. ಇಲ್ಲಿ ಮಳೆ ಬಂದು ಮನೆಯಲ್ಲಿನ ಪ್ರತಿಯೊಂದು ವಸ್ತು ಇಲ್ಲದಾಗೆ ಹೋಗುತ್ತಿದ್ದರೆ ಬಾಚಣಿಗೆಗೆ, ಸೀರುಣಿಕೆಗೆ ಬಡಿದಾಡುತ್ತಿದ್ದ ಎಂದರೆ ಅವುಗಳೊಂದಿದ್ದರೆ ಮತ್ತೇ ಜೀವನ ನಡೆಸಬಹುದು, ಬದುಕಬಹುದು ಎಂಬ ನಂಬಿಕೆ ಕಂಡುಬರುತ್ತದೆ. ಹಾಗೇ ಮೇಲುನೋಟಕ್ಕೆ ಅದು ಮನೆಯ ಆಸ್ತಿಯಲ್ಲ ಹೋಗುತ್ತಿದ್ದರೆ ಕೆಲಸಕ್ಕೆ ಬಾರದ ಎರಡು ವಸ್ತುಗಳಿಗೆ ಬಡಿದಾಡಿದಂಗೆ ಕಾಣಿಸುತ್ತದೆ. ಆದರೆ ಅದು ಅವರು ಪರಂಪರೆಯಿಂದ ಮಾಡಿಕೊಂಡು ಬಂದಂತ ಸಂಪ್ರದಾಯದ (ಸಾಂಸ್ಕೃತಿಕತೆಯ) ಪ್ರತೀಕವೆಂಬಂತೆ ಕಂಡುಬರುತ್ತದೆ.

ಅಲ್ಲದೆ ಕೊರಚ ಸಮುದಾಯದಲ್ಲಿ ಬಳಕೆಗೊಳ್ಳುವ ಇನ್ನು ಕೆಲವು ಗಾದೆಗಳನ್ನು ನೋಡಬಹುದಾಗಿದೆ. ಅವು ಮುಂದಿನಂತಿವೆ.

ಅಂಕಿಲ್ಲಾರ ಮೊಣಸು ಮುಗದಾಣಿಲ್ಲಾರ ಮಾಡಿಂದಾಟ (ಅಂಕೆ ಇಲ್ಲದ ಮನುಷ್ಯ ಮೂಗುದಾರ ಇಲ್ಲದ ಧನ ಇದ್ದಂಗ)

ಪರ್ರಾಸವಾತ ಪಾತೀರಿಲ್ಲ ಕುಡ್ರುವಾತ ಕೇಟತ್ತೀರಿಲ್ಲ (ಮಾದಿಗರ ಮಾತು ನೋಡಿದಂಗಿಲ್ಲ, ಕೊರಚರ ಮಾತು ಕೇಳಿದಂಗಿಲ್ಲ)

ಎದ್ದು ಏರಿಗೆಲಿಸಿಗೆ, ಬರಗೆಡ್ಡು ಬುರ್ರಿ ಗೆಲಿಸಿಂಚೋ (ಎತ್ತು ಏರಿಗೆಳೆದರೆ, ಎಮ್ಮೆ ಕೆಸರಿಗೆ ಎಳೆದಿತ್ತಂತೆ)

ಯೋಗಿ ಪಡದಾದು ಯೋಗಿಗೆ, ಜೋಗಿ ಪಡದಾದು ಜೋಗಿಗೆ (ಯೋಗಿ ಪಡೆದಿದ್ದು ಯೋಗಿಗೆ, ಜೋಗಿ ಪಡೆದಿದ್ದು ಜೋಗಿಗೆ)

ಊರಿಗೋರು ಇಕ್ಕಿರಾಳಲ್ಲ ಬೂದು ಗ್ವಾಡೆಂದು ಕಟ್ಟರಾಳಲ್ಲ (ಊರಲ್ಲಿ ಇರೋನಲ್ಲ ಬಿದ್ದು ಗ್ವಾಡೆ ಕಟ್ಟುವವನಲ್ಲ)

ನಾಯಿ ಬೊಗಳಸಿಂಡಿಗೆ ದೇವಲೋಕ ಆಳಕ್ಕದ (ನಾಯಿ ಬೊಗಳಿದರೆ ದೇವಲೋಕ ಹಾಳಗತ್ತೈತಾ)

ಪಾಪಿ ಸಮುದ್ರತ್ ನೆಡ್ಕೋನಿಗೂ ಮಾಕಾಲು ದಿಕ್ಕೆ ತನ್ನಿ (ಪಾಪಿ ಸಮುದ್ರದ ಮಧ್ಯಕ್ಕೋದ್ರು ಮೊಣಕಾಲು ಕೆಳಗೆ ನೀರು)

ದೇವ್ರು ತಾರದಿಂಡಿಗೂ ಪೂಜಾರಿ ತಾರಬೇಕ (ದೇವರು ಕೊಡತಾನಂದರು, ಪೂಜಾರಿ ಕೊಡಬೇಡ)

ಊರುಗು ಉಪಕಾರಿ ಊಟಗು ಮಾರಿ (ಮನೆಗೆ ಮಾರಿ ನೆರರಿಗೆ ಉಪಕಾರಿ)

ಕ್ವಾಣೆಗನಗು ಗುದ್ದಿ ಕಟ್ನತ್ತೀರಿ (ಕೋಣಕ್ಕೆ ಗುದ್ದಿ ಕಟ್ಟಿದಂಗೆ)

ಮೇಲಿನ ಎಲ್ಲಾ ಗಾದೆಗಳನ್ನು ಗಮನಿಸಿದರೆ ಈ ಕೊರಚರಿಗೆ ಸಂಬಂಧಿಸಿದ ಸಾಮಾಜಿಕ ವಿಚಾರಗಳು ದೊರಕುತ್ತವೆ. ಅವು ಕೊರಚ ಸಮುದಾಯದ ದಿನ ನಿತ್ಯ ಬದುಕಿನಲ್ಲಿ ಬಳಕೆಗೊಳ್ಳುವ ಗಾದೆಗಳೇ ಆಗಿವೆ. ಇವರು ಮಾತನಾಡುವ ಭಾಷೆಯ ಕುರಿತಾಗಿ ಹೇಳುತ್ತ ಭಾಷೆ, ತಮಿಳು, ತೆಲುಗು, ಕನ್ನಡ ಭಾಷೆಗಳಿಂದ ಕೂಡಿರುವುದರಿಂದ ಇವರ ಗಾದೆ ಮಾತುಗಳು ಇವರು ಪ್ರಸ್ತುತ ಬದುಕುತ್ತಿರುವ ಕನ್ನಡ ಪರಿಸರಕ್ಕೆ ಹೆಚ್ಚು ಹತ್ತಿರದವುಗಳು ಆಗಿವೆ. ಹಾಗೆಯೇ ಅವರು ಇತರೆ ಸಮುದಾಯದೊಂದಿಗೆ ಇರುವಂತಹ ಸಾಂಸ್ಕೃತಿಕ ಸಂಬಂಧವನ್ನು ಸಹ ಗಾದೆಗಳು ವಿವರಿಸುತ್ತವೆ. ಇಲ್ಲಿ ಮುಖ್ಯವಾಗಿ ಗಮನಿಸುವುದೊಂದಿದೆ. ಗಾದೆಗಳಲ್ಲಿ (ಕೊರಚರ ಗಾದೆಗಳಲ್ಲಿ) ಸಮುದಾಯದ ವ್ಯಕ್ತಿಯ ಚಂಚಲತೆ ಅವನ, ತಾತ್ಸಾರ ಮನೋಭಾವ, ಬೇಜವಾಬ್ದಾರಿತನ ಮುಂತಾದವುಗಳನ್ನು ಈ ಗಾದೆಗಳು ಹೇಳುತ್ತವೆ.

ಅಲೆಮಾರಿ ಬುಡಕಟ್ಟು ಸಮುದಾಯದವಾದ ಕೊರಚರಲ್ಲಿ ಪುರುಷಪ್ರಧಾನ ಗಾದೆಗಳು ಇದ್ದಂತೆ ಮಾತಿನ ಸಂದರ್ಭದಲ್ಲಿ ಸ್ತ್ರೀಯರನ್ನು ಕುರಿತಂತೆ ಗಾದೆಗಳು ಹುಟ್ಟಿಕೊಂಡಿರುವುದನ್ನು ಗಮನಿಸಬಹುದಾಗಿದೆ. ಯಾವುದೇ ಒಂದು ಸಮುದಾಯಗಳಲ್ಲಿ ಪರಸ್ಪರರು ಹೆಣ್ಣನ್ನು ಬೈಯಲಿಕ್ಕೆ ಅವಳು ಬದುಕಿನ ದಾರಿಯನ್ನು ತಪ್ಪಿದಾಗ ಹಲವು ಗಾದೆಗಳು ಹುಟ್ಟಿರುವುದು ಕಂಡುಬರುತ್ತದೆ.

ಸ್ತ್ರೀಯರನ್ನು ಕುರಿತಾಗಿ ಹೀಗೆಳೆಯುವ ಗಾದೆಮಾತುಗಳು ಹುಟ್ಟಿಕೊಂಡಿರುವುದನ್ನು ನೋಡುತ್ತೇವೆ. ಅದರಂತೆಯೇ ಕೊರಚರಲ್ಲಿಯೂ ಸಹ ಇವೆ. ಅದೂ ತಾನು ಅಲೆದಾಡಿದ ಪ್ರಧಾನ ಸಮಾಜದಿಂದ ಪಡೆದ ಬಳವಳಿಯಾಗಿದೆ. "ಹೆಂಗಸಿನ ಬುದ್ದಿ ಮೊಣಕಾಲ ಕೆಳಗೆ" (ಪೊಂಬುಳ್ಳ ಬುದ್ಧಿ ಮಾಕಾಲ್ ದಿಕ್) ಹಾಲು ನೋಡಿ ಎಮ್ಮೆ ತಗೋ, ತಾಯಿ ನೋಡಿ ಮಗಳ ಪಡಿ (ಪಾಲ್‌ಪಾತ ಬರೆಗಡ್‌ವಾಂಗು, ತಾಯಿಪಾತ್ ಪುಳ್‌ವಾಂಗು) ಎಂಬಂತಹ ಗಾದೆಗಳಲ್ಲಿ ಹೆಣ್ಣನ್ನು ನಾವು ಗಮನಿಸುತ್ತಿರುವ ರೀತಿಯು ಕಂಡುಬರುತ್ತದೆ. ಹಾಗೆಯೇ ಹೆಣ್ಣಿನ ಒಳ ಮನಸ್ಸನ್ನು ಮಿಡಿವ ಗಾದೆಗಳೂ ಅಲ್ಲಲ್ಲಿ ಇವೆ. ಆ ಕಡೆ ಗಂಡನೂ ಅಲ್ಲ, ಈ ಕಡೆ ಮಿಂಡನೂ ಅಲ್ಲ (ಆ ತಟ್ ಮಣಾಗಲ್ಲ, ಈ ತಟ್ ಮಿಂಡ್‌ಗಾರಲ್ಲ) ಎಂಬುದು ಒಂದು ಗಾದೆ ಇದೆ. ಇದರ ಜೊತೆಗೆ ಗಂಡ-ಹೆಂಡತಿಯರ ಜಗಳವನ್ನು ವರ್ಣಿಸುವ, ಬುದ್ಧಿವಾದ ಹೇಳುವ ಸೋಮಾರಿಗಳನ್ನು ಬೈಯ್ಯುವ ಹಲವು ರೀತಿಯ ಗಾದೆಗಳನ್ನು ನಾವು ಕಾಣಬಹುದಾಗಿದೆ.

"ಪೊಂಬುಳ್ಳ ಪರಕ್ರರದು ಮಾಣ, ಪರಾನಾಯ್ಲಿಗಿ ಕುಡುಕ್ರದು ಮೊಣ" (ಹೆಣ್ಣು ಹೆರುವುದೂ ಬೇಡ, ಹೆರವರಿಗೆ ಕೊಡುವುದು ಬೇಡ) ಈ ಗಾದೆ ಮಾತಿನಂತೆ ಧಾರೆಯೆರೆದ ಕರುಳಿನ ಕುಡಿಯು

ಸಂಕಟದಿಂದ ನರಳುತ್ತಿರುವುದನ್ನು ತಿಳಿದ ತಾಯಿಯ ಎದೆ ಸುಖವಾಗಿ ಸಂಸಾರವನ್ನು ಮಾಡಲೆಂದು ಕಳುಹಿಸಿದ ಮಗಳು ಕಣ್ಣೀರಿನಲ್ಲಿ ಕೈ ತೊಳೆಯುವಂತಾಯಿತಲ್ಲ ಎಂದು ದುಃಖ ಆದಾಗ ಮಗಳೇ ತಾಯಿಯನ್ನು ಸಂತೈಸುತ್ತಾಳೆ. "ಹಾಲು ಎರೆಯೋಕೆ ನಾವು ಹಣೇಲಿ ಬರೆಯೋಕೆ ನಾವೇ' ಎಂದು ಹೇಳುತ್ತಾಳೆ. ಹೆತ್ತೊಡಲು ಹೆಣ್ಣು ಕೊಟ್ಟವರು ಬೆನ್ನು ಕೊಟ್ಟವರಂತೆ ನಿರುಪಾಯರು ಮತ್ತು ಹೆಣ್ಣು ಕೊಟ್ಟ ಮನೆಗೆ ಅಡಿಯಾಳುಗಳಂತೆ ಸರಿ ಎಂದು ನೊಂದು ಹೆತ್ತವಳು ಸಂಕಟಕ್ಕೀಡಾಗುವುದು ಎಲ್ಲರ ಮನಸ್ಸನ್ನು ಕಲಕುತ್ತದೆ. ಈ ಪದ್ಧತಿಯು ಕೊರಚರಲ್ಲಿ ಸ್ವಲ್ಪ ಹೆಚ್ಚಾಗಿ ಕಂಡುಬರುತ್ತದೆ.

"ಪಟ್ಟಕಟ್‌ನ್ಗೆಂದು, ಮುತ್ತ್ ಕಟ್‌ನ್ಗೆಂದು, ಕುಟ್ಟಿಲ್ಲಾರಪ್ಪ" ಈ ಗಾದೆಯು ಹೆಣ್ಣಿನ ತಾಯ್ತನದೊಡನೆ ಸಮೀಕರಣ ಮಾಡಲಾಗಿ ಹೆಣ್ಣಿನ ಸ್ಥಾನಮಾನವನ್ನು ನಿರ್ಧರಿಸುವಂತಹದ್ದು. ಅಂದರೆ "ಪಟ್ಟಕಟ್ಟಿದರೇನು, ಮುತ್ತು ಕಟ್ಟಿದರೇನು ಒಂದು ಮಗುವಿಲ್ಲದೆ" ಎಂಬರ್ಥವನ್ನು ಗಾದೆ ನೀಡುತ್ತದೆ. ಕೊರಚರಲ್ಲಿ ಮಕ್ಕಳ ಹೆತ್ತವಳಿಗಷ್ಟೇ ಪುರಸ್ಕಾರ ಇಲ್ಲವಾದರೆ ಆಕೆಯ ಬಾಳು ಬಾಳೆ ಎಲೆಯಂತೆ ಎಂದು ಭಾವಿಸುತ್ತಾರೆ. ಮಕ್ಕಳಿಗಿಂತಲೂ ಮಿಗಿಲಾದ ಭಾಗ್ಯವೂ ಅವರಿಗ್ಯಾವುದು ಇಲ್ಲ ಮಕ್ಕಳಿಲ್ಲದ ಸಿರಿ ಹೆಣಕ್ಕೆ ಶೃಂಗಾರ ಮಾಡಿದಾಗ ಎಂದೇ ಅವರ ನಂಬಿಕೆ ಮತ್ತು ಅಷ್ಟೇ ಅರ್ಥಹೀನ ಬದುಕಾಗುತ್ತದೆ. ಹೀಗೆ ಮಕ್ಕಳಿಲ್ಲದಿದ್ದರೆ ಎಲ್ಲವೂ ವ್ಯರ್ಥವೆಂಬಂತೆ ಹೆಣ್ಣನ್ನು ನಡೆಸಿಕೊಳ್ಳುತ್ತಾರೆ.

"ತಾಯಂತೆ ಪುಳ್ಳ, ನೂಲಂತೆ ಕ್ವಾಕ" (ತಾಯಿಯಂತೆ ಮಗಳು, ನೂಲಂತೆ ಸೀರೆ) ಹೆಣ್ಣಿಗೆ ಮಕ್ಕಳನ್ನು ಹೆರುವುದು ಎಷ್ಟು ಕಷ್ಟವೋ ಅಷ್ಟೇ ದುಸ್ತರವಾದುದು. ಅವರ ಪಾಲನೆ ಪೋಷಣೆ "ಮಕ್ಕಳನ್ನು ಸಾಕಬೇಕಾದರೆ ಮಕ್ಕಳಷ್ಟೇ ಹೇಸಿಕೆ ತಿನ್ನಬೇಕು" ಎಂಬ ಗಾದೆಯಂತೆ ಮಕ್ಕಳು ಅಡ್ಡದಾರಿಯನ್ನು ಹಿಡಿಯದಂತೆ ಬದುಕನ್ನು ಉತ್ತಮವಾಗಿ ರೂಪಿಸಿಕೊಳ್ಳಲು ನೆರವಾಗುವಳು ತಾಯಿ, "ಮೂರು ವರ್ಷದ ಬುದ್ಧಿ ನೂರು ವರ್ಷದವರೆಗೆ" ಆದ್ದರಿಂದ ಬಾಲ್ಯದಿಂದಲೇ ಮಕ್ಕಳನ್ನು ತಿದ್ದಿ ಬೆಳೆಸುತ್ತಾಳೆ. ಗಿಡವಾಗಿದ್ದಾಗಲೇ ಬಗ್ಗಿಸಬೇಕೆಂದು ಎಳೆಯ ವಯಸ್ಸಿನಲ್ಲೇ ಮಕ್ಕಳ ಸರ್ವತೋಮುಖ ಬೆಳವಣಿಗೆಗಾಗಿ ಶ್ರಮಿಸುತ್ತಾಳೆ. ಹೆತ್ತವರಿಗೆ ಹೆಗ್ಗಣ ಮುದ್ದು ಎಂಬಂತೆ ಹೆಣ್ಣು ಮಗುವೆಂದು ಸಮಾಜ ಜರಿದರೆ ಒಂಭತ್ತು ತಿಂಗಳು ಹೊಟ್ಟೆ ಹಿಡಿದವಳು ಹದಿನಾರು ವರ್ಷ ಮನೆ ಹಿಡಿಯಳೇ ಎಂಬ ದಿಟ್ಟತನ ತೋರುತ್ತಾಳೆ. ಹಾಗಾಗಿಯೇ ತಾಯಿಯಂತೆಯೇ ಮಗಳಿರುತ್ತಾಳೆಂಬ ಜನಪದರ ನಿರೀಕ್ಷೆಯಿಂದಾಗಿ ತಾಯಿಯು ತನ್ನ ಹೆಣ್ಣು ಮಗಳನ್ನು ಬೆಳೆಸುವ ಸಂಪೂರ್ಣ ಹೊಣೆಗಾರಿಕೆಯನ್ನು ಹೊತ್ತಿರುತ್ತಾಳೆ.

ಅಷ್ಟೇ ಅಲ್ಲದೆ ಹೆಣ್ಣಿಗೆ ಸಂಬಂಧಿಸಿದಂತೆ ಕೊರಚರಲ್ಲಿ ಬಳಕೆಯಾಗುವ ಕೆಲವು ಗಾದೆಗಳನ್ನು ಮತ್ತು ಕೆಳಗಿನಂತೆ ನೀಡಲಾಗಿದೆ. ಅದರಲ್ಲಿ ಕೆಲವು ಶಿಷ್ಟಕನ್ನಡದಲ್ಲಿಯೂ ಇವೆ.

"ಪೊಂಬುಳಗು ಹಠ ಇಕ್ಕಿಂಗುದು, ಅವಣಿಕೆರಕು ಚಟ ಇಕ್ಕಿಂಗುದು" (ಹೆಣ್ಣಿಗೆ ಹಠ ಇರಬಾರದು, ಗಂಡಿಗೆ ಚಟ ಇರಬಾರದು)

"ಕುಡ್ತ ಪೊಂಬುಳ್ಳ ಕುಲ್ತು ಬೇಲಿಂದಾಟ" (ಕೊಟ್ಟೆಣ್ಣು ಕುಲದ ಹೊರಗಿದ್ದಂಗ)

"ನಾಯಂತರದಾನಿಗೆಂದು ತಾಯಿಕ್ಕಿಬೇಕು ಊಟ್ಲಿ" (ನಾಯಿಯಂತಕಿಯಾದರು ತಾಯಿ ಇರಬೇಕು ಮನೆಲಿ)

ಮಗ ಹೋನಿಗೆ ಕೇಡು ಮಕ್ಯಾ ಆನಿಗೆ ಕೇಡಾ (ಮಳೆ ಹೋದರೆ ಕೇಡು ಮಕ್ಕಳಾದರೆ ಕೇಡೇ?)

ಸಂತಗೋರು ತಾಯಿ ಪಾತಿಗೆ ಊಟ್‌ಗೋಯಿ ಪುಳ್ಳು ಪಾಕರದು ಮಾಣ" (ಸಂತೆಯಲ್ಲಿ ತಾಯಿ ನೋಡಿದರೆ ಮನೆಯಲ್ಲಿ ಮಗಳನ ನೋಡದೇಬೇಡ)

ಶಿಷ್ಟಕನ್ನಡದ ಗಾದೆಗಳು (ಹೆಣ್ಣಿಗೆ ಸಂಬಂಧಿಸಿದಂತೆ)

ಅಕ್ಕಿಯಂತೆ ಅನ್ನ ಅಮ್ಮನಂತೆ ಮಕ್ಕಳು.

ಹೆಣ್ಣು ಹೆರವರಿಗೆ, ಗಂಡು ಮನೆಗೆ.

ಹೆಣ್ಣು ಹುಟ್ಟಿದರೆ ಹುಣ್ಣು ಹುಟ್ಟಿದಂತೆ, ಗಂಡು ಹುಟ್ಟಿದರೆ ಗುದ್ದಲಿಯ ಗೆಣೆಯಂತೆ.

ತಾಯಂತೆ ಶೀಲ ನಾಯಂತೆ ಬಾಲ.

ಅಮ್ಮನ ಮನಸ್ಸು ಹಾಲಂಗ, ಮಗಳ ಮನಸು ಬೆಲ್ಲದಾಂಗ.

ಅಪ್ಪನ ಮನೇಲಿ ಛೇ ಅನಿಸಿಕೊಂಡಾಕಿ ಅತ್ತೆ ಮನೇಲಿ ಸೈ ಅನಿಸಿಕೊಂಡಾಳ.

ಮಗಳು ಮಾಡಿದಂಗೆ ಜನ ಆಡೋದು.

ಹೆಣ್ಣು ಹೆತ್ತೋರು ಹಣ್ಣಾದರು, ಗಂಡು ಹೆತ್ತೋರು ಗುಂಡಾದರು.

ತಾಯಿ ಮಗಳ ಜೋಡು ತಾಳಿ ಸಮಾನ ನೋಡು.

ತಾಯಿ ಇದ್ದರೆ ತೌರು, ತಂದೆ ಇದ್ದರೆ ಬಳಗ.

ತಾಯಿ ಇರೋತನಕ ತವರು, ಪ್ರಾಯ ಇರೋತನಕ ಪೊಗರು.

ತಾಯಿ ಕರಳೂ, ಹೊಂಗೆ ನೆರಳೂ ಒಂದೇ

ತಾಯಿಯಿಲ್ಲದ ತೌರು, ನೀರಿಲ್ಲದ ಕೆರೆ.

ನಿರ್ವಾಣಿ ಕೈಯಾಗ ಹರವಿಕೊಟ್ಟರೆ, ಹರವಿ ಒಯ್ದು ಗಿರವಿಲಿ ಇಟ್ಟಿತಂತೆ.

ಗಂಡ ಇಲ್ಲದವಳು ಗರತಿಯಲ್ಲ, ಮಂಡೆ ಇಲ್ಲದ್ದು ತುರುಬಲ್ಲ.

ಸಾವಿರ ಕೊಟ್ಟರು ಸವತಿ ಮನೆಬೇಡ.

ಉಟ್ಟು ಸೀರೆ ಗಟ್ಟಿ ಇದ್ರ ಬರುವ ಮಿಂಡ ಏನು ಮಾಡ್ತಾನೆ.

ಹೆಂಡತಿ ಹೆಗ್ಗಡತಿ ಆದ್ರೆ ಗಂಡ ಮೂಳನಾಯಿಗಿಂತ ಕಡೆ.

ತಾಯಿ ಬಯ್ಯಬಾರದು ನಾಯಿ ಕೊಯ್ಯಬಾರದು.

ಬ್ಯಾಸರ ಕಳಕೊಳ್ಳಾಕೆ ಬಸಿರಾದಂತೆ.

ಉಪ್ಪಿಕ್ಕಿದ ತಾಯಿನ ಮುಪ್ಪಿನ ತನಕ ನೆನೆಬೇಕು.

ಕೊರಚ ಸಮುದಾಯದ ಸಂಸ್ಕೃತಿಗೆ ಸಂಬಂಧಿಸಿದಂತೆ ನಾಗರೀಕತೆ, ಬುದ್ಧಿ ಮತ್ತು ಇಲ್ಲಿ ಮುಖ್ಯವಾಗಿ ಗಮನಿಸಬೇಕಾದುದೆಂದರೆ ಯಾವುದೇ ಒಂದು ಗಾದೆಯನ್ನು ಇವರು ಬಳಸುವಾಗ ಕನ್ನಡದಲ್ಲಿ ಅದೇನೋ ಅಂತಾರಲ್ಲ ಎಂಬಂತೆ ಕೊರಚರು ಸಹ ಅದೆಂದೊ ಇಂಗೇದೆ ಅನಗ ಎಂದು ಬಳಸುವುದು ಕಂಡುಬರುತ್ತದೆ. ಇಲ್ಲಿ ಮನೋವಿಕಾಸಗಳಿಗೆ ಸಂಬಂಧಿಸಿದ ಅಂಶಗಳನ್ನು ಗಾದೆಗಳು ಒಳಗೊಂಡಿರುತ್ತವೆ. ಈ ನೆಲೆಯಲ್ಲಿ ಕೊರಚರ ಜನಾಂಗದ ಸಾಂಸ್ಕೃತಿಕ ಅಂಶಗಳ ಮೇಲೆ ಬೆಳಕು ಚೆಲ್ಲುವ ಗಾದೆಗಳನ್ನು ಸಂಗ್ರಹಮಾಡಿಕೊಂಡು ಅವುಗಳ ವಿಷಯ ವಸ್ತುಗಳಿಗೆ ಅನುಗುಣವಾಗಿ ಈ ಕೆಳಗಿನಂತೆ ವಿಂಗಡಿಸಿಕೊಳ್ಳಲಾಗಿದೆ. ಹಾಗೆಯೇ ಈ ಗಾದೆಗಳು ಶಿಷ್ಟಕನ್ನಡದಲ್ಲಿಯೂ ಇವೆ. ಆದರೆ ಕೆಲವೊಂದು ಕಡೆಯಲ್ಲಿ ಗಾದೆಗಳನ್ನು ಕೊರಚರು ರೂಪಾಂತರಿಸಿಕೊಂಡಿರುವುದು ಕಂಡುಬರುತ್ತದೆ.

ವೃತ್ತಿಗೆ ಸಂಬಂಧಿಸಿದಂತೆ ಗಾದೆಗಳು

"ಪಣಿಲ್ಲರ ಬಡಿಗಿ ಮಗಟ್ ಗುದ್ ಕೆತ್ತಿಂಚೋನು" (ಕೆಲಸ ಇಲ್ಲದ ಬಡಿಗಿ ಮಗನ ಮುಕುಳಿ ಕೆತ್ತಿದ್ದನಂತೆ)

"ತೆಕ್ಕಟ ಮನಸು ತೆಕ್ಕನಿಗೆ ಗೊತ್ತು" (ಕಳ್ಳನ ಮನಸು ಕಳ್ಳನಿಗೆ ಗೊತ್ತು)

"ತೆಕ್ಕನಿಗು ಎಂದ ಗೊತ್ತು ಊಟ್ ಬಡತನ" (ಕಳ್ಳನಿಗೇನು ಗೊತ್ತು ಮನೆಯ ಬಡತನ)

"ಗೂರ್ಕ ಎಂಡ್ರಿಗೋ ರಾಜ ಆಗದಿಲ್ಲ"

(ಗೂರಕ ಎಂದಿಗೂ ರಾಜನಾಗುವುದಿಲ್ಲ)

"ತೆಕ್ಕು ದೇವ್ರುಗು ತಕ್ಕಡಿ ಪೂಜೆ" (ಕಳ್ಳ ದೇವರಿಗೆ ತಕ್ಕಡಿ ಪೂಜೆ)

ಬೇಸಾಯಕ್ಕೆ ಸಂಬಂಧಿಸಿದ ಗಾದೆಗಳು

"ಕಳಿ ಹೋಟು ಊಡು, ಗೊಬ್ಬರ ಹೋಟು ಕೊಲ್ಲ ಎಂಡ್ರು ಕೆಡುದಿಲ್ಲ" (ಅನ್ನ ಹಾಕಿದ ಮನೆ, ಗೊಬ್ಬರ ಹಾಕಿದ ಹೊಲ ಎಂದೂ ಕೆಡುವುದಿಲ್ಲ)

"ಮಗ ಇಲ್ಲರ ಪೈರು (ಸಸಿ), ತಾಯಿ ಇಲ್ಲರ ಮಗ ಇಂದಾಟ" (ಮಳೆ ಇಲ್ಲದ ಪೈರು ತಾಯಿ ಇಲ್ಲರ ಮಗು ಇದ್ದಂಗೆ)

"ಕೊಲ್ಯಾ ಇತ್ತೀ ಪಾರು, ತರ್ರ ಅಲಿಕಿ ಪಾರು" (ಹೊಲ ಬಿತ್ತಿ ನೋಡು, ನೆಲ ಸಾರಿಸಿ ನೋಡು)

"ಹದತ ಪಾತು ಹರಗಬೇಕು, ತಿಥಿ ಪಾತು ಇತ್ತಬೇಕು" (ಅಡಿ ಕೆಟ್ಟ ಜನರಿಲ್ಲ, ಬಿತ್ತಿ ಕೆಟ್ಟ ಗದ್ದೆಯಿಲ್ಲ)

"ಕಂಡಾಸ್ ಕೊಲ್ಲ ಸೇಯತ್ರತಗಿಂತ, ಸಂತ ತುಂಡು ಭೂಮಿ ಸೇಯ್ತುದು ನಲ್ಲಗ" (ಕಂಡೋರು ಗದ್ದೇ ಮಾಡೋದಕ್ಕಿಂತ ಸ್ವಂತ ತುಂಡು ಭೂಮಿನೇ ಲೇಸು)

ಗಿಡ-ಮರಗಳಿಗೆ ಸಂಬಂಧಿಸಿದ ಗಾದೆಗಳು

"ಮರತಟ ಕಾವು ಮರತ್‌ಗೆ ಕುತ್ತು" (ಮರದ ಕಾವು ಮರಕ್ಕೆ ಕುತ್ತು)

"ವಳಿ ಪಕ್ಕಲಿ ಮರತ್‌ಗು ತನ್ನಿ ಎಂತಗು" (ಹೊಳ ಪಕ್ಕದ ಮರಕ್ಕೆ ನೀರು ಏಕೆ)

ಬಡಕ ನಾಯಿ ದಪ್ಪಾಗದಿಂಡಿಗೆ ಟೊಳ್ಳು ಮರ ಸಿಗರನತ್ತೀರಿ (ತೆಳ್ಳನೆ ಊದದಂದರೆ ನಾಯಿ ಟೊಳ್ಳು ಮರ ಚಿಗುರಿದ ಹಾಗೆ)

ಸೆಡಿಂದಪ್ಪಾದೇ ವಂಗ ಮಾಟಾದೆಪ್ಪ ಮರ್‍ರಾನಪ್ಪ ವಂಗಾದ (ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ)

ಪದಾರ್ಥಗಳಿಗೆ ಸಂಬಂಧಿಸಿದ ಗಾದೆಗಳು

ಪಾಲು ಕುಡಸಾಯ ಪಾಸಿಹೋಕದ (ಹಾಲು ಕುಡಿದವರು ಹಳಸ್ತಾರ)

ಕೊದ್ದುಂಡು ತಿಂಗಿರಾಯ್ಲಿಗಿ ಗಂಪ ಕಳಿ ಆನಿಗು ಆಗದಿಲ್ಲ (ಕುಳಿತು ತಿನ್ನುವವರಿಗೆ ಪುಟ್ಟಿಕೂಳು ಆದರು ಆಗುವುದಿಲ್ಲ.

ದಿನಾ ಸೆದ್ದಿಕಳಿ ತಿಂಗಿರಾಯ್ಲಿಗಿ ಶ್ಯಾವಿಗಿ ಚಿಂತ (ತಂಗಳು ತಿನ್ನುವವರಿಗೆ ಶ್ಯಾವಿಗಿ ಯೋಚನೆ)

ತೇನಿ ಹೊಡಸಾಯ ಕ್ಕೀ ನೆಕ್ಕದಿಕ್ಯಾದ (ಜೇನು ಮುರುದೋನು ಕೈ ನೆಕ್ಕದೇ ಇರತಾನ)

ಅಡ್ಡೇರ್ ಟೂಡು ದ್ವಾಸಿ ತೊಟೇ (ಎಲ್ಲಾರ ಮನೆಯ ದೋಸೆ ತೂತೆ)

ಅಗಳ್‌ಗಿಲ್ಲಾರಾಳ್ ಅರಮನೆ ಕಟ್ಟಿಪಿಚ್ಚಿಂಚೂನು (ಅಗಳ್ ಇಲ್ಲದವನು ಅರಮನೆ ಕಟ್ಟಿದನಂತೆ)

ಪ್ರಾಣಿ-ಪಕ್ಷಿಗೆ ಸಂಬಂಧಿಸಿದ ಗಾದೆಗಳು

ಬರಗೆಡ್ಡು ಸತ್ತಪ್ಪ ಅದಟ ಪಾಲಟ ಬೆಲಿ ಗೊತ್ತಾಗರದು (ಎಮ್ಮೆ ಸತ್ತಮೇಲೆ ಅದರ ಹಾಲಿನ ಬೆಲೆ ಗೊತ್ತಾಗುವುದು)

ನಾಯಿ ಸಂತ್ಗಿ ಹೊನುತ್ತೀರಿ (ನಾಯಿ ಸಂತೆಗೆ ಹೋದಂಗೆ)

ಮಾಳ್ ಮೇಕ್ಕೆಂಗ ನಕಪೋತು ಉಟ್ಟಾಟ (ದನ ಕಾಯೋಕೆ ಚಿರತೆ ಬಿಟ್ಟಂತೆ)

ಕೀ ಗಾಗ ಮಾಟರ ಕಾಕ ಕುಂಡ ಪೆಚ್ಚಿಗುಂಡಾಟ (ಕೈಲಾಗದ ಕಾಗೆ ಮಡಕೆ ಹೊತ್ತುಕೊಂಡಂತೆ)

ಕಾಕ್ ಕೊಂದ್ಗರತುಗು ರೆಂಬಾ ಹೊಡಿರತಗು (ಕಾಗೆ ಕೂಡೋಕೆ ಕೊಂಬೆ ಮುರಿಯೋಕೆ ಸರಿಹೋಯಿತು)

ಸಾಗ್ರ ಮಾಟಗ ಮೇಯ್ರಿ ಸಿಂತ (ಸಾಯೋ ಎತ್ತಿಗೆ ತಿನ್ನೋ ಚಿಂತೆ)

ನಾಯಿ ಅಂಟನ ಕಳಿ ನಾಯಿಗೆ (ನಾಯಿ ಮುಟ್ಟಿದ ಊಟ ನಾಯಿಗೆ)

ರಾಜಟ ಕುದುರಿ ನೆಡಮಂತ್ರಲೇ ಮುದಿದಾಯಿಂಚೋ (ರಾಜನ ಕುದುರೆ ನಡುಮಧ್ಯೆ ಮುಗಿದಾಗಿತಂತೇ)

ಮಾಟ್ನೇ ಪೆಚ್ಚನಾಯ್ಲಿಗಿ ತ್ವಾಕ ವಜ್ಜಾಕದ (ಎತ್ತನ್ನೇ ಎತ್ತಿದವರಿಗೆ ಬಾಲ ಬಾರ ಆಗುತ್ತದೆಯೇ)

ಒಂಡು ಮಾಡು ಮಾಡಲ್ಲ, ಒಂಡು ಮಗ ಮಗಲ್ಲ (ಒಂದು ಎತ್ತು ಎತ್ತಲ್ಲ, ಒಬ್ಬ ಮಗ ಮಗನಲ್ಲ)

ನಾಯಿಗಿ ಸೊಣ್ಣನ ಇಂಡಿಗೆ ನಾಯಿಟ ತ್ವಾಕಿಕೆ ಸೂಣ್ಣಿಂಚೋನು (ನಾಯಿಗೆ ಹೇಳಿಧರೆ ನಾಯಿಯ ಬಾಲಕ್ಕೆ ಹೇಳಿದ್ದರಂತೆ)

ಗಿಳಿತೀರಿ ವಳತು ಗಿಡಗನುಗು ಕುಡ್ತೀರಿ (ಗಿಣಿ ಹಾಗೆ ಸಾಕಿ ಗಿಡಗನಿಗೆ ಕೊಟ್ಟಂತೆ)

ಮಾಟಗ ಜರ ವಂದಿಗೆ, ಮೊಣಸನುಗು ಬರಿ ಹೋಟತ್ತೀರಿ (ದನಕ್ಕೆ ಜ್ವರ ಬಂದರೆ ಮನುಷ್ಯನಿಗೆ ಬರೆ ಹಾಕಿದಂತೆ)

ನಾಯಿ ಬೊಗಳಸಿಂಡಿಗೆ ದೇವಲೋಕ ಹಾಳಾಕದ (ನಾಯಿ ಬೊಗಳಿದರೆ ದೇವಲೋಕ ಹಾಳಾಗುತ್ತ)

ಎಲಿ ಹೋಸಿಂಡಿಗೆ ಪುಲಿ ಹೋಸು ಇಂಗಿರಾಯ (ಇಲಿ ಹೋಯುತಂದ್ರೇ ಹುಲಿ ಹೋಯಿತಂದ್ರಂತೆ)

ಎದ್ದು ಏರಿಗಿ ಎಲಿಸಿಗೆ ಕ್ವಾಣಿಗು ತನ್ನಿಗೆ ಎಲಿಸಿಂಚೋನು (ಎತ್ತು ಏರಿಗೆ ಹೇಳಿದರೆ ಕೋಣ ಕೆರೆನಾರಿಗೆ ಹೇಳಿತ್ತಂತೆ)

ಪಡದಾಯ್ಲಿಗಿ ಪಂದಿಕೊಕ್ಕು ಮುದ್ದು (ಹಡೆದವರಿಗೆ ಹೆಗ್ಗಣನೇ ಮುದ್ದು)

ಇತರೆ ಗಾದೆಗಳು

ಕೇಡು ಗಾಲತ್ಗು ಏದ ಎಂತ ಸೇಯದು (ಕೇಡು ಗಾಲಕ್ಕೆ ಯಾರೇನು ಮಾಡುತ್ತಾರೆ.

ಪರಕತ ಪರಕತ ಅಣ್ಣ ತಂಬಿ, ವಳಿತ ವಳಿತ ದಾಡಿಗಾರಗ (ಹುಟ್ಟು ಹುಟ್ಟುತ ಅಣ್ಣ–ತಮ್ಮ, ಬೆಳಿತ ಬೆಳಿತ ದಾಯಾದಿಗಳು)

ತಿಂಡ್ರು ಊಟ್ ದ್ರೋಹ ಸೇಯುಂಗುದು (ಉಂಡು ಮನೆಗೆ ದ್ರೋಹ ಮಾಡಬಾರದು)

ಅಂಬ್ಲಿಕುಡಿಕರಾಳಗು ಮೀಸಂಗಳ ಪುಡಿಕಿರಾಯ ರೊಂಡಾಳು (ಅಂಬ್ಲಿ ಕುಡಿಯೋನಿಗೆ ಮೀಸೆ ಇಡಿಯುವರು ಇಬ್ಬರು)

ಎಳವುನ್ಗ್ಗ ಐಶ್ವರ್ಯ ವಂಚಿಂಡಿಗೆ ಅರ್ಧ ನಾಮರ್ಲ್ಲಿ ಕೊಡಿ ಪುಡಿಸಿಂಚೋನು (ಅಲ್ಪನಿಗೆ ಐಶ್ವರ್ಯ ಬಂದರೆ ಅರ್ಧರಾತ್ರಿ ಕೊಡೆ ಹಿಡಿದಿದ್ದನಂತೆ)

ಪಾಡ್ತ ಪಾಡ್ತ ರಾಗ, ಉಯಿತ, ಉಯಿತ ರೋಗ (ಹಾಡ್ತ ಹಾಡ್ತ ರಾಗ, ಉಗುಳುತ ಉಗುಳುತ ರೋಗ)

ಮಂಗಣ್ಣ ತಾನು ತಿಂಡ್ರು, ಪೂನಟ ಮುಂಜೀಗಿ ಅಂಟಿಂಚತ್ತೀರಿ (ಕೋತಿ ತಾನು ತಿಂದು, ಬೆಕ್ಕಿನ ಮೂತಿಗೆ ಒರಸಿತಂತೆ)

ವಾತ ಊಟ್ ಕೆಡಿಸಿಂಚೋ, ತೂಟು ಅಡಪ ಕೆಡಿಸಿಂಚೋ (ಮಾತು ಮನೆ ಕೆಡಿಸಿತು, ತೂತು ಒಲೆ ಕೆಡಿಸಿತು)

ಉಪ್ಪು ತಿಂಡ್ರಾಯ ತನ್ನಿ ಕುಡಿಕಿಲೇ ಬೇಕು (ಉಪ್ಪು ತಿಂದವರು ನೀರು ಕುಡಿಲೇಬೇಕು)

ಹೋನೇ ಪಿಶಾಚಿ ಇಂಡಿಗೆ ವಂದೇ ಗವಾಕ್ಷಿ ಇಂಡಿಂಚೋ (ಹೋದೆ ಪಿಶಾಚಿ ಅಂದ್ರೆ ಬಂದೇ ಗವಾಕ್ಷಿ ಅಂದ್ರಂತೆ)

ಅಯ್ಯಿ ಸತ್ತಿಗು ಅಮಾಸ ನಿಕ್ಕಿದಿಲ್ಲ (ಅಯ್ಯ ಸತ್ತರು ಅಮವಾಸೆ ನಿಲ್ಲದಿಲ್ಲ)

ಊಟ್‌ಗು ಕೂಟ್ ಮಾಡು ಕುಡ್ತಿಗೆ ತ್ವಾಕ ಪೆಚ್ಚಿ ಪಾಡಿಂಚೋನು (ಮನೆಗೆ ಕರೆದು ಎತ್ತು ಕೊಟ್ಟರೇ ಬಾಲೆತ್ತಿ ನೋಡಿದ್ದರಂತೆ)

ಮೀಸಂಗ ವಂದಾಯ್ಲಿಗಿ ದೇಸ್ ಕಾಂಗದಿಲ್ಲ (ಮೀಸೆ ಬಂದವರಿಗೆ ದೇಶ ಕಾಣುವುದಿಲ್ಲ)

ವಾಯ್ಲಿ ಆಡನಾದು ಈಪ್‌ಗು ಮೂಲ (ಬಾಯಲ್ಲಿ ಆಡಿದ್ದು ಬೆನ್ನಿಗೆ ಮೂಲ)

ಸೆಂದಾಸ ಪಾಪ ಜನಂಗಳಟ ವಾಯಗೋರು (ಮಾಡಿದವರ ಪಾಪ ಜನರ ಬಾಯಲ್ಲಿ)

ಪೊತ್ತು ಕಟ್ಟರದಾಟಲಿ ಒಂಡು ಮುತ್ತು ಕಟ್ಟು (ಹತ್ತು ಕಟ್ಟೋ ಕಡೆ ಒಂದು ಮುತ್ತು ಕಟ್ಟು)

ಸಿಂತ ಇಲ್ಲಾರಾಳಗು ಸಂತಿಗೋರು ಬೂದ್ಗುಂಡಿಂಚೋ (ಚಿಂತೆ ಇಲ್ಲದವನಿಗೆ ಸಂತೆಯಲ್ಲಿ ಮಲಗಿದ್ದನಂತೆ)

ಪಾಮು ಸಾಗುಂಗದು, ಕೋಲು ಒಡಿಂಗುದು (ಹಾವು ಸಾಯಬಾರದು, ಕೋಲು ಮುರಿಯಬಾರದು)

ಪೆಲ್ಲು ಇಂದಾಯ ಕಡ್ಲಿ ತಿಂಗಿಬೇಕು (ಹಲ್ಲು ಇದ್ದರೋ ಕಡ್ಲೆ ತಿನ್ನಬೇಕು)

ಸೆಯ್ ಮಾಟರತ್ ಸೇಂದಿಗೆ ಆಗಮಾಟರದು ಆಕದು (ಮಾಡು ಬಾರದ್ದನ್ನು ಮಾಡಿದರೆ ಆಗಬಾರದ್ದು ಆಗುತ್ತದೆ)

ಇಕ್ಕಿರತ ಇಕ್ಕಿರಿತೀರಿ ಸೊಣ್ಣುಸ್ ಇಂಡಿಗೆ ಸೇಸಪ್ಪ ರ‍್ವಾಸಾಯಿಂಚೋ (ಇದ್ದದ್ದು ಇದ್ದಂಗ ಹೇಳಿದರೆ ಸೇಸಪ್ಪ ಸಿಟ್ಟಾಗಿದ್ದನಂತೆ)

ಗಾಲಿ ವಂದಪ್ಪದೇ ತೂರಿಗಬೇಕು (ಗಾಳಿ ಬಂದಾಗಲೇ ತೂರಿಕೊಬೇಕು)

ಕೋಯಿ ಕೇಟ್ ಮಸಲ್ ಎರಿಕ್ಯಾದ (ಕೋಳಿ ಕೇಳಿ ಮಸಾಲೆ ಅರೆಯುತ್ತಾರೆ)

ಪರ್ದ ಸೊಟ್ಟು ಬುದ್ಧಿ ಸುಟ್ಟಿಗೋ ಹೋಗದಿಲ್ಲ (ಹುಟ್ಟಿರ ಕೊಂಕು ಬುದ್ಧಿ ಸುಟ್ಟರು ಹೋಗುವುದಿಲ್ಲ)

ಕ್ಯಾದಿಗೆಂದ್ ಗೊತ್ತು ಕಸ್ತೂರಿ ವಾಸನ (ಕತ್ತೆಗೇನು ಗೊತ್ತು ಕಸ್ತೂರಿ ವಾಸನೆ)

ಯೋಗಿ ಪಡ್ಡದಾದ ಯೋಗಿಗೆ ಜ್ಯೋಗಿ ಪಡದಾದ ಜ್ಯೋಗಿಗೆ (ಯೋಗಿ ಪಡೆದದ್ದು ಯೋಗಿಗೆ, ಜ್ಯೋಗಿ ಪಡೆದಿದ್ದು ಜ್ಯೋಗಿಗೆ)

ಇಂದಿಗೆ ಈ ಊರು ಇಲ್ಲ ಮೀನ್ನೂರು (ಇದ್ದರೆ ಈ ಊರು ಇಲ್ಲ ಮುಂದ್ಲೂರು)

ಇಂದ್ ಊರಗೋರು ಇಕ್ಕೆದಿಲ್ಲ ಬೂದುಗ್ವಾಡೆಂದು ಕಟ್ಟುದಿಲ್ಲ (ಇದ್ದು ಊರಾಗ ಇರಲಿಲ್ಲ ಬಿದ್ದು ಗೋಡೇನು ಕಟ್ಟುವುದಿಲ್ಲ)

ಕುಡ್ತಾಳ್ ಕೋಡಂಗಿ, ವಾಂಕಿಂಕಾಳ್ ಈರಭದ್ರ (ಕೊಟ್ಟೋನು ಕೋಡಂಗಿ ಇಸ್ಕಂಡೋನು ಈರಭದ್ರ)

ಕನ್ನಡದ ಗಾದೆಗಳು (ಸಮುದಾಯದಲ್ಲಿ ಬಳಸುವ)

ಮನೆಗೆ ಹೋದಾಗ ಇಂಗು ಕೊಡದವರು, ಇನ್ನು ಕರೆದು ತೆಂಗು ಕೊಟ್ಟಾರ

ಕರದು ಕರಚಿಕಾಯಿ ಕೊಟ್ಟರೆ, ಅಂಚಿ ಮುರದೈತಿ ಅಂದನಂತೆ

ಹುಂಬನ ಕೈಯಾಗ ಹೋಳಿಗಿ ಕೊಟ್ಟರೆ, ಹೋಳಿಗೆ ಒಯ್ದು ಮೋಳಿಗಿ ಮೇಲೆ ಇಟ್ಟನಂತೆ.

ತೊಗಲ ಮುಕಳಿಯನು ಏನು ಬಲ್ಲ ಮುಗಿಲು ಮೇಗಳ ಸುದ್ದಿಯ

ಕುಲಕ್ಕೆ ಕುಲಮೂಲ, ಕುಂಟೆತ್ತು ಹೊಲಕ್ಕೆ ಮೂಲ.

ಕೂಡಾಡಿದ ಮಡಕೆ ತಾಕಲಾಡದೆ ಇರ್ತವಾ.

ಗಂಡ್ಸು ಕುಳಿತ ಕೆಟ್ಟ, ಹೆಂಗ್ಸು ತಿರಿಗಿ ಕೆಟ್ಲು.

ಅಂತವಿಲ್ಲದ ಬಾವಿ ಜಂತುವಿಲ್ದ ಸೀರೆ.

ಕದ್ದು ಹೋಳ್ಗೆ ಕೊಟ್ರೆ ಬೆಲ್ಲಸಾಲ್ದು ಅಂದ್ನಂತೆ.

ಗೌರಿ ಹುಣ್ಮೆಲಿ ಹೆಣ್ಣಿಗೋಗ್ಬಾರದು, ಆಷಾಡದಲ್ಲಿ ನೆಂಟ್ರಮನ್ಗೆ ಹೋಗ್ಬಾರದು.

ಇದ್ದರೆ ಹಿರಿಹಬ್ಬ, ಇಲ್ಲದಿದ್ದರೆ ಕಿರಿಯಬ್ಬ.

ಉಂಡೊಟ್ಟಿಗೆ ಮುದ್ದೇಕೆ, ಗುಂಡ್ಕಲ್ಲಿಗೆ ಎಣ್ಣೇಕೆ.

ಕುರಿ ಕೊಟ್ಟವಂಗೆ ಮರಿಕೊಡದೆ ಇರತಾರೆಯೇ.

ಊರಾಗ್ಳ ಮದ್ವೆಗೆ ಓಬಕ್ಕ ಸಿಡಿಯಾಡಿದ್ಲಂತೆ.

ನಮ್ಮಾಟದಾಗೆ ಬರಬೇಡ ಅಂದ್ರೆ ಬಗ್ಗಿ ಬಗ್ಗಿ ತಾಳ ಹಾಕ್ತಿದ್ನಂತೆ.

ಹೆಣ್ಣು ಹುಟ್ಟಿದ ಮನೆ ತಣ್ಣಗೆ.

ಹೂವಿನಂಥ ಹೆಂಡತಿ ಬಂದ್ರು, ದೇವರಂಥ ತಾಯಿನ ಮರಿಬೇಡ.

ಸಿದ್ದನ ಪ್ಲಾನು ನಿದ್ದೇ ಬರೋತನಕ.

ಗಾಳಾ ಹಾಕಿದರೆ ಸಿಗದ್ದು ತಾಳಾ ಹಾಕಿದರೆ ಸಿಕ್ಕೀತೆ.

ಹಜಾಮನ ಕೆಲಸ ನಿಜಾಮ ಮಾಡುವನೇ.

ಬಿಟ್ಟಿ ಕೆಲಸಕ್ಕೆ ಬಟ್ಟಿ ಸರಾಯಿ ಕುಡಿಸಿದರಂತೆ.

ಯಂಕನ ಕೈಯಾಗ ಬೆಂಕಿ ಕೊಟ್ಟರೇ, ಬೆಂಕಿ ವಯ್ದು ಬಣವ್ಯಾಗ ಇಟ್ಟನಂತೆ.

ಹಲ್ಲು ಬಿದ್ದವರಿಗೆ ಹಲ್ಪುಡಿ ಸಿಂತೆ.

ಅಂಗ್ಳದಾಗೆ ಇದ್ದೋರೆಲ್ಲ ಲಿಂಗಾಯತರೇ ಕೋಳಿ ಕದ್ದವರಾರು.

ಇಂಗು ತೆಂಗು ಇದ್ರೆ ಮಂಗನು ಅಡಿಗೆ ಮಾಡುತ್ತೈತಿ.

ಉಕ್ಕಿದ ಮೇಲೆ ಸಾರಲ್ಲ, ಸೊಕ್ಕಿದ ಮೇಲೆ ಹೆಣ್ಣಲ್ಲ.

ಊರ್ಗೆ ಹೋಗೋರ ಕಾಲು ಊರ ಹೊರ್ಗೆ.

ಊರಿಗೆಲ್ಲ ಸರದಾರ ಮನೆ ಹೆಂಡತಿಗೆ ಪಿಂಜಾರ.

ಒತ್ತಿ ಮಾಡಿದ ಹಣ್ಣು, ಕಟ್ಟಿಕೊಟ್ಟಬುತ್ತಿ ಏಸುದಿನ.

ಕಸ ಹೋಬಳಿಯೊಳ್ಗೆ ಯಾಕೆ ಕಸೂತಿ ಕುಬಸ

ಕರೆ ಸ್ವಾರೆಗೆ ಬಿಳಿ ಬಾನ ಇದ್ರೆ ನಾಡೆಲ್ಲ ಚಿಂತೆ

ಕಳ್ಳನ ಕಣಿ ಕೇಳಿದರೆ ಹಳ್ಳುಂಟ ಓಗಿ ಮಣ್ಣು ಒಯ್ಕ ಅಂದ್ನಂತೆ.

ಕಾಗಿಗೆ ಹಿರೆತನ ಕೊಟ್ರೆ ಕಚ್ಚರಿವೆ ತುಂಬ ಹೇತಿತ್ತಂತೆ.

ತಾನು ತಿನ್ಲಾರ ಬೇರೆಯಾರಿಗೋ ಬಿಡ್ಲಾರ

ದಡ್ಡನ್ಗೆ ದೊಣ್ಣೆ ಪೆಟ್ಟು, ಜಾಣನ್ಗೆ ಮಾತಿನ ಪೆಟ್ಟು.

ತಾಯಿಗಿಂತ ಬಂಧುವಿಲ್ಲ ಉಪ್ಪಿಗಿಂತ ರುಚಿಯಿಲ್ಲ.

ಬದುಕಿ ಬಾಳೂ ಮಗ ಅಂದ್ರೆ ಮಸಿ ಮಸಿ ಹೇಲತಾನೆ.

ಹುಟ್ಟಿರೋದ್ಕೆ ಬಟ್ಟೆ ಇಲ್ಲ ಹೊಟ್ಟೆಯಲ್ಲಿರೋದ್ಕೆ ಕಠಾಣೆಯಾಕೆ.

ಅತ್ತೆ ಮಾಡಿದ್ನ ಹಿತ್ಲಾಗಿಟ್ಲಂತೆ.

ಚನ್ನಿಗ ನನ್ನ ಅಳಿಯ ಒಂದೊಂದೇ ಅಗ್ಳು ತಿನ್ನೋದು.

ದಾಸಯ್ಯನಿಗೆ ಆದದ್ದು ಜಂಗಮಯ್ಯಗೆ ಆಗ್ಲೇ ಬೇಕು ಇತ್ಯಾದಿಯಾಗಿ...

೫.೨. ಒಗಟುಗಳು

ಗಾದೆಗಳು ಜನರ ಅನುಭವದ ಸಾರವನ್ನು ಅರ್ಥಗರ್ಭಿತವಾದ ಕೆಲವೇ ಮೊನಚಾದ ಪದಗಳಲ್ಲಿ ಹೇಳಿದರೆ, ಒಗಟುಗಳು ಜನರ ಕುತೂಹಲ ಮತ್ತು ಬೌದ್ಧಿಕ ಜಾಣ್ಮೆಯನ್ನು ಹೇಳುತ್ತದೆ. ಒಗಟುಗಳು ಬುದ್ಧಿವಂತಿಕೆಗೆ ಒಡ್ಡುವ ಸವಾಲುಗಳು. ಒಂದು ವಸ್ತುವನ್ನು ಮತ್ತೊಂದರ ಮೂಲಕ ಅಂದರೆ ಇನ್ನೊಂದು ಕ್ರಿಯೆಗೆ ಒಳಪಡಿಸಿ ತುಂಬಾ ಚಮತ್ಕಾರವಾಗಿ ವರ್ಣಿಸುವ ಕ್ರಿಯೆ ನಡೆದಿರುತ್ತದೆ. ಈ ಕ್ರಿಯೆಯಲ್ಲಿ ನಿಜಕ್ಕೂ ಸಮುದಾಯದ ಬದುಕಿನ ಇತಿಹಾಸ ಒಳಗೊಂಡಿರುತ್ತದೆ. ಈ ಒಗಟುಗಳು ಸಮುದಾಯಗಳ ಆಚಾರ–ವಿಚಾರ–ನಡೆ–ನುಡಿ–ನಂಬಿಕೆಗಳನ್ನು ಗೂಡಾರ್ಥಗಳ ಮುಖಾಂತರ ಹಾಸ್ಯಭರಿತವಾಗಿ ಬಿಂಬಿಸುತ್ತದೆ. ಒಗಟುಗಳಿಗೆ ಜನಪದ ಸಾಹಿತ್ಯದಲ್ಲಿ ಗೀತೆ, ಕಥೆ, ಗಾದೆಗಳಂತೆ ವಿಶಿಷ್ಟವಾದ ಸ್ಥಾನವಿದೆ. ಭಾರತೀಯ ಸಂಸ್ಕೃತಿಯ ಪರಂಪರೆಯಲ್ಲಿ ಇದಕ್ಕೆ ವಿಶಿಷ್ಟ ಸ್ಥಾನವಿದ್ದು, ಹಲವಾರು ಸಂವಾದಿ ಪದಗಳನ್ನು ಒಳಗೊಂಡಿದೆ. ಒಗಟುಗಳಿಗೆ ಇಂಗ್ಲಿಷಿನಲ್ಲಿ 'Riddle' ಎಂದು ಹೆಸರಿದೆ. Riddle ಅಂದರೆ 'to give advice' ಎಂದಾಗಿದೆ. ಕನ್ನಡದಲ್ಲಿ ಒಡಪು, ಒಂಟು, ಒಡಗತೆ, ಒಡಚುವ ಕತೆ ಮುಂತಾದ ರೂಪಗಳಿರುವುದು ತಿಳಿದಿರುವ ವಿಚಾರ. ಒಗಟು ಎಂಬ ಪದವು ಒಕ್+ಕಟ್ಟು (ಬಂಧ) > ಒರ್ಗಟ್ಟು> ಒಗ್ಗಟ್ಟು > ಒಗಟು ಎಂದು ಸುಲಭೀಕರಣಗೊಂಡಿದೆ ಎಂದು ಅನೇಕ ವಿದ್ವಾಂಸರು ತಿಳಿಸುತ್ತಾರೆ.

"ಜೀವನದ ಅನುಭವ ವಲಯವನ್ನೇ ವಸ್ತುವಾಗಿಸಿಕೊಳ್ಳುವ ಒಗಟು, ಬುದ್ಧಿಯ ಕಸರತ್ತು ಮತ್ತು ಭಾಷಾ ಚಮತ್ಕಾರ ಇವೆರಡರ ಸಮ್ಮಿಲನದಿಂದ ರೂಪ ಪಡೆಯುತ್ತವೆ. ಇದರ ಪ್ರಾಸನು ಪ್ರಾಸಗಳು, ಲಯಗಳು ಒಂದು ವಸ್ತುವನ್ನು ಇನ್ನೊಂದೆಂಬ ಭ್ರಮೆ ಮೂಡಿಸುವಲ್ಲಿ ಪ್ರಭಾವ ಬೀರುವ ವಿಶೇಷಣಗಳು ಭಾಷೆಯ ಮಟ್ಟದಲ್ಲಿ ಆಕರ್ಷಕವಾದ ಗುಣಗಳು, ಒಂದನ್ನು ಇನ್ನೊಂದೆಂದು ಭ್ರಮಿಸುವಂತೆ ಒತ್ತಾಯಿಸುವಲ್ಲಿ ಕಾಣಿಸುವ ಚಮತ್ಕಾರ ಶಕ್ತಿಗಳೆಲ್ಲ ಮೂಲವಾಗಿ ಬುದ್ಧಿಯ ಕಸರತ್ತುಗಳೇ ಒಂದೇ ವಸ್ತುವು ಯಾವುದರಂತಿದೆ ಎಂದು ಥಟ್ಟನೆ ನಿರ್ಧರಿಸಿಕೊಳ್ಳುವ ಅದರ ಆಕಾರ, ಸ್ವರೂಪ, ಲಕ್ಷಣಗಳನ್ನು ಥಟ್ಟನೆ ಗ್ರಹಿಸುವ ಬುದ್ಧಿಯು ಭಾಷಾ ಮಾಧ್ಯಮದ ಮೂಲಕ ಅದಕೊಂದು ರೂಪಕೊಡುತ್ತದೆ" (ಆಯ್ದ ಗಾದೆಗಳು ಹಾಗೂ ಒಗಟುಗಳು (ಸಂ) ವೀರಣ್ಣ ಎಸ್. ದಂಡೆ. ಪುಟ–೧೮). "ವಾಕ್ಯಂಪ್ರದಾಯದ ಹಲವು ಪ್ರಕಾರಗಳಲ್ಲಿ ಜನಸಾಮಾನ್ಯರ ಊಹಾಶಕ್ತಿಗೆ ಕನ್ನಡಿ ಹಿಡಿಯುವ ಅತ್ಯುತ್ತಮ ಪ್ರಕಾರವೆಂದರೆ ಒಗಟು." ಇವು ಸಾಮಾನ್ಯವಾಗಿ ಕೇಳಿದ ಕೂಡಲೇ ದಿಗ್ಭ್ರಮೆ ಹಿಡಿಸುವ ಪ್ರಶ್ನಾರ್ಥಕ ಹೇಳಿಕೆಗಳು ಪ್ರತಿಯೊಂದರಲ್ಲೂ ಒಂದು ಸಮಸ್ಯೆಯಿದ್ದು ಸುಲಭವಾಗಿ ಬಿಡಿಸಲಾರದ ರೀತಿಯಲ್ಲಿ ಸಂಯೋಜಿತವಾಗಿರುತ್ತದೆ. ಇದರಲ್ಲಿ ಒಡ್ಡಿರುವುದು ಒಂದಾದರೆ ಒಡೆಸುವುದು ಒಂದಾಗಿರುತ್ತದೆ. ಇಲ್ಲಿ ಗುಪ್ತವಾಗಿರುವ ಮೊದಲನೆಯದನ್ನು ಎರಡನೆಯದು

ವ್ಯಕ್ತಗೊಳಿಸುತ್ತದೆ. ಯಾವುದೇ ಒಗಟಿನಲ್ಲಿ ಅಸ್ಪಷ್ಟತೆಯೇ ಅದರ ದೊಡ್ಡ ಗುಣವಾಗಿರುತ್ತದೆ. ಅರ್ಥಗೋಪ್ಯ, ಧಾರ್ಮಿಕ, ಅಶ್ಲೀಲ, ನಿಷೇಧಾತ್ಮಕ, ಪದ್ಯರೂಪ, ಪ್ರಶ್ನೋತ್ತರ ರೂಪ, ಸ್ಪರ್ಧಾರೂಪ ಮುಂತಾದ ಲಕ್ಷಣಗಳನ್ನು ಒಳಗೊಂಡಿರುತ್ತದೆ.

ಒಗಟುಗಳ ಮೂಲ ವಸ್ತು ಮಾನವನ ದೈನಂದಿನ ಜೀವನಕ್ಕೆ ಸಂಬಂಧಿಸಿದ ವಸ್ತು ವಿಷಯಗಳೇ ಆಗಿದ್ದು, ಇದನ್ನು ಒಡೆದು ಹೇಳಿದಾಗಲೇ ಅದರ ಸ್ವಾರಸ್ಯ ಹೊರಬರುತ್ತದೆ. ಒಗಟಿಗೆ ಸರಿ ಉತ್ತರ ಸಿಕ್ಕಾಗ ಅದರಲ್ಲಿರುವ ಚಮತ್ಕಾರದ ಶಕ್ತಿ ಗೋಚರವಾಗುತ್ತದೆ. ಈ ಹಿನ್ನೆಲೆಯಲ್ಲಿ ಕೊರಚರು ತಮ್ಮ ಬಿಡುವಿನ ವೇಳೆಯಲ್ಲಿ ಒಬ್ಬರು ಮತ್ತೊಬ್ಬರ ಬೌದ್ಧಿಕ ಸಾಮರ್ಥ್ಯವನ್ನು ಒಗಟುಗಳ ಮೂಲಕ ಅಳೆದು ತಮ್ಮ ತಮ್ಮಲ್ಲೇ ಜಾಣತನವನ್ನು ಪ್ರದರ್ಶಿಸುತ್ತಿದ್ದರು. ಇಲ್ಲಿ ಒಗಟು ಒಡ್ಡುವವನಿಗೆ ಮತ್ತು ಒಗಟು ಬಿಡಿಸುವವನಿಗೆ ಸಮಾನ ಅವಕಾಶವಿರುತ್ತದೆ. ಕೊರಚರು ಈ ಒಗಟಿಗೆ 'ಎದುರಕತ' ಎಂದು ತಮ್ಮ ಕೊರಚರ ಭಾಷೆಯಲ್ಲಿ ಕರೆಯುತ್ತಾರೆ. ಎರಡೂ ಕಡೆಯಲ್ಲಿ ಎದುರು ಬದುರಾಗಿ ಕುಳಿತು ಒಗಟನ್ನು ಒಡಿಸುವ ಮತ್ತು ಬಿಡಿಸುವ ಕ್ರಿಯೆಗೆ ಎದುರ್‌ಕತ ಎಂದು ಕರೆಯುತ್ತಾರೆ. ಕೊರಚರಲ್ಲಿ ಬಳಕೆಯಾಗುವ ಒಗಟುಗಳಲ್ಲಿ ಶಿಷ್ಟಕನ್ನಡದ ಒಗಟುಗಳು ಇವೆ. ಮತ್ತು ಕೆಲವು ಶಿಷ್ಟ ಕನ್ನಡದ ಒಗಟುಗಳು ರೂಪಾಂತರಗೊಂಡು ಬಳಕೆಯಲ್ಲಿವೆ.

ಸಾಮಾನ್ಯವಾಗಿ ಒಗಟುಗಳು ಕ್ರಿಯಾಶೀಲ, ಕುತೂಹಲಕರವಾದುದು. ಇಲ್ಲಿ ಬಹಳಷ್ಟು ಒಗಟುಗಳು ಮೇಲುನೋಟಕ್ಕೆ ಅಸಯ್ಯವಾಗಿರುತ್ತವೆ. ಆದರೆ ಅವುಗಳ ಅಂತರಾರ್ಥ ಬೇರೆಯೇ ಇರುತ್ತದೆ. ಉದಾಹರಣೆಗೆ

"ವಸರೇನ ಗೆಣೆಕಾರ ಪಂಡಿ ಪಂಡಿಕಿ ವಾರದು" (ಉದ್ದನ್ನ ಗೆಣೆಕಾರ, ಹಬ್ಬಬ್ಬಕ್ಕೆಲ್ಲ ಬರ್ತಾನೆ (ಊದನಿಕಡ್ಡಿ)

ಇದು ಪೂಜಾ ಪರಿಕರವಾದ ಊದುಬತ್ತಿಯನ್ನು ಹೇಳುತ್ತದೆ. ಇಲ್ಲಿ ನಾವು ಪ್ರತಿಯೊಂದು ಹಬ್ಬ ಹರಿದಿನಗಳಲ್ಲಿ ಊದುಬತ್ತಿಯನ್ನು ಹಚ್ಚುತ್ತೇವೆ. ಕಾರಣವಾಗಿ ಒಗಟು ಬಳಕೆಯಾಗುವುದನ್ನು ನೋಡುತ್ತೇವೆ.

"ಒಂಡು ತೆಲಾದು, ಒಂಡು ಮುಳುಗಾದು, ಒಂಡು ಕರಗಾದು" (ಎಲೆ, ಅಡಿಕೆ, ಸುಣ್ಣ) (ಒಂದು ತೇಲುತ್ತೆ, ಒಂದು ಮುಳುಗುತ್ತೆ, ಒಂದು ಕರಗುತ್ತೆ) ಈ ಒಗಟು ಸಹ ಒಂದು ಪೂಜಾ ವಿದಾನಕ್ಕೆ ಸಂಬಂಧಿಸಿದ್ದು ಆಗಿದೆ. ಇಲ್ಲಿ ಯಾವುದೇ ಒಂದು ಶುಭಕಾರ್ಯ ಮಾಡುವ ಮುಂಚೇ ಗಂಗೆ ಪೂಜೆ ಮಾಡುವ ಪದ್ಧತಿ ಕೊರಚರಲ್ಲಿ ಇದೆ. ಆಗ ಎಲೆ, ಅಡಿಕೆ, ಸುಣ್ಣವನ್ನು ಪೂಜೆ ಮುಗಿದಾದ ಮೇಲೆ ನೀರಿಗೆ ಬಿಡುವ ಪದ್ಧತಿ ಇದೆ. ನೀರಿನಲ್ಲಿ ಎಲೆ–ತೇಲುತ್ತದೆ. ಅಡಿಕೆ ಮುಳುಗುತ್ತದೆ. ಸುಣ್ಣ ಕರಗುತ್ತದೆ ಎಂದು ತಿಳಿದುಬರುತ್ತದೆ.

"ಕಣ್ಣಗ ಪಕ್ಕಲೆ ಕಾಲುಗು ತೂರ" (ಕಣ್ಣಿಗೆ ಹತ್ತಿರ, ಕಾಲಿಗೆ ದೂರ) = ಬೆಟ್ಟ.

ಬೆಟ್ಟಗುಡ್ಡಗಳು ಬಹಳ ಹತ್ತಿರದಲ್ಲೇ ಇವೆ ಎಂಬಂತೆ ಗೋಚರಿಸುತ್ತವೆ. ಆದರೆ ಅದು ಬಹಳ ದೂರದಲ್ಲಿರುತ್ತವೆ. ಬೆಟ್ಟಗಳು ಬಹಳ ಹತ್ತಿರದಲ್ಲಿರುವಂತೆ ಕಾಣಿಸಿದರೂ ಬೆಟ್ಟಕ್ಕೆ ಹೋಗಬೇಕಾದರೆ ಬಹಳ ದೂರ ನಡೆಯಬೇಕು. ಈ ವಿಷಯವನ್ನಿಟ್ಟುಕೊಂಡು ಈ ಒಗಟನ್ನು ರಚಿಸಲಾಗಿದೆ.

"ಡಾಕ್ರು ವಾರದು, ಸೂದಿ ಹೋಡಾದು, ಲೆಕ್ಕ ವಂಕರ್ದ್ಬೇ ಹೋಕದು" (ಡಾಕ್ಟ್ರು ಬರ್ತಾರೆ, ಇಂಜಕ್ಷನ್ ಮಾಡ್ತಾರೆ, ದುಡ್ಡ ಇಸ್ಕಳ್ದೇ ಹೋಗ್ತಾರೆ) ಮೇಲುನೋಟಕ್ಕೆ ಕಾಣುವ ಸತ್ಯ ಸತ್ಯವಲ್ಲ. ಅದರಾಚೆಗೆ ಮತ್ತೇನೋ ಇದೆ ಅದು ಪರಮಸತ್ಯ. ಆ ಅತೀತ ರಹಸ್ಯಕ್ಕೆ ಇವೆಲ್ಲ ನಿಮಿತ್ತ ಎಂಬುದನ್ನು ಒಗಟುಗಳು ತಿಳಿಸಿಕೊಡುತ್ತವೆ. ಇಲ್ಲಿ ಚೇಳು ಒಂದು ವಿಷ ಜಂತು. ಅದನ್ನು ಡಾಕ್ಟ್ರಗೆ ಹೋಲಿಸಲಾಗಿದೆ. ಅದು ಕಚ್ಚುವುದನ್ನು ಇಂಜಕ್ಷನ್‌ಗೆ, ಮತ್ತು ಕಚ್ಚಿದಾದ ಮೇಲೆ ಹೊರಟು ಹೋಗುತ್ತದೆ. ಅದನ್ನು ದುಡ್ಡು ಇಸ್ಕಳ್ದೇಲೆ ಹೋಗುತ್ತದೆ ಎಂಬುದನ್ನು ತುಂಬಾ ವಿಡಂಬನಾತ್ಮಕ ವಾಕ್ಯ ಪ್ರಜ್ಞೆಯಲ್ಲಿ ಈ ಒಗಟು ರಚಿತವಾಗಿದೆ.

"ಒಂಡೊಳ್ಗಿ, ನೂರಾಳಗು, ಮಿಗಲನಾದು ತಲ್ಲಾರಿಗಿ" (ಒಂದೋಳ್ಗೆ ನೂರಾಳ್ಗೆ ಮಿಕ್ಕಿದ್ದು ನಾಳ್ಕೆ (ವಿಭೂತಿ) (ಇಭೂತಿ) ಇಲ್ಲಿ ಪೂಜಾಪರಿಕರವಾದ ವಿಭೂತಿಯನ್ನು ಹೋಳಿಗೆಗೆ ಸಾಂಕೇತಿಸಿರುವುದು ವಿಚಾರಪೂರ್ಣವಾಗಿದೆ. ಸಂಪ್ರದಾಯಸ್ಥ ಮನೆಯವರು ಹಿಡಿಗಾತ್ರದ ವಿಭೂತಿ ಉಂಡೆಯನ್ನು ಎಷ್ಟಾದರೂ ಹಚ್ಚಿಕೊಳ್ಳಬಹುದು. ಯಾರಾದರು ಹಚ್ಚಿಕೊಳ್ಳಬಹುದು ಅದು ಬೇಗ ಸವೆಯುವುದಿಲ್ಲ. ಉಳಿದಿದ್ದನ್ನು ಪುನಃ ನಾಳೆಗೆ ಹಚ್ಚುವುದು ಎಂಬುದನ್ನು ಹೇಳುತ್ತದೆ. ಇಲ್ಲಿ ಈ ವಿಭೂತಿಯ ಮುಖಾಂತರ ಜನಪದರು ವಿಶೇಷ ಅಡುಗೆಯ ಹಂಚಿಕೆ ಮೂಲಕ ಅದನ್ನು ಅರ್ಥೈಸಿದ್ದಾರೆ.

"ಮರ್ತಗೋರು ಮರ್ತ್ರ ಪರಕಾದು, ಪೂವಿಲ್ಲ, ಕಾಯಿಲ್ಲ" (ಮರದೊಳಗೆ ಮರ ಹುಟ್ಟತೈತಿ ಹೂವಿಲ್ಲ, ಕಾಯಿಲ್ಲ) = ಮನುಷ್ಯ (ಜನನ) (ಮೊಣಸು ಪರಕ್ರದು) ಈ ಒಗಟಿನಲ್ಲಿ ಮನುಷ್ಯನ ಹುಟ್ಟಿನ ಬಗ್ಗೆ ಹೇಳುತ್ತಾರೆ. ಪ್ರಕೃತಿಯ ಮರದಲ್ಲಿ ಮರ ಹುಟ್ಟತೈತಿ ಹೂ, ಹಣ್ಣು ಕಾಯಿ ಹುಟ್ಟುತ್ತೈತಿ ಆದರೆ ಮನುಷ್ಯನಲ್ಲಿ ಮನುಷ್ಯ ಹುಟ್ಟುತ್ತಾನೆ ಹೊರತು ಹೂವು ಹಣ್ಣುಕಾಯಿಯನ್ನು ಬಿಡುವುದಿಲ್ಲ ಎಂಬುದನ್ನು ಈ ಒಗಟು ನಮಗೆ ತಿಳಿವಳಿಕೆ ನೀಡುತ್ತದೆ.

ಕೊರಚರ ಭಾಷೆಯಲ್ಲಿ ಬಳಕೆಯಲ್ಲಿರುವ ಒಗಟುಗಳು

ಪಚ್ಚಾಂಡ ಮರ್ರಗೋರು ವಳ್ಳಿಗೂಟು (ಹಸಿರಾದ ಮರದಲ್ಲಿ ಬೆಳ್ಳಿಗೂಟ) – ಮೂಲಂಗಿ (ಮೂಲಂಗಿ)

ತನ್ನಿಗೋರು ಪರಕಾದು, ತನ್ನಿ ಅಂಟನಿಗೆ ಸತ್ತೋಕದು (ನೀರಿನಲ್ಲಿ ಹುಟ್ಟತೈತಿ, ನೀರು ಮುಟ್ಟಿದರೆ ಸಾಯತೈತಿ) – ಉಪ್ಪು (ಉಪ್ಪು)

ಊರಡ್ಡಿ ತಿರಗರದು ಮೂಲುಗೋರು ವಂದು ಕೊಂದ್ಗರದು (ಊರೆಲ್ಲ ತಿರುಗುವುದು

ಮೂಲೆಯಲ್ಲಿ ಬಂದು ಕೂಡುವುದು) – ಚಪ್ಪಲಿ (ಸೆರುಪು)

ಮೂಡು ಕಣ್ಣು, ಒಂದು ಜುಟ್ಟು, ವರಕೋರು ತನ್ನಿ (ಮೂರು ಕಣ್ಣು, ಒಂದು ಜುಟ್ಟು, ಹೊಟ್ಟೆಯಲ್ಲಿ ನೀರು) ತೆಂಗಿನಕಾಯಿ. (ಟೆಂಕಾಯಿ)

ಒಂಡೆಟ ಗುದ್ದನಿಗೆ ಊಡಡ್ಡಿ ಮಕ್ಕೆ (ಒಂದೇಟು ಗುದ್ದಿದರೆ ಮನೆಯಲ್ಲ ಮಕ್ಕಳು)– (ಬೆಳ್ಳುಳ್ಳಿ) (ಉಂಗಾಗಡ್ಡ)

ವಳ್ಳೋಡು ವಾಸ್ಲಿಲ್ಲ (ಬಿಳಿಮನೆ ಬಾಕ್ಲಿಲ್ಲ) – ಮೊಟ್ಟೆ (ಮುಟ್ಟ)

ಒಂಡು ಕೊಪ್ಪರಿಕಿಕೋರು ರೊಂಡು ತರ ಎಣ್ಣ (ಒಂದು ಕೊಪ್ಪರಿಕೆಯಲ್ಲಿ ಎರಡು ತರ ಎಣ್ಣೆ) – ಮೊಟ್ಟೆ

ಅಣ್ಣಟ ಗುದ್ದುಗೋರು ತೆಂಬಿಟ ತಲಕಾಯಿ (ಅಣ್ಣನ ಮುಕಳಿಯಲ್ಲಿ ತಮ್ಮ ತಲೆ) – ಗೇರುಬೀಜ (ಜಿಗಿಡಿ)

ಪಾಕರಾಯ ರೊಂಡಾಳ್, ಕೇಕರಾಯ ರೊಂಡಾಳ್, ಕುಡುಕರಾಯ ರೊಂಡಾಳ್, ತಿಂಗಿರಾಯ ಮುಪ್ಪತ್‌ರೊಂಡಾಳ್ ಆನಿಗೆ ರುಚಿ ಗೊತ್ತಾಗರದು ಒಂಡಾಳಗೆ (ನೋಡುವವರು ಇಬ್ಬರು, ಕೇಳುವವರು ಇಬ್ಬರು, ಕೊಡುವವರು ಇಬ್ಬರು, ತಿನ್ನುವವರು ಮೂವತ್ತೆರಡು ಜನ ಆದರೆ ರುಚಿ ಗೊತ್ತಾಗುವುದು ಒಬ್ಬರಿಗೆ (ಕಣ್ಣು, ಕಿವಿ, ಕೈ, ಹಲ್ಲುಗಳು, ನಾಲಗೆ)

ಆವಟ ಕಂಬಳಿ ಮಡಿಕೆಂಗಾಗದಿಲ್ಲ (ಅಪ್ಪನ ಕಂಬಳಿ ಮಡಚಕಾಗುವುದಿಲ್ಲ)–ಆಕಾಶ (ಮುಗುಲು)

ಆವ ಕಟ್ಟನ ಗುದ್ದಿ ವಂಗನಿಗೆ ವಾಯಿಗೆ, ಎದ್ದಿಂದಿಗೆ ಎದಿಗೆ (ಅಪ್ಪ ಕಟ್ಟಿದ ಗುದ್ದಿ ಬಗ್ಗಿದರೆ ಬಾಯಿಗೆ, ಎದ್ದರೆ ಎದೆಗೆ) – ತಾಳಿಸರ (ತಾಳ)

ಆವ ಆಕಾಶತಗು, ಅಮ್ಮಪಾತಳತಗು, ಮಗು ಸಂತಿಗಿ (ಅಪ್ಪ ಆಕಾಶಕ್ಕೆ, ಅಮ್ಮ ಪಾತಾಳಕ್ಕೆ, ಮಗ ಸಂತೆಗೆ) ಅಡಿಕೆ ಮರ (ವಕ್ಕಪೋಡು)

ಅಕ್ಕ–ತಸ್ಸಿ ರೊಂಡಾಳ್ ಆವ ಇಂಡಿಗೆ ಕೊಂದುಗದಲ್ಲ, ಅಮ್ಮ ಇಂಡಿಗೊಕೊಂದಗದು (ಅಕ್ಕ–ತಂಗಿ ಇಬ್ಬರು ಅಪ್ಪ ಅಂದರು ಕೂಡುತಾರೆ ಅಮ್ಮ ಅಂದರೂ ಕೂಡುತ್ತಾರೆ (ತುಟಿ) (ಒರಡು)

ಒಂಡಾಳುನೂಂಡಾಳ್ ಪಾಕಲ್ಲ–ಉಡಲ್ಲ ಆನಿಗೆ ಒಂಡಾಳ ಅಗದಿಗೆ ಇನ್ನೊಂಡಾಳ್ ಅಗದು (ಒಬ್ಬರನೊಬ್ಬರು ನೋಡಿಲ್ಲ ಬಿಟ್ಟಿಲ್ಲ ಆದರೆ ಒಬ್ಬರು ಅತ್ತರೆ ಇನ್ನೊಬ್ಬರು ಅಳುತ್ತಾರೆ) ಕಣ್ಣುಗಳು (ಕಣ್ಮಂಗ)

ಮುತ್ತನಂತ ಕೋಯಿ ಮುಳ್ಳುಗೋರೆ ಮುಟ್ಟೆಚ್ಚಿಕೀದು (ಮುತ್ತಿನಂತ ಕೋಳಿ ಮುಳ್ಳುನಾಗೆ ತತ್ತಿ ಇಟ್ಟೈತಿ)– ಬದನೆಕಾಯಿ (ವಂಕಾಯಿ)

ಕಟ್ಟಿಗಿ ವಾರಮಾಟರ ಕೆಲ್ಲು, ತಿಂಗ್ರಿತಗು ವಾರಮಾಟರ ಎರಸಿ, ದಿಬ್ಬಗಿ ವಾರಮಾಟರ ಸೆದ. (ಕಟ್ಟೆಗೆ ಬಾರದ ಕಲ್ಲು, ತಿನ್ನೋಕೆ ಬಾರದ ಅಕ್ಕಿ, ತಿಪ್ಪೆಗೆ ಬಾರದ ಕಸ) ಆಲಿಕಲ್ಲು, ಪಲ್ಲಕ್ಕಿ, ಕಣ್ಣಿನ ಕಸ)

ತೆಗ್ಗೋರು ಬಸಪ್ಪ ಎದ್ದಿಂದು ಎದ್ದಿಂದು ಪಾಕದು (ತೆಗ್ಗಿನಾಗ ಬಸಪ್ಪ ಎದ್ದು ಎದ್ದು ನೋಡುತ್ತಾನೆ) – ಒಲಿಯಾಗಿನ ಬೆಂಕಿ (ಅಡಪುಗೋರು ನೆರಪು)

ಪಚ್ಚಂಡ ಸೆಡಿಗೋರು ಪೆರುಗು ಸೆಲ್ಲಿಕೀದು (ಹಸರು ಗಿಡದಾಗ ಮೊಸರು ಚೆಲ್ಲಿದೆ) – ಮಲ್ಲಿಗೆ

ಡಾಕ್ರವಾರದು ಸೂದಿ ಹೋಡ್ರದು, ಲೆಕ್ಕ ವಂಕೊದೆ ಹೋಕದು (ಡಾಕ್ಟ್ರ ಬರ್ತಾರೆ, ಇಂಜಕ್ಷನ್ ಮಾಡ್ತಾರೆ, ದುಡ್ಡ ಇಸ್ಕಳ್ದೇ ಹೋಗುತ್ತಾರೆ) –ಚೇಳು (ತೇಳು)

ಅಜ್ಜಪ್ಪಟ ಕುದರಿ ಅಂತ್ರತ್‌ಕೋರಿ ಉಚ್ಚಿಪೇಯದು (ಅಜ್ಜಪ್ಪನ ಕುದುರೆ ಅಂತ್ರದಲ್ಲಿ ಹುಚ್ಚೆ ಹುಯ್ಯುತ್ತೆ (ಅರನಾಳಿಗೆ) (ಬರಾಳು)

ಪಾಣಕ್ಕಿರತ ಕೊಲ್ಲುಂಗುದು, ಸತ್ತೋಕಿರತ ಎತ್ತೆರಂಗದು, ಓಟಿಲ್ಲದೆ ಊಟ್‌ಗು ವಾರಗಂಗದು (ಜೀವದ್ದು ಕೊಲ್ಲಬೇಡ, ಸತ್ತಿದ್ದು ತರಬೇಡ, ಬೇಟೆ ಇಲ್ದೇ ಮನೆಗೆ ಬರಬೇಡ) ಮೀನು

ಅಂಗಿ ಮೇನಿ ಅಂಗಿ ಪದಾರಂಗಿ ಇದೆಂದ ಸೊಣ್ಣೇ ಗಂಗಿ (ಅಂಗಿ ಮೇಲೆ ಅಂಗಿ ಹದಿನಾರಂಗಿ ಇದೇನೇ ಗಂಗಿ) – ಈರುಳ್ಳಿ (ಉಲಿಗೆಡ್ಡ)

ಅಂಗಡಿಗೋರು ಇಕ್ಕಿದಿಲ್ಲ, ತಕ್ಕಡಿಗೋರು ತೂಗದಿಲ್ಲ ಅದಿಲ್ಲದೆ ನಂಗಟೂಟಲಿ ಪಂಡಗ ಸೇಯದಿಲ್ಲ. (ಅಂಗಡಿಯಲ್ಲಿ ಮಾರುವುದಿಲ್ಲ, ತಕ್ಕಡಿಯಲ್ಲಿ ತೂಗುವುದಿಲ್ಲ, ಅದು ಇಲ್ಲದೆ ನಮ್ಮ ಮನೆ ಹಬ್ಬ ಮಾಡುವುದಿಲ್ಲ) ಸೆಗಣಿ (ಪ್ಯಾಡ)

ನಲ್ಲ ನೂರು ಗೀಳೆಂಗಳಗು ಒಂಡೇ ಮುಂಜೀ (ಚಂದಾಗಿರೋ ನೂರು ಗೀಳಿಗಳಿಗೆ ಒಂದೇ ಮುತಿ)–ಬಾಳೆಗೊನೆ (ಬಾಳಿಗೋಲಿ)

ಅಕ್ಕ ದಬದಬಾನ ಹೊಕ್ಕದು, ತಸ್ಸಿ ನಿದಾನತಗು ಹೋಕದು (ಅಕ್ಕ ಬೇಗಬೇಗನೆ ಹೋಗ್ತಳೆ, ತಂಗಿ ಮಲ್ಲಗೆ ಹೋಗುತ್ತಾಳೆ–ಗಡಿಯಾರದ ಮುಳ್ಳುಗಳು (ಗಡಿಯಾರಲ್ ಮುಳ್ಳುಂಗ)

ಅಣ್ಣ ಇಂಡಿಗೆ ಒಂಡಾಗದಿಲ್ಲ ತೆಂಬಿ ಇಂಡಿಗೆ ಒಂಡಾಕ್ಕದು (ಅಣ್ಣ ಅಂದ್ರೆ ಒಂದಾಗುವುದಿಲ್ಲ ತಮ್ಮ ಅಂದ್ರೆ ಒಂದಾಗುತ್ತಾರೆ)– ತುಟಿಗಳು (ಒದಡು)

ಕರಗ ಪಡ್ತಿಕೀದು ಗೂಳಿ ಬೂದುಗುಂಡಿಕೀದು (ಹಗ್ಗ ಹಾಸೈತಿ ಗೂಳಿ ಮಲಗೈತಿ) – ಕುಂಬಳಕಾಯಿ (ಸರಕಾಯಿ)

ಅಣ್ಣಪರ್ದ ಆರಗಾಪತ್ತು ವಾಟಗಾಲತಗು ತೆಂಬಿ ಪರಕಾದು (ಅಣ್ಣ ಹುಟ್ಟಿ ಅರವತ್ತು ವರ್ಷಕ್ಕೆ ತಮ್ಮ ಹುಟ್ಟುತ್ತಾನೆ) – ಬಿಳಿಕೂದಲು (ವಳ್ಳಮೆಗರು)

ಸೋರು ಸೇಯಂಗ ವಾರಮಾಟರ ಎರಸಿ (ಅನ್ನಕ್ಕೆ ಬಾರದ ಅಕ್ಕಿ) ರೊಟ್ಟಿಗಿ ವಾರಮಾಟರ ಮಾವ (ರೊಟ್ಟಿಗೆ ಬಾರದ ಹಿಟ್ಟು) ಕಾಸಂಗ ವಾರಮಾಟರ ನೆಯ್ಯಿ (ಕಾಸಕ್ಕೆ ಬಾರದ ತುಪ್ಪ) – ಹೊಂಬಾಳೆ, ಕುಂಕುಮ, ಜೇನು. (ಹೊಂಬಾಳೆ, ಎರ್ರನಾಮ, ತೇನಿ)

ಆನಿಕೆಲ್ಲು ಮಗವಂದು ಹಾರು ಏರೆಂಗಡ್ಡಿ ಮೆತ್ತುನಿಗು ನಾಲಾಳ್ ಪೊಂಬುಳ್ಯಂಗ ನಳೇರಗುಂಡವಾರದು (ಆನಿಕಲ್ಲು ಮಳೆಬಂದು ಹಳ್ಳಕೆರೆಗಳೆಲ್ಲ ತುಂಬಿದರು ನಾಲ್ಕು ಜನ ಹೆಂಗಸರು ನೇನಿಯದೆ ಬರುತ್ತಾರೆ) – ಹಸುವಿನ ಕೆಚ್ಚಲು (ಮಾಟಬೋಸೆಂಗ)

ಇತ್ನೇ ಏರಿ, ಏರಿಗೋರು ತನ್ನಿ, ತನ್ನಿಗೋರು ಏರು, ಏರುಗೋರು ನೆರಪು (ಇಷ್ಟೇ ಕೆರೆ, ಕೆರೆಯಲ್ಲಿ ನೀರು, ನೀರಿನಾಗೆ ಬೇರು, ಬೇರುನ್ಯಾಗೆ ಬೆಂಕಿ) – ದೀಪ (ಬಳಕು)

ಒಂಡಾಳ್‌ನ ವಸರೇರರಗ ಅರ್ತಿಗೆ ಶಂಕು, ಅಡ್ಡ ಅರ್ತಿಗೆ ಗಾಲಿ (ಒಬ್ಬನ ಉದ್ದ ಕೊಯ್ದರೆ ಶಂಕ, ಅಡ್ಡ ಕೊಯ್ದರೆ ಚಕ್ರ) – ಈರುಳ್ಳಿ (ಉಲಿಗೆಡ್ಡ)

ವಸರೇರ ಮರತ್‌ಗು ನೀಡಿಲ್ಲ (ಉದ್ದನೆ ಮರಕ್ಕೆ ನೆರಳಿಲ್ಲ) – ದಾರಿ (ರಸ್ತೆ) ಎಗಿ

ವಸರೇರ ಮರ್ತಗು ಗುದ್ದಲಿ ಸಿಗೋಟಿಗಿ (ಉದ್ದನ ಮರಕ್ಕೆ ಗುದ್ದಲಿ ಸಿಗಕೈತಿ)– ಮೂಗುತಿ (ನತ್ತ)

ಊರುಂಡೂರುಗು ಹೊಕ್ಕದು, ಇಂದಾಟಲೇ ಬುದಿಕ್ಯಾದು ವಸರೇನ ಬೇತಾಳ (ಊರಿಂದೂರಿಗೆ ಹೋಗುತ್ತದೆ, ಇದ್ದಲ್ಲೇ ಬಿದ್ದಿರುತ್ತೇ, ಉದ್ದಾನೆ ಬೇತಾಳ) ರಸ್ತೆ.

ಎದುರು ದಿನ್ನಿಗಿ ಬಿದರಗೂಟು (ಎದುರು ದಿನ್ನೆಲೆಗೆ ಬಿದಿರು ಗೂಟ)–ಅಣಬೆ (ಕಾಳಂಬೂವ್ವು)

ಪೆಚ್ಚಮಾಟರ ಹಾಸಬಂಡ, ಸುತ್ತಮಾಟರ ಸ್ಯಾಪ, ಪೊಣ್ಸಂಗಾಗಾ ಮಾಟರ ಗೆಜ್ಜೆಂಗ (ಎತ್ತಲಾರದ ಚಪ್ಪಡಿ, ಸುತ್ತಲಾರ್ದ ಚಾಪೆ, ಪೋಣಿಸಲಾರ್ದ ಗೆಜ್ಜೆಗಳು) – ಭೂಮಿ, ಆಕಾಶ, ನಕ್ಷತ್ರ

ಒಂಡಳಾಯಿ ಗುಡಿಕೋಕು ಹೋಕದು, ರೊಂಡಳಾಯಿ ಬೇಲಿಗಿ ವಾರದು (ಒಬ್ಬರಾಗಿ ಗುಡಿಯೊಳಗೆ ಹೋಗ್ತಾರೆ, ಇಬ್ಬರಾಗಿ ಹೊರಗೆ ಬರ್ತಾರೆ) ತೆಂಗಿನಕಾಯಿ (ಟೆಂಕಾಯಿ)

ಕರ್ತದು ಕಾಕಲ್ಲ, ನೆಡುಸಿನ್ನೆದು ಸಿಂಪಲ್ಲ, ತಲಕಾಯಿ ದಪ್ಪ ಆನೆಯಲ್ಲ (ಕರ್‍ರಗದೆ ಕಾಗೆಯಲ್ಲ, ನಡುಸಣ್ಣ ಸಿಂಹವಲ್ಲ, ತಲೆದಪ್ಪ ಆನೆಯಲ್ಲ) ಇರುವೆ, (ಗೊದ್ದ)

ಕರ್ತ ಕೊಲ್ಲಗೋರು ವಳ್ಳ ಎಗಿ (ಕರಿ ಹೊಲದಲ್ಲಿ ಬಿಳಿದಾರಿ) ಬೈತಲೆ ಪಾಪಡಿ)

ಒಂಡು ತೆಲದು, ಒಂಡು ಮುಳುಗದು, ಒಂಡು ಕರಗದು (ಒಂದು ತೇಲುತ್ತೆ, ಒಂದು ಮುಳುಗುತ್ತೆ, ಒಂದು ಕರಗುತ್ತೆ) ಎಲೆ, ಅಡಿಕೆ, ಸುಣ್ಣ (ಎಲ, ಒಕ್ಕೊಪೋಡು, ಸುನ್ನು)

ಕರ್ತ ಮಾಡು ತೇಲದು, ವಳ್ಳು ಮಾಡು ಮುಣುಗದು (ಕರಿ ಎತ್ತು ತೇಲುತ್ತೆ, ಬಿಳಿ ಎತ್ತು ಮುಳುಗುತ್ತೆ) ಕಾಫಿಪುಡಿ, ಸಕ್ಕರೆ

ಕಾಯಿಕೀದು ಪೂವಿಲ್ಲ, ಎಲಕೀದು ಕಾಯಿಲ್ಲ (ಕಾಯಿ ಉಂಟು ಹೂವಿಲ್ಲ, ಎಲೆಯುಂಟು ಕಾಯಿ ಇಲ್ಲ) ಅತ್ತಿಮರ, ಕಳ್ಳಿ ಮರ

ಕಾಲಿಲ್ಲಾರ ಮಾಡು ಏರಿಲ್ಲಾರ ಗೆಡ್ಡಿ ಮೇಯಂಚೋ (ಕಾಲಿಲ್ಲದ ಎತ್ತು ಬೇರು ಇಲ್ಲದ ಗರ್ಕಿ ಮೇಯ್ತುತಂತೆ)–ಮೀನು–ಪಾಚಿ

ಎರ್ರಮಾಟಕರ್ರಿ ಎತ್ತೆಂದು ಊರಡ್ಡಿ ತಿಂಗ್ಯೇದು (ಕೆಂಪೆತ್ತಿನ ಮಾಂಸನ ಊರೆಲ್ಲ ತಿನ್ತಾರೆ) – ಹುಣಸೆ ಹಣ್ಣು. (ಪಿಂಗಾಯಿಪಗು)

ಏರಿ ಮೇನಿ ಉತ್ರಾಣಿ ಸೆಡಿ ಪರ್ದು ಪಿಚ್ಚಿಗಿ ವಾರದಿಲ್ಲ, ಅಗದಿಗೂ ವಾರದಿಲ್ಲ (ಕೆರೆ ಮೇಲೆ ಉತ್ರಾಣಿ ಗಿಡ ಹುಟ್ಟಿ ಕಿತ್ತೂರು ಬರಲ್ಲ, ಅತ್ತರೂ ಬರಲ್ಲ) ಹಚ್ಚೆ. (ಪಚ್ಚೆ)

ಕನ್ನಡದಲ್ಲಿ ಇರುವ ಒಗಟುಗಳ ಬಳಕೆ

ಹಸರು ಗಿಡದಾಗ ಮೊಸರು ಚೆಲ್ಲೈತಿ –ಮಲ್ಲಿಗೆ ಹೂ

ಈಟ ಹುಡ್ಗ ಜೋಟಿ ಹೊಡಿತಾನ – ಹುಣಸೇ ಬೋಟು

ಬೆನ್ನಿಗೆ ಬೇರು ಇಳಿದೋಳೆ ಮಣಕಾಲಿಗೆ ಮೊಲೆ ಬಂದೋಳೆ, ಈ ಊರಿಗೆ ದಾರಿ ಯಾವುದು.... (ಹಣ್ಣು ಸ್ನಾನ ಮಾಡುವ ಬಂಗಿ)

ಹುಲ್ಲಲ್ಲಿ ಸನ್ಯಾಸಿ ಮಲಗಿದ್ದಾನೆ – ಶಿಶ್ನ

ಬಡವಂದು ಬಗಲಾಗೆ, ಸಾವುಕಾರಂದು ಜೇಬಿನಾಗೆ – ಸಿಂಬಳ

ಪಲ್ಲಕ್ಕಿ ರಾಯನ್ನ ಹುಲ್ಲಾಗೆ ಒಯ್ತಾರೆ – ಶಿಶುವಿನ ಮಲ

ನೀನು ನಿನ್ನ ಹೆಣ್ತಿ ಪೇಜಾಡಬೇಕಾದಾರೆ ಜೋತಾಡುವನು – ಶ್ಯಾವಿಗೆ

ಅಡಕೆ ಆರಸಲಾರೆ, ಚಾಪೆ ಮಡಚಲಾರೆ – ನಕ್ಷತ್ರ, ಆಕಾಶ

ಇಟಿಗಿ ಎಮ್ಮಿ ಕಟಗಿ ಮೇಯುತ್ತೆ – ಒಲೆ

ಐದು ಜನ ಸೂಳೇರು ಏರಿಮೇಲೆ ಹೋಗ್ತಾ ಇರ್ತಾರೆ, ಮುಂದಕೆ ಬಗ್ತಾರೆ, ಹಿಂದಕೆ ಬಗ್ಗಲ್ಲ– ಬೆರಳುಗಳು

ಒಂದಕ್ಕೆ ಅತ್ತಿಗೊಂಡೈತಿ, ಒಂದು ಅಲಗಾಡತೈತಿ – ಬೆಂಡೋಲೆ

ಒಬ್ಬಾಕೆ ಇಂಡಿಗೆ ಬಂದಾಳೆ, ಒಬ್ಬಾಕೆ ಹಾಲಿಗೆ ಬಂದಾಳೆ ಇಬ್ರಿಗೂ ಒಂದೇ ಉತ್ತರ ಹೇಳಬೇಕು–ಹಿಂಡಿಲ್ಲ.

ಕೇಯ್ದಂಗೆಲ್ಲಾ ಹುಟ್ತಾಲೆ ಇರ್ತಾವೆ – ಕೂದಲು

ಗವಿ ಒಳಗೆ ಬಟ್ಟೆ ವಣ ಹಾಕಿದಿನಿ ಹಾರಂಗಿಲ್ಲ – ನಾಲಗೆ

ಗಿಡ್ಡ ಹುಡುಗನ್ಗೆ ಮೈತುಂಬ ಗೆಜ್ಜೆ – ಕಡ್ಲೆಗಿಡ

ಗುಡ್ಡದ ಹಿಂದೆ ಗೊರವಯ್ಯ ಕುಂತವ್ನೆ – ತುರುಬು

ಚಿಕ್ಕ ಮನೆಗೆ ಚಕ್ಕೆ ತುಂಬಿತಿ – ಹಲ್ಲುಗಳು

ಜಾಲಿ ಹೂವು, ಜಾರದ ಹೂವು, ವರಕೊಟ್ರೆ ಬಾರದ ಹೂವು – ನಕ್ಷತ್ರ

ಚಿತ್ತೂರು ಗೌಡ್ನ ಹೆಣ್ತಿ ನೆತ್ತಿಮ್ಯಾಲೆ ಬಸಿರಾಗುತ್ತಾಳೆ – ಜೋಳದ ತೆನೆ

ಬಣವೆ ಹಿಂದೆ ಬಾರ್‌ಕೋಲು ಬಿದ್ದೈತೆ – ಜಡೆ

ಬಾಯಲ್ಲಿ ತಿನ್ನುತ್ತೆ ಪಕ್ಕದಲ್ಲಿ ಹೇಲುತ್ತೆ – ಬೀಸುವ ಕಲ್ಲು

ಮಡಚಿದರೆ ಮೊಗ್ಗ, ಅರಳಿದರೆ ಹೂವು – ಕೊಡೆ

ಮರ ಏರುವುದು ಮಂಗವಲ್ಲ ಕಪ್ಪು ಉಂಟು ಕಾಗೆಯಲ್ಲ, ನಡಸಣ್ಣ – ಗೊದ್ದ

ಮುಳುಗಿ ಮುಳುಗಿ ಏಳು ಕಾಗೆ ದಡಕ್ಕೆ ಹತ್ತು ಕಾಗೆ ಮರಕ್ಕೆ ಆರು ಕಾಗೆ ಒಟ್ಟು ಎಷ್ಟು ಕಾಗೆ – ಒಂದು ಕಾಗೆ

ನಡೆಯುವವರು ಎಂಟು ನಡೆತಪ್ಪಿದವರು ಎರಡು ಒಟ್ಟು ತಲೆ ಐದು – ಹೆಣ ಮತ್ತು ಹೊತ್ತನಾಲ್ವರು

ಅಂತರಲಾಡೋ ಹಂಪಣ್ಣ, ಅಂಗಿ ಬಿಚ್ಕೋ ಲಿಂಗಣ್ಣ, ನೆಲಕ್ಕೆ ಬಿದ್ರೆ ದುಪ್ಪಣ್ಣ – ಹುಣಸೆಹಣ್ಣು

ನೂರು ಮಕ್ಕಳಿಗೆ ಒಂದೇ ಉಡದಾರ – ಕಸಬರಿಕೆ

ಅಕ್ಕನ ಮನೆ ತಂಗಿ ಹೋಗುತ್ತಾಳೆ, ತಂಗಿ ಮನೆಗೆ ಅಕ್ಕ ಬರಂಗಿಲ್ಲ – ಚೊಂಬು, ಹಂಡೆ

ಅಂಕು ಡೊಂಕಿನ ಮರ, ಕಚ್ಚಿದವರ ಬಾಯಿಗೆ ಉಚ್ಚೆ ಹುಯ್ಯುವ ಮರ – ಕಬ್ಬು

ಊರಿನವರೆಲ್ಲರಿಗೂ ಒಂದೇ ಕಂಬಳಿ – ಆಕಾಶ

೫.೩. ಒಡಪುಗಳು

ಮೌಖಿಕವಾಗಿ ತಲೆಮಾರಿನಿಂದ ತಲೆಮಾರಿಗೆ ಸಾಗಿ ಬಂದಿರುವ ಒಗಟು ಗಾದೆಗಳ ಜೊತೆ ಒಡಪುಗಳಿಗೂ ಮಹತ್ವದ ಸ್ಥಾನವಿದೆ. ಇವು ಅಧಿಕ ಸಂಖ್ಯೆಯಲ್ಲಿ ದೊರೆಯದಿದ್ದರೂ, ದೊರೆತಷ್ಟು ಜನಮನವನ್ನು ಸೆಳೆದು ಉಳಿದಿವೆ. ಮತ್ತು ಚತುರರ ಕಲ್ಪನಾ ಸಾಮರ್ಥ್ಯದಿಂದ ಹುಟ್ಟಿದವು ಆಗಿವೆ. ಸಾಮಾನ್ಯವಾಗಿ 'ಒಗಟು', ಒಡಪುಗಳು ಒಂದೇ ರೀತಿಯಾಗಿ ಕಂಡರು "ಒಡೆದು ಹೇಳುವುದು ಒಡಪು" ಬಿಚ್ಚಿ ಹೇಳುವುದು ಒಗಟು ಆಗಿದೆ. ಒಡಪುಗಳು ವ್ಯಕ್ತಿಯ ಪರಸ್ಪರ ಗುಣಗಾನ ಇಲ್ಲವೆ ಗುಣದೋಷಗಳೊಂದಿಗೆ ವಿನೋದ, ವಿಡಂಬನೆಯೊಂದಿಗೆ ಗೇಯತೆ ಮತ್ತು ಲಯಬದ್ಧತೆಯನ್ನು ಕಾಣುತ್ತೇವೆ. ಪ್ರಮುಖವಾಗಿ ಮದುವೆ ಸಮಾರಂಭಗಳಲ್ಲಿ ಗಂಡ–ಹೆಂಡತಿಯ ಪರಸ್ಪರ ಹೆಸರು

ಹೇಳುವಾಗ ಈ ಬಳಕೆಯಾಗುತ್ತವೆ. ಮತ್ತು ಉತ್ತಮವಾದ ಮನರಂಜನೆಯನ್ನು ನೀಡುತ್ತವೆ. ಸಾಮಾನ್ಯವಾಗಿ ಇಲ್ಲಿ ಹೆಣ್ಣು-ಗಂಡಿಗೆ ಹೇಳುವ ಒಡಪುಗಳಲ್ಲಿ ಗಂಡಸರಿಗೆ ರಾಯರು, ಶೆಟ್ಟರು, ರಾಜ, ಹಮ್ಮೀರ, ಮಂತ್ರಿ, ಇತ್ಯಾದಿಯಾಗಿ ಪತಿದೇವರಿಗೆ ಭೂಷಣವಾಗುವಂತೆ ಬಹುವಚನ ಬಳಸಿ ಹೇಳಿದರೆ, ಗಂಡಸರು ಅರೆವಚನಗಳನ್ನು ಉಪಯೋಗಿಸುವುದನ್ನು ಕಾಣುತ್ತೇವೆ. ಸಾಮಾನ್ಯವಾಗಿ ಕೊರಚರ ಭಾಷೆಯಲ್ಲಿ ವಿಶೇಷವಾದ ಕೇವಲ ಗಂಡನ ಹೆಸರಿನ ಮುಂದೆ ನಂಗ್‌ಮಾಮ್ ಎಂದು ಸಂಬೋಧಿಸುತ್ತಾರೆ. ಕಾರಣ ವಿವಾಹ ಸಂದರ್ಭ ಎಲ್ಲಾ ಸಮುದಾಯಗಳ ಮಧ್ಯೆಯದಲ್ಲಿ ಇಂದು ವಿವಾಹಗಳು ಜರುಗುವುದಾಗಿದೆ. ಉದಾ. ಗಂಗಾ-ಗಂಗಿ, ಬಸಮ್ಮ-ಬಸ್ಸಿ, ನಿಂಗಮ್ಮ-ನಿಂಗಿ, ಜಂಬಕ್ಕ-ಜಂಬಿ ಇತ್ಯಾದಿ ಬಳಕೆಯನ್ನು ನೋಡಬಹುದು. ಈ ಒಡಪುಗಳನ್ನು ಕೊರಚರು ಇತರೆ ಜನಸಮುದಾಯಗಳಂತೆ ಬಳಸುವುದು ಕಂಡುಬರುತ್ತದೆ. ಅವು ಮುಂದಿನಂತಿವೆ.

ಹೆಣ್ಣು-ಗಂಡಿಗೆ ಹೇಳುವಂತದ್ದು:

ಅಂಗಿ ಮೇಲೆ ಅಂಗಿ ಮೈಯಾಗ, ಮದ್ರಾಸ ವಾಚ್ ಕೈಯಾಗ ಮಲ್ಲಮ್ಮನಂಥ ಮಡದಿ ಕರಕೊಂಡು ಮಲ್ಲಿಕಾರ್ಜುನಗ ಹೋಗ್ತಾನ....

ಆರುಸೇರು ನವಣಕ್ಕಿ, ಮೂರುಸೇರು ಮಂಡಕ್ಕಿ ಧೋತರದಾಗಿಟಗಂಡು ಪಾತ್ರದಾಕಿ ಮನೀಗೆ ಹೋಗ್ತಾನ....

ಕತ್ತಿನಾಗ ಉತ್ತುತ್ತಿಸರ, ಬಗಲದಾಗ ಬಾಳಿಗೋನಿ, ಸಿರಿವಂತರ ಮಗಳು ಸೀತಾದೇವಿ ಬರ್ತಾಳಂದ್ರೆ ಮಾರಿ ಮ್ಯಾಲ ನೋಡ್ತಾರಾ...

ಹತ್ತು ಜನರಾಗ ಹೇಳೋ ಅತ್ತಿ ಮಾವನ ಹೆಸ್ರು ನೂರು ಮಂದ್ಯಾಗ ಹೇಳೋ ತಂದೀತಾಯಿ ಹೆಸ್ರು ಕುಂತ ಸಭಾದಾಗ ಹೇಳೋ ನನ್ನ ಪತಿದೇವ್ರ ಹೆಸರು....

ತೆಳ್ಳನ ರೊಟ್ಟಿ, ಬೆಳ್ಳನ ಹಾಲು, ಬೆಳದಿಂಗಳಾಗ ಕುತುಗೊಂಡು ಉಣುತಾರ ನನ್ನ ಪತಿದೇವ್ರು...

ಕಾಲಾಗ ಕರಿಬೂಟು ಮೆಟ್ಟಿರಬೇಕು, ಸೈನದಂಗಿ ತೊಟ್ಟಿರಬೇಕು, ನಾ ಕರದಾಗ ಬರ್ತಿರಬೇಕು ನನ್ನ ಪತಿದೇವ್ರು....

ಆರು ಕೊಡ ಅಂಬಲಿ, ನೂರು ಕೊಡ ಮಜ್ಜಿಗಿ ಕುಡ್ದು ಸೊಕ್ಕಿದವರಿಗೆ ನೀರು ಕುಡಿಸಿ ಸುಖದಿಂದಿರ್ತಾರ...

ದೇವರ ಪೂಜೆ ಮಾಡತಾರ, ಸಾವಿರಕೊಂದು ಆಡತಾರ ಸಿಟ್ಟಿಗೆದ್ದು ಸೆಟಗೋತಾರ, ಸರಸರ ಹೋಗತಾರ....

ಸಣ್ಣಕ್ಕಿ ತರಲಿಲ್ಲ, ದೊಡ್ಡಕ್ಕಿ ಉಣಲಿಲ್ಲ ಮನ್ಯಾಗ ಇರಲಿಲ್ಲ, ಮಾತು ಕೇಳಲಿಲ್ಲ, ಇದ್ದಿದ್ದು ಉಣ್ಣಂದ್ರ ಎದ್ದೆದ್ದು ಹೋಗುತಾರ....

ಉಡಾಕ ಸೀರಿ ಇಲ್ಲ, ತೊಡಕ ಕುಬುಸ ಇಲ್ಲ ದುಡ್ಯಾಕ ಹೋಗಂದ್ರ, ಹೊಡ್ಯಾಕ ಬರತಾರ....

ಎಣ್ಣೆ ಹಚಗೊಂಡು ಎರಕೋತಾರ, ಬೆಣ್ಣಿ ಹಣಗೊಂಡು ರೊಟ್ಟೀ ತಿಂತಾರ, ಸಣ್ಣಕ್ಕಿ ಬಾನಾ ಉಣ್ಣಂದ್ರ ಸಿಟ್ಟಿಲೇ ನೋಡುತಾರ....

ಬಂಗಾರ ಬ್ಯಾಡಂತಾರ, ಸಿಂಗಾರ ಮಾಡಂತರ ಅಂಗಾಲ ಸಪ್ಪಳಿಲ್ದೆ ಅಂಗಳದಾಗ ಬರತಾರ...

ಬಂಗಾರ ಗಿಡ, ಬೆಳ್ಳೀ ಬುಡ, ಚಂದ್ರಹಾರ ಮಾಡಸರೀ ಅಂದರ ಮುಂದಿನ ಸಂಬಳ ಬರ್ಲಿ ಅಂತಾರ...

ಕಟ್ಟಿಮ್ಯಾಲ ಕಟ್ಟಿ, ಕುಂಬಳಕಾಯಿ ಸೊಟ್ಟಿ, ಸಂಜೀತನಕ ಬಿಟ್ಟೀ... ಹೆಸರ ಹೇಳಾಕ ನಾ ಭಾಲ ಘಟ್ಟಿ...

ಹೇಳಲಕ್ಕೆ ಹೆಸರಚಂದ, ಕೇಳಲಿಕ್ಕೆ ಕಥೆ ಚಂದ, ರಾಮನಿಗೆ ಸೀತಾದೇವಿ ಚಂದ ನನಗೆ..... ಚಂದ.

ಗುಂಗುರ ಗೂದಲು, ಬಂಗಾರ ಬೇತಲ ಬಂಗ್ಲೆದಾಗ ಕುಂತು ಇಂಗ್ಲೀಷ್ ಬರಿತಾರ...

ಬಂಗಾರದ ಗಿಂಡಿ, ಇಬುತ್ತಿ ಉಂಡಿ, ಶಿವನಗದ್ದಿಗಿ ಮ್ಯಾಲೆ ಕೂತು ಶಿವಪೂಜೆ ಮಾಡತಾರ...

ತಾಳ್‌ಗೆಟ್ಟು ಬೀಡಿ ಸೇದತಾರ, ಬಾಳ್‌ಗೆಟ್ಟು ಕೂಳು ಬಿಟ್ಟಾರ ನೋಡಿ ಚಟ ಮಾಡಬೇಡಂದರೆ ನ್ಯಾಯ ತಗಿತಾರ....

ಗಂಡು-ಹೆಣ್ಣಿಗೆ ಹೇಳುವಂತಹದ್ದು:

ನಡುಸಣ್ಣ, ನಾಗರಬಣ್ಣ, ಹಿಡಿಯಾಕ ಹೋದ್ರೆ ಕಡಿಯಾಕ ಬರ್ತ್ತಾಳ...

ಗುಂಗುರು ಕೂದಲಾಕಿ ಬರಗಾಲ ಬೈತಲಾಕಿ ಅಂಗಳದಾಗ ಕುಂತು ರಂಗೋಲಿ ಹೊಯ್ತಾಳ.

ಕಣದಾಗ ಕಂಕಿ ನನ್ನ ಕೈಯಾಗ ವಂಕಿ, ನನ್ನ ಕಂದ್ರ ಬಲು ಬೆಂಕಿ...

ಹೊಲದಾಗ ಬೆಳೆಯುವುದು ಹುಲ್ಲು, ಕುಸ್ತಿ ಹಿಡಿಯುವವನು ಮಲ್ಲ ನಮ್ಮಾಕಿ ಮಾಡ್ತಾಳ ಬಾಳ ಗುಲ್ಲ...

ಸುಳ್ಳು ಹೇಳತಾಳ, ಮಳ್ಳ ಮಾಡತಾಳ, ಜಳಕಾ ಮಾಡಂದ್ರ ಜಗಳಾ ತಗೀತಾಳ....

ಗಂಟು ಮೂಗ ಸೊಟ್ಟಬಾಯಿ ಸಾರಮಾಡಂದರ ಸೆಟಗೊಂಡ ಹೋಗತಾಳ...

ಹಗ್ಗದಲೆ ಹೊಡೆದರೆ ಹಾರಿ ಬೀಳತಾಳ ಒಣಕಿಲೆ ಹೊಡೆದರೆ ಕುಣಕೋತ ಬರತಾಳ....

ಜೋಡು ಕೊಡ ಹೊತ್ತು ನೀರು ತರ್ತಾಳ, ಬಡಬಡ ಕಡಬ ಮಾಡಂದ್ರ ವಡವಡ ಹಂತಾಳ...

ಹಟ್ಟಿಯಾಗ ಸಗಣಿ ಗ್ವಾಡಿಮ್ಯಾಲ ತಗಣಿ ತಿಕ್ಕಿ ಬಿಡು ಅಂದ್ರೆ ನೆಕ್ಕಿ ನೋಡತಾಳ...

ಬಡಿವಾರ ಮಾಡತಾಳ, ವಾರಿನೋಟ ಬೀರತಾಳ, ಗಡಿಗಿ ತೋಳಿ ಅಂದರ ಗಳಗಳ ಅಳತಾಳ....

ಗಲ್ಲಾ ಹಿಡಿದರ ನಗತಾಳ, ಗುಲ್ಲು ಮಾಡದ ಇರತಾಳ, ಸದ್ದ ಕೇಳಿದರೆ ಸಾವಕಾಶ ಬರತಾಳ....

೫.೪. ಕೌಟುಂಬಿಕ ವಲಯ ಮತ್ತು ಭಾಷಾ ಬಳಕೆ

ಪ್ರತಿಯೊಂದು ಬುಡಕಟ್ಟು ಸಮುದಾಯವು ಸಮುದಾಯದ ಜೊತೆ ಕೌಟುಂಬಿಕ ವಲಯದಲ್ಲಿ ತಮ್ಮದೇ ಭಾಷೆಯನ್ನು ಬಳಸುತ್ತಾರೆ. ಇದು ವ್ಯವಹಾರಿಕ ವಲಯದ ಭಾಷೆಗಿಂತ ಭಿನ್ನವಾಗಿ ಬಳಕೆಯಾಗುತ್ತದೆ. ಕೊರಚರಲ್ಲಿಯೂ ಕೂಡ ವ್ಯವಹಾರಿಕ ವಲಯದ ಭಾಷೆಗಿಂತ ಕೌಟುಂಬಿಕ ವಲಯದ ಭಾಷೆಯು ಹೇಗೆ ಭಿನ್ನವಾಗಿದೆ ಎಂಬುದನ್ನು ಪ್ರಸ್ತುತ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಕೊರಚರ ಸಮುದಾಯದಲ್ಲಿನ ರಕ್ತಸಂಬಂಧಿಗಳು, ಆಪ್ತರು, ನೆಂಟರಿಸ್ಟರು, ಬಂಧು-ಬಳಗದವರೊಡನೆ ಬಳಕೆಯಾಗುವಂತಹ ಭಾಷೆಯಲ್ಲಿನ ಸಂಬಂಧವಾಚಕಗಳು ಮತ್ತು ಸಂಬೋಧನಾ ರೂಪಗಳನ್ನು ಕೌಟುಂಬಿಕವಲಯದ ಭಾಷೆಯಾಗಿ ಇಲ್ಲಿ ಚರ್ಚಿಸಲಾಗಿದೆ.

ಕೊರಚರ ಸಮುದಾಯವು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವಲಸೆ ಬಂದಂತಹ ಸಮುದಾಯ ತಮ್ಮೊಂದಿಗೆ ತಮ್ಮದೇ ಆದ ಜೀವನ ಪದ್ಧತಿ, ಕುಲಕಸಬುಗಳು, ವೃತ್ತಿಗಳು, ಸಂಸ್ಕೃತಿ, ಆಚಾರ-ವಿಚಾರ, ಉಡುಗೆ-ತೊಡುಗೆಗಳು, ನಂಬಿಕೆಗಳನ್ನು ಅಳವಡಿಸಿಕೊಂಡು ಬಂದಿರುವುದರ ಜೊತೆಗೆ ಭಾಷೆಯನ್ನು ಕೂಡ ಅಳವಡಿಸಿಕೊಂಡು ಬಂದಿರುವುದನ್ನು ಕಾಣುತ್ತೇವೆ. ಹಾಗೆಯೇ ಇತರ ಸಮುದಾಯದವರಂತೆ ಇವರು ಸಹ ತಮ್ಮದೇ ಆದ ಭಾಷೆಯನ್ನು ಹೊಂದಿದ್ದಾರೆ. ವ್ಯವಹಾರಿಕವಾಗಿ ಇವರು ಕನ್ನಡವನ್ನು ಬಳಸುತ್ತಾರೆ. ಇಂತಹ ಒಂದು ಭಾಷೆಯನ್ನು ಬಳಸುವ ಸಂದರ್ಭದಲ್ಲಿ ಆಗುವ ವ್ಯತ್ಯಾಸ ಹಾಗೂ ಯಾವ ಭಾಷೆಯ ಮುಖಾಂತರ ತನ್ನ ಸಂಸ್ಕೃತಿಯನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತಿದೆ? ನಗರೀಕರಣದ ಸಂದರ್ಭದಲ್ಲಿ ತಮ್ಮ ಅಸ್ತಿತ್ವವನ್ನು ಯಾವ ಭಾಷೆಯ ಮುಖಾಂತರ ಈ ಸಮುದಾಯವು ಗುರುತಿಸಿಕೊಳ್ಳುತ್ತಿದೆ? ಹಾಗೂ ಕೌಟುಂಬಿಕ ವಲಯದಲ್ಲಿ ಬಳಕೆಯಾಗುವ ಭಾಷೆ ಅಥವಾ ಉಪಭಾಷೆ ಯಾವುದು? ಹಾಗೂ ವ್ಯವಹಾರಿಕ ವಲಯದಲ್ಲಿ ಯಾವ ಭಾಷೆಯನ್ನು ಹೆಚ್ಚಾಗಿ ಬಳಸುತ್ತಾರೆ? ಭಾಷಾ ಬಳಕೆ ವಿವಿಧ ವಲಯಗಳಲ್ಲಿ ಹೇಗೆ ಭಿನ್ನವಾಗಿದೆ ಎಂಬ ಅನೇಕ ಅಂಶಗಳನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

೫.೪.೧. ಸಂಬಂಧವಾಚಕಗಳು

ಮನುಷ್ಯನಿಗೆ ಇರುವ ಅನೇಕ ಬಗೆಯ ಸಂಬಂಧಗಳಲ್ಲಿ ಬಂಧುತ್ವವೂ ಒಂದು. ಅದು ಭಾಷಿಕರ ಹಲವು ಬಗೆಯ ಸಾಮಾಜಿಕ ಸಂಬಂಧಗಳಿಂದ ಬೆಸೆದುಕೊಂಡಿರುತ್ತದೆ. ಇದು ಇಂಗ್ಲಿಷ್‌ನ 'Kinship' ಪದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ ಬಂಧುತ್ವ ಪದ ಬಳಕೆಯಲ್ಲಿದೆ. ಅದರರ್ಥ

ರಕ್ತಸಂಬಂಧಿ, ಕಳ್ಳುಬಳ್ಳಿ, ನೆಂಟರು ಇತ್ಯಾದಿ ಅರ್ಥಗಳನ್ನು ಹೊಂದಿದೆ. ಸಮಾಜ ಜೀವಿಯಾದ ವ್ಯಕ್ತಿಯು ತನ್ನ ಸುತ್ತಮುತ್ತಲಿನ ಜನರ ಸಂಬಂಧವನ್ನು ತೊರೆದು ಒಂಟಿ ಜೀವನ ನಡೆಸಲು ಸಾಧ್ಯವಿಲ್ಲ. ಒಬ್ಬ ವ್ಯಕ್ತಿ ಒಂದು ಜನಾಂಗಕ್ಕೆ ಸೇರಿದ್ದಾನೆ ಎಂದರೆ ಅವನು ತನ್ನ ಹಿರಿಯರಿಂದ ಹರಿದು ಬಂದ ವಾಂಶಿಕತೆಗೆ ಒಳಗಾಗಿದ್ದಾನೆ ಎಂದರ್ಥವಾಗುತ್ತದೆ. ಬಂಧುತ್ವ ಹುಟ್ಟಿನಿಂದಲೇ ಬರುವಂತದ್ದು. ಬಂಧುತ್ವವು ವಯಸ್ಸು, ಲಿಂಗ, ಜಾತಿ ಹಾಗೂ ಸಾಮಾಜಿಕ ವರ್ಗಗಳನ್ನು ಅವಲಂಬಿಸಿರುತ್ತದೆ. ಇಂತಹ ಬಂಧುವಾಚಕ ಅಥವಾ ಸಂಬಂಧವಾಚಕಗಳ ಪರಿಕಲ್ಪನೆ ಮತ್ತು ಪರಿಭಾಷೆಗಳು ಭಿನ್ನ ಸಂಸ್ಕೃತಿಗಳಲ್ಲಿ ವೈವಿಧ್ಯಮಯವಾಗಿರುವ ಸಾಧ್ಯತೆಗಳಿವೆ. ಒಂದು ಭಾಷೆಯಲ್ಲಿ ಅಷ್ಟೊಂದು ಸ್ಪಷ್ಟವಾಗಿಲ್ಲ ಅಲ್ಲದೆ ಅವು ಪ್ರತ್ಯೇಕ ಪ್ರತ್ಯೇಕವಾಗಿ ಬಳಕೆಯಲ್ಲಿರುವುದಿಲ್ಲ. ದ್ರಾವಿಡ ಭಾಷೆಗಳಲ್ಲಿ ಅಕ್ಕ–ತಂಗಿ, ಅಣ್ಣ–ತಮ್ಮ, ಅಜ್ಜ–ಅಜ್ಜಿ, ಮಾವ–ಅತ್ತೆ, ಮಗ–ಮಗಳು, ಭಾವ–ಮೈದುನ, ನಾದಿನಿ ಮುಂತಾದ ಸಂಬಂಧಸೂಚಕ ಶಬ್ದಗಳು ಲಿಂಗಕ್ಕೆ ಅನುಗುಣವಾಗಿ ಪ್ರತ್ಯೇಕ ಪ್ರತ್ಯೇಕವಾಗಿ ಬಳಕೆಯಲ್ಲಿವೆ. ಸಂಬಂಧವಾಚಕಗಳು ಆಯಾ ಸಮುದಾಯದ ಸಂಬಂಧಕ್ಕೆ ತಕ್ಕಂತೆ ಅವರ ಭಾಷೆಯಲ್ಲಿ ಬಳಕೆಯಲ್ಲಿರುತ್ತದೆ. ಅದೇ ರೀತಿಯಾಗಿ ಕೊರಚರ ಸಮುದಾಯದವರಲ್ಲಿ ಅಭಿವ್ಯಕ್ತಗೊಳ್ಳುವ ಸಂಬಂಧವಾಚಕಗಳ ಸ್ವರೂಪ ಮತ್ತು ಬಳಕೆಯ ವಿಧಾನಗಳನ್ನು ಇಲ್ಲಿ ಚರ್ಚಿಸಲಾಗಿದೆ. ಇದರ ರಾಚನಿಕ ಸ್ವರೂಪವನ್ನು ಅನುಲಕ್ಷಿಸಿ ಕೆಳಗಿನಂತೆ ಇವುಗಳನ್ನು ವರ್ಗೀಕರಿಸಬಹುದು.

೧. ರಕ್ತ ಸಂಬಂಧದಿಂದ ಉಂಟಾಗುವ ಸಂಬಂಧವಾಚಕಗಳು

೨. ವೈವಾಹಿಕ ಸಂಬಂಧದಿಂದ ಉಂಟಾಗುವ ಸಂಬಂಧವಾಚಕಗಳು ಅಥವಾ ಇತರೆ ಸಂಬಂಧವಾಚಕಗಳು

೧. ರಕ್ತ ಸಂಬಂಧದ ಸಂಬಂಧವಾಚಕಗಳು

ಹುಟ್ಟಿನಿಂದ ಬರುವ ಸಂಬಂಧಗಳನ್ನು ರಕ್ತಸಂಬಂಧವಾಚಕಗಳು ಎಂದು ಕರೆಯುತ್ತಾರೆ. ಇವು ಒಂದು ಸಮುದಾಯದ ಸಾಮಾಜಿಕ ಸಂಬಂಧ ಮತ್ತು ಭಾಷೆಯನ್ನು ತಿಳಿಯಲು ಸಹಾಯಕವಾಗಿದೆ. ತಂದೆ–ತಾಯಿ, ಅಕ್ಕ–ತಂಗಿ, ಅಣ್ಣ–ತಮ್ಮ, ದೊಡ್ಡಪ್ಪ–ದೊಡ್ಡಮ್ಮ, ಚಿಕ್ಕಪ್ಪ–ಚಿಕ್ಕಮ್ಮ, ಅಜ್ಜ–ಅಜ್ಜಿ, ಇವರ ಮೂಲಕ ವಂಶವನ್ನು ನಿರ್ಧರಿಸಿದರೆ ಅದು ರಕ್ತಸಂಬಂಧವಾಗುತ್ತದೆ. ಇವುಗಳನ್ನು ಪ್ರಾಥಮಿಕ ಸಂಬಂಧವಾಚಕ ಎಂದು ವಿದ್ವಾಂಸರು ಕರೆಯುತ್ತಾರೆ. ಕೊರಚರ ಕೌಟುಂಬಿಕ ವಲಯದಲ್ಲಿ ರಕ್ತಸಂಬಂಧದ ಸಂಬಂಧವಾಚಕಗಳ ಬಳಕೆಯಿಂದ ಸಮುದಾಯದ ಮೂಲಭಾಷೆಯ ಸ್ವರೂಪದ ಹಿನ್ನೆಲೆಯಲ್ಲಿ ವಿವರಿಸಲಾಗಿದೆ.

ಕನ್ನಡ	**ಕೊರಚರ ಭಾಷೆ**	**ತೆಲುಗು**	**ತಮಿಳು**
ಅಪ್ಪ	ಆವ, ಅಬ್ಬ, ಅಯ್ಯ	ನಾಯನಾ	ಅಪ್ಪ
ಅಮ್ಮ	ಅಮ್ಮ	ಅಮ್ಮ	ಅಮ್ಮ

ಅಜ್ಜ	ಜೇಜಿ	ತಾತ	ತಾತ/ಪಾಟಿ
ಅಜ್ಜಿ	ಜೇಮ	ನಾನಮ್ಮ	ತಾತಮ್ಮ/ಪಾಟಿ
ಮಗ	ಮಗ	ಕೊಡಕು	ಮಗನ್
ಮಗಳು	ಪುಳ್ಳ/ಬುಳ್ಳ	ಕುತುರು	ಮಗಳ್/ಲ್
ಅಣ್ಣ	ಅಣ್ಣ	ಅಣ್ಣ	ಅಣ್ಣ
ಅಕ್ಕ	ಅಕ್ಕ	ಅಕ್ಕ	ಅಕ್ಕ
ತಂಗಿ	ತಸ್ಸಿ	ಚಲ್ಲಿ	ತಂಗಚ್ಚಿ
ತಮ್ಮ	ತೆಂಬಿ	ತಮ್ಮುಡು	ತಂಬಿ
ದೊಡ್ಡಪ್ಪ	ಬೆರಬ್ಬ/ಬೆರಾವ	ಪೆದ್ದನಾಯನಾ	ಪೇರಿಯಪ್ಪ
ದೊಡ್ಡಮ್ಮ	ಬೆರಮ್ಮ/ಬೆದ್ದೆಮ್ಮ	ಪೆದ್ದಮ್ಮ/ಪೆದ್ದನಾನಮ್ಮ	ಪೇರಿಯಮ್ಮ
ಚಿಕ್ಕಪ್ಪ	ನಾಯನ್ನು	ಚಿನ್ನಾಯನ	ಚಿತ್ತಪ್ಪ
ಚಿಕ್ಕಮ್ಮ	ಸೊಡಮ	ಪಿನ್ನಮ್ಮ	ಚಿತ್ತಿ/ಸಿತ್ತಿ

ಕೊರಚರಲ್ಲಿಯ ಸಂಬಂಧವಾಚಕಗಳು ವಿಶಿಷ್ಟ ರೀತಿಯಲ್ಲಿ ಬಳಕೆಯಾಗುತ್ತಿದ್ದು ಕೆಲವು ಸಂಬಂಧವಾಚಕಗಳು ಮಾತ್ರ ಕನ್ನಡ, ತೆಲುಗು, ತಮಿಳು ಮತ್ತು ಕೊರಚ ಭಾಷೆಯಲ್ಲಿ ಒಂದೇ ರೀತಿಯಲ್ಲಿ ಬಳಕೆಯಾಗಿರುವುದನ್ನು ನೋಡಬಹುದಾಗಿದೆ. ಉದಾ. ಅಮ್ಮ, ಅಕ್ಕ, ಅಣ್ಣ ಎಂಬ ಪದಗಳು ಒಂದೇ ರೀತಿಯಲ್ಲಿ ಬಳಕೆಯಾಗುತ್ತವೆ.

ಕೊರಚರ ಸಂಬಂಧವಾಚಕಗಳಲ್ಲಿ ಬಹಳ ವಿಶಿಷ್ಟವಾಗಿ ಅಜ್ಜ, ಅಜ್ಜಿಗಳಿಗೆ ಸಂಬಂಧಿಸಿದಂತೆ ಜೇಮ, ಜೇಜಿ ಎಂದು ಬಳಕೆಯಾಗುತ್ತದೆ. ಅದು ತೆಲುಗು, ತಮಿಳಿನಲ್ಲಿ ತಾತಾ, ಪಾಟ, ಪಾಟಿ ಎಂದು ಬಳಕೆಯಾಗುತ್ತದೆ. ಈ ಜೇಜಿ, ಜೇಮ ಎಂಬುದು ಕೊರಚರಲ್ಲಿ ಕಂಡುಬರುವುದು ಗಮನಾರ್ಹವಾದುದು.

ಕೊರಚರ ಭಾಷೆ (ಕುಡ್ರುವಾತ/ಕುಳ್ಳುವಾತ)ಯು ತಮಿಳಿನ ಉಪಭಾಷೆಯೆಂದು ಅನೇಕ ವಿದ್ವಾಂಸರು ಹೇಳಿದ್ದಾರೆ. ತಮಿಳಿನ ಮೂಲರೂಪದ ಜೊತೆಗೆ ವಲಸೆಯಿಂದಾಗಿ ಕೆಲ ಬದಲಾವಣೆ ಆಗಿರುವುದನ್ನು ಇಲ್ಲಿ ಗಮನಿಸಲಾಗಿದೆ. ಉದಾ. ಕೊರಚರಲ್ಲಿ ಬಳಕೆಗೊಳ್ಳುವ ತಸ್ಸಿ, ತೆಂಬಿ ಎಂಬ ರೂಪಗಳು ಕನ್ನಡದ ತಂಗಿ, ಮತ್ತು ತಮ್ಮನ ರೂಪಗಳಿಗೆ ಸಂಬಂಧಿಸಿದಂತೆ ಇದೆ. ಅದು "ತೆಂಬಿ" ಎಂಬುದು ತಮಿಳಿನ ತಂಬಿಯಂತೆ ಪದಾದಿಯ 'ಅ'ಕಾರದ ಬದಲಿಗೆ 'ಎ' ಕಾರವನ್ನು ಕೊರಚರು ಬಳಸಿಕೊಂಡಿರಬಹುದಾಗಿದೆ. ಮತ್ತು 'ತಸ್ಸಿ' ಎಂಬ ರೂಪಕ್ಕೆ 'ತಂಗಚ್ಚಿ' ಎಂದು ಇರುವುದರಿಂದಾಗಿ ಕೊರಚರು ವಲಸೆ ಬಂದಂತೆ ತಮಿಳಿನ 'ತಂಗಚ್ಚಿ'ಯ ಮದ್ಯದ ಅನುಸ್ವರ (ಂ)

ಮತ್ತು 'ಗ'ಕಾರ ಲೋಪವಾಗಿ, ಸಜಾತಿ ಒತ್ತಕ್ಷರದ 'ಚ'ಕಾರದ ಬದಲಿಗೆ 'ಸ'ಕಾರವು (ಅದು ತಮಿಳಿನ 'ಚ' ಮತ್ತು 'ಸ'ದ ಮಧ್ಯದ ಧ್ವನಿ, ತಂಗಚ್ಚಿ, ಚಂತಿ ತಸ್ಸಿ ಆಗಿದೆ) ಬಂದಿರುವ ಸಾಧ್ಯತೆಗಳು ಹೆಚ್ಚಿವೆ.

ಶಿಷ್ಟಕನ್ನಡದ ತಂದೆ ಕೊರಚರಲ್ಲಿ ಅಬ್ಬ, ಅಯ್ಯ, ಆವ ಎಂದು ಬಳಕೆಗೊಳ್ಳುತ್ತದೆ. ಹಾಗೆಯೇ 'ತಾಯಿ'ಗೆ ಅಮ್ಮ ಎಂದು ಸಂಬಂಧಸೂಚಕಗಳನ್ನು ಬಳಸುತ್ತಾರೆ. ಆದರೆ ಕನ್ನಡ ಪರಿಸರದ ಅಪ್ಪ, ಅಮ್ಮ, ಅವ್ವ ಎಂಬ ಬಂಧುಸೂಚಕಗಳು ಕೊರಚರ ವ್ಯಕ್ತಿನಾಮಗಳಲ್ಲಿ ವಾರ್ಗಿಕ ಘಟಕಗಳಾಗಿ ಬಳಕೆಯಾಗಿರಬಹುದು ಕಂಡುಬರುತ್ತದೆ. ಉದಾ.

ಗಂಗ + ಅಪ್ಪ = ಗಂಗಪ್ಪ

ಪುಟ್ಟ + ಅಪ್ಪ = ಪುಟ್ಟಪ್ಪ

ಗಂಗ + ಅಮ್ಮ = ಗಂಗಮ್ಮ

ಕಾಳ + ಅಮ್ಮ = ಕಾಳಮ್ಮ ಇತ್ಯಾದಿ.

ಕೊರಚರ ಕೌಟುಂಬಿಕ ಭಾಷೆಯಲ್ಲಿ ದೊಡ್ಡಪ್ಪ, ದೊಡ್ಡಮ್ಮ, ದೊಡ್ಡತ್ತೆ, ದೊಡ್ಡ ಮಾವ ಎಂಬ ಸಂಬಂಧವಾಚಕಗಳಿಗೆ ಬೇರಾಮ/ಬೆದ್ದಾವ, ಬೆರಮ್ಮ/ಬೆದ್ದೆಮ್ಮ, ಬೆರತ್ತ, ಬೆರಮಾಮ ಎಂದು ಸಂಬೋಧಿಸುವುದು ಕಂಡುಬರುತ್ತದೆ.

ಕನ್ನಡ	**ಕೊರಚರ ಭಾಷೆ**	**ತೆಲುಗು**	**ತಮಿಳು**
ದೊಡ್ಡಪ್ಪ	ಬೆರಾವ/ಬೆರಬ್ಬು	ಪೆದ್ದನಾಯನಾ	ಪೆರಿಯಪ್ಪ
ದೊಡ್ಡಮ್ಮ	ಬೆರಮ್ಮ/ಬೆದ್ದೆಮ್ಮ	ಪೆದ್ದಮ್ಮ	ಪೆರಿಯಮ್ಮ
ದೊಡ್ಡತ್ತೆ	ಬೆರತ್ತ	ಪೆದ್ದತ್ತ	ಪೆರತ್ತ
ದೊಡ್ಡಮಾವ	ಬೆರಮಾಮ	ಪೆದ್ದಮಾಮ	ಪೆರುಮಚನ್

ಕನ್ನಡದಲ್ಲಿ 'ದೊಡ್ಡ' ಎಂಬ ಪದವು ಗುಣವಾಚಕವಾಗಿದ್ದು ಈ ಪದಕ್ಕೆ ಹಿರಿಯ, ಹಿರಿಯವ ಎಂಬರ್ಥಗಳಿವೆ. ಕನ್ನಡದ 'ದೊಡ್ಡ' ಎಂಬ ಪದಕ್ಕೆ ತೆಲುಗಿನಲ್ಲಿ ಸಂವಾದಿಯಾಗಿ 'ಪೆದ್ದ', ತಮಿಳಿನಲ್ಲಿ 'ಪೆರಿಯ' ಎಂದಿದೆ. ಇವುಗಳಿಗೆ ಅರ್ಥ ಹಿರಿಯ ಹಿರಿಯವ ಎಂಬರ್ಥಗಳಿರುವುದು ತಿಳಿದುಬರುತ್ತದೆ. ಇಲ್ಲಿ ಸಂಬಂಧವಾಚಕಗಳಲ್ಲಿ ಹಿರಿಯ, ಹಿರಿಯವ, ದೊಡ್ಡವ ಎಂಬ ಪದಕ್ಕೆ ಕನ್ನಡದ 'ದೊಡ್ಡ', ತೆಲುಗಿನ 'ಪೆದ್ದ' ಎಂದು ಮತ್ತು ತಮಿಳಿನ 'ಪೆರು' ಎಂಬ ಪದಗಳು ಬಳಕೆಯಾಗಿದೆ. ಈ ಪದಗಳ ಬಳಕೆಗೆ ಭಿನ್ನವಾದ 'ಬೆರು' ಎಂಬ ಪದ ಕೊರಚರಲ್ಲಿ ಬಳಕೆಯಲ್ಲಿರುವುದು ಗಮನಾರ್ಹವಾದ ಸಂಗತಿಯಾಗಿದೆ. ಇಲ್ಲಿ ಬಹುಮುಖ್ಯವಾಗಿ ಗಮನಿಸಬೇಕಾದುದು ಅಂದರೆ ತೆಲುಗು, ತಮಿಳಿನ ಪದಾದಿ ಪರಿಸರದ 'ಪ' ಕಾರವು ಕೊರಚರಲ್ಲಿ 'ಬ'ಕಾರ ಆಗಿರುವುದನ್ನು

ಗಮನಿಸಬಹುದು. ಮತ್ತು ಈ ಪ್ರಕ್ರಿಯೆ ಯಾವ ಕಾಲಘಟ್ಟದಲ್ಲಿ ಆಯಿತೆಂದು ಹೇಳುವುದು ಕಷ್ಟವಾಗಿದೆ.

ಕೊರಚರಲ್ಲಿ ತಂದೆಯ ತಮ್ಮ ಮತ್ತು ತಾಯಿಯ ತಂಗಿಯ ಗಂಡ 'ಚಿಕ್ಕಪ್ಪ' ಆಗುತ್ತಾನೆ. ಅದನ್ನು 'ನಾಯನ್ನು' ಎಂದು ಇವರಲ್ಲಿ ಸಂಬೋಧಿಸುತ್ತಾರೆ. ಈ ರೂಪಕ್ಕೆ ಸಂಬಂಧಿಸಿದಂತೆ ತೆಲುಗಿನ 'ಚಿನ್ನಾಯನ' ಎಂಬುದರ ಪ್ರಭಾವ ಆಗಿರುವ ಸಾಧ್ಯತೆಗಳು ಕಂಡುಬರುತ್ತದೆ. ಮತ್ತು ತಾಯಿಯ ತಂಗಿ, ಮತ್ತು ತಂದೆಯ ತಮ್ಮನ ಹೆಂಡತಿಗೆ ಚಿಕ್ಕಮ್ಮ ಎನ್ನುತ್ತೇವೆ. ಕೊರಚರು 'ಸೊಡಮ' ಎಂದು ಕರೆಯುತ್ತಾರೆ. ಮತ್ತು ಈ 'ಸೊಡಮ' ಎಂಬ ರೂಪವು ತೆಲುಗು, ತಮಿಳು, ಕನ್ನಡ ಭಾಷಿಕ ರೂಪಗಳಲ್ಲಿ ಕಂಡುಬರದೆ ಇವರಲ್ಲಿ ಮಾತ್ರ ಕಂಡುಬರುತ್ತದೆ. ಮತ್ತು ಇವರಲ್ಲಿ ಚಿಕ್ಕಪ್ಪ, ಚಿಕ್ಕಮ್ಮಗೆ ಸಂಬಂಧಿಸಿದಂತೆ ಸಿನ್ನಯ್ಯ ಮತ್ತು ಸಿನ್ನಮ್ಮ ಎಂಬ ರೂಪಗಳು ಬಳಕೆಯಲ್ಲಿರುವುದು ಕಂಡುಬರುತ್ತದೆ.

೨. ವೈವಾಹಿಕ ಸಂಬಂಧದ ಸಂಬಂಧವಾಚಕಗಳು

ಗಂಡ-ಹೆಂಡತಿ, ಅತ್ತೆ-ಮಾವ, ಮೈದುನ, ನಾದಿನಿ, ಅತ್ತಿಗೆ ಸೊಸೆ, ಮುಂತಾದವರಿಂದ ಉಂಟಾದ ಸಂಬಂಧವನ್ನು ವೈವಾಹಿಕ ಸಂಬಂಧವೆಂದು ಕರೆಯುತ್ತಾರೆ. ಮಾನವನ ಜೀವನದಲ್ಲಿ ವೈವಾಹಿಕ ಸಂಬಂಧ ಒಂದು ಹೊಸ ಅನುಬಂಧಗಳನ್ನು ಸೃಷ್ಟಿಸುತ್ತದೆ. ಈ ಸಂಬಂಧವನ್ನು ವಿವಾಹ ಸಂಬಂಧವೆಂದೂ, ಇತರೆ ಸಂಬಂಧಗಳಿಂದ ಅಂದರೆ ಆಪ್ತವಲಯದಿಂದ ಉಂಟಾದ ಸಂಬಂಧವನ್ನು ಆನುಷಂಗಿಕ ಸಂಬಂಧವೆಂದೂ ಕರೆಯಲಾಗುವುದು. ಈ ಬಗೆಯ ಸಂಬಂಧಗಳು ಎಲ್ಲಾ ಜಾತಿ, ಭಾಷಾ ಸಂದರ್ಭಗಳಲ್ಲಿ ಕಾಣಬಂದರೂ ಅವು ಜಾತಿ, ಭಾಷೆ, ಪ್ರದೇಶಕ್ಕನುಗುಣವಾಗಿ ಭಿನ್ನವಾಗಿರುವುದು ಅಧ್ಯಯನಗಳಿಂದ ತಿಳಿದುಬರುತ್ತದೆ. ಈ ಹಿನ್ನೆಲೆಯಲ್ಲಿ ಕೊರಚರ ಸಂಬಂಧವಾಚಕಗಳು ಹೇಗೆ ಬಳಕೆಯಾಗುತ್ತವೆ? ಅವುಗಳ ರಾಚನಿಕ ಸ್ವರೂಪವೇನು? ಎಂಬಿತ್ಯಾದಿ ಸಂಗತಿಗಳನ್ನು ಈ ಕೆಳಗಿನಂತೆ ಚರ್ಚಿಸಲಾಗಿದೆ. ಉದಾ.

ಕನ್ನಡ	ಕೊರಚರ ಭಾಷೆ	ತೆಲುಗು	ತಮಿಳು
ಅತ್ತೆ	ಅತ್ತ	ಅತ್ತ	ಅತ್ತೈ
ಮಾವ	ಮಾಮ	ಮಾಮ	ಮಾಮ
ಅಳಿಯ	ಮಚ್ಚಾಡು	ಅಲ್ಲುಡು	ಮಚ್ಚ (ಮರಿಮಗನ್)
ಮೈದುನ	ಮೆಚ್ಚುನು	ಮರ್ದಿ	ಕೊಳಂದನಾರ್
ಭಾವ	ಮಾಮ	ಭಾವ	ಮಾಮ
ಗಂಡ	ಮಣಾಗು	ಮಾಗಡು	ಪುರುಷನ್
ಹೆಂಡತಿ	ಪೊಂಡು/ಮೊಂಡು	ಭಾರ್ಯ	ಪೊಂಡಾಟಿ

ಸೋದರಮಾವ	ಮೇನಮಾಮ	ಮ್ಯಾನಮಾಮ	ಮಾಮ
ಅತ್ತಿಗೆ	ನಂಗ	ವದಿನಾ	ಅಣ್ಣೀ/ನಂಗೈ
ಸೊಸೆ	ಮೆರಿಮಗಳು	ಕೊಡಲು	ಮರಿಮಗಳ
ನಾದಿನಿ	ಮೆಚ್ಚಿನ್ಸಿ	ಕೋಡಲು	ಕುಳಂದಿಯ/ನಾತನ
ಸೋದರತ್ತೆ	ಮೇನತ್ತೆ	ಮ್ಯಾನತ್ತ	ಅತ್ತೈ

ಕನ್ನಡ ಮಾವ, ಭಾವ ಎನ್ನುವುದಕ್ಕೆ ಕೊರಚರಲ್ಲಿ 'ಮಾಮ' ಎಂದೇ ಸಂಬೋಧಿಸುವುದನ್ನು ನೋಡಬಹುದು. ಹಾಗೆಯೇ ಸೋದರತ್ತೆ, ಸೋದರಮಾಮ ಎಂಬುದಕ್ಕೆ ಕೊರಚರು ಮೇನತ್ತ, ಮೇನಮಾಮ ಎಂದು ಬಳಕೆ ಮಾಡುತ್ತಾರೆ. ಈ ರೂಪ ತೆಲುಗಿನಲ್ಲಿ ಬಳಕೆಯಲ್ಲಿದೆ. ಕೊರಚರಲ್ಲಿ ಮಗನ ಹೆಂಡತಿಗೆ ಮರಿಮಗಳು, ಮಗಳ ಗಂಡನಿಗೆ ಮರಿಮಗ ಎಂದು ಕರೆಯುತ್ತಾರೆ. ಉಳಿದಂತೆ ಅಕ್ಕನ ಮಗಳನ್ನು ಅಥವಾ ಸೋದರ ಮಾಮ, ಸೋದರತ್ತೆಯರ ಮಕ್ಕಳನ್ನು ಮಚ್ಚಾಡು (ಗಂಡು) ಸೆಡೆಗೊಸಿ (ಹೆಣ್ಣು) ಎಂದು ಕರೆಯುವುದು ಇವರಲ್ಲಿ ಕಾಣಬಹುದಾಗಿದೆ. ಕೊರಚರಲ್ಲಿ ಮೈದುನ ಮತ್ತು ನಾದಿನಿ ಎಂಬ ರೂಪಗಳಿಗೆ ಮೆಚ್ಚುನು, ಮೆಚ್ಚಿನ್ಸಿ ಎಂದು ಬಳಕೆಯಾಗುತ್ತದೆ. ಇದು ಗಂಡನ ತಮ್ಮ-ತಂಗಿಯರಿಗೆ ಬಳಸುವ ರೂಪವಾಗಿದೆ. ಇಲ್ಲಿ 'ಮೆಚ್ಚಿನ್ಸಿ' ಎಂಬ ರೂಪವು ತಮಿಳಿನಲ್ಲಿ ಹೆಂಡತಿಯ ತಂಗಿಗೆ ಬಳಸುವುದನ್ನು ಗಂಡನ ತಂಗಿಗೆ 'ನಾತನಾರು' ಎಂದು ಬಳಸುವುದನ್ನು ನೋಡಬಹುದು. ಮತ್ತು ಗಂಡನ ತಮ್ಮನಿಗೆ "ಕುಲಂದೈಯರ್" ಎಂದು ಬಳಸುವುದನ್ನು ನೋಡಬಹುದು. ಕೊರಚರಲ್ಲಿ ಗಂಡ ಹೆಂಡತಿಯ ಅಕ್ಕನನ್ನು 'ನಂಗ' (ಅತ್ತಿಗೆ) ಎಂದು ಕರೆದರೆ ಹೆಂಡತಿ ಗಂಡನ ಅಕ್ಕಂದಿರನ್ನು ಸೊಡಮ/ಸಿನ್ನಮ್ಮ (ಚಿಕ್ಕಮ್ಮ) ಎಂದು ಕರೆಯುವುದು ಕಂಡುಬರುತ್ತದೆ. ಕೊರಚರ ಸಮುದಾಯದ ಕೌಟುಂಬಿಕ ವಲಯದಲ್ಲಿ ವಿವಾಹ ಸಂಬಂಧದಿಂದ ಉಂಟಾದ ಸಂಬಂಧವಾಚಕಗಳು ಸಾಮಾನ್ಯವಾಗಿ ತಮಿಳುನಲ್ಲಿ ಬಳಕೆಯಲ್ಲಿರುವಂತೆ ಇವೆ. ಕೆಲವೊಂದು ಸಂಬಂಧವಾಚಕಗಳು ಒಂದೇ ರೀತಿಯಲ್ಲಿ ಪ್ರಯೋಗವಾಗುವುದನ್ನು ಕಾಣಬಹುದು. ಉದಾ.

ಕನ್ನಡ	**ಕೊರಚರ ಭಾಷೆ**	**ತೆಲುಗು**	**ತಮಿಳು**
ಅತ್ತೆ	ಅತ್ತ	ಅತ್ತ	ಅತ್ತೈ
ಭಾವ	ಮಾಮ	ಭಾವ	ಮಾಮ
ಮಾವ	ಮಾಮ	ಮಾಮ	ಮಾಮ

ಈ ಎಲ್ಲವು ಒಂದೆ ದ್ರಾವಿಡ ಭಾಷಾ ವರ್ಗಕ್ಕೆ ಸೇರಿರುವುದರಿಂದ ಕೆಲವೊಂದು ಸಂಬಂಧವಾಚಕಗಳು ಸಾಮ್ಯತೆಯನ್ನು ಉಳಿಸಿಕೊಂಡುಬಂದಿರುವುದನ್ನು ಕಾಣಬಹುದಾಗಿದೆ.

ಕೊರಚ ಸಮುದಾಯದವರಲ್ಲಿ ಮೂರು ನಾಲ್ಕು ತಲೆಮಾರಿನ ಸಂಬಂಧವನ್ನು ಸೂಚಿಸುವ ಸಂಬಂಧವಾಚಕಗಳನ್ನು ಸಹ ಕಾಣಬಹುದಾಗಿದೆ. ಈ ಸಂಬಂಧವಾಚಕಗಳನ್ನು ವಿಭಾಜಕ ಪದಗಳೆಂದು

ಕರೆಯಲಾಗುವುದು. ವಿಭಾಜಕ ಪದಗಳಿಗೆ ಆದಿ ಮತ್ತು ಅಂತ್ಯ ಪರಿಸರದಲ್ಲಿ ಅವಿಭಾಜಕ ಪದಗಳು ಬಂದು ಮೂರು ತಲೆಮಾರಿನ ಬಂಧುತ್ವ ಸೂಚಕ ಪದಗಳು ಸೃಷ್ಟಿಯಾಗುತ್ತವೆ. ಅಂತಹ ಸಾಧಿತ ರೂಪಗಳು ಭಾಷೆಯಲ್ಲಿ ಸ್ವತಂತ್ರವಾಗಿ ಬಂದರೆ ಬೇರೊಂದು ಅರ್ಥವನ್ನು ಕೊಡುತ್ತವೆ. ಉದಾ.

ಮುತ್ತ ಎನ್ನುವುದು ಬಂಧುತ್ವ ಪದಗಳಲ್ಲಿ ಸಾಧಿತ ರೂಪವು ಹೌದು, ಅವಿಭಾಜಕ ರೂಪವು ಹೌದು. ಮುತ್ತ ಪದದ ಅಂತ್ಯ ಪರಿಸರಕ್ಕೆ ಬೇರೆ ಪ್ರಾಥಮಿಕ ಪದಗಳು ಬಂದು ಸೇರಿ ಬೇರೆ ಸಾಧಿತ ರೂಪಗಳನ್ನು ಪಡೆಯಬಹುದು. ಉದಾ. ಶಿಷ್ಟ ಕನ್ನಡ

ಮುತ್ತ + ಅಜ್ಜ = ಮುತ್ತಜ್ಜ

ಮುತ್ತ + ಅಜ್ಜಿ = ಮುತ್ತಜ್ಜಿ

ಮರಿ + ಮೊಮ್ಮ + ಮಗಳು = ಮರಿಮೊಮ್ಮಗಳು

ಮರಿ + ಮೊಮ್ಮ + ಮಗ = ಮರಿಮೊಮ್ಮಗ

ಕೊರಚರಲ್ಲಿ

ಮುತ್ತ + ತಾತಾ = ಮುತ್ತಾತ/ಮುತ್ತ + ಜೇಜಿ = ಮುತ್ತಜೇಜಿ

ಮುತ್ತ + ಜೇಮಾ = ಮುತಜೇಮ

ಮುತ್ತ + ಪೇತಿ = ಮುತ್ತಪೇತಿ

ಮುತ್ತ + ಪೇತ = ಮುತ್ತಪೇತ

ಪೇತ/ತಿ ಅಂದರೆ ಮೊಮ್ಮಗ, ಮೊಮ್ಮಗಳು ಎಂದು ಬಳಕೆ ಮಾಡುತ್ತಾರೆ. ಈ ರೀತಿಯಾಗಿ ಮುದಿ ಎಂಬುದು ಅಜ್ಜ, ಅಜ್ಜಿ ಎಂಬುದರೊಡನೆ ಸಾಧಿತ ರೂಪವಾಗಿ ಎಲ್ಲಾ ಸಮುದಾಯಗಳಲ್ಲಿ ಬಳಕೆಯಾದಂತೆ ಕೊರಚರಲ್ಲಿಯೂ ಬಳಕೆಯಾಗುತ್ತದೆ.

ಗಂಡನ ಇನ್ನೊಬ್ಬಳು ಹೆಂಡತಿಯನ್ನು ಎರಡನೇ ಹೆಂಡತಿ ಎಂದು ಕನ್ನಡ ಪರಿಸರದಲ್ಲಿ ಬಳಸಿದರೆ ಕೊರಚರಲ್ಲಿ 'ಮಾಸಟಿ' (ಸವತಿ) ಎಂದು ಕರೆಯುತ್ತಾರೆ. ಮತ್ತು ಒಂದೇ ಕುಟುಂಬದಲ್ಲಿ ನಾಲ್ಕಾರು ಅಣ್ಣ-ತಮ್ಮಂದಿರ ಹೆಂಡತಿಯರು ಇದ್ದರೆ ಅವರನ್ನು 'ವಾರಗಿತ್ತಿ'ಯರು ಎಂದು ಕರೆಯುತ್ತಾರೆ. ಮತ್ತು ಈ 'ಮಾಸಟಿ' ಮಕ್ಕಳನ್ನು 'ಮಾಸಟಪುಳ್ಳ' 'ಮಾಸಟಿ ಮಗು' ಎಂದು ಪರಿಚಯಿಸುವಾಗ ಬಳಸುತ್ತಾರೆ. ಸಂಬೋಧಿಸುವಾಗ ಮಗ, ಪುಳ್ಳ ಅಥವಾ ಹೆಸರಿಡಿದು ಮಾತಾಡಿಸುತ್ತಾರೆ.

ಇತರೆ

ಗಂಡು ಮಗು – ಅವಣಕೆರು

ಹೆಣ್ಣು ಮಗು – ಪೊಂಬುಳ

ಮೊದಲ ಮಗ – ತೊಲಸುರ ಮಗ

ಮೊದಲ ಮಗಳು – ತೊಲಸುರ ಪುಳ್ಳ/ಬುಳ್ಳ

ಕಿರಿಯ ಮಗ/ಮಗಳು – ಸಿನ್ನ ಪುಳ್ಳ/ಮಗ

ನಡುವಿನ ಮಗ/ಮಗಳು – ನೆಡು ಮಗ/ಪುಳ್ಳ (ಬುಳ್ಳ)

ಮಗನ ಮಗ/ಮಗಳ ಮಗ – ಪೇತಾ

ಮಗನ ಮಗಳು/ಮಗಳ ಮಗಳು – ಪೇತಿ

ಮಗನ ಮಗನ ಮಗ/ಮಗಳು – ಮುತ್ತು ಪೇತಿ/ಪೇತಾ

ಮಗನ ಮಗಳು ಮಗ/ಮಗಳು – ಮುತ್ತು ಪೇತಿ/ಪೇತಾ

ಪುರುಷರಿಗೆ – ಅಣ್ಣ ಅಥವಾ ತಮ್ಮನ ಮಕ್ಕಳು – ಮಗ, ಪುಳ್ಳ

ಸ್ತ್ರೀಯರಿಗೆ – ಅಣ್ಣ ಅಥವಾ ತಮ್ಮನ ಮಕ್ಕಳು – ಸೆಡ್ಡಗೊಸಿ, ಮಚ್ಚಾಡು

ಪುರುಷರಿಗೆ – ಅಕ್ಕ ಅಥವಾ ತಂಗಿಯ ಮಕ್ಕಳು – ಸೆಡ್ಡಗೊಸಿ, ಮಚ್ಚಾಡು

ಸ್ತ್ರೀಯರಿಗೆ – ಅಕ್ಕ ಅಥವಾ ತಂಗಿಯ ಮಕ್ಕಳು – ಮಗ, ಪುಳ್ಳ

ಕೊರಚರ ಭಾಷೆಯಲ್ಲಿ ಸಾಮಾನ್ಯವಾಗಿ ತಮಿಳು, ತೆಲುಗು, ಕನ್ನಡ ಸಮಾಜದ ಭಾಷಿಕ ಅಂಶಗಳ ಮಿಶ್ರಣ ಕಂಡುಬರುತ್ತಿದ್ದು, ಕೆಲವು ಕಡೆಗಳಲ್ಲಿ ವಿಶೇಷ ಪದಗಳು ಬಳಕೆಯಾಗುತ್ತಿರುವುದನ್ನು ಕಾಣಬಹುದು.

೩. ಕುಟುಂಬದ ಅವಳಿ ಸಂಬಂಧವಾಚಕಗಳು

ತಂದೆ–ತಾಯಿ, ಮಗ–ಮಗಳು, ಅತ್ತೆ–ಮಾವ, ಅಳಿಯ–ಸೊಸೆ, ಸಹೋದರ–ಸಹೋದರಿ, ಅಣ್ಣ–ತಮ್ಮ, ಅತ್ತಿಗೆ–ನಾದಿನಿ, ಭಾವ–ಮೈದುನ, ಗಂಡ–ಹೆಂಡತಿ, ಮೊಮ್ಮಗ–ಮೊಮ್ಮಗಳು ಇಂತಹ ಪದಗಳು ಕುಟುಂಬದ ಅವಳಿ ಸಂಬಂಧವಾಚಕಗಳಾಗಿವೆ. ಭಾಷಾ ಸಮುದಾಯಗಳಲ್ಲಿ ಸಾಮಾನ್ಯವಾಗಿ ಒಂದು ಕುಟುಂಬಕ್ಕೆ ಸೇರಿದ ಸದಸ್ಯರು ಒಂದೇ ಕಡೆ ವಾಸಿಸುವುದುಂಟು. ಕುಟುಂಬವು ತನ್ನದೇ ಆದ ಸಾಮಾಜಿಕ ಕಾರ್ಯಗಳನ್ನು ಹೊಂದಿದೆ. ಅವುಗಳಲ್ಲಿ ಮುಖ್ಯವಾಗಿ ಸಂಸ್ಕೃತಿ ವಿನಿಮಯ, ಸದಸ್ಯರ ಮೇಲೆ ನಿಯಂತ್ರಣ, ಸದಸ್ಯರ ಸಂರಕ್ಷಣೆ ಹಾಗೂ ಸದಸ್ಯರ ವ್ಯಕ್ತಿತ್ವದ ಬೆಳವಣಿಗೆ ಮುಂತಾದ ಕಾರ್ಯಗಳನ್ನು ನಿರ್ವಹಿಸುತ್ತದೆ. ಸಾಮಾಜಿಕ ರಚನೆಯಲ್ಲಿ ಕುಟುಂಬವು ಪ್ರಮುಖ ಪಾತ್ರವನ್ನು ವಹಿಸುತ್ತದೆ. (ಅಂಗಡಿ ಎಸ್.ಎಸ್., ೨೦೦೨, ಪು.೨೩) ಕುಟುಂಬದಲ್ಲಿನ ಅವಳಿ ಸಂಬಂಧಗಳು ಅರ್ಥವಲಯದಲ್ಲಿ ವಿಭಿನ್ನವಾಗಿ ಬಳಕೆಯಾಗಿ ಸಂಬಂಧವಾಚಕಗಳ ಬಳಕೆಯು ವೈವಿಧ್ಯತೆಯಿಂದ ಕೂಡಿರುವುದು ಈ ಸಮುದಾಯದಲ್ಲಿ ಕಾಣಬರುತ್ತದೆ. ಇದರ ಕೌಟುಂಬಿಕ ವಲಯದ ಭಾಷಿಕರ ಸಮಾಜೋಭಾಷಿಕ ಸಂಬಂಧವನ್ನು ಕುರಿತು ವಿಶೇಷಿಸಲಾಗಿದೆ.

ತಂದೆ–ತಾಯಿ, ಮಗ–ಮಗಳು

ಸಾಮಾನ್ಯವಾಗಿ ಹೆತ್ತವರಿಗೆ ಮಾತ್ರ 'ತಂದೆ' 'ತಾಯಿ' ರೂಪಗಳು ಬಳಕೆಯಾಗುತ್ತವೆ. ಈ ಸಮುದಾಯದವರು ತಂದೆಗೆ 'ಅಬ್ಬ', 'ಅಯ್ಯ', 'ಆವ' ಎಂದೋ ತಾಯಿಗೆ 'ಅಮ್ಮ' ಎಂದೂ ಸಂಬೋಧಿಸುವುದು ಕಾಣಬರುತ್ತದೆ. ಕನ್ನಡದ ಅಪ್ಪ ಎಂಬ ಪದವು ಕೊರಚರಲ್ಲಿ ಇವರು ಸಂಬಂಧಸೂಚಕವಾಗಿ ಬಳಸದೇ ಇದ್ದರೂ ಸಹ ವ್ಯಕ್ತಿನಾಮಗಳ ಕೊನೆಯಲ್ಲಿ ವಾರ್ಗಿಕ ಘಟಕವಾಗಿ ಬಳಕೆಯಾಗುವುದು ಗೋಚರವಾಗುತ್ತದೆ. ಕಾರಣ ಅದು ಕನ್ನಡ ಪರಿಸರದಲ್ಲಿ ಬಂದು ನೆಲೆಸಿದಾದದ ಮೇಲೆಯೇ ಈ ರೀತಿಯಾಗಿ ವಾರ್ಗಿಕವಾಗಿ ಅಪ್ಪ ವಾರ್ಗಿಕವನ್ನು ಬಳಸಿರಲುಬಹುದಾಗಿದೆ. ಉದಾ. ಆರಂಭದಲ್ಲಿ ಕೇವಲ ಯಂಕ, ಪುಟ್ಟ, ತಿಮ್ಮ, ಸುಂಕ ಅಂತಿರುವುದು ಅಪ್ಪ ಎಂಬ ವಾರ್ಗಿಕವನ್ನು ಪಡೆದು ಯಂಕಪ್ಪ, ಸುಂಕಪ್ಪ, ತಿಮ್ಮಪ್ಪ, ಪುಟ್ಟಪ್ಪ ಆಗಿರುವುದು ಕಂಡುಬರುತ್ತದೆ.

ಕುಂಜ + ಅಪ್ಪ = ಕುಂಜಪ್ಪ

ಯಂಕ + ಅಪ್ಪ = ಯಂಕಪ್ಪ

ಗಂಗ + ಅಪ್ಪ = ಗಂಗಪ್ಪ

ಪುಟ್ಟ + ಅಪ್ಪ = ಪುಟ್ಟಪ್ಪ

ಸುಂಕ + ಅಪ್ಪ = ಸುಂಕಪ್ಪ

ತಿಮ್ಮ + ಅಪ್ಪ = ತಿಮ್ಮಪ್ಪ

ನಿಂಗ + ಅಪ್ಪ = ನಿಂಗಪ್ಪ

ಲಚ್ಚ + ಅಪ್ಪ = ಲಚ್ಚಪ್ಪ

ಕೊರಚರ ಸಂಬೋಧನೆಯಲ್ಲಿ ಕನ್ನಡದ ಬಾರಪ್ಪ, ಬಾರಯ್ಯ ಎಂಬ ಪದಗಳಿಗೆ ಸಂವಾದಿಯಾಗಿ ವಾಬ್ಬ, ವಾಯ್ಯೋ ಎಂಬ ಪದಗಳಿಂದ ಸಂಬೋಧಿಸುತ್ತಾರೆ. ಅಯ್ಯ, ಅಮ್ಮ ಪದಗಳಿಗೆ ಇರುವ ಭಾವಸಂಪತ್ತು, ಕಳ್ಳುಬಳ್ಳಿತನ ತಂದೆ ತಾಯಿ ಎಂಬ ಪದಗಳಿಗೆ ಇಲ್ಲವೆಂದು ತಿಳಿಯುತ್ತದೆ. ಅಪ್ಪ, ಅಮ್ಮ ಇವುಗಳಿಂದಾದ ಸಾಧಿತರೂಪಗಳನ್ನು ನೋಡಿದಾಗ ಅವುಗಳ ಅರ್ಥವಲಯ ವಿಸ್ತಾರವಾಗುತ್ತದೆ.

ಕನ್ನಡ

ಚಿಕ್ಕ + ಅಪ್ಪ = ಚಿಕ್ಕಪ್ಪ

ಚಿಕ್ಕ + ಅಮ್ಮ = ಚಿಕ್ಕಮ್ಮ

ದೊಡ್ಡ + ಅಪ್ಪ = ದೊಡ್ಡಪ್ಪ

ದೊಡ್ಡ + ಅಮ್ಮ = ದೊಡ್ಡಮ್ಮ

ಕೊರಚರ ಭಾಷೆ

ಸಿನ್ನ + ಅಯ್ಯ = ಸಿನ್ನಯ್ಯ

ಬೆರ + ಅಯ್ಯ = ಬೇರಯ್ಯ

ಸಿನ್ನ + ಅಮ್ಮ = ಸಿನ್ನಮ್ಮ

ಬೇರ + ಅಮ್ಮ = ಬೇರಮ್ಮ

ಬೇರ + ಆವ = ಬೇರಾವ

ಸಿನ್ನ + ಆವ = ಸಿನ್ನಾವ

ಈ ಕೊರಚರ ಸಮುದಾಯದವರು ತಾಯಿಯ ತಂಗಿ ಮತ್ತು ಚಿಕ್ಕಪ್ಪನ ಹೆಂಡತಿಗೆ ಸಿನ್ನಮ್ಮ ಎಂದೂ ಮತ್ತು 'ಸೊಡಮ' ಅಂತಲು ಕರೆಯುತ್ತಾರೆ. ಹಾಗೂ ಅಪ್ಪನ ತಮ್ಮನಿಗೆ ಮತ್ತು ಚಿಕ್ಕಮ್ಮನ ಗಂಡನಿಗೆ ಸಿನ್ನಾವ, ಸಿನ್ನಯ್ಯ ಎಂದೂ ಸಂಬೋಧಿಸುವುದುಂಟು. ಹಾಗೆಯೇ ತಾಯಿಯ ಅಕ್ಕ ಮತ್ತು ದೊಡ್ಡಪ್ಪನ ಹೆಂಡತಿಗೆ ಬೇರಮ್ಮ, ಬೆದ್ದೆಮ್ಮ ಎಂದೂ, ಅಪ್ಪ ಅಣ್ಣನಿಗೆ ಮತ್ತು ದೊಡ್ಡಮ್ಮನ ಗಂಡನಿಗೆ ಬೇರಾವ, ಬೇರಬ್ಬ, ಬೇರಯ್ಯ ಎಂದೂ ಸಂಬೋಧಿಸುತ್ತಾರೆ. ಕೊರಚರಲ್ಲಿ ಆರ್ಥಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ಮುಂದುವರೆದ ಕೆಲವು ಕುಟುಂಬಗಳಲ್ಲಿ ಅಪ್ಪ, ಅಮ್ಮ, ಚಿಕ್ಕಪ್ಪ, ಚಿಕ್ಕಮ್ಮ, ದೊಡ್ಡಪ್ಪ, ದೊಡ್ಡಮ್ಮ ಎಂಬ ಸಂಬೋಧನಾ ರೂಪಗಳ ಬಳಕೆಯ ಮರೆಯಾಗಿ ಡ್ಯಾಡಿ, ಮಮ್ಮಿ, ಆಂಟಿ, ಅಂಕಲ್ ಎಂಬ ರೂಪಗಳು ಪ್ರವೇಶ ಪಡೆಯುತ್ತಿವೆ. ಅಂದರೆ ಪಾರಂಪರಿಕವಾಗಿ ಬಳಕೆಯಾಗುತ್ತಿದ್ದ ಪದಗಳಿಗೆ ಬದಲಾಗಿ ಇಂಗ್ಲಿಷನ ಸಂಬಂಧವಾಚಿ ಪದಗಳಿಂದ ಸಂಬೋಧಿಸುವುದನ್ನು ಕಾಣಬಹುದಾಗಿದೆ. ಈ ಪ್ರಕ್ರಿಯೆಗೆ ಹಲವು ಬಗೆಯ ಅಂಶಗಳು ಕಾರಣವಾಗಿರಲು ಸಾಧ್ಯವಾಗಿದೆ. ಇತ್ತೀಚಿಗೆ ಕನ್ನಡದ ಅಪ್ಪ, ಅಮ್ಮ, ಚಿಕ್ಕಪ್ಪ, ದೊಡ್ಡಪ್ಪ, ದೊಡ್ಡಮ್ಮ, ಚಿಕ್ಕಮ್ಮ ಎಂಬ ಪದಗಳನ್ನು ಬಳಸಿದರೆ ಆರ್ಥಿಕವಾಗಿ ಜಾಗತೀಕವಾಗಿ, ಆಧುನಿಕವಾಗಿ ಹಿಂದುಳಿದವರು, ಅವಿದ್ಯಾವಂತರು ಎನ್ನುವ ಕಲ್ಪನೆ ಬರಬಹುದೆಂದು ಕೊರಚರು ಇಂಗ್ಲಿಷ್ ರೂಪಗಳನ್ನು ಬಳಸಿ ಆರ್ಥಿಕವಾಗಿ ಮುಂದುವರಿದ ನಾಗರೀಕ ಜನರೆಂದು ಗುರುತಿಸಿಕೊಳ್ಳುವ ಅಥವಾ ಕರೆಯಿಸಿಕೊಳ್ಳುವ ಭಾವನೆಯಿಂದ ಸಮಾಜದ ಮುಖ್ಯವಾಹಿನಿಗೆ ತೆರೆದುಕೊಳ್ಳಲು ಪ್ರಯತ್ನಿಸುತ್ತಾರೆ.

ಮಗ ಪದದಿಂದ ಮಗ, ಮಲಮಗ, ಸಾಕುಮಗ, ಕಿರಿಯಮಗ, ಹಿರಿಯಮಗ ಎಂಬ ಪದಗಳು ಸಾಧಿತವಾಗಿವೆ. ಅದು ಕೊರಚರಲ್ಲಿ ಮಗ, ಮಲಮಗ, ವಳತಮಗ, ಸಿನ್ನಮಗ, ಬೆರಮಗ ಎಂದು ಸಾಧಿತವಾಗಿದೆ. ಇಲ್ಲಿ

ಮಗನ ಮಗ ಅಥವಾ ಮಗಳ ಮಗ – ಪೇತಾ (ಮೊಮ್ಮಗ)

ಮಗನ ಮಗಳು ಅಥವಾ ಮಗಳ ಮಗಳು – ಪೇತಿ (ಮೊಮ್ಮಗಳು)

ಮಗನ, ಮಗನ (ಮೊಮ್ಮಗನ) ಮಗ – ಮುತ್ತುಪೇತಾ (ಗಿರಿಮೊಮ್ಮಗ)

ಮಗಳ, ಮಗಳ (ಮೊಮ್ಮಗಳ) ಮಗಳು – ಮುತ್ತುಪೇತಿ (ಗಿರಿಮೊಮ್ಮಗಳು)

ಇಲ್ಲಿ ಮಗ, ಮಗಳು, ಮೊಮ್ಮಗ, ಮೊಮ್ಮಗಳು, ರೂಪಗಳು ಸಂಬೋಧನೆಯಲ್ಲಿ ಬಳಕೆಯಾಗುವುದಿಲ್ಲ. ಕೇವಲ ಇತರರಿಗೆ ಪರಿಚಯಿಸುವಾಗ ಮಾತ್ರ ಬಳಕೆಯಾಗುತ್ತವೆ. ಈ ಸಂಬಂಧಗಳಿಗೆ ಕೊರಚರಲ್ಲಿ ತಂದೆ-ತಾಯಿಗಳು ತಮ್ಮ ಮಗ-ಮಗಳು- ಮೊಮ್ಮಗಳನ್ನು, ಮೊಮ್ಮಗನನ್ನು ಸಂಬಂಧವಾಚಕ ಪದಗಳಿಂದ ಕರೆಯದೆ ಅವರ ಹೆಸರಿನಿಂದಲೇ ಸಂಬೋಧಿಸುವುದು ಕಂಡುಬರುತ್ತದೆ. ಉದಾ.

ಕೊರಚರ ಭಾಷೆ – ಅನಿತಮ್ಮ ತನ್ನೆಡ್ತುಗುಂಡು ವಾಮ್ಮ

ಕನ್ನಡ – ಅನಿತಮ್ಮ ನೀರು ತಗಂಡು ಬಾರಮ್ಮ

ಕೊರಚರ ಭಾಷೆ – ಮಂಜ ಸಾಲಿಗಿ ದಬಾನ ಪೊಳ

ಕನ್ನಡ – ಮಂಜ ಶಾಲೆಗೆ ಬೇಗ ಹೋಗು

ಕೊರಚರ ಭಾಷೆ – ಕಾಳವ್ವ ಕೊಲ್ಲಗೋರು ಎಂದ ಪಣಿ

ಕನ್ನಡ – ಕಾಳವ್ವ ಹೊಲದಲ್ಲಿ ಏನು ಕೆಲಸ

ಕೊರಚರ ಭಾಷೆ – ಕುಬೇರ ಕರಗು ಎತ್ತಗುಂಡು ಪೋಳೆ

ಕನ್ನಡ – ಕುಬೇರ ಹಗ್ಗ ತಗಂಡು ಹೋಗಲೇ

ಮೇಲಿನ ಉದಾಹರಣೆಗಳಿಂದ ತಮ್ಮ ಮಕ್ಕಳನ್ನು ಸಂಬೋಧಿಸುವ ಸಂದರ್ಭದಲ್ಲಿ ಸಂಬಂಧವಾಚಕಗಳನ್ನು ಬಳಸದೆ, ಹೆಸರುಗಳನ್ನು ಮತ್ತು ಸಂಬೋಧನಾ ರೂಪಗಳನ್ನು ಬಳಸುವುದು ಕಾಣಬರುತ್ತದೆ. ಈ ಹಿನ್ನೆಲೆಯಲ್ಲಿ ಸಂಬಂಧವಾಚಕಗಳು ವ್ಯವಹಾರಿಕ ಸಂದರ್ಭದಲ್ಲಿ ಹೆಚ್ಚು ಮಹತ್ವವನ್ನು ಪಡೆದುಕೊಳ್ಳುತ್ತವೆ.

ಗಂಡ-ಹೆಂಡತಿ

ಸಾಮಾನ್ಯವಾಗಿ ವಿವಾಹವಾದ ನಂತರ ಭಾಷಾ ಬಳಕೆಯಲ್ಲಿ ಪರಸ್ಪರ ಮಾತನಾಡುವಾಗ ಗಂಡನನ್ನು ಹೆಂಡತಿ ಹೆಸರಿಡಿದು ಕರೆದು ಮಾತನಾಡುವ ಆಗಿಲ್ಲ. ಪರಸ್ಪರ ಏಕವಚನದಲ್ಲಿ ಸಂಭಾಷಣೆ ಮಾಡುತ್ತಾರೆ. ಹೆಂಡತಿಯನ್ನು ಗಂಡ ಹೆಸರಿಡಿದು ಕರೆಯಬಹುದು. ಒಂದು ವೇಳೆ ಹೆಂಡತಿ ಗಂಡನ ಹೆಸರಿಡಿದು ಕರೆದರೆ ಗಂಡನ ಆಯುಷ್ಯ ಕಡಿಮೆಯಾಗುತ್ತದೆ ಎಂಬ ನಂಬಿಕೆಯಿದೆ. ಕೊರಚರಲ್ಲಿ ಗಂಡ-ಹೆಂಡತಿ ಎಂಬ ಸಂಬಂಧವಾಚಕಗಳಿಗೆ ಮಣಗು ಮತ್ತು ಪೊಂಡು (ಮೊಂಡು) ಎಂದು ಕರೆಯುತ್ತಾರೆ. ಹೆಂಡತಿಯು ಗಂಡನ ಬಗೆಗೆ ಹೇಳುವಾಗ ಕೊರಚರಲ್ಲಿ ನಂಗಮೊಣಸು (ನನ್ನ ಮನುಷ್ಯ), ನಂಗ ಮಣಗ (ನನ್ನ ಗಂಡ) ನಂಗಟೂಟಾದು (ನಮ್ಮ ಮನೆಯವರು)

ಎಂದು ಸಂಬೋಧಿಸುವುದುಂಟು. ಜೊತೆಗೆ ಮಕ್ಕಳ ಹೆಸರುಗುಂಟ ಗಂಡನನ್ನು ಸೂಚಿಸುವುದು ನೋಡಬಹುದು. ಅದೇ ರೀತಿ ಗಂಡನು ಹೆಂಡತಿಯ ಬಗೆಗೆ ಮಾತಾಡುವಾಗ ನಂಮೊಂಡು, ನಂಗಟೋಟಾದು ಎಂದು ಸಂಬೋಧಿಸುತ್ತಾರೆ.

ಗಂಡ–ಹೆಂಡತಿ ಇಬ್ಬರು ಪರಸ್ಪರ ಸಂಬೋಧಿಸುವ ಸಂದರ್ಭದಲ್ಲಿ ಏ, ಓಯ್, ಇಂದ, ಎಂಬಿತ್ಯಾದಿ ರೂಪಗಳಿಂದ ಕರೆದುಕೊಳ್ಳುತ್ತಾರೆ. ಉದಾ.

ಕೊರಚರ ಭಾಷೆ – ಇದ ಕಳಿ ತಿನು ವಾ

ಕನ್ನಡ – ಇಗ ಊಟ ಮಾಡು ಬರ್‍ರೀ

ಕೊರಚರ ಭಾಷೆ – ಇಂದ ಸಿನ್ನೆಯಲ್ಲಿಗಿ ಎಂತನಾ ತಿಂಬಿಕ್ಯಾರಿ.

ಕನ್ನಡ – ಇಗ ಹುಡುಗರಿಗೆ ಏನಾರ ತಿನುಸುತ್ತೇನೆ.

ಕೊರಚರ ಭಾಷೆ – ಓಯ್ ಮೊಣಸ್ನೇ ಎದ್ದಿರು ದಬಾನ.

ಕನ್ನಡ – ಏ ಮನುಷ್ಯ ಎದ್ದೇಳು ಬೇಗ.

ಅಜ್ಜ–ಅಜ್ಜಿ

ಕುಟುಂಬದ ತಂದೆಯ ತಂದೆ–ತಾಯಿ ಅಥವಾ ತಾಯಿಯ ತಂದೆ–ತಾಯಿಯರು ಅಜ್ಜ–ಅಜ್ಜಿಯರಾಗಿರುತ್ತಾರೆ. ಈ ಅಜ್ಜ–ಅಜ್ಜಿ ಎಂಬ ಬಂಧುಸೂಚಕಗಳಿಗೆ ಕೊರಚರಲ್ಲಿ ತಾತ/ಜೇಜಿ, ಜೇಮ ಎಂಬ ರೂಪಗಳು ಪ್ರಯೋಗವಾಗುತ್ತದೆ. ಕಿರಿಯರು ಅಜ್ಜನನ್ನು ಸಂಬೋಧಿಸುವಾಗ ಹೆಸರಿನೊಂದಿಗೆ ಜೇಜಿ ಎಂದು ಸಂಭೋದಿಸುವುದಿಲ್ಲ ಅದರ ಬದಲಿಗೆ 'ತಾತಾ' ಎಂದು ಸಂಬೋಧಿಸುತ್ತಾರೆ. ಮತ್ತು ಅಜ್ಜಂದಿರನ್ನು ಜೇಜಿ ಎಂದು ಮಾತ್ರವೇ ಸಂಬೋಧಿಸುತ್ತಾರೆ. ಹಾಗೆಯೇ ಅಜ್ಜಿಯನ್ನು ಸಹ ಹೆಸರಿನೊಂದಿಗೆ ಜೇಮ ಎಂದು ಕರೆಯುತ್ತಾರೆ. ಉದಾ. ಕಪ್ಪತಪ್ಪ ತಾತ, ತಿರುಪತೆಪ್ಪತಾತ ಎಂದು ಸಂಬೋಧಿಸುತ್ತಾರೆ ಹೊರತು ಕಪ್ಪತಪ್ಪ ಜೇಜಿ, ತಿರುಪತ್ತೆಪ್ಪ ಜೇಜಿ ಎಂದು ಸಂಬೋಧಿಸುವುದಿಲ್ಲ. ಆದರೆ ಅಜ್ಜಿಯ ಹೆಸರನ್ನು ಸಂಬೋಧಿಸುವಾಗ ಗಂಗಮ್ಮಜೇಮ, ದೇವಕ್ಕಜೇಮ ಎಂದು ಕರೆಯುತ್ತಾರೆ. ಹಿಂದಿನವರು ಅಜ್ಜನನ್ನಾಗಲಿ, ಅಜ್ಜಿಯನ್ನಾಗಲಿ ಹೆಸರಿಡುದು ಕರೆಯದೇ ಬರೇ ಜೇಜಿ, ಜೇಮ ಎಂದೇ ಸಂಬೋಧಿಸುತ್ತಾರೆ.

ಅತ್ತೆ–ಮಾವ/ಅಳಿಯ–ಸೊಸೆ

ಕೊರಚರ ಸಮುದಾಯದಲ್ಲಿ ಅತ್ತೆ–ಮಾವ ಸಂಬಂಧವಾಚಕಗಳಿಗೆ ಅತ್ತ–ಮಾಮ ಎಂದೂ ಮತ್ತು ಅಳಿಯ–ಸೊಸೆಗೆ ಮಚ್ಚಾಡು–ಸೆಡಗೊಸಿ ಎಂದು ಸಂಬೋಧಿಸುವುದುಂಟು. ಹೆಂಡತಿಯ ತಾಯಿ, ಗಂಡನ ತಾಯಿ, ಸೋದರ ಮಾವನ ಹೆಂಡತಿ ಹಾಗೂ ತಂದೆಯ ಒಡಹುಟ್ಟಿದವಳು ಅತ್ತೆಯಾಗುತ್ತಾಳೆ. ಅದೇ ರೀತಿ ಹೆಂಡತಿಯ ಅಥವಾ ಗಂಡನ ತಂದೆ, ಸೋದರತ್ತೆಯ ಗಂಡ,

ತಾಯಿಯ ಅಣ್ಣ ಮಾವನಾಗುತ್ತಾನೆ. ಈ ಸಂಬಂಧಗಳ ಹಿನ್ನೆಲೆಯಲ್ಲಿ ಬಳಕೆಯಾಗುವ ಕೆಲವೊಂದು ವಾರ್ಗಿಕ ರೂಪಗಳು, ಸಂಬೋಧನೆ ಮತ್ತು ಪರಿಚಯ ಎರಡರಲ್ಲಿಯೂ ಬಳಕೆಯಾಗುವುದುಂಟು. ಉದಾ.

ಕನ್ನಡ	**ಕೊರಚರ ಭಾಷೆ**
ಸೋದರತ್ತೆ	ಮೇನತ್ತ
ಸೋದರಮಾವ	ಮೇನಮಾಮ
ದೊಡ್ಡತ್ತೆ	ಬೇರತ್ತ
ಸಣ್ಣತ್ತೆ	ಸಿನ್ನತ್ತ

ಮಗಳ ಗಂಡ, ಅಕ್ಕನ ಮಗ, ತಂಗಿಯ ಮಗ ಅಳಿಯನಾಗುತ್ತಾನೆ. ಹಾಗೆಯೇ ಸೊಸೆ ಎಂಬ ಬಂಧುಸೂಚಕಕ್ಕೆ ಸೆಡಗೊಸಿ, ಮೆರಿಮಗಳು ಎಂಬ ಪದವನ್ನು ಸಾಮಾನ್ಯವಾಗಿ ಮಗನ ಹೆಂಡತಿಯನ್ನು ಮರಿಮಗಳು ಎಂದು ಕರೆಯುತ್ತಾರೆ. ಹಾಗೂ ಅಕ್ಕನ ಮಗಳು, ತಂಗಿಯರ ಮಗಳು, ತಮ್ಮನ ಹೆಂಡತಿಯರು, ಸೆಡ್‌ಗೂಸಿಯೆನಿಸಿಕೊಳ್ಳುತ್ತಾರೆ. ಅದೇ ರೀತಿಯಾಗಿ ಮಗಳ ಗಂಡ ಕೊರಚರಲ್ಲಿ 'ಮೆರಿಮಗ' ಆಗುತ್ತಾನೆ. ಅಕ್ಕನ ಮಗ, ತಂಗಿಯ ಮಗ ಇವರಲ್ಲಿ ಮಚ್ಚಾಡು ಆಗುತ್ತಾನೆ. ಈತನು ಹೆಂಡತಿಯ ತವರಿನಲ್ಲಿ ಗೌರವಾರ್ಹಕ್ಕೆ ಪಾತ್ರನಾಗಿರುತ್ತಾನೆ. ಈತನನ್ನು ಸಂಬೋಧಿಸುವಾಗ ಮಚ್ಚಾಡು, ಮರಿಮಗ ಎಂಬ ಪದ ಬಳಕೆಯಾಗುವುದಿಲ್ಲ. ಇನ್ನೊಬ್ಬರಿಗೆ ಪರಿಚಯಿಸುವಾಗ ಮಾತ್ರ ಬಳಕೆಯಾಗುತ್ತದೆ. ಅದು ಸೆಡ್‌ಗೂಸಿ, ಮರಿಮಗಳಿಗೂ ಅನ್ವಯಿಸುತ್ತದೆ. ಇವರಲ್ಲಿ ಸೊಸೆಯಾದವಳು ಅತ್ತೆ ಮಾವಂದಿರರಿಗೆ ಭಾವ ಮೈದುನರಿಗೆ ಹಾಗೂ ನಾದಿನಿಯರಿಗೆ ವಿಧೇಯಕವಾಗಿಯೇ ಇರಬೇಕು ಎಂಬ ನಂಬಿಕೆ ಈಗಲೂ ಕೊರಚರಲ್ಲಿ ಜೀವಂತವಾಗಿರುವುದನ್ನು ಕಾಣಬಹುದು.

ವೈವಾಹಿಕ ಸಂಬಂಧದಿಂದ ಏರ್ಪಡುವ ಸಂಬಂಧಗಳಲ್ಲಿ ಅಂದರೆ ಸೋದರಮಾವ, ಸೋದರತ್ತೆ, ಅಳಿಯ, ಸೊಸೆ ಇವರು ಕೌಟುಂಬಿಕ ಪರಿಸರದಲ್ಲಿ ಮಹತ್ವದ ಸ್ಥಾನವನ್ನು ಹೊಂದಿರುತ್ತಾರೆ. ಪರಸ್ಪರರ ನಡುವೆ ಅಂದರೆ ಮಾವ ಸೊಸೆ ಮತ್ತು ಅತ್ತೆ ಅಳಿಯರ ಸಂಬಂಧಗಳು ಮುಕ್ತವಾಗಿದ್ದು, ಪರಸ್ಪರರ ಮಧ್ಯೆ ನಗೆಚಾಟಿಕೆ, ತಮಾಷೆ, ಕುಚೋದ್ಯ ಮೊದಲಾದ ಬಗೆಯ ಮನರಂಜನಿಯ ವಾತಾವರಣ ಇರುತ್ತದೆ. ಇವರುಗಳ ನಡುವಿನ ಸಂಬಂಧವು ಇತರ ಸಂಬಂಧಿಗಳ ನಡುವಿನ ಸಂಬಂಧಕ್ಕಿಂತ ಭಿನ್ನವಾಗಿರುತ್ತದೆ. ಇವರ ಸಂಬಂಧವು ತಂದೆ, ತಾಯಿ, ದೊಡ್ಡಪ್ಪ, ಚಿಕ್ಕಪ್ಪನಂತಿರದೆ ಬೇರೆಯದೇ ಆಗಿರುತ್ತದೆ. ಅಲ್ಲದೆ ಸೋದರಿಯ ಮಗಳು, ಸೋದರಮಾವ/ಅತ್ತೆಯ ಮಗಳು ಹೆಂಡತಿಯಾಗಲು ಅರ್ಹಳಾಗುತ್ತಾಳೆ. ಜನಪದ ಸಾಹಿತ್ಯದಲ್ಲಿ ಮಾವ, ಅಕ್ಕ ಹಾಗೂ ಅತ್ತೆಯ ಮಗಳನ್ನು ವರ್ಣಿಸುವ ಅನೇಕ ನಿದರ್ಶನ ಲಭ್ಯವಾಗುತ್ತದೆ. ಹಾಗೆಯೇ ತಾಯಿಯ ಸೋದರನಿಗೆ

ತನ್ನ ಸೋದರಿಯರ ಮಕ್ಕಳ ಮೇಲೆ ಮಮತೆ ಇರುತ್ತದೆ. ಇದು ಪರಸ್ಪರರಲ್ಲಿ ಪ್ರೀತಿ, ವಿಶ್ವಾಸವನ್ನು ಏರ್ಪಡಿಸುವಲ್ಲಿ ನೆರವಾಗುತ್ತದೆ.

ಸಹೋದರ–ಸಹೋದರಿಯರು

ಸಾಮಾನ್ಯವಾಗಿ ಒಡಹುಟ್ಟಿದವರನ್ನು ಸಹೋದರ–ಸಹೋದರಿ ಎಂದು ಸಂಬೋಧಿಸಲಾಗುತ್ತದೆ. ಒಡಹುಟ್ಟಿದವರಲ್ಲಿ ಹಿರಿಯವರು ಅಣ್ಣ ಆಗುತ್ತಾನೆ. ಕಿರಿಯವನು ತಮ್ಮನಾಗುತ್ತಾನೆ. ಇಬ್ಬರು ಮೂವರು ಇರುವಂತಹ ಸಂದರ್ಭದಲ್ಲಿ ಅವರವರ ಹೆಸರುಗಳ ಕೊನೆಯಲ್ಲಿ ಅಣ್ಣ ಎಂಬ ಪದವನ್ನು ಸೇರಿಸಿ ಬಳಸುತ್ತಾರೆ. ಸಹೋದರ ಎಂಬುದನ್ನು ಈ ಸಮುದಾಯದವರು 'ಅಣ್ಣ' ಎಂದು ಕರೆಯುತ್ತಾರೆ. ದೊಡ್ಡಣ್ಣ, ಚಿಕ್ಕಣ್ಣ ಎಂಬ ಸಂಬಂಧವಾಚಕಗಳು ಇವರಲ್ಲಿ ಪೆರಣ್ಣ, ಸಿನ್ನಣ್ಣ ಎಂಬುದಾಗಿ ಬಳಕೆಯಾಗುತ್ತವೆ. ಇವರ ವ್ಯಕ್ತಿನಾಮಗಳ ಕೊನೆಯಲ್ಲಿ 'ಅಣ್ಣ' ವಾರ್ಗಿಕವಾಗಿ ಬಳಕೆಯಾಗುತ್ತದೆ. ಉದಾ.

ಲಿಂಗ + ಅಣ್ಣ = ಲಿಂಗಣ್ಣ

ತಿಪ್ಪ + ಅಣ್ಣ = ತಿಪ್ಪಣ್ಣ

ಗಂಗ + ಅಣ್ಣ = ಗಂಗಣ್ಣ

ಬೋರ + ಅಣ್ಣ = ಬೋರಣ್ಣ

ನಾಗರಾಜ + ಅಣ್ಣ = ನಾಗರಾಜಣ್ಣ

ಕಪ್ಪತ + ಅಣ್ಣ = ಕಪ್ಪತಣ್ಣ, ಇತ್ಯಾದಿ.

ಈ ಪಟ್ಟಿಯಲ್ಲಿನ ಉದಾಹರಣೆಗಳನ್ನು ಗಮನಿಸಿದಾಗ 'ಅಣ್ಣ' ಎಂಬುದು ಹೆಸರಿನ ಕೊನೆಗೆ ಬಳಕೆಯಾಗಿರುವುದು ತಿಳಿದುಬರುತ್ತದೆ. ಇಲ್ಲಿ ಅಣ್ಣ ಎಂಬ ರಚನೆಯನ್ನಷ್ಟೇ ಪ್ರತ್ಯೇಕವಾಗಿ ಬಳಸಿದಾಗ ಅಂದರೆ ಸಂಬೋಧನಾ ಸಂದರ್ಭದಲ್ಲಿ ಬಳಕೆಯಾಗುವ 'ಅಣ್ಣ' ಎಂಬುದು ಅಣ್ಣಯೆಂದೇ ಬಳಕೆಯಾಗುತ್ತದೆ. ಇವರಲ್ಲಿ 'ಅಣ್ಣ' ಎಂಬುದು ಆಡುನುಡಿಯಲ್ಲಿ 'ಯೇಣ' ಎಂದು ಸಂಬೋದಿಸುವುದನ್ನು ನೋಡಬಹುದು. ಇವರಲ್ಲಿ ಅಣ್ಣ ಎಂಬುದು ಗೌರವಸೂಚಕವಾಗಿ ಬಳಕೆಯಾಗುತ್ತದೆ.

ಒಡಹುಟ್ಟಿದವರಲ್ಲಿ ಕಿರಿಯವ ತಮ್ಮನಾಗುತ್ತಾನೆ. ಕೊರಚರಲ್ಲಿ 'ತಮ್ಮ' ಎಂಬ ಸಂಬಂಧವಾಚಕಕ್ಕೆ 'ತೆಂಬಿ' ಎಂದು ಕರೆಯುತ್ತಾರೆ. ಈ ತೆಂಬಿ ಪ್ರಸಾರವನ್ನು ಗಮನಿಸಿದರೆ ಹಿರಿಯರು ಕಿರಿಯರನ್ನು ಕುರಿತು ಮಾತನಾಡುವಾಗ ಪ್ರೀತಿಪೂರ್ವಕವಾಗಿ ಬಳಸುತ್ತಾರೆ. ಕೊರಚರಲ್ಲಿ ತೆಂಬಿ (ತಮ್ಮ) ಎಂದು ನೇರವಾಗಿ ಸಂಬೋಧಿಸಲಾಗುವುದಿಲ್ಲ ಅದು ಇನ್ನೊಬ್ಬರಿಗೆ ಪರಿಚಯಿಸುವಾಗ ಮಾತ್ರ ತೆಂಬಿ (ತಮ್ಮ) ಎಂದು ಬಳಕೆ ಮಾಡುವುದನ್ನು ನೋಡುತ್ತೇವೆ. ಉಳಿದ ಸಂದರ್ಭದಲ್ಲಿ ಸಂಬೋಧಿಸುವಾಗ ಹೆಸರಿಡುದು ಸಂಬೋಧಿಸಲಾಗುತ್ತದೆ.

ಒಡಹುಟ್ಟಿದವರಲ್ಲಿ ಹಿರಿಯವಳು ಅಕ್ಕಳಾಗುತ್ತಾಳೆ. ಅದರ ಪ್ರಸಾರವನ್ನು ಗಮನಿಸಿದಾಗ ಕೊರಚಲ್ಲಿಯೂ ಸಹ 'ಅಕ್ಕ' ಎಂದು ಸಂಬೋಧಿಸುತ್ತಾರೆ. ಬಂಧುಸೂಚಕ ವಾರ್ಗಿಕ ರೂಪಗಳು ಇತರೆ ಸಮುದಾಯಗಳಲ್ಲಿ ಬಳಕೆಯಲ್ಲಿರುವಂತೆ ಕೊರಚಲ್ಲಿಯೂ ಬಳಕೆಯಲ್ಲಿದೆ. ಸಾಮಾನ್ಯವಾಗಿ ಇವರು 'ಅಕ್ಕ' ಎಂಬುದನ್ನು ಆಡುನುಡಿಯಲ್ಲಿ 'ಯಕ್ಕ' ಎಂದು ಸಂಬೋಧಿಸುತ್ತಾರೆ. 'ಅಕ್ಕ' ಎಂಬ ಬಂಧುಸೂಚಕವು ಗೌರವಸೂಚಕವಾಗಿ ಬಳಕೆಯಾಗುವುದುಂಟು.

ಒಡಹುಟ್ಟಿದವರಲ್ಲಿ ಕಿರಿಯವಳು ತಂಗಿಯಾಗುತ್ತಾಳೆ. ಇವರಲ್ಲಿ ತಂಗಿ ಎಂಬುದಕ್ಕೆ 'ತಸ್ಸಿ' ಎಂದು ಬಳಕೆಯಾಗುತ್ತದೆ. ಈ ಬಂಧುಸೂಚಕವು ಸಂಬೋಧನೆಯಲ್ಲಿ ಅಮ್ಮಯ್ಯ, ಪಾಪ ಎಂದು ಬಳಕೆ ಮಾಡುತ್ತಾರೆ. ತಂಗಿ (ತಸ್ಸಿ) ಎಂದು ಸಂಬೋಧಿಸುವುದಿಲ್ಲ. ಆದರೆ ಇದು ಬಂಧುಸೂಚಕವಷ್ಟೇ ಹೆಸರಿಡಿದು ಸಂಬೋಧಿಸುತ್ತಾರೆ. ಈ ಭಾಷಿಕ ಸಮುದಾಯದಲ್ಲಿ ಬಳಕೆಯಾಗುವ ಅಣ್ಣ, ಅಕ್ಕ, ತಮ್ಮ ಎಂಬ ಬಂಧುಸೂಚಕಗಳು ಕುಟುಂಬದಲ್ಲಿನ ಸದಸ್ಯರ ಕಳ್ಳುಬಳ್ಳಿತನವನ್ನು ಗಟ್ಟಿಗೊಳಿಸುತ್ತದೆ. ಜನಪದರ ನುಡಿಯಲ್ಲಿ ನೋಡಿದಾಗ,

ಹೆಣ್ಣಿನ ಜನುಮಾಕೆ ಅಣ್ಣತಮ್ಮರು ಬೇಕು
ಬೆನ್ನು ಕಟ್ಟುವರು ಸಭೆಯೊಳಗೆ । ಸಾವಿರ
ಹೊನ್ನು ಕಟ್ಟುವರು ಉಡಿಯೊಳಗೆ

ಹೆಣ್ಣು ತನ್ನ ಸಹೋದರರ ಬಗೆಗೆ ಎಂತಹ ಕಲ್ಪನೆಯನ್ನು ಕಟ್ಟಿಕೊಂಡಿದ್ದಾಳೆಂಬುದು ಇದರಿಂದ ತಿಳಿಯುತ್ತದೆ. ಸಹೋದರ ಸಹೋದರಿಯರ ನಡುವಿನ ಸಂಬಂಧಗಳು ಯಾವ ಬಗೆಯವು ಆ ಸಂಬಂಧಗಳ ನಡುವಿನ ಪರಸ್ಪರ ಜವಾಬ್ದಾರಿಗಳ ಬಗೆಗೆ ಕೆಲವು ಗಾದೆ ಮಾತುಗಳು ಬೆಳಕು ಚೆಲ್ಲುತ್ತವೆ. ಹಿರಿಯಣ್ಣನೆಂದರೆ ತಂದೆಯ ಸಮಾನ, ಅಕ್ಕನ ಬಂಗಾರವಾದರೂ ಅಕ್ಕಸಾಲಿ ಬಿಡುವುದಿಲ್ಲ. ಹಿರಿಯಕ್ಕನ ಚಾಳಿ ಮನಿಮಂದಿಗೆಲ್ಲಾ, ಇತ್ಯಾದಿ ಗಾದೆಗಳನ್ನು ಗಮನಿಸಬಹುದು. ಈ ಬಂಧುಸೂಚಕಗಳು ಸಮಾಜದಲ್ಲಿ ಅಪರಿಚಿತ ವ್ಯಕ್ತಿಗಳನ್ನು ಸಂಬೋಧಿಸುವಾಗ ಬಳಕೆಯಾಗುತ್ತವೆ. ಮನುಷ್ಯನ ಸಂಬಂಧಗಳು ಭಾಷೆಯಂತಹ ಸಂವಹನ ಶಕ್ತಿಯನ್ನು ಪಡೆದಿವೆಯೆಂಬುದನ್ನು ಇಲ್ಲಿ ಗಮನಿಸಬಹುದಾಗಿದೆ.

ಭಾವ-ಮೈದುನ

ಈ ಸಂಬಂಧಸೂಚಕಗಳು ವೈವಿಧ್ಯಮಯವಾಗಿದೆ. ಕೊರಚಲ್ಲಿ ಈ ಬಂಧುಸೂಚಕಗಳಿಗೆ 'ಮಾಮ', 'ಮೆಚ್ಚುನ' ಎಂದು ಸಂಬೋಧಿಸುತ್ತಾರೆ. ಇಲ್ಲಿ ತಾಯಿಯ ಸಹೋದರರು ಸೋದರಮಾವರಾಗುತ್ತಾರೆ. (ಮೇನಮಾಮ) ಹೆಂಡತಿಯ ತಂದೆ ಹಾಗೂ ಅಕ್ಕನ ಗಂಡನಿಗೆ 'ಮಾಮ' ಎಂದು ಕರೆಯುತ್ತಾರೆ. ಇದಕ್ಕೆ ಕಾರಣ ತಾಯಿಯ ಸೋದರನ ಮಗಳು ಹೆಂಡತಿಯಾಗುವ ಸಾಧ್ಯತೆಯಿರುವುದು. ಇನ್ನೊಂದು ಕಾರಣವೆಂದರೆ ಗಂಡನ ಅಣ್ಣ/ತಮ್ಮಂದಿರು ಹೆಂಡತಿಯ ಅಕ್ಕ ತಂಗಿಯರನ್ನು ಮದುವೆಯಾಗುವ ಸಾಧ್ಯತೆಯಿರುವುದರಿಂದ ಅವಳು ಮದುವೆಯಾದ ವ್ಯಕ್ತಿ ಬೇರೆಯಾಗಿದ್ದರೂ ಅವನು ಮಾವ (ಮಾಮ)ನಾಗುತ್ತಾನೆ. ಕೆಲವು ವೇಳೆ ಬಂಧುತ್ವವಿಲ್ಲದಿದ್ದರೂ

ಆತ್ಮೀಯತೆಯನ್ನು ಸೂಚಿಸುವಾಗಲೂ ಈ ಪದ ಬಳಕೆಯಾಗುತ್ತದೆ. ಗಂಡನ ಅಣ್ಣನನ್ನು ಸಂಬೋಧಿಸುವಾಗ 'ಮಾಮ' ಎಂದೂ ಮತ್ತು ಪರಿಚಯಿಸುವಾಗಲೂ 'ಮಾಮ' ಎಂದು ಕರೆಯುವುದನ್ನು ನೋಡಬಹುದು. ಉದಾ.

ಕೊರಚರ ಭಾಷೆ – ಮಾಮ ಕಳಿ ತಿನು ಬಾ

ಕನ್ನಡ – ಭಾವ ಊಟ ಮಾಡು ಬಾ

ಕೊರಚರ ಭಾಷೆ – ಮಾಮನಾಯ ಊರುಗು ಹೋಸು

ಕನ್ನಡ – ಮಾವಂದಿರು ಊರಿಗೆ ಹೋದರು.

ಮೈದುನ ಎಂಬುದಕ್ಕೆ ಕೊರಚರಲ್ಲಿ 'ಮೆಚ್ಚುನು' ಎಂಬುದು ಸಂಬಂಧಸೂಚಕವಾಗಿ ಬಳಕೆಯಾಗುತ್ತದೆ. ಇವರಲ್ಲಿ ಗಂಡನ ತಮ್ಮನಿಗೆ ಮತ್ತು ತಂಗಿಯ ಗಂಡನಿಗೆ 'ಮೆಚ್ಚನು' ಎಂದು ಕರೆಯುತ್ತಾರೆ. ಇಲ್ಲಿ ಇವರು ಬೇರೆಯವರಿಗೆ ಪರಿಚಯಿಸುವಾಗ ಮಾತ್ರ 'ಮೆಚ್ಚನು' ಎಂದು ಸಂಬೋಧಿಸುತ್ತಾರೆ. ಅತ್ತಿಗೆಯವರು ಮೈದುನರನ್ನು ಹೆಸರಿಡಿದು ಕರೆಯದೇ 'ಅಬ್ಬ' ಎಂದು ಸಂಬೋಧಿಸುವುದನ್ನು ಇವರಲ್ಲಿ ನೋಡುವುದು ಗಮನೀಯ ಸಂಗತಿಯಾಗಿದೆ. ಆದರೆ ಇತರ ಸಮುದಾಯದವರಲ್ಲಿ ಬೇರೆಯವರಿಗೆ ಪರಿಚಯಿಸುವಾಗ ಮೈದುನ ಎಂದು ತಾವೇ ಸಂಬೋಧಿಸುವಾಗ ಅಣ್ಣ ಎಂದು ಸಣ್ಣವರಾದರೆ ಹೆಸರಿಡಿದು ಕರೆಯುವುದನ್ನು ನೋಡಬಹುದು. ಉದಾ.

ಕೊರಚರ ಭಾಷೆ – ನಂಗ ಮೆಚ್ಚನು ಸಾಲಿಗಿ ಹೋಸು

ಕನ್ನಡ – ನಮ್ಮ ಮೈದುನ ಶಾಲೆಗೆ ಹೋದ

ಕೊರಚರ ಭಾಷೆ – ಅಬ್ಬ ಕಳಿ ತಿಂಡ್ರುಟು ಪೊ

ಕನ್ನಡ – ಅಪ್ಪ ಊಟ ತಿಂದ್ಬುಟ್ಟು ಹೋಗು.

ಅತ್ತಿಗೆ–ನಾದಿನಿ (ನಂಗ–ಮಚ್ಚಿರಿಸಿ)

ಅಣ್ಣನ ಹೆಂಡತಿ, ತಾಯಿಯ ಸಹೋದರನ ಹಿರಿಯ ಮಗಳು ವಯಸ್ಸಿನಲ್ಲಿ ತಂದೆಯ ಸಹೋದರಿಯ ವಯಸ್ಸಿನಲ್ಲಿ ಹಿರಿಯ ಮಗಳು, ಅಕ್ಕನ ಗಂಡನ ಹಿರಿಯ ಸಹೋದರಿ, ಹೆಂಡತಿಯ ಅಕ್ಕಂದಿರು ಇಲ್ಲಿ ಅತ್ತಿಗೆಯಾಗುತ್ತಾಳೆ. ಕೊರಚರು 'ಅತ್ತಿಗೆ'ಯನ್ನು 'ನಂಗ' ಎಂದು ಸಂಬೋಧಿಸಲಾಗುತ್ತದೆ. ಇತರೆ ಸಮುದಾಯಗಳಂತೆ ಇವರು ಸಹ ಅತ್ತಿಗೆಗೆ ತಾಯಿಯ ಸ್ಥಾನಮಾನವನ್ನು ನೀಡಿದ್ದಾರೆ. ಕೌಟುಂಬಿಕ ಜೀವನದಲ್ಲಿ ಅತ್ತಿಗೆಯ ಪಾತ್ರ ಹಿರಿದಾದ್ದರಿಂದ ಹೆಚ್ಚಿನ ಜವಾಬ್ದಾರಿಯನ್ನು ಹೊಂದಿರುತ್ತಾಳೆ. ಕೊರಚರಲ್ಲಿ 'ನಂಗ' (ಅತ್ತಿಗೆ) ಎಂದು ಬೇರೆಯವರಿಗೆ ಪರಿಚಯಿಸುವಾಗಲೂ ಅಥವಾ ಸ್ವತಃ ಸಂಬೋಧಿಸುವಾಗಲು 'ನಂಗ' ಎಂದೇ ಬಳಕೆ ಮಾಡುವುದನ್ನು ಕಾಣಬಹುದಾಗಿದೆ. ಈ ಬಂಧುಸೂಚಕ ನಾಮಪದ ಮತ್ತು ಗುಣವಾಚಕಗಳೊಂದಿಗೆ ಮಾತ್ರ ಸಂಬೋಧಿಸುವುದು ಕಂಡುಬರುತ್ತದೆ. ಉದಾ.

ಕನ್ನಡ	ಕೊರಚರ ಭಾಷೆ
ಅತ್ತಿಗೆ	ನಂಗ
ದೊಡ್ಡತ್ತಿಗೆ	ಬೆರನಂಗ
ಸಣ್ಣತ್ತಿಗೆ	ಸಿನ್ನಂಗ
ಕೊಟ್ರವತ್ತಿಗೆ	ಕೊಟ್ರಮ್ಮನಂಗ
ನಾಗಮ್ಮತ್ತಿಗೆ	ನಾಗಮ್ಮನಂಗ

ಸಾಮಾನ್ಯವಾಗಿ ಹೆಂಡತಿಯ ತಂಗಿ ಅಥವಾ ಗಂಡನ ತಂಗಿಯರು ನಾದಿನಿಯಾಗಿ ಕಾಣಿಸಿಕೊಳ್ಳುತ್ತಾರೆ. ಕೊರಚರಲ್ಲಿ ನಾದಿನಿ ಎಂಬ ಪದವು 'ಮೆಚ್ಚುನ್ನಿ' ಎಂದು ಬಳಕೆಯಾಗುತ್ತದೆ. ಈ ಬಂಧುಸೂಚಕವು ಸಂಬೋಧನೆಯಲ್ಲಿ ಬಳಕೆಯಾಗುವುದಿಲ್ಲ. ಇನ್ನೊಬ್ಬರಿಗೆ ಪರಿಚಯಿಸುವಾಗ ಮಾತ್ರ ಬಳಕೆಯಾಗುತ್ತದೆ. ಇವರಲ್ಲಿ ಸಂಬೋಧನೆಯಾಗಿ ತಸ್ಸಿ, ಅಯ್ಯ ಎಂಬ ರೂಪಗಳನ್ನು ಬಳಸುತ್ತಾರೆ. ಉದಾಹರಣೆಗೆ

ಕೊರಚರ ಭಾಷೆ – ನಂಗ ಮೆಚ್ಚಿನ್ನಿಗಿ ನಲ್ಲಗಿಲ್ಲ

ಕನ್ನಡ – ನಮ್ಮ ನಾದಿನಿಗೆ ಚನ್ನಾಗಿಲ್ಲ

ಕೊರಚರ ಭಾಷೆ – ಅಯ್ಯ/ತಸ್ಸಿ ಬಟ್ಲ ಗುಪ್ತರತಗು ಹೊಂಬಾ

ಕನ್ನಡ – (ಹೆಸರಿಡಿದು) ಲಕ್ಷ್ಮೀ ಬಟ್ಟೆ ತೊಳೆಲಿಕ್ಕೆ ಹೋಗನು ಬಾ

ಸಡ್ಡಗ (ಷಡ್ಡಕ)– (ಸೆಡ್ಗ್)

ಹೆಂಡತಿಯ ಸಹೋದರಿಯ ಗಂಡನಿಗೆ ಈ ರೂಪ ಬಳಕೆಯಲ್ಲಿದೆ. ಈ ಬಂಧುಸೂಚಕವು ಕೊರಚರಲ್ಲಿ ಸೆಡ್ಗ್ ಎಂದು ಬಳಕೆಯಲ್ಲಿದೆ. ಇನ್ನೊಬ್ಬರಿಗೆ ಪರಿಚಯಿಸುವಾಗ ಮಾತ್ರ ಸಂಬೋಧನೆಯಲ್ಲಿ ಸಂಬಂಧಸೂಚಕವಾಗಿ ಬಳಕೆಯಾಗುತ್ತದೆ. ಉದಾಹರಣೆಗೆ ನಂಗ ರೊಂಡು ಸೆಡ್ಗ್‌ನಾಯ ಊಟ್ಲಲಿಲ್ಲ ಬೆಲಿಗಿ ಹೋಕಿದು (ನಮ್ಮ ಇಬ್ಬರೂ ಷಡ್ಡಕರೂ ಹೊರಗಡೆ ಹೋಗಿದ್ದಾರೆ)

ಓರಗಿತ್ತಿ–ಸವತಿ

ಸಾಮಾನ್ಯವಾಗಿ ಗಂಡನ ಸಹೋದರರ ಹೆಂಡತಿಯರನ್ನು ಓರಗಿತ್ತಿ ಎನ್ನುವರು ಕೊರಚರು ವಾರಗಿತ್ತಿ ಎಂದು ಬಳಕೆ ಮಾಡಿದರು. 'ವಾರಗಿತ್ತಿ'ಯೆಂದು ಸಂಬೋಧಿಸುವುದಿಲ್ಲ ಬೇರೊಬ್ಬರಿಗೆ ಪರಿಚಯಿಸುವಾಗ ಬಳಸುತ್ತಾರೆ. ಇವರು ಹಿರಿಯರನ್ನು 'ಅಕ್ಕ' ಎಂದೂ ಕಿರಿಯವರನ್ನು ಹೆಸರಿನಿಂದ ಸಂಬೋಧಿಸಲಾಗುತ್ತದೆ.

'ಸವತಿ' ಎಂದರೆ ಒಬ್ಬ ವ್ಯಕ್ತಿಯ ಇಬ್ಬರು ಹೆಂಡಿರ ನಡುವಿನ ಸಂಬಂಧಸೂಚಕ ಪದ ಕೊರಚರು ಇವರಿಗೆ 'ಮಾಸಟಿ' ಎಂದು ಕರೆವರು. ಎರಡನೇ ಹೆಂಡತಿಯಾಗಿ ಬಂದವಳನ್ನು ಈ

ಹೆಸರಿನಿಂದ ಕರೆಯುತ್ತಾರೆ. ಆದರೆ ಅದು ಬೇರೆಯವರಿಗೆ ಪರಿಚಯಿಸುವಾಗ ಮಾತ್ರ 'ಮಾಸಟಿ' (ಸವತಿ) ಎಂದು ಪರಿಚಯಿಸುವುದನ್ನು ನೋಡಬಹುದು.

ಈ ರೀತಿಯಾಗಿ ಸಮಾಜದಲ್ಲಿ ಬಂಧುತ್ವ ಪದಗಳಿಂದ ವ್ಯಕ್ತಿಗಳ ನಡುವೆ ಪ್ರೀತಿ ವಿಶ್ವಾಸ, ಸಲಿಗೆ ಹೆಚ್ಚಿದಾಗ ಆಪ್ತರಾಗಲು ಈ ಬಂಧುತ್ವ ಪದಗಳು ಸಹಾಯಕವಾಗುತ್ತವೆ. ಅಲ್ಲದೆ ವ್ಯಕ್ತಿಯ ಸ್ಥಾನಮಾನ, ವಯಸ್ಸು ಇತ್ಯಾದಿ ವಿಚಾರಗಳನ್ನು ಪರಿಚಯ ಮಾಡಿಕೊಡುತ್ತಾರೆ. ಈ ಬಂಧುತ್ವ ಪದಗಳು ನಮ್ಮನ್ನು ಸುಸಂಸ್ಕೃತರನ್ನಾಗಿ ಮಾಡುತ್ತವೆ. ಮತ್ತು ಪಾರಂಪರಿಕವಾಗಿರುವ ನಮ್ಮ ನಮ್ಮ ಸಾಂಸ್ಕೃತಿಕ ಸಂಬಂಧಗಳನ್ನು ಕೂಡ ಪರಿಚಯಿಸುತ್ತವೆ. ಜೊತೆಗೆ ಮಕ್ಕಳಲ್ಲಿ ಬಾಲ್ಯದಿಂದಲೇ ಗೌರವ ಮನೋಭಾವನೆ ಮೂಡಿಸಲು ಈ ಬಂಧುತ್ವ ಪದಗಳು ತುಂಬಾ ಸಹಾಯ ಮಾಡುತ್ತವೆ.

ಇಂದಿನ ಈ ಆಧುನಿಕತೆ, ಶೈಕ್ಷಣಿಕ ಪ್ರಭಾವದಿಂದಾಗಿ ಈ ಬಂಧುಸೂಚಕಗಳ ಮೇಲೆ (ಇತರೆ ಎಲ್ಲ ಸಮುದಾಯದವರ) ಇಂಗ್ಲೀಷನ ಬಂಧುತ್ವಸೂಚಕ ಪದಗಳು ಪ್ರಭಾವ ಬೀರಿವೆ. ಕೊರಚರ ಸಮುದಾಯದ ಸಂಬಂಧಸೂಚಕ ಪದಗಳು ಇದಕ್ಕೆ ಹೊರತಾಗಿಲ್ಲ. ಕೊರಚರ ಭಾಷಾ ಬಳಕೆಯನ್ನು ಗಮನಿಸಿದಾಗ ಬಂಧುಸೂಚಕ ಪದಗಳು ಸಾಮಾನ್ಯವಾಗಿ ತಮಿಳು, ತೆಲುಗು, ಕನ್ನಡ ಭಾಷಿಕ ಪದಗಳು ಬಳಕೆಯಾಗುವುದನ್ನು ಕಾಣಬಹುದು. ಎಲ್ಲ ಸಮಾಜಗಳಂತೆಯೇ ಕೊರಚರ ಸಮುದಾಯದಲ್ಲೂ ಆಧುನಿಕತೆ, ಶಿಕ್ಷಣ ವಿಶೇಷ ಪರಿಣಾಮವನ್ನು ಬೀರುತ್ತದೆ. ಈ ಸಮುದಾಯದಲ್ಲಿ ಸಹ ಇಂಗ್ಲೀಶಿನ ಪ್ರಭಾವ ಕಂಡುಬರುತ್ತದೆ. ಇತ್ತೀಚಿನ ತಲೆಮಾರುಗಳಲ್ಲಿ ಪ್ರತಿಷ್ಠೆಯ /ಸಾಮಾಜಿಕ ಮೇಲರಿಮೆಯ ಕಾರಣದಿಂದಾಗಿ ಇಂಗ್ಲೀಶಿನ ಬಂಧುಸೂಚಕ ಪದಗಳು ಬಳಕೆಯಾಗಿರುವುದನ್ನು ಇಲ್ಲಿ ಗಮನಿಸಬಹುದಾಗಿದೆ. ಉದಾ.

ಇಂಗ್ಲೀಷ್	**ಕೊರಚರ ಭಾಷೆ**
ಮಮ್ಮಿ	ಅಮ್ಮ
ಡ್ಯಾಡಿ	ಅಬ್ಬ, ಅಯ್ಯ, ಆವ
ಆಂಟಿ	ಸಿನ್ನಮ್ಮ, ಸೋಡಮ, ಬೇರಮ್ಮ, ಬೆದ್ದಮ್ಮ
ಅಂಕಲ್	ನಾಯನ್ನು, ಬೇರಾವ, ಬೆದ್ದಾವ
ಫಾದರ್ಇನ್ ಲಾ	ಮೇನಮಾಮ
ಮದರ್ ಇನ್ ಲಾ	ಮೇನತ್ತ
ಸನ್ ಇನ್ ಲಾ	ಮಚ್ಚಾಡು
ಡಾಟರ್ ಇನ್ ಲಾ	ಸೆಡ್‌ಗೂಸಿ
ಕೋ ಬ್ರದರ್	ಅಣ್ಣ (ಅಣ್ಣಂದಿರು) ಸೆಡ್ಗ್
ಕೋ ಸಿಸ್ಟರ್	ಅಕ್ಕ (ಅಕ್ಕಂದಿರು) ವಾರಗಿತ್ತಿ

ಇಂತಹ ಇಂಗ್ಲಿಷ ಬಂಧುಸೂಚಕ ಪದಗಳು ಕೊರಚರ ಬಂಧುಸೂಚಕ ಪದಗಳ ಮೇಲೆ ಪ್ರಭಾವ ಬೀರಿರುವುದು ಮಾತ್ರವಲ್ಲದೆ ಇಂತಹ ಪದಗಳು ಸಂಸ್ಕೃತಿಯ ಬದಲಾವಣೆಯ ಲಕ್ಷಣಗಳಾದರೂ ಅವುಗಳ ಬಳಕೆಗೆ ಭಾಷಾ ಬೆಳವಣಿಗೆಯ ದೃಷ್ಟಿಯುಳ್ಳ ಸ್ವಭಾಷಿಕ ವಿರೋಧ ಪ್ರತಿಭಟನೆಯೂ ಇದೆ. ಆದರೂ ಕೊರಚರ ಭಾಷೆ, ಕನ್ನಡ, ತೆಲುಗು, ತಮಿಳು ಇತ್ಯಾದಿ ಭಾಷೆಗಳು ಈ ಆಧುನಿಕ ಕಾಲದಲ್ಲಿ ಇಂಗ್ಲಿಷಿನಿಂದ ಸ್ವೀಕರಿಸಿರುವ ಪದಗಳನ್ನು ನೋಡಿದರೆ ಇಂಗ್ಲಿಷ ಆಧುನಿಕ ಸಂಸ್ಕೃತಿಯಲ್ಲಿ ಹೆಚ್ಚಾಗಿ ಪರಿಣಮಿಸಿದರೂ ಆಶ್ಚರ್ಯ ಪಡಬೇಕಿಲ್ಲ. ಈವೊಂದು ಸ್ವೀಕರಣ ಪ್ರಕ್ರಿಯೆಯು ಪ್ರತಿಷ್ಟೆ ಮತ್ತು ಅವಶ್ಯಕತೆಯು ಇದಕ್ಕೆ ಮುಖ್ಯವಾದಂತಹ ಕಾರಣಗಳಾಗಿವೆ. ಉಚ್ಚಾರಣೆ ಮತ್ತು ಬಳಕೆ ಈ ಎರಡು ಸನ್ನಿವೇಶಗಳಲ್ಲಿಯೂ ಇಂಗ್ಲಿಷಿನ ಬಂಧುಸೂಚಕಗಳ ಪ್ರಭಾವವು ಆಗಿರುವುದನ್ನು ತಿಳಿಯಬಹುದಾಗಿದೆ.

೫.೪.೨. ಸಂಬೋಧನಾ ರೂಪಗಳು

ಭಾಷೆಯಲ್ಲಿನ ಸಂಬೋಧನಾ ಮಾದರಿಗಳು ಸಾಮಾಜಿಕ ರಚನೆಯ ವಿನ್ಯಾಸವನ್ನು ಆಧರಿಸಿರುತ್ತದೆ. ಸಾಮಾಜಿಕವಾಗಿ ಸ್ಥಿರವಾದ ಲಿಂಗ, ಜಾತಿಯಂತಹ ಅಂಶಗಳಲ್ಲಿ ಮತ್ತು ಚಲನೆಯುಳ್ಳ ಸಾಮಾಜಿಕ ಅಂಶಗಳಾದ ವಯಸ್ಸು, ಆರ್ಥಿಕತೆ, ಸಾಮಾಜಿಕ ಸ್ಥಾನಮಾನಗಳಲ್ಲಿ ಇದು ಭಿನ್ನವಾಗಿ ಕಾಣಿಸಿಕೊಳ್ಳುತ್ತದೆ. ಕನ್ನಡದ ಜಾತಿ ಶ್ರೇಣೀಕರಣದಲ್ಲಿ ಸಾಮಾನ್ಯವಾಗಿ ಕಾಣುವ ಕೆಳವರ್ಗ ಮತ್ತು ಮೇಲ್ವರ್ಗದ ನಡುವೆ ಗೌರವಸೂಚಕ ಬಹುವಚನ ಪ್ರತ್ಯಯವನ್ನು ಮತ್ತು ಸ್ವಾಮಿ, ಬುದ್ಧಿ, ಧಣಿ ಎಂಬ ಸಂಬೋಧನಾ ರೂಪಗಳನ್ನು ಬಳಸಿದರೆ ಅದೇ ಮೇಲ್ವರ್ಗದವರು ಕೆಳವರ್ಗದವರನ್ನು ಸಂಬೋಧಿಸುವುದಕ್ಕೆ ಹೆಸರನ್ನು ಅಥವಾ ಅಡ್ಡ ಹೆಸರನ್ನೋ ಬಳಸುತ್ತಾರೆ. ಪ್ರದೇಶ, ವರ್ಗ, ಜಾತಿ, ಲಿಂಗ, ವಯಸ್ಸನ್ನಾಧರಿಸಿ ಸಂಬೋಧನೆಗಳ ಬಳಕೆಯಲ್ಲಿ ಭಿನ್ನತೆ ಕಂಡುಬರುತ್ತದೆ. ಈ ಹಿನ್ನೆಲೆಯಾಗಿ ಭಾಷಾ ಸಮುದಾಯದಲ್ಲಿ ಭಾಷಿಕರ ಜೀವನ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳುವಲ್ಲಿ ಈ ಸಂಬೋಧನಾ ರೂಪಗಳು ಮಹತ್ವದ ಪಾತ್ರ ವಹಿಸುತ್ತವೆ.

ಭಾಷಾ ಬಳಕೆಯ ವಲಯದಲ್ಲಿ ಸ್ತ್ರೀ–ಪುರುಷರ ನಡುವೆ ಕೆಲವು ನಿರ್ಬಂಧ ನಿಯಮಗಳನ್ನು ಕೆಲವು ಭಾಷಿಕ ಸಮಾಜ ನಿರ್ವಹಿಸುತ್ತದೆ. ಶಿಷ್ಟ ಸಾಮಾಜಿಕ ವರ್ಗಗಳಲ್ಲಿ ಸ್ತ್ರೀಯರು ಗಂಡನ ಹೆಸರನ್ನು ಸಂಬೋಧಿಸುವ ಆಗಿಲ್ಲ. ಗಂಡನು ಹೆಂಡತಿಯನ್ನು ಬಹುವಚನದಿಂದ ಬಳಸುವುದು ಕಂಡುಬರುವುದಿಲ್ಲ. ಆದರೆ ಬುಡಕಟ್ಟು ಸಮುದಾಯಗಳಲ್ಲಿ ಪರಸ್ಪರ ಏಕವಚನದಲ್ಲಿ ಸಂಬೋಧಿಸುವುದನ್ನು ಕಾಣಬಹುದು. ಕೊರಚರಲ್ಲಿ ಗಂಡ ಹೆಂಡತಿಯರು ಪರಸ್ಪರ ಸಂಬೋಧಿಸುವಾಗ ಏ, ಎಂದ, ಇದ, ಓಯ್, ಮೊಣಸನೆ, ಮೊಣಸಿ ಈ ರೀತಿಯ ಸಂಬೋಧನಾ ರೂಪಗಳು ಬಳಕೆಯಾಗುತ್ತವೆ. ಈ ಹಿನ್ನೆಲೆಯಲ್ಲಿ ಕೊರಚರ ಭಾಷಿಕ ಸಮುದಾಯದಲ್ಲಿ ಬಳಕೆಯಾಗುವ ಸಂಬೋಧನಾ ರೂಪಗಳು ವಿಶಿಷ್ಟತೆಯಿಂದ ಕೂಡಿದೆ.

ಒಬ್ಬ ವ್ಯಕ್ತಿ ಮತ್ತೊಬ್ಬ ವ್ಯಕ್ತಿಯನ್ನು ಕೂಗುವ, ಕರೆಯುವ ಹಾಗೂ ಆತನನ್ನು ಉದ್ದೇಶಿಸಿ ಮಾತನಾಡುವಾಗ ಬಳಸುವಂತಹ ಭಾಷಿಕ ರೂಪಗಳು ಸಂಬೋಧನಾ ರೂಪಗಳಾಗಿವೆ. ಯಾರು ಯಾರನ್ನು ಕುರಿತು ಸಂಬೋಧನೆ ಮಾಡುತ್ತಾರೆ? ಸಂಬೋಧನಾ ರೂಪಗಳು ಯಾವ ಭಾಷೆಯಲ್ಲಿ ಯಾವ ರೀತಿ ಬಳಕೆಯಾಗುತ್ತವೆ? ಎಂಬುದು ಬಹಳ ಮುಖ್ಯವಾದ ಸಂಗತಿಯಾಗಿದೆ. ಒಬ್ಬ ವ್ಯಕ್ತಿ ಮತ್ತೊಬ್ಬ ವ್ಯಕ್ತಿಯನ್ನು ಕುರಿತು ಸಂಬೋಧನೆ ಮಾಡುವಾಗ ಯಾವ ಭಾಷಿಕ ರೂಪ ಅಲ್ಲಿ ಬಳಕೆಯಾಗುತ್ತದೆ ಎಂಬುದನ್ನು ಗಮನಿಸಬೇಕಾಗುತ್ತದೆ. ಹಾಗೂ ಹಿರಿಯರು ಕಿರಿಯರ ಜೊತೆ ಮಾತನಾಡುವಾಗ, ಕಿರಿಯರು ಹಿರಿಯರ ಜೊತೆ ಮಾತನಾಡುವಾಗ ಬಳಸುವಂತಹ ಸಂಬೋಧನಾ ರೂಪಗಳು ಯಾವ ಬಗೆಯದು ಎಂಬುದು ಅಧ್ಯಯನದ ದೃಷ್ಟಿಯಿಂದ ಪ್ರಮುಖವಾದದ್ದು. ಕೊರಚರು ಕೌಟುಂಬಿಕವಲಯದಲ್ಲಿ ಬಳಸುವ ಸಂಬೋಧನಾ ರೂಪಗಳನ್ನು ಏಕವಚನದಿಂದಲೇ ಬಳಸುತ್ತಿದ್ದು, ಬಹುವಚನದಿಂದ ಬಳಸುವುದು ತುಂಬಾ ವಿರಳವಾಗಿರುವುದು ದತ್ತ ಮಾಹಿತಿಯಿಂದ ತಿಳಿದುಬರುತ್ತದೆ.

೧. ಹಿರಿಯರು-ಕಿರಿಯರಿಗೆ ಬಳಸುವ ಸಂಬೋಧನಾ ರೂಪಗಳು

ಸಾಮಾನ್ಯವಾಗಿ ಎಲ್ಲಾ ಸಮುದಾಯಗಳಲ್ಲಿ ಹಿರಿಯರು ಕಿರಿಯರನ್ನು ಸಂಬೋಧಿಸುವಾಗ ಬಂಧುವಾಚಕಗಳನ್ನು ಬಳಸದೆ, ಹೆಸರಿನಿಂದ ಇಲ್ಲವೇ ಸಂಬೋಧನಾರೂಪಗಳಿಂದ ಸಂಬೋಧಿಸುವುದು ಬಳಕೆಯಲ್ಲಿದೆ. ಹಾಗೆಯೇ ಒಂದು ಅಲೆಮಾರಿ ಬುಡಕಟ್ಟು ಸಮುದಾಯದ ಕೊರಚರಲ್ಲಿ ಬಳಕೆಯಾಗುವ ಸಂಬೋಧನಾರೂಪಗಳನ್ನು ಕನ್ನಡ ಭಾಷೆಯೊಂದಿಗೆ ಸಮೀಕರಿಸಿಕೊಂಡು ಈ ಕೆಳಗಿನಂತೆ ಚರ್ಚಿಸಲಾಗಿದೆ.

ಕನ್ನಡ	**ಕೊರಚರ ಭಾಷೆ**
ಏನಲೇ	ಎಂದಳಾ
ಬಾರಯ್ಯ	ವಾವೂ/ವಾಳ
ಏನು	ಎಂದ
ಬಾರಲೇ	ವಾಳೇ/ಬಾಳೇ
ಹೋಗಲೇ	ಪೋಳೇ/ಲೇ
ಏನೇ	ಎಂದಾ
ನಡೆಯಿರಿ/ರೀ	ನಡಂಗೋ/ನಡಂಗ
ಬಾರೋ	ವಾಳಾ/ಬಾಳಾ

ಹೋಗೋಣ ಬಾ	ಹೊಂಬಾ
ನೋಡಲೇ	ಪಾರಳೇ/ಲೇ
ಬಾರೇ	ವಾಯೇ/ಬಾಯೇ
ಏನಾ	ಎಂದಾ
ಹೋಗೇ	ಪೋಯೇ
ಅವ್ನು	ಅದು
ಅವ್ನ	ಅದ
ಇವಳೇ	ಇದ
ಇವನೇ	ಇದ

ಮೇಲಿನ ಪಟ್ಟಿಯಲ್ಲಿನ ಭಾಷಿಕಾಂಶಗಳನ್ನು ಗಮನಿಸಿದಾಗ ಕೊರಚರ ಸಂಬೋಧನೆಗಳಲ್ಲಿ ತಮಿಳಿನ ರೂಪಗಳು ಹೆಚ್ಚಾಗಿ ಕಂಡುಬರುತ್ತವೆ. ಮತ್ತು ಪೋಯೇ ಎಂಬುದೊಂದು ತೆಲುಗಿನ ರೂಪವಾಗಿ ಕಂಡುಬರುತ್ತದೆ. ಇಲ್ಲಿ ಹೋಗೋಣಬಾ, ಹೋಗಲೇ ಎಂಬಲ್ಲಿ ತಮಿಳಿನ ಪಾಕರಿಯ, ಪೋಡ ರೂಪಗಳಲ್ಲಿ ಪಾದಾದಿಯ 'ಪ'ಕಾರದ ಬದಲಿಗೆ 'ಹ'ಕಾರ ಮತ್ತು ಪದಾಂತ್ಯದ 'ಡ'ಕಾರದ ಬದಲಿಗೆ 'ಳ'ಕಾರವು ಬಂದಿರುವುದು ವಿಶೇಷವಾಗಿ ಗಮನಿಸಬೇಕಾಗುತ್ತದೆ. ಮತ್ತು ಕೆಲವು ಕಡೆ ಕೊರಚರು 'ಡ'ಕಾರದ ಭಾಷೆಯನ್ನು ಉಳಿಸಿಕೊಂಡಿರುವುದು ನೋಡಬಹುದು. 'ನಡಂಗ' ಎಂಬಲ್ಲಿ ಪದ ಮಧ್ಯದಲ್ಲಿ 'ಡ'ಕಾರದ ತಮಿಳಿನ ಬಳಕೆಯಂತೆ ಉಳಿಸಿಕೊಂಡಿರುವುದು ನೋಡಬಹುದು. ಹಾಗೆಯೇ ಮೇಲಿನ ಪಟ್ಟಿಯನ್ನು ಗಮನಿಸಿದಾಗ ಕೊರಚರಲ್ಲಿ ಲೇ, ಳೇ ಯೇ ಎಂಬಂತಹ ಏಕವಚನದಲ್ಲಿ ಹಿರಿಯರು ಕಿರಿಯರಿಗೆ ಬಳಸುವುದನ್ನು ನೋಡಬಹುದು. ಉದಾ.

ಕೊರಚರ ಭಾಷೆ – ಇದ ನೀನು ಆನ ಹೋಗಬೇಕು/ಪೋಗಬೇಕು

ಕನ್ನಡ – ಇವಳೇ ನೀನು ಆ ಕಡೆ ಹೋಗಬೇಕು

ಕೊರಚರ ಭಾಷೆ – ಜಾತಗ ಅದು ಎಂದಾದು ಪಾರಲಾ

ಕನ್ನಡ – ಜಾತಗ ಅದು ಏನೆಂದು ನೋಡು

ಕೊರಚರ ಭಾಷೆ – ತಿಮ್ಮ ನೆಸು ಏಟುಗೊಯಿಂದ

ಕನ್ನಡ – ತಿಮ್ಮ ನೆನ್ನೆ ಎಲ್ಲಿಗೋಗಿದ್ದಿ

ಕೊರಚರ ಭಾಷೆ – ಇದ ಇನ ಇಕ್ಕಡಿಗೆ ಬಾ /ವಾ

ಕನ್ನಡ – ಇಗ ಈ ಕಡೆ ಬಾ

ಕಿರಿಯರು–ಹಿರಿಯರಿಗೆ ಬಳಸುವ ಸಂಬೋಧನಾ ರೂಪಗಳು

ಕೊರಚರ ಭಾಷಿಕ ಪರಿಸರದಲ್ಲಿ ಸಂಬಂಧವಾಚಕಗಳನ್ನು ಹೆಚ್ಚಾಗಿ ಕಿರಿಯರು ಹಿರಿಯರನ್ನು ಸಂಬೋಧಿಸುವ ಸಂದರ್ಭದಲ್ಲಿ ಗೌರವಸೂಚಕ ಬಹುವಚನ ಪ್ರತ್ಯಯವನ್ನು ಅವಶ್ಯಕವಾಗಿ ಬಳಸಲಾಗುತ್ತದೆ. ಹಾಗೂ ಬಹುವಚನ ಪ್ರತ್ಯಯಗಳನ್ನು ಗೌರವಸೂಚಕ ಪದಗಳೊಂದಿಗೆ ಬಳಸುತ್ತಾರೆ. ಇವರಲ್ಲಿ ಬಳಕೆಯಾಗುವ ಸಂಬೋಧನಾ ರೂಪಗಳು ಸಂಬಂಧಗಳ ಆಧಾರದ ಮೇಲೆ ಬಳಕೆಯಾಗುವುದನ್ನು ಈ ಕೆಳಗಿನಂತೆ ನೋಡಬಹುದು.

ಕನ್ನಡ	**ಕೊರಚರ ಭಾಷೆ**
ಅಪ್ಪ	ಅಬ್ಬ/ಅಯ್ಯ/ಆವ
ಅಮ್ಮ	ಅಮ್ಮ
ಅಣ್ಣ	ಅಣ್ಣ
ಅಜ್ಜ	ಜೇಜಿ/ತಾತಾ
ಅಜ್ಜಿ	ಜೇಮ
ಅಕ್ಕ	ಅಕ್ಕ
ಮಾಮ	ಮಾಮ
ಚಿಕ್ಕಪ್ಪ	ನಾಯನ್ನು/ಸಿನ್ನಾವ
ಚಿಕ್ಕಮ್ಮ	ಸೋಡಮ/ಸಿನ್ನಮ್ಮ
ದೊಡ್ಡಪ್ಪ	ಬೇರಾವ/ಬೇರಬ್ಬ/ಬೆದ್ದೆ
ದೊಡ್ಡಮ್ಮ	ಬೇರಮ್ಮ/ಬೆದ್ದಮ್ಮ
ಅತ್ತಿಗೆ	ನಂಗ
ಅವರು	ಅಯ್ಯ
ಇವರು	ಇಯ್ಯ
ಅತ್ತೆ	ಅತ್ತ
ಮೈದುನ	ಅಬ್ಬ
ನಾದಿನಿ	ತಸ್ಸಿ/ಅಯ್ಯ

ಈ ರೀತಿಯಾಗಿ ಕೊರಚರ ಭಾಷೆಯಲ್ಲಿ ಸಂಬೋಧನೆಗಳು ಕಿರಿಯರಲ್ಲಿ ಹಿರಿಯರನ್ನು

ಸಂಬೋಧಿಸುವಾಗ ಗೌರವಸೂಚಕವಾಗಿ ಬಳಸುವುದನ್ನು ಕಾಣಬಹುದು. ಮತ್ತು ಕೆಲವು ಕನ್ನಡ ಮತ್ತು ಕೊರಚರಲ್ಲಿ ಸಮಾನವಾಗಿ ಬಳಕೆಯಾಗುವುದನ್ನು ನೋಡಬಹುದು. ಉದಾ. ಅಣ್ಣ, ಅಮ್ಮ, ಅಕ್ಕ, ಅತ್ತೆ, ಮಾಮ ಮುಂತಾದ ಪದಗಳು ಎರಡು ಭಾಷೆಯಲ್ಲಿರುವುದನ್ನು ನೋಡಬಹುದು. ಇದಕ್ಕೆ ಕಾರಣ ಇವೆರಡು ಭಾಷೆಗಳು ದ್ರಾವಿಡ ಭಾಷಾ ವರ್ಗಕ್ಕೆ ಸೇರಿದರಿಂದಾಗಿ ಮತ್ತು ಕೆಲವು ಸಂದರ್ಭಗಳಲ್ಲಿ ಈ ಬಗೆಯ ಸಾಮ್ಯಗಳು ಇತರೆ ದ್ರಾವಿಡ ಭಾಷೆಗಳೊಂದಿಗೆ ಸಹಜವಾಗಿಯೇ ಕಾಣುತ್ತವೆ. ಮತ್ತು ಈ ಶಿಕ್ಷಣದ ಪ್ರಭಾವದಿಂದಾಗಿ ಆಂಟಿ, ಅಂಕಲ್, ಮಮ್ಮಿ, ಡ್ಯಾಡಿ ಇಂತಹ ಇಂಗ್ಲೀಷ್ ಪದಗಳೂ ಕೂಡ ಇತ್ತೀಚಿಗೆ ಬಳಕೆಯಾಗುತ್ತಿವೆ.

೫.೫. ವ್ಯಕ್ತಿನಾಮಗಳು

ಹೆಸರುಗಳು ಒಂದು ಜನಾಂಗ ಮತ್ತು ಸಂಸ್ಕೃತಿಯ ಬೇರುಗಳು. ಅವುಗಳ ಕ್ರಮಬದ್ಧವಾದ ಅಧ್ಯಯನವನ್ನು ನಾಮವಿಜ್ಞಾನ ಎಂದು ಕರೆಯುತ್ತಾರೆ. ನಾಮವಿಜ್ಞಾನ ಎಂಬುದನ್ನು ಒಂದೇ ವಾಕ್ಯದಲ್ಲಿ ವ್ಯಾಖ್ಯಾನಿಸುವುದು ಕಷ್ಟ. ಸರಳವಾಗಿ ಹೇಳುವುದಾದರೆ ವ್ಯಕ್ತಿನಾಮಗಳ ವೈಜ್ಞಾನಿಕ ಅಧ್ಯಯನವೇ ವ್ಯಕ್ತಿನಾಮ ವಿಜ್ಞಾನ ಎಂದು ಹೇಳಬಹುದು. ದಿ ನ್ಯೂ ಎನ್‌ಸೈಕ್ಲೊಪಿಡಿಯಾ ಬ್ರಿಟಾನಿಕಾ ಗ್ರಂಥದಲ್ಲಿ ವ್ಯಕ್ತಿನಾಮ ಎಂದರೆ ''A name is a word or group of words used to refer to an individual entity (real or imaginary); the name singles out this entity directly pointing to it not by specefying it as member of a class (The new encyclopaedia, 1992, 24-33) ಎಂದಿರುವುದು ವ್ಯಕ್ತಿನಾಮದ ಸ್ವರೂಪವನ್ನು ಸ್ಪಷ್ಟಪಡಿಸುತ್ತದೆ.

ಹೆಸರುಗಳು ಮಾನವನ ಪ್ರತಿನಿತ್ಯದ ವ್ಯವಹಾರಗಳಲ್ಲಿ ಮನೆಯೊಳಗೆ, ಮನೆ ಹೊರಗೆ ಎಲ್ಲ ಕಡೆಗಳಲ್ಲಿಯೂ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ನಮ್ಮ ಜನರ ನಾಮಗಳು ಅವರು ವಾಸಿಸುವ ಭೌಗೋಳಿಕ ಪರಿಸ್ಥಿತಿ ಮತ್ತು ಆಯಾ ಭಾಷಿಕ ಸಮುದಾಯಗಳ ನಂಬಿಕೆ, ಆಚರಣೆ ಮತ್ತು ಸಂಪ್ರದಾಯ ಮುಂತಾದ ಅಂಶಗಳಿಂದ ನಿರ್ಧರಿತವಾಗಿರುತ್ತದೆ. ಹಾಗೆಯೇ ವ್ಯಕ್ತಿಯು ನಿರ್ವಹಿಸುವ ವೃತ್ತಿ, ಆಯಾ ಸಮುದಾಯದ ಗ್ರಾಮದ ಚಾರಿತ್ರಿಕತೆ, ದೇವರು, ನದಿ, ಬೆಟ್ಟ, ಅರಣ್ಯ, ಪ್ರಾಣಿ, ಪಕ್ಷಿ, ಪುರಾಣ ಇತ್ಯಾದಿ ಅಂಶಗಳ ಪ್ರಭಾವದಿಂದ ಹುಟ್ಟಿಕೊಂಡಿರುತ್ತದೆ. ಮನುಷ್ಯ ಸಮಾಜಜೀವಿ. ಆತನಿಗೆ ವ್ಯಕ್ತಿ, ವಸ್ತುಗಳ ಸಂಪರ್ಕ ಅನಿವಾರ್ಯ. ಅವುಗಳಲ್ಲಿ ಕೆಲವನ್ನಾದರೂ ಅವನು ಗುರುತಿಸಿಕೊಳ್ಳಲೇಬೇಕು. ಹೀಗೆ ಗುರುತಿಸಿಕೊಳ್ಳಲು ಮುಖ್ಯ ಸಾಧನವಾದುದು ಹೆಸರು. ಹೀಗಾಗಿ ಹೆಸರಿನ ಮುಖ್ಯ ಉದ್ದೇಶ ಸಮೂಹದಿಂದ ವ್ಯಕ್ತಿಯನ್ನು ವಸ್ತುವನ್ನು ಗುರುತಿಸಿಕೊಳ್ಳುವುದಾಗಿದೆ. ಜಗತ್ತಿನ ಎಲ್ಲ ಭಾಷೆಗಳಲ್ಲಿ ವ್ಯಕ್ತಿಯನ್ನು ಗುರುತಿಸಲು ವ್ಯಕ್ತಿನಾಮಗಳಿವೆ. ವ್ಯಕ್ತಿನಾಮಗಳಿಲ್ಲದ ಸಮುದಾಯವನ್ನು ಊಹಿಸಿಕೊಳ್ಳುವುದಕ್ಕೂ ಸಾಧ್ಯವಿಲ್ಲ. ಇಲ್ಲಿ ವ್ಯಕ್ತಿಗೆ ಇಡುವ ಹೆಸರುಗಳು ಕೇವಲ ಭಾಷಿಕ ರಚನೆಗಳಾಗಿರುವುದಿಲ್ಲ. ಹೆಸರಿನಲ್ಲಿ ಸಾಂಸ್ಕೃತಿಕ ಅಂಶವು ಮಿಳಿತವಾಗಿರುತ್ತದೆ. ನಾಮಕರಣಗೊಂಡ ವ್ಯಕ್ತಿ ಸ್ಥಳ ಅಥವಾ ವಸ್ತುವಿನ ವೈಶಿಷ್ಟ್ಯತೆ ಮೊದಲಾದ ಅಂಶಗಳನ್ನು ಹೆಸರು ತನ್ನೊಳಗೆ ಗರ್ಭೀಕರಿಸಿಕೊಂಡಿರುತ್ತದೆ ಎಂಬುದು ಗಮನಾರ್ಹ ಸಂಗತಿಯಾಗಿದೆ.

ಮಾನವನು ಭೂಮಿಯ ಮೇಲೆ ತನ್ನ ಅಸ್ತಿತ್ವವನ್ನು ಹೊಂದಿದಾಗ ವ್ಯಕ್ತಿಗಳನ್ನು ಹೆಸರಿನಿಂದ ಕರೆಯುವ ಪದ್ಧತಿ ಇದ್ದಿಲ್ಲ. ಆಹಾರ, ನಿದ್ರೆ, ಮೈಥುನಗಳಲ್ಲಿ ಮಗ್ನನಾದ ವ್ಯಕ್ತಿಯು ಚಿಕ್ಕ ಗಾತ್ರದ ಕುಟುಂಬದೊಂದಿಗೆ ಸಂಚರಿಸುತ್ತಿದ್ದ ಕಾಲದಲ್ಲಿ ಕುಟುಂಬದ ವ್ಯಕ್ತಿಗಳನ್ನು ಗುರುತಿಸುವುದು ಅವರಿಗೆ ತೊಂದರೆಯೆನಿಸಿರಲಿಕ್ಕಿಲ್ಲ. ನಂತರದಲ್ಲಿ ಆಹಾರ ಉತ್ಪಾದನೆಗಾಗಿ ಕೃಷಿಯನ್ನು ನಡೆಸಬೇಕಾದಾಗ ಕುಟುಂಬ ಒಂದೆಡೆ ನೆಲೆಯೂರುವುದು ಅನಿವಾರ್ಯವಾದಾಗ ಆ ನೆಲೆಗೆ ಬೇರೆ ಕುಟುಂಬಗಳೂ ಸೇರಿ ಗ್ರಾಮವಾದ ಸಂದರ್ಭದಲ್ಲಿ ವ್ಯಕ್ತಿಗಳನ್ನು ಗುರುತಿಸುವುದು ಕಷ್ಟವಾಗಿ ಆ ಕಷ್ಟದ ಪರಿಹಾರಕ್ಕಾಗಿ ವ್ಯಕ್ತಿಗೆ ಹೆಸರಿಟ್ಟು ಕರೆಯುವುದು ಪ್ರಾರಂಭವಾಗಿರಬೇಕು. ಸಮಾಜದಲ್ಲಿ ಪ್ರತಿಯೊಂದು ಸಮುದಾಯವು ತನ್ನದೇ ಆದ ವ್ಯಕ್ತಿನಾಮಗಳನ್ನು ಹೊಂದಿರುತ್ತದೆ. ಯಾವ ಯಾವ ವರ್ಗಗಳು ಯಾವ ಯಾವ ಬಗೆಯ ಹೆಸರುಗಳನ್ನು ಹೊಂದಿರುತ್ತವೆಂಬುದುನ್ನು ಗಮನಿಸಿದಾಗ ಬ್ರಾಹ್ಮಣರ ಹೆಸರುಗಳು ಮಂಗಳಕರವಾಗಿರಬೇಕೆಂದು, ವೈಶ್ಯರ ಹೆಸರುಗಳು ಐಶ್ವರ್ಯಸೂಚಕವಾಗಿರಬೇಕೆಂದೂ, ಕ್ಷತ್ರಿಯರ ಹೆಸರುಗಳು ಶಕ್ತಿಸೂಚಕವಾಗಿಯೂ, ಶೂದ್ರರ ಹೆಸರುಗಳು ಸೇವಾ ವೃತ್ತಿ ಸೂಚಕವಾಗಿರಬೇಕೆಂದು ಮನುಸ್ಮೃತಿಯಲ್ಲಿ ಹೇಳಲಾಗಿದೆ. (ನಾರಾಯಣ ಕೆ.ವಿ., ೨೦೦೦, ಪುಟ–೪೧) ಇನ್ನೂ ಜಾತಿ, ದೈವ, ಸಂಪ್ರದಾಯ, ಆಚರಣೆ ಮುಂತಾದ ನಂಬಿಕೆಗಳ ಹಿನ್ನೆಲೆಯಲ್ಲಿಯೂ ಕೆಲವು ಸಮುದಾಯಗಳು ಈಗಲೂ ಹೆಸರಿಡುವಿಕೆಯ ಪದ್ಧತಿಯನ್ನು ಉಳಿಸಿಕೊಂಡಿವೆ. ಹಾಗೆಯೇ ಭಿನ್ನ ಸಮುದಾಯಗಳು ನಿರ್ದೇಶನ ಮಾಡುವ ಹೆಸರುಗಳಿಂದ ಆ ಹೆಸರಿಗೆ ಕಾರಣ ಆ ಹೆಸರಿನ ಮೂಲ ಪರಂಪರೆ ಆಚರಣಾ ವಿಧಿಗಳು ತಿಳಿದುಬರುತ್ತವೆ. ಆ ಹೆಸರಿನೊಂದಿಗೆ ಬರುವ ವಾರ್ಗಿಕಗಳು, ಅವುಗಳ ರಚನೆ, ಅವುಗಳ ಸೀಮಿತ ವ್ಯಾಪ್ತಿ, ಬಳಕೆಯ ವ್ಯಾಪಕತೆ, ಕಾಲಾಂತರದ ಬದಲಾವಣೆಯ ಮಜಲುಗಳು, ಪಡೆದುಕೊಂಡ ಅರ್ಥಾಂತರಗಳು ಅಂದರೆ ಸಮುದಾಯಗಳು ನಿರ್ವಹಿಸಿದ ವೃತ್ತಿ ಅವು ಮುಂದೆ ಜಾತಿಗಳಾಗಿ ಮಾರ್ಪಟ್ಟಿದ್ದು ಹೀಗೆ ಹೆಕ್ಕಿ ತೆಗೆದಂತೆ ಹಲವಾರು ವೈಶಿಷ್ಟ್ಯಗಳು ನಮ್ಮ ಮುಂದೆ ನಿಲ್ಲುತ್ತವೆ. ಈ ಎಲ್ಲ ಸಂಗತಿಗಳು ಪ್ರಾಚೀನ ಸಂಸ್ಕೃತಿಯೊಂದರ ಚಿತ್ರಣವನ್ನು ನೀಡುತ್ತವೆ. (ಸಣ್ಣ ಪಾಪಯ್ಯ, ೨೦೦೯, ಪುಟ–೪೬) ಈ ಹಿನ್ನೆಲೆಯಲ್ಲಿ ಕೊರಚರಲ್ಲಿ ಬಳಕೆಯಾಗುವ ವ್ಯಕ್ತಿನಾಮಗಳನ್ನು ಕುರಿತು ಚರ್ಚಿಸಲಾಗುವುದು.

ವ್ಯಕ್ತಿಗೆ ಹೆಸರು ಇಲ್ಲವಾದರೆ ಆತನು ತಾನಿರುವ ಸಮಾಜದಲ್ಲೇ ಅಜ್ಞಾತವಾಗಿ ನಿಲ್ಲುತ್ತಾನೆ. ಹೀಗೆ ವ್ಯಕ್ತಿಗಳ ಪ್ರತ್ಯೇಕತೆಗೂ ಹಾಗೂ ಪರಸ್ಪರ ವ್ಯಕ್ತಿಗಳ ಪರಿಚಯಕ್ಕೂ ವ್ಯಕ್ತಿನಾಮವೇ ಆದಿ ಆಧಾರವಾಗುತ್ತದೆ. ಒಂದೇ ಹೆಸರು ಅನೇಕ ವ್ಯಕ್ತಿಗಳಿಗೆ ಕೆಲವು ಸಲ ಪುನರಾವರ್ತನೆಗೊಳ್ಳುತ್ತವೆ. ಆದ್ದರಿಂದ ಹೆಸರುಗಳ ಮುಂದೆ ಹಿಂದೆ ಅವರ ಮನೆತನದ, ಊರು, ವೃತ್ತಿ ಕುಟುಂಬದ ಹೆಸರುಗಳು ಜೋಡಿಸಲಾಗುತ್ತದೆ. ಒಂದೊಂದು ವ್ಯಕ್ತಿನಾಮಕ್ಕೂ ತನ್ನದೇ ಆದ ಸಾಂಸ್ಕೃತಿಕ ಪರಿಸರವಿರುತ್ತದೆ. ಸಂಸ್ಕೃತಿಯಲ್ಲಿ ಬಳಕೆಯಾಗುವ ಭಿನ್ನ ಭಿನ್ನ ಸಂಗತಿಗಳೆಲ್ಲವನ್ನು ನಾವು ಸಾಂಸ್ಕೃತಿಕ ಆಕರವೆಂದು, ಆ ಆಕರಗಳಿಂದ ನಿಷ್ಪನ್ನಗೊಳಿಸಲಾದ ಮತ್ತು ಸಂಬೋಧಿಸಲಾಗುವ ಹೆಸರನ್ನು ವ್ಯಕ್ತಿನಾಮಗಳೆಂದು ಕರೆಯಲಾಗಿದೆ. "ವ್ಯಕ್ತಿಗೆ ತಕ್ಕಂತೆ ಹೆಸರು ಇಡಬೇಕು ಇಲ್ಲವೆ ಹೆಸರಿಗೆ ತಕ್ಕಂತೆ

ವ್ಯಕ್ತಿ ಇರಬೇಕು ಎಂಬ ನಿಯಮಗಳೇನಿಲ್ಲ. ಆದರೂ ಇವೆರಡರ ನಡುವಿನ ಸಂಬಂಧ ಕೇವಲ ಸಂಬೋಧನೆಗಾಗಿ ಇದೆಯೇ ಹೊರತು ಅದರಿಂದಾಚೆಗೆ ಏನು ಇರುವುದಿಲ್ಲ. ವ್ಯಕ್ತಿನಾಮಗಳು ಯಾವಾಗಲೂ ಭಾಷೆಯೊಂದರಲ್ಲಿ ಬೆಳವಣಿಗೆಯ ಹಾದಿಯಲ್ಲಿರುತ್ತವೆ. ಹಾಗಾಗಿ ವ್ಯಕ್ತಿನಾಮಗಳು ಹೆಸರಿಸುತ್ತವೋ ಅಥವಾ ವರ್ಣಿಸುತ್ತವೋ ಎಂಬದು ಭಾಷೆಯಲ್ಲಿ ಚರ್ಚೆಯ ವಿಚಾರ ಹೆಚ್ಚಿನ ಪ್ರಮಾಣದಲ್ಲಿ ವ್ಯಕ್ತಿನಾಮಗಳು ಹೆಸರಿಸುತ್ತವೆ. ಕೆಲವು ಸಂದರ್ಭದಲ್ಲಿ ವರ್ಣಿಸುತ್ತವೆ." (ಪಿ. ಮಹಾದೇವಯ್ಯ, ಕನ್ನಡ ಬಳಕೆ ಸಾಮಾಜಿಕ ವಿನ್ಯಾಸ, ಪುಟ-೭೨) ಉದಾಹರಣೆಗೆ ಭೀಮ ಎಂಬ ಹೆಸರಿರುವ ವ್ಯಕ್ತಿ ಭೀಮನ ಹಾಗೆ ಬಲಿಷ್ಟವಾಗಿರಬೇಕು, ಕರ್ಣ ಎಂಬ ವ್ಯಕ್ತಿ ಹಾನಿಯಾಗಿರಬೇಕು ಎಂಬ ಅಭಿಪ್ರಾಯವಿರುವುದಿಲ್ಲ. ಆದರೂ ಸಹ ಇರುವ ಹೆಸರಿನಿಂದ ಅವರ ಜೀವನದುದ್ದಕ್ಕೂ ಅವರ ಸ್ಥಾನಮಾನವನ್ನು ರಕ್ಷಿಸುವಲ್ಲಿ ಕಾರಣಗಳಾಗಿವೆ. ಅಂದರೆ ವ್ಯಕ್ತಿಯನ್ನು ಯಾವ ಮಟ್ಟದಲ್ಲಿದ್ದಾನೆ ಎಂಬುದನ್ನು ಅವರ ಹೆಸರಿನಿಂದಲೇ ಗ್ರಹಿಸಬಹುದು. ಹೀಗೆ ವ್ಯಕ್ತಿಯ ವ್ಯಕ್ತಿತ್ವವನ್ನು ಸೂಚಿಸಲು ನಾಮಪದವು ಸಹಾಯಕವಾದಂತೆ ಒಂದು ನಿರ್ದಿಷ್ಟ ಸಮಾಜದ ರಚನೆ ಅಥವಾ ಸಾಮಾಜಿಕ ವ್ಯವಸ್ಥೆಯನ್ನು ತಿಳಿಯಲು ವ್ಯಕ್ತಿನಾಮಗಳು ಸಹಾಯಕವಾಗುತ್ತವೆ.

ಈ ಹಿನ್ನೆಲೆಯಲ್ಲಿ ವ್ಯಕ್ತಿನಾಮಗಳು ಸಾಮಾಜಿಕ ಅಧ್ಯಯನದ ಮುಖ್ಯ ಆಕರಗಳಲ್ಲಿ ಒಂದು ಎಂದು ಪರಿಗಣಿಸಬಹುದು. ಈ ಆಕರಗಳನ್ನು ಇಟ್ಟುಕೊಂಡು ವಿಶ್ಲೇಷಣೆಗೆ ಒಳಪಡಿಸಿದಲ್ಲಿ ಒಂದು ಸಂಸ್ಕೃತಿಯ ಸೂಕ್ಷ್ಮ ಸಂಗತಿಗಳನ್ನು ಬಿಡಿಬಿಡಿಯಾಗಿ ತಿಳಿಯಲು ಸಾಧ್ಯವಾಗುತ್ತದೆ. ಭಾರತೀಯ ಸಮಾಜ ಜಾತಿ ಪ್ರಧಾನ ವ್ಯವಸ್ಥೆಯಿಂದ ಕೂಡಿದೆ. ಈ ದೃಷ್ಟಿಯಿಂದ ಆಯಾ ಜಾತಿ, ಧರ್ಮ, ಪ್ರದೇಶಗಳಿಗೆ ಸಂಬಂಧಿಸಿ ವ್ಯಕ್ತಿಗೆ ಹೆಸರಿಡುವ ಪ್ರಕ್ರಿಯೆ ನಡೆಯುತ್ತದೆ. ಇಂತಹ ಸಂದರ್ಭದಲ್ಲಿ ಮೇಲ್ವರ್ಗದ ಸಮುದಾಯ ಮತ್ತು ಕೆಳಸಮುದಾಯಗಳ ಹೆಸರಿಡುವ ಪ್ರಕ್ರಿಯೆ ಭಿನ್ನತೆಯಿಂದ ಕೂಡಿರುತ್ತದೆ. ಬಹುತೇಕ ಮೇಲ್ವರ್ಗದ ಸಮುದಾಯಗಳ ಹೆಸರುಗಳನ್ನು ಸ್ವೀಕರಣೆ ಮಾಡುತ್ತಾರೆ. ಇದಕ್ಕೆ ಅವರ ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಮುಂತಾದ ಅಂಶಗಳು ಕಾರಣವಾಗಿರುತ್ತವೆ. ಈ ಅಸಮತೋಲನ ಪ್ರಕ್ರಿಯೆಯಲ್ಲಿಯೇ ಆಯಾ ಜಾತಿಗಳು ತಮ್ಮದೇ ಜಾತಿಯನ್ನು ಪ್ರತಿನಿಧಿಸುವ ಕೆಲವು ಹೆಸರುಗಳನ್ನು ಹೊಂದಿರುತ್ತವೆ. ಬುಡಕಟ್ಟುಗಳಲ್ಲಿ ಈ ಸ್ಥಿರತೆಯನ್ನು ಕಾಣಬಹುದು. ಅವುಗಳನ್ನು ಸಮಾಜದ ಬೇರೊಂದು ವರ್ಗ ಅನುಸರಿಸಲಾರದು. ಆಧುನಿಕ ಸಂದರ್ಭದಲ್ಲಿಯೂ ಈ ಬಗೆಯ ಸಾಂಪ್ರದಾಯಿಕ ಹೆಸರಿಡುವ ಪದ್ಧತಿಯು ಕೆಲವು ಕಡೆ ಉಳಿದಿದ್ದು ಅದು ಪರಂಪರೆಯ ರಕ್ಷಣೆಯೆಂಬಂತೆ ಬರುತ್ತಿರುವುದು ಒಂದರ್ಥದಲ್ಲಿ ಸಂಸ್ಕೃತಿಯ ರಕ್ಷಣೆಯೇ ಆಗಿದೆ.

ಬಳ್ಳಾರಿ ಮತ್ತು ದಾವಣಗೆರೆ ಜಿಲ್ಲೆಯ ಪರಿಸರದಲ್ಲಿ ನೆಲೆಸಿದಂತ ಕೊರಚರ ಸಮುದಾಯವನ್ನು ಅನುಲಕ್ಷಿಸಲಾಗಿದೆ. ಈ ಸಮುದಾಯದವರು ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ಹಿಂದುಳಿದವರಾಗಿದ್ದಾರೆ. ಈಚಲು ಪೊರಕೆ, ಚಾಪೆ, ಕತ್ತಾಳೆ ನಾರಿನ ಹಗ್ಗದ ಜೊತೆ ಪಶುಪಾಲನೆಯಂತಹ ಮೂಲ ವೃತ್ತಿಗಳಿಂದಲೇ ಜೀವನ ಸಾಗಿಸುತ್ತಿದ್ದು ಇವರು ಇತ್ತೀಚಿಗಷ್ಟೇ

ಕೃಷಿ ಮತ್ತಿತರ ವೃತ್ತಿಗಳಿಗೆ ಪಲ್ಲಟವಾಗುತ್ತಿರುವುದು ಕಾಣಬಹುದು. ಬುಡಕಟ್ಟು ಸಂಸ್ಕೃತಿಯ ಜೀವನ ವಿಧಾನ, ಆರಾಧನಾ ಪದ್ಧತಿಗಳನ್ನು ಈಗಲೂ ಉಳಿಸಿಕೊಂಡಿರುವ ಈ ಸಮುದಯ ಸಮಕಾಲೀನ ಸವಾಲುಗಳಿಗೆ ಹೇಗೆ ಪ್ರತಿಕ್ರಿಯಿಸಿದೆ ಎಂಬುದನ್ನು ವ್ಯಕ್ತಿನಾಮಗಳ ನಿರ್ದೇಶನದಲ್ಲಿ ಆಗಿರುವ ಬದಲಾವಣೆ ಮತ್ತು ಅವುಗಳ ಸಾಮಾಜಿಕ ಆಯಾಮಗಳ ಮುಖಾಂತರ ತಿಳಿಯಬಹುದು.

ಕೊರಚರ ಸಮುದಾಯದ ತಲೆಮಾರುಗಳಲ್ಲಿ ಬಳಕೆಯಾಗುವ ಕೆಲವು ವ್ಯಕ್ತಿನಾಮಗಳು ಮಾದರಿಯನ್ನು ಈ ಕೆಳಗಿನಂತೆ ಸೂಚಿಸಬಹುದು.

ಪುರುಷರಲ್ಲಿ

ತಲೆಮಾರು–೧	**ತಲೆಮಾರು–೨**	**ತಲೆಮಾರು–೩**
ತಿರುಪತೆಪ್ಪ	ಅಂಬಣ್ಣ	ಮಂಜುನಾಥ
ಈಶಪ್ಪ	ಜಾತಪ್ಪ	ಸೋಮೇಶ
ಈಶ್ವರಪ್ಪ	ಕುಬೇರ	ನವೀನ
ಬುಡ್ಡಪ್ಪ	ಜಯಪ್ಪ	ಭರತ
ತಿಂದಪ್ಪ	ಮಾರೆಪ್ಪ	ವಿನಯ
ಯಂಕಪ್ಪ	ಮಾರಗದಪ್ಪ	ಮಹಾಂತೇಶ
ಕನ್ನೆಪ್ಪ	ಕುಂಜಪ್ಪ	ಉಮೇಶ
ಗೊಜ್ಜಪ್ಪ	ನಾಗಪ್ಪ	ಪ್ರಕಾಶ
ಮಾಯಪ್ಪ	ಲಕ್ಷ್ಮಪ್ಪ	ದೇವರಾಜ
ದುರುಗಪ್ಪ	ಈಶ್ವರಪ್ಪ	ನಾಗರಾಜ
ಪಾಲಪ್ಪ	ನಾರಾಯಣ	ಶ್ರೀನಿವಾಸ
ಅಣ್ಣಪ್ಪ	ನಾಗೇಂದ್ರ	ಲೋಕೇಶ
ಸತ್ಯಪ್ಪ	ಹಾಲಸ್ವಾಮಿ	ಅರುಣ
ಬಕ್ಕಪ್ಪ	ಹೇಮಣ್ಣ	ಜಯರಾಮ
ಸುಬ್ಬಪ್ಪ	ರೇವಪ್ಪ	ಸಂದೀಪ
ಲಿಂಗಪ್ಪ	ನಿಂಗಪ್ಪ	ಸುದೀಪ
ತಿಮ್ಮಪ್ಪ	ಬಸಪ್ಪ	ದರ್ಶನ

ಪುಟ್ಟಪ್ಪ	ಗಂಗಪ್ಪ	ಪುನಿತ
ರಾಮಪ್ಪ	ತಿರುಮಲೆಪ್ಪ	ಶೇಖರ
ಸುಂಕಪ್ಪ	ಚಂದಪ್ಪ	ಗಿರೀಶ
ಸುಗ್ಲ್ಯಪ್ಪ	ಚಂದ್ರಪ್ಪ	ಅಜಯ
ಕಿಷ್ಟಪ್ಪ	ಚಿನ್ನಪ್ಪ	ಮುನೇಶಿ
ಗುರ್ರಪ್ಪ	ತಿಂದಪ್ಪ	ರಾಮಾಂಜಿ
ತಾಯಪ್ಪ	ಕೃಷ್ಣಪ್ಪ	ಧನಂಜಿ
ಕಪ್ಪತಪ್ಪ	ವೆಂಕಟೇಶ	ಮನೋಹರ
ಗೋಣೆಪ್ಪ	ಕೊಟ್ರಪ್ಪ	ಕಿರಣ
ಈರಪ್ಪ	ಗುರುಪಾದಿ	ಪಂಕಜ
ಟಿಂಗಪ್ಪ	ಸೋಮಪ್ಪ	ರಮೇಶ
ಕರಿಯಪ್ಪ	ಭದ್ರಪ್ಪ	ಬಸವರಾಜ
ಜಂಬಪ್ಪ	ಹನುಮಂತ	ಅನಂತ
ಓಂಕೇಶ	ಜಗನ್ನಾಥ	ಆನಂದ
ಓಬಣ್ಣ	ದೇವೇಂದ್ರ	ಪ್ರಶಾಂತ
ಲಚ್ಚಣ್ಣ	ಕುಮಾರಸ್ವಾಮಿ	ಸುರೇಶ
ದಾಸಪ್ಪ	ಸಂಜೀವ	ಸುಮನ್
ಮುನೆಪ್ಪ	ಅಂಜಿನಪ್ಪ	ಪ್ರವೀಣ
ಸುಬ್ಬಯ್ಯ	ಗುಲ್ಲೆಬ್ಬ	ಗಂಗಾಧರ

ಸ್ತ್ರೀಯರಲ್ಲಿ

ತಲೆಮಾರು–೧	**ತಲೆಮಾರು–೨**	**ತಲೆಮಾರು–೩**
ಬುಡುಮಕ್ಕ	ದುರುಗಮ್ಮ	ಶಾರದ
ಯಮುನಕ್ಕ	ಈರಮ್ಮ	ಸರಸ್ವತಿ
ಭೂಮಕ್ಕ	ಚಂದ್ರಮ್ಮ	ದೀಪ

ಬೂಲಕ್ಕ	ಆದೆಮ್ಮ	ಅನೀತ
ಅಜ್ಜಕ್ಕ	ರಂಗಮ್ಮ	ಸುನೀತ
ಕಡೆಲಕ್ಕ	ಕೊಟ್ರಮ್ಮ	ಪವಿತ್ರ
ಬಾಟಕ್ಕ	ಲಕ್ಷ್ಮಮ್ಮ	ಸುಮತಿ
ಲಾಲಕ್ಕ	ರತ್ನವ್ವ	ಜ್ಯೋತಿ
ಮಾರಕ್ಕ	ತಿಪ್ಪಮ್ಮ	ವನೀತ
ತಾಯಕ್ಕ	ಅಂಬಮ್ಮ	ಸೌಪರ್ಣಿ
ಜಂಬಕ್ಕ	ಸರೋಜಮ್ಮ	ವೈಶಾಲಿ
ಪೆದ್ದಕ್ಕ	ಸಾವಿತ್ರಮ್ಮ	ಶಶಿಕಲ
ತೆಲಕ್ಕ	ಕುಸುಮಕ್ಕ	ಸಂಗೀತ
ದೇವಕ್ಕ	ಜಯಮ್ಮ	ಸವಿತ
ಹನುಮಕ್ಕ	ಧನಲಕ್ಷ್ಮಿ	ಪಲ್ಲವಿ
ಗಂಗಮ್ಮ	ವರಲಕ್ಷ್ಮಿ	ಪೂರ್ಣಿಮ
ಕೊಂಡಮ್ಮ	ಸೋಮಕ್ಕ	ಹಿಂದೂ
ಡಕ್ಕಮ್ಮ	ಶಾರದಮ್ಮ	ಐಶ್ವರ್ಯ
ಯಂಕಮ್ಮ	ದೇವಮ್ಮ	ನಮಿತ
ಅಜ್ಜಮ್ಮ	ಅಂಕವ್ವ	ನಂದಿತ
ನಾಗಮ್ಮ	ಈಶಕ್ಕ	ಗೋತಮಿ
ಸುಂಕಮ್ಮ	ತೋಟಮ್ಮ	ಸಾನಿಕ
ಕಾಳಮ್ಮ	ಶಾಂತಮ್ಮ	ಶ್ವೇತಾ
ಯಲ್ಲಮ್ಮ	ಪಾರುತಮ್ಮ	ತ್ರಿವೇಣಿ
ಚೌಡಮ್ಮ	ನಿಂಗಮ್ಮ	ಲಲಿತ
ಮಂಗಮ್ಮ	ಹುಲಿಗೆಮ್ಮ	ಸುಮ
ಕರೆಮ್ಮ	ತಾಯವ್ವ	ಮಂಜುಳ

ಮರೆಮ್ಮ	ಮಾಯಮ್ಮ	ನಾಗವೇಣಿ
ಅರೆಲಮ್ಮ	ಗೋಣೆಮ್ಮ	ಶೃತಿ
ಕಪ್ಪತವ್ವ	ಮಂಜಮ್ಮ	ಸೃಷ್ಟಿ
ಪುಟ್ಟಮ್ಮ	ಸಾಕಮ್ಮ	ಪದ್ಮ
ನೀಲಮ್ಮ	ರಾಮಲಕ್ಷ್ಮಿ	ಅಂಜಲಿ
ಸೈಲಮ್ಮ	ಮಲ್ಲಮ್ಮ	ತನ್ವಿಕ
ಪುಸ್ಯಮ್ಮ	ಜ್ಯೋತೆಮ್ಮ	ಪೂಜಾ

ಮೇಲಿನ ಪಟ್ಟಿಯಲ್ಲಿನ ಪುರುಷ ಮತ್ತು ಸ್ತ್ರೀಯರ ಹೆಸರುಗಳು ಕೆಲವು ವೈಶಿಷ್ಟ್ಯಗಳಿಂದ ಕೂಡಿವೆ. ಒಂದು ಮತ್ತು ಎರಡನೆಯ ತಲೆಮಾರಿವರಲ್ಲಿನ ವ್ಯಕ್ತಿನಾಮಗಳು ಬಹುತೇಕ ಧಾರ್ಮಿಕ ಪರಂಪರೆಯಿಂದ ಮತ್ತು ತಾವು ಬದುಕಿದ ಪರಿಸರದ ಪ್ರೇರಣೆ ಪಡೆದವುಗಳಾಗಿವೆ. ಜೊತೆಗೆ ಅವು ಆ ಸಮುದಾಯಕ್ಕೆ ಸಂಬಂಧಿಸಿದ ದೈವಗಳ ಪ್ರಭಾವದಿಂದ ಬಂದಿವೆ. ಮೊದಲೆರಡು ತಲೆಮಾರಿನ ಎರಡೂ ವರ್ಗದ ವ್ಯಕ್ತಿನಾಮ ನಿರ್ದಿಷ್ಟಗಳಲ್ಲಿ ವ್ಯಾಪಕ ಬದಲಾವಣೆಗಳೇನು ಕಂಡುಬರುವುದಿಲ್ಲ. ಆದರೆ ಮೂರನೆಯ ತಲೆಮಾರಿನ ವ್ಯಕ್ತಿನಾಮಗಳು ಪರಂಪರಾಗತ ವ್ಯಕ್ತಿನಾಮಗಳಿಗಿಂತ ಭಿನ್ನವಾಗಿದ್ದು, ಈ ಸಮುದಾಯಕ್ಕೆ ಈ ಹೆಸರುಗಳು ಇತ್ತೀಚಿಗೆ ಪ್ರವೇಶ ಪಡೆದಿವೆ. ಇಲ್ಲಿ ಮುಖ್ಯವಾಗಿ ಮೊದಲೆರಡು ತಲೆಮಾರುಗಳು ಧರ್ಮ, ದೈವ, ಪರಿಸರದೊಂದಿಗೆ ಅವಿನಾಭಾವ ಸಂಬಂಧವನ್ನು ಇಟ್ಟುಕೊಂಡು ಹೆಚ್ಚು ಪ್ರತಿಕ್ರಿಯಿಸಿದರೆ ಹೊಸ ತಲೆಮಾರಿನವರು ಹಿಂದಿನ ಜನರ ಧೋರಣೆಗಳಿಗೆ ಬದಲಾಗಿ ಹೊಸ ಸಮಾಜದೊಂದಿಗೆ ಹೆಚ್ಚು ಮುಖಾಮುಖಿಯಾಗುತ್ತಿರುವುದು ವ್ಯಕ್ತಿನಾಮಗಳಿಂದ ತಿಳಿದುಬರುತ್ತದೆ. ಸಾಮಾಜಿಕವಾಗಿ ಕೆಳಸ್ತರದ ಸಮುದಾಯವೆಂದು ಪರಿಗಣಿಸುವ ಕೊರಚರು ತಮ್ಮ ಸಂಸ್ಕೃತಿಗೆ ಹೊರತಾದ, ಬೇರೆ ಮೂಲದಿಂದ ವ್ಯಕ್ತಿನಾಮಗಳನ್ನು ಸ್ವೀಕರಿಸಿದ್ದಾರೆ. ವೈಷ್ಣವ ಮತ್ತು ಶೈವ ಮೂಲದ ಹೆಸರುಗಳು ಈ ಸಮುದಾಯದ ಸ್ತ್ರೀ–ಪುರುಷರಲ್ಲಿ ಕಂಡುಬರುತ್ತದೆ. ಹೀಗೆ ಅನ್ಯಮೂಲದಿಂದ ಸ್ವೀಕರಿಸಿದಾಗಲೂ ತಮ್ಮ ಸಮುದಾಯದ ನಾಮರಚನಾ ವಿನ್ಯಾಸಕ್ಕೆ ಅನುಗುಣವಾಗಿ ಮಾರ್ಪಾಟು ಮಾಡಿಕೊಂಡಿರುವುದು ಗಮನಿಸಬಹುದಾಗಿದೆ.

ವ್ಯಕ್ತಿನಾಮಗಳ ಸ್ವರೂಪವನ್ನು ತಿಳಿಯುವಲ್ಲಿ ಅದರ ರಾಚನಿಕತೆಯು ಬಹುಮುಖ್ಯ ಭಾಗವಾಗಿದೆ. ಸಂಬೋಧನೆ ಮಾಡುವಾಗ ವ್ಯಕ್ತಿಯ ಹೆಸರಿನಲ್ಲಾಗುವ ಬದಲಾವಣೆಯು ರಚನೆಯ ದೃಷ್ಟಿಯಿಂದ ವಿಶಿಷ್ಟವಾದುದು. ಸಾಮಾನ್ಯವಾಗಿ ಹೆಸರಿನಲ್ಲಿ ಪೂರ್ವ ಮತ್ತು ಉತ್ತರ ಎಂಬ ಎರಡು ಘಟಕಗಳಿರುತ್ತವೆ. ಉದಾ. ಲಿಂಗ+ಅಪ್ಪ= ಲಿಂಗಪ್ಪ. ಇಲ್ಲಿ ಪೂರ್ವ ಘಟಕವೇ ವ್ಯಕ್ತಿಯ ನಾಮ. ಉತ್ತರ ಘಟಕ ಯಾವುದೇ ವ್ಯಕ್ತಿಯ ಹೆಸರಿಗೆ ಅಂಟಿಕೊಳ್ಳಬಹುದು. ಟಿಂಗ+ಅಪ್ಪ, ಕರಿಯ+ಅಪ್ಪ, ದುರುಗ+ಅಪ್ಪ ಈ ಲಕ್ಷಣ ಗಮನಿಸಿ ಪೂರ್ವ ಘಟಕವನ್ನು ನಿರ್ದಿಷ್ಟ (Specific)ವೆಂದು ಉತ್ತರ ಘಟಕವನ್ನು

ವಾರ್ಗಿಕ(Generic)ವೆಂದು ಕರೆಯುತ್ತಾರೆ. ಇದರಲ್ಲಿ ನಿರ್ದಿಷ್ಟವು ನಿಜನಾಮವಾಗಿದ್ದು, ವಾರ್ಗಿಕವು ಸಂಬಂಧವಾಚಿ, ವ್ಯಕ್ತಿವಾಚಿ, ಸ್ಥಳವಾಚಿ, ಕುಲವಾಚಿ ಆಗಿರುತ್ತದೆ. ಸಾಮಾನ್ಯವಾಗಿ ಇದು ವ್ಯಕ್ತಿನಾಮಗಳ ಸ್ವರೂಪ.

ಕೊರಚ ಜನಾಂಗದವರಲ್ಲಿಯೂ ವ್ಯಕ್ತಿನಾಮಗಳಲ್ಲಿ ನಿರ್ದಿಷ್ಟ ಮತ್ತು ವಾರ್ಗಿಕಗಳ ಕೂಡಿಕೆ ಇದೆ. ಈ ರೀತಿಯ ನಿರ್ದಿಷ್ಟ ಮತ್ತು ವಾರ್ಗಿಕಗಳ ಕೂಡಿಗೆ ತೀರಾ ಇತ್ತೀಚಿನದು. ಅದು ಕೊರಚರು ಕರ್ನಾಟಕಕ್ಕೆ ವಲಸೆ ಬಂದಾದ ಮೇಲೆ ಸುದೀರ್ಘ ಕಾಲದಿಂದಲೂ ಇಲ್ಲಿಯೇ ನೆಲೆಸಿದಾದ ಮೇಲೆ ಇವರ ಹೆಸರಿನೊಂದಿಗೆ ವಾರ್ಗಿಕವಾಗಿ ಅಪ್ಪ, ಅಣ್ಣ, ಅಕ್ಕ, ಅಮ್ಮ, ಇತ್ಯಾದಿ ವಾರ್ಗಿಕಗಳು ಬಳಕೆಯಾಗುವುದನ್ನು ಕಾಣಬಹುದು. ಇದಕ್ಕು ಮುಂಚೆ ಸಮುದಾಯದವರ ಹೆಸರು ಪೂರ್ವಾರ್ಧದಲ್ಲಿಯೇ ಇರುವಂತೆ ಏಕವಚನ ರೂಪವಾದ ನಿಂಗ, ಸುಂಕ, ಕಪತ, ಯಂಕ ಮೊದಲಾದವು ಇರುತ್ತಿದ್ದವು. ನಂತರ ಕನ್ನಡ ಪರಿಸರದಲ್ಲಿ ಇರುವಂತೆ ಅಪ್ಪ, ಅಮ್ಮ, ಅಕ್ಕ ಮಾತ್ರ ಬಳಕೆಯಾಗುತ್ತದೆ ಹೊರತು ಕೊರಚರಲ್ಲಿ ಇದ್ದಂತೆ ಆವ, ಅಯ್ಯ, ಅಬ್ಬ ಎಂಬ ವಾರ್ಗಿಕ ರೂಪಗಳು ಬಳಕೆಯಾಗುವುದು ಕಂಡುಬರುವುದಿಲ್ಲ. ಈ ನಿರ್ದಿಷ್ಟ ಮತ್ತು ವಾರ್ಗಿಕಗಳ ಬಳಕೆಯಿಂದ ಕೊರಚರ ವ್ಯಕ್ತಿನಾಮಗಳಲ್ಲಿ ಎರಡು ಬಗೆಯ ವಿನ್ಯಾಸಗಳು ಸಾಧ್ಯವಾಗುತ್ತದೆ.

೧. **ನಿರ್ದಿಷ್ಟ ವಾಚಿನಾಮ** : ಸತ್ಯ, ಸುಂಕ, ಈರ, ಗುರ್ರ, ಕುಂಜ, ಟಿಂಗ, ಲಿಂಗ, ಕರಿಯ, ಮಲ್ಲ.

೨. ನಿರ್ದಿಷ್ಟ ವಾರ್ಗಿಕ ವಾಚಿನಾಮ: ಸತ್ಯ + ಅಪ್ಪ = ಸತ್ಯಪ್ಪ

ಸುಂಕ + ಅಮ್ಮ = ಸುಂಕಮ್ಮ

ಗುರ್ರ + ಅಪ್ಪ = ಗುರ್ರಪ್ಪ

ಕುಂಜ + ಅಪ್ಪ = ಕುಂಜಪ್ಪ

ಲಿಂಗ + ಅಮ್ಮ = ಲಿಂಗಮ್ಮ ಇತ್ಯಾದಿ.

ಕನ್ನಡ ಭಾಷೆಯಲ್ಲಿ ಸಂಬಂಧವಾಚಿಗಳು ಮೂಲತಃ ಸ್ತ್ರೀ, ಪುರುಷಸೂಚಿಗಳಾಗಿವೆ. ಇವು ವಾರ್ಗಿಕಗಳಾಗಿ ಬಳಕೆಗೊಳ್ಳುತ್ತಿರುವುದು ಈ ಭಾಷೆಯ ವೈಶಿಷ್ಟ್ಯವಾಗಿದೆ. ಕೊರಚರ ಸ್ತ್ರೀಯರು ಹಾಗೂ ಪುರುಷರ ಹೆಸರಿನಲ್ಲಿರುವ ವಾರ್ಗಿಕಗಳು ಕೇವಲ ಸಂಬಂಧವಾಚಿಗಳಾಗಿವೆ. ಅವುಗಳು ಪುರುಷ– ಅಪ್ಪ, ಅಣ್ಣ, ಅಯ್ಯ. ಸ್ತ್ರೀಯರು– ಅಮ್ಮ, ಅಕ್ಕ, ಅವ್ವ ಇವರ ಹೆಸರಿನಲ್ಲಿ ವಾರ್ಗಿಕವು ಕೆಲವೊಮ್ಮೆ ನಿರ್ದಿಷ್ಟವಾಗಿರುವ ರೂಪವಿದೆ.

ಉದಾ. ಅಯ್ಯ + ಅಪ್ಪ = ಅಯ್ಯಪ್ಪ

ಅಣ್ಣ + ಅಪ್ಪ = ಅಣ್ಣಪ್ಪ

ಅಕ್ಕ + ಅಮ್ಮ = ಅಕ್ಕಮ್ಮ

ಇತ್ಯಾದಿ. ಹಾಗೆಯೇ ವಾರ್ಗಿಕದ ಮುಂದೆ ವಾರ್ಗಿಕ ಬಂದಿರುವ ಹೆಸರುಗಳೂ ಇವೆ. ಉದಾಹರಣೆಗೆ

ವಾರ್ಗಿಕ	+	ವಾರ್ಗಿಕ	=	ಪುರುಷನಾಮ
ಅಪ್ಪ	+	ಅಣ್ಣ	=	ಅಪ್ಪಣ್ಣ
ಅಪ್ಪ	+	ಅಯ್ಯ	=	ಅಪ್ಪಯ್ಯ
ಅಣ್ಣ	+	ಅಯ್ಯ	=	ಅಣ್ಣಯ್ಯ
ಅಣ್ಣ	+	ಅಪ್ಪ	=	ಅಣ್ಣಪ್ಪ
ಅಯ್ಯ	+	ಅಪ್ಪ	=	ಅಯ್ಯಪ್ಪ
ವಾರ್ಗಿಕ	+	**ವಾರ್ಗಿಕ**	=	**ಸ್ತ್ರೀನಾಮ**
ಅಕ್ಕ	+	ಅಮ್ಮ	=	ಅಕ್ಕಮ್ಮ
ಅಕ್ಕ	+	ಅವ್ವ	=	ಅಕ್ಕವ್ವ
ಅಮ್ಮ	+	ಅಕ್ಕ	=	ಅಮ್ಮಕ್ಕ

ಒಟ್ಟಿನಲ್ಲಿ ಕೊರಚರ ಹೆಸರುಗಳನ್ನು ಗಮನಿಸಿದಾಗ ಸಂಬಂಧವಾಚಿಗಳು, ನಿರ್ದಿಷ್ಟಗಳಾಗಿಯೂ ಬಳಕೆಯಾಗಿದೆ ಎಂಬುದು ಕಂಡುಬರುತ್ತದೆ. ಅಂದರೆ ಕೊರಚರ ಹೆಸರುಗಳಲ್ಲಿ ನಿರ್ದಿಷ್ಟದ ಜೊತೆಗೆ ಸಂಬಂಧಾಚಿ ವಾರ್ಗಿಕವು ಕಂಡುಬರುತ್ತದೆ. ಅವುಗಳು ಇಂತಿವೆ.

ಕೊರಚ ಪುರುಷರ ನಾಮಗಳು

ತಿರುಪತಿ + ಅಪ್ಪ = ತಿರುಪತೆಪ್ಪ

ಈಶ + ಅಪ್ಪ = ಈಶಪ್ಪ

ಬುಡ್ಡ + ಅಪ್ಪ = ಬುಡ್ಡಪ್ಪ

ತಿಂದ + ಅಪ್ಪ = ತಿಂದಪ್ಪ

ಯಂಕ + ಅಪ್ಪ = ಯಂಕಪ್ಪ

ಮಾಯ + ಅಪ್ಪ = ಮಾಯಪ್ಪ

ದುರುಗ + ಅಪ್ಪ = ದುರುಗಪ್ಪ

ಪಾಲ + ಅಪ್ಪ = ಪಾಲಪ್ಪ

ಅಣ್ಣ + ಅಪ್ಪ = ಅಣ್ಣಪ್ಪ

ಲಿಂಗ + ಅಪ್ಪ = ಲಿಂಗಪ್ಪ

ಸುಂಕ + ಅಪ್ಪ = ಸುಂಕಪ್ಪ

ಈರ + ಅಪ್ಪ = ಈರಪ್ಪ

ತಿಮ್ಮ + ಅಯ್ಯ = ತಿಮ್ಮಯ್ಯ

ಅಪ್ಪ + ಅಯ್ಯ = ಅಪ್ಪಯ್ಯ

ಅಣ್ಣ + ಅಯ್ಯ = ಅಣ್ಣಯ್ಯ

ಬಕ್ಕ + ಅಣ್ಣ = ಬಕ್ಕಣ್ಣ

ಜಂಬ + ಅಣ್ಣ = ಜಂಬಣ್ಣ

ರಾಮ + ಅಣ್ಣ = ರಾಮಣ್ಣ

ಸುಗ್ಲ್ಯಾ + ಅಪ್ಪ = ಸುಗ್ಲಪ್ಪ

ತಮ್ಮ + ಅಣ್ಣ = ತಮ್ಮಣ್ಣ

ಕೊಕ್ಕಡೆ + ಅಪ್ಪ = ಕೊಕ್ಕೆಡೆಪ್ಪ

ಈಶ್ವರ + ಅಪ್ಪ = ಈಶ್ವರಪ್ಪ

ಮಾರಗದ + ಅಪ್ಪ = ಮಾರಗದಪ್ಪ

ಜಾತ + ಅಪ್ಪ = ಜಾತಪ್ಪ

ಜಯ + ಅಪ್ಪ = ಜಯಪ್ಪ

ಪುಟ್ಟ + ಅಪ್ಪ = ಪುಟ್ಟಪ್ಪ

ಓಬ + ಅಣ್ಣ = ಓಬಣ್ಣ ಇತ್ಯಾದಿ.

ಅಲೆಮಾರಿ ಕೊರಚ ಸಮುದಾಯದವರ ವ್ಯಕ್ತಿನಾಮಗಳಲ್ಲಿ ವಿಶಿಷ್ಟತೆಯಿಂದ ಕೂಡಿದೆ. ಇವುಗಳು ಪರಂಪರೆಯಿಂದ ರೂಢಿಯಲ್ಲಿರುವುದು ಕೊರಚರಲ್ಲಿ ಕಂಡುಬರುತ್ತದೆ. ಅವು ಕೊಕ್ಕಡೆಪ್ಪ, ಕಿಷ್ಟಪ್ಪ, ಸುಗ್ಲ್ಯಾಪ್ಪ, ಕುಶಲೆಪ್ಪ, ಗುರ‍್ರಪ್ಪ ಇತ್ಯಾದಿಯಾಗಿರುವ ವ್ಯಕ್ತಿನಾಮಗಳು ದ್ರಾವಿಡ ಪರಿವಾರದ ನಾಮಗಳಂತೆ ಕಂಡುಬರುತ್ತದೆ.

ಕೊರಚ ಸಮುದಾಯವು ಮಾತೃ ಪ್ರಧಾನ ಸಮಾಜವಾದರೂ ಪ್ರಾಚೀನ ಕಾಲದಿಂದ ಯಾವುದೇ ರೂಪದ ಬರವಣಿಗೆಯಲ್ಲಿ ಸಂಖ್ಯಾದೃಷ್ಟಿಯಿಂದ ಸ್ತ್ರೀಯರ ಹೆಸರು ಕಡಿಮೆ. ಇವರಲ್ಲಿ ಸ್ತ್ರೀಯರ ಹೆಸರುಗಳು ಪುರುಷ ಹೆಸರಿನೊಂದಿಗೆ ವಾರ್ಗಿಕವಾಗಿ ಅವ್ವ, ಅಮ್ಮ ಅಥವಾ ಅಕ್ಕಗಳನ್ನು ಸೇರಿಸಿಕೊಂಡು ಬಂದಿರುವುದನ್ನು ಗಮನಿಸಬಹುದಾಗಿದೆ. ಉದಾಹರಣೆ

ನಿರ್ದಿಷ್ಟ	+	ವಾರ್ಗಿಕ	=	ವ್ಯಕ್ತಿನಾಮಗಳು
ಬುಡುಮ	+	ಅಕ್ಕ	=	ಬುಡಮಕ್ಕ
ಸುಂಕ	+	ಅಮ್ಮ	=	ಸುಂಕಮ್ಮ
ಕಪ್ಪತ	+	ಅಮ್ಮ	=	ಕಪ್ಪತಮ್ಮ
ಕಪ್ಪತ	+	ಅವ್ವ	=	ಕಪ್ಪತವ್ವ
ಯಮನ	+	ಅಕ್ಕ	=	ಯಮನಕ್ಕ
ನಾಗ	+	ಅಮ್ಮ	=	ನಾಗಮ್ಮ
ತಾಯ	+	ಅಕ್ಕ	=	ತಾಯಕ್ಕ
ಲಾಲ	+	ಅಕ್ಕ	=	ಲಾಲಕ್ಕ
ಲಿಂಗ	+	ಅಮ್ಮ	=	ಲಿಂಗಮ್ಮ
ಕರಿಯ	+	ಅಮ್ಮ	=	ಕರಿಯಮ್ಮ
ಚೌಡ	+	ಅಮ್ಮ	=	ಚೌಡಮ್ಮ
ಈರ	+	ಅಮ್ಮ	=	ಈರಮ್ಮ
ಈಶ	+	ಅಕ್ಕ	=	ಈಶಕ್ಕ
ಪೆದ್ದ	+	ಅಕ್ಕ	=	ಪೆದ್ದಕ್ಕ
ತಿಪ್ಪ	+	ಅಕ್ಕ	=	ತಿಪ್ಪಕ್ಕ

ಈ ಮೇಲಿನ ಹೆಸರುಗಳಲ್ಲಿ ಸಂಬಂಧ ಸೂಚಕಗಳು ವಾರ್ಗಿಕಗಳಾಗಿ ಬಳಕೆಯಾಗಿ ವ್ಯಕ್ತಿನಾಮಗಳಾಗಿರುವುದನ್ನು ಇಲ್ಲಿ ಕಾಣಬಹುದು. ಇಲ್ಲಿ ವ್ಯಕ್ತಿನಾಮವು ನಿರ್ದಿಷ್ಟ ಮತ್ತು ವಾರ್ಗಿಕದ ಮೊತ್ತ ಆದರೆ ಕೆಲವೊಮ್ಮೆ ವಾರ್ಗಿಕವಿಲ್ಲದೆಯೂ ಬಳಕೆ ಸಾಧ್ಯ. ಸುನಿಲ್, ಅನಿಲ್, ಪ್ರಕಾಶ್, ವನಿತ, ಅನಿತ, ಸುನಿತ, ಪವಿತ್ರ ಇತ್ಯಾದಿಯಾಗಿ ಆದರೆ ಸ್ತ್ರೀವಾಚಿಯಾಗಿ ಬರುವ ಕೆಲವೊಂದು ಹೆಸರುಗಳಲ್ಲಿ ಲಿಂಗಮ್ಮ, ಕರಿಯಮ್ಮ, ಚೌಡಮ್ಮ, ಈರಕ್ಕ, ಈಶಕ್ಕ, ತಿಪ್ಪಕ್ಕ ಇತ್ಯಾದಿಗಳನ್ನು ವಾರ್ಗಿಕಗಳಿಲ್ಲದೆ ಬಳಸಿದಾಗ ಅವು ಲಿಂಗ, ಕರಿಯ, ಚೌಡ, ಈರ, ಈಶ, ತಿಪ್ಪ ಎಂದಾಗುತ್ತದೆ. ಇವು ಪುಲ್ಲಿಂಗ ಸೂಚಿಸುತ್ತದೆ. ಆದ್ದರಿಂದ ಸ್ತ್ರೀಲಿಂಗ ಸೂಚಿಸಲು ನಿರ್ದಿಷ್ಟದ ಕೊನೆಯ (ಅಕ್ಷರ) ಸ್ವರ 'ಇ' ಇರುವಂತೆ (ಕೆಲವೊಮ್ಮೆ 'ಉ') ಮಾಡಲಾಗುತ್ತದೆ. ಉದಾಹರಣೆಗೆ ಲಿಂಗ–ಲಿಂಗಿ, ಚೌಡ–ಚೌಡಿ, ಪೆದ್ದ–ಪೆದ್ದಿ, ತಿಪ್ಪ–ತಿಪ್ಪಿ ಇತ್ಯಾದಿಯಾಗುತ್ತದೆ.

ಹೆಸರಿನ ಸಂಕ್ಷಿಪ್ತತೆ

ಜಗತ್ತಿನಲ್ಲಿ ಉದ್ದವಾದ ಹೆಸರನ್ನಿಡುವ ಪರಿಪಾಠವು ಇದ್ದೇ ಇದೆ. ಆದರೆ ವ್ಯವಹರಿಸುವಾಗ ಸಂಕ್ಷಿಪ್ತ ಮಾಡುವುದಿದೆ. ಅಲ್ಲದೆ ಯಾವುದೇ ಘಟಕವಿರಲಿ ಕುಟುಂಬ ಮತ್ತು ಆತ್ಮೀಯ ನೆಲೆಯಲ್ಲಿ ಸಂಕ್ಷಿಪ್ತವಾಗುವುದುಂಟು. ಕೊರಚರಲ್ಲಿಯೂ ನಿಜನಾಮವನ್ನು ಸಂಕ್ಷಿಪ್ತಗೊಳಿಸಿ ಸಂಬೋಧನೆ ಮಾಡುವುದು ಇದೆ. ಉದಾಹರಣೆಗೆ,

ಯಂಕಪ್ಪ – ಯಂಕ

ತಿಂದಪ್ಪ – ತಿಂದ

ಬುಡ್ಡಪ್ಪ – ಬುಡ್ಡ

ಸುಂಕಪ್ಪ – ಸುಂಕ

ದೇವಕ್ಕ – ದೇವಿ

ನೀಲಮ್ಮ – ನೀಲ

ಪೆದ್ದಕ್ಕ – ಪೆದ್ದಿ

ಜಂಬಕ್ಕ – ಜಂಬಿ

ತಾಟವ್ವ – ತಾಟಿ ಇತ್ಯಾದಿ.

ಈ ಸಂಕ್ಷಿಪ್ತತೆ ಕೆಲವೊಮ್ಮೆ ದೇಶೀಕೃತವಾಗುವುದು. ವ್ಯಕ್ತಿನಾಮಗಳ ರಾಚನಿಕ ಸ್ವರೂಪದಲ್ಲಿ ನಿರ್ದಿಷ್ಟ ಘಟಕವೇ ಇಲ್ಲಿ ಮುಖ್ಯವಾಗಿದೆ. ಅದರ ಅರ್ಥವೇ ಗುರುತಿಸಲು ಅರ್ಹವಾದ ನಿರ್ದೇಶನವಾಗುತ್ತದೆ. ಮತ್ತು ವಾಚ್ಯಾರ್ಥ್ಯವನ್ನು ಹಿಂದೆ ಹಾಕುವುದು. ಇಲ್ಲಿ ಹೆಸರುಗಳನ್ನು ಮೊಟಕುಗೊಳಿಸಿ ಕರೆಯುವುದು ಒಂದೆಡೆಯಾದರೆ ವ್ಯಕ್ತಿಯ ನಿಜನಾಮಗಳನ್ನು ಬಿಟ್ಟು ಬೇರೆ ಬಳಸುವುದು ಇದು ಅಡ್ಡ ಹೆಸರು ಆಗಬಹುದು.

ಅಡ್ಡ ಹೆಸರುಗಳು ಸಾಮಾನ್ಯವಾಗಿ ವ್ಯಕ್ತಿಯ ಆಕಾರ, ನಡೆನುಡಿ, ಇತ್ಯಾದಿಗಳನ್ನು ಅವಲಂಬಿಸಿ ರೂಪಗೊಳ್ಳುತ್ತವೆ. ಇಲ್ಲೆಲ್ಲ ಸಾಮಾನ್ಯವಾಗಿ ವಿಶೇಷಣಗಳೇ ಬಳಕೆಯಾಗುತ್ತವೆ. ಹೆಸರಿಗೂ ಅಡ್ಡ ಹೆಸರಿಗೂ ಸಂಬಂಧವಿರುವುದಿಲ್ಲ. ಇವು ಕೆಲವೊಮ್ಮೆ ಸ್ವತಂತ್ರವಾಗಿ ನಿರ್ದಿಷ್ಟದಂತೆ ಬಳಕೆಯಾದರೆ (ಕುಳ್ಳ, ಗಿಡ್ಡ, ಕರ್ತ, ದಡಿಯ, ಕುಂಟ ಟಿರ್ರ, ಪೆಲ್ಲ, ಮಲ್ಲ, ಗೂರ, ಉರುಕ, ಗುಡ್ಡಿ, ಕುತ್ತ, ಗುಲ್ಲಿ, ಎಗಡ, ಕುಯ್ಯ, ಡೊಳ್ಳ, ಮೇಳಿ, ಸೇವುಟ, ಬೂತ ಇತ್ಯಾದಿ) ಇನ್ನು ಕೆಲವೊಮ್ಮೆ ಹೆಸರಿನ ಮೊದಲು ಬಂದು ಸಹ ನಿರ್ದಿಷ್ಟವಾಗುತ್ತದೆ. ಉದಾಹರಣೆಗೆ ಕುಂಟ ಕುಂಜ್ಯಾ, ಮೇಳಿಹಾಲಗ, ಗ್ಯಾರಿಕಾಲಪುಟ್ಟ, ಕೆಂಗನಾಗಜ್ಜ, ಜಿಟ್ಟಿಗೋಣಿಗ, ಸಿನ್ನತಲಕ್ಕಾಯಿ ಕಪ್ಪತ, ಗಿಡ್ಡರೇವಗ, ಗಾದಿಪಿಟ್ಟಿಗಾ, ಗುಲ್ಲಿತಿಮ್ಮ, ಮೊಂಡಿದುರುಗ, ಕೋಣಸಿಮೂಕ ಹೇಮಗ, ಪಾಸುಪೆಲ್ಲುರಾಮ, ಕರ್ತಗಂಗ, ಕೋತಿನಾಗ,

ಇವು ಕೆಲವೊಮ್ಮೆ ಕುಚೋದ್ಯಕಾದರೆ ಇನ್ನು ಕೆಲವೊಮ್ಮೆ ಒಂದೇ ರೀತಿಯ ಹೆಸರಿನವರು ಅನೇಕರಿದ್ದಾಗ ಸ್ಪಷ್ಟವಾಗಿ ಗುರುತಿಸಲು ಸಹಾಯ ಮಾಡುತ್ತದೆ. ಕೆಲವೊಮ್ಮೆ ವ್ಯಕ್ತಿನಾಮಗಳ ಅಡ್ಡ ಹೆಸರೇ ವ್ಯಕ್ತಿನಾಮಗಳಾಗುವುದೂ ಉಂಟು. ಬೊಡೆಕ್ಕ, ಬಾಟಕ್ಕ, ಗಿಡ್ಡಯ್ಯ, ಕಡೆಲಕ್ಕ, ಗಿಡ್ಡಕ್ಕ, ನೆಡಕ್ಕ, ಮೋಟಮ್ಮ, ಅಂಕಮ್ಮ, ಸೇವುಟಾ, ಕುಂಟಕಾಲ, ಕೆಂಗನಾಜ್ಜ, ಇತ್ಯಾದಿಯಾಗಿ ಹೀಗೆ ಇಲ್ಲಿನ ವ್ಯಕ್ತಿನಾಮಗಳು ಸಂಬೋಧನಾ ನೆಲೆಯಲ್ಲಿ ವ್ಯಕ್ತಿಯ ಪೂರ್ಣ ಹೆಸರು ಬಳಕೆಯಾಗದೆ ಅಡ್ಡ ಹೆಸರೋ ಮುದ್ದು ಹೆಸರೋ ಅಥವಾ ಅರ್ಧ ಹೆಸರೋ (ಪೂರ್ವಾರ್ಧ) ಬಳಕೆಯಾಗುತ್ತದೆ.

ಒಮ್ಮೆ ಒಂದು ಹೆಸರು ಒಬ್ಬ ವ್ಯಕ್ತಿಯ ಮೂಲಕ ಒಂದು ಮನೆತನದಲ್ಲಿ ಸೇರಿಕೊಂಡಿತೆಂದರೆ ಅದನ್ನು ಹೊರಹಾಕುವುದು ತುಂಬಾ ಕಷ್ಟ. ಅಂತೆಯೇ ಕೊರಚರಲ್ಲಿ ಹೆಸರಿನ ನಿರ್ದಿಷ್ಟ ನಾಮದೊಂದಿಗೆ ಅವರ ಬಹುಮುಖ್ಯವಾದ ಬೆಡಗುಗಳು ಬಳಕೆಯಾಗುತ್ತವೆ. ಇಲ್ಲಿ ವ್ಯಕ್ತಿಯನ್ನು ಗುರುತಿಸುವಲ್ಲಿ ವ್ಯಕ್ತಿನಾಮದಷ್ಟೇ ಮಹತ್ವದ ಪಾತ್ರವನ್ನು ಬೆಡಗುಗಳು ವಹಿಸುತ್ತವೆ. ಇದು ಬಳ್ಳಾರಿ–ದಾವಣಗೆರೆ ಪರಿಸರದಲ್ಲಿ ಕೊರಚರಲ್ಲಿ ಅಷ್ಟೇ ಅಲ್ಲದೆ ಇಡೀ ಕರ್ನಾಟಕದಲ್ಲಿನ ಕೊರಚರಲ್ಲಿ ಕಂಡುಬರುತ್ತದೆ. ಆದ್ದರಿಂದ ಹೆಸರಿನೊಂದಿಗೆ ಬೆಡಗು ಬಳಕೆಯಾಗುವುದರಿಂದಾಗಿ ವ್ಯಕ್ತಿಯು ಯಾವ ಮನೆತನಕ್ಕೆ (ಬೆಡಗಿಗೆ) ಸೇರಿದವನು ಎಂಬುದನ್ನು ತಿಳಿಯುವಲ್ಲಿಯೂ ಬಳಕೆ ಮಾಡಲಾಗುತ್ತದೆ.

ಬೆಡಗಿನ ಹೆಸರು	**ವ್ಯಕ್ತಿಯ ಹೆಸರು**
ಮೋಟ	ಯಂಕಣ್ಣ
ಮೋಟ	ಅಬ್ಬಣ್ಣ
ಲಂಜಪೇಲ	ದುರುಗಪ್ಪ
ಕ್ಯಾರವಾದಿ	ಪುಟ್ಟಪ್ಪ
ಮುಂಗ	ಗಂಗಪ್ಪ
ಬೆದ್ದಡಿ	ದುರುಗಪ್ಪ
ನಲಬಾಯಿ	ಸುಂಕಣ್ಣ
ಜಟೆಂಗಿ	ಸುಂಕಪ್ಪ
ಸಿಟರೆಡ್ಡಿ	ಲಚ್ಚ
ಬೋಗಿರ	ರಾಮಣ್ಣ
ವಜ್ಜಿಗೀರ್	ಬಕ್ಕಣ್ಣ
ಗಜ್ಜಿಲಿ	ನಾಗಪ್ಪ

ವಳಬಾ	ಮಾರಕ್ಕ
ಪೆನಗುಂಡ	ಹನುಮಕ್ಕ

ಇತ್ಯಾದಿಯಾಗಿ ವ್ಯಕ್ತಿನಾಮಗಳನ್ನು ಬೆಡಗುಗಳ ಮುಖಾಂತರ ವ್ಯಕ್ತಿನಾಮಗಳನ್ನು ಗುರುತಿಸುವುದು ಕಂಡುಬರುತ್ತದೆ. ಮತ್ತು ಇದಲ್ಲದೆ ಕೊರಚರಲ್ಲಿ ಪ್ರಮುಖವಾಗಿ ಶೈಕ್ಷಣಿಕ ಕ್ಷೇತ್ರದಲ್ಲಿ ಜಾತಿಸೂಚಕವಾಗಿ ಹೆಸರುಗಳು ನಮೂದು ಆಗುತ್ತಿದ್ದವು. ಉದಾ. ಕೊರಚರ ಕುಬೇರ, ಕೊರಚರ ಜಾತಪ್ಪ, ಕೊರಚರ ನಿಂಗಪ್ಪ ಇತ್ಯಾದಿಯಾಗಿ ಬಳಕೆಯಾಗುತ್ತಿತ್ತು. ಆದರೆ ಇಂದಿನ ಶೈಕ್ಷಣಿಕ ದಾಖಾಲಾತಿಯಲ್ಲಿ ಪ್ರಮುಖವಾಗಿ ಕೊರಚರ ಪ್ರಧಾನ ಗೋತ್ರಗಳಾದ ಸಾತ್ಪಾಡಿ, ಕಾವಾಡಿ, ಮೇನ್ಪಡಿ, ಮೇಂಡ್ರಗುತ್ತಿಗಳು ಬಳಕೆಯಾಗುತ್ತಿರುವುದನ್ನು ನೋಡುತ್ತೇವೆ. ಸಾತ್ಪಾಡಿ ನಿಂಗಪ್ಪ, ಕಾವಾಡಿ ನಾಗರಾಜ, ಮೇನಪ್ಪಡಿ ಬಸವರಾಜ, ಮೇಂಡ್ರಗುತ್ತಿ ವೆಂಕೋಬ ಇತ್ಯಾದಿ ಬಳಕೆಯನ್ನು ಕೊರಚರಲ್ಲಿ ಕಾಣಬಹುದಾಗಿದೆ. ಮತ್ತು ತಮ್ಮ ತಮ್ಮ ತಂದೆಯರ ಹೆಸರುಗಳನ್ನು ಬಳಸುತ್ತಾರೆ. ಮತ್ತು ಕೊರಚರಲ್ಲಿ ಆಂಗ್ಲ ಭಾಷೆಯ ಪ್ರಭಾವದಿಂದಾಗಿ ತಂದೆ, ಬೆಡಗುಗಳು, ಗೋತ್ರಗಳು ಸಂಕ್ಷಿಪ್ತಗೊಂಡು ಏಕಾಕ್ಷರವಾಗಿ ಇವರ ವ್ಯಕ್ತಿನಾಮದೊಂದಿಗೆ ಬಳಕೆಯಾಗುತ್ತದೆ. ಉದಾಹರಣೆಗೆ

ಬೆಡಗುಗಳು

ಪೋಲಾಯ + ಹನುಮಂತ = ಪಿ. ಹನುಮಂತ

ಕ್ಯಾರವಾದೆ + ಬಸವರಾಜ = ಕೆ. ಬಸವರಾಜ

ಮಾಟಾಯ + ಕೊಟ್ರೇಶ = ಎಂ. ಕೊಟ್ರೇಶ

ಜಟೆಂಗ್ಯಾಯ + ಸುಂಕಪ್ಪ = ಜೆ ಸುಂಕಪ್ಪ

ಬೆದ್ದಡೆಯ + ವೆಂಕಟೇಶ = ಬಿ. ವೆಂಕಟೇಶ

ಬೋಗಿರಾಯ + ರಾಮಣ್ಣ = ಬಿ. ರಾಮಣ್ಣ

ಗಜ್ಜಿಲಿ + ನಾಗಪ್ಪ = ಜಿ. ನಾಗಪ್ಪ

ಹಾಗೆಯೇ ಕೊರಚರಲ್ಲಿನ ಸ್ತ್ರೀಯರ ಹೆಸರುಗಳು ಇತರೆ ಸಮಾಜದ ಸಮುದಾಯಗಳ ಸ್ತ್ರೀಯರು ಹೇಗೆ ವಿವಾಹದ ಮೊದಲು ತಂದೆಯ ಹೆಸರು ಮತ್ತು ವಿವಾಹದ ನಂತರ ಬದಲಾಗಿ ಗಂಡನ ಹೆಸರಿನೊಂದಿಗೆ ಸೇರಿಕೊಳ್ಳುತ್ತದೆಯೋ ಹಾಗೇ ಇವರ ಸ್ತ್ರೀಯರ ಹೆಸರುಗಳು ಸೇರಿಕೊಳ್ಳುತ್ತದೆ. ಉದಾಹರಣೆಗೆ.

ವಿವಾಹಪೂರ್ವ

ಬೆಡಗು ನಾಮ + ಪಿತೃನಾಮ + ನಿಜನಾಮ = ವ್ಯಕ್ತಿನಾಮ

ಬೋಗಿರ + ರಾಮಣ್ಣ + ಸೀತಮ್ಮ = ಬಿ.ಆರ್. ಸೀತಮ್ಮ

ವಳಬಾಯ + ಯಂಕಣ್ಣ + ಗಂಗಮ್ಮ = ವಿ.ವೈ. ಗಂಗಮ್ಮ

ಕ್ಯಾರವಾದಿ + ನಿಂಗಪ್ಪ + ಪವಿತ್ರ = ಕೆ.ಎನ್. ಪವಿತ್ರ

ವಿವಾಹ ನಂತರ

ಬೆಡಗು ನಾಮ + ಪತಿನಾಮ + ನಿಜನಾಮ = ವ್ಯಕ್ತಿನಾಮ

ನಲಬಾಯ + ಪ್ರಕಾಶ + ಅನಿತ = ಎನ್.ಪಿ. ಅನಿತ

ಕ್ಯಾರವಾದಿ + ನಾಗರಾಜ + ಗೀತ = ಕೆ.ಎನ್. ಗೀತಾ

ಬಾಗಲೂರು + ಗಂಗಪ್ಪ + ನಾಗಮ್ಮ = ಬಿ.ಜಿ. ನಾಗಮ್ಮ

ಈ ರೀತಿಯಾಗಿ ಪ್ರತಿಷ್ಠೆಯ ದ್ಯೋತಕವಾಗಿ ಆಂಗ್ಲ ಭಾಷೆಯ ಪ್ರಭಾವದಿಂದ ವ್ಯಕ್ತಿನಾಮಗಳು ಸಂಕ್ಷಿಪ್ತವಾಗಿ ಏಕಾಕ್ಷರವಾಗುವುದನ್ನು ಕಾಣಬಹುದಾಗಿದೆ. ಅಷ್ಟೇ ಅಲ್ಲದೆ ಹೆಣ್ಣಿಗೆ ತವರು ಮನೆಯವರು ಇಟ್ಟಂತ ಹೆಸರನ್ನು ಬಿಟ್ಟು ಗಂಡನ ಮನೆಯವರು ಮದುವೆಯ ನಂತರ ಬೇರೊಂದು ಹೆಸರನ್ನು ಅಂಟಿಸುವ ಪದ್ಧತಿಯನ್ನು ಇತರೆ ಸಮಾಜದ ಜನತೆಯಂತೆ ಕೊರಚರಲ್ಲಿಯೂ ಬಹುಹಿಂದಿನಿಂದಲೂ ಇದೆ. ಉದಾಹರಣೆ.

ತಂದೆ ಮನೆಯವರು ಇಟ್ಟ ಹೆಸರು	ಗಂಡನ ಮನೆಯಲ್ಲಿಟ್ಟ ಬೇರೊಂದು ಹೆಸರು
ಬೂತಕ್ಕ	ಸರೋಜಿನಿ
ಹುಚ್ಚೆಂಗೆಮ್ಮ	ರತ್ನಮ್ಮ
ರಂಗಮ್ಮ	ಚಂದನ
ಶ್ಯಾಲಿನಿ	ಪಾರ್ವತಿ ಇತ್ಯಾದಿ.

ಆದರೆ ಕಳೆದ ಎರಡು ದಶಕಗಳಿಂದೀಚೆಗೆ ಈ ರೀತಿಯ ಹೆಸರುಗಳ ಬದಲಾವಣೆ ಕ್ರಮವು ಕಡಿಮೆಯಾಗಿದೆ. ತವರು ಮನೆಯಲ್ಲಿಟ್ಟ ಹೆಸರನ್ನೇ ಗಂಡನ ಮನೆಯಲ್ಲಿ ಬಳಸುವುದು ಕಂಡುಬರುತ್ತದೆ. ಆದರೆ ಈ ಆಂಗ್ಲ ಭಾಷೆಯ ಪ್ರಭಾವದ ಪರಿಣಾಮವಾಗಿ ವ್ಯಕ್ತಿನಾಮಗಳು ಸಂಕ್ಷಿಪ್ತಗೊಂಡು ಏಕಾಕ್ಷರವಾಗುವುದನ್ನು ಕಾಣಬಹುದಾಗಿದೆ. ಭಾರತದ ಉದ್ದಗಲಕ್ಕೂ ಈ ಸಂಕ್ಷಿಪ್ತ ಛಾಯೆ ವ್ಯಾಪಕವಾಗಿದೆ. ಅಲೆಮಾರಿ ಕೊರಚ ಸಮುದಾಯದವರಲ್ಲಿ ವ್ಯಕ್ತಿನಾಮಗಳು ಹಿರಿಯರಿಂದ ಕಿರಿಯರಿಂದ ಮತ್ತು ಸ್ನೇಹಿತರಿಂದ ಹೇಗೆ ಸಂಬೋಧನೆಗೊಳ್ಳುತ್ತದೆ ಎಂಬುದನ್ನು ಈ ಕೆಳಗಿನಂತೆ ನೋಡಲಾಗಿದೆ.

ಪೂರ್ಣ ಹೆಸರು	**ಹಿರಿಯರಿಂದ**	**ಕಿರಿಯರಿಂದ**	**ಸ್ನೇಹಿತರಿಂದ**
ಪುಟ್ಟಪ್ಪ	ಪುಟ್ಟ/ಪುಟ್ಟಪ್ಪ	ಪುಟ್ಟಪ್ಪಮಾಮ	ಪುಟ್ಟ/ಪುಟ್ಗ
ರಾಮಪ್ಪ	ರಾಮ/ರಾಮಪ್ಪ	ರಾಮಪ್ಪಮಾಮ	ರಾಮ/ರಾಮ್ಗ
ತಿಪ್ಪಣ್ಣ	ತಿಪ್ಪ/ತಿಪ್ಪಣ್ಣ	ತಿಪ್ಪಣ್ಣಮಾಮ	ತಿಪ್ಗ/ತಿಪ್ಪ
ಜಯಪ್ಪ	ಜಯ/ಜಯಪ್ಪ	ಜಯಣ್ಣ/ನ್ನ	ಜಯ್ಗ/ಜಯ

ನೀಲಮ್ಮ	ನೀಲ/ನೀಲವ್ವ/ಮ್ಮ	ನೀಲಕ್ಕ/ತ್ತ	ನೀಲ
ಸೀತವ್ವ	ಸೀತ/ಸೀತವ್ವ	ಸೀತಕ್ಕ/ತ್ತ	ಸೀತ
ರತ್ನವ್ವ	ರತ್ನಿ/ರತ್ನವ್ವ	ರತ್ನಕ್ಕ/ತ್ತ	ರತ್ನಿ/ರತ್ನ
ದೇವಕ್ಕ	ದೇವಿ/ದೇವಕ್ಕ	ದೇವಕ್ಕ/ತ್ತ	ದೇವಿ
ಕುಬೇರ	ಕುಬೇರ	ಕುಬೇರಣ್ಣ/ನ್ನ	ಕುಬೀರ
ಮಾಯಪ್ಪ	ಮಾಯ/ಮಾಯಣ್ಣ	ಮಾಯಣ್ಣ/ನ್ನ	ಮಾಯ್ಗ
ತಾಯಪ್ಪ	ತಾಯ/ತಾಯಪ್ಪ	ತಾಯಣ್ಣ/ನ್ನ	ತಾಯ್ಗ
ಕಪ್ಪತಪ್ಪ	ಕಪತ/ಕಪ್ಪತಪ್ಪ	ಕಪತಣ್ಣ/ನ್ನ	ಕಪತ
ಪಾಪಮ್ಮ	ಪಾಪ/ಪಾಪಿ	ಪಾಪಕ್ಕ/ತ್ತ	ಪಾಪು, ಪಾಪ
ಪಾಲಮ್ಮ	ಪಾಲವ್ವ	ಪಾಲಕ್ಕ/ತ್ತ	ಪಾಲು, ಪಾಲಿ
ರಾಜಮ್ಮ	ರಾಜಕ್ಕ	ರಾಜಕ್ಕ/ತ್ತ	ರಾಜಿ, ರಾಜು
ಚೌಡಮ್ಮ	ಸೌಡಮ್ಮ/ಸೌಡಿ	ಸೌಡಕ್ಕ/ತ್ತ	ಸೌಡಿ, ಚೌಡ
ಶಿವಮ್ಮ	ಸಿವಕ್ಕ/ಸಿವಮ್ಮ	ಸಿವಕ್ಕ/ತ್ತ	ಸಿವು
ರಾಮಕ್ಕ	ರಾಮವ್ವ	ರಾಮಕ್ಕ/ತ್ತ	ರಾಮಿ
ಬಸಕ್ಕ	ಬಸಮ್ಮ	ಬಸಕ್ಕ/ತ್ತ	ಬಸಿ
ಕಮಲಮ್ಮ	ಕಮಲವ್ವ	ಕಮಲಕ್ಕ/ತ್ತ	ಕಮಲಿ
ಬೂತಕ್ಕ	ಬೂತವ್ವ/ಬೂತಿ	ಬೂತಕ್ಕ/ತ್ತ	ಬೂತಿ
ಆಂಜನೇಯ	ಆಂಜಿನೇಯ	ಅಂಜಿಣ್ಣ/ನ್ನ	ಅಂಜಿ/ಅಂಜಿನಿ
ಗಂಗಾಧರ	ಗಂಗಾ/ಗಂಗಾಧರ	ಗಂಗಣ್ಣ/ನ್ನ	ಗಂಗಾ, ಗಂಗೂ
ನಾರಾಯಣ	ನಾರಾಣಿ/ನಾರಾಯಣ	ನಾರಾಯಣ್ಣ/ನ್ನ	ನಾರಾಣಿ
ಶಿವಣ್ಣ	ಸಿವ್ಗ, ಸಿವಣ್ಣ	ಸಿವಣ್ಣಮಾಮ	ಸಿವು
ಬೋರಯ್ಯ	ಬೋರ್ಗ/ಬೋರಯ್ಯ	ಬೋರಣ್ಣ/ನ್ನ	ಬೋರ
ಅನಿತ	ಅನಿತಮ್ಮ	ಅನಿತಕ್ಕ	ಅನಿ
ಸುನಿತ	ಸುನಿತಮ್ಮ	ಸುನಿತಕ್ಕ	ಸುನಿ
ಪವಿತ್ರ	ಪವಿತ್ರಮ್ಮ	ಪವಿತ್ರಕ್ಕ	ಪವಿ
ಮಂಜುನಾಥ	ಮಂಜು/ಮಂಜುನಾಥ	ಮಂಜಣ್ಣ	ಮಂಜ

ಮೇಲಿನ ಪಟ್ಟಿಯ ಹೆಸರುಗಳನ್ನು ಗಮನಿದಾಗ, ಸಾಮಾನ್ಯವಾಗಿ ಕೊರಚರಲ್ಲಿಯೂ ಸಹ ಒಂದು ಹೆಸರು ಬೇರೆ ಬೇರೆ ವಯೋಮಾನದ ವ್ಯಕ್ತಿಗಳಿಂದ ಯಾವ ರೀತಿ ಬಳಸಲ್ಪಡುತ್ತದೆ ಎಂಬುದು ತಿಳಿಯುತ್ತದೆ. ಹಿರಿಯ ವಯಸ್ಸಿನವರು ಸಂಬೋಧನೆಯಲ್ಲಿ ಹೆಸರು ಪೂರ್ಣವಾಗಿ ಬಳಕೆಯಾಗುವಂತೆ ಮೊಟಕು ಆಗಿಯೂ ಸಂಬೋಧಿಸಲ್ಪಡುತ್ತದೆ. ಇದು ಹಿರಿಯರು ಕಿರಿಯರನ್ನು ಸಂಬೋಧಿಸುವ ಸಾಮಾನ್ಯ ವಿಧಾನ. ಆದರೆ ಎಲ್ಲಾ ಸಂದರ್ಭದಲ್ಲೂ ಹಿರಿಯರೆಲ್ಲರೂ ಇದೇ ರೀತಿ ಸಂಬೋಧಿಸದೆ, ಪ್ರೀತಿ ಜಾಸ್ತಿ ಇದ್ದಲ್ಲಿ ಮುದ್ದು ಹೆಸರು, ಅಡ್ಡ ಹೆಸರಿನಿಂದಲೂ ಸಂಬೋಧಿಸುವ ಸಾಧ್ಯತೆಗಳನ್ನು ಕಾಣಲು ಸಾಧ್ಯ. ಕಿರಿಯ ವಯಸ್ಸಿನವರು ಹಿರಿಯ ವಯಸ್ಸಿನವರನ್ನು ಸಂಬೋಧಿಸುವ ಹೆಸರಿನಿಂದ ಸಂಬೋಧಿಸದೆ, ಗೌರವಸೂಚಕ ಹಾಗೂ ಬಂಧುಸೂಚಕ ಪದಗಳನ್ನು ಅಂಟಿಸಿ, ಸೇರಿಸಿಕೊಂಡು, ಸಂಬೋಧಿಸುವುದು ಕಂಡುಬರುತ್ತದೆ. ಉದಾಹರಣೆಗೆ ಅಣ್ಣ, ಅಕ್ಕ, ಅಮ್ಮ, ಅಪ್ಪ, ಮಾಮ, ಅವ್ವ ಮೊದಲಾದ ಪದಗಳನ್ನು ವ್ಯಕ್ತಿನಾಮಗಳಿಗೆ ಅಂಟಿಸಿ ಸಂಬೋಧಿಸುವುದು ಗೋಚರವಾಗುತ್ತದೆ. ಸ್ನೇಹಿತರು ಹೆಸರಿಡಿದು ಸಂಬೋಧಿಸುವುದೇ ಹೆಚ್ಚು. ಹಾಗೆ ಹೆಚ್ಚು ಸಲುಗೆ ಇದ್ದರೆ ಅಡ್ಡ ಹೆಸರಿನಿಂದ ಕರೆಯುವ ಸಾಧ್ಯತೆಯಿರುತ್ತದೆ. ಇಲ್ಲಿ ಉಲ್ಲೇಖಿಸಿರುವ ಹೆಸರುಗಳು ಮಾಹಿತಿಗಾಗಿ ಮಾತ್ರ ತೆಗೆದುಕೊಳ್ಳಲಾಗಿದೆ. ಹಾಗೂ ಮೂರು ವಯೋಮಾನದವರ ಸಂಬೋಧನೆಯಲ್ಲಿ ನಿರೂಪಿತವಾಗಿರುವ ನಿಯಮಗಳು ಕಡ್ಡಾಯವಾಗಿರದೆ, ಅವು ಸಂಭವನೀಯವಾಗಿರುತ್ತವೆಂದು ಹೇಳಲಾಗುವುದು. ಇಲ್ಲಿ ಕೊರಚರು ವ್ಯವಹಾರಿಕವಾಗಿ ಕನ್ನಡ ಪರಿಸರದಂತೆ ವ್ಯಕ್ತಿನಾಮಗಳನ್ನು ಯಥಾವತ್ತಾಗಿ ಬಳಕೆಯನ್ನು ಮಾಡಿದರು ಕೂಡ ಕೆಲವೊಂದು ವ್ಯಕ್ತಿನಾಮಗಳನ್ನು ಸಂಬೋಧಿಸುವಾಗ ಅಣ್ಣ–ಅನ್ನ, ಅಕ್ಕ–ಅತ್ತ ಮೊದಲಾದ ವಾರ್ಗಿಕ ರೂಪಗಳಾಗಿ ವ್ಯತ್ಯಾಸಗಳು ಕಂಡುಬರುತ್ತವೆ. ಇದಕ್ಕೆ ಕಾರಣ ಇವರ ವಲಸೆ ಪ್ರವೃತ್ತಿಯು ಕಾರಣವಾಗಿರಬಹುದಾಗಿದೆ.

೫.೬. ಮನೆಯ ಹೆಸರುಗಳು

ಕುಟುಂಬ ಅಥವಾ ಒಂದು ಮನೆಯನ್ನು ಇಟ್ಟುಕೊಂಡು ಗುರುತಿಸುವುದಕ್ಕಾಗಿ ಹೆಸರುಗಳನ್ನು ಇಡುವ ಕ್ರಿಯೆಯು ಸಮಾಜದಲ್ಲಿರುವುದನ್ನು ಕಾಣಬಹುದು. ಸಮಾಜದಲ್ಲಿ ಮನೆಯನ್ನು ಒಂದು ಘಟಕವಾಗಿಟ್ಟುಕೊಂಡು ಗುರುತಿಸುವಿಕೆ ವ್ಯಾಪಕವಾಗಿದೆ. ನಾಮವಿಜ್ಞಾನ ಕ್ಷೇತ್ರದಲ್ಲಿ ಸ್ಥಳನಾಮಗಳು, ಗ್ರಾಮನಾಮಗಳು, ವ್ಯಕ್ತಿನಾಮಗಳು, ಕುಟುಂಬನಾಮಗಳು, ಮಹತ್ವದ ಸಮಾಜೋಭಾಷಿಕ ರೂಪಗಳನ್ನು ಹೊಂದಿದ್ದು ಸಾಮಾಜಿಕ ವ್ಯವಹಾರ ಇಲ್ಲಿ ರಚನಾ ದೃಷ್ಟಿಯಿಂದ ಮುಖ್ಯವಾಗುತ್ತದೆ. ಪ್ರಾಚೀನ ಮಾನವ ತನ್ನಲ್ಲಿ ಅಡಗಿರುವ ಭಾವನೆಗಳನ್ನು ಅಭಿವ್ಯಕ್ತಿಪಡಿಸುವ ಸಲುವಾಗಿ ಭಾಷೆಯನ್ನು ಕಂಡುಕೊಂಡ ತರುವಾಯ ತನ್ನ ಉದರ ಪೋಷಣೆಗಾಗಿ ಪ್ರಾಣಿಗಳನ್ನು ಬೇಟೆಯಾಗಿ ಆಹಾರ ಸಂಗ್ರಹಿಸುವುದನ್ನು ಕಲಿತನು. ನಂತರ ಎಷ್ಟೋ ಶತಮಾನಗಳವರೆಗೆ ಅಲೆಮಾರಿಯಾಗಿ ಸಂಚರಿಸುತ್ತ, ತನ್ನ ಬೌದ್ಧಿಕ ಚಿಂತನೆ ಹೆಚ್ಚಾದಂತೆಲ್ಲಾ ಕಾಲಕ್ರಮದಲ್ಲಿ ತನ್ನ ಜೀವನಕ್ಕೆ ಹೊಂದಿಕೆಯಾಗುವಂತ ಪರಿಸರವೊಂದರಲ್ಲಿ ನೆಲೆನಿಂತನು. ಹೀಗೆ ನೆಲೆನಿಂತ ಸ್ಥಳಗಳು ವಸತಿಗಳಾದವು. ಮುಂದೆ ಹಟ್ಟಿಗಳಾಗಿ, ಹಳ್ಳಿಗಳಾದವು. ಹೀಗೆ ಮನೆವಾಸಿಯಾಗಿ ಬದುಕನ್ನು ಸಾಗಿಸುತ್ತಿದ್ದ ಮನುಷ್ಯನ ಸಂತತಿಯು

ಬೆಳೆದಂತೆ ಪ್ರತ್ಯೇಕ ಕುಟುಂಬಗಳಾದವು. ಈ ಕುಟುಂಬಗಳನ್ನು ಗುರುತಿಸಲು ಅವುಗಳಿಗೆ ಹೆಸರನ್ನಿಟ್ಟುಕೊಂಡರು. ಅವೇ ಕುಟುಂಬನಾಮಗಳು ಅಥವಾ ಮನೆ ಹೆಸರುಗಳು.

ಕೊರಚರ ಸಮುದಾಯದಲ್ಲಿ ಗೋತ್ರ ಅಥವಾ ಬಳಿ ಪದ್ಧತಿ ಇದೆ. ಒಂದೊಂದು ಕುಟುಂಬಗಳು ಬೆಳೆದು ದೊಡ್ಡದಾದಾಗ ಕುಟುಂಬದ ಸದಸ್ಯರು ಒಂದೇ ಕಡೆ ನಿಲ್ಲದೆ ಬೇರೆ ಬೇರೆ ಸ್ಥಳಗಳಿಗೆ ವಲಸೆ ಹೋಗುತ್ತಾರೆ. ಈ ರೀತಿಯಾಗಿ ವಲಸೆ ಹೋದ ಕುಟುಂಬಗಳು ಕವಲೊಡೆದು ಬೇರೆ ಬೇರೆ ಕುಟುಂಬಗಳಾಗುತ್ತವೆ. ಹೀಗೆ ಕವಲೊಡೆದ ಕುಟುಂಬಗಳಲ್ಲಿ ಗಂಡು ಹೆಣ್ಣುಗಳಲ್ಲಿ ವಿವಾಹ ನಿಷೇಧವಿದ್ದರೂ ಬೇರೆ ಬೇರೆ ಊರುಗಳಲ್ಲಿ ವಾಸಿಸುವ ಇವರುಗಳು ವೈವಾಹಿಕ ಸಂಬಂಧವನ್ನು ನಡೆಸುವ ಸಲುವಾಗಿಯೇ ಬೇರೆ ಬೇರೆ ಹೆಸರುಗಳನ್ನು ಪಡೆದಿದ್ದಾರೆ. ಮತ್ತು ಹೆಚ್ಚು ಒಂದೇ ರಕ್ತ ಸಂಬಂಧಿಕರಾದುದರಿಂದ ಆ ಸಂಬಂಧವನ್ನು ಗುರುತಿಸುವುದಕ್ಕಾಗಿ ಒಂದೊಂದು ಗೋತ್ರಗಳನ್ನು ಮಾಡಿಕೊಂಡಿದ್ದಾರೆ. ಹೀಗಾಗಿ ಕೊರಚ ಸಮುದಾಯದವರಲ್ಲಿ ಪ್ರಧಾನವಾಗಿ ನಾಲ್ಕು ಗೋತ್ರಗಳಿದ್ದು, ಹಲವಾರು ಉಪಗೋತ್ರ (ಬೆಡಗು)ಗಳು ಇವೆ. ಅವುಗಳಿಗೆ ಬೇರೆ ಬೇರೆ ಹೆಸರುಗಳಿವೆ. ಸಮುದಾಯದಲ್ಲಿ ಪ್ರಧಾನ ಗೋತ್ರಗಳೊಂದಿಗೆ ಹೆಸರುಗಳನ್ನು ಗುರುತಿಸಿಕೊಳ್ಳುವುದು ಇತ್ತೀಚಿನ ಪ್ರವೃತ್ತಿಯಾಗಿದೆ. ಅವು, ಹನುಮಂತಪ್ಪ ಸಾತ್ವಾಡಿ, ಸಾತ್ವಾಡಿ ನಿರಂಜನ, ಮೇನ್ವಡಿ ನಾಗರಾಜ, ಮೇನ್ವಡಿ ನಿಂಗಪ್ಪ, ಕಾವಾಡಿ ರಾಜಣ್ಣ, ಮೆಂಡ್ರಗುತ್ತಿ ಓಂಕಾರಿ ಎಂದು ಕರೆಯುವರು. ಇವರಲ್ಲಿ ವ್ಯಕ್ತಿನಾಮದಿಂದ ಕುಟುಂಬಗಳನ್ನು ಗುರುತಿಸುವುದು ತುಂಬಾ ವಿರಳ ಆದರೆ ಕುಲಗೋತ್ರ ಮುಖಾಂತರ ವ್ಯಕ್ತಿನಾಮಗಳನ್ನು ಗುರುತಿಸುವುದನ್ನು ಇವರಲ್ಲಿ ಮುಖ್ಯವಾಗಿ ಕಾಣಬಹುದು.

ಬೆಡಗುಗಳು	+	**ನಿಜನಾಮ**	=	**ವ್ಯಕ್ತಿನಾಮ**
ನಂಜಪೆಲಾಯ (ಲಂಜ)	+	ನಾಗಪ್ಪ	=	ನಂಜಪೆಲಾ ನಾಗಪ್ಪ
ಗಾಲಾಟೆಯ	+	ದುರುಗಪ್ಪ	=	ಗಾಲಾಟಿ ದುರುಗಪ್ಪ
ಪೋಲಾಯ	+	ಹನುಮಂತಪ್ಪ	=	ಪೋಲಾ ಹನುಮಂತಪ್ಪ
ಮೋಟಾಯ	+	ತಿರುಪತೆಪ್ಪ	=	ಮೋಟಾ ತಿರುಪತೆಪ್ಪ
ಜಟೆಂಗೆಯ	+	ಸುಂಕಪ್ಪ	=	ಜಟೆಂಗಿ ಸುಂಕಪ್ಪ
ಲೋಸಾಯ/ರ	+	ಅಂಜಿನಪ್ಪ	=	ಲೋಸಾರ ಅಂಜಿನಪ್ಪ
ರಾಗಲಾಯ	+	ಮಾಯಪ್ಪ	=	ರಾಗಲ ಮಾಯಪ್ಪ
ಕೋಮಾರೇಯ	+	ವೆಂಕಟೇಶ	=	ಕೋಮಾರ್ಯಾ ವೆಂಕಟೇಶ
ಪನ್ನರಸಾಯ	+	ಅಜ್ಜಪ್ಪ	=	ಪನ್ನರಸ ಅಜ್ಜಪ್ಪ
ವಳಬಾಯ	+	ಮಾರಕ್ಕ	=	ವಳಬಾ ಮಾರಕ್ಕ

ಕಾಂಡ್ರಗುಂಡಾಯ	+	ಹನುಮಕ್ಕ	=	ಕಾಂಡ್ರಗುಂಡ ಹನುಮಕ್ಕ
ಸೌಡಾಯ	+	ತಾಯಪ್ಪ	=	ಸೌಂಡರ ತಾಯಪ್ಪ
ಮುಂಗಾಯ	+	ಗಂಗಪ್ಪ	=	ಮುಂಗ ಗಂಗಪ್ಪ
ಲೋಕ್ಯನಾಯ	+	ಮಲ್ಲಪ್ಪ	=	ಲೋಕ್ಯನೇರ ಮಲ್ಲಪ್ಪ
ಗೊಜ್ಜಾಯ	+	ಯಂಕಣ್ಣ	=	ಗೊಜ್ಜಿಯಂಕಣ್ಣ
ವಜ್ಜಿಗೇರಿ	+	ರಾಮಾಂಜಿನಿ	=	ವಜ್ಜಿಗೇರ್ ರಾಮಾಂಜಿನಿ
ವಳ್ಳಗಾಯ	+	ಕೊಬ್ರಿಗ	=	ವಳ್ಳಗಾಯಿ ಕೊಬ್ರಿಗ
ಕೊಮ್ಮಾಯ	+	ಈರಪ್ಪ	=	ಕೊಮ್ಮ ಈರಪ್ಪ
ಚಿತ್ತೂರಾಯ	+	ಹನುಮಂತ	=	ಚಿತ್ತೂರ ಹನುಮಂತ
ಕೇರುವಾದೆಯ	+	ಪುಟ್ಟಪ್ಪ	=	ಕೇರುವಾದಿ ಪುಟ್ಟಪ್ಪ
ಪರಿಶ್ಯಾಯ	+	ರಾಮಣ್ಣ	=	ಪರಿಸಿ ರಾಮಣ್ಣ
ಗ್ವಾದಾರೇಯ	+	ಗುರ‍್ರಪ್ಪ	=	ಗ್ವಾದ್ಲೇರ ಗುರ‍್ರಪ್ಪ
ಅವಲೇರು	+	ಈಶ್ವರ	=	ಅವಲಿ ಈಶ್ವರ
ಪೆನುಂಡಾಯ	+	ಕಿಷ್ಟಪ್ಪ	=	ಪೆನುಂಡ ಕಿಷ್ಟಪ್ಪ
ನಲಬಾಯಿ	+	ಸತ್ಯಪ್ಪ	=	ನಲಬಾಯ ಸತ್ಯಪ್ಪ
ಪೆರುಮಾಯ	+	ತಿಮ್ಮಪ್ಪ	=	ಪೆರುಮತಿಮ್ಮಪ್ಪ
ಬಿಳಿಮಂಜಾಯ	+	ಅಬ್ಬಣ್ಣ	=	ಬಿಳಿಮಿಂಚಿ ಅಬ್ಬಣ್ಣ
ಪಬ್ರಾಯ	+	ಕರಿಯಪ್ಪ	=	ಪಬ್ರಾ ಕರಿಯಪ್ಪ

ಈ ರೀತಿಯಾಗಿ ಬೆಡಗುಗಳ ಆಧಾರವಾಗಿ ಕೊರಚರಲ್ಲಿ ವ್ಯಕ್ತಿನಾಮಗಳನ್ನು ನೋಡಬಹುದು. ಮತ್ತು ಕೊರಚರ ಸ್ಥಳನಾಮಗಳ ಬಗೆಗೆ ನೋಡುವುದಾದರೆ ಇವರು ಊರುಗಳಿಗಿಂತ ಪ್ರತ್ಯೇಕವಾಗಿಯೇ ದೂರದಲ್ಲಿ ವಾಸ ಮಾಡುವುದರಿಂದಾಗಿ ಇವರನ್ನು ಪ್ರತ್ಯೇಕವಾಗಿ ಜಾತಿಸೂಚಕವಾಗಿ ಕೊರಚರ ಹಟ್ಟಿಯೆಂದು ಕರೆಯುತ್ತಾರೆ. ಮತ್ತು ಇವರ ಬೆಡಗುಗಳ ಹೆಸರುಗಳು ಸಹ ಆಂಧ್ರ ಪ್ರದೇಶದಲ್ಲಿ ಊರುಗಳಂತೆ ಭಾಸವಾಗುತ್ತದೆ. ಏಕೆಂದರೆ ಚಿತ್ತೂರು, ಪೆನುಗೊಂಡ, ಗ್ವಾದ್ಲೇರ್, ಬಿಳಿಮಿಂಚಿ, ರಾಮೇಶ್ವರ ಮುಂತಾದ ಬೆಡಗುಗಳು ಆಂಧ್ರಪ್ರದೇಶದ ಕೆಲ ಪ್ರದೇಶದ ಹೆಸರುಗಳಾಗಿದ್ದಾವೆ. ಈ ಪ್ರದೇಶಗಳಿಂದ ಇವರು ವಲಸೆಯಾಗಿ ಬಂದಿರುವುದರಿಂದಾಗಿ ಇವರಲ್ಲಿ ಅವು ಬೆಡಗುಗಳಾಗಿಯೇ ಉಳಿದಿರುವುದನ್ನು ಗಮನಿಸಲಾಗಿದೆ.

ಮೂಲತಃ ಬುಡಕಟ್ಟು ಸಮುದಾಯವಾದ ಕೊರಚರು ನೆಲೆಸಿರುವಂತಹ ಪರಿಸರಗಳು ಕರ್ನಾಟಕದಾದ್ಯಂತ ಬಹಳ ವಿಶಿಷ್ಟವಾಗಿ ಕಂಡುಬರುತ್ತವೆ. ಇವರು ಮೂಲತಃ ಪಶುಪಾಲನೆಯ ಮುಖಾಂತರ ವಾಸಿಸಲು ಯೋಗ್ಯ ಸಂಪನ್ಮೂಲಗಳು ಇರುವ ಕಡೆ, ಸಾಮಾನ್ಯವಾಗಿ ಕಾಡು, ಕಣಿವೆ, ಬೆಟ್ಟ, ಗುಡ್ಡಗಳಿದ್ದ ಕಡೆಗಳಲ್ಲಿ ವಾಸವಿರುವುದು ಗೋಚರಿಸುತ್ತದೆ. ಕಾಲಾಂತರದಲ್ಲಿ ಅವರು ತಮ್ಮ ವಿಶಿಷ್ಟ ಸಾಂಸ್ಕೃತಿಕ ಪರಂಪರೆಯೊಂದಿಗೆ ಊರುಗಳಿಂದ ದೂರದಲ್ಲಿ ಪ್ರತ್ಯೇಕ ಹಟ್ಟಿಗಳನ್ನು ನಿರ್ಮಿಸಿಕೊಂಡಿರುವುದು ಗೋಚರಿಸುತ್ತದೆ. ಪ್ರತ್ಯೇಕ ಗುಂಪು ಸಮೂಹಗಳಲ್ಲಿ ವಾಸಿಸುವ ಇವರು ಗೊಲ್ಲರು–ಮ್ಯಾಸನಾಯಕ ಮತ್ತು ಇತರೆ ಸಮುದಾಯಗಳಂತೆ ಸಾಂಸ್ಕೃತಿಕ ದೈವ, ನಾಯಕರ ಹೆಸರುಗಳನ್ನೆ ತಮ್ಮ ವಾಸದ ನೆಲೆಗಳಿಗೆ ಇಟ್ಟಿರುವುದು ಕಂಡುಬರುವುದಿಲ್ಲ. ಅದು ಕೇವಲ ಜಾತಿಸೂಚಕವಾಗಿ ಕೊರಚರ ಹಟ್ಟಿಗಳೆಂದೇ ಇದೆ. ಇದರಿಂದ ಅವರ ಗುಂಪು–ಸಮೂಹದ ಬಗೆಗೆ ಇರುವ ಸಂಸ್ಕೃತಿಯ ಪರಂಪರೆಯ ಬಗೆಗೆ ಅಭಿಮಾನ ವ್ಯಕ್ತವಾಗುತ್ತದೆ.

ಕೊರಚರು ವಾಸಿಸುವ ಸ್ಥಳನಾಮಗಳ ಹೆಸರುಗಳು ತಾವು ವಾಸಿಸುವ ಹಟ್ಟಿಯ ಪಕ್ಕದ ಪ್ರತ್ಯೇಕವಾಗಿ ಒಂದೆಡೆ ವಾಸಿಸುತ್ತ ಅವುಗಳಿಗೆ ಬೇರೊಂದು ಹೆಸರನ್ನು ಪಡೆದುಕೊಂಡಿರುವುದು ಕಂಡುಬರುತ್ತದೆ. ಉದಾಹರಣೆ ಗರಗ ಕೊರಚರ ಹಟ್ಟಿ, ಚಿಲಕನಹಟ್ಟಿ ಕೊರಚರ ಹಟ್ಟಿ, ಕುರುಗೋಡು ಕೊರಚರ ಹಟ್ಟಿ, ಶಿವಪುರ ಕೊರಚರ ಹಟ್ಟಿ, ಅಂತಾಪುರ ಕೊರಚರಹಟ್ಟಿ, ತಿಮ್ಮಲಾಪುರ ಕೊರಚರಹಟ್ಟಿ, ಕಲ್ಲಳ್ಳಿ ಕೊರಚರ ಹಟ್ಟಿ, ಗಜಾಪುರ ಕೊರಚರ ಹಟ್ಟಿ, ಗೆದ್ಲಹಟ್ಟಿ ಕೊರಚರಹಟ್ಟಿ, ಅಗಸನಹಳ್ಳಿ ಕೊರಚರ ಹಟ್ಟಿ, ಅಗ್ರಹಾರ ಕೊರಚರಹಟ್ಟಿ, ಆನೆಟ್ಟಿ ಕೊರಚರಹಟ್ಟಿ ಇತ್ಯಾದಿಯಾಗಿ ಇತರೆ ಸಮುದಾಯದವರೊಂದಿಗೆ ಊರುಗಳಲ್ಲಿ ಒಂದು ಓಣಿಯಾಗಿ ಕೊರಚರು ಕಂಡುಬರುತ್ತಾರೆ. ಮತ್ತು ಪ್ರತ್ಯೇಕವಾಗಿಯೂ ಇಂದಿಗೂ ಊರಿಂದ ದೂರವಿದ್ದು ಬದುಕುತ್ತಿರುವ ಹಟ್ಟಿಗಳನ್ನು ನೋಡಬಹುದಾಗಿದೆ. ಮಾರೊಟ್ಲ, ಬತ್ತನಹಳ್ಳಿ, ಕಸಾಪುರ, ಕಸವನಹಳ್ಳಿ, ಮುದುಗಲ್ಲು, ಬಿಕ್ಕಿಕಟ್ಟಿ, ಪವನಪುರ, ಯಲ್ಲಾಪುರ ಬಂದರಕ್ಕಿ ಕ್ಯಾಂಪ್ (೧೧ನೇ ಕ್ರಾಸ್), ಚಿಕ್ಕ ಅಬ್ಬಗೇರಿ, ವನಕಾಲಿ, ಎಸ್‌ಬಿ.ಆರ್. ಕಾಲೋನಿ, ಕುರುಬನಹಳ್ಳಿ, ಇತ್ಯಾದಿಯಾಗಿ ಪ್ರತ್ಯೇಕ ಕೊರಚರ ಹಟ್ಟಿಗಳನ್ನು ನೋಡಬಹುದು.

ಹೀಗೆ ಹೆಸರುಗಳ ಕುರಿತಾದ ಅಧ್ಯಯನ ತುಂಬಾ ಕುತೂಹಲಕಾರಿ ಮಾತ್ರವಲ್ಲದೆ ಅತ್ಯಂತ ಪ್ರಯೋಜನಕಾರಿ ಕ್ಷೇತ್ರವಾಗಿದೆ. ಈ ವ್ಯಕ್ತಿನಾಮಗಳು, ಸ್ಥಳನಾಮಗಳು ಒಂದೊಂದು ಸಮುದಾಯದ ಭಾಷೆಯಲ್ಲಿ ಒಡಲಲ್ಲಿಯ ಸಂಸ್ಕೃತಿಯನ್ನು ಪ್ರತಿನಿಧಿಸುವಂತಹ ಕೆಲಸವನ್ನು ನಿರ್ವಹಿಸುತ್ತವೆ. ಹೀಗಾಗಿ ವ್ಯಕ್ತಿ ಮತ್ತು ಸ್ಥಳನಾಮಗಳು ಭಾಷಾ ವಿಜ್ಞಾನ, ಸಮಾಜಶಾಸ್ತ್ರ, ಇತಿಹಾಸದ ಅಧ್ಯಯನಕಾರರಿಗೆ ಅಧ್ಯಯನ ಮಾಡಲು ಬತ್ತದ ತೊರೆಗಳಾಗಿವೆ. ವ್ಯಕ್ತಿನಾಮಗಳು, ಸ್ಥಳನಾಮಗಳಿಂದ ಸಮುದಾಯದ ಸಾಂಸ್ಕೃತಿಕತೆಯನ್ನು ಅರ್ಥೈಸಿಕೊಳ್ಳುವುದರಿಂದ ಭಾಷೆಯ ಪೂರ್ವದ ಅವಸ್ಥಾಂತರಗಳನ್ನು ಅರಿತಂತಾಗುತ್ತದೆ. ಮತ್ತು ಮನುಷ್ಯನ ಅವಿಭಾಜ್ಯ ಅಂಗವಾಗಿರುವ ವ್ಯಕ್ತಿನಾಮಗಳು ಮೂಲದಿಂದ ಪ್ರಸ್ತುತದವರೆಗೂ ಹಾಗೂ ಮನುಷ್ಯ ನಾಗರಿಕತೆಯ ಕಡೆಗೆ ಸಾಗುತ್ತಿದ್ದಂತೆ ಪ್ರಾಚೀನ ವ್ಯಕ್ತಿನಾಮಗಳು

ಕಣ್ಮರೆಯಾಗಿ ನಾಗರಿಕತೆಗೆ ಹೊಂದಿಕೊಳ್ಳುವವರೆ ಇರುವ ಹೆಸರುಗಳ ಜೊತೆಗೆ ಸಮುದಾಯದ ಉಳಿವಿಕೆಗೆ ಅನ್ವಯವಾಗುವಂತೆ ಹೆಸರುಗಳು ಕಾಲಕಾಲಕ್ಕೆ ಬದಲಾಗುತ್ತಾ ಬಂದಿರುವುದನ್ನು ಕಾಣಬಹುದು. ಒಟ್ಟಾರೆಯಾಗಿ ಹೆಸರುಗಳು ಸಮುದಾಯದ ಸಾಮಾಜಿಕ ಅಧ್ಯಯನಕ್ಕೆ ಪೂರಕ ಆಕರ–ಪರಿಕರಗಳೆಂದು ಪರಿಗಣಿಸಲಾಗುತ್ತದೆ.

೫.೭. ವ್ಯವಹಾರಿಕ ವಲಯ

ಸಮಾಜದಲ್ಲಿ ಪ್ರತಿಯೊಂದು ಸಮುದಾಯವೂ ತನ್ನದೇ ಆದ ಭಾಷೆಯನ್ನು ಹೊಂದಿ, ವ್ಯವಸ್ಥಿತವಾದ ಕ್ರಮವನ್ನು ಹೊಂದಿರುತ್ತದೆ. ಅಂತಹ ಭಾಷಾ ಸಮುದಾಯದಲ್ಲಿ ಭಾಷಿಕರು ಹಲವು ಬಗೆಯ ಸಾಮಾಜಿಕ ಸಂಬಂಧಗಳಿಗೆ ಹೆಣೆದುಕೊಂಡಿರುತ್ತಾರೆ. ಇಂತಹ ಸಾಮಾಜಿಕ ಸಂಬಂಧಗಳಲ್ಲಿ ವ್ಯವಹಾರಿಕ ವಲಯವೂ ಒಂದಾಗಿದೆ. ಕೌಟುಂಬಿಕ ವಲಯದಲ್ಲಿನ ಭಾಷೆ ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ಹರಿದುಬರುತ್ತದೆ. ಆದರೆ ವ್ಯವಹಾರಿಕ ವಲಯದ ಭಾಷೆ ಪರಿಸರಕ್ಕೆ ತಕ್ಕಂತೆ ಬದಲಾವಣೆಯಾಗುತ್ತದೆ. ಕೊರಚ ಸಮುದಾಯದವರು ತಮ್ಮ ಆಪ್ತವಲಯವನ್ನು ಬಿಟ್ಟು ವ್ಯವಹಾರಿಕ ವಲಯಕ್ಕೆ ಹೋದಾಗ ಪ್ರಾದೇಶಿಕ ಭಾಷೆಯಾದ ಕನ್ನಡವನ್ನು ಬಳಸುತ್ತಾರೆ. ಇವರ ವ್ಯವಹಾರಿಕ ವಲಯದ ಕನ್ನಡವನ್ನು ವಿವಿಧ ಆವರಣಗಳಲ್ಲಿ ಬಳಸುವ ಸ್ವರೂಪವನ್ನು ಪ್ರಸ್ತುತ ನಿಬಂಧದಲ್ಲಿ ವಿಶ್ಲೇಷಿಸಲಾಗಿದೆ.

ಇತರೆ ಸಮುದಾಯದ ಜೊತೆ ಭಾಷಿಕರು ಬೆರೆಯುವ ಪ್ರಮಾಣ ಹೆಚ್ಚಾದಂತೆ, ಅವರ ಜೀವನದ ಕ್ಷೇತ್ರಗಳು ಬದಲಾದ ಹಾಗೆ ಭಾಷೆಯಲ್ಲೂ, ವೈಯಕ್ತಿಕವಾಗಿ ಹಾಗೂ ಸಾಮಾಜಿಕವಾಗಿ ಬದಲಾವಣೆಗಳಾಗುತ್ತಿರುತ್ತದೆ. ಭಾಷಿಕನೊಬ್ಬನಲ್ಲಿ ಉಂಟಾಗುವ ಈ ಬದಲಾವಣೆಗಳು ಒಂದು ಭಾಷೆಯಲ್ಲಿ ಮತ್ತೆ ಮತ್ತೆ ಬಳಕೆಯಾದಾಗ ಮತ್ತು ಭಾಷಾ ಸಮುದಾಯವೊಂದು ಈ ಬದಲಾವಣೆಯನ್ನು ಒಪ್ಪಿಕೊಂಡಾಗ ಭಾಷಾ ವ್ಯತ್ಯಾಸಗಳಾಗುತ್ತದೆ. ಒಂದು ಭಾಷಾ ಸಮುದಾಯದಲ್ಲಿ ಎಲ್ಲರಿಂದ ಆದ ವ್ಯತ್ಯಾಸವೇ ಭಾಷಾ ವ್ಯತ್ಯಾಸಕ್ಕೆ ಕಾರಣವಾಗುತ್ತದೆ. ಜಗತ್ತಿನಾದ್ಯಂತ ಈ ಅಲ್ಪಸಂಖ್ಯಾತ, ಆದಿವಾಸಿ ಬುಡಕಟ್ಟು ಸಮುದಾಯದ ಭಾಷಿಕರು ತಮ್ಮ ಮನೆ ಅಥವಾ ಪರಿಸರದಲ್ಲಿ ಬಳಸುವ ಭಾಷೆಯೇ ಬೇರೆ, ಹೊರಗಡೆ ವ್ಯವಹಾರಕ್ಕೆ ಬಳಸುವ ಭಾಷೆಯೇ ಬೇರೆ. ಈ ಅಂಶ ಕೇವಲ ಅಲ್ಪಸಂಖ್ಯಾತ ಭಾಷೆಗಳಿಗಷ್ಟೇ ಅಲ್ಲದೆ ಬಹುಭಾಷಿಕ ಸಮುದಾಯಗಳಿಗೂ, ಕೆಲವು ವಿದ್ಯಾವಂತ ಕುಟುಂಬದ ಕೌಟುಂಬಿಕ ವಲಯಗಳಿಗೂ ಅನ್ವಯಿಸುತ್ತದೆ. ಕರ್ನಾಟಕದಲ್ಲಿ ವಾಸಿಸುವಂತಹ ಕೊರಚ ಜನಾಂಗದವರು ಕೌಟುಂಬಿಕ ವಲಯದಲ್ಲಿ ತಮ್ಮದೇ ಕೊರಚ ಭಾಷೆಯನ್ನು ಬಳಸುತ್ತಾರೆ. ಆದರೆ ವ್ಯವಹಾರಿಕ ವಲಯದಲ್ಲಿ ಕನ್ನಡವನ್ನು ಕಲಿತು ವ್ಯವಹರಿಸುವುದು ಅನಿವಾರ್ಯವಾಗಿದೆ. ಸಾಮಾನ್ಯವಾಗಿ ಭಾಷೆಯು ಗೋಡೆಯಾದಾಗ ಸಂವಹನಕ್ಕೆ ತೊಡಕ್ಕುಂಟಾದಾಗ ಅದಕ್ಕೆ ಪರಿಹಾರವನ್ನು ಕಂಡುಕೊಳ್ಳುತ್ತಾರೆ. ಸಂವಹನದಲ್ಲಿ ತೊಡುಗುವವರಿಗೆ ಅರ್ಥವಾಗುವ ಸಮಾನ ಭಾಷೆಯನ್ನು ಅನುಸರಿಸುವುದು ಇಲ್ಲಿ ಅನಿವಾರ್ಯವಾಗುತ್ತದೆ. ಹೀಗಾಗಿ ಅನೇಕ ಬುಡಕಟ್ಟು ಸಮುದಾಯದವರು ತಮ್ಮ ಮಾತೃಭಾಷೆಯ ಜೊತೆ ತಮ್ಮ ಪರಿಸರದ ಸ್ಥಳೀಯ ಭಾಷೆ ಕಲಿಯುವುದರೊಂದಿಗೆ

ದ್ವಿಭಾಷಿಕ ಸಮುದಾಯಗಳಾಗಿ ಮಾರ್ಪಡುತ್ತವೆ. ವ್ಯವಹಾರಿಕಕ್ಕಾಗಿ ಬೇರೊಂದು ಭಾಷೆಯನ್ನು ಕಲಿತು ಬಳಸುವ ಸಂದರ್ಭದಲ್ಲಿ ಕೊರಚ ಸಮುದಾಯದ ಜನರ ವ್ಯವಹಾರಿಕ ಭಾಷೆಯ ಸ್ವರೂಪ ಮತ್ತು ಅದರ ವೈಶಿಷ್ಟ್ಯವನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

೫.೭.೧. ಕೃಷಿ: ಭಾಷಾ ಬಳಕೆ

ಕೊರಚ ಸಮುದಾಯದವರು ಕೃಷಿಕಾರರಲ್ಲಿ ಆಸ್ತಿಪಾಸ್ತಿಗಳನ್ನು ಹೊಂದಿರುವುದು ಬಹಳ ಕಡಿಮೆ. ಈ ವಲಯಕ್ಕೆ ಇವರು ತುಂಬ ತಡವಾಗಿ ಪ್ರವೇಶ ಆಗಿರುವುದರಿಂದಾಗಿ ಭಾಷಿಕವಾಗಿ ಇಲ್ಲಿ ಬಳಕೆಗೊಳಪಡುವ ಪರಿಕರಗಳು ಕನ್ನಡದಲ್ಲಿಯೇ ಬಳಸಲ್ಪಡುತ್ತಾರೆ. ಆದರೆ ಧಾನ್ಯಗಳಿಗೆ ಸಂಬಂಧಿಸಿದಂತೆ ಭಿನ್ನ ಪದಗಳನ್ನು ಕಾಣಬಹುದಾಗಿದೆ. ಇದಕ್ಕೂ ಪೂರ್ವದಲ್ಲಿ ಇವರು ಅರಣ್ಯದಲ್ಲಿ ದೊರೆಯುವ ಕತ್ತಾಳೆ, ಈಚಲು ಗರಿಗಳಿಂದ ಹಗ್ಗ, ಪೊರಕೆ, ಚಾಪೆ, ಮಾಡಿ ಮಾರಿ ಬಂದ ಹಣದಿಂದ ಜೀವನ ಸಾಗಿಸುತ್ತಿದ್ದರು. ಆದರೆ ಇದರಿಂದ ಜೀವನ ನಿರ್ವಹಣೆ ಆಧುನಿಕತೆಯಿಂದಾಗಿ ಸಾಧ್ಯವಿಲ್ಲವೆಂದಾಗ ನಾಡಿನ ಕಡೆ ಮುಖ ಮಾಡಿ ಅಲ್ಲಿ ಇಲ್ಲಿ ಕೂಲಿನಾಲಿ ಮಾಡಿಕೊಂಡು ಜೀವನ ನಡೆಸುತ್ತ ಕೃಷಿಗೆ ಇತ್ತೀಚಿಗೆ ತೊಡಗಿಕೊಂಡವರಾಗಿದ್ದಾರೆ. ಈ ಸಂದರ್ಭಗಳಲ್ಲಿ ಸಮುದಾಯದವರು ಬಳಸುವ ಭಾಷಾ ಸ್ವರೂಪವನ್ನು ಗಮನಿಸಲಾಗಿದೆ. ಕೃಷಿಯ ಸಂದರ್ಭದಲ್ಲಿ ಬಳಸುವ ಭಾಷಾ ವೈಶಿಷ್ಟ್ಯತೆ ಈ ಮುಂದಿನಂತಿದೆ.

ಶಿಷ್ಟಕನ್ನಡ	ಕೊರಚರ ಭಾಷೆ
ಬೆಳೆ	ಪಂಟ
ನೇಗಿಲು	ಗಳೇವು
ಗದ್ದೆ	ಗದ್ದಿ
ಅಗೆ	ಅಗಿ (ಸಸಿ)
ನೊಗ	ನಗು
ಎಲೆ	ಎಲ
ಈಚು	ಈಸೂ
ಮಳೆ	ಮಗ
ಚಿಗುರು	ಕುಡಿ (ಸಿಗುರು)
ಸಾಲು	ಸಾಲು
ಪಾಸೆ	ಪಾಸಿ
ಸ್ವಾತಿಮಳೆ	ಸ್ವಾತಿಮಗ

ಪೈರು	ಪೈರು
ಹಸಿರು	ಪಸರು
ಕುಂಟೆ	ಕುಂಟಿ
ಕುರಿಗೆ	ಕುರಿಗಿ
ಮಡ್ಕೆ	ಮಡ್ಕಿ
ಗಡೆಕುಂಟೆ	ಗಡೆಕುಂಟಿ
ಕುಳು	ಕುಡು/ಕುಳು
ಜೋಳ	ತಾನಿ
ಮೆಕ್ಕೆಜೋಳ	ನಕ್ಕತಾನಿ
ರಾಗಿ	ಕೆವರು
ನವಣೆ	ಕೊರ್ರ
ತೊಗರಿ	ಕೆಂದ್ಲು
ಬೆಳೆ	ಬ್ಯಾಳ
ಅಲಸಂಧಿ	ಅಲಸೆಂದ್ಲು
ಹೆಸರುಕಾಳು	ಪೆಸಲು
ಸಜ್ಜೆ	ಸಜ್ಜಿ
ಹಲುಕು	ಹಲ್ಕ
ಹೂಟಿಹಗ್ಗ	ಹೂಟಿಕರಗು
ಕಡಾಣಿ	ಕೀಲು
ಗುದ್ದಲಿ	ಗುದ್ಲಿ
ಚೀಲ	ಕಿತ್ತಿ
ಕೆಲಸ	ಪಣಿ
ಜೇನು	ತೇನಿ
ಮಚ್ಚು	ಮಚ್ಚ

ಕಾಲುವೆ	ಕಾಲುವ
ದಿನದವೇತನ	ದಿನಗೂಲಿ
ಗೊಬ್ಬರ	ಗೊಬ್ರ
ದಾನ್ಯ ಒಕ್ಕಣೆ	ಕೆರಸಿ
ಹಗೆವು	ಪಾತರ್

ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಸಂಗತಿಯೆಂದರೆ ಬಹುತೇಕ ನಾಯಕ, ಬೋವಿ ಸಮುದಾಯದವರ ತೆಲುಗು ಭಾಷೆಯನ್ನು ಹೋಲುವಂತೆ ಕೊರಚರ ಭಾಷೆ ಇದೆ. ಕೊರಚರು ಬಳಸುವಲ್ಲಿ ಕನ್ನಡ ಪರಿಸರಕ್ಕಿಂತ ಭಿನ್ನವಾಗಿ, ಜೋಳ–ತಾನಿ, ಮೆಕ್ಕೆಜೋಳ–ನಕ್ಕತಾನಿ, ರಾಗಿ–ಕೆವರು, ನವಣೆ–ಕೊರ್ರ, ಸಜ್ಜೆ–ಸಜ್ಜಿ, ಚೀಲ–ತಿತ್ತಿ, ಕೆಲಸ–ಪಣಿ, ಜೇನು–ತೇನಿ, ಅಲಸಂದಿ–ಅಲಸೆಂದ್ಲು, ತೊಗರಿ–ಕೆಂದ್ಲು ಇತ್ಯಾದಿಯಾಗಿ ನೋಡಬಹುದು. ಉಳಿದಂತೆ ಕೃಷಿಯಲ್ಲಿ ಕನ್ನಡದಂತೆಯೇ ಕೊರಚರು ಬಳಸುವುದನ್ನು ನೋಡಬಹುದು. ಉಳಿದ ಈ ಪದಗಳಲ್ಲಿ ಭಿನ್ನತೆಯು ಕಂಡುಬರಲು ಈ ಪರಿಸರಕ್ಕೆ ಬರುವುದಕ್ಕೆ ಮುಂಚೆಯೇ ಇವುಗಳನ್ನು ತಮ್ಮ ದಿನನಿತ್ಯದ ಆಹಾರವಾಗಿ ಬಳಸುತ್ತಿದ್ದರಿಂದಾಗಿ, ಇವುಗಳಲ್ಲಿ ಕನ್ನಡಕ್ಕಿಂತ ಬೇರೆಯಾಗಿ ಪದಗಳನ್ನು ಬಳಸಿರುವುದನ್ನು ನೋಡಬಹುದಾಗಿದೆ.

೫.೭.೨. ಆಸ್ಪತ್ರೆ: ಭಾಷಾಬಳಕೆ

ಕೊರಚ ಸಮುದಾಯದವರು ಸಮಾಜದ ಎಲ್ಲ ಸಮುದಾಯದವರು ಅಂತೆಯೇ ರೋಗ ರುಜಿನಗಳು ಬಂದಾಗ ಆರೋಗ್ಯ ಧಾಮಗಳಿಗೆ (ದವಾಖಾನೆ) ಹೋಗುತ್ತಾರೆ. ಇಲ್ಲಿ ಬಳಕೆಯಾಗುವ ಭಾಷೆ ಭಿನ್ನತೆಯಿಂದ ಕೂಡಿರುವುದಲ್ಲದೆ ಈ ವಲಯವು ತನ್ನದೇ ಆದ ಪದಕೋಶವನ್ನು ಹೊಂದಿರುತ್ತದೆ. ಹಾಗೂ ಹೆಚ್ಚಾಗಿ ಅನ್ಯದೇಶಿ ಪದಗಳು ಇಲ್ಲಿನ ಭಾಷೆಯಲ್ಲಿ ಬಳಕೆಯಾಗುವುದನ್ನು ಇತ್ತೀಚಿಗೆ ನೋಡುತ್ತೇವೆ. ಆದರೆ ಕೊರಚ ಬುಡಕಟ್ಟು ಜನರು ವಾಸಸ್ಥಾನಗಳಲ್ಲಿ ಆಸ್ಪತ್ರೆಗಳು ಉದ್ಭವವಾಗುವುದಕ್ಕೆ ಮುಂಚೆ ಆಯಾ ಗ್ರಾಮದಲ್ಲಿ ನಾಟಿ ವೈದ್ಯರು ಇರುತ್ತಿದ್ದರು. ಕಾಯಿಲೆಗಳಿಗೆ ಗಿಡಮೂಲಿಕೆಗಳ ಮೂಲಕ ಔಷಧಿ ನೀಡುತ್ತಿದ್ದರು. ಜ್ವರ, ಕೆಮ್ಮು, ಶೀತ ಇತ್ಯಾದಿ ಕಾಯಿಲೆಗಳಿಗೆ ಸಂಬಂಧಪಟ್ಟ ರೋಗಗಳಿಗೆ ಹಟ್ಟಿಯಲ್ಲಿಯೇ ಚಿಕಿತ್ಸೆಯನ್ನು ನೀಡಲಾಗುತ್ತಿತ್ತು. ಆದರೆ ಈ ಆಧುನೀಕರಣದಿಂದಾಗಿ ನಾಡಿನ ಜನರಂತೆ ಇವರು ಸಹ ಇತ್ತೀಚಿಗೆ ಆಸ್ಪತ್ರೆಗಳಿಗೆ ಹೋಗಿ ಚಿಕಿತ್ಸೆ ಪಡೆಯುವುದು ಸಾಮಾನ್ಯವಾಗಿದೆ. ಆದ್ದರಿಂದಾಗಿ ಇವರ ಭಾಷೆಯ ಬಳಕೆಯಲ್ಲಿ ವ್ಯತ್ಯಾಸಗಳಾಗಿರುವುದನ್ನು ನೋಡಬಹುದಾಗಿದೆ. ಆಸ್ಪತ್ರೆಯಂತಹ ವ್ಯವಹಾರಿಕ ವಲಯದಲ್ಲಿ ಕೊರಚ ಭಾಷಾ ಬಳಕೆಯನ್ನು ಇಲ್ಲಿ ನೋಡಲಾಗಿದೆ. ಉದಾ.

ಕನ್ನಡ	ಕೊರಚರ ಭಾಷೆ
ಡಾಕ್ಟರ್	ಡಾಕರು
ಆಸ್ಪತ್ರೆ	ಆಸ್ಪತ್ರಿ
ಸೂಜಿ	ಸೂದಿ
ಕೆಮ್ಮು	ದಗ್ಗು
ಹೆರಿಗೆ	ಕಾನಪು
ನೆಗಡಿ	ಪಡಸಿ
ಔಷಧಿ	ಮೆರ್ದು
ನೋವು	ನೆಪ್ಪಿ
ಹೆರಿಗೆ ನೋವು	ಕಾನಪುನೆಪ್ಪಿ
ಹೊಟ್ಟೆನೋವು	ವರಗುನೆಪ್ಪಿ
ತಲೆನೋವು	ತಲಕಾಯಿನೆಪ್ಪಿ
ಮೊಣಕಾಲುನೋವು	ಮೊಕಾಲುನೆಪ್ಪಿ
ಗುಳಿಗೆ	ಗುಳಿಗಿ
ನರ್ಸ್	ನರಸು
ವಾಂತಿ	ವಾಂತಿ
ಬೇಧಿ	ಬೇಧಿ
ಇಂಜಕ್ಷನ್	ಸೂದಿ
ಅಸ್ತಮ	ಅಸ್ತಮ
ಡೆಂಗೂ	ಡೆಂಗು
ಕುಷ್ಟರೋಗ	ಕುಷ್ಠರೋಗ
ಬಿಲ್ಲು	ಬಿಲ್ಲು
ರೋಗ	ರೋಗ
ಜ್ವರ	ಜರು

ಸ್ಕ್ಯಾನ್	ಸ್ಕಾನ್
ಎಕ್ಸರೇ	ಎಕ್ಸರೇ

ಕೊರಚರಲ್ಲಿ ಇತ್ತೀಚಿನ ದಿನಗಳಲ್ಲಿ ವಿದ್ಯಾವಂತರ ಸಂಖ್ಯೆ ಹೆಚ್ಚಾದಂತೆ ಇವರ ಸೂಚನೆಯ ಮೇರೆಗೆ ಭಾಷೆಯಲ್ಲಿ ವ್ಯತ್ಯಾಸ ಕಂಡುಬಂದರೆ ತಕ್ಷಣ ಆಸ್ಪತ್ರೆಗೆ ಹೋಗಿ ವೈದ್ಯರಲ್ಲಿ ಚಿಕಿತ್ಸೆ ಪಡೆಯುತ್ತಾರೆ. ಇಂತಹ ಸಂದರ್ಭದಲ್ಲಿ ಅವರು ವ್ಯವಹಾರಿಕ ಭಾಷೆಯನ್ನು ಬಳಸುತ್ತಾರೆ. ಇಲ್ಲಿ ಬಳಕೆಯಾಗುವ ಭಾಷೆಯು ಕೊರಚರ (ಕುಳುವಾತ) ಭಾಷೆಗಿಂತ ಭಿನ್ನವಾಗಿ ಅನ್ಯದೇಶಿ ಪದಗಳು ಬಳಕೆಯಾಗುತ್ತದೆ. ಹೀಗಾಗಿ ಈ ಸಮುದಾಯದವರು ಆಸ್ಪತ್ರೆಗಳಿಗೆ ಹೋದಾಗ ಬಳಕೆಯಾಗುವಂತಹ ಭಾಷೆ ಶಿಷ್ಟವಾಗುತ್ತದೆ. ಮತ್ತು ಇಂಗ್ಲಿಷ್ ಪದಗಳ ಬಳಕೆಯು ಹೆಚ್ಚಾಗಿ ಬಳಕೆಯಾಗುತ್ತದೆ. ಕಾರಣ ಬರುವಂತಹ ಆಸ್ಪತ್ರೆಯ ಪರಿಕರಗಳು ಹೆಚ್ಚಾಗಿ ಇಂಗ್ಲಿಷಿನಲ್ಲಿಯೇ ಇರುವುದರಿಂದಾಗಿಯೇ ಇತರ ಸಮುದಾಯಗಳಲ್ಲಿ ಬಳಕೆಯಾಗುವಂತೆ ಕೊರಚರಲ್ಲಿಯೂ ಕೂಡ ಈ ಭಾಷಿಕಾಂಶಗಳು ಕಂಡುಬರುತ್ತವೆ. ಹಾಗೆ ಇವರ ಭಾಷಾ ಬಳಕೆಯಲ್ಲಿ ಕಾಯಿಲೆಗಳಲ್ಲಿ ಕೆಲವು ತೆಲುಗು ಪದಗಳಂತೆ ಕನ್ನಡದ ಪದಗಳು ಇವೆ. ಆಧುನಿಕತೆಯ ಪರಿಣಾಮವಾಗಿ ಇಂಗ್ಲಿಷ್ ಪದಗಳು ಸೇರಿಕೊಂಡಿವೆ ಎಂಬುದನ್ನು ಗುರುತಿಸಬಹುದಾಗಿದೆ.

೫.೭.೩. ಮಾರುಕಟ್ಟೆ: ಭಾಷಾಬಳಕೆ

ಕೊರಚರ ಮಾರುಕಟ್ಟೆಗೆ ವಸ್ತುಗಳನ್ನು ಮಾರಲು ಖರೀದಿಸಲು ಹೋಗುವಾಗ ಬಳಸುವ ಭಾಷೆ ಮುಖ್ಯವಾಗುತ್ತದೆ. ಸಾಮಾನ್ಯವಾಗಿ ಮಾರುಕಟ್ಟೆಗಳು ಪಟ್ಟಣ ಪ್ರದೇಶದಲ್ಲಿರುತ್ತದೆ. ಇಲ್ಲಿ ಅನೇಕ ಭಾಷಾ ಸಮುದಾಯಗಳು ಸೇರಿದರೂ ಸ್ಥಳೀಯವಾಗಿ ಮಾರುಕಟ್ಟೆಯಲ್ಲಿ ಬಳಸುವ ಭಾಷೆಯನ್ನು ಬಳಸಬೇಕಾಗುತ್ತದೆ. ಕೊರಚರು ವ್ಯವಹಾರಕ್ಕಾಗಿ ಮಾರುಕಟ್ಟೆಗೆ ಬಂದಾಗ ಇಲ್ಲಿನ ಸ್ಥಳೀಯ ಕನ್ನಡವನ್ನು ಕಲಿತು ವ್ಯವಹರಿಸುತ್ತಾರೆ. ಆಹಾರ ಧಾನ್ಯಗಳು, ತರಕಾರಿ, ಹಣ್ಣು ಹಂಪಲು, ಬಟ್ಟೆ-ಬರೆ ಇತ್ಯಾದಿಗಳನ್ನು ಮಾರುಕಟ್ಟೆಯಲ್ಲಿ ಖರೀದಿಸಬೇಕಾಗುತ್ತದೆ. ಸುತ್ತಮುತ್ತಲಿನ ಭಾಷಿಕ ಸಮುದಾಯವು ಅಲ್ಲಿ ವ್ಯವಹಾರಕ್ಕಾಗಿ ಸೇರುವುದರಿಂದ ಪ್ರಮುಖವಾಗಿ ಕನ್ನಡ ಭಾಷೆಯಲ್ಲಿಯೇ ವ್ಯವಹರಿಸಲಾಗುತ್ತದೆ. ಇತರೆ ಭಾಷಿಕರೆಲ್ಲ ಕನ್ನಡದಲ್ಲೇ ವ್ಯವಹರಿಸಬೇಕಾಗುತ್ತದೆ. ಹಾಗೆಯೇ ಕೊರಚರು ಮಾರುಕಟ್ಟೆಗೆ ಬಂದಾಗ ಕನ್ನಡದಲ್ಲೇ ವ್ಯವಹರಿಸುತ್ತಾರೆ. ಸಮಾಜದ ಎಲ್ಲಾ ಸಮುದಾಯದವರು ಈ ಪರಿಸರದಲ್ಲಿ ವ್ಯವಹರಿಸುವುದರಿಂದ ವ್ಯಾಪಾರಿಗಳಿಗೆ ಸಹಜವಾಗಿಯೇ ಅವರ ಭಾಷೆಗಳ ಪರಿಚಯವಿರುತ್ತದೆ. ಉದಾ.

ಕನ್ನಡ	**ಕೊರಚರ ಭಾಷೆ**
ಬೆಲೆ	ರೇಟು
ಎಷ್ಟು	ಎತ್ನೆ

ಹೇಗೆ	ಎನುಗು
ಕಡಿಮೆ	ರೊವ್ವ
ಹೆಚ್ಚು	ಸೆನಾಯಿ
ಪಾಕೆಟ್	ಪಾಕೀಟು
ಬೆಲೆ	ಬೆಲೆ
ತಕ್ಕಡಿ	ತಕ್ಕಡಿ
ಮಧ್ಯವರ್ತಿ	ದಲ್ಲಾಳಿ
ತೂಕು	ತೂಕು
ಖರೀದಿಸು	ಕೊಂಡಗು
ವ್ಯಾಪಾರ	ಯಾಪಾರ
ಸ್ವಲ್ಪೇ	ರೊತ್ನ
ಅಡ್ಡವ್ಯಾಪಾರ	ಅಡ್ಡಯಾಪಾರ
ನಷ್ಟ	ನಷ್ಟ
ಹೊಸದು	ಪುದಿದು
ಭತ್ಯೆ	ಸಂಬಳು
ಅಶೆಯರು	ಪಗನಾದು
ಕಡಿಮೆಬೆಲೆ	ತಕ್ವಬೆಲೆ
ಸಂತೆ	ಸಂತ
ಬಾಡಿಗೆ	ಬಾಡಿಗಿ
ಅಂಗಡಿ	ಅಂಗ್ಡಿ
ಸರಕು	ಸಾಮಾನು
ಲೀಟರು	ಲೀಟ್ರು

ಕೊರಚು ಮಾರುಕಟ್ಟೆಯಲ್ಲಿ ವ್ಯವಹರಿಸುವಾಗ ಭಾಷೆಯನ್ನು ಬಳಸುತ್ತಾರೆ. ಜೊತೆಗೆ ಸ್ಥಳೀಯ ಕನ್ನಡವನ್ನು ಮಾರುಕಟ್ಟೆಯಲ್ಲಿ ಹೆಚ್ಚಾಗಿ ಬಳಸುತ್ತಾರೆ. ಹಾಗೂ ಶಿಷ್ಟ ಭಾಷೆಯ ಪದಗಳು ಹಾಗೂ ಕನ್ನಡದ ಎರವಲು ಪದಗಳನ್ನು ಮಾರುಕಟ್ಟೆಯಲ್ಲಿ ಕೊರಚು ಬಳಸುವುದು ಕಂಡುಬರುತ್ತದೆ.

೫.೭.೪. ಹೋಟೆಲ್: ಭಾಷಾಬಳಕೆ

ಸಾಮಾನ್ಯವಾಗಿ ಹೋಟೆಲ್‌ಗಳು ಒಂದು ರೀತಿಯಲ್ಲಿ ಸಾರ್ವತ್ರಿಕ ಸ್ಥಳಗಳಾಗಿರುತ್ತವೆ. ಇಂತಹ ಸ್ಥಳಗಳಿಗೆ ಅನೇಕ ಸಮುದಾಯದವರು ಬಂದು ಹೋಗುವುದುಂಟು. ಇಲ್ಲಿ ಭಾಷೆಯು ಸರಬರಾಜುದಾರ ಮತ್ತು ಸೇವಿಸುವರ ಮಧ್ಯೆ ನಡೆಯುತ್ತದೆ. ಇಲ್ಲಿ ವ್ಯಕ್ತಿಯ ಮಾತೃಭಾಷೆ ಯಾವುದೇ ಇರಲಿ ಹೋಟೆಲ್‌ಗಳಲ್ಲಿ ಪ್ರಾದೇಶಿಕ ಭಾಷೆಯಲ್ಲಿಯೇ ಸಾರ್ವಜನಿಕರು ವ್ಯವಹರಿಸಬೇಕಾಗುತ್ತದೆ. ಇಲ್ಲಿ ಯಾವುದೇ ರೀತಿಯ ಸಾಮಾಜಿಕ ಬದ್ಧತೆಯಿರುವುದಿಲ್ಲ. ಕಾರಣ ವ್ಯಯ ಮಾಡುವ ಕಾಲದ ಅವಧಿ ಅತ್ಯಂತ ಕಡಿಮೆಯಿರುತ್ತದೆ. ಹೀಗಾಗಿ ಕೊರಚ ಸಮುದಾಯವು ಹೋಟೆಲ್‌ಗೆ ಸಂಬಂಧಿಸಿದಂತೆ ಯಾವ ರೀತಿಯಾಗಿ ವ್ಯವಹಾರಿಕವಾಗಿ ಭಾಷಾ ಬಳಕೆ ಮಾಡುತ್ತಾರೆ ಎಂಬುದನ್ನು ಇಲ್ಲಿ ನೋಡಲಾಗಿದೆ.

ಕನ್ನಡ	**ಕೊರಚರ ಭಾಷೆ**
ಇಡ್ಲಿ	ಇಧ್ಲಿ
ಚಪಾತಿ	ಸೆಪಾತಿ
ಸಾಗು	ಪಲ್ಲೆ
ಪೂರಿ	ಪೂರಿ
ಚಟ್ನಿ	ಉರುಮಿಂಡಿ
ಸಾರು	ಪುಳುಸು
ತಿಳಿಸಾರು	ತಿಳಿಸಾರು
ಅರ್ಧ	ಅರ್ಧ
ತುಂಬ	ಸೇನಾ
ಸಪ್ಲೈಯರ	ಸಪ್ಲೇರು
ಹೋಟೆಲ್	ಹೋಟ್ಲು
ಎಣ್ಣೆ	ಎಣ್ಣ
ಕಾಫಿ	ಕಾಪಿ
ಟೀ	ಟೀ
ಸಸ್ಯಹಾರ	ತರಕಾರಿ (ಸಸ್ಯಹಾರ)
ದೋಸೆ	ದ್ವಾಸಿ

ಪರೋಟ	ಪರೋಟ
ಕುಸ್ಕ	ಕುಸ್ಕ
ಅನ್ನಸಾಂಬಾರ್	ಸೋರು ಪುಳುಸು
ಮುದ್ದೆ	ಕಳಿ
ಅನ್ನ	ಸೋರು
ಮಟನ್	ಕರ್ರಿ (ಆಟಕರ್ರಿ)
ಕೋಳಿ	ಕೊಯಿ
ಈರುಳ್ಳಿ ದೋಸೆ	ಉಲಿಗೆಡ್ಡ ದೋಸೆ
ಆಲುಗಡ್ಡೆ ಸಾಗು	ಉರ್ಲುಗಡ್ಡ ಪಲ್ಲೆ
ಪ್ರತ್ಯೇಕ	ಸಪರೇಟು
ಕಾರ	ಕಾರ
ಗೀರ್‌ರೈಸ್	ಗೀರಾರಾಸ್
ಮಸಾಲ	ಮಸಾಲೆ
ವಡೆ	ವಡಿ
ಟೇಬಲ	ಟೇಬಲ್
ಮಜ್ಜಿಗೆ	ಮಜ್ಜಿಗಿ
ಕುರ್ಚಿ (ಚೇರು)	ಕುರ್ಜಿಗಿ
ಬಿಸಿನೀರು	ಉಡದನ್ನಿ

ಹೀಗೆ ಹೋಟೆಲ್‌ಗಳಲ್ಲಿ ಬಳಕೆಯಾಗುವ ಭಾಷೆ ಕನ್ನಡವಾಗಿರುತ್ತದೆ. ಸಾಮಾನ್ಯವಾಗಿ ಕೊರಚರು ಹೋಟೆಲ್‌ನಲ್ಲಿ ಸ್ಥಳೀಯ ಪ್ರಾದೇಶಿಕ ಕನ್ನಡವನ್ನು ಕಲಿತು ವ್ಯವಹರಿಸುವುದು ಕಂಡುಬರುತ್ತದೆ. ಇವರು ತಮ್ಮದೇ ಆಪ್ತ ಕೌಟುಂಬಿಕ ವಲಯದಲ್ಲಿ ಬಳಸುವ ಭಾಷೆಗಿಂತ ಇದು ಭಿನ್ನವಾಗಿರುತ್ತದೆ.

೫.೭.೫ ಶಾಲಾ, ಕಾಲೇಜ್: ಭಾಷಾಬಳಕೆ

ಕೊರಚರ ಸಮುದಾಯದ ಸಮಸ್ತ ಅಭಿವೃದ್ಧಿಗೆ ಮತ್ತು ಬಹುವಾಗಿ ಭಾಷಾ ಬದಲಾವಣೆಗೆ ಶಿಕ್ಷಣವೇ ಮೂಲ ಮಂತ್ರವೆಂಬುದಾಗಿದೆ. ಶಾಲಾ ಕಾಲೇಜ್‌ಗಳಲ್ಲಿ ಭಾಷೆಯಾಗಿ ಕನ್ನಡವೇ ಬಳಕೆಯಾಗುತ್ತದೆ. ಇಂತಹ ಸಂದರ್ಭದಲ್ಲಿ ಪೋಷಕರು ತಮ್ಮ ತಮ್ಮ ಮಕ್ಕಳನ್ನು ಶಾಲಾ–

ಕಾಲೇಜ್‌ಗೆ ಸೇರಿಸುವ ಸಮಯದಲ್ಲಿ ಮತ್ತು ಮಕ್ಕಳ ಕಲಿಕೆಯ ವಿಚಾರವಾಗಿ ಸಂಬಂಧಿಸಿದಂತೆ ಶಿಕ್ಷಕರು ಮತ್ತು ಆಡಳಿತದೊಂದಿಗೆ ಸಂವಾದಿಸುವಾಗ ಅಥವಾ ವ್ಯವಹರಿಸುವಾಗ ಕನ್ನಡದಲ್ಲಿ ವ್ಯವಹರಿಸಬೇಕಾಗುತ್ತದೆ. ಇಲ್ಲಿ ಶಿಕ್ಷಕರನ್ನು ಗೌರವಸೂಚಕವಾಗಿ ಸಾ, ಸ್ವಾಮಿ, ಸಾರ್, ಮೇಷ್ಟ್ರೆ ಎಂದು ಸಂಬೋಧಿಸುತ್ತಾರೆ. ಉದಾ.

ಸಾರ್ ನಾಳೆ ನಮ್ಮ ಹುಡ್ಗರನ ಸಾಲಿಗಿ ಕಳಸ್ತೀನಿ.

ಪರೀಕ್ಷೆ ಯಾವಾಗ ನಡಿತಾವ್ ಸಾ

ಸ್ವಾಮಿ ಹುಡಗರಿಗೆ ಚಲೋ ಕಲ್ಸರಿ.

ಇಲ್ಲಿ ಕೊರಚರು ಶಿಷ್ಟಭಾಷೆಯ ಮುಖಾಂತರ ಶಿಕ್ಷಣವನ್ನು ಪಡೆಯುತ್ತಿದ್ದರಿಂದಾಗಿ ಇವರ ಭಾಷೆಯು ಶಿಷ್ಟೀಕರಣದ ಕಡೆ ಸಾಗಿದಂತಾಗುತ್ತದೆ. ಹಾಗಾಗಿ ಕೆಲವು ಕೊರಚರು ಬಳಸುವ ಭಾಷೆಯನ್ನು ನೋಡಲಾಗಿದೆ. ಇಲ್ಲಿ ಬಹುತೇಕವಾಗಿ ಕೊರಚರಲ್ಲಿ ಭಾಷಿಕವಾಗಿ ನೋಡುವಾಗ ಕನ್ನಡದ ಭಾಷಿಕಾಂಶಗಳನ್ನು ಕೇವಲ ವ್ಯವಹಾರಿಕವಾಗಿ ಸಂಬೋಧಿಸುವಾಗ ಮಾತ್ರವೇ ಬಳಕೆಯಾಗುವುದನ್ನು ನೋಡಬಹುದು. ಉಳಿದಂತೆ ಪ್ರತಿಯೊಂದು ಶಾಲಾಕಾಲೇಜ್‌ನ ವಿಷಯವಾಗಿ ಬಳಕೆಗೊಳ್ಳುವುದು ಇಂಗ್ಲಿಷ್‌ನ ಪದಗಳ ಬಳಕೆಯಲ್ಲಿಯೇ ಅದು ಕೇವಲ ಕೊರಚ ಸಮುದಾಯದವರೊಂದೇ ಅಲ್ಲದೇ ಅನೇಕ ಇತರೆ ಭಾಷಿಕಾ ಸಮುದಾಯಗಳು ಬಳಸುವುದನ್ನು ಇಲ್ಲಿ ನೋಡಬಹುದು.

ಕನ್ನಡ	**ಕೊರಚರ**	**ಭಾಷೆ**
ಪೆನ್ನು (ಲೇಖನಿ)	ಪೆನ್ನು	
ಪೇಜು	ಪೇಜು	
ಬುಕ್ (ಪುಸ್ತಕ)	ಬುಕ್	
ಮ್ಯಾಂಡರ್	ಮೆಂಡರ್	
ಮುಖ್ಯೋಪಾಧ್ಯಾಯರು	ಹೆಡ್‌ಮೇಷ್ಟ್ರು	
ರಬ್ಬರ್	ರಬ್ಬರು	
ಹಾಜರಾತಿ	ಹಾಜರಿ	
ಪೆನ್ಸಿಲ್	ಸೀಸಕಡ್ಡಿ	
ಬಳಪ	ಪೇಣಿ	
ರಜೆ	ರಜ	

ತರಗತಿ	ತರಗತಿ
ಮನೆಗೆಲಸ	ಹೋಮ್‌ವರ್ಕ್
ಬೆಲ್ಟ್	ಬೆಲ್ಟು
ಮೇಷ್ಟ್ರು	ಮೇಷ್ಟ್ರು
ಶೂ	ಬೂಟು
ಶಿಕ್ಷಕಿ	ಟೀಚರು
ಶಿಕ್ಷಕ	ಮೇಷ್ಟ್ರು
ಪ್ರವೇಶ	ಅಡಮಿಷನ್
ಪೇಪರು	ಹಾಳೆ
ಶಾಲೆ	ಸಾಲಿ
ಪರೀಕ್ಷೆ	ಪರೀಕ್ಷೆ
ದಂಡ	ದಂಡ
ಅಂಕ	ಮಾರ್ಕ್ಸ್
ಗಂಟೆ	ಗಂಟಿ
ಛೇರು	ಕುರ್ಜಿ
ಫಲಿತಾಂಶ	ರಿಜಲ್ಟ್
ಕಾಂಪೋಂಡು	ಕಂಪೊಂಡು
ಪ್ರಥಮ ದರ್ಜೆ	ಫಸ್ಟ್‌ಕ್ಲಾಸ್
ಅನುತ್ತೀರ್ಣ	ಪೇಲು
ದೈಹಿಕ ಶಿಕ್ಷಕ	ಡ್ರಿಲ್ ಮೇಷ್ಟ್ರು
ಪ್ರಾರ್ಥನೆ	ಪ್ರೇಯರ್ ಇತ್ಯಾದಿಯಾಗಿ.

ಕೊರಚ ಸಮುದಾಯದ ಮಕ್ಕಳಿಗೆ ಶಿಕ್ಷಣ ನೀಡುವಂತಹ ಸಂದರ್ಭದಲ್ಲಿ ಶಿಕ್ಷಕರು ಅನೇಕ ರೀತಿಯಲ್ಲಿ ಭಾಷಿಕ ಸಮಸ್ಯೆಗಳನ್ನು ಎದುರಿಸುತ್ತಾರೆ. ಕಾರಣ ಮಕ್ಕಳಿಗೆ ಪ್ರಾಥಮಿಕ ಹಂತದಲ್ಲಿ ಕಲಿಕಾ ಭಾಷೆ ಅಷ್ಟಾಗಿ ತಿಳಿದಿರುವುದಿಲ್ಲ. ಮತ್ತು ಮೇಷ್ಟ್ರುಗಳಿಗೆ ಆ ಮಕ್ಕಳ ಮಾತೃಭಾಷೆಯ ಬಗೆಗೆ ತಿಳಿದಿರುವುದಿಲ್ಲ. ಅದಕ್ಕಾಗಿಯೇ ಭಾಷಾ ಶಾಸ್ತ್ರಜ್ಞರು ಇಂತಹ ಬುಡಕಟ್ಟು ಸಮುದಾಯಗಳ

ಮಕ್ಕಳ ಕಲಿಕೆಗೆ ಸಂಬಂಧಿಸಿದಂತೆ ಮಾತೃಭಾಷೆಯಲ್ಲಿ ಶಿಕ್ಷಣ ನೀಡಬೇಕಾದ ಅಗತ್ಯವನ್ನು ಒತ್ತಿ ಹೇಳಿದ್ದಾರೆ. ಶಾಲಾ-ಕಾಲೇಜುಗಳ ಕಲಿಕಾ ಮಕ್ಕಳು ಮತ್ತು ಪೋಷಕರಿಗೆ ಒಂದು ಶಿಷ್ಟ ಭಾಷಾ ವಾತಾವರಣವನ್ನು ಸೃಷ್ಟಿಸುತ್ತದೆ. ಹೀಗಾಗಿ ಕೊರಚರ ಸಮುದಾಯವು ವ್ಯವಹಾರಿಕವಾಗಿ ಇಲ್ಲಿ ಕನ್ನಡವನ್ನು ಬಳಸುತ್ತಾರೆ. ಹಾಗೆಯೇ ಕಲಿಕಾಮಕ್ಕಳು ಶಾಲಾ ಕಾಲೇಜುಗಳ ಹಂತದಲ್ಲಿ ಶಿಕ್ಷಕರ ಜೊತೆ ವ್ಯವಹರಿಸುವಾಗ ಸಾ, ಸಾರ್, ಮೇಷ್ಟ್ರೇ ಇತ್ಯಾದಿ ಗೌರವಸೂಚಕ ಪದಗಳಿಂದ ಸಂಬೋಧಿಸುತ್ತಾರೆ. ಇದು ಅವರ ಭಾಷಾ ವೈವಿಧ್ಯತೆಗಳಿಗೆ ಕಾರಣವಾಗುತ್ತದೆ.

ಅಲ್ಲದೆ ಇತರೆ ಸಾರ್ವಜನಿಕ ವಲಯಗಳಾದ ದೇವಸ್ಥಾನ, ಕಛೇರಿ, ಬಸ್ ನಿಲ್ದಾಣ, ಗೆಳೆಯರ ಗುಂಪು ಇತ್ಯಾದಿ ಸ್ಥಳಗಳಲ್ಲಿ ಕನ್ನಡ ಪ್ರಮುಖ ಭಾಷೆಯಾಗಿ ಬಳಕೆಯಾಗುತ್ತದೆ. ಇವರು ತಮ್ಮ ತಮ್ಮ ಸಮುದಾಯದ ಸಾಂಸ್ಕೃತಿಕ ಕೇಂದ್ರಗಳಿಗೆ ಹೋದಾಗ ಅವರು ಮಾತೃಭಾಷೆಯಲ್ಲಿಯೇ ವ್ಯವಹರಿಸುತ್ತಾರೆ. ಹಾಗೆಯೇ ಇತರೆ ಸಮುದಾಯಗಳ ಸಾಂಸ್ಕೃತಿಕ ಕೇಂದ್ರಗಳಿಗೆ ಹೋದಲ್ಲಿ ಕನ್ನಡದಲ್ಲಿಯೇ ವ್ಯವಹರಿಸುತ್ತಾರೆ. ಇವರು ಬ್ಯಾಂಕು, ತಾಲೂಕು, ಕಚೇರಿಗಳು, ಆಸ್ತಿ-ಪಾಸ್ತಿಗಳು, ಸರಕು ಸಾಮಾನುಗಳ ಕೊಳ್ಳುವಿಕೆಯ ಸಂದರ್ಭದಲ್ಲಿ, ನೋಂದಣಿ ಮಾಡುವ ಕಚೇರಿಗಳಲ್ಲಿ ಪ್ರಮುಖವಾಗಿ ಕನ್ನಡದಲ್ಲಿಯೇ ವ್ಯವಹರಿಸಲು ಪ್ರಯತ್ನಿಸುತ್ತಾರೆ.

೫.೮. ಸಂಬೋಧನಾ ರೂಪಗಳು

ಭಾಷಾ ಸಮುದಾಯಗಳಲ್ಲಿ ಸಾಂಸ್ಕೃತಿಕ ವಿನ್ಯಾಸಗಳನ್ನು ತಿಳಿದುಕೊಳ್ಳುವಲ್ಲಿ ಸಂಬೋಧನಾ ರೂಪಗಳು ಮಹತ್ವದ ಪಾತ್ರವಹಿಸುತ್ತದೆ. ಕೊರಚರು ಕೌಟುಂಬಿಕ ವಲಯದಲ್ಲಿ ತಮ್ಮ ಮಾತೃಭಾಷೆಯಲ್ಲಿಯೇ ಸಂಬಂಧವಾಚಕಗಳು ಕುಟುಂಬದ ಸದಸ್ಯರ, ಅವಳಿ ಸಂಬಂಧಗಳನ್ನಾಧರಿಸಿ ಸಂಬೋಧನಾ ರೂಪಗಳು ಬಳಕೆಯಾದರೆ ವ್ಯವಹಾರಿಕ ವಲಯದಲ್ಲಿ ಸಮಾಜದ ಜಾತಿ, ಲಿಂಗ, ವರ್ಗ, ವಯಸ್ಸನ್ನಾಧರಿಸಿ ಸಂಬೋಧನಾ ರೂಪಗಳು ಬಳಕೆಯಾಗುತ್ತವೆ. ಸಾಮಾನ್ಯವಾಗಿ ವ್ಯವಹಾರಿಕ ವಲಯದಲ್ಲಿ ಇತರರೊಂದಿಗೆ ಮಾತನಾಡುವಂತಹ ಸಂದರ್ಭದಲ್ಲಿ ಪ್ರಾದೇಶಿಕ ಭಾಷೆಯ ಗೌರವಸೂಚಕ ಸಂಬೋಧನಾ ರೂಪಗಳನ್ನು ಬಳಸುತ್ತಾರೆ. ಇಲ್ಲಿ ಅಧ್ಯಯನ ದೃಷ್ಟಿಯಿಂದ ಸಂಬೋಧನಾ ರೂಪಗಳನ್ನು ಎರಡು ರೀತಿಯಲ್ಲಿ ವಿಂಗಡಿಸಿಕೊಳ್ಳಲಾಗಿದೆ.

೧. ಮೇಲ್ವರ್ಗದವರೊಡನೆ ಸಂಬೋಧಿಸುವ ರೀತಿ.

೨. ಅಧಿಕಾರಿಗಳೊಂದಿಗೆ ಸಂಬೋಧಿಸುವ ರೀತಿ.

೧. ಮೇಲ್ವರ್ಗದವರೊಡನೆ ಸಂಬೋಧಿಸುವ ರೀತಿ.

ಸಮಾಜದಲ್ಲಿ ಒಂದು ಭಾಷೆಯು ಎಲ್ಲಾ ಜನಾಂಗಗಲ್ಲಿ ಒಂದೇ ರೀತಿಯಲ್ಲಿ ಬಳಕೆಯಾಗುವುದಿಲ್ಲ. ಅದು ಅನೇಕ ಸ್ಥರಗಳಿರುವುದರಿಂದಾಗಿ ಭಾಷಾಬಳಕೆಯಲ್ಲಿ ಬೇರೆಯವರಿಗಿಂತ ಭಿನ್ನವಾದ ಸ್ಥಾನಮಾನ ಹೊಂದಿದ ವ್ಯಕ್ತಿಗಳು ಅಥವಾ ಜನಸಮೂಹ ಇದ್ದೇ ಇರುತ್ತದೆ. ಈ ಬದಲಾವಣೆಯು ಸಮುದಾಯಗಳ ಮಧ್ಯ ಮಾತ್ರವಲ್ಲ, ವ್ಯಕ್ತಿ ಮತ್ತು ಪ್ರದೇಶಗಳ ನಡುವೆಯೂ ವ್ಯತ್ಯಾಸಗಳನ್ನು ಕಾಣಬಹುದಾಗಿದೆ.

ಹಾಗೆಯೇ ಸಾಮಾಜಿಕ ಸ್ಥಾನಮಾನವನ್ನು ಅನುಲಕ್ಷಿಸಿ ಭಾಷಾ ಬಳಕೆಯಲ್ಲಿ ಏಣಿ–ಶ್ರೇಣಿ ವ್ಯವಸ್ಥೆಯು ಎಲ್ಲಾ ಸಮುದಾಯದಲ್ಲಿದೆ. ಮೇಲ್ವರ್ಗದ ಹಿರಿಯ–ಕಿರಿಯರನ್ನು ಕೆಳವರ್ಗದ ಹಿರಿಯ–ಕಿರಿಯರು ಗೌರವದಿಂದ ಸಂಬೋಧಿಸುತ್ತಾರೆ. ಆದರೆ ಮೇಲ್ವರ್ಗದ ಹಿರಿಯರು ಕಿರಿಯರು ಕೆಳವರ್ಗದ ಹಿರಿಯ ಕಿರಿಯರನ್ನು ಏಕವಚನದಿಂದ ಕರೆಯುವುದುಂಟು. ಕೊರಚರ ವ್ಯಕ್ತಿ ಮೇಲ್ವರ್ಗದ ವ್ಯಕ್ತಿಯೊಂದಿಗೆ ನಡೆಸುವ ಸಂಭಾಷಣೆಯ ಮಾದರಿಯನ್ನು ಚರ್ಚಿಸಲಾಗಿದೆ. ಉದಾ.

ಕೊರಚರ ವ್ಯಕ್ತಿ– ದಣಿ ನಾಳಿಂದ ನಾ ನಿಮ್ಮೊಲಕೆ ಕೆಲಸಕ ಬರತೀನಿ.

ಮೇಲ್ವರ್ಗದ ವ್ಯಕ್ತಿ – ಸರಿ ಬಾರಪ್ಪ

ಕೊರಚರ ವ್ಯಕ್ತಿ – ಸಾಹುಕಾರರೇ ಸ್ವಲ್ಪ ರೊಕ್ಕ ಬೇಕಿತ್ತು.

ಮೇಲ್ವರ್ಗದ ವ್ಯಕ್ತಿ – ಯಾಕ ಲೇ ಕಪ್ಪತ್ತ (ಕಪ್ಪತಪ್ಪ)

ಕೊರಚರ ವ್ಯಕ್ತಿ – ನಮ್ಮಾಕಿಗೆ ಜರ ಬಂದೈತಿರೀ ಆಸ್ಪತ್ರಿಗೆ ಹೋಗಬೇಕು.

ಮೇಲ್ವರ್ಗದ ವ್ಯಕ್ತಿ – ಎಷ್ಟು ಬೇಕಾಗಿತ್ತು, ಯಾವಾಗ ಕೊಡುತ್ತೀಯಾ

ಕೊರಚರ ವ್ಯಕ್ತಿ – ಐದು ನೂರು ರೂಪಾಯಿ, ಒಂದು ವಾರ ಬಿಟ್ಟು ಕೊಡುತ್ತೀನಿ.

ಈ ಸಂಭಾಷಣೆಯನ್ನು ಗಮನಿಸಿದಾಗ ಕೊರಚರು ಮೇಲ್ವರ್ಗದ ಜನರನ್ನು ಬಹುವಚನದಿಂದ ಧಣಿ, ಸಾಹುಕಾರರೇ ಎಂದು ಸಂಬೋಧಿಸಿದರೆ, ಮೇಲ್ವರ್ಗದ ವ್ಯಕ್ತಿ ಕೊರಚರನ್ನು ಏಕವಚನದಿಂದಲೇ ಸಂಬೋಧಿಸುವುದು ಕರೆಯುವುದು ತಿಳಿಯುತ್ತದೆ. ಏನಲೇ, ಯಾಕ, ಬಾರಲೇ, ಹೋಗಲೇ ಇತ್ಯಾದಿಯಾಗಿ ಸಂಬೋಧಿಸುವುದು ಕಾಣಬರುತ್ತದೆ. ಆದರೆ ಪ್ರಸ್ತುತ ಸಮಾಜದಲ್ಲಿ ಅಕ್ಷರ ಕಲಿತ ಕೆಳವರ್ಗದ ವ್ಯಕ್ತಿಗಳನ್ನು ಮೇಲ್ವರ್ಗದವರು ತೀರಾ ಗೌರವಯುತವಾಗಿ ಸಂಬೋಧಿಸದಿದ್ದರು ಬಾರಪ್ಪ, ಕೂಡಪ, ಏನಪ್ಪ ಎಂದು ಸಂಬೋಧಿಸುವುದು ಸಹ ಕಂಡುಬರುತ್ತದೆ.

೨. ಅಧಿಕಾರಿಗಳೊಂದಿಗೆ ಸಂಬೋಧಿಸುವ ರೀತಿ

ವ್ಯವಹಾರಿಕ ವಲಯದಲ್ಲಿ ಕೆಲವೊಮ್ಮೆ ವ್ಯಕ್ತಿಗಳು ಸಾರ್ವಜನಿಕ ಸ್ಥಳಗಳಾದ ಕಚೇರಿ, ನ್ಯಾಯಾಲಯ, ಆಸ್ಪತ್ರೆ, ಬ್ಯಾಂಕು, ಶಾಲಾ ಕಾಲೇಜುಗಳಲ್ಲಿ ಅಧಿಕಾರ ಅಥವಾ ಸಾಮಾಜಿಕ ಸ್ಥಾನಮಾನವೇ ಗೌರವ ಸಂಬೋಧನೆಯನ್ನು ಪಡೆಯುತ್ತದೆ. ಸಾಮಾನ್ಯವಾಗಿ ಎಲ್ಲಾ ವರ್ಗದ ಜನರು ಅಧಿಕಾರಿಗಳಿಗೆ ಗೌರವಸೂಚಕ ಪದಗಳನ್ನು ಬಳಸುವುದು ರೂಢಿಯಲ್ಲಿದೆ. ಆದರೆ ಅಧಿಕಾರದಲ್ಲಿಯ ವ್ಯಕ್ತಿಗಳು ತನಗಿಂತ ಕೆಳದರ್ಜೆಯಲ್ಲಿರುವ ವ್ಯಕ್ತಿಗಳನ್ನು ಮತ್ತು ಸಾಮಾನ್ಯ ವ್ಯಕ್ತಿಗಳನ್ನು ಏಕವಚನ ಅಥವಾ ಹೆಸರಿನಿಂದ ಸಂಬೋಧಿಸುವುದುಂಟು. ಭಾಷೆಯು ಸಹ ಸಾಮಾಜಿಕ ಸ್ತರಗಳ ನಿಯಮಗಳನುಸಾರವಾಗಿ ಬಳಕೆಯಾಗುತ್ತದೆ. ಹೀಗಾಗಿ ಕೊರಚ ಸಮುದಾಯದವರು ಅಧಿಕಾರಿಗಳೊಂದಿಗೆ ವ್ಯವಹರಿಸುವಾಗ ಗೌರವ ಸೂಚಕವಾಗಿ ಸಂಬೋಧಿಸಿ ಮಾತನಾಡುತ್ತಾರೆ. ಕೊರಚ ಸಮುದಾಯದ ಅನಕ್ಷರಸ್ಥರು ಅಧಿಕಾರಿಗಳೊಂದಿಗೆ ವ್ಯವಹರಿಸುವಾಗ ಸ್ವಾಮಿ, ಸಾ, ಸಾಯಬ್ರೇ, ಬುದ್ಧಿ ಮುಂತಾದ ಪದಗಳು

ಗೌರವಸೂಚಕ ಸಂಬೋಧನೆಯಾಗಿ ಬಳಕೆಯಾಗುತ್ತದೆ. ಹಾಗೆಯೇ ಅಕ್ಷರಸ್ಥರಲ್ಲಿ ಸರ್, ಮಿಸ್, ಮೇಡಂ, ಇತ್ಯಾದಿ ಪದಗಳ ಬಳಕೆಯಾಗುತ್ತದೆ. ಉದಾ.

ಅನಕ್ಷರಸ್ಥರು

೧. ಸಾಯಬ್ರೇ ನಮ್ ಊರಿನ್ಯಾಗ ನೀರಿಲ್ಲದ ಬಾಳ ಎಡವಟ್ಟಾಗೈತಿ.

೨. ಸಾ ನಮ್ ದನಗಳ್ಗೆ ಕಾಯ್ಲೆ ಬಂದದೆ ವಸಿ ನೋಡಿ

೩. ಬುದ್ಧಿ ನಮ್ ಹೊಲನ್ನ ರಿಜಿಸ್ಟರ್ ಮಾಡ್ಸಬೇಕಿತ್ತು.

ಅಕ್ಷರಸ್ಥರು

೧. ಸರ್ ನಮ್ಮ ಹಟ್ಟಿಲಿ ನೀರಿನ ತೊಂದರೆ ಬಹಳ ಇದೆ. ಸ್ವಲ್ಪ ನೀರಿನ ವ್ಯವಸ್ಥೆ ಮಾಡಿಕೊಡಿ.

೨. ಮಿಸ್ ನಾಳೆ ಓಮರ್ಕ್ ಮಾಡ್ಕಂಡು ಬರುತ್ತೀನಿ.

೩. ಮೇಡಂ ಮಗನಿಗೆ ಆರಾಮಿಲ್ಲ. ಊರಿಗೆ ಕರಕೊಂಡೋಯಿತೀನಿ.

ಇತ್ಯಾದಿಯಾಗಿ ಕೊರಚ ಸಮುದಾಯದ ಅಕ್ಷರಸ್ಥ ಅನಕ್ಷರಸ್ಥರಲ್ಲಿ ಅಧಿಕಾರಿಗಳೊಂದಿಗೆ ಸಂಬೋಧನೆ ನಡೆಯುತ್ತದೆ. ಇಲ್ಲಿ ಅನಕ್ಷರಸ್ಥರು ಸರ್, ಸಾ, ಸ್ವಾಮಿ, ಬುದ್ಧಿ ಎಂದರೆ ಅಕ್ಷರಸ್ಥರು ಸಾ, ಸರ್, ಮಿಸ್, ಮೇಡಂ, ಇತ್ಯಾದಿಯಾಗಿ ಸಂಬೋಧನೆಯಾಗಿ ಬಳಸುವುದನ್ನು ನೋಡಬಹುದಾಗಿದೆ.

ಅಷ್ಟೇ ಅಲ್ಲದೆ ದೇವಾಲಯದ ಅಥವಾ ಮಠಗಳಲ್ಲಿನ ಧರ್ಮಾಧಿಕಾರಿಗಳನ್ನು ಈ ಸಮುದಾಯದವರು ಸಂಬೋಧಿಸುವಾಗ ಕನ್ನಡದಲ್ಲಿಯೇ ಸ್ವಾಮಿಗಳು, ತಾತನವರು, ಪೂಜಾರಪ್ಪ ಮುಂತಾದ ಪದಗಳನ್ನು ಬಳಸುತ್ತಾರೆ. ಜನರಿಗೆ ಸಾಮಾಜಿಕ ಮೌಲ್ಯಗಳನ್ನು ಮತ್ತು ನೀತಿ ನಿಯಮಗಳನ್ನು ತುಂಬಿ ಸನ್ಮಾರ್ಗದಲ್ಲಿ ನಡೆಯುವಂತೆ ಮಾಡುತ್ತಾರೆಂಬ ಭಾವನೆ, ಭಕ್ತರಲ್ಲಿ ಬೆಳೆದಿರುತ್ತದೆ. ಆದ್ದರಿಂದ ಅವರನ್ನು ಗೌರವಸೂಚಕ ಪದಗಳಿಂದ ಸಂಬೋಧಿಸುತ್ತಾರೆ. ಅದೇ ರೀತಿಯಾಗಿ ಈ ಸಮುದಾಯದವರು ರಾಜಕೀಯ ವ್ಯಕ್ತಿಗಳನ್ನು ಹೆಸರಿನಿಂದ ಕರೆಯುವ ರೂಢಿಯಲ್ಲಿ ಅವರಿಗೆ ಗೌರವಸೂಚಕ ಪದಗಳಾದ ಸರ್, ಸ್ವಾಮಿ, ಸಾಹೇಬರು ಮುಂತಾದ ಪದಗಳಿಂದ ಸಂಬೋಧಿಸುವುದು ತಿಳಿಯುತ್ತದೆ. ಅಪರಿಚಿತ ವ್ಯಕ್ತಿಗಳನ್ನು ಪರಿಚಯ ಮಾಡಿಕೊಳ್ಳುವ ಸಮಯದಲ್ಲಿ ವಯಸ್ಸಿಗೆ ಅನುಗುಣವಾಗಿ ತಾತಾ, ಅವ್ವ ಅಕ್ಕ, ಅಣ್ಣ, ತಂಗಿ, ತಮ್ಮ ಇತ್ಯಾದಿಯಾಗಿ ಪದಗಳಿಂದ ಸಂಬೋಧಿಸುವುದು ಕಾಣಬಹುದು. ಬೇರೆ ಸಮುದಾಯದವರ ಜೊತೆ ಯಾವುದೇ ಕಾರಣದಿಂದ ಜಗಳವಾಡುವಾಗ ಸೂಳೆಮಗನೆ, ನಿನ್ನ ಅಕ್ಕ, ನಿನ್ನ ಎಣ್ತಿ, ನಿನ್ನಮ್ಮನ ಮುಂತಾದ ಅಶ್ಲೀಲ ಪದಗಳಿಂದ ಕನ್ನಡದಲ್ಲಿ ಬೈಯುವುದು ಈ ಸಮುದಾಯದವರಲ್ಲಿ ಕಾಣಬರುತ್ತದೆ.

ಅಧ್ಯಾಯ : ಆರು

ಭಾಷಿಕ ಸಂದರ್ಭ

ಅಧ್ಯಾಯ: ಆರು

ಭಾಷಿಕ ಸಂದರ್ಭ

ಭಾಷೆ ಇಲ್ಲದ ಸಮಾಜವಿಲ್ಲ, ಸಮಾಜ ಇಲ್ಲದ ಭಾಷೆಯಿಲ್ಲ. ಸಮಾಜ ಇಲ್ಲದೆ ಸಂಸ್ಕೃತಿಯಿಲ್ಲ ಎನ್ನುವಂತೆ ಭಾಷೆ, ಸಮಾಜ, ಸಂಸ್ಕೃತಿ ಒಂದಕ್ಕೊಂದು ಆಂತರಿಕ ಸಂಬಂಧವನ್ನು ಹೊಂದಿದೆ. ಸಮಾಜದಲ್ಲಿ ಒಂದು ಸಮುದಾಯದ ಭಾಷೆ ಇನ್ನೊಂದು ಸಮುದಾಯದ ಭಾಷೆಗಿಂತ ಭಿನ್ನವಾಗಿರುವುದನ್ನು ಕಾಣಲು ಸಾಧ್ಯ. ಒಂದೊಂದು ಸಮುದಾಯದವರು ಸಂಸ್ಕೃತಿ, ಆಚರಣೆ, ಸಂಪ್ರದಾಯಗಳನ್ನು ತಮ್ಮದೇ ಆದ ಭಾಷೆಯ ಮೂಲಕ ಉಳಿಸಿಕೊಂಡು ಬಂದಿರುವುದನ್ನು ಕಾಣಬಹುದು. ಹಾಗಾಗಿ ಯಾವುದೇ ಸಮುದಾಯದ ಸಂಸ್ಕೃತಿಯ ಅಧ್ಯಯನ ಮಾಡಬೇಕಾದರೆ ಅದರ ಭಾಷೆಯನ್ನು ಸಂಪೂರ್ಣ ಅರಿತುಕೊಳ್ಳಬೇಕಾಗುತ್ತದೆ. ಕಾರಣ ಸಾಂಸ್ಕೃತಿಕ ವಿವರಗಳು ಆಚಾರ–ವಿಚಾರಗಳು ರೂಢಿಸಂಪ್ರದಾಯಗಳು ಹಾಗೂ ಜೀವನ ಮೌಲ್ಯಗಳು ಆ ಸಮುದಾಯದ ಭಾಷೆಯಲ್ಲಿ ಅಡಕಗೊಂಡಿರುತ್ತವೆ. ಭಾಷೆಯ ಮೂಲಕ ಆಯಾ ಭಾಷಿಕರ ಸಂಸ್ಕೃತಿಯ ಇತಿಹಾಸ, ವಿಚಾರಧಾರೆ ಹಾಗೂ ಸ್ವರೂಪವನ್ನು ತಿಳಿದುಕೊಳ್ಳಬಹುದು. ಭಾಷೆಯು ಮಾನವನ ಎಲ್ಲ ಸಾಂಸ್ಕೃತಿಕ ಚಟುವಟಿಕೆಗಳ ಬುನಾದಿಯಾಗಿದೆ.

ಕರ್ನಾಟಕ ಪರಿಸರದಲ್ಲಿ ವಾಸ ಮಾಡುವ ಕೊರಚರು ಬಳಸುವ ಭಾಷೆ ಇತರೆ ಸಮುದಾಯಗಳಿಗಿಂತ ಭಿನ್ನವಾಗಿದೆ. ಕ್ಷೇತ್ರಕಾರ್ಯದಲ್ಲಿ ದೊರೆತ ಮಾಹಿತಿಯ ಪ್ರಕಾರ ಸಮುದಾಯದ ಒಳ ಆವರಣದಲ್ಲಿ ಕೊರಚ ಭಾಷೆ ಬಳಕೆಯಾದರೂ ಸಹ ಸಂದರ್ಭಕ್ಕೆ ತಕ್ಕಂತೆ ಭಾಷೆಯನ್ನು ಆಯ್ದುಕೊಳ್ಳುವುದು ಕಂಡುಬರುತ್ತದೆ. ವಿದ್ಯಾವಂತರು ಇತರೆ ಸಮುದಾಯದವರೊಂದಿಗೆ ವ್ಯವಹರಿಸುವಾಗ ಸ್ಪಷ್ಟವಾಗಿ ಕನ್ನಡ ಬಳಸುತ್ತಾರೆ. ಆದರೆ ಅನಕ್ಷರಸ್ಥರು, ಹಳೆ ತಲೆಮಾರಿನವರು, ಕೃಷಿಕಾರ್ಮಿಕರು, ಮಹಿಳೆಯರು ಇತರೆ ಸಮುದಾಯದವರೊಂದಿಗೆ ವ್ಯವಹರಿಸುವಾಗ ನುಡಿಬೆರಕೆ, ನುಡಿಪಲ್ಲಟ, ಭಾಷಾಮಿಶ್ರಣ ಪ್ರಕ್ರಿಯೆಗಳು ಕಂಡುಬರುತ್ತದೆ. ಜೊತೆಗೆ ತಮ್ಮ ಸಮುದಾಯದ ಭಾಷಾ ಸಂಗೋಪನೆಯು ಕಂಡುಬರುತ್ತದೆ. ಹಾಗೆಯೇ ಇವರು ಇತರೆ ಸಮುದಾಯದವರೊಂದಿಗೆ (ಉದಾಹರಣೆಗೆ ಲಿಂಗಾಯತ, ಜಂಗಮ, ಬೇಡರು, ಕುರುಬ, ಗೊಲ್ಲ, ಮಾದಿಗರು, ಕುಂಬಾರ ಮೊದಲಾದ ಸಮುದಾಯಗಳು) ಜಗಳ ಅಥವಾ ಘರ್ಷಣೆಯ ಸಂದರ್ಭದಲ್ಲಿ ಮೊದಲು ಕನ್ನಡವನ್ನು ಬಳಸಿದರೂ ಅತೀ ಉದ್ವೇಗ,

ಕೋಪಕ್ಕೊಳಗಾದಾಗ ಕೊರಚ ಸಂಬೋಧನಾರೂಪ ಬಳಸುವುದು ಕಂಡುಬರುತ್ತದೆ. ಮತ್ತು ಸಮಾಜದಲ್ಲಿ ಉನ್ನತ ವರ್ಗದವರೊಂದಿಗೆ ವ್ಯವಹರಿಸುವಾಗ ಗೌರವಯುತವಾದ ಭಾಷೆಯನ್ನು ಬಳಸುತ್ತಾರೆ. ಅಧಿಕಾರಿ ವರ್ಗದವರಿಗೆ, ಶ್ರೀಮಂತರಿಗೆ ಸಾರ್, ಧಣಿ, ಸ್ವಾಮಿ, ಸಾಹುಕಾರ, ಗೌಡ, ರೆಡ್ಡಿ ಎಂದು ಸಂಬೋಧಿಸುವುದು ಕಂಡುಬರುತ್ತದೆ. ಹಾಗೆಯೇ ಕೊರಚ ಸಮುದಾಯದ ಹಳೆ ತಲೆಮಾರಿನವರನ್ನು ಅಪರಿಚಿತರು ಮಾತನಾಡಿಸಿದಾಗ ಮೊದಲು ಪ್ರಾದೇಶಿಕ ಭಾಷೆಯೊಂದಿಗೆ ಮಾತನಾಡಿ ನಂತರ ತಮ್ಮ ಕೊರಚರು ಎಂದು ಗೊತ್ತಾದಾಗ ಕೊರಚ ಭಾಷೆಯೊಂದಿಗೆ ಮಾತನಾಡುವುದು ಕಂಡುಬರುತ್ತದೆ.

೬.೧. ನುಡಿಬೆರಕೆ-ನುಡಿಜಿಗಿತ

ಮನುಷ್ಯ ಸಂಘಜೀವಿ. ಮಾನವನ ಸಾಂಘಿಕ ಜೀವನದ ಫಲದಿಂದಾಗಿಯೇ ಭಾಷೆ ರೂಪಗೊಂಡಿದೆ. ಸಮಾಜದ ಜೀವಿ ಮಾನವನಿಗೆ ಅನ್ಯ ಸಮುದಾಯದೊಂದಿಗಿನ ಸಂಪರ್ಕ ಅಗತ್ಯವೂ ಅನಿವಾರ್ಯವೂ ಆಗಿದೆ. ಆದ್ದರಿಂದ ಸಮಾಜ ಬದಲಾದಂತೆ ಮಾನವನ ಜೀವನಶೈಲಿ ಬದಲಾದಂತೆ ಇತರ ಸಮುದಾಯದೊಂದಿಗೆ ಆತನ ಸಂಪರ್ಕ ಅನಿವಾರ್ಯವಾಗುತ್ತದೆ. ಈ ನಿಟ್ಟಿನಲ್ಲಿ ಅನ್ಯಭಾಷಿಕರೊಂದಿಗೆ ಸಂಪರ್ಕ ಸಾಧಿಸುವ ನಿಟ್ಟಿನಲ್ಲಿ ಆ ಭಾಷೆಯನ್ನು ಕಲಿತು ವ್ಯವಹರಿಸಬೇಕಾದ ಅಗತ್ಯವಿದೆ. ಈ ರೀತಿಯಿಂದಾಗಿ ಯಾವುದೇ ಒಂದು ಭಾಷೆಯ ಮೇಲೆ ಮತ್ತೊಂದು ಭಾಷೆಯ ಪ್ರಭಾವ ಇದ್ದೇ ಇರುತ್ತದೆ. ಈ ನಿಟ್ಟಿನಲ್ಲಿ ಭಾಷೆಯ ಪ್ರಭಾವ ಒಂದೇ ರೀತಿಯಾಗಿರುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ಭಾಷಾ ದೃಷ್ಟಿಯಿಂದ ವ್ಯತ್ಯಾಸವಾಗಬಹುದು. ಆದರೆ ಭಾಷೆಯ ಪ್ರಭಾವ ಒಂದು ಭಾಷೆಯಿಂದ ಮತ್ತೊಂದು ಭಾಷೆಯ ಮೇಲೆ ಸಹಜವಾಗಿಯೇ ಇರುತ್ತದೆ. ಈ ರೀತಿಯ ಭಾಷೆಯ ಪ್ರಭಾವಗಳು ಸ್ವೀಕರಿಸುವ ಭಾಷೆಯ ಸ್ಥಾನಮಾನ ಮತ್ತು ಆಡುಗರ ಮನಸ್ಥಿತಿಯನ್ನು ಅವಲಂಬಿಸಿರುತ್ತದೆ. ಆದರೆ ಅದರ ಛಾಪು ಒಂದೇ ರೀತಿಯಾಗಿರುವುದಿಲ್ಲ. ಅದು ಅಕ್ಷರ, ಪದ, ವಾಕ್ಯಗಳ ರೂಪದಲ್ಲಿರಲೂ ಸಾಧ್ಯ. ಹೀಗಾಗಿ ಒಂದು ಭಾಷೆಯ ಮೇಲೆ ಇನ್ನೊಂದು ಭಾಷೆಯ ಪ್ರಭಾವವನ್ನು ಕುರಿತು ವಿವಿಧ ಆಯಾಮಗಳಲ್ಲಿ ಅಧ್ಯಯನ ಮಾಡುವುದು ಹೆಚ್ಚು ಪ್ರಯೋಜನಕಾರಿಯಾಗಬಲ್ಲದು.

ದ್ವಿಭಾಷಿಕ ಪರಿಸರಗಳಲ್ಲಿ ಒಂದು ಭಾಷೆಯನ್ನು ಮಾತನಾಡುವಾಗ ಮತ್ತೊಂದು ಭಾಷೆಯ ಪದಗಳನ್ನು ನುಡಿಗಟ್ಟುಗಳನ್ನು ಬೆರಸಿ ಮಾತನಾಡುವುದು ಸಾಮಾನ್ಯವಾದ ಪ್ರಕ್ರಿಯೆ. ಈ ರೀತಿ ಮಾತನಾಡುವುದರಿಂದ ಭಾಷೆ ನಾಶವಾಗುತ್ತದೆ ಎಂಬುದು ಕೆಲವರ ಅಭಿಪ್ರಾಯ. ಇದು ಭಾಷೆಯ ಬೆಳವಣಿಗೆಗೆ ಅಡ್ಡಿಯಾಗುತ್ತದೆ ಎಂದು ಹೇಳುವವರು ಇಲ್ಲವೆಂದಲ್ಲ. ಕೆಲವೊಂದು ಸಂದರ್ಭದಲ್ಲಿ ಭಾಷಾ ಬಳಕೆಯಲ್ಲಿ ಇಂಗ್ಲೀಷ್ ಮಾತುಗಳನ್ನು ಉಪಯೋಗಿಸುವುದು ಪಾಂಡಿತ್ಯ ಪ್ರದರ್ಶನವೆಂದೂ ಆಡಂಬರದ ಮಾತುಗಾರಿಕೆಯೆಂದು ಭಾವಿಸುವವರೂ ಇದ್ದಾರೆ. ಈ ರೀತಿಯ ನುಡಿಬೆರಕೆಯ ಬಗ್ಗೆ ಕೀಳರಿಮೆ ಭಾವನೆಗಳು ಮೂಡುತ್ತವೆ. ಆದರೆ ನುಡಿಬೆರಕೆ ಯಾವುದೋ ಅವಿದ್ಯಾವಂತ, ಅಜ್ಞಾನಿಗಳ, ಅಲಕ್ಷಿತ ವರ್ಗಕ್ಕೆ ಸೀಮಿತವಾಗಿಲ್ಲ. ಅದು ದ್ವಿಭಾಷಿಕ ವಲಯದ ಸಮಾಜದ ಎಲ್ಲಾ ಸಮುದಾಯಗಳಲ್ಲಿ

ವಿದ್ಯಾವಂತ, ಅವಿದ್ಯಾವಂತ, ಇತರೆ ಎಲ್ಲ ವರ್ಗಗಳಲ್ಲಿ ಕಾಣಿಸಿಕೊಳ್ಳುತ್ತದೆ. ಇದು ಫ್ಯಾಶನ್ನಿನಂತೆ ಬಂದು ಹೋಗುವ ತಾತ್ಕಾಲಿಕ ಅಲೆಯೂ ಅಲ್ಲ ಅಥವಾ ಒಂದು ಭಾಷೆಗೆ ಸೀಮಿತವಾಗಿರುವುದಿಲ್ಲ. ಭಾಷೆಯಲ್ಲಿ ಬೆರಸಿದ ಭಾಷಾ ತುಣುಕುಗಳು ಕೇವಲ ಇಂಗ್ಲೀಷಿನಿಂದಲೇ ಬಂದವೆಂದೂ ಹೇಳಲಾಗುವುದಿಲ್ಲ. ಈ ರೀತಿಯ ಬೆರಕೆ ಸಂಸ್ಕೃತ, ಹಿಂದಿ, ಉರ್ದು, ತೆಲುಗು, ತಮಿಳು, ಮಲೆಯಾಳಿ ಭಾಷೆಗಳಲ್ಲಿ ತುಣುಕುಗಳು ಸೇರಿಕೊಳ್ಳುತ್ತವೆ. ದ್ವಿಭಾಷಿಕತೆಯ ಅಧ್ಯಯನದಲ್ಲಿ ತಜ್ಞರಾದ ಅಮೇರಿಕಾದ ಯುರಿಯಲ್ ವೈನ್‌ರೈಖ್ ಕೂಡ ತನ್ನ ಭಾಷಾ ಸಂಪರ್ಕ ಕೃತಿಯಲ್ಲಿ ಆದರ್ಶ ದ್ವಿಭಾಷಿಕ, ಭಾಷಾ ಸಂದರ್ಭ ಬದಲಾದಂತೆ ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಬದಲಾಯಿಸುತ್ತಿರುತ್ತಾನೆ. ಸಂದರ್ಭ ಬದಲಾಗದಿದ್ದರೆ ಭಾಷೆಯನ್ನು ಬದಲಾಯಿಸಲಾಗುವುದಿಲ್ಲ. ಅದೂ ಒಂದು ವಾಕ್ಯದೊಳಗಂತೂ ಖಂಡಿತ ಬದಲಾಯಿಸುವುದಿಲ್ಲವೆಂದು ಹೇಳುತ್ತಾರೆ (ಶ್ರೀಧರ ಎಸ್.ಎನ್. ೧೯೯೫, ಪುಟ-೨)

ಸಾಮಾನ್ಯವಾಗಿ ನುಡಿಬೆರಕೆ ಪ್ರಕ್ರಿಯೆಯು ಗಡಿಭಾಗಗಳಲ್ಲಿ, ದ್ವಿಭಾಷಿಕತೆಯ ಸಂದರ್ಭಗಳಲ್ಲಿ ನಡೆಯುತ್ತದೆ. ಮತ್ತು ಆಧುನಿಕತೆಗೆ ಹೊಂದಿಕೊಂಡಂತೆ ಜೀವನ ಸಾಗಿಸಲು ಮುಂದಾದಾಗ ಸಾಮಾನ್ಯವಾಗಿ ಇಂಗ್ಲಿಷ್ ಭಾಷೆಯೊಂದಿಗೆ ನುಡಿಬೆರಕೆ ಪ್ರಕ್ರಿಯೆಯು ನಡೆಯತೊಡಗಿತು. ಅದು ಒಂದು ಘನತೆಯೆಂಬಂತೆ ಮತ್ತು ಫ್ಯಾಷನಬಲ್ ಆಗಿಯು ಬಳಕೆಯಾಗುತ್ತ ಸಾಗಿದೆ. ಹೀಗಾಗಿ ಆಧುನಿಕ ಸಂದರ್ಭದಲ್ಲಿ ಭಾರತೀಯ ಭಾಷೆಗಳ ಮಧ್ಯ ನುಡಿಬೆರಕೆ ಪ್ರಕ್ರಿಯೆ ಹೆಚ್ಚು ನಡೆಯದೇ ಆಂಗ್ಲ ಭಾಷೆಯೊಂದಿಗೆ ಹೆಚ್ಚಾಗಿ ನಡೆಯುವುದನ್ನು ನೋಡಬಹುದಾಗಿದೆ. ಇದು ಎಲ್ಲ ಸಮುದಾಯಗಳಲ್ಲಿಯು ಕಂಡುಬರುತ್ತದೆ. ಮತ್ತು ಕೊರಚರು ಇದಕ್ಕೆ ಹೊರತಾಗಿಲ್ಲ. ಈ ಭಾಷಾ ಮಿಶ್ರಣ ಪ್ರಕ್ರಿಯೆಯು ಒಂದು ಅಲೆಮಾರಿ ಬುಡಕಟ್ಟು ಸಮುದಾಯವಾದ ಕೊರಚರ ಭಾಷೆಯಲ್ಲಿಯೂ ಕಾಣಬಹುದು.

ಕರ್ನಾಟಕದಲ್ಲಿ ಬಳ್ಳಾರಿ-ದಾವಣಗೆರೆ-ಚಿತ್ರದುರ್ಗ ಮೊದಲಾದ ಎಲ್ಲಾ ಜಿಲ್ಲಾ ಪರಿಸರದಲ್ಲೂ ಕೊರಚರು ಕಂಡುಬರುತ್ತಾರೆ. ಈ ಪರಿಸರಗಳಲ್ಲಿ ಕನ್ನಡ ಭಾಷೆಯು ಸರ್ವೇಸಾಮಾನ್ಯವಾಗಿದೆ. ಸಮುದಾಯದ ಎಲ್ಲಾ ಜನರಿಗೆ ಈ ಭಾಷೆಯು ತಿಳಿದಿದೆ ಮಾತ್ರವಲ್ಲ ಹಲವು ಕಡೆಗಳಲ್ಲಿ ವ್ಯವಹಾರಿಕ ಭಾಷೆಯಾಗಿ ಬಳಸಲ್ಪಡುತ್ತಾರೆ. ಹೀಗಾಗಿ ಕೊರಚರು ಸಹ ದ್ವಿಭಾಷಿಕರು. ಇವರಲ್ಲಿ ನುಡಿಬೆರಕೆ ಪ್ರಕ್ರಿಯೆಗಳು ನಡೆಯುವುದು ಸಾಮಾನ್ಯವಾಗಿದೆ. ಸಮಾಜದಲ್ಲಿ ಎಲ್ಲಾ ಜನ ಸಮುದಾಯಗಳೊಂದಿಗೆ ಜೀವನ ಮಾಡುತ್ತಿದ್ದ ಸಂದರ್ಭದಲ್ಲಿ ಕೊರಚರು ಕೃಷಿ ಸಂಬಂಧಿ, ಶಾಲಾ ಕಾಲೇಜು, ಮಾರುಕಟ್ಟೆ ಮೊದಲಾದ ಕೆಲಸಗಳಲ್ಲಿ ಭಾಗಿಯಾಗಿ ಇತರರೊಂದಿಗೆ ಕೆಲಸ ಮಾಡುತ್ತಿದ್ದರಿಂದ ನುಡಿಬೆರಕೆ ಪ್ರಕ್ರಿಯೆಗಳು ಸಹಜವಾಗಿ ನಡೆಯುತ್ತವೆ. ಹಾಗೆಯೇ ಗ್ರಾಮಗಳಲ್ಲಿ, ದೇವಸ್ಥಾನಗಳಲ್ಲಿ ಪೂಜೆ, ಹಬ್ಬ ಹರಿದಿನ ಇತ್ಯಾದಿ ನಡೆಯುವಾಗ ಎಲ್ಲ ಸಮುದಾಯಗಳು ಸೇರುವಾಗ ನುಡಿಬೆರಕೆಗಳು ಆಗುವುದು ಸಹಜ.

ಕೊರಚರಲ್ಲಿ ನಡೆಯುವ ಪ್ರಮುಖ ಆಚರಣೆಗಳಾದ ಜಾತ್ರೆ ಮತ್ತು ವಿವಾಹ ಸಂದರ್ಭದಲ್ಲಿ ಆಧುನಿಕತೆಯ ಪ್ರಭಾವದಿಂದಾಗಿ ನುಡಿಬೆರಕೆ ನಡೆಯುತ್ತದೆ. ಮತ್ತು ಕುಟುಂಬದಲ್ಲಿ ದೆವ್ವ ಭೂತಗಳನ್ನು ಹೋಡಿಸುವಾಗ ಕೊರಚರು ಸಹಜವಾಗಿ ಕನ್ನಡದಲ್ಲಿ ಮಾತಾಡುತ್ತಾರೆ. ಮತ್ತು ಮೈಮೇಲೆ ದೇವರು ಬಂದಾಗ ಕನ್ನಡವನ್ನು ಹಾಗೇ ಪರಸ್ಪರ ಬೇರೆ ಬೇರೆ ಭಾಷಿಕರೊಂದಿಗೆ ಜಗಳ, ಕಲಹಗಳು ನಡೆದಾಗ ಬೈಗುಳಗಳು ಸಹಜವಾಗಿ ಎರಡು ಭಾಷೆಯಲ್ಲಿ ಕೇಳಿಬರುತ್ತವೆ. ಜೊತೆಗೆ ಇತ್ತೀಚೆಗೆ ಇಂಗ್ಲಿಷ್ ಭಾಷೆಯು ಬಳಕೆಗೊಂಡು ನುಡಿಬೆರಕೆಗಳಾಗುತ್ತವೆ. ಹೀಗಾಗಿ ಈ ಭಾಷಾ ಮಿಶ್ರಣ ಪ್ರಕ್ರಿಯೆಯು ಒಂದು ಅಲೆಮಾರಿ ಬುಡಕಟ್ಟು ಸಮುದಾಯವಾದ ಕೊರಚರ ಭಾಷೆಯಲ್ಲಿ ಆಗುವುದನ್ನು ಮುಂದಿನಂತೆ ಚರ್ಚಿಸಲಾಗಿದೆ.

ನುಡಿಬೆರಕೆ

ಇಂಗ್ಲೀಷಿನ Code mixingಗೆ ಸಂವಾದಿಯಾಗಿ ನುಡಿಬೆರಕೆ, ನುಡಿ ಮಿಶ್ರಣ Code switchingಗೆ ಸಂವಾದಿಯಾಗಿ ನುಡಿಜಿಗಿತ, ನುಡಿಪಲ್ಲಟ ಎಂಬ ಪದಗಳು ಕನ್ನಡ ಭಾಷಾಶಾಸ್ತ್ರದಲ್ಲಿ ಬಳಕೆಯಲ್ಲಿದೆ. ಒಂದು ಭಾಷೆಯ ವಾಕ್ಯವನ್ನು ಆಡುವಾಗ/ಬರೆಯುವಾಗ ಇನ್ನೊಂದು ಭಾಷೆಯ ಭಾಷಾಂಶಗಳನ್ನು ಬೆರೆಸುವುದು ನುಡಿಬೆರಕೆಯಾಗಿದೆ. ಸಾಮಾನ್ಯವಾಗಿ ಈ ಪರಿಕಲ್ಪನೆಯನ್ನು ಸಾಮಾಜಿಕ ಭಾಷಾಧ್ಯಯನ ಸಂದರ್ಭದಲ್ಲಿ ಬಳಸಲಾಗುತ್ತದೆ. ಇದು ಸಮಾಜೋಭಾಷಿಕ ಅಧ್ಯಯನದ ಅವಿಭಾಜ್ಯ ಅಂಗವೂ ಆಗಿದೆ.

ಕೊರಚರು ಕರ್ನಾಟಕದಲ್ಲಿ ಒಂದು ವಿಶಿಷ್ಟ ಭಾಷಿಕ ಸಮುದಾಯವಾಗಿದ್ದು ಇದು ತಮಿಳು, ತೆಲುಗು, ಕನ್ನಡ ಪದಗಳಿಂದ ಕೂಡಿದ ಒಂದು ವಿಶಿಷ್ಟ ಭಾಷಿಕ ರಚನೆಯನ್ನು ಮಾಡಿಕೊಂಡಿದೆ. ಈ ಭಾಷಾ ಜನಾಂಗದ ದೃಷ್ಟಿಯಿಂದ ನೋಡಿದರೆ ಈ ಭಾಷೆಯನ್ನು ವಿವಿಧ ಪಂಗಡಗಳು ಮಾತನಾಡುವುದು ಕಂಡುಬರುತ್ತದೆ. ಇಲ್ಲಿ ಈ ಭಾಷೆಯನ್ನು ಕೊರಚರು, ಕೊರವರು, ಕೊರಮರು, ಕುಂಚಿಕೊರಮರು, ಕೊರಮಶೆಟ್ಟರು ಇತ್ಯಾದಿಯಾಗಿ ಬಳಸುತ್ತಿದ್ದರು. ಈ ಪಂಗಡಗಳ ಜನರು ಸಾಮಾಜಿಕತೆ, ಧಾರ್ಮಿಕತೆ, ಸಾಂಸ್ಕೃತಿಕ ಪದ್ಧತಿಗಳು ಆಚಾರ–ವಿಚಾರಗಳು ಹಾಗೂ ಭಾಷೆಯಲ್ಲಿ ಹಲವು ರೀತಿಯಲ್ಲಿ ವ್ಯತ್ಯಾಸವನ್ನು ಹೊಂದಿದ್ದಾರೆ. ಕರ್ನಾಟಕದಲ್ಲಿ ವಾಸಿಸುತ್ತಿರುವ ಕೊರಚರು ಇಂತಹ ಒಂದು ವಿಶಿಷ್ಟ ಭಾಷಿಕತೆಯನ್ನು ಮಾತನಾಡುವಾಗ ಮತ್ತೊಂದು ಭಾಷೆಯ ಪದಗಳನ್ನು ನುಡಿಗಟ್ಟುಗಳನ್ನು ಬೆರೆಸಿ ಮಾತನಾಡುವುದು ಕಂಡುಬರುತ್ತದೆ. ಕಾರಣ ಅವರ ವಲಸೆ ಪ್ರವೃತ್ತಿಯೇ ಕಾರಣವಾಗಿರಬಹುದಾಗಿದೆ. ಮತ್ತು ಈ ಸಮುದಾಯದವರು ಕೆಲವು ಸಾಮೂಹಿಕ ಸಮಾರಂಭಗಳು, ಆಚರಣೆಗಳು ಇತ್ಯಾದಿ ಕಡೆಗಳಲ್ಲಿ ಇತರ ಭಾಷಿಕರೊಂದಿಗೆ ಗುಂಪುಗೂಡಿ ಸಂಭಾಷಿಸುವ ಸಂದರ್ಭದಲ್ಲಿ ಹಾಗೂ ತಮ್ಮನ್ನು ತಾವು ಇತರರೊಡನೆ ಗುರುತಿಸಿಕೊಳ್ಳುವಲ್ಲಿ ಒಂದಿಲ್ಲೊಂದು ರೀತಿಯಲ್ಲಿ ನುಡಿಬೆರಕೆಗೆ ಅವಕಾಶವಾಗಿರುವ ಸಂದರ್ಭಗಳನ್ನು ಸಾಕಷ್ಟು ಇಲ್ಲಿ ಕಾಣಬಹುದು. ಆದರೆ ಕೊರಚ ಭಾಷೆಯಲ್ಲಿ (ಕುಡ್ರುವಾತ) ನಾವು ತಮಿಳಿನ, ತೆಲುಗಿನ ಮತ್ತು ಕನ್ನಡ ಭಾಷಿಕಾಂಶಗಳನ್ನು ಒಟ್ಟು ಸೇರಿಸಿಕೊಂಡು ವಾಕ್ಯಗಳನ್ನು ನಿರ್ಮಾಣ ಮಾಡಿಕೊಳ್ಳುವುದನ್ನು ನೋಡುತ್ತೇವೆ. ಉದಾ.

ಕೊರಚರ ಭಾಷೆ: ಗರಗತ್ಕೋರು ಸೇನಾ ಗಲಾಟೆ ಕೀದು

ಶಿಷ್ಟ ಕನ್ನಡ: ಗರಗದಲ್ಲಿ ಬಹಳ ಗಲಾಟೆ ಐತೆ.

ಕೊರಚರ ಭಾಷೆ: ಪಾಪಯ್ಯನುಗು ನೂರು ರೂಪಾಯಿ ಕುಡು

ಶಿಷ್ಟ ಕನ್ನಡ: ಪಾಪಯ್ಯನಿಗೆ ನೂರುರೂಪಾಯಿ ಕೊಡು.

ಈ ರೀತಿಯಲ್ಲಿ ವಾಕ್ಯಗಳು ಸಿದ್ದಗೊಳ್ಳುತ್ತವೆ. ಇಲ್ಲಿ ಮೊದಲ ವಾಕ್ಯದಲ್ಲಿ ಗರಗತ್ಕೋರು ಸೇನಾ ಎಂಬುವು ತೆಲುಗು ಪದಗಳು, ಗಲಾಟೆ ಕನ್ನಡದ ಪದ ಕೀದು ಎಂಬುದು ತಮಿಳು ಪದವಾಗಿದೆ. ಆದರೆ ಎರಡನೇ ವಾಕ್ಯದಲ್ಲಿ ನೂರು ರೂಪಾಯಿ, ಕನ್ನಡದ್ದು ಕುಡು ಎಂಬುದು ತಮಿಳಿನ ಪದವಾಗಿದ್ದು ಪಾಪಯ್ಯನಿಗೆ ಎಂಬ ಕನ್ನಡ ಪದಕ್ಕೆ ಪಾಪಯ್ಯನುಗು ಎಂಬಲ್ಲಿ ಪಾಪಯ್ಯ+ನುಗು ಎಂಬ ಪದದಲ್ಲಿಯ 'ನುಗು' ಕೊರಚರ ಮೂಲ ಪ್ರತ್ಯಯ ಇಂತಹ ಪದಗಳು ಕೊರಚರ ವಾಕ್ಯಗಳಲ್ಲಿ ಅನೇಕ ಕಂಡುಬರುತ್ತವೆ. ಮತ್ತು ಇವರಲ್ಲಿ ಕೆಲವರಿಗಂತೂ ಆಂಗ್ಲ ಭಾಷೆಯ ವ್ಯಾಮೋಹ ತುಂಬಾನೇ ಇರುತ್ತದೆ. ಆ ಭಾಷೆಯನ್ನು ಮಾತನಾಡಲು ಬಾರದಿದ್ದರೂ ಅವರ ಕೆಲವು ಪದಗಳನ್ನಾದರೂ ತಮ್ಮ ತಮ್ಮ ಮಾತಿನ ನಡುವೆ ಬಳಸಬೇಕು. ಇಲ್ಲವಾದಲ್ಲಿ ಅವರ ಮಾತು ಪೂರ್ಣವಾಗಿಲ್ಲ ಎನ್ನುವ ಭ್ರಮೆಯಲ್ಲಿರುತ್ತಾರೆ. ಹೀಗಾಗಿ ಕೆಲವರಂತು ಮಾತು ಮಾತಿಗೆ ಇಂಗ್ಲೀಷ ಭಾಷೆ ಬಳಸುವುದನ್ನು ನೋಡುತ್ತೇವೆ. ಉದಾ. ವೇಟ್ ಮಾಡು ಬರುತ್ತೀನಿ? ಕಾಲೇಜ್‌ಗೆ ಹೋಗಲ್ವ? ಟೈಂ ಎಷ್ಟು? ಫಿಲ್ಮ್‌ಗೆ ಬರುತ್ತೀಯಾ? ಸೂಪರಾಗಿದೆ ಡ್ರೆಸ್ ಇತ್ಯಾದಿಯಾಗಿ ಮಾತುಗಳ ಮಧ್ಯ ಬಳಸುತ್ತಾರೆ. ಇದಕ್ಕೆ ಕೊರಚರ ಸಮುದಾಯದವರು ಸಹ ಹೊರತಾಗಿಲ್ಲ. ಉದಾಹರಣೆಗೆ

ವಾಂಗೋವಾಂಗೋ ಕೊಂದುಗಂಗು ಪ್ಲೀಸ್, ಅಪ್ಪೋಡುಸುಂಡು ನಿಂಗಳಗಾಗಿಯೇ ವೇಯ್ಟ್ ಸೆಯಂದೂ (ಬನ್ನಿ ಬನ್ನಿ ಕುಳಿತುಕೊಳ್ಳಿ ಪ್ಲೀಸ್ ಆಗಿನಿಂದ ನಿಮಗಾಗಿಯೇ ವೇಯ್ಟ್ ಮಾಡುತ್ತಿದ್ದೇನೆ)

ದಿನಾ ಬಸಗೋರೆ ಸಾಲಿಗಿ ಹೋಗರುದು (ದಿನ ಬಸ್ಸಿನಲ್ಲೇ ಶಾಲೆಗೆ ಹೋಗುವುದು)

ನಾಲು ಡಜನ್ ಬಾಳೆಪಗಂಗಳ ಎತ್ತುಗುಂಡು ವಾ (ನಾಲ್ಕು ಡಜನ್ ಬಾಳೆಹಣ್ಣು ತೆಗೆದುಕೊಂಡು ಬಾ)

ಜಾತಪ್ಪನ ಕಾಲೇಜ್‌ಗೋ ಸೇರ್ಸಸಿನೆಂಚು (ಜಾತಪ್ಪನನ್ನು ಕಾಲೇಜಿಗೆ ಸೇರಿಸಬೇಕಿತ್ತು)

ಬಸಗು ರೈಟ್‌ಯಿಂಡು ಸೊಣ್ಣು (ಬಸ್ಸಿಗೆ ರೈಟ್ ಅಂತ ಹೇಳು)

ಊಟಗು ಗೆಸ್ಟ ವಂದಿಕೀದು, ಎಂತನ/ಎಂದನ ತೀಪ ಸೇಯಬೇಕು (ಮನೆಗೆ ಗೆಸ್ಟ್ ಬಂದಿದಾರೆ ಏನಾರ ಸಿಹಿ ಮಾಡಬೇಕು.)

ಇಲ್ಲಿರುವ ವಾಕ್ಯಗಳಲ್ಲಿ ಇಂಗ್ಲೀಷ್ ಭಾಷೆಯ ಪದಗಳನ್ನು ಸೇರಿಸಿಕೊಂಡು ತಮಿಳು, ತೆಲುಗು, ಕನ್ನಡದ ಕೆಲ ಪದಗಳನ್ನು ಕೂಡಿಸಿಕೊಂಡು ಒಂದು ವಾಕ್ಯ ರಚನೆಯಾಗಿರುವುದನ್ನು ಕಾಣಬಹುದಾಗಿದೆ.

ಅದು ಭಾಷಾ ಆಯ್ಕೆಯ ಪ್ರಾಮುಖ್ಯತೆಯಿಂದ ಉಂಟಾಗಬಹುದಾದ ಪ್ರಕ್ರಿಯೆಯಾಗಿದೆ. ಈ ಪ್ರಕ್ರಿಯೆಯು ಸಮಾಜದ ಯಾವುದೇ ಒಂದು ವರ್ಗಕ್ಕೆ ಸೀಮಿತವಾಗಿಲ್ಲ. ಅದು ಎಲ್ಲಾ ಸಮುದಾಯದ ಜನರಲ್ಲಿಯೂ ಈ ನುಡಿಬೆರಕೆ/ನುಡಿಮಿಶ್ರಣ ಪ್ರಕ್ರಿಯೆ ಸಾಮಾನ್ಯವಾಗಿ ಕಂಡುಬರುತ್ತದೆ. ಆಯ್ಕೆಯ ಸಮಸ್ಯೆ ಲಿಂಗ, ಶಿಕ್ಷಣ, ಆರ್ಥಿಕತೆ, ಪ್ರತಿಷ್ಠೆ, ಆತ್ಮೀಯತೆಗಳಿಗೆ ಅನುಗುಣವಾಗಿಯೇ ಸಾಗುತ್ತದೆ. ಕರ್ನಾಟಕ ಪರಿಸರದಲ್ಲಿ ವಾಸಿಸುವ ಕೊರಚರು ಬಳಸುವ ಭಾಷೆಯು ಶಿಷ್ಟಕನ್ನಡಕ್ಕಿಂತ ತೀರಾ ಭಿನ್ನವಾಗಿದ್ದು ಇವರು ತಮ್ಮದೇ ಕೌಟುಂಬಿಕ ವಲಯದಲ್ಲಿ (ಕುಡ್ರುವಾತ) ಕೊರಚ ಭಾಷೆಯನ್ನು ಬಳಸುತ್ತಾರೆ. ಉಳಿದಂತೆ ಇತರೆ ಸಮುದಾಯದೊಂದಿಗೆ ಸಂಪರ್ಕ ಹೊಂದುವಾಗ, ಶಾಲಾ ಕಾಲೇಜಿನಲ್ಲಿ ವಿದ್ಯಾಭ್ಯಾಸದ ಸಂದರ್ಭದಲ್ಲಿ ಹಾಗೂ ಹೊರ ಸಮುದಾಯ ಜೊತೆ ಮಾತನಾಡುವಾಗ ಇಲ್ಲಿನ ಭಾಷೆ ಕಲಿತು ಬಳಸುವ ಅನಿವಾರ್ಯತೆ ಇದೆ. ಹೀಗೆ ತಮ್ಮದೇ ವಿಶಿಷ್ಟ ಭಾಷಾ ಸಮುದಾಯದಿಂದ ಹೊರಬಂದು ಮತ್ತೊಂದು ಭಾಷೆಯನ್ನು ಕಲಿತು ವ್ಯವಹರಿಸುವ ಸಂದರ್ಭದಲ್ಲಿ ನುಡಿಮಿಶ್ರಣ ಪ್ರಕ್ರಿಯೆ ಸಹಜವಾಗಿಯೇ ಉಂಟಾಗುತ್ತದೆ. ಹೀಗಾಗಿ ಪ್ರಸ್ತುತ ಇಲ್ಲಿ ಕೊರಚರ ಸಮುದಾಯದ ನುಡಿಮಿಶ್ರಣ ಪ್ರಕ್ರಿಯೆಯನ್ನು ಕುರಿತು ಚರ್ಚಿಸುವ ಅಗತ್ಯವಿದೆ. ಸಾಮಾನ್ಯವಾಗಿ ಇಲ್ಲಿನ ಸ್ಥಳೀಯ ಭಾಷೆಯ ಪ್ರಭಾವ ಈ ಜನರ ಮೇಲೆ ಆಗುತ್ತಿರುವುದರಿಂದ ಆ ಸಮುದಾಯದ ಜನರಲ್ಲಿ ಇಲ್ಲಿನ ಸ್ಥಳೀಯ ಕನ್ನಡದ ಪ್ರಭಾವವನ್ನು ಕಾಣುತ್ತೇವೆ.

ಅಲೆಮಾರಿ ಬುಡಕಟ್ಟು ಸಮುದಾಯದ ಜನರು ಬೆಟ್ಟಗುಡ್ಡಗಳಲ್ಲಿ ವಾಸವಾಗಿದ್ದು ಅನ್ಯಭಾಷಿಕ ಸಮುದಾಯಗಳೊಂದಿಗಿನ ಸಂಪರ್ಕದಿಂದ ದೂರ ಉಳಿದಿದ್ದ ಕಾಲವೊಂದಿತ್ತು. ಆದರೆ ಅರಣ್ಯ ಕಾಯ್ದೆ ನೀತಿ ಜಾರಿಯಾದ ಹಿನ್ನೆಲೆಯಲ್ಲಿ ತಮ್ಮ ಮೂಲ ವಾಸಸ್ಥಾನದಿಂದ ವಲಸೆ ಹೋಗುವ ಪ್ರಸಂಗ ಬಂದೊದಗಿದ್ದರಿಂದಾಗಿ ತಮ್ಮ ಬದುಕಿನ ಅನಿವಾರ್ಯತೆಯಿಂದಾಗಿ ವಲಸೆ ಹೋಗುವ ಸಂದರ್ಭಗಳು ಎದುರಾದಾಗ ಇತರ ಸಮುದಾಯದೊಂದಿಗಿನ ಸಂಬಂಧಗಳು ಏರ್ಪಟ್ಟಾಗ ಅವರ ಭಾಷೆಗಳು ಪರಿಯವಾಗತೊಡಗಿದವು ಇವರು ತಮಿಳುನಾಡಿನ ಮೂಲ ನಿವಾಸಿಗಳಾಗಿದ್ದು ವಲಸೆಯಾಗಿ ಆಂಧ್ರಪ್ರದೇಶದಿಂದ ಕರ್ನಾಟಕಕ್ಕೆ ವಲಸೆ ಬಂದಿರುವುದರಿಂದ ಇವರ ಭಾಷೆಯಲ್ಲಿ ತಮಿಳು ಭಾಷೆಯ ಜೊತೆಗೆ ತೆಲುಗಿನ ಭಾಷೆ ಮತ್ತು ಕನ್ನಡ ಪರಿಸರಕ್ಕೆ ಬಂದಂತೆ ಕನ್ನಡ ಭಾಷೆಯ ಪದಗಳು ಇವರ ಭಾಷೆಯಲ್ಲಿ ಸೇರಿರುವುದನ್ನು ನೋಡಬಹುದು. ಕೊರಚರ ಸಮುದಾಯದ ಜನರ ಭಾಷೆಯಲ್ಲಿ ಯಾವಾಗ ಕನ್ನಡವನ್ನು ಹೆಚ್ಚು ಬಳಸುವ ಸಂದರ್ಭ ಎದುರಾಗುತ್ತದೋ ಆವಾಗ ತಮ್ಮದೇ ಭಾಷೆಯಲ್ಲಿ ಕನ್ನಡದ ಹೆಚ್ಚು ಪ್ರಭಾವವನ್ನು ಕಾಣುತ್ತೇವೆ. ಇವರಲ್ಲಿ ತುಂಬಾ ಹಿರಿಯರಾದ, ವಯಸ್ಸಾದ ವ್ಯಕ್ತಿಗಳಲ್ಲಿ ಇತರರೊಂದಿಗೆ ಬೆರೆಯುವಂತಹ ಪ್ರಸಂಗಗಳು ಕಡಿಮೆಯಿರುವುದರಿಂದಾಗಿ ಅವರಲ್ಲಿ ನುಡಿಮಿಶ್ರಣ ಪ್ರಕ್ರಿಯೆಯು ತುಂಬಾ ಕಡಿಮೆಯಾಗುತ್ತದೆ. ಆದರೆ ಆಧುನಿಕತೆಗೆ ಹೊಂದಿಕೊಂಡು ಬಂದಂತೆ ಸಮುದಾಯದ ಜನರು ನುಡಿಮಿಶ್ರಣ ಪ್ರಕ್ರಿಯೆಯು ಹೆಚ್ಚಾಗುತ್ತ ಹೋಗುತ್ತದೆ.

ಶ್ರೀಧರ್‌ರವರು ನುಡಿಬೆರಕೆಯ ಸಂದರ್ಭದ ಪ್ರಾಮುಖ್ಯತೆಯನ್ನು ತಿಳಿಸುತ್ತ ಒಬ್ಬ ದ್ವಿಭಾಷಿಕ ಅನೇಕ ಬಾರಿ ದ್ವಿಸಾಂಸ್ಕೃತಿಕನೂ, ಬಹುಸಾಂಸ್ಕೃತಿಕನೂ ಆಗಿರುವುದರಿಂದ ತನ್ನ ಎರಡು ಅಥವಾ ಹೆಚ್ಚು ಸಂಸ್ಕೃತಿಗಳನ್ನೊಳಗೊಂಡ ಹೆಚ್ಚು ಶ್ರೀಮಂತ ಹೆಚ್ಚು ಸಂಕೀರ್ಣ ವ್ಯಕ್ತಿತ್ವ ಸಂವೇದನೆಯನ್ನು ಅಭಿವ್ಯಕ್ತಗೊಳಿಸಲು ಒಂದಕ್ಕಿಂತ ಹೆಚ್ಚು ಭಾಷೆಗಳ ಸಂಪನ್ಮೂಲವನ್ನು ತೊಡಗಿಸಬೇಕಾಗುತ್ತದೆ. ತಾಂತ್ರಿಕ ವಿಷಯಗಳ ಚರ್ಚೆಯಲ್ಲಿ ಅವಶ್ಯಕವಾದ ಪರಿಭಾಷೆಯು ಸಿದ್ಧಿಸದೆ ನುಡಿಬೆರಕೆಯು ಉಪಯೋಗಕ್ಕೆ ಬರುತ್ತದೆ. ಒಂದು ಭಾಷೆಯ ಅರ್ಥವತ್ತಾದ ತೆರಪುಗಳನ್ನು ಅಥವಾ ವೈಯಕ್ತಿಕ ಮೇರೆಯನ್ನು ಮೀರಲು ಇನ್ನೊಂದು ಭಾಷೆಯನ್ನು ಬೆರೆಸುವುದು ಸಾಮಾನ್ಯ ಭಾಷಾ ಮೇಲ್ಮೆಯ ದೃಷ್ಟಿಯಿಂದ ನಿಷಿದ್ಧವಾದ ಪದ ಅಥವಾ ಅರ್ಥಗಳನ್ನು ವ್ಯಕ್ತಪಡಿಸಲು ಒಂದು ಭಾಷೆಯಲ್ಲಿನ ರೂಢಿಗತ ಪದಗಳ ಸ್ಥಾನದಲ್ಲಿ ಫ್ಯಾಷನೆಬಲ್ ಪದಗಳನ್ನು ಉಪಯೋಗಿಸಿ ತಮ್ಮ ಆಧುನಿಕತೆಯನ್ನು ಸೂಚಿಸಲು ಭಾಷಿಕರ ಮಧ್ಯ ಇರುವ ಅಂತರವನ್ನು ಕಡಿಮೆ ಮಾಡಲು ನುಡಿಬೆರಕೆಯನ್ನು ಬಳಸುತ್ತಾರೆ ಎಂದು ಹೇಳುತ್ತಾರೆ.

ನುಡಿಬೆರಕೆಯನ್ನು ದ್ವಿಭಾಷಿಕರು ಉಪಯೋಗಿಸುವಾಗ ಅವರ ಭಾಷೆಗಳ ರಚನಾತ್ಮಕ ಎಲ್ಲೆಗಳು ಸಡಿಲವಾಗುತ್ತದೆ. ಒಂದು ಭಾಷೆಯ ರಚನಾತ್ಮಕ ಅಂಶಗಳು ಇನ್ನೊಂದು ಭಾಷೆಗೆ ವರ್ಗಾಯಿಸಲ್ಪಡುತ್ತದೆ. ನುಡಿಬೆರಕೆ, ನುಡಿಜಿಗಿತದ ಉದ್ದೇಶವನ್ನು ಕುರಿತು ಸ್ಪಷ್ಟ ಸಾಮಾಜಿಕ ಸಂದರ್ಭವನ್ನು ಹೇಳಲು ಸಾಧ್ಯವಿಲ್ಲ. ಅದು ಬೇರೊಂದು ಭಾಷೆಯ ಪದಗಳ ಅಲಭ್ಯತೆಯಿಂದ ಸೃಷ್ಟಿಗೊಳ್ಳಲೂಬಹುದು. ಸಮುದಾಯದ ಜನ ಭಾಗವಹಿಸುವ ಸಂದರ್ಭ ಸಾಮಾಜಿಕ ಸಂಭಾಷಣಾ ವಿಧಾನಕ್ಕೆ ಅನುಗುಣವಾಗಿ ಬೆರಕೆ ಅಥವಾ ಮಿಶ್ರಣ ಪ್ರಕ್ರಿಯೆ ಸಾಗುತ್ತದೆ. ಕೆಲವೊಮ್ಮೆ ತಮ್ಮ ವಿಶಿಷ್ಟ ಭಾಷಿಕ ಸಮುದಾಯವೆಂಬುದನ್ನು ತೋರ್ಪಡಿಸಲು ಇಂತಹ ಭಾಷಿಕ ಮಿಶ್ರಣ ಪ್ರಕ್ರಿಯೆಗಳು ಇಲ್ಲಿ ಜರುಗುತ್ತವೆ. ನುಡಿಬೆರಕೆ ಮತ್ತು ನುಡಿಮಿಶ್ರಣಗಳು ಬದಲಾದ ಸಾಮಾಜಿಕ ಸಂದರ್ಭಕ್ಕೆ ಭಾಷಾ ಬಳಕೆ ವ್ಯತ್ಯಾಸಗೊಳ್ಳುತ್ತ ಸಾಗುತ್ತದೆ.

ಹೀಗೆ ಕರ್ನಾಟಕದಲ್ಲಿ ವಾಸಿಸುತ್ತಿರುವ ಕೊರಚ ಸಮುದಾಯವು ಒಂದು ವಿಶಿಷ್ಟ ಭಾಷೆಯನ್ನು ಬಳಸುತ್ತಾರೆ. ಇವರು ಬಳಸುವ ಭಾಷೆಯು ತಮಿಳು, ತೆಲುಗು, ಕನ್ನಡಗಳಿಂದ ಮಿಶ್ರಿತವಾಗಿ ರಚಿತವಾಗಿದ್ದರೂ ಕನ್ನಡದ ಇತರೆ ಸಮುದಾಯದವರಿಗೆ ತಿಳಿಯುವುದಿಲ್ಲ ಮತ್ತು ಮಾತನಾಡಲು ತುಂಬಾ ಕಷ್ಟಕರವಾದುದಾಗಿದೆ. ಸಾಮಾಜಿಕ ಪರಿಸರದಲ್ಲಿ ಕೊರಚರು ಇತರೆ ಜನಾಂಗದೊಂದಿಗೆ ಗ್ರಾಮಗಳಲ್ಲಿ ಸಹಬಾಳ್ವೆಯಿಂದ ಬದುಕು ನಡೆಸುತ್ತಿರುವುದರಿಂದ, ಕೃಷಿ ಸಂಬಂಧಿ ಕೆಲಸಗಳಲ್ಲಿ, ಜಾತ್ರೆ, ಮತ್ತು ವಿಶೇಷ ಸಮಾರಂಭಗಳಲ್ಲಿ ಸುತ್ತಮುತ್ತಲಿನ ಜನರೊಂದಿಗೆ ಕೂಡಿದಾಗ ಕನ್ನಡದೊಂದಿಗೆ ಮಾತನಾಡಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ನುಡಿಬೆರಕೆ ಆಗುವುದು ಸಹಜ. ಮತ್ತು ಸುತ್ತಮುತ್ತ ಪರಿಸರದಲ್ಲಿ ಶೈಕ್ಷಣಿಕವಾಗಿ ಮುಂದುವರೆಯುವುದರಿಂದಾಗಿ ನುಡಿಬೆರಕೆಗಳು ಇವರಲ್ಲಿ ಸಹಜವಾಗಿದೆ. ಅಲ್ಲದೆ ವ್ಯಾಪಾರ–ವಹಿವಾಟುನಂತಹ ಸಂದರ್ಭಗಳಲ್ಲಿ ಈ ನುಡಿಬೆರಕೆಗಳು ಕಂಡುಬರುತ್ತದೆ.

ನುಡಿಜಿಗಿತ

ನುಡಿಬೆರಕೆಯಲ್ಲಿ ಒಂದು ಭಾಷೆ ವಾಕ್ಯವನ್ನು ಆಡುವಾಗ/ಬರೆಯುವಾಗ ಬೇರೊಂದು ಭಾಷೆಯ ಭಾಷಿಕ ಅಂಶಗಳನ್ನು ಬೆರಸಿ ಮಾತನಾಡವುದರೆ, ನುಡಿಜಿಗಿತದಲ್ಲಿ ಇಡೀ ವಾಕ್ಯದ ಹಿಂದಿನ ನಿಯಮ ಒಂದು ಭಾಷೆಯದಾಗಿದ್ದು, ವಾಕ್ಯಾಂಶಗಳು ಮಾತ್ರ ಕೆಲವು ಇನ್ನೊಂದು ಭಾಷೆಯಿಂದ ಬಂದು ಸೇರುತ್ತದೆ. ಅಂದರೆ ಒಂದು ವಾಕ್ಯವನ್ನು ಒಂದು ಭಾಷೆಯ ನಿಯಮಾನುಸಾರ ರಚಿಸಿ ಮುಗಿಸಿ ನಂತರ ಹೊಸ ವಾಕ್ಯವನ್ನು ಇಡಿಯಾಗಿ ಇನ್ನೊಂದು ಭಾಷೆಯಲ್ಲಿ ರಚಿಸಿ ಬಳಸಲಾಗುತ್ತದೆ. ಈ ನುಡಿಜಿಗಿತವು ದ್ವಿಭಾಷಿಕ ಪರಿಸರದಲ್ಲಿ ಕಾಣಿಸಿಕೊಂಡಂತೆ ದ್ವಿಭಾಷಿಕ ಸಮುದಾಯಗಳಲ್ಲಿಯೂ ಸಹ ಕಾಣಿಸಿಕೊಳ್ಳುತ್ತದೆ. ಕೊರಚರಲ್ಲಿ ಕೆಲವೊಂದು ಸಂದರ್ಭದಲ್ಲಿ ನುಡಿಜಿಗಿತ ಪ್ರಕ್ರಿಯೆ ಕಂಡುಬರುತ್ತದೆ. ಯಾವುದೇ ಒಂದು ನುಡಿಜಿಗಿತ ಪ್ರಕ್ರಿಯೆ ನಡೆಯಬೇಕಾದಲ್ಲಿ ಪರಸ್ಪರ ಎರಡು ಭಾಷೆಯ ಜ್ಞಾನ ಅವಶ್ಯಕವಾಗಿರುತ್ತದೆ. ಹೀಗಾಗಿ ಇತ್ತೀಚಿನ ತಲೆಮಾರಿನವರಲ್ಲಿ ಮಾತ್ರ ಇಂಗ್ಲಿಷ್ ಜ್ಞಾನ ಅಷ್ಟಾಗಿ ಕಂಡುಬರುವುದರಿಂದ ಪಾರಂಪರಿಕವಾಗಿ ತಮ್ಮದೇ ಆದಂತಹ ಭಾಷೆಯನ್ನು ರೂಢಿಸಿಕೊಂಡು ಬಂದಂತಹ ಕೊರಚರಲ್ಲಿ ಇಂಗ್ಲಿಷ್‌ನೊಂದಿಗೆ ನುಡಿಜಿಗಿತ ಪ್ರಕ್ರಿಯೆ ಕಂಡುಬರುವುದಿಲ್ಲ. ಇಂಗ್ಲಿಷ್ ಭಾಷೆಯೊಂದಿಗೆ ನುಡಿಜಿಗತ ಪ್ರಕ್ರಿಯೆ ನಡೆಯಬೇಕಾದರೆ ಪರಸ್ಪರ ಕೊರಚರ ಭಾಷೆ ಮತ್ತು ಇಂಗ್ಲಿಷ್‌ನ ಜ್ಞಾನ ಅವಶ್ಯಕವಾಗಿರುತ್ತದೆ. ಆದರೆ ಕೊರಚರು ಕರ್ನಾಟಕದಲ್ಲಿ ವಾಸವಾಗಿರುವುದರಿಂದ ಕನ್ನಡದೊಂದಿಗೆ ಇವರ ನುಡಿಜಿಗಿತ ಪ್ರಕ್ರಿಯೆಯು ಅಷ್ಟಾಗಿ ಕಂಡುಬರುತ್ತದೆ. ಅದು ಮುಖ್ಯವಾಗಿ ವ್ಯಾಪಾರದಂತಹ ಸಂದರ್ಭದಲ್ಲಿ ಇವರ ಮೊದಲ ಆಯ್ಕೆ ಕನ್ನಡವೇ ಆಗಿರುತ್ತದೆ. ಹಾಗಾಗಿ ಕನ್ನಡದೊಂದಿಗೆ ತಮ್ಮ ಕೊರಚ ಭಾಷೆಯನ್ನು ಮಿಶ್ರಣವಾಗಿ ನುಡಿಜಿಗಿತ ಪ್ರಕ್ರಿಯೆಗಳು ಆಗುವುದು ಕಂಡುಬರುತ್ತದೆ.

ಕೊರಚ ಸಮುದಾಯದ ವ್ಯಕ್ತಿಯೊಬ್ಬ ಅದೇ ಸಮುದಾಯದ ಮತ್ತೊಬ್ಬ ಬೇರೆ ಊರಿನವನೊಂದಿಗೆ ಮಾತನಾಡುವಾಗ ಕನ್ನಡವೇ ಮೊದಲ ಆಯ್ಕೆಯಾಗಿರುತ್ತದೆ. ನಂತರದಲ್ಲಿ ಸಮುದಾಯದವರು ಎಂದು ಗೊತ್ತಾದಾಗ ಕೊರಚರ ಭಾಷೆ (ಕುಡ್ರುವಾತ)ಯಲ್ಲಿ ಮಾತನಾಡುವುದನ್ನು ಕಾಣಬಹುದು. ಹಾಗೆಯೇ ಸಿನೆಮಾ, ನಾಟಕ, ಇನ್ನಿತರ ಸಂಭಾಷಣೆಗಳನ್ನು ವಿವರಿಸುವ ಸಂದರ್ಭದಲ್ಲಿ, ರಾಜಕೀಯ ಭಾಷಣ ಮಾಡುವಾಗ, ಕನ್ನಡ ಭಾಷಿಕ ಸಂದರ್ಭಗಳಿಗೆ ತೆರೆದುಕೊಳ್ಳುವಾಗ, ಆತ್ಮೀಯರೊಡನೆ ಮಾತನಾಡುವ ಸಂದರ್ಭಗಳಲ್ಲಿ ಮತ್ತು ಗುಪ್ತವಾದ ವಿಷಯಗಳನ್ನು ಚರ್ಚಿಸುವಾಗ, ಶಿಕ್ಷಣಕ್ಕೆ ಸಂಬಂಧಿಸಿದ ವಿಷಯಗಳನ್ನು ಹೇಳುವಾಗ ಹೀಗೆ ಹಲವು ಸಂದರ್ಭಗಳಲ್ಲಿ ನುಡಿಜಿಗಿತ ಪ್ರಕ್ರಿಯೆ ಕಾಣಿಸಿಕೊಳ್ಳುತ್ತದೆ. ಕ್ಷೇತ್ರಕಾರ್ಯ ಸಂದರ್ಭದಲ್ಲಿ ಗಮನಿಸಿದಂತೆ ನುಡಿಜಿತ ಪ್ರಕ್ರಿಯೆಯೂ ಕೊರಚರ ಎಲ್ಲಾ ಸಾಮಾಜಿಕ ಭಿನ್ನಾಂಶದವರ ಮಾತಿನಲ್ಲಿ ಇತ್ತೀಚಿಗೆ ಕಂಡುಬರುತ್ತಿದೆಯಾದರೆ, ಸಮುದಾಯದ ಹಿರಿಯ ತಲೆಮಾರಿನವರಲ್ಲಿ ಅಷ್ಟಾಗಿ ಕಂಡುಬರುವುದಿಲ್ಲ. ಉದಾ.

೧. ಗಣಿತ ಬುಕ್ ಕೊಡು, ದಬಾನ ಬರ್ದ ತಾರಿ.

೨. ಅಮ್ಮ ಸ್ಕೂಲ್‌ಗೆ ಲೇಟಾಸು, ದಬಾನ ಕಳಿಕಟ್ಟಿತಾ

೩. ನಾನು ಬೆಂಗಳೂರಿಗೆ ಹೋಗಕ್ರೇ ಬರದು ಮೂರು ದಿನ ಆಗುತ್ತೆ

ಇಲ್ಲಿ ಮುಖ್ಯವಾಗಿ ನೋಡುವುದಾದರೆ ನುಡಿಮಿಶ್ರಣದಲ್ಲಿ ಭಾಷೆಯ ಮೇಲೆ ಹಿಡಿತದ ನಿರ್ಬಂಧವಿಲ್ಲ. ಆದರೆ ನುಡಿಜಿಗಿತದಲ್ಲಿ ಒಬ್ಬ ವ್ಯಕ್ತಿ ದ್ವಿಭಾಷಿಕನಾಗಿದ್ದು ಯುಕ್ತ ಸಂದರ್ಭದಲ್ಲಿ ನುಡಿಜಿಗಿತ ಪ್ರಕ್ರಿಯೆ ಎರಡು ಭಾಷೆಯ ಮೇಲೆ ಸಂಪೂರ್ಣ ಹಿಡಿತವಿದ್ದವರಿಂದ ಮಾತ್ರ ನಡೆಯುತ್ತದೆ. ಹೀಗಾಗಿ ಕೊರಚ ಸಮುದಾಯದಲ್ಲಿ ನುಡಿಬೆರಕೆ ಪ್ರಕ್ರಿಯೆಯು ಮೊದಲೆರಡು ಹಿರಿಯ ತಲೆಮಾರಿನವರಲ್ಲಿ ಹೆಚ್ಚಾಗಿ ಕಂಡುಬಂದರೆ, ಇತ್ತೀಚಿನ ತಲೆಮಾರಿನವರಲ್ಲಿ ಈ ನುಡಿಜಿಗಿತ ಪ್ರಕ್ರಿಯೆ ಹೆಚ್ಚಾಗಿ ಕಂಡುಬರುತ್ತದೆ. ಮತ್ತು ಈ ಪ್ರಕ್ರಿಯೆ ನೆರೆಹೊರೆ ಸಮುದಾಯದವರೊಂದಿಗೆ ಹಾಗೂ ಶಾಲಾ-ಕಾಲೇಜುಗಳಲ್ಲಿ, ಮಾರುಕಟ್ಟೆಗಳಲ್ಲಿ, ಆಸ್ಪತ್ರೆಗಳಲ್ಲಿ, ಹೊಲಗದ್ದೆಗಳಲ್ಲಿ ವ್ಯವಹರಿಸುವಾಗ ನುಡಿಜಿಗಿತ ಪ್ರಕ್ರಿಯೆ ಕಾಣಿಸಿಕೊಳ್ಳುತ್ತದೆ. ಫಿಶ್‌ಮನ್ ಹೇಳುವಂತೆ ಯಾರು ಮಾತನಾಡುತ್ತಾರೆ, ಯಾರೊಂದಿಗೆ ಮಾತನಾಡುತ್ತಾರೆ, ಯಾವ ಸಂದರ್ಭದಲ್ಲಿ ಮಾತನಾಡುತ್ತಾರೆ (ಭಾಗ್ಯಲಕ್ಷ್ಮಿ ಎಂ., ೨೦೦೭, ದ್ವಿಭಾಷಿಕರು) ಎಂಬ ಅಂಶಗಳು ಆ ಭಾಷಿಕ ಪ್ರಕ್ರಿಯೆಗಳನ್ನು ಆಧರಿಸಿರುತ್ತವೆ. ಅದಕ್ಕೆ ತಕ್ಕಂತೆ ಭಾಷಾ ಆಯ್ಕೆ ನಡೆಯುತ್ತ ಭಾಷಿಕ ಪ್ರಕ್ರಿಯೆಗಳು ಉಂಟಾಗುತ್ತಿರುತ್ತವೆ. ಹೆಚ್ಚಿನ ನುಡಿಜಿಗಿತ ಉಂಟಾಗುವುದು ಆಕರ್ಷಣೆಯನ್ನೊಡ್ಡಿ ವ್ಯಾಪಾರ ಮಾಡುವ ಸಂದರ್ಭಗಳಲ್ಲಿ ಕನ್ನಡದ ಔಪಚಾರಿಕ ಸಂದರ್ಭಗಳಿಗೆ ಒಳಗಾಗುವಾಗ ಆತ್ಮೀಯ ಸಂಭಾಷಣೆಗಳಲ್ಲಿ ಸಂತೋಷದ ವಿಷಯಗಳನ್ನು ಹಂಚಿಕೊಳ್ಳುವಾಗ ಕೆಲವೊಮ್ಮೆ ಉದ್ವೇಗಕ್ಕೆ ಒಳಗಾದಾಗ ಹೀಗೆ ಹಲವು ಸಂದರ್ಭಗಳಲ್ಲಿ ಈ ನುಡಿಜಿಗಿತ ಪ್ರಕ್ರಿಯೆ ಕಾಣಿಸಿಕೊಳ್ಳುತ್ತದೆ.

೬.೨. ಭಾಷಾ ಮನೋಭಾವ

ಒಂದು ವಿಶಿಷ್ಟ ಭಾಷಿಕ ಸಮುದಾಯವಾದ ಕೊರಚರು ಬಳಕೆ ಮಾಡುವ ಭಾಷೆಯು ತಮಿಳು, ತೆಲುಗು, ಕನ್ನಡ ಭಾಷೆಗಳ ಮಿಶ್ರಿತವಾದ ಭಾಷೆಯಾದ್ದರಿಂದ ಭಾಷೆಯ ಬಳಕೆಯ ಸಂದರ್ಭದಲ್ಲಿ ಭಾಷಿಕರ ನಡವಳಿಕೆಗಳು, ಮನೋಭಾವ ಭಾಷೆಯ ಬಗೆಗೆ ಭಿನ್ನವಾಗಿರಬಹುದು ಇಲ್ಲ ಒಂದೇ ಆಗಿರಬಹುದು. ಈ ಮಾದರಿಯು ಮನಶಾಸ್ತ್ರಜ್ಞರಿಗೆ ಆಸಕ್ತಿದಾಯಕವಾದಂತೆ ಈ ಬಹುಭಾಷಾ ಧೋರಣೆಗಳು ಭಾಷಾ ಮನೋಭಾವ ಭಾಷಾಶಾಸ್ತ್ರಜ್ಞರಿಗೂ ಆಸಕ್ತಿದಾಯಕವಾಗಿದೆ. ಕೆಲವೊಮ್ಮೆ ಒಂದು ಭಾಷೆಯ ಬಗೆಗಿರುವ ಮನೋಭಾವ ಭಾಷಾಪಲ್ಲಟಗಳಿಗೆ ಹಾಗೂ ಭಾಷೆಯ ಬಗೆಗಿರುವ ದುರಭಿಮಾನ ಭಾಷಿಕರ ಮಧ್ಯ ಸಂಘರ್ಷಗಳಿಗೆ ಕಾರಣವಾಗಲೂಬಹುದು. ಹೀಗಾಗಿ ಒಂದು ಭಾಷೆಯ ಬಗೆಗಿನ ಅಭಿಮಾನ ಭಾಷೆಯನ್ನು ಉಳಿಸಿಕೊಳ್ಳುವ ನೆಲೆಗಳಿಗೆ ಹೆಚ್ಚು ಸಹಕಾರಿಯಾಗುತ್ತದೆ. ಇದನ್ನು ಮೀರಿ ಅಂತಸ್ತು, ಅಧಿಕಾರ, ಸ್ಥಾನಮಾನಗಳು ಪ್ರತಿಷ್ಠೆಯ ಪ್ರಶ್ನೆ ಬಂದಾಗ ಭಾಷೆಯ ಸ್ಥಾನಮಾನಗಳಲ್ಲಿ ವ್ಯತ್ಯಾಸ ಉಂಟಾಗುತ್ತದೆ. ಇವೆಲ್ಲವೂ ಭಾಷೆಯನ್ನು ಬಳಸುವ ಸಂದರ್ಭಗಳನ್ನು ಕುರಿತು ಗಮನಿಸಿದಾಗ ಮಾತ್ರ ತಿಳಿಯಲು ಸಾಧ್ಯ.

ಒಂದು ದ್ವಿಭಾಷಾ ಅಥವಾ ಬಹುಭಾಷಾ ಸಂದರ್ಭಗಳನ್ನು ಕುರಿತಂತೆ ನಡೆದಿರುವ ಹಲವು ಅಧ್ಯಯನಗಳಲ್ಲಿ ಬಹುಸಂಖ್ಯಾತರ, ಅಧಿಕಾರಶಾಹಿ ಭಾಷೆಯ ಬಗೆಗಿನ ಮನೋಭಾವದಿಂದಾಗಿ ಸಾಮಾಜಿಕ ಚಲನೆಯಲ್ಲಿ ಮೇಲ್ಮುಖವಾಗಿ ಚಲಿಸಲು ಭಾಷಿಕರಲ್ಲಿ ಪಲ್ಲಟಗಳು ಉಂಟಾಗಿರುವುದನ್ನು ಕಾಣಬಹುದಾಗಿದೆ. ಮೂಲತಃ ತಮಿಳುನಾಡಿನಿಂದ ವಲಸೆ ಬಂದಂತಹ ಕೊರಚರು ತಾವು ನೆಲೆಯನ್ನು ಕಂಡುಕೊಳ್ಳುವವರೆಗೆ ಪರಿಚಿತವಾದಂತಹ ಭಾಷೆಗಳನ್ನೆಲ್ಲಾ ಬಳಸಿಕೊಂಡು ಒಂದು ಭಾಷೆಯನ್ನಾಗಿ ಮಾಡಿಕೊಂಡಿರುವುದು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಕಂಡುಬಂದಿದೆ. ಹಾಗೆಯೇ ಅವರು ಮಾತನಾಡುವ ಭಾಷೆಯಲ್ಲಿ ತಮಿಳು, ತೆಲುಗು, ಕನ್ನಡ ಪದಗಳು ಕಂಡುಬರುತ್ತವೆ. ಆದ್ದರಿಂದ ಯಾವುದೇ ಒಂದು ಭಾಷೆಯ ಅಳಿವು-ಉಳಿವಿನಲ್ಲಿ ಭಾಷಿಕರ ಮನೋಭಾವ, ಭಾಷಾಧೋರಣೆಗಳು ಬಹುಮುಖ್ಯವಾಗಿರುತ್ತವೆ. ಭಾಷಿಕರು ಸಾಮಾಜಿಕವಾಗಿ ಮೇಲ್ಮುಖ ಚಲನೆ, ಆರ್ಥಿಕ ಸಫಲತೆ ಮತ್ತು ರಾಜಕೀಯ ಸ್ಥಾನಮಾನ ಪಡೆಯಲು ಬಹುಸಂಖ್ಯಾತರ ಭಾಷೆಗಳನ್ನು ಬಳಸುವುದರಿಂದ ಕೆಲವೆಡೆಗಳಲ್ಲಿ ಅಲ್ಪಸಂಖ್ಯಾತರ ಭಾಷೆಗಳು ಅದೃಶ್ಯ ಭಾಷೆಗಳಾಗಿ ಬಿಡುತ್ತವೆ. ಕೈಗಾರೀಕರಣ, ನಗರೀಕರಣ, ಆಧುನೀಕರಣ ಮತ್ತು ಜಾಗತೀಕರಣ ಪ್ರಕ್ರಿಯೆಗಳಿಂದಾಗಿ ದ್ವಿಭಾಷಿಕತೆ ಮತ್ತು ಬಹುಭಾಷಿಕತೆಗಳಾಗುವ ಅವಶ್ಯಕತೆಗಳು ಹೆಚ್ಚಾಗುತ್ತವೆ.

ಕರ್ನಾಟಕದ ಪರಿಸರದಲ್ಲಿ ಕೊರಚರ ಭಾಷಾ ನಡವಳಿಕೆಗಳನ್ನು ಕುರಿತಂತೆ ಕ್ಷೇತ್ರಕಾರ್ಯದಲ್ಲಿ (ಬಳ್ಳಾರಿ-ದಾವಣಗೆರೆ) ಪಡೆಯಲಾದ ಮಾಹಿತಿಯ ಮೂಲಕ ಕಂಡು ಬಂದ ಸಂಗತಿಗಳನ್ನು ವಿವರಿಸಲಾಗಿದೆ. ಈ ಸಮುದಾಯದವರಿಗೆ ಭಾಷೆಯ ಬಗೆಗೆ ಇರುವ ಮನೋಭಾವ ಹೆಚ್ಚಿನ ಸಂದರ್ಭಗಳಲ್ಲಿ ಆರೋಗ್ಯಪೂರ್ಣವಾಗಿದೆ. ಇಲ್ಲಿ ಕೇವಲ ಕೊರಚ ಭಾಷೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಚರ್ಚಿಸಲಾಗುತ್ತದೆ. ಮತ್ತು ಯಾವುದೇ ರೀತಿಯಲ್ಲಿ ಅದೊಂದು ಸ್ವೀಕೃತ ಭಾಷೆಯೆಂದು ಅಲ್ಲ. ಹಾಗೆಯೇ ಭಾಷೆಯ ಬಗೆಗೆ ದುರಭಿಮಾನವಿರುವ ಅಂಶಗಳು ವ್ಯಕ್ತವಾಗಿಲ್ಲ. ಈ ಸಮುದಾಯದವರು ಕನ್ನಡವನ್ನು ಕಲಿತಿರುವುದು ನೆರೆಹೊರೆ ಸಮುದಾಯಗಳೊಂದಿಗೆ, ಸ್ನೇಹಿತರ ಬಳಿ, ಕೆಲಸ ಮಾಡುವ ಕಡೆಗಳಲ್ಲಿ, ಟಿ.ವಿ. ಸಿನಿಮಾ, ರೇಡಿಯೋ, ಶೈಕ್ಷಣಿಕ ಚಟುವಟಿಕೆಗಳು ಮುಂತಾದ ಮಾಧ್ಯಮಗಳ ಮೂಲಕ. ಇವರು ಕನ್ನಡ ಪ್ರದೇಶಗಳಲ್ಲಿ ನೆಲೆಸಿರುವುದರಿಂದ ಕನ್ನಡಕ್ಕೆ ಬೆಲೆ ಹೆಚ್ಚು ಎಂಬ ಭಾವನೆ ಮೂಡಿ ಕನ್ನಡ ಭಾಷೆಯ ಕಡೆಗೆ ಪಲ್ಲಟಗೊಳ್ಳುತ್ತಿದ್ದಾರೆ. ಔಪಚಾರಿಕ ಆವರಣಗಳಲ್ಲಿ ಕೊರಚ ಭಾಷೆಯನ್ನು ಬಳಸುವುದಕ್ಕೆ ಹಿಂಜರಿಕೆಯಿರುವುದರಿಂದ ತಮ್ಮ ಸ್ಥಾನಮಾನಗಳನ್ನು ಭಾಷೆಯ ಮೂಲಕ ತೋರಿಸಲು ಕನ್ನಡವನ್ನು ಕಲಿತು ಬಳಸುತ್ತಿದ್ದಾರೆ.

ಕೊರಚ ಸಮುದಾಯದ ಭಾಷಾ ನಡವಳಿಕೆಗಳು ಬಹಳ ಭಿನ್ನವಾಗಿವೆ. ಕ್ಷೇತ್ರಕಾರ್ಯ ಸಂದರ್ಭದಲ್ಲಿ ಕೊರಚ ಭಾಷೆ ಮತ್ತು ಕನ್ನಡ ಭಾಷೆಯ ಬಗೆಗಿನ ಅಭಿಪ್ರಾಯ ಕುರಿತಂತೆ ಬಹುತೇಕರು ಕನ್ನಡ ಭಾಷೆಯು ತುಂಬಾ ಚನ್ನಾಗಿದೆ ರಾಜ್ಯದ ಎಲ್ಲ ಕಡೆ ಮಾತಾಡುತ್ತಾರೆ. ಹೀಗಾಗಿ ಈ ಭಾಷೆ ಇಷ್ಟವೆಂದು ಹೇಳುತ್ತಾರೆ. ಹಾಗೆಯೇ ಕೊರಚ ಭಾಷೆಯ ಬಗೆಗೆ ಒಂದಿಷ್ಟು ಕೀಳರಿಮೆ ಮತ್ತು ಸಮುದಾಯದ ನೆಲೆಯಾಗಿ ಉಳಿದಿರುವ ಕಾರಣ ಕನ್ನಡದ ಬಗ್ಗೆ ಅಭಿಮಾನವಿದೆ

ಎಂದು ಹೇಳುತ್ತಾರೆ. ಬಹುಮುಖ್ಯವಾಗಿ ಈ ಸಮುದಾಯದವರೊಂದಿಗೆ ವ್ಯವಹರಿಸುವಾಗ, ಕಛೇರಿಗಳಲ್ಲಿ ವ್ಯಾಪಾರ ಸಂದರ್ಭಗಳಲ್ಲಿ ಕನ್ನಡಕ್ಕೆ ಬಹುಬೇಗ ಪಲ್ಲಟಗೊಳ್ಳುತ್ತಾರೆಂಬುದು ತಿಳಿದುಬಂದಿದೆ. ಮತ್ತು ಇವರಲ್ಲಿ ತಮ್ಮ ಮಕ್ಕಳು ಕನ್ನಡದಲ್ಲಿ ಶಿಕ್ಷಣ ಪಡೆದರೆ ಸರ್ಕಾರದಿಂದ ಬರುವ ಎಲ್ಲ ಸೌಲಭ್ಯಗಳನ್ನು ಪಡೆಯಬಹುದು ಎಂಬ ಭಾವನೆ ಇವರಲ್ಲಿದೆ. ಹಾಗೂ ಸಂತೆ ಮಾರುಕಟ್ಟೆಗಳಲ್ಲಿ ಮೊದಮೊದಲು ಕೊರಚ ಭಾಷೆಯನ್ನೇ ಬಳಸುತ್ತಾರೆ. ನಂತರ ಕನ್ನಡಕ್ಕೆ ಪಲ್ಲಟಗೊಳ್ಳುತ್ತಾರೆ. ಬಸ್ಸುಗಳಲ್ಲಿ ಪ್ರಯಾಣಿಸುವಾಗ, ಟಿ.ವಿ. ರೇಡಿಯೋಗಳಲ್ಲಿ, ಧಾರಾವಾಹಿ, ಹಾಡು ಮುಂತಾದ ಮನರಂಜನಾ ಕಾರ್ಯಕ್ರಮಗಳನ್ನು ಕನ್ನಡದಲ್ಲಿ ಕೇಳಲು ಬಯಸುತ್ತಾರೆ. ಹಾಗೂ ಸಮುದಾಯದ ಪುರುಷರು ಬೇರೆ ಬೇರೆ ರಾಜ್ಯಗಳಿಗೆ ವ್ಯಾಪಾರಕ್ಕಾಗಿ ಹೋಗುವುದರಿಂದಾಗಿ ಅವರು ಮಾತಿನ ನಡುವೆ ತೆಲುಗು, ತಮಿಳು ಭಾಷೆಯನ್ನು ಬಳಸುತ್ತಾರೆ. ಹಾಗೆಯೇ ಚಲನಚಿತ್ರ ಗೀತೆಗಳು ಸಿನಿಮಾಗಳನ್ನು ತೆಲುಗು ತಮಿಳು ಭಾಷೆಗಳಿಗೆ ಸಂಬಂಧಿಸಿದಂತೆ ನೋಡುತ್ತಿರುತ್ತಾರೆ. ಹಾಗೆಯೇ ಈ ಸಮುದಾಯದವರು ಯಾರೋ ಒಬ್ಬ ವ್ಯಕ್ತಿಯು ಸಮುದಾಯದವನಾಗಿ ಕಾಣಿಸಿಕೊಂಡು ಕೊರಚ ಭಾಷೆಯನ್ನು ಮಾತಾಡಿದರೆ ಆ ವ್ಯಕ್ತಿಯನ್ನು ನಮ್ಮವನು ಎಂದು ಭಾವಿಸಿಕೊಂಡು ಪರಿಚಿತರಂತೆ ವರ್ತಿಸಲು ಪ್ರಯತ್ನಿಸುತ್ತಾರೆ. ಹೀಗಾಗಿ ಭಾಷೆ ಎಂತಹವರನ್ನಾಗಲಿ ಆತ್ಮೀಯರನ್ನಾಗಿ ಮಾಡುತ್ತದೆ ಎನ್ನುವುದಕ್ಕೆ ಇಂತಹ ಭಾಷಿಕ ನಡವಳಿಕೆಯೇ ಉತ್ತಮ ಉದಾಹರಣೆಗಳಾಗಿವೆ.

ತತ್ಪರಿಣಾಮವಾಗಿ ಭಾಷಾ ವ್ಯವಹಾರ ಒಂದಕ್ಕೊಂದು ಸಂಬಂಧವಿರುವ ಒಂದು ಕ್ರಿಯೆ ಸಾಮಾಜಿಕ ಅಂಶಗಳು ದಿನನಿತ್ಯದ ಭಾಷಾ ಬಳಕೆಯನ್ನು ನಿಯಂತ್ರಿಸುತ್ತಿರುತ್ತವೆ. ಸಾಮಾಜಿಕವಾದ ಗುಂಪು ಭಾಷೆಯನ್ನು ಪಡೆಯುವ, ಕಲಿಯುವ ಕ್ರಿಯೆ ಜೀವನಪೂರ್ತಿ ನಡೆಯುತ್ತಿರುತ್ತದೆ. ಭಾಷೇತರ ಉಪಕರಣಗಳು ಭಾಷೆಯ ಜೊತೆಗೆ ಜೊತೆಗೂಡಿ ಭಾಷಾ ಪ್ರಕ್ರಿಯೆ ನಡೆಯುತ್ತಿರುತ್ತದೆ. ಹೀಗಾಗಿ ಉದ್ದೇಶಿತ ಭಾಷೆಯ ನಿಯಮಗಳಿಗೆ ಅನುಸಾರವಾಗಿ ಭಾಷೆ ಬಳಕೆಯಾಗುವುದಿಲ್ಲ. ಸಂದರ್ಭಕ್ಕೆ ತಕ್ಕಂತೆ ಭಾಷಿಕರು ಭಾಷೆಯನ್ನು ಬಳಸುತ್ತಿರುತ್ತಾರೆ. ಆದ್ದರಿಂದ ದೈನಂದಿನ ಜೀವನದಲ್ಲಿ ಇದೊಂದು ಒಪ್ಪಿತವಾದದ್ದು ಎಂಬ ನಿಯಮಗಳೇನು ಇರುವುದಿಲ್ಲ. ಹೀಗಾಗಿ ಯಾವುದೇ ಒಂದು ಕ್ರಿಯೆಯ ಉದ್ದೇಶಕ್ಕೆ ಅನುಸಾರವಾಗಿ ಸಮಾಜದಲ್ಲಿ ಭಾಷೆ ಬಳಕೆಯಾಗುತ್ತಿರುತ್ತದೆ. ಒಂದು ಸಮುದಾಯದಲ್ಲಿ ಭಾಷೆ ಸಂಕೀರ್ಣ, ಅದು ಹಲವಾರು ಭಾಷಾ ವೈವಿಧ್ಯತೆಗಳ ವಿವಿಧ ವ್ಯವಸ್ಥೆಗಳ ಸಂಗಮವಾಗಿರುತ್ತದೆ.

೬.೩. ಇತರೆ ಸಂದರ್ಭದ ಭಾಷಾ ಬಳಕೆ

ಭಾಷೆಯಿಲ್ಲದೆ ಸಮಾಜದಲ್ಲಿ ಮನುಷ್ಯ ಬಾಳಲಾರ. ಮನುಷ್ಯ ತನ್ನ ಅನಿಸಿಕೆ ಆಲೋಚನೆಗಳನ್ನು ವ್ಯಕ್ತಪಡಿಸುವುದು ಭಾಷೆಯ ಮೂಲಕವೇ ಆಗಿದೆ. ಮನುಷ್ಯ ಇಲ್ಲಿ ಭಾಷೆಯ ಮೂಲಕ ಸಹಕಾರ, ಒಗ್ಗಟ್ಟು, ಅಭಿಮಾನ, ವಿಶ್ವಾಸಗಳಿಂದ ಬದುಕಲು ಸಾಧ್ಯ. ಸಮಾಜದಲ್ಲಿ ವ್ಯಕ್ತಿಯ ಅವಶ್ಯಕತೆಗಳಿಗೆ ಅನುಗುಣವಾಗಿ ಭಾಷೆ ಜನ್ಮತಾಳುತ್ತದೆ. ಹೀಗಾಗಿ ಒಂದೊಂದು ಭಾಷೆಯು ತನ್ನದೇ ಆದ ವ್ಯವಸ್ಥಿತವಾದ ಕ್ರಮವನ್ನು ಹೊಂದಿರುತ್ತದೆ. ಇಲ್ಲಿ ಸಮಾಜದ ಶಕ್ತಿಯಾದ ಭಾಷೆಗೆ ವ್ಯಕ್ತಿಯ ಪಾತ್ರ

ಮುಖ್ಯವಾಗಿರುತ್ತದೆ. ವ್ಯಕ್ತಿಯು ಬದಲಾದಂತೆ ಭಾಷೆಯೂ ಬದಲಾಗುತ್ತಿರುತ್ತದೆ. ಹಾಗೆಯೇ ಸಮಾಜ ಮತ್ತು ಸಂಸ್ಕೃತಿ ಬದಲಾಗುತ್ತದೆ. ಇವುಗಳನ್ನು ಅನುಸರಿಸಿ ಭಾಷೆಯು ಬದಲಾಗುತ್ತದೆ. ಭಾಷೆಯನ್ನು ಆದಷ್ಟು ಸರಳಗೊಳಿಸುವುದು ಈ ಬದಲಾವಣೆಯ ಉದ್ದೇಶವಾಗಿದೆ.

ಭಾಷೆ ಮತ್ತು ಸಂಸ್ಕೃತಿಯು ನಿಕಟವಾದ ಸಂಬಂಧವನ್ನು ಹೊಂದಿರುತ್ತವೆ. ಮತ್ತು ಪರಸ್ಪರ ಒಂದಕ್ಕೊಂದು ಅನುಸರಿಸಿ ಬೆಳೆದುಬಂದಿದ್ದು ಪರಸ್ಪರ ಪೂರಕವಾಗಿವೆ. ಮಾನವನ ಎಲ್ಲಾ ಚಟುವಟಿಕೆಗಳಿಗೂ ಸಮಾಜ ಮತ್ತು ಸಂಸ್ಕೃತಿಗಳೇ ಮೂಲ. ಒಂದೊಂದು ಭಾಷೆಯಲ್ಲಿ ಕಂಡುಬರುವ ಶಬ್ದಸಮೂಹ, ಆ ಪರಿಸರ ಹಾಗೂ ಪರಿಸ್ಥಿತಿಗಳಿಗೆ ಅನುಗುಣವಾಗಿ ಆ ಭಾಷೆ ಸಿದ್ಧವಾಗುತ್ತದೆ. ಈ ರೀತಿಯಲ್ಲಿ ಸಮಾಜ, ಸಂಸ್ಕೃತಿ, ಭಾಷೆ ಒಂದನ್ನೊಂದು ಬೆಸೆದುಕೊಂಡಿರುತ್ತದೆ.

ತಮಿಳು ಭಾಷೆಯ ಉಪಭಾಷೆಯೆಂದು ಗುರುತಿಸಿಕೊಂಡಿರುವ ಕೊರಚರ ಭಾಷೆಯು ಭಿನ್ನತೆ ಮತ್ತು ವೈವಿಧ್ಯಗಳಿಂದ ವೈಶಿಷ್ಟ್ಯಪೂರ್ಣವಾಗಿದೆ. ಈ ಭಾಷಿಕ ಸಮುದಾಯವು ಪೂರ್ವದಲ್ಲಿಯೇ ವಲಸೆಯಾಗಿರುವುದರಿಂದಾಗಿ ಅನ್ಯಭಾಷಾ ಸಂಪರ್ಕ, ಪರಿಸರ ಮತ್ತು ಸಂಸ್ಕೃತಿಯ ಪ್ರಭಾವ, ಸಾಮಾಜಿಕ, ಭೌಗೋಳಿಕ ಕಾರಣಗಳಿಂದಾಗಿ ಇವರ ಭಾಷೆಯಲ್ಲಿ ತೆಲುಗು, ಕನ್ನಡದ ಭಾಷಿಕಾಂಶಗಳು ಕೂಡ ಕಂಡುಬರುತ್ತವೆ. ಇಂತಹ ಒಂದು ಸಾಂಸ್ಕೃತಿಕವಾದ ಭಾಷಿಕ ಅನನ್ಯತೆಯನ್ನು ಹೊಂದಿರುವ ಒಂದು ಸ್ವತಂತ್ರ ಉಪಭಾಷೆಯಾಗಿದೆ. ಪ್ರತಿಯೊಂದು ಜನಾಂಗವೂ ಮಾತನಾಡುವಾಗ ತನ್ನದೇ ರೀತಿಯಾದ ನಿಯಮಗಳನ್ನು ರೂಢಿಸಿಕೊಂಡಿರುತ್ತವೆ. ಈ ನಿಯಮಗಳು ಆ ಜನಾಂಗದ ಸಾಮಾಜಿಕ ವ್ಯವಸ್ಥೆಗಳಿಗೆ ಅವರ ಸಾಂಸ್ಕೃತಿಕ ಆಚರಣೆಗಳಿಗೆ ತಕ್ಕಂತೆ ಇರುತ್ತದೆ. ಆದ್ದರಿಂದ ಇವರು ಆಡುವ ಮಾತಿನಲ್ಲಿ ಕೂಡ ಸಾಮಾಜಿಕ, ಸಾಂಸ್ಕೃತಿಕ ಆಚಾರಗಳಿಗೆ ತಕ್ಕಂತೆ ಕಾಣಬಹುದು.

ಕೊರಚರ ಸಮುದಾಯದವರಲ್ಲಿ ಯಾರಾದರೂ ಸಂಬಂಧಿಕರು ತಮಗಿಂತಲೂ ಹಿರಿಯರು ಕಂಡಾಗ "ಎಪ್ಪ ವಂದಂಗ ಮಾಮ ನಲ್ಲಕೀರಂಗ" (ಯಾವಾಗ ಬಂದಿರ ಮಾವ ಚನ್ನಾಗಿದ್ದಿರಾ) ಎಂದು ಕ್ಷೇಮ ಸಮಾಚಾರವನ್ನು ವಿಚಾರಿಸುತ್ತಾರೆ. ಹಾಗೆಯೇ ಹಿರಿಯರು ಕಿರಿಯರನ್ನು ಕಂಡಾಗ "ಎಂದಾಳ ನಲ್ಲಕೀರ್ಯಾ" ಎಂದು ವಿಚಾರಿಸುವುದನ್ನು ನೋಡಬಹುದಾಗಿದೆ.

ಕೊರಚರಲ್ಲಿ ಮತ್ತೊಬ್ಬರಿಗೆ ಕೆಡುಕಾಗಲಿ ಎಂಬ ಬಯಕೆಯಿಂದ ಬಳಸುವ ಮಾತಿನ ಭಾಷಿಕ ರೂಪವನ್ನು 'ಸಾಪನೆ ಹೋಡ್ರುದು', 'ಸಾಪಳಸರದು' (ಶಾಪ ಹಾಕುವುದು) ಎನ್ನುವರು. ಸಾಮಾಜಿಕವಾಗಿ ಜನರು ಇದನ್ನು ಮಾತಿನಲ್ಲಿ ಪ್ರಯೋಗಿಸುತ್ತಾರೆ. ತಮ್ಮ ಶತ್ರುಗಳಿಗೆ ಅಥವಾ ತಮಗೆ ಆಗಿ ಬಾರದವರ ಮೇಲೆ ಮಾತಿನ ರೂಪದಲ್ಲಿ ಹಗೆ ತೀರಿಸಿಕೊಳ್ಳುವುದನ್ನು ಇಲ್ಲಿ ಕಾಣಬಹುದು. ಕೊರಚ ಸಮುದಾಯದವರ ಶಾಪದ ನುಡಿಗಳ ಭಾಷಿಕ ರೂಪಗಳು ಕೆಳಗಿನಂತಿವೆ.

ನೀಟ ವಾಯಿಗೆ ಮಣ್ಣೋಡ (ನಿನ್ನ ಬಾಯಿಗೆ ಮಣ್ಣುಹಾಕ)

ನಿನ್ನ ತರಗೋಕು ವರ್ತೆಕ್ಯಾ (ನಿನ್ನ ಮಣ್ಣಲ್ಲಿ ಮಲಗಿಸಲಿ)

ನೀಟ ಉಸುರು ಬೂದೋಗ (ನಿನ್ನ ಉಸಿರಿ ನಿಂತೋಗ)

ನೀಟ ವರಗು ಒಡ್ಜೋಗ (ನಿನ್ನ ಹೊಟ್ಟೆ ಹೊಡೆದೋಗ)

ನೀನು ಉದ್ದಾರ ಆಗಮಾಟ (ನೀನು ಉದ್ದಾರ ಆಗುವುದಿಲ್ಲ)

ನೀಟ ಮಾಗತ್ತಗು ಮುಳ್ಳುಮೊತ (ನಿನ್ನ ಮಕಕ್ಕೆ ಮುಳ್ಳು ಬಡಿಯಾ)

ಈ ರೀತಿಯಾಗಿ ಶಾಪ ಹಾಕುವ ಬೈಗುಳಗಳನ್ನು ಕೊರಚರಲ್ಲಿ ಬಳಸುತ್ತಿರುವುದನ್ನು ನೋಡಬಹುದು. ಒಬ್ಬರಿಗೊಬ್ಬರು ಜಗಳ ಆಡುವಾಗ ಪರಸ್ಪರ ಮಾತಿನಲ್ಲಿ ಬೈಯುವಾಗ 'ಒಟ್ಟು' ಎಂಬ ರೂಪವನ್ನು ಬಳಸಿದರೆ ಮುಗಿತು ಅವರೇ ಅಂತಿಮರಾಗುತ್ತಾರೆ. ಮತ್ತೇ ಹಾಕಿದ ವ್ಯಕ್ತಿಯೇ "ಒಟ್ಟು ಪೆರಕುವಾಂಕಿಂಡೆ" ಭಾಷೆಯನ್ನು (ಶಾಪ) ವಾಪಸ್ಸು ತೆಗೆದುಕೊಂಡಿದ್ದನೆ ಎಂಬುವವರಿಗೆ ಯಾರು ಮಧ್ಯ ಮಾತಾಡುವುದಿಲ್ಲ. ಹೀಗಾಗಿ ಇವರಲ್ಲಿ 'ಒಟ್ಟು ಹಾಕುವುದು' ಶಾಪದ ಅಂತಿಮ ರೂಪವಾಗಿ ಕಂಡುಬರುತ್ತದೆ. ಇವರಲ್ಲಿನ ಕೆಲವು ಬೈಗುಳಗಳು ಇಂತಿವೆ.

ದೇವ್ರು ಇಕ್ಕಿರದು ನೆಬೆದ್ದೆಕೀದಿಂಡಿಗೆ ನೀಕು ಎಂದಾನಾಗಬೇಕು (ದೇವರು ಇರುವುದು ನಿಜವಾದರೆ ನಿನಗೆ ಏನಾರ ಆಗಬೇಕು)

ದೇವ್ರೋಡು ನೀಟ ನ್ಯಾಲಕ ಬೂದೂಗಬೇಕು (ದೇವರ ಆಣೆ ನಿನ್ನ ನಾಲಗೆ ಬಿದ್ದೋಗಬೇಕು)

ಅಯ್ಯಾ ದೇವ್ರೇ ಇದು ಏಮಾನು ಕಣ್ ಕಾಂಗರ್ ನಾಟಗು ಹೋಕದವ. (ಅಯ್ಯಾ ದೇವರೆ ಇವನು ಯಾವತ್ತು ಕಣ್ಣಿಗೆ ಕಾಣದ ನಾಡಿಗೆ ಹೋಗುತ್ತಾನೆ.)

ಜೀವನದಲ್ಲಿ ಯಾವುದೇ ವ್ಯಕ್ತಿಯು ತಮಗೆ ಹಲವು ರೀತಿಯಾಗಿ ತೊಂದರೆ ಹಾಗೂ ಕೆಡುಕನ್ನು ಉಂಟುಮಾಡಿದವರ ಮೇಲೆ ದೈಹಿಕವಾಗಿ ಪ್ರತೀಕಾರ ತೀರಿಸಿಕೊಳ್ಳಲು ಸಾಧ್ಯವಿಲ್ಲದಿದ್ದಾಗ ಈ ರೀತಿಯ ಶಾಬ್ಧಿಕ ರೂಪದಲ್ಲಿ ಶಾಪ ಹಾಕುವುದರ ಮೂಲಕ ಜನರಿಗೆ ಕೆಡುಕನ್ನು ಬಯಸುವುದು ಸಾಮಾನ್ಯವಾಗಿ ಎಲ್ಲಾ ಜನ ಸಮುದಾಯಗಳಲ್ಲಿರುವಂತೆಯೇ ಕೊರಚರ ಜನಾಂಗದವರಲ್ಲಿಯೂ ಇದೆ.

ಆಣೆ ಪ್ರಮಾಣ ಮಾಡುವಾಗ

ವ್ಯಕ್ತಿ ಇಲ್ಲಿ ತಾನು ನೋಡಿರುವ ಘಟನೆ, ಆಡುವ ಮಾತು, ಕೇಳಿದ ವಿಷಯ ಇವುಗಳು ನಿಜವೆಂದು ಇನ್ನೊಬ್ಬರಿಗೆ ತಿಳಿಸುವಲ್ಲಿ, ಭರವಸೆಗಳನ್ನು ಮಾತಿನಲ್ಲಿ ನೀಡುವಾಗ ಆಣೆ ಪ್ರಮಾಣ ಮಾಡುವುದು ಸಾಮಾನ್ಯವಾಗಿ ಎಲ್ಲೆಲ್ಲಿಯೂ ಇರುವಂತೆ ಕೊರಚರಲ್ಲಿಯೂ ಇದೆ. ಉದಾ.

ದೇವ್ರೋಡು (ದೇವರ ಆಣೆ)

ಮಕ್ಕಳೋಡು (ಮಕ್ಕಳ ಆಣೆ)

ಅಮ್ಮನೋಡು (ಅಮ್ಮನ ಆಣೆ)

ನನ್ನೋಡು (ನನ್ನ ಆಣೆ)

ನಿನ್ನೋಡು (ನಿನ್ನ ಆಣೆ)

ಅತ್ತೋಡು (ಅವನ ಆಣೆ) ಇತ್ಯಾದಿ.

ಭರವಸೆಗಳನ್ನು ನೀಡುವಾಗ ಆಣೆಯ ರೂಪ

ಆ ದೇವ್ರೂಡು ಸೊಣ್ಣಕ್ಕರದು ನೇಬೆದ್ದ (ಆ ದೇವರ ಆಣೆ ಹೇಳುತ್ತಿರುವುದು ನಿಜ (ಸತ್ಯ)

ಅಮ್ಮೋಡು ನಾ ವಾರಿ ಮಾರಾಯ (ಅಮ್ಮನಾಣೆ ನಾ ಬರ್ತೀನಿ ಮಾರಾಯ)

ನಿನ್ನೋಡು ಎತ್ತೆಂದು ತಾರೆ (ನಿನ್ನ ಆಣೆ ತಗಂಡು ಬಂದು ಕೊಡುತ್ತೀನಿ)

ದೇವ್ರೋಡು ಸೇಂದ ತಾರಕಿ (ದೇವರ ಆಣೆ ಮಾಡಿ ಕೊಡುತ್ತೀನಿ)

ತನ್ನ ಮೇಲೆ ಬಂದಿರುವ ಆಪಾದನೆ ಸುಳ್ಳು ಎಂದು ನಿರೂಪಿಸಲು ಆಣೆ ಪ್ರಮಾಣಗಳು ಮಾಡುವುದಕ್ಕೆ ಮುಂದಾಗುತ್ತಾರೆ. ಏ ನಾನ್ ಏಟಿ ಬೇಕಾನಗೂ ಅಣಿ ಪ್ರಮಾಣ ಸೇಯ್ಯರೆ (ನಾನು ಎಲ್ಲಿ ಬೇಕಾದರೂ ಪ್ರಮಾಣವನ್ನು ಮಾಡುತ್ತೇನೆ) ಇಲ್ಲಿ ಕೊರಚರಲ್ಲಿ ಓಡು ಎಂಬುದು ಆಣೆ, ಪ್ರಮಾಣ, ನಿಜ, ಸತ್ಯ ಎಂಬ ಅರ್ಥಗಳಲ್ಲಿ ಬಳಸುವುದನ್ನು ನೋಡಬಹುದಾಗಿದೆ. ಉದಾ. ಅಮ್ಮನೋಡು ಸೊಣ್ಣಕ್ಕರನೇ ನಾ ಸೊಣ್ಣರದು ನೆಬೆದ್ದೇ ನಾ ಏಟೆನಾಗಟೋ ದೇವ್ರು ಮೇನಿ ಆಣಿ ಸೆಯ್ಯಾರೇ (ತಾಯಿಯ ಆಣೆ ಮಾಡಿ ಹೇಳುತ್ತೇನೆ. ನಾ ಹೇಳುತ್ತಿರುವುದು ನಿಜ. ಎಲ್ಲಿ ಬೇಕಾದರೂ ನಾನು ದೇವರ ಮೇಲೆ ಆಣೆ ಮಾಡಿ ಹೇಳುತ್ತೇನೆ)

ತುಮ್ (ಸೀನು)

ಪ್ರತಿಯೊಂದು ವ್ಯಕ್ತಿಯು ಸೀನುವುದು ದೈಹಿಕ ಚಟುವಟಿಕೆಯ ಒಂದು ಭಾಗ. ಆದರೆ ಸೀನು ಬಂದರೆ ಅದನ್ನು ಕೇವಲ ದೈಹಿಕ ಚಟುವಟಿಕೆಯೆಂದು ಮಾತ್ರ ತಿಳಿಯದೇ ಅದಕ್ಕೆ ವಿಶೇಷ ಅರ್ಥವನ್ನು ನೀಡುವುದುಂಟು. ಯಾರಿಗಾದರೂ ಸೀನು ಬಂದಾಗ ಇಂಗ್ಲಿಷಿನಲ್ಲಿ ದೇವರು ರಕ್ಷಿಸಲಿ, ಜರ್ಮನ್ನರು ಆರೋಗ್ಯವಾಗಿರು, ಟೊಂಗಾ ಜನರು ಯಾರೋ ಹಿತೈಷಿಗಳು ನೆನೆಯುತ್ತಿದ್ದಾರೆ. ಕಾಂಗೋದ ಬೆಂಟೆ ಭಾಷಿಕರು, ಒಳ್ಳೆದಾಗಲಿ ಎಂಬ ಅರ್ಥ ಬರುವ ವಾಕ್ಯವನ್ನು ಹೇಳುತ್ತಾರೆ. ಕನ್ನಡದಲ್ಲಿ ಶುಭ ಅಥವಾ ಅಶುಭ ಎಂದು ಪರಿಗಣಿಸುತ್ತಾರೆ. (ಭಾಷೆ ವಿಶ್ವಕೋಶ, ೨೦೦೦, ಪುಟ–೧೧) ಹಾಗೆಯೇ ಕೊರಚರು ಸೀನಿದಾಗ ನಲ್ಲಾದಾಗೋಟು, ಅಯಿಸ, ಎಂದು ಹೇಳುತ್ತಾರೆ. ಮತ್ತು ಸೀನಿದಾಗ ಕೊರಚರು ಸಹ ಕೆಡುಕು, ಒಳಿತು ಎಂದು ಪರಿಗಣಿಸಿ ಬೇರೆ ಕೆಲಸಗಳನ್ನು ಮಾಡುತ್ತಾರೆ. ಯಾವುದೇ ಒಂದು ಶುಭ ಕಾರ್ಯಕ್ಕೆ ಹೊರಟಾಗ ಸೀನಿದರೆ ಅದು ಒಳ್ಳೆದಾಗುತ್ತೇ, ಒಳ್ಳೇದಾಗುವುದಿಲ್ಲ ಎಂಬುದನ್ನು ಮನಗಂಡು ಕೆಲಸವನ್ನು ಮಾಡುತ್ತಾರೆ.

ಕೊರಚರು ಕೃಷಿ ಮಾಡುತ್ತಿರಲಿಲ್ಲ ಆದರೂ ಕನ್ನಡ ಪ್ರದೇಶದ ಅನೇಕ ಪದಗಳು ಅವರ ಬಳಕೆಯಲ್ಲಿ ಬೆಳೆದಂತ ಧಾನ್ಯಗಳನ್ನು ಅಳತೆ ಮಾಡುವಾಗ ಪಾವು, ಅಚ್ಚೇರು, ಅರ್ಧಸೇರು, ಒಂದು ಸೇರು ಎಂದು ಹೀಗೆ ಕೆಲವು ಸಂದರ್ಭಗಳಲ್ಲಿ ಕೊರಚರ ಭಾಷೆಯು ಬಳಕೆಯಾಗುವುದನ್ನು ನೋಡಬಹುದಾಗಿದೆ.

ಅಧ್ಯಾಯ : ಏಳು

ಸಾಂಸ್ಕೃತಿಕ ಪದಗಳು

ಅಧ್ಯಾಯ: ಏಳು

ಸಾಂಸ್ಕೃತಿಕ ಪದಗಳು

ಭಾಷೆಯ ಬೆಳವಣಿಗೆಯಲ್ಲಿ ಸಾಂಸ್ಕೃತಿಕ ಪದಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ. ಭಾಷೆಯ ಪದಗಳ ಅರ್ಥಕ್ಕೂ ಸಂಸ್ಕೃತಿಗೂ ಬಿಡಿಸಲಾರದ ನಂಟಿರುತ್ತದೆ. ಹೀಗಾಗಿ ಒಂದು ಭಾಷೆಯ ಪದಗಳು ಆಯಾ ಭಾಷೆಯ ಸಂಸ್ಕೃತಿಯ ನೈಜ ಪ್ರತಿಬಿಂಬ ಆಗಿದೆ. ಒಂದು ಬೃಹತ್ ಭಾಷಿಕ ಸಮುದಾಯ ಪ್ರಾದೇಶಿಕ, ಸಾಮಾಜಿಕ ವಿವಿಧ ಕಿರುಘಟಕಗಳಲ್ಲಿ ವಿಭಜನೆಗೊಂಡಿರುತ್ತದೆ. ಇಂತಹ ಸಾಮಾಜಿಕ ವಿಭಜನೆಗೆ ಕಾರಣ ಸಮುದಾಯಗಳು ಪರಂಪರೆಯಿಂದ ನಂಬಿಕೊಂಡು ಆಚರಿಸಿಕೊಂಡು ಬಂದ ತಮಗೆ ವಿಶಿಷ್ಟವಾದ ಜೀವನ ವಿಧಾನ, ವೃತ್ತಿ, ನಂಬಿಕೆ, ಆಚರಣೆಗಳು ಕಾರಣವಾಗಿರುತ್ತವೆ. ಈ ಕಾರಣಗಳಿಂದ ಒಂದು ಸಮುದಾಯವನ್ನು ಬೇರೊಂದು ಸಮುದಾಯದಿಂದ ಪ್ರತ್ಯೇಕಿಸಲು ಸಾಧ್ಯವಾಗುತ್ತದೆ. ಈ ಪ್ರತ್ಯೇಕತೆಗೆ ಕಾರಣವಾಗುವ ಅಂಶಗಳು ಭಾಷಾ ಬಳಕೆಯ ವಿಶಿಷ್ಟ ರಚನೆಗಳಲ್ಲಿಯೂ ಬಿಂಬಿತವಾಗಿರುತ್ತವೆ. ಭಾಷಿಕವಾಗಿ ಪ್ರತಿಯೊಂದು ಭಾಷಾ ಸಮುದಾಯ ತಮ್ಮದೇ ಆದ ಪದಪಟ್ಟಿಯನ್ನು ಹೊಂದಿರುತ್ತದೆ. ಈ ಪದಗಳಿಂದ ಸಮುದಾಯದ ವೃತ್ತಿ, ಸಂಪ್ರದಾಯ, ಆಚರಣೆಗಳು ಮೊದಲಾದ ಸಾಂಸ್ಕೃತಿಕ ವಿವರಣೆಗಳನ್ನು ಒಳಗೊಂಡಿರುತ್ತದೆ. ಸಮುದಾಯದಲ್ಲಿನ ಸಾಂಸ್ಕೃತಿಕ ಆಚರಣೆಗಳು ಹಾಗೂ ಸಮುದಾಯದ ಪಾರಂಪರಿಕ ವೃತ್ತಿಯ ಬಗೆಗಿನ ನಂಬಿಕೆ, ರೂಢಿ ಸಂಪ್ರದಾಯ ಮೊದಲಾದಂತಹ ಸಾಂಸ್ಕೃತಿಕ ವಿವರಗಳನ್ನು ಅರಿಯುವಲ್ಲಿ ಸಾಂಸ್ಕೃತಿಕ ಪದಗಳು ತುಂಬಾ ಅಗತ್ಯವಾಗಿದೆ. ಸಮುದಾಯ, ಮದುವೆ, ಜನನ, ನಾಮಕರಣ, ಋತುಮತಿಶಾಸ್ತ್ರ, ಶವಸಂಸ್ಕಾರ, ಜಾತ್ರೆ ಮೊದಲಾದ ಸಾಂಸ್ಕೃತಿಕ ಸಂದರ್ಭಗಳಲ್ಲಿ ತಮ್ಮದೇ ಆದ ಪರಿಭಾಷೆಗಳನ್ನು ಒಳಗೊಂಡಿರುತ್ತದೆ. ಹಾಗೆಯೇ ವೃತ್ತಿಗೆ ಸಂಬಂಧಿಸಿದಂತೆಯೂ ಪರಿಭಾಷೆಗಳನ್ನು ಹೊಂದಿರುತ್ತದೆ.

ಯಾವುದೇ ಜನಸಮುದಾಯದ ವೃತ್ತಿಯಂತೆ ಆಚರಣೆ, ನಂಬಿಕೆ, ಬದುಕಿನ ವಿಧಾನಗಳು ಆ ಸಮುದಾಯದ ಭಾಷಾ ಬಳಕೆಗೆ ವಿಶಿಷ್ಟ ಅನನ್ಯತೆಯನ್ನು ತಂದುಕೊಡುತ್ತವೆ. ಒಂದು ಭಾಷೆಯ ಬಳಕೆಯ ಸಾಮಾಜಿಕ ವ್ಯವಹಾರಗಳಲ್ಲಿ ಭಾಷಾ ರೂಪಗಳಿಗೆ ಒಂದು ಅರ್ಥವಿದ್ದರೆ ಅದೇ ನಿರ್ದಿಷ್ಟ ಆಚರಣಾತ್ಮಕ ಸಂದರ್ಭ. ಸಾಂಸ್ಕೃತಿಕ ಸನ್ನಿವೇಶಗಳಲ್ಲಿ ಬೇರೊಂದು ಅರ್ಥವನ್ನು

ಪಡೆದುಕೊಳ್ಳುತ್ತದೆ. ಸಮುದಾಯದ ಸಾಂಸ್ಕೃತಿಕ ನೆಲೆಗಳಲ್ಲಿ ಗ್ರಹಿಸಲು ಅರ್ಥ ಮಾಡಿಕೊಳ್ಳಲು ಅವುಗಳನ್ನು ಅಭಿವ್ಯಕ್ತಿಸುವ ಭಾಷಿಕ ಆಕರಗಳೂ ಮುಖ್ಯವಾಗಿರುತ್ತವೆ. ಅಂದರೆ ಸಾಮಾನ್ಯವಾಗಿ ಗಮನಿಸುವುದಾದರೆ ವ್ಯಾವಹಾರಿಕ ಬಳಕೆಯಲ್ಲಿರುವ 'ನೀರು' ದೇವಸ್ಥಾನದ ಆವರಣದಲ್ಲಿ 'ತೀರ್ಥ' ಆಗುತ್ತದೆ. ಹಾಗೆಯೇ ತಿಂಡಿ ಅಥವಾ ಊಟ ಪ್ರಸಾದವೆನಿಸಿಕೊಳ್ಳುತ್ತದೆ. ಹೀಗೆ ಕೊರಚರ ವೃತ್ತಿಯೇತರವಾದ ವಿವಿಧ ಸಂದರ್ಭಗಳ ಆಚರಣೆಯಲ್ಲಿ ಬಳಕೆಯಾಗುವ ಭಾಷಿಕ ವಿವರಗಳನ್ನ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂದರ್ಭಗಳಿಗನುಸಾರವಾಗಿ ಪ್ರಸ್ತುತ ಅಧ್ಯಾಯದಲ್ಲಿ ವಿವರಿಸಲಾಗಿದೆ.

೭.೧. ಸಮುದಾಯದ ಪಾರಂಪರಿಕ ವೃತ್ತಿ ಸಂಬಂಧಿ ಪದಗಳು

ಪಾರಂಪರಿಕವಾಗಿ ಬಂದ ಪ್ರತಿಯೊಂದು ಸಮುದಾಯದ ವೃತ್ತಿ ಭಾಷೆಯು ಸಂಪೂರ್ಣ ಮಾನವಾವಲಂಬಿ ಸಮುದಾಯದ ಇಚ್ಛೆಗೆ ತಕ್ಕಂತೆ ಅದು ರೂಪಗೊಳ್ಳುತ್ತಾ ಹೋಗುತ್ತದೆ. ಆದ್ದರಿಂದಲೇ ಭಾಷೆಗೆ ಅಸ್ತಿತ್ವ ಸಿಗುವುದು ಅದನ್ನು ದುಡಿಸಿಕೊಳ್ಳುವ ವ್ಯಕ್ತಿಗಳಿಂದ ಸಾಮಾನ್ಯವಾಗಿ ಒಂದು ಸಮುದಾಯದ ವೃತ್ತಿ ಭಾಷೆ ಅಂದರೆ ವೃತ್ತಿಪದಗಳು ಆ ಸಮುದಾಯದ ವೈಶಿಷ್ಟ್ಯಗಳನ್ನು ಸಹಜವಾಗಿ ಅವು ತಿಳಿಸುವಂತಹವುಗಳಾಗಿವೆ. ಇಂತಹ ವೃತ್ತಿ ಪದಗಳು ಸಾಮಾಜಿಕ ವಲಯದಲ್ಲಿಯೂ ತಮ್ಮ ವೃತ್ತಿ ವಲಯದಾಚೆಯೂ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಳ್ಳುತ್ತವೆ. ಈ ವೃತ್ತಿ ಪದಗಳ ಮೂಲಕ ಒಬ್ಬ ವ್ಯಕ್ತಿಯ ಸ್ವಭಾವವನ್ನು ಹಿಯಾಳಿಸಲು, ಪ್ರಶಂಸಿಸಲು ಇತ್ಯಾದಿ ಕಾರ್ಯಗಳನ್ನು ಈ ವೃತ್ತಿ ಪದಗಳಿಗೆ ಹೋಲಿಸಿ ಬಳಕೆ ಮಾಡುತ್ತಾರೆ. ಇಂತಹ ಪದಗಳು ಕೊರಚರ ವೃತ್ತಿಯಿಂದ ಬಂದಂತಹವುಗಳಾಗಿವೆ. ಹೀಗೆ ಕರ್ನಾಟಕದ ಉದ್ದಗಲಕ್ಕೂ ನೆಲೆಸಿರುವ ಕೊರಚರು ತಮ್ಮ ವೃತ್ತಿಯಿಂದ ರೈತಾಪಿ ಜನರಿಗೆ ಬೇಕಾಗುವ ಉಪಕರಣಗಳನ್ನು ತಯಾರಿಸುವುದು ಆಗಿದೆ. ಹಾಗೂ ಇವರದೇ ಆದ ಸಾಂಸ್ಕೃತಿಕ (ವೃತ್ತಿಯ) ಚಹರೆಗಳು ಇವೆ. ಆದರೆ ಈ ಆಧುನಿಕ ಜಗತ್ತಿನಲ್ಲಿ ಇವರು ಮಾಡುತ್ತ ಬಂದ ವೃತ್ತಿಗೆ ಅಷ್ಟೊಂದು ಆರ್ಥಿಕ ಲಾಭವಿಲ್ಲ. ಕಾರಣ ಜಾಗತಿಕ ತಂತ್ರಜ್ಞಾನದ ಬಳಕೆಯಿಂದ ಚಾಪೆ, ಹಗ್ಗ, ಪೊರಕೆ ಮುಂತಾದವುಗಳಿಂದ ಈ ಜನಾಂಗದವರು ಮಾಡುವ ಕರಕುಶಲಗಳಿಗೆ ಪೆಟ್ಟುಬಿದ್ದಂತಾಗಿದೆ. ಆದ್ದರಿಂದ ಈ ಸಮುದಾಯದವರು ಇತರೆ ಸಮುದಾಯದ ಜನರಂತೆ ವ್ಯವಸಾಯ ಮತ್ತಿತರ ವೃತ್ತಿಗಳಲ್ಲಿ ತೊಡಗಿದ್ದಾರೆ.

ಸಮುದಾಯದ ಪರಂಪರೆಯನ್ನು ಅರಿಯಲು ಕುಲಸಂಕೇತಗಳಂತೆ ವೃತ್ತಿಯು ಪ್ರಮುಖ ಆಕರವಾಗಿರುವುದನ್ನು ಗುರುತಿಸಬಹುದಾಗಿದೆ. ಹಾಗಾಗಿ ಕೊರಚರ ಸಮುದಾಯದ ಪಾರಂಪರಿಕ ವೃತ್ತಿ ಸಂಬಂಧಿಯಾದ ಪದಗಳನ್ನು ವಿವರಿಸುವುದು ಪ್ರಮುಖವಾಗುತ್ತದೆ. ಅವುಗಳನ್ನು ಈ ಕೆಳಗಿನಂತೆ ವಿಶ್ಲೇಷಿಸಲಾಗಿದೆ.

೧. ಗುಮ್ಮ (ನಾರಗುಮ್ಮ): ಕತ್ತಾಳೆ ನಾರಿನ ಗಿಡ. ಈ ಗಿಡವು ಹೊಲಗದ್ದೆಗಳ ಮೇರೆ (ಒಡ್ಡುಗಳಲ್ಲಿ)ಗಳಲ್ಲಿ ಅಥವಾ ಗುಡ್ಡಗಾಡಿನಲ್ಲಿ ದೊರೆಯುತ್ತದೆ. ಇದನ್ನು ಬಿಳಿನಾರಿನ ಹಗ್ಗ ತಯಾರಿಕೆಯಲ್ಲಿ ಬಳಸುತ್ತದೆ.

ಪದಪ್ರಯೋಗ: ಕೊರಚ ಸಮುದಾಯದಲ್ಲಿ ಗಿಡ್ಡ-ಸ್ವಲ್ಪ ದಪ್ಪವಿರುವ ಹೆಣ್ಣನ್ನು ಗುಮ್ಮ ಎಂದು ಸಂಬೋದಿಸುತ್ತಾರೆ. ಎಂದಲೇ ಅದು ನಲ್ಲ ನಾರಗುಮ್ಮ ಇಂದಾಟ ಕೀದು (ಏನಲೇ ಒಳ್ಳೇ ನಾರಿನ ಬುಡ ಇದ್ದಂಗ ಇದ್ದಾಳೆ) ಎಂದು ಸಂಬೋಧಿಸುತ್ತಾರೆ.

೨. **ನಾರರಕರ ಕೊಳ್ಳಿ:** (ಉದ್ದನೆಯ ಕುಡಗೋಲು) ಕತ್ತಾಳೆ ಅಥವಾ ಈಚಲು ಗರಿಯನ್ನು ಕೊಯ್ಯಲು ಬಳಸುವ ಸಾಧನ. ಕತ್ತಾಳೆ ನಾರಿನ ಗರಿಯ ಸುತ್ತ ಮುತ್ತ ಈಚಲು ಗರಿಯ ತುದಿಯಲ್ಲಿ ಮುಳ್ಳುಗಳು ಇರುತ್ತದೆ. ಹೀಗಾಗಿ ಅದನ್ನು ಬೇರೆ ಗಿಡಗಳನ್ನು ಕೊಯ್ದ ಹಾಗೆ ಕೊಯ್ಯಲು ಆಗುವುದಿಲ್ಲ. ಆ ಕಾರಣವಾಗಿ ಉದ್ದನೆಯ ಕುಡುಗೋಲನ್ನು ತೆಗೆದುಕೊಂಡು ಕೊಯ್ಯುತ್ತಾರೆ. ಇದನ್ನು ಕೊರಚರು ನಾರರಕರ ಕೊಳ್ಳಿ ಎಂದು ಕರೆಯುತ್ತಾರೆ.

ಪದಪ್ರಯೋಗ: ಅದಟ ಕೀ ಎಂದಲೇ ಮೊರಾಯ ನಾರರಕರ ಕೊಳ್ಳಿ ಇಂದಾಟಕೀದು. (ಅವರ ಕೈ ಏನಲೇ ಎಪ್ಪ ನಾರುಕೊಯ್ಯು ಕುಡುಗೋಲು ಇದ್ದಂಗೈತೆ).

೩. **ಹಂಚಕಳಿಕಿರ ಸೆಕ್ಕ:** (ಎಸಳ್ ಎಸಳಾಗಿ ಸೀಳುವ ಚಕ್ಕೆ) ಈ ಉಪಕರಣವನ್ನು ಕತ್ತಾಳೆ ನಾರಿನ ಮತ್ತು ಈಚಲು ಗರಿಯ ಮುಳ್ಳುಗಳನ್ನು ತೆಗೆಯಲು ಮತ್ತು ಕತ್ತಾಳೆ ನಾರು ದಪ್ಪ ಮತ್ತು ದೊಡ್ಡದಿರುತ್ತದೆ. ಅದನ್ನು ಸಣ್ಣದಾಗಿ ಸೀಳುವಲ್ಲಿ ಈ ಚಕ್ಕೆಯನ್ನು ಬಳಸುತ್ತಾರೆ. ಇದನ್ನು ಕೊರಚರು ಹಂಚಕಳಿಕಿರ ಸೆಕ್ಕ ಎಂದು ಕರೆಯುತ್ತಾರೆ.

೪. **ಮೊಡುಗು:** ನೀರಿನಗುಂಡಿ. ಇಲ್ಲಿ ಕೊಯ್ಯದಂತ ನಾರನ್ನು ಸೆಕ್ಕೆಯಿಂದ ಸೀಳಿ ಒಂದೊಂದು ೨೦-೩೦ ಎಸಳುಗಳನ್ನು ಕೂಡಿಸಿ ಒಂದು ಒರೆ ಕಟ್ಟಿ ಅದನ್ನು ನೀರಿನ ಗುಂಡಿಗೆ ಹಾಕುತ್ತಾರೆ. ಅದನ್ನು ಸುಮಾರು ೧೫ ರಿಂದ ೨೦ ದಿನದ ತನಕ ಬಿಡುತ್ತಾರೆ. ಹೀಗೆ ನಾರನ್ನು ನೆನೆಹಾಕಲು ಬಳಸುವ ನೀರಿನ ಗುಂಡಿಯನ್ನು ಕೊರಚರು 'ಮೊಡಗು' ಎಂದು ಕರೆಯುತ್ತಾರೆ.

೫. **ಕೊಡ್ತಿ:** ಇದನ್ನು ನೀರಿನಲ್ಲಿ ನೆನೆ ಹಾಕಿದನ್ನು ತೆಗೆದು ಒಂದೊಂದು ಕಟ್ಟನ್ನು ತೆಗೆದು ನೀರಿನ ದಂಡೆಯ ಮೇಲೆ ಒಂದು ಬಂಡೆ ಮೇಲೆ ಹಾಕಿ ಬಡಿಯಲ್ಲಿ ಈ ಕೊಡ್ತಿಯನ್ನು ಬಳಸುತ್ತಾರೆ. ಈ ಕೊಡ್ತಿಯಿಂದ ಬಡಿದಾಗ ನೀರಿನ ಮೇಲಿರುವ ಚಿಪ್ಪೆ ಹೋಗುತ್ತದೆ. ಎಳೆಎಳೆಯಾಗಿ ನಾರು ಬಡಿಬಿಡಿಯಾಗುತ್ತದೆ. ಹಾಗಾಗಿ ಕೊಡ್ತಿಯನ್ನು ಕೊರಚರು ನಾರನ್ನು ಬಳಸಲು ಬಳಸುತ್ತಾರೆ.

ಪದಪ್ರಯೋಗ: ಸಾಮಾಜಿಕ ವಲಯದಲ್ಲಿ ಈ ಪದವನ್ನು ವ್ಯಕ್ತಿಯ ಆಳನ್ನು ನೋಡಿ ಅವನನ್ನು ಹಿಯಾಳಿಸಲು ಹೆಚ್ಚಾಗಿ ಈ ಪದವನ್ನು ಬಳಸುತ್ತಾರೆ. ಅಂದರೆ ವ್ಯಕ್ತಿಯು ಒಳ್ಳೆ ದಷ್ಟ-ಪುಷ್ಟವಾಗಿದ್ದಾರೆ. ಕೊಡ್ತಿ ಇದ್ದಂಗ ಇದಾನೆ ನೋಡು ಎಂದು ಸರ್ವೇಸಾಮಾನ್ಯ ಮಾತಾಡುತ್ತಾರೆ. ಅಂದರೆ ಕೊಡ್ತಿ ಇದ್ದಂಗ ಇದಿಯಾ ಈ ಚೀಲ ಎತ್ತೋಕೆ ಆಗಲ್ವ ಎಂದು ಹಿಯಾಳಿಸುತ್ತಾರೆ.

ರಾಟೆ: ಇದು ಇತ್ತೀಚಿಗೆ ಬಂದಂತಹ ಉಪಕರಣ. ಇದನ್ನು ನಾರಿನಿಂದ ಮಾಡಿದ ಹಗ್ಗವನ್ನು ಉರಿಯಾಗಿ ಮಾಡಲು ಬಳಸುತ್ತಾರೆ. ತಿರುವಲು ಬಳಸುತ್ತಾರೆ. ಅದರಿಂದ ಬೇರೆ ಬೇರೆ ರೀತಿಯ

ಸಲಕರಣೆಗಳನ್ನು ಮಾಡಬಹುದು.

ಪದಪ್ರಯೋಗ: ಎಂದಾಳ ನಲ್ಲಕೀರಿ ಇಲ್ಯಾ ರಾಟಿ ತಿರಗನಟ ತಿರಗಕ್ಕರೆಯಲ್ಲೇ (ಏನಪ ಚನ್ನಗಿರಿಯ ಇಲ್ಲ ರಾಟಿ ತಿರುಗಿದಂಗ ತಿರುಗಿತಿಯಲ್ಲೋ)

ಹಾಗೆಯೇ ಈ ಕತ್ತಾಳೆ ನಾರಿನಿಂದ ಮತ್ತು ಈಚಲು ಗರಿಗಳಿಂದ ಉತ್ಪಾದಿಸುವ ವಸ್ತುಗಳು ಈ ಮುಂದಿನಂತಿವೆ.

ಚಾಪಾ, ಕಸಪರಕ: ಈಚಲು ಗರಿಗಳಿಂದ ಮಾಡಿದ ಉಪಕರಣಗಳು.

ಹುರಿ: ಇದು ಈಚಲು ಪರಕೆ ಕಟ್ಟಲು, ಅಥವಾ ಯಾವುದೇ ಒಂದು ಕಟ್ಟು ಕಟ್ಟಲು ಬಳಸುವ ಸಾಧನವಾಗಿದೆ.

ಸೀಳ್‌ಕಡ್ಡಿ: ಈಚಲು ಗಿಡದ ಗರಿಯನ್ನು ಎರಡು ಭಾಗ ಮಾಡಿದ ಒಂದೊಂದು ಕಡ್ಡಿಯನ್ನು ಸೀಳ್‌ಕಡ್ಡಿ ಎನ್ನುತ್ತಾರೆ.

ಕುಂಚಮಟ್ಟ: ಸುಣ್ಣ ಬಳಿಯಲು ತಯಾರಿಸುವ ಒಂದು ಬಗೆಯ ಈಚಲು ಗರಿಯಿಂದ ಮಾಡಿದ ಉಪಕರಣ.

ಕಟ್ಲಕರಗ: ವರಸಿನ ಹಗ್ಗ (ಕತ್ತಾಳೆ ನಾರಿನಿಂದ ಮಾಡಿದ್ದು)

ಹಿಡಿಕರಗು: ಕತ್ತಾಳೆ ನಾರಿನಿಂದ ಮಾಡಿದ್ದು ಎತ್ತು ಕಟ್ಟಲು ಮತ್ತು ಕುಂಟೆ, ಮಡಿಕೆಯನ್ನು ಕಟ್ಟಲು ಬಳಸುತ್ತಾರೆ.

ಬೆರ್‌ಕರಗು: (ಮಣಿಹಗ್ಗ) ಇದನ್ನು ಸರಕು ಲಾರಿಗಳು ಕಟ್ಟಲು ಬಳಸುತ್ತಾರೆ.

ಮೂಗ್ದಾಣ: ಹೋರಿಗಳಿಗೆ ಪಳಗಿಸಲು ಕಟ್ಟುತ್ತಾರೆ.

ಕೊಳ್ಳಗ್ಡ: ಎತ್ತಿನ ಕೊರಳಿಗೆ ಕಟ್ಟುವ ಹಗ್ಗ.

ನಗಸುತ್ತ: ಬಂಡಿಯ ನೊಗ ಮತ್ತು ರಂಟೆ, ಕುಂಟೆ, ಮಡಿಕೆಯ ನೊಗಗಳನ್ನು ಬಿಗಿಯಾಗಿರಲೆಂದು ಕಟ್ಟುವ ಉಪಕರಣ.

ಉರ್ರಿ: 'ನೆಲುವು' ಇದನ್ನು ಹಾಲು ಮೊಸರು, ಬುತ್ತಿಯನ್ನು ಇಡಲು ಬಳಸುತ್ತಾರೆ.

ಸಿಕ್ಕ: ಚಿಕ್ಕೆ, ಕುಕ್ಕೆ ಎಂದು ಕರೆಯುತ್ತಾರೆ. ಈ ವಸ್ತುವನ್ನು ಎತ್ತುಗಳಿಗೆ ಪೈರಿಗೆ ಗಡೆ ಹಾಕುವ ಸಂದರ್ಭದಲ್ಲಿ ಕಟ್ಟುತ್ತಾರೆ. ಅದು ಎತ್ತುಗಳು ಬೆಳೆಯನ್ನು ತಿನ್ನಬಾರದು ಎಂದು ಕಟ್ಟುತ್ತಾರೆ.

ಪಲಪು: ದನಗಳನ್ನು ಕಟ್ಟಲು ಬಳಸುವ ಸಾಧನ. ಇದನ್ನು ಕಣ್ಣಿ ಎನ್ನುತ್ತಾರೆ.

ಕೊಳಕಣ್ಣಿ: ಬಂಡಿಗೆ ಎತ್ತುಗಳನ್ನು ಕಟ್ಟುವಾಗ, ಕೊರಳಿಗೆ ಮತ್ತು ಬಂಡಿಯ ನೊಗಕ್ಕೆ ಕಟ್ಟುವ ಸಾಧನವಾಗಿದೆ.

೭.೨ ಆಚರಣೆಗೆ ಸಂಬಂಧಿಸಿದ ಪದಗಳು

ಭಾಷೆ ಮತ್ತು ಸಂಸ್ಕೃತಿಗೆ ನಿಕಟವಾದ ಸಂಬಂಧವಿರುವ ಹಾಗೆ ಅದರದೆ ಆದ ಪರಿಭಾಷೆಯು ಇದೆ. ಸಮುದಾಯಗಳು ಬಳಸುವ ಭಾಷೆಗಳ ಹಿಂದಿರುವ ಸಾಂಸ್ಕೃತಿಕ ಅರ್ಥಗಳ ಅರಿವು ಇಂದು ಅಧ್ಯಯನಗಳಿಗೆ ಅಗತ್ಯವಾಗಿದೆ. ಒಂದು ಭಾಷಿಕ ಸಮುದಾಯ ತನ್ನ ಪರಂಪರೆಯ ಸಂವಹನಕ್ಕಾಗಿ ಹೇಗೆ ಭಾಷೆಯನ್ನು ಸಂಗೋಪಿಸಿಕೊಳ್ಳುತ್ತದೆ ಎಂಬುದು ಇಲ್ಲಿ ಮುಖ್ಯವಾಗುತ್ತದೆ. ಕೊರಚ ಸಮುದಾಯವು ತಮ್ಮ ಕೌಟುಂಬಿಕ ವಲಯದಲ್ಲಿ ಸಂಸ್ಕೃತಿ ಆಚರಣೆಯ ವಿಷಯವಾಗಿ ಕೊರಚ ಭಾಷೆಯನ್ನು ಬಳಸುತ್ತಾರೆ. ಹಾಗೆಯೇ ಇತರೆ ಸಮುದಾಯದವರೊಂದಿಗೆ ಬೇರೆ ಬೇರೆ ಹಬ್ಬ ಆಚರಣೆಯ ಸಂದರ್ಭಗಳಲ್ಲಿ ಪ್ರಾದೇಶಿಕವಾಗಿ ಬಳಕೆಯಾಗುವ ಕನ್ನಡವನ್ನು ಬಳಸುವುದು ಕ್ಷೇತ್ರಕಾರ್ಯದ ಮಾಹಿತಿಯ ಮೂಲಕ ತಿಳಿಯುತ್ತದೆ.

ಕೊರಚ ಸಮುದಾಯವನ್ನು ಸೂಕ್ಷ್ಮವಾಗಿ ಗಮನಿಸಿದಾಗ ತಮ್ಮ ಸಂಸ್ಕೃತಿ, ಆಚರಣೆಯ ಸಂದರ್ಭದಲ್ಲಿ ಕೊರಚ ಭಾಷೆಯನ್ನು ಬಳಸುವುದು ಕಂಡುಬರುತ್ತದೆ. ಮದುವೆ (ಕನ್ನೇಳು), ಜನನ (ಪರಕರದು), ನಾಮಕರಣ (ಪೇರೇಕ್ಕಿರದು), ಋತುಮತಿ (ಬೇರ್ದಾಗರದು), ಶವಸಂಸ್ಕಾರ (ಮಣ್ಣುಸೇಯರದು) ಮೊದಲಾದ ಸಂಬಂಧಪಟ್ಟ ಆಚರಣೆಗಳಲ್ಲಿ ಕೊರಚ ಭಾಷೆಯನ್ನು ಬಳಸುವುದು ಕಂಡುಬರುತ್ತದೆ. ಹಾಗೆಯೇ ಹಟ್ಟಿಯ ಸತ್ಯಮ್ಮ, ಸಲ್ಲಮ್ಮ, ವಲಸು ದೇವ್ರು ಮತ್ತಿತರ ಹಬ್ಬ ಹರಿದಿನಗಳಲ್ಲಿಯೂ ಕೊರಚ ಭಾಷೆಯನ್ನು ಬಳಸುವುದು ಕಂಡುಬರುತ್ತದೆ. ಈ ಆಚರಣೆಗಳ ಸಂದರ್ಭದಲ್ಲಿ ತಮ್ಮ ನೆರೆಹೊರೆಯ ಕೊರಚರ ಹಟ್ಟಿಯ ಜನರೇ ಹೆಚ್ಚಾಗಿ ಭಾಗವಹಿಸುವುದು ಮತ್ತು ವೈವಾಹಿಕ ಸಂಬಂಧವನ್ನು ಬೆಳೆಸುವುದರಿಂದ ಕೊರಚ ಭಾಷೆಯನ್ನು ಹೆಚ್ಚಾಗಿ ಬಳಸುವುದಕ್ಕೆ ಕಾರಣವಾಗಿರಲೂಬಹುದು. ಆದರೆ ಇತ್ತೀಚಿಗೆ ಆಧುನಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ಮತ್ತು ಆರ್ಥಿಕವಾಗಿ ಮುಂದುವರೆದಂತೆ ಸಮುದಾಯದ ಪ್ರತಿಯೊಂದು ಆಚರಣೆಯಲ್ಲಿ ಇತರೆ ಸಮುದಾಯದವರು ಭಾಗವಹಿಸುವುದರಿಂದ ಕನ್ನಡದ ಬಳಕೆಯು ಇವರ ಆಚರಣೆಗಳಲ್ಲಿ ಕಂಡುಬರುತ್ತದೆ. ಹೀಗಾಗಿ ಕೊರಚ ಸಮುದಾಯದ ಸಂಸ್ಕೃತಿ–ಆಚರಣೆಯ ಸಂದರ್ಭದಲ್ಲಿ ಕಂಡುಬರುವಂತಹ ಪದಗಳನ್ನು ಈ ಕೆಳಗಿನಂತೆ ವಿಶ್ಲೇಷಿಸಲಾಗುವುದು.

ಕನ್ನೇಳು (ಮದುವೆ): ವಯಸ್ಸಿಗೆ ಬಂದ ಮಕ್ಕಳಿಗೆ ಮಾಡುವಂತ ಒಂದು ಪದ್ಧತಿ.

ಪೆತ್ತಾನು (ನಿಶ್ಚಿತಾರ್ಥ): ಮದುವೆ ಕಾರ್ಯ ಮಾಡುವುದಕ್ಕೆ ಪೂರ್ವದಲ್ಲಿ ಗಂಡು ಹೆಣ್ಣಿನ ಕಡೆಯವರು ಸೇರಿ ಮದುವೆ ಮಾಡಲು ಪರಸ್ಪರ ಒಪ್ಪಿಗೆಯ ಶಾಸ್ತ್ರ ಇದಾಗಿದೆ.

ಪ್ರಯೋಗ: ಎಂದಾಳ ನಿಂಗ ಮಗಟಾದು ಪೆತ್ತನಾಸ (ಏನಪ್ಪ ನಿನ್ನ ಮಗನ ನಿಶ್ಚಿತಾರ್ಥ ಆಯಿತ)ಯ

ಮದುಮಕ್ಯಾಂಗ (ಮದುಮಕ್ಕಳು): ವಧುವರರಿಗೆ ಅರಿಶಿಣ ಹಚ್ಚಿ ಮದುವೆಗೆ ಸಿದ್ಧತೆಗೊಳಿಸುವರು, ಮದುಮಗ (ಮದ್ಲಿಂಗ) ಮದುವಣಗಿತ್ತಿ (ಮದ್ಲಗಿತ್ತಿ)ಯರನ್ನು ಮದುಮಕ್ಕಳು ಎನ್ನುವರು.

ಪ್ರಯೋಗ: ಮದುಮಕ್ಕಂಗಳುಗು ದಬಾನ ಮಂಜಲು ಅಂಟಿಕೆಂಗು ತನ್ನಿವಾಕಸಗಿ ಪೊಗುದಾಸು (ಮದುಮಕ್ಕಳಿಗೆ ಬೇಗ ಅರಿಶಿಣ ಹಚ್ಚಿ ನೀರು ಹಾಕಬೇಕು ಹೊತ್ತಾಯಿತು.)

ಎರಿಸಿಕಾಳು (ಅಕ್ಷತೆಕಾಳು): ಕುಂಕುಮ ಮತ್ತು ಅರಿಶಿಣದಲ್ಲಿ ಬೆರೆಸುವ ಅಕ್ಕಿಯನ್ನು ಅಕ್ಷತೆಕಾಳು ಎನ್ನುವರು. ಇದನ್ನು ವದುವರರಿಗೆ ಆಶೀರ್ವದಿಸಲು ಉಪಯೋಗಿಸುತ್ತಾರೆ.

ಪ್ರಯೋಗ: ಅಡ್ಡೇರು ಎರಿಸಿಕಾಳು ವೋಟ್‌ಪೊಂಗೋ (ಎಲ್ಲಾರು ಅಕ್ಕಿಕಾಳು ಹಾಕಿ ಹೋಗಿರಿ).

ನಿವಾಳೆವಾಂಗು (ಇಳೆದೆಗೆ): ಅನ್ನ ಹಾಗೂ ಇದ್ದಿಲು ಮಿಶ್ರಿತ ನೀರಿನಿಂದ ಶುಭಕಾರ್ಯಗಳ ಸಂದರ್ಭದಲ್ಲಿ ಎಳೆಹಗೆಯುತ್ತಾರೆ. ವದುವರರಿಗೆ ದೃಷ್ಟಿತಾಕಿರಬಹುದು ಎಂಬ ಉದ್ದೇಶದಿಂದ ಈ ಕಾರ್ಯವನ್ನು ಮಾಡುತ್ತಾರೆ.

ಪ್ರಯೋಗ: ಮದುಮಕ್ಯಾಂಗ ಊಟಂಚುಗು ವಂದಪ್ಪ ನಿವಾಳೆವಾಂಗಂಗೋ (ಮದುಮಕ್ಕಳು ಮನೆಯ ಹತ್ತಿರ ಬಂದಾಗ ಇಳೆದೆಗಿಯಿರಿ).

ಕಂಕಣ: ಕೊರಚ ಸಮುದಾಯದಲ್ಲಿ ಪ್ರತಿಯೊಂದು ಶುಭಕಾರ್ಯಕ್ಕೂ ಕಂಕಣವನ್ನು ಕಟ್ಟುತ್ತಾರೆ. ಕಂಕಣ ಅಂದರೆ ವೀಳ್ಯದೆಲೆಯನ್ನು ಸುತ್ತಿ ಅದಕ್ಕೆ ಒಂದು ಮೊಳ ಉದ್ದದ ಐದುಸುತ್ತು ದಾರವನ್ನು ಕಟ್ಟುತ್ತಾರೆ.

ಪ್ರಯೋಗ: ಕನ್ನೇಳುತುಗ ವಂದಿಕ್ಕಿರಾಯಿಲಿಗಿ ಕಂಕಣತ ಕಟ್ಟಂಗೋ (ಮದುವೆಗೆ ಬಂದವರಿಗೆ ಕಂಕಣವನ್ನು ಕಟ್ಟೀ)

ಕಳಸ (ಕಳಶ): ಶುಭ ಕಾರ್ಯಗಳಲ್ಲಿ ಕಳಶ ಬೇಕೆ ಬೇಕು. ಇದನ್ನು ಒಂದು ತಾಮ್ರದ ಚರಿಗೆಯ ಕಂಟದ ಸುತ್ತಲು ಐದು ಅಥವಾ ಒಂಭತ್ತು ವೀಳ್ಯೆದೆಲೆಯನ್ನು ಇಟ್ಟಿರುತ್ತಾರೆ. ಮತ್ತು ಎರಡು ದೀಪ ಹಚ್ಚಿ ದೇವರಿಗೆ, ಮದುಮಕ್ಕಳಿಗೆ ಮತ್ತಿತರ ಆಚರಣೆಯಲ್ಲಿ ಬೆಳಗಲು ಉಪಯೋಗಿಸುತ್ತಾರೆ.

ಪ್ರಯೋಗ: ಕಾಳವ್ವ ಕಳಸ ಬೆಳಗಿ ಅಕ್ಕಿಕಾಳೋಡು (ಕಾಳವ್ವ ಕಳಶ ಬೆಳಗಿ ಅಕ್ಕಿಕಾಳು ಹಾಕು).

ತಾಳಿ (ಮಂಗಲಸೂತ್ರ): ಮದುಮಗ ಮದುಮಗಳ ಕೊರಳಿಗೆ ಶಾಸ್ತ್ರೋಕ್ತವಾಗಿ ಕಟ್ಟುವಂತಹದ್ದು.

ಪ್ರಯೋಗ: ತಾಳೆತ್ತೆಂದು ಅಡ್ಡೇರು ಅಂಟಿ ನಮಗಿರಸೆಯಂಗು (ಮಂಗಲ ಸೂತ್ರವನ್ನು ಎಲ್ಲಾರು ಮುಟ್ಟಿ ಮನಸ್ಕಾರ ಮಾಡಿ)

ತಲಬಾಲ ತನ್ನಿ: ಮದುವೆ ಸಂದರ್ಭದಲ್ಲಿ ಮದುಮಕ್ಕಳಿಗೆ ತಾಳಿಯನ್ನು ಕಟ್ಟಿಯಾದ ಮೇಲೆ ನೀರನ್ನು ಎರೆಯುವ ಶಾಸ್ತ್ರಕ್ಕೆ ಕೊರಚ ಭಾಷೆಯಲ್ಲಿ ತಲಬಾಲತನ್ನಿ ಎಂದು ಕರೆಯುತ್ತಾರೆ.

ಪ್ರಯೋಗ: ಮದುಮಕ್ಯಾಂಗಳತ ಕಂಕಣತ ಅಮಕಾಸಿಗಿ ತಲಬಾಲ ತನ್ನಿ ವಾಂರಗೋ (ಮದುಮಕ್ಕಳ ಕಂಕಣ ಬಿಚ್ಚಬೇಕು ಬೇಗ ನೀರು ಹಾಕಿ).

ವಕ್ಕೋಪೋದ (ಒಪ್ಪತ್ತು): ಕೊರಚ ಸಮುದಾಯದಲ್ಲಿ ಯಾವುದೇ ಹಬ್ಬ ಹರಿದಿನಗಳಲ್ಲಿ ಹರಕೆ ತೀರಿಸುವಾಗ ಒಪ್ಪತ್ತು ಇರುತ್ತಾರೆ. ಮತ್ತು ಮದುವೆಯ ಸಂದರ್ಭದಲ್ಲಿ ತಾಳಿ ಕಟ್ಟುವ ಹಿಂದಿನ ದಿನದಿಂದಲೇ ಉಪವಾಸ ಒಪ್ಪತ್ತು ಇರುತ್ತಾರೆ. (ಮದುಮಕ್ಕಳು)

ಪ್ರಯೋಗ: ಎಂದಾಳ ಮದುಮಕ್ಯಂಗಳಟ ವಕ್ಕೋಪೋದೆಂತೆಂದು ಉಡಿಚ್ಚಿಗೆಂದು (ಏನಪ್ಪ ಮದುಮಕ್ಕಳ ಒಪ್ಪತ್ತು ಬಿಡಿಸುಮತ್ತೆ)

ಪ್ಯಾರಂಟ್ರಾಲ್ (ಮದುವೆಶಾಸ್ತ್ರ ಮಾಡುವವರು): ಕೊರಚ ಸಮುದಾಯದಲ್ಲಿ ಮದುವೆ ಕಾರ್ಯವನ್ನು ಮಾಡಲು ಪ್ರಾರಂಟ್ರಾಲ್‌ಗಳನ್ನು ನೇಮಿಸುತ್ತಾರೆ. ಇವರು ಮದುವೆ ಕಾರ್ಯದಲ್ಲಿ ಮದುಮಕ್ಕಳಿಗೆ ಐದು ಬಾರಿ ಅರಿಶಿಣ ಹಚ್ಚುವ ಶಾಸ್ತ್ರ ಇರುತ್ತದೆ. ಈ ಶಾಸ್ತ್ರವನ್ನು ಪೂರೈಸಲು ಮೂರು ಹೆಣ್ಣು, ಇಬ್ಬರು ಗಂಡು ಮಕ್ಕಳನ್ನು ನೇಮಿಸಿರುತ್ತಾರೆ. ಶಾಸ್ತ್ರ ಕೇಳಿಯೇ ಬಲಬಲ ನೋಡಿ ನೇಮಿಸಿರುತ್ತಾರೆ. ಇವರು ಮದುಮಕ್ಕಳು ತಾಳಿ ಕಟ್ಟಿ ಒಪ್ಪತ್ತು ಬಿಡುವವರೆಗೆ ಮದುವೆಯ ಎಲ್ಲಾ ಕಾರ್ಯದಲ್ಲಿ ಇರಬೇಕಾಗುತ್ತದೆ.

ಪ್ರಯೋಗ: ಏ ಪ್ಯಾರಂಟ್ರಾಲ್‌ನ ಕಡಂಗು ಪೋಗದಾಸು (ಏ ಮದುವೆಶಾಸ್ತ್ರ ಮಾಡುವವರನ್ನು ಕರೆಯಿರಿ.)

ಕೊಮ್ಮು (ನೇರಳೆ ಮರದ ಟೊಂಗೆ): ಕೊರಚರ ಮದುವೆ ಸಂದರ್ಭದಲ್ಲಿ ಈ ನೇರಳೆ ಮರವು ಅತ್ಯಂತ ಪ್ರಮುಖವಾದದ್ದು. ಇದನ್ನು ತಂದು ಈ ಮರದ ಜೊತೆಗೆ 'ಹಾರೆ'ಯನ್ನು ಇಟ್ಟು ಇದರ ಮುಂದೆಯೇ ತಾಳಿಯನ್ನು ಕಟ್ಟುತ್ತಾರೆ. ಕಾರಣ ಈ ಹಿಂದೆ ಕಾಡು ಮೇಡುಗಳಲ್ಲಿ ವಾಸಿಸುವಂತಹ ಸಂದರ್ಭದಲ್ಲಿ ಹೆಚ್ಚಾಗಿ ಇವರು ಈ ನೇರಳೆ ಮರವನ್ನು ಆಶ್ರಯಿಸಿರುವುದಾಗಿ ಹಿರಿಯರು ಹೇಳುತ್ತಾರೆ.

ಪ್ರಯೋಗ: ತಾಳಿ ಕಟ್ಟಂಗ ಪೋಗದಾಸು ಕೋಮ್ಮು ಎತ್ತುಗುಂಡು ವಾಂಗೋ (ತಾಳಿಕಟ್ಟೋಕೆ ಹೊತ್ತಾಯಿತು ನೇರಳೆ ಮರದ ಕೊಂಬೆ ತಾಂಬರಿ ಬೇಗ).

ಮಾಂಡೋಳುಕು (ಮಂದವಾದದೀಪ): ಕೊರಚ ಸಮುದಾಯದಲ್ಲಿ ವಿಶೇಷವಾಗಿ ಮೇನ್ಪಡಿ ಗೋತ್ರದವರು ಹಚ್ಚುತ್ತಾರೆ. ಈ ದೀಪವನ್ನು ಹತ್ತಿಯ ಕಾಳನ್ನು ಎಣ್ಣೆಯಲ್ಲಿ ನೆನೆಯಿಟ್ಟು ಅದಕ್ಕೆ ಬೆಂಕಿ ಹಚ್ಚಿ ಆ ದೀಪದಿಂದ ತಾಳಿ ಕಟ್ಟಿಯಾದ ಮೇಲೆ ಮದುಮಕ್ಕಳಿಗೆ ದೂಪ ಹಾಕುತ್ತಾರೆ.

ಪ್ರಯೋಗ: ಪಾರಂಗು ಜನಾಂಗಗಳೇ ಮಾಂಡೊಳಕ ಅಂಟಿಕ್ಯಾದು ಪರಾನಾಯ ಹಂದ್ರತುಟ್ಟು ಬೇಲಿಗಿ ಪೋಂಗೋ (ನೋಡಿರಿ ಜನರೇ ಮಂದವಾದ ದೀಪ ಹಚ್ಚಿದರೆ ಬೇರೆ ಬೆಡಗಿನವರು ಹೊರಗೋಗರಿ)

ತಾಯೋಳಕು (ತಾಯಿ ದೀಪ): ಈ ದೀಪವನ್ನು ಸಾತ್ಪಾಡಿ ಮತ್ತು ಕಾವಾಡಿ ಬೆಡಗಿನವರು ಹಚ್ಚುತ್ತಾರೆ. ಇದನ್ನು ಹತ್ತಿಯ ಅಳ್ಳೆಯಿಂದ ಅಚ್ಚುತ್ತಾರೆ. ಇದನ್ನು ಯಾರು ಬೇಕಾದರು ನೋಡಬಹುದು. ಇದು ಈ ಸಮುದಾಯದ ಮೂಲ ಬೆಡಗಿನವರು ಹಚ್ಚುವ ದೀಪ.

ಪ್ರಯೋಗ: ತಾಯಿವೋಳಕು ಅಂಟಿಕ್ಯಾದು ವಾಂಗೋ (ತಾಯಿ ದೀಪ ಹಚ್ಚಿತ್ತದಾದರೆ ಬನ್ನಿ).

ಮಡಿ ಮೆತ್ತು (ಉಡಿತುಂಬು): ಈ ಶಾಸ್ತ್ರವನ್ನು ಮದುವೆಯಾದ ಮದುಮಗಳು ಹೊಸತರದಲ್ಲಿ ಗಂಡನ ಮನೆಗೆ ಹೋಗುವಾಗ ಸಮುದಾಯದ ಐದು ಅಥವಾ ಒಂಭತ್ತು ಹೆಣ್ಣು ಮಕ್ಕಳಿಂದ ಉಡಿಯನ್ನು ತುಂಬಿಸುತ್ತಾರೆ. ಅಂದರೆ ಮದುಮಗಳ ಸೀರೆ ಸೆರಗಿನಲ್ಲಿ ಐದು ಹಿಡಿ ಅಕ್ಕಿಕಾಳು ಕೊಬ್ಬರಿ ಬಟ್ಲು, ಉತ್ತುತ್ತಿ, ಎಲೆ–ಅಡಿಕೆಯನ್ನು ಹಾಕಿ ಕುಂಕುಮ ಅರಿಶಿಣ ಹಚ್ಚಿ ಉಡಿತುಂಬುತ್ತಾರೆ.

ಪ್ರಯೋಗ: ಊರಗ ವೋಗಂಗ ಪೋಗದಾಸು ದಬಾನ ಮಡಿಮೆತ್ತಂಗ (ಊರಿಗೆ ಹೋಗುವುದಕ್ಕೆ ಹೊತ್ತಾಗುತ್ತೆ ಬೇಗ ಉಡಿತುಂಬಿ)

ವಾರತನ್ನಿ (ಸುರಗಿ): ಮಾಂಗಲ್ಯಶಾಸ್ತ್ರ ಮುಗಿದುಬಂದು ವಾರದ ನಂತರದ ದಿವಸದಂದು ವದುವರರಿಗೆ ಎರೆಯುವ ನೀರಿಗೆ ಕೊರಚರಲ್ಲಿ 'ವಾರತನ್ನಿ' (ಸುರಗಿ) ಎಂದು ಕರೆಯುತ್ತಾರೆ.

ಪ್ರಯೋಗ: ತಾಳಿ (ಕನ್ನೇಳಾಯಿ) ಕಟ್ಟಿ ವಾರ ತಿರುಗಬುಟ್ಟು ವಾರತನ್ನಿ ವಾರಂಗೋ (ಮದುವೆಯಾಗಿ ಒಂದು ವಾರ ಆಯಿತು ಸುರಗಿ ನೀರು ಹಾಕಿ).

ಹಂದ್ರಗೂಟ (ಹಂದ್ರತ): ಮದುವೆಯ ಸಂದರ್ಭದಲ್ಲಿ ಹಾಕುವ ಚಪ್ಪರದ ಗೂಟಗಳಿಗೆ ಹಂದ್ರಗೂಟ ಎನ್ನುತ್ತಾರೆ.

ಪ್ರಯೋಗ: ಹಂದ್ರಗೂಟತಗು ಮದುಮಗನಗಿಟ ಪೂಜಿ ಸೇಯಿಕ್ಕಿ (ಹಂದ್ರಗೂಟಕ್ಕೆ ಮದುಮಗನಿಂದ ಪೂಜೆ ಮಾಡಿಸಿ).

ಮುತ್ತೈದೆಂಗ (ಮುತ್ತೈದೆಯರು): ಪತಿಯನ್ನು ಹೊಂದಿರುವ ಮಹಿಳೆಯರು, ಸುಮಂಗಲಿಯರು, ಯಾವುದೇ ಶುಭಕಾರ್ಯವನ್ನು ಇವರಿಂದಲೇ ಮೊದಲೇ ಮಾಡಿಸುತ್ತಾರೆ.

ಪ್ರಯೋಗ: ಮಿನ್ನಿ ಮುತ್ತೈದೆಯ ಕಳಸ ಬೆಳಗಂಗು (ಮೊದಲು ಮುತ್ತೈದೆಯರು ಕಳಸ ಬೆಳಗ್ರಿ)

ಕನ್ನೇಳಟ ಎರಿಸಿಮೂಟ (ಲಗ್ನದ ಅಕ್ಕಿಗಂಟು): ಈ ಲಗ್ನದ ಅಕ್ಕಿಯ ಗಂಟಿನಲ್ಲಿ ಅರಿಶಿನ, ಕುಂಕುಮ ಮಿಶ್ರಿತ ಐದು ಸೇರು ಅಕ್ಕಿ, ಐದು ಒಣ ಕೊಬ್ಬರಿ ಬಟ್ಟಲು, ಐದು ಉತ್ತತ್ತಿ, ಐದು ಅರಿಶಿಣ ಕೊಂಬು, ಐದು ಕೇರುಬೀಜ, ಎಲೆ ಅಡಿಕೆ (ಬೆಟ್ಟ ಅಡಿಕೆ) ಹಾಗೂ ಚಿಲ್ಲರೆ ಹಣ ಜೊತೆದೆ ಒಂದು ಲಗ್ನದ ಪತ್ರ ಇವೆಲ್ಲವನ್ನು ಒಂದು ಬಟ್ಟೆಯಲ್ಲಿ ಗಂಟು ಕಟ್ಟಿರುತ್ತಾರೆ.

ಪ್ರಯೋಗ: ಜನಂಗಳುಗು ಎರಿಸಿ ಕುಡಂಗು (ಜನರಿಗೆ ಅಕ್ಕಿಕಾಳು ಕೊಡ್ರಿ)

ರಥ: ಕೊರಚ ಸಮುದಾಯದಲ್ಲಿ ಮದುವೆ ಕಾರ್ಯ ಮಾಡುವಾಗ ಸಂಪ್ರದಾಯದಂತೆ ಒಂದು ರಥವನ್ನು ಬಿಡಿಸಿ ಆ ನಂತರವೇ ಮದುಮಕ್ಕಳಿಗೆ ಅರಿಶಿಣ ಹಚ್ಚುತ್ತಾರೆ. ಮತ್ತು ತಾಳಿ ಕಟ್ಟುವಾಗಲೂ ರಥ ಬರೆದಾದ ಮೇಲೆ ಅದರ ಮೇಲೆ ನಿಂತು ತಾಳಿ ಕಟ್ಟಬೇಕು.

ಪ್ರಯೋಗ: ರಥದ ಬರಿಸು ಮದುಮಕ್ಕಳ ಅಸೆಂಗು ಮಂಜಲ ಅಂಟಿಕ್ಯಾಸಿಗಿ (ರಥ ಬರೆದಾಯಿತು ಮದುಮಕ್ಕಳ ಕರೆತನ್ನಿ ಅರಿಶಿನ ಹಚ್ಚಬೇಕು.)

ಬಂತಿ (ಪಂಕ್ತಿ): ಕೊರಚ ಸಮುದಾಯದ ಹಿರಿಯರೆಲ್ಲರೂ ಕಿರಿಯರೆಲ್ಲರೂ, ಮಹಿಳೆಯರೆಲ್ಲರೂ ಸೇರಿ ತಾಳಿ ಮುಗಿದ ಮೇಲೆ ಒಟ್ಟಿಗೆ ಊಟಕ್ಕೆ ಕುಳಿತುಕೊಳ್ಳುವುದಕ್ಕೆ ಪಂಕ್ತಿ ಎಂದು ಕರೆಯುತ್ತಾರೆ.

ಪ್ರಯೋಗ: ಮಿನ್ನಿ ಬಂತಿಗೆ ಬೇರಾಯ್ಲುಡ್ಡಿ ಕೊಂದಪಿಚ್ಚು ಕಳಿ ವೋಡಂಗು (ಮೊದಲ ಪಂಕ್ತಿಗೆ ದೊಡ್ಡವರನ್ನೆಲ್ಲ ಕೂಡಿಸಿ ಊಟ ಹಾಕಿರಿ).

ಗಂಗಿಶಾಸ್ತ್ರ: ಕೊರಚ ಸಮುದಾಯದಲ್ಲಿ ಶುಭಕಾರ್ಯಗಳಲ್ಲಿ ಗಂಗೆಗೆ ಅಗ್ರಸ್ಥಾನ ಹಾಗೂ ಪೂಜೆ ಸಲ್ಲಿಸುತ್ತಾರೆ. ಇದಕ್ಕೆ ಗಂಗಿಗೋಗದು ಎನ್ನುತ್ತಾರೆ.

ಪ್ರಯೋಗ: ಕಳಸ ಮಿನ್ನಿ ಹೊಗಟು ಗಂಗಿ ಪೂಜಿಗಿ (ಕಳಶ ಮೊದಲು ಹೋಗ್ಲಿ ಗಂಗಿ ಪೂಜೆಗೆ)

ಗಂಗಿದುತ್ತ (ಗಂಗಿಕೊಡ): ಗಂಗಮ್ಮನ ಶಾಸ್ತ್ರ ಮಾಡಿಕೊಂಡು ಬರಲಿಕ್ಕೆ ಹೊಯ್ಯುವ ಕೊಡ.

ಪ್ರಯೋಗ: ಮಿನ್ನಿ ಗಂಗಿದುತ್ತಿಗಿ ಕಂಕಣತ ಕಟ್ಟಂಗೋ (ಮೊದಲು ಗಂಗಿ ಕೊಡಕ್ಕೆ ಕಂಕಣ ಕಟ್ಟಿ).

ಕಾನಪು (ಹೆರಿಗೆ): ಹೆಣ್ಣು ಮಗುವನ್ನು ಹೆರುವುದಕ್ಕೆ ಕಾನಪು ಎಂದು ಕರೆಯುತ್ತಾರೆ.

ಪ್ರಯೋಗ: ನಂಗಮೊಂಡು ಕಾನಪು ಹೋಕಿ (ನನ್ನ ಹೆಂಡತಿಗೆ ಹೆರಿಗೆಗೆ ಹೋಗಿದ್ದಾಳೆ)

ತೊಲಸೂರು ಕಾನಪು (ಚೊಚ್ಚಲ ಹೆರಿಗೆ): ಮೊದಲ ಹೆರಿಗೆಗೆ ಚೊಚ್ಚಲ (ತೊಲಸೂರು) ಹೆರಿಗೆ ಎಂದು ಕರೆಯುತ್ತಾರೆ.

ಪ್ರಯೋಗ: ತೊಲಸೂರು ಕಾನಪು ಪರದೊಟ್ಲೇ ಆಗಬೇಕು (ಮೊದಲ ಹೆರಿಗೆ ತವರು ಮನೆಯಲ್ಲೇ ಆಗಬೇಕು.)

ಸೂಲಗಿತ್ತಿ: ಹೆರಿಗೆಯನ್ನು ಮಾಡಿಸಲು ಸಹಾಯ ಮಾಡುವವಳು.

ಪ್ರಯೋಗ: ಕಾನಪು ನೆಪ್ಪಿ ವಂದಕ್ಕೀದು ಸೂಲಗಿತ್ತಿ ಕೊಟಗುಂಡುವಾ (ಹೆರಿಗೆ ನೋವು ಕಾಣಿಸಿಕೊಂಡೈತಿ ಸೂಲಗಿತ್ತಿ ಕರ್ಕಂಡು ಬಾ).

ತಲಕಾಯಿ ವಾಂಗಿಕ್ಕಿರದು ಎಲೆಕತ್ತರಿ: ಮಗುವಿನ ಹುಟ್ಟುಕೂದಲು ಕತ್ತರಿಸುವುದಕ್ಕೆ ಎಲೆಕತ್ತರಿ ಮುಟ್ಟಿಸುವುದು ಎನ್ನುತ್ತಾರೆ.

ಪ್ರಯೋಗ: ನಂಗಟೊಟ ದೇವ್ರುಗು ಮಗಟ ತಲಕಾಯ ವಾಗಿಕ್ಯಾಸಿಗಿ

ಪೇರೆಕ್ಕರದು (ನಾಮಕರಣ): ಮಗುವಿಗೆ ಹೆಸರು ಇಡುವುದಕ್ಕೆ ಪೇರೆಕ್ಕರದು ಎಂದು ಕರೆಯುತ್ತಾರೆ.

ಪ್ರಯೋಗ: ನಂಗ ಮಗನಗು ಪೇರಕ್ಕೆಂದು ಬಾಂಗೋ (ನನ್ನ ಮಗನಿಗೆ ಹೆಸರಿಡುತ್ತಾರೆ ಬನ್ನಿ).

ಬಾಣತಿಕಾರ (ಬಾಣಂತಿ ಖಾರ): ಹೆರಿಗೆಯಿಂದ ನಿಶಕ್ತಿಯಾಗಿರುವ ಬಾಣಂತಿಗೆ ಪ್ರತಿನಿತ್ಯ ಬೆಳಗಿನ ಸಮಯದಲ್ಲಿ ಒಣಕೊಬ್ಬರಿ, ಉತ್ತತ್ತಿ, ಬೆಲ್ಲ, ಗೊಡಂಬಿ ಇವುಗಳನ್ನು ತುಂಬ ಸಣ್ಣಾಗುವಂತೆ ಕುಟ್ಟಿ ತುಪ್ಪದಲ್ಲಿ ಬೆರೆಸಿ ತಿನ್ನಲು ಕೊಡುವರು.

ಪ್ರಯೋಗ: ಬಾಣತಿಗೆ ತಲ್ಪರಳೊತಿಗೆ ಪಟ್ಲೇಕಾರ ತಿಂಗ್ರಿಡಗು ಕೊಡಂಗು (ಬಾಣಂತಿಗೆ ಬೆಳಿಗ್ಗೆ ಆಳುಹೊಟ್ಟೆಗೆ ಖಾರ ತಿನ್ನಕ ಕೊಡ್ರಿ).

ಬೇರ್ದಾಕೀದು (ಕೈಗೆ ಬಂದಳು): ಮಗಳು ಋತುಮತಿಯಾದರೆ (ವಯಸ್ಸಿಗೆ) ಕೈಗೆ ಬಂದಳು ಎಂದು ಕರೆಯುತ್ತಾರೆ. ಅಂದರೆ ಮದುವೆಗೆ ಸಿದ್ಧಳಾಗಿದ್ದಾಳೆ ಎಂಬರ್ಥ.

ಪ್ರಯೋಗ: ಎಂದ ಮಾಮ ಪುಳ್ಳಕಿಯೀಗಿ ವಂದಿಕೇದು ಎಟೇನಾ ವರತು ಪಾತಿಕೀರ್ಯಾ (ಏನೋ ಮಾವ ಮಗಳು ಕೈಗೆ ಬಂದವಳೇ ಎಲ್ಲೆರಾ ವರನ ನೋಡಿದಿಯಾ)

ಮೈಲಿಗೆ, ಹೊಲಿಮನಿ: ಜನನ, ಮರಣ, ಋತುಮತಿ, ಮುಟ್ಟುಗಳಿಂದುಂಟಾಗುವುದಕ್ಕೆ ಮೈಲಿಗೆ ಎಂದು ಕರೆಯುತ್ತಾರೆ.

ಪ್ರಯೋಗ: ನಂಗಟೂಡು ಬೇಲಾಕೀದು ಹಾಕಿದು ಎಂದು ಕಾರ್ಯತು ಒಂಬುದಿನಾಳು ಸೇಯಂಗಾಗದಿಲ್ಲ (ಹೊಲಿಮನಿ ಆಗೈತಿ ಯಾವುದೇ ಕಾರ್ಯವು ಒಂಭತ್ತು ದಿನ ಮಾಡಂಗಿಲ್ಲ).

ಮುಟ್ಟಾಕೀದು (ವರಗ ಆಗ್ಯಾಳೆ): ಮಹಿಳೆಯರು ಮುಟ್ಟು (ಋತು) ಆಗುವುದಕ್ಕೆ ವರಗ ಆಗ್ಯಾಳೆ ಎನ್ನುತ್ತಾರೆ.

ಪ್ರಯೋಗ: ಈ ಸರಿನೋ ನಿಕ್ಕಿಲ್ಲ ಮುಟ್ಟು ಆಬೇಸು (ಈ ಸಲನೂ ಮುಟ್ಟು ನಿಲ್ಲಿಲ್ಲ ವರಗ ಆಗಿಬಿಟ್ಲು).

ಗೆಂಜಲು (ಗೋಮೂತ್ರ): ಆಕಳ ಮೂತ್ರಕ್ಕೆ ಗೋಮೂತ್ರ ಎಂದು ಕರೆಯುತ್ತಾರೆ. ಶುಭಕಾರ್ಯಗಳ ಸಂದರ್ಭದಲ್ಲಿ ಉಪಯೋಗಿಸುತ್ತಾರೆ. ಗೋಮೂತ್ರವನ್ನು ಕೊರಚರು ತಮ್ಮ ಮನೆ ಸೂತಕವಾದ ಸಂದರ್ಭದಲ್ಲಿಯೂ ಮನೆಗೆ ಸಿಂಪಡಿಸಿ ಸೂತಕವನ್ನು ಕಳೆದುಕೊಳ್ಳುತ್ತಾರೆ.

ಪ್ರಯೋಗ: ಗೆಂಜಲೆತ್ತೆಂದು ಊಟ್‌ಗಡ್ಡಿ ಸಿಮ್ಲಿಕಿ (ಗೋಮೂತ್ರವನ್ನು ಮನೆಗೆಲ್ಲ ಚೆಲ್ಲು)

ಪೀಣಿಗಿ (ಶವ/ಹೆಣ): ಸತ್ತಂತ ವ್ಯಕ್ತಿಯನ್ನು ಕೊರಚರು ಪೀಣಿಗೆ ಎಂದು ಕರೆಯುತ್ತಾರೆ.

ಪ್ರಯೋಗ: ಪೀಣಿಗೆತ್ತೆಂದು ಎಪ್ಪ ಪೆಚ್ಚಾಲ (ಹೆಣ ಯಾವಾಗ ಎತ್ತುತಾರಪ್ಪ)

ಸಿದಿಗಿ (ಚಟ್ಟ): ಶವವನ್ನು ಹೊಯ್ಯಲಿಕ್ಕೆ ಮಾಡುವ ಒಂದು ಸಾಮಾಗ್ರಿ ಇದನ್ನು ಕಟ್ಟಿಗೆ ಹಾಗೂ ಜೋಳದ ಸಪ್ಪೆಗಳಿಂದ ಕಟ್ಟಿರುತ್ತಾರೆ.

ಪ್ರಯೋಗ: ಸಿದಿಗಿ ಕಟ್ನಪ್ಪ ಪೀಣಿಗೆತ್ತೆಂದು ಸಂಜೇಪು ಎಚ್ಚುಗುಂಗುದು (ಚೆಟ್ಟ ಕಟ್ಟಿದ ಮೇಲೆ ಬಹಳ ಹೊತ್ತು ಹೆಣ ಇಟ್ಟುಕೊಳ್ಳಬಾರದು).

ಕೊನೆ ತನ್ನಿ (ಎಳ್ಳುನೀರು): ಶವದ ಮೇಲೆ ತಮ್ಮ ಬಂಧು ಬಳಗದವರೆಲ್ಲರೂ ಎಳ್ಳು ನೀರನ್ನು ಬಿಡುತ್ತಾರೆ. ಇದರ ಉದ್ದೇಶ ಸತ್ತ ವ್ಯಕ್ತಿಗೂ ನಮಗೂ ಸಂಬಂಧ ಮುಗಿತು ಎಂದರ್ಥ.

ಪ್ರಯೋಗ: ಅಡ್ಡೇರು ಕೋನೆತನ್ನಿ ಉಡಂಗೂ ಪೀಣಿಗಿ ಪಚ್ಚರು (ಎಲ್ಲರು ಎಳ್ಳು ನೀರು ಬಿಡ್ರಿ ಹೆಣ ಎತ್ತುತೀವಿ).

ಪೆತ್ತರ್ಲು (ದಿವಸ ಕಾರ್ಯ): ಸತ್ತಂತ ವ್ಯಕ್ತಿಗೆ ಶಾಂತಿ ಸಿಗಲೆಂದು ಮಾಡುವ ಕಾರ್ಯಕ್ಕೆ ಪೆತ್ತಾರ್ಲು ಎಂದು ಕರೆಯುತ್ತಾರೆ.

ಪ್ರಯೋಗ: ಎಂದಳ ಪೆತ್ತಾರ್ಲ ಪೇರಗೋಟೆ ಸೇಯಾರ್‍ಯಾ (ಏನಪ್ಪಾ ದಿವಸದ ಕಾರ್ಯವು ಹಿಂದೆಲೆ ಮಾಡುತ್ತೀಯ).

ರಾಸಿಮೇನಕ್ಕಿ (ದಿವಸ ಕಾರ್ಯ ಮುಂದೋಡುವುದಕ್ಕೆ): ಸತ್ತಂತ ವ್ಯಕ್ತಿಯ ದಿವಸದ ಕಾರ್ಯವನ್ನು ಮಾಡುವುದಕ್ಕೆ ಆಗದ್ದಕ್ಕೆ ಅದನ್ನು ಮುಂದೆ ತನಗೆ ಅನುಕೂಲವಾದ ನಂತರ ಮಾಡುವುದಕ್ಕೆ ಕೊರಚರಲ್ಲಿ ರಾಸಿಮೇನಕ್ಕಿ ಎಂದು ಬಳಸುತ್ತಾರೆ.

ಪ್ರಯೋಗ: ನಂಗಾವುಟ ಪೆತ್ತಾಲುಗತ್ತೆಂದು ರಾಸಿಮೇನಚ್ಚು ಮಿನ್ನಿ ಅನುಕೂಲನಪ್ಪ ಸೇಯಾರೇ (ನಮ್ಮ ಅಪ್ಪನ ದಿವಸ ಕಾರ್ಯವನ್ನು ಸಧ್ಯ ಮುಂದೋಡಿ ಮುಂದೆ ಅನುಕೂಲವಾದಾಗ ಮಾಡುತ್ತೀನಿ).

ರೆಕ್ಲಮೇನಿ ಕಳಿ (ಹೆಣದ ಮೇಲೆ ಕೂಳು): ವ್ಯಕ್ತಿ ಸತ್ತು ಎರಡನೇ ದಿವಸದಲ್ಲಿ ಕುಟುಂಬದವರೆಲ್ಲರು ಮಡಿಯಾಗಿ ಕೋಳಿ ಕೊಯ್ದು ಹೆಣದ ಮೇಲಿಟ್ಟು ಪೂಜೆ ಮಾಡುವುದಕ್ಕೆ ರೆಕ್ಲಮುನಿ ಕಳು ಹೊಡ್ರದು ಎನ್ನುತ್ತಾರೆ.

ಪ್ರಯೋಗ: ಕುಲತ ಬೇರಾಯ್ಲು ಕೊಡು ರೆಕ್ಲಲೋನಿ ಕಳಿ ಹೊಡಸಿಗಿ (ಕುಲದ ಹಿರಿಯರನ್ನು ಕರಿಯಿರಿ ಹೆಣದ ಮೇಲೆ ಊಟ ಹಾಕಬೇಕು.)

ಕಾಕ್ಲಕಳಿ (ಕಾಗೆಕೂಳು): ವ್ಯಕ್ತಿ ಸತ್ತ ಮೂರು ದಿನಕ್ಕೆ ಮಾಡುವ ಕಾರ್ಯವು ಇಲ್ಲಿ ಸತ್ತ ವ್ಯಕ್ತಿಗೆ ಪ್ರಿಯವಾದ ತಿನಿಸುಗಳನ್ನು ತೆಗೆದುಕೊಂಡು ಹೋಗಿ ಕಾಗೆಗಳಿಗೆ ಹಾಕುತ್ತಾರೆ. ಆ ಊಟವನ್ನು ಬಂದು ತಿಂದರೆ ಸತ್ತ ವ್ಯಕ್ತಿಯು ಬಂದು ಮುಟ್ಟಿದಂತೆ ಎಂಬ ನಂಬಿಕೆ ಕೊರಚರಲ್ಲಿದೆ.

ಪ್ರಯೋಗ: ಸತ್ತು ಮೂಡನಾಳ ಆಸು ಕಾಕ್ಲಕಳಿ ಹೊಡಂಬಾಂಗೋ (ಸತ್ತು ಮೂರು ದಿನಾಯಿತು ಕಾಗೆ ಕೂಳು ಹಾಕೋಣಬನ್ನಿ).

೭.೩ ಸಮುದಾಯದ ಮೂಲ ಭಾಷಾ ರೂಪಗಳಿಗೆ ಸಂಬಂಧಿಸಿದ ಪದಗಳು

ಕೊರಚ ಸಮುದಾಯದ ಕೌಟುಂಬಿಕ ಸನ್ನಿವೇಶಗಳಲ್ಲಿ ಬಳಕೆಯಾಗುವ ಸಮುದಾಯದ ಮೂಲ ಭಾಷಾ ರೂಪಗಳನ್ನು ಮಾತ್ರ ಪ್ರಸ್ತುತ ಈ ಭಾಗದಲ್ಲಿ ಹೆಸರಿಸಲಾಗುವುದು. ಕುಟುಂಬದಲ್ಲಿನ ಗೃಹಬಳಕೆಯ ವಸ್ತುಗಳು ಹಾಗೂ ಆಹಾರ ದವಸ ಧಾನ್ಯಗಳಿಗೆ ಸಂಬಂಧಿಸಿದ ಮೂಲ ಭಾಷಾ ರೂಪಗಳಿಗೆ ಸಂಬಂಧಿಸಿದ ಪದಗಳು ತಮಿಳು, ತೆಲುಗು, ಕನ್ನಡ ಭಾಷಾ ರೂಪಗಳಿಂದ ಕೂಡಿದವುಗಳಾಗಿವೆ. ಈ ನೆಲೆಯಲ್ಲಿ ಕೊರಚರು ಬಳಸುವ ಭಾಷೆಯಲ್ಲಿ ತೆಲುಗು ಪದಗಳು, ತಮಿಳು ಪದಗಳು ಮತ್ತು ಕನ್ನಡ ಪದಗಳು ಅಲ್ಪ ಸ್ವಲ್ಪ ವ್ಯತ್ಯಾಸದೊಂದಿಗೆ ಬಳಕೆಯಾಗುತ್ತದೆ. ಅವು ಪೂರಕ ಪ್ರಮಾಣವಾಗಿ ತೆಲುಗು–ತಮಿಳು–ಕನ್ನಡ ಪದಗಳೆಂದು ಹೇಳಲಾಗದು ಅದು ಕೊರಚರು ರೂಪಿಸಿಕೊಂಡಿರುವ ಭಾಷೆಯಾಗಿದೆ. ಮತ್ತು ಕರೊಚರ ಭಾಷೆಯಲ್ಲಿ ಈ ಎಲ್ಲ ಭಾಷಿಕಾಂಶಗಳು ಅಲ್ಪಸ್ವಲ್ಪ ವ್ಯತ್ಯಾಸಗಳೊಂದಿಗೆ ಬಳಕೆಯಾಗಲು ಕಾರಣ ಅವರ ಮೂಲ ನೆಲೆಯಿಂದ ವಲಸೆ ಹೊರಟು ಕರ್ನಾಟಕದಲ್ಲಿ ನೆಲೆಸುವವರಿಗೆ ಅವರಿಗೆ ಪರಿಚಯವಾದಂತಹ ಭಾಷಿಕಾಂಶಗಳು ಆಗಿವೆ. ಆದರೆ ಪ್ರಸ್ತುತ ಈ ಅಧ್ಯಾಯದಲ್ಲಿ ಕೇವಲ ಕನ್ನಡ ಭಾಷೆಯೊಂದಿಗೆ ಕೊರಚರು ಬಳಸುವಂತಹ ಪದಗಳನ್ನು ಸಮೀಕರಿಸಿ ಕೆಳಗಿನಂತೆ ವಿವರಿಸಲಾಗಿದೆ. ಈ ಹಿನ್ನೆಲೆಯಲ್ಲಿ ಕೊರಚ ಸಮುದಾಯದಲ್ಲಿ ಕೌಟುಂಬಿಕವಾಗಿ ಬಳಕೆಯಲ್ಲಿರುವ ಸಂಬಂಧವಾಚಕ ಪದಗಳನ್ನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಸಮುದಾಯದ ವಕ್ತೃಗಳಿಂದ ಸಂಗ್ರಹಿಸಲಾಗಿದೆ. ಬಂಧುಸೂಚಕ ಪದಗಳು ತಮಿಳು ಹಾಗೂ ಕನ್ನಡ ಭಾಷಾ ರೂಪಗಳಿಂದ ಕೂಡಿದವುಗಳಾಗಿವೆ. ಅಂತಹ ರೂಪಗಳು ಈ ಕೆಳಗಿನಂತಿವೆ.

ಸಂಬಂಧ ಸೂಚಕ	**ಕನ್ನಡ**	**ಸಮುದಾಯ**
ತಂದೆ	ಅಪ್ಪ	ಆವ, ಅಬ್ಬ, ಅಯ್ಯ
ತಾಯಿ	ಅಮ್ಮ	ಅಮ್ಮ
ತಂದೆಯ ತಂದೆ	ಅಜ್ಜ	ತಾತಾ, ಜೇಜಿ
ತಾಯಿಯ ತಂದೆ	ಅಜ್ಜ	ತಾತಾ, ಜೇಜಿ
ತಂದೆಯ ತಾಯಿ,	ಅಜ್ಜಿ	ಜೇಮ, ಜೇಜಮ್ಮ
ತಾಯಿಯ ತಾಯಿ	ಅಜ್ಜಿ	ಜೇಮ, ಜೇಜಮ್ಮ
ಗಂಡ	ಗಂಡ	ಮಣಗು
ಹೆಂಡತಿ	ಹೆಂಡತಿ	ಪೊಂಡು/ಮೊಂಡು
ಮಗ	ಮಗ	ಮಗ
ಗಂಡುಮಗು	ಗಂಡುಮಗ	ಅವಣಕೆರು

ಮಗಳು	ಮಗಳು	ಪುಳ್ಳ/ಬುಳ್ಳ
ಹೆಣ್ಣುಮಗಳು	ಹೆಣ್ಣುಮಗ	ಪೊಂಬುಳ್ಳ
ಮೊಮ್ಮಗ	ಮೊಮ್ಮಗ	ಪೇತ
ಮೊಮ್ಮಗಳು	ಮೊಮ್ಮಗಳು	ಪೇತಿ
ಹುಡುಗ	ಹುಡುಗ	ಕೇರು /ಸಿನಕೆರು
ಹುಡುಗಿ	ಹುಡುಗಿ	ಸಿನಮುಂಡ
ಅಣ್ಣ	ಅಣ್ಣ	ಅಣ್ಣ
ಅಕ್ಕ	ಅಕ್ಕ	ಅಕ್ಕ
ತಂಗಿ	ತಂಗಿ	ತಸ್ಸಿ
ತಮ್ಮ	ತಮ್ಮ	ತೆಂಬಿ
ಅತ್ತಿಗೆ	ಅತ್ತಿಗೆ	ನಂಗ
ತಮ್ಮನ ಹೆಂಡತಿ	ನಾದಿನಿ	ಸೆಡ್‌ಗೂಸಿ
ಅಕ್ಕನ ಗಂಡ	ಮಾವ	ಮಾಮ
ಸೋದರ ಮಾವ	ಸೋದರಮಾವ	ಮೇನಮಾಮ
ತಂಗಿಯ ಗಂಡ	ಭಾವ	ಮಚ್ಚಾಡು
ತಂದೆಯ ಅಣ್ಣ	ದೊಡ್ಡಪ್ಪ	ಬೇರಾವ/ಬೇರಬ್ಬ
ತಂದೆಯ ತಂಗಿ ಗಂಡ	ಸೋದರಮಾವ	ಬೆದ್ದಿಮಾಮ
ತಂದೆಯ ಅಕ್ಕನ ಗಂಡ	ಸೋದರಮಾಮ	ಬೆದ್ದಿಮಾಮ
ತಾಯಿಯ ತಮ್ಮಂದಿರು	ಸೋದರಮಾವ	ಮಾಮ
ತಂದೆಯ ತಮ್ಮ	ಚಿಕ್ಕಪ್ಪ	ನಾಯನ್ನ/ಸಿನ್ನಯ್ಯ
ತಾಯಿಯ ಅಕ್ಕ	ದೊಡ್ಡಮ್ಮ	ಬೇರಮ್ಮ/ ಬೆದ್ದೆಮ್ಮ
ತಂದೆಯ ಅಣ್ಣನ ಹೆಂಡತಿ	ದೊಡ್ಡಮ್ಮ	ಬೆದ್ದಮ್ಮ
ತಾಯಿಯ ತಂಗಿ	ಚಿಕ್ಕಮ್ಮ	ಸೋಡಮ/ ಸಿನ್ನಮ್ಮ
ಚಿಕ್ಕಪ್ಪನ ಹೆಂಡತಿ	ಚಿಕ್ಕಮ್ಮ	ಸೊಡಮ

ಅಳಿಯ	ಅಳಿಯ	ಮಚ್ಚಾಡು (ಅಕ್ಕನ ಮಗ)
		ಮೆರಿಮಗ (ಮಗಳ ಗಂಡ)
ಸೊಸೆ	ಸೊಸೆ	ಮೆರಿಮಗಳು (ಮಗನ ಹೆಂಡತಿ)

ಮನೆಗೆ ಸಂಬಂಧಿಸಿದಂತೆ

ಕನ್ನಡ	**ಸಮುದಾಯದ ಭಾಷೆ**
ಮನೆ	ಊಡು
ಗುಡಿಸಲು	ಗುಡಿಸಿ
ಬಾಗಿಲು	ವಾಸ್ಲು
ಕಿಟಗಿ	ಜರ್ನಲು
ಅಡಿಗೆಮನೆ	ಕಳಿಊಡು
ಗುಣೇವು	ಗುಣೇವು
ಗೋಡೆ	ಗ್ವಾಡ
ಕರೆಬಂಡೆ	ಕರ್ತಬಂಡ
ಕಸಬರಿಗೆ	ಕಸಪರಕ
ಮೂಲೆ	ಮೂಲ
ಬಯಲು	ಬೈಲು
ವರಂಡ(ಅಂಗಳು)	ಅಂಗಳು
ಚಪ್ಪರ	ಸೆಪ್ಪರು
ನೆರಕೆ	ನೆರ್ಕಿ
ಚಾಪೆ	ಸ್ಯಾಪ
ರಗ್ಗು	ರೊಗ್ಗು
ತಲೆದಿಂಬು	ತಲಕಾಯಿಮೂಟ/ತಲಮೂಟ
ಒರಳು	ವರ್ರು
ಒನಕೆ	ಒನಕ

ಗಡಿಗೆ	ಕುಂಡ /ಪಾನ
ಪುಟ್ಟಿ	ಗಂಪ

ಮಾನವನ ಅಂಗಾಂಗ ಸೂಚಕ ಪದಕೋಶ

ಕನ್ನಡ	**ಸಮುದಾಯದ ಭಾಷೆ**
ಮೈ	ಒಡುಮು
ತಲೆ	ತಲಕಾಯಿ
ಕೂದಲು	ಮೆಗರು
ಮೆದುಳು	ಮಿದುಡು
ಮುಖ	ಮೊಗು
ಕಣ್ಣು	ಕಣ್ಣು
ರೆಪ್ಪೆ	ರೆಪ್ಪ
ಕಣ್ಣುಬ್ಬು	ಕಣ್ಣುಬ್ಬು
ಕಣ್ಣೀರು	ಕಣ್ಣೀರು
ಕಿವಿ	ಸೊಯ್ಯಿ
ಮೂಗು	ಮೂಕು
ಬಾಯಿ	ವಾಯಿ
ಹಲ್ಲು	ಪೆಲ್ಲು
ತುಟಿ	ಒದಡು/ಒದುರು
ಮೀಸೆ	ಮೀಸಂಗ
ಗಡ್ಡ	ಗಡ್ಡ
ಕುತ್ತಿಗೆ	ಗೊಂತು
ರಕ್ತ	ರೆಗು
ಭುಜ	ಭುಜು
ಹೊಟ್ಟೆ	ವರಗು

ಗುದದ್ವಾರ	ಗುದ್ದ
ಮೊಲೆ	ಬೋಸಿ
ಯೋನಿ	ಕೂದಿ
ಶಿಸ್ನ	ಬಡ್
ಸೊಂಟ	ನೆಡುವು
ಚರ್ಮ	ತೋಲು
ಕೈ	ಕೀಯಿ
ಮೊಣಕೈ	ಮಾಕೀಯಿ
ಅಂಗೈ	ಅಂಗೈ/ಅರಕೀಯಿ
ಬೆರಳು	ಬೊಳ್ಳು
ಕೈಬೆರಳು	ಕೈಬೊಳ್ಳು
ಕಾಲು	ಕಾಲು
ಕಾಲುಬೆರಳು	ಕಾಲಬೊಳ್ಳು
ಉಗುರು	ಗೋರು
ಕರಳು	ಕೊಳ್ಳು
ಒಕ್ಕಳು	ಬೊಡ್ಡ
ತೊಡೆ	ತ್ವಡ
ಮೊಣಕಾಲು	ಮಾಕಾಲು
ಅಂಗಾಲು	ಅರಗಾಲು
ಹಿಮ್ಮಡಿ	ಹಿಮ್ಮಡ
ಬೆನ್ನು	ಈಪ

ಮನುಷ್ಯರ ಖಾಯಿಲೆಗಳಿಗೆ ಸಂಬಂಧಿಸಿದ್ದು

ಕೆಮ್ಮು	ದಗ್ಗು
ನೆಗಡಿ	ಪಡ್ಸೀ

ಜ್ವರ	ಜರು
ಚಳಜ್ವರ	ಈದ್ಲಜರ
ಹೊಟ್ಟೆನೋವು	ವರಗುನೆಪ್ಪಿ
ನೋವು	ನೆಪ್ಪಿ
ಕುರಹು	ಕುರುಪು
ತಲೆನೋವು	ತಲಕಾಯಿನೆಪ್ಪಿ
ಮೈನೋವು	ಒಡಮುನೆಪ್ಪಿ
ಕೈನೋವು	ಕೈನೆಪ್ಪಿ
ಕಾಲುನೋವು	ಕಾಲನೆಪ್ಪಿ
ಬಾಯಿನೋವು	ವಾಯಿನೆಪ್ಪಿ
ಸೊಂಟನೋವು	ನೆಡುನೆಪ್ಪಿ
ಹಲ್ಲುನೋವು	ಪೆಲ್ಲುನೆಪ್ಪಿ
ಕಣ್ಣುನೋವು	ಕಣ್ಣುನೆಪ್ಪಿ
ಬೆರಳು ನೋವು	ಬೊಳ್ಳುನೆಪ್ಪಿ
ಮೂಗುನೋವು	ಮೂಕನೆಪ್ಪಿ
ಬೆನ್ನುನೋವು	ಈಪ್‌ನೆಪ್ಪಿ
ರಕ್ತಕ್ಯಾನ್ಸರ್	ರೆಗ್ತುಕ್ಯಾನ್ಸರ್

ಆಹಾರ ಪದಾರ್ಥಗಳಿಗೆ ಸಂಬಂಧಿಸಿದ್ದು

ಅಕ್ಕಿ	ಎರಿಸಿ
ಜೋಳ	ತಾನಿ
ಗೋದಿ	ಗ್ವಾದಮಾ
ನವಣೆ	ಕೊರ್‍ಯಾ
ರಾಗಿ	ಕೆವುರು
ತೊಗರಿ	ಕೆಂದ್ಲು

ಬೇಳೆ	ಬ್ಯಾಳ
ಸೊಪ್ಪು	ನೆಕ್ಕಳಿ
ಸಜ್ಜೆ	ಸಜ್ಜಿ
ಎಣ್ಣೆ	ಎಣ್ಣಿ
ಕೊಬ್ಬರಿ	ಕೊಬ್ರಿ
ಉಪ್ಪು	ಉಪ್ಪು
ರೊಟ್ಟಿ	ರೊಟ್ಟಿ
ಮುದ್ದೆ	ಕಳಿ
ಚಟ್ನಿ	ಊರ್ಮಿಡಿ
ಸಾಂಬರು	ಪುಳುಸು
ದ್ರಾಕ್ಷೆ	ದ್ರಾಕ್ಷಿ
ಚಿತ್ರನ್ನ	ಸಿತ್ರನ್ನ
ಹುಗ್ಗಿ	ಉಗ್ಗಿ
ಇದ್ದಲಿ	ಬೊಗ್ಗು
ಇಡ್ಲಿ	ಇಡ್ಲಿ
ಉಂಡೆ	ಉಂಡಿ
ಉದು	ಉದು
ಕುದಿಸು	ಕೊದಿಪಿಕ್ಕಿ
ಕಬ್ಬು	ಸೆರಕು
ಪಾಯಿಸ/ಹುಗ್ಗಿ	ಉಗ್ಗಿ
ಅನ್ನ	ಸೋರು
ಸಿಹಿ	ತೀಪ
ಅಸಿವು	ಪೆಸಿ
ಮಜ್ಜಿಗೆ	ಮಜ್ಜಿಗಿ

ಮೊಸರು	ಪೆರುಗು
ಹಾಲು	ಪಾಲು
ಹಿಟ್ಟು	ಮಾವು
ಮುಚ್ಚು	ಮೂಸು
ಮಾಂಸ	ಕರ್ರಿ
ಕೋಳಿಮಾಂಸ	ಕೋಯಿಕರ್ರಿ
ಕುರಿಮಾಂಸ	ಗೊರ್ರಿಕರ್ರಿ
ಮೊಟ್ಟೆ	ಮುಟ್ಟ
ತುಪ್ಪ	ನೆಯ್ಯಿ
ಬೆಣ್ಣೆ	ಎನಪುಸು
ಹೆಸರುಬೇಳೆ	ಪೆಸಲುಬ್ಯಾಳ
ಅಲಸಂದಿ	ಅಲಸೆಂದ್ಲು
ಜೋಳದಹಿಟ್ಟು	ತಾನಿಮಾವು
ಗೋಧಿಹಿಟ್ಟು	ಗ್ವಾದಿಮಾವು
ಹೋಳಿಗೆ	ಹೋಳಿಗಿ
ಕರಿಗಡಬು	ಕರಿಗಡುಬು
ಚಪಾತಿ	ಚಪಾತಿ

ತರಕಾರಿಗೆ ಸಂಬಂಧಿಸಿದ್ದು

ಉಳಗಡ್ಡೆ	ಉಲಿಗೆಡ್ಡ
ಆಲುಗಡ್ಡೆ	ಉರ್ಲುಗಡ್ಡ
ಮೆಣಸಿನಕಾಯಿ	ಮಳಕಾಯಿ
ಕೋಸು	ಕೋಸಗಡ್ಡ
ಗೆಣಸು	ಗೆಣಸು
ಬದನೆಕಾಯಿ	ವಂಕಾಯಿ

ಸೌತೆಕಾಯಿ	ಸವತಿಕಾಯಿ
ಸೊಪ್ಪು	ನೆಕ್ಕಳಿ
ಪುಂಡೆಸೊಪ್ಪು	ಕೊಣ್ಣೆಕ್ಕಳಿ
ನುಗ್ಗೆಸೊಪ್ಪು	ನುಗ್ಗಿನೆಕ್ಕಳಿ
ಪಲಕು	ಪಲಕು
ಮೆಂತೆ	ಮೆಂತೆ
ರಾಜಗಿರಿ ಸೊಪ್ಪು	ವರತ್‌ನೆಕ್ಕಳಿ

ಹಣ್ಣುಗಳು

ಮಾವಿನಹಣ್ಣು	ಮಾಂಗಾಯಿಪಗು
ಬಾರೆಹಣ್ಣು	ಬಾರಿಪಗು
ಹಲಸಿನಹಣ್ಣು	ಹಲಸುಪಗು
ಹುಣಸೇ ಹಣ್ಣು	ಪ್ಶಿಂಗಾಯಿಪಗು
ಆಲದಹಣ್ಣು	ಪಾಲಮರಪಗು
ಬಾಳೆಹಣ್ಣು	ಬಾಳೆಪಗು
ಬೇವಿನಹಣ್ಣು	ಏಸ್‌ಪಗು
ದ್ರಾಕ್ಷಿಹಣ್ಣು	ದ್ರಾಕ್ಷಿಪಗು
ಸಪೋಟಹಣ್ಣು	ಸಪೋಟುಪಗು
ಕಿತ್ತಾಳೆಹಣ್ಣು	ಕಿತ್ಲೆಪಗು
ಸೇಬಣ್ಣು	ಸೇಬುಪಗು
ಪರಂಗಿಹಣ್ಣು	ಪರಂಗಿಪಗು

ಕಾಲಗಳು

ಮಳೆಗಾಲ	ಮಗ್ಗಾಲು
ಚಳಿಗಾಲ	ಈದ್ಗಾಲು/ಈದ್ಲಗಾಲು
ಬೇಸಿಗೆಕಾಲ	ವೋಗ್ಗಾಲು

ಇವತ್ತು (ಈದಿನ, ಇಂದು)	ಇಮಾನು
ನಾಳೆ	ತಲ್ಲಾರಿ
ನಾಡಿದ್ದು	ಮರ್ರಾಡಿ
ನಿನ್ನೆ	ನೇಸು
ಮೊನ್ನೆ	ಮುನ್ನೇಸು
ಮುಂಜಾನೆ (ಬೆಳಿಗ್ಗೆ)	ತಲ್ಲಪಿಟ್ಲೇ
ಮಧ್ಯಾಹ್ನ	ಮಧ್ಯಾನು
ಸಂಜೆ	ಎಂದಿವಾಳಿ(ಮಿನಾಪಳ್ಳಿ)
ರಾತ್ರಿ	ನಾಮರಿಕೆ
ಕತ್ತಲಲ್ಲಿ	ಮೊಬ್ಬುಕೋರಿ
ಮಧ್ಯರಾತ್ರಿ	ನೆಡ್ಜೆಳ್ಳಿ

ಬಣ್ಣಗಳು

ಕಪ್ಪು	ಕರ್ತದು
ಕೆಂಪು	ಎರ್ರ
ಬಿಳಿ	ವಳ್ಳದು
ಹಳದಿ	ಮಂಜ್ಳು
ಹಸಿರು	ಪಸುರು
ಬೂದ	ಬೂದು
ನೀಲಿ	ನೀಲಿ

ಪ್ರಮಾಣಸೂಚಕ ಪದಗಳು

ಕಾಲು	ಕಾಲ್
ಅರ್ಧ	ಅರ್ಧ
ಮುಕ್ಕಾಲು	ಮುಕ್ಕಾಲು
ಒಂದುಕಾಲು	ಒಂಡ್ಕಾಲು

ಒಂದು	ఒండు
ಒಂದುವರೆ	ఒణమర
ಒಂದುಮುಕ್ಕಾಲು	ఒండుముక్కాలు

ಪಕ್ಷಿ ಮತ್ತು ಪ್ರಾಣಿಸೂಚಕ ಪದಗಳು

ನರಿ	నక్క
ಎತ್ತು	ఎద్దు
ಕೊಂಬು	కొమ్ము
ಬಾಲ	త్వాక
ರೆಕ್ಕೆ	రెక్క
ಉಡ	ఉడుము
ಕೋಣ	క్వాణ
ಕತ್ತೆ	క్యాద
ಆಮೆ	ఆమా
ಹಾವು	పాము
ಹಲ್ಲಿ	బొల్లి
ಕಾಗೆ	కాక
ಗುಬ್ಬಿ	గుబ్బి
ಗೋಗೆ	గోబా
ತೋಳ	త్వాలు
ಚಿರತೆ	వన్నిగ
ಆಕಳು	మాడు
ಎಮ್ಮೆ	బరగేడ్డు
ಇಲಿ	ఎలి
ಇರುವೆ	సీమా

ಕುದುರೆ	ಕುದುರಿ
ಕುರಿ	ಗೊರ್‍ರಿ
ಆಡು	ಮ್ಯಾಕ
ಟಗರು	ಪೋಟೆಲಿ
ಹೋತು	ಪೋತು
ಚಿಗರೆ	ಜಿಂಕ
ಸೊಳ್ಳೆ	ಸೊಳ್ಳಿ
ನಾಯಿ	ನಾಯಿ
ನೊಣ	ಈಗ
ಹಂದಿ	ಪಂಡ್ರಿ
ಹುಲಿ	ಪುಲಿ
ಪಾರಿವಾಳ	ಪಾರ್ವಾಳು
ಮಂಗ	ಕೋತಿ
ಮೊಲ	ಕುಂದೇಲಿ
ಮೊಸಳೆ	ಮೊಸಳಿ
ಹದ್ದು	ಗದ್ದ
ಕಪ್ಪೆ	ಕೊಪ್ಪಿ
ಬೆಕ್ಕು	ಪೊನ
ಹೆಗ್ಗಣ	ಪಂದಿಕೊಕ್ಕು
ಕರಡಿ	ಕಲ್ಡಿ
ಕರು	ದೊಡ
ಮರಿ	ಕುಟ್ಟಿ
ದೊಣೆಕಾಟ(ಓತಿಕೋತ)	ತೊಂಡಿಬೀಕು
ಕೌಜುಗ	ಕೌಜು

ಸಂಬರಕಾಗೆ	ಸಂಬರಕಾಕ
ನವಿಲು	ನವುಲು
ಕೋಳಿ	ಕೊಯಿ
ಹೋರಿ	ಕುರ್ರ
ಮೊಣಕ	ಪಡ್ಡ

ಸಂಖ್ಯಾವಾಚಕಗಳಿಗೆ ಸಂಬಂಧಿಸಿದಂತೆ

ಒಂದು	ಒಂಡು
ಎರಡು	ರೊಂಡು
ಮೂರು	ಮೂಡು
ನಾಲ್ಕು	ನಾಲು
ಐದು	ಅಂಜು
ಆರು	ಆರು
ಏಳು	ಏಗು
ಎಂಟು	ಎಟ್ಟು
ಒಂಭತ್ತು	ಒಂಬುದಿ
ಹತ್ತು	ಪೊತ್ತು
ಹನ್ನೊಂದು	ಪೊದ್ನಂಡು
ಹನ್ನೆರಡು	ಪನ್ನೆಂಡು
ಹದಿಮೂರು	ಪದಮೂಡು
ಹದಿನಾಲ್ಕು	ಪದ್ನಾಲು
ಹದಿನೈದು	ಪೊದ್ನಂಜು
ಹದಿನಾರು	ಪದಾರು
ಹದಿನೇಳು	ಪೊದ್ನೇಗು
ಹದಿನೆಂಟು	ಪೋದ್ನೆಟ್ಟು

ಹತ್ತೊಂಬತ್ತು	ಪೋದಿನಂಬುದಿ
ಇಪ್ಪತ್ತು	ಇರ್ದೀ
ಮೂವತ್ತು	ಮುಪ್ಪಿದಿ
ನಲವತ್ತು	ನಾಪದಿ
ಐವತ್ತು	ಅಂಜುಗಾಪತ್ತು
ಅರವತ್ತು	ಅರ್ರಗಾಪತ್ತು
ಎಪ್ಪತ್ತು	ಏಗ್ರ್ರಗಾಪತ್ತು
ಎಂಬತ್ತು	ಎಟ್ರ್ರಗಾಪತ್ತು
ತೊಂಬತ್ತು	ಒಂಬ್ರುಗಾಪತ್ತು
ನೂರು	ನೂರು
ಐದುನೂರು	ಅಂಜನೂರು
ಸಾವಿರ	ಸಾವಿರ

ಸಾಮಾನ್ಯ ಪದಕೋಶ

ಕನ್ನಡ	**ಸಮುದಾಯದ ಭಾಷೆ**
ಅಗಲ	ಅಗಲು
ಅಂಗಡಿ	ಅಂಗ್ಡಿ
ಅಡಕೆ	ಒಕ್ಕಪೋಡು
ಅಂಟು	ಅಂಟ
ಕೊಯ್ಯಿ	ಅಂರು
ಅರ್ಧ	ಅರ್ಧ
ಅವನದು	ಅರ್ತದು/ಅದುಟದು
ಇವನದು	ಇರ್ತದು/ಇದುಟದು
ಇದು	ಇದು
ಇವನ	ಇದಟ

ಇರು	ಇರು
ಇಕ್ಕು	ಎಕ್ಕಿ
ಜಗ್ಗು	ಎಲೀ
ಉಗಿ	ಉಯ್ಯಿ
ಉಸುಕು	ಉಸುಗು
ಒದೆ	ಒದಿ
ಆಕಳಿಸು	ಆವಲಿಂಪು(ಆವಟಿಂಪು)
ಆರಿಸು	ಪೆರುಕು
ಆಲಿಸು	ಆಲ್ಸ
ಆಟ	ಒಳ್ಳೆಕ್ಕಿ
ಅಹಂಕಾರ	ಪೊಗರು
ಅನಾಥ	ದಿಕ್ಕಿಲ್ಲಾರ್ದ
ಅನ್ಯರು	ವಾರೆಯ
ಅನೇಕ	ಏನಾಡಿ
ಆಮೇಲೆ	ಅವಳಿತಿಗಿ
ಅನುಗಾಲ	ಎಪ್ಪೋದು (ಯಾವಾಗಲೋ)
ಅಪಾಯ	ಕೆಡುಕು
ಆಕಸ್ಮಿಕ	ಅಪ್ಪಿತಪ್ಪಿ
ತಾವರೆ	ತಾವರೆ
ಅವಧಿ	ವಾಯ್ದೆ
ಆಚೆ	ಆತಳ್ಳ/ಅಕ್ಕಡಿ
ಅವಸರ	ಅವಸ್ರು
ಅರಳಿಮರ	ರಾಗಿಮರ್ರ
ಆಲದಮರ	ಮರಿಮರ್ರ

ಅಸೂಯೆ	ವರಗಮಂಟ
ಆಧುನಿಕ	ಪಿಧಿ/ಪುದಿ
ಅಪಾಯ	ಆಪತ್ತು
ಅಪರಾಧಿ	ತಪ್ಪಸ್ಥ
ಆಭರಣ	ಸೊಮ್ಮು
ಆಸ್ತಿಪಾಸ್ತಿ	ಆಸ್ತಿ ಅಡುವು
ಇಳಿ	ಇಗಿ
ಈಜು	ಈಸು
ಉಪವಾಸ	ಪಟ್ಲೆ
ಉಣು	ತಿನು
ಉಂಡೆ	ತಿಂದ್ರೆ
ಉಂಡ್ರ್ಯಾ	ತಿಂಡ್ರ್ಯಾ
ಉತ್ತರಿಸು	ಸೊಣ್ಣು
ಉಡು	ಓಟ್ಗು
ಉಗಿಬಂಡಿ	ಪಗಬಂಡಿ
ಉದ್ದರಿ ಸಾಲ	ತೆಣಸು
ಉಡುಗೊರೆ	ಮುಯ್ಯಿ
ಉತ್ಸವ	ಉಚ್ಚಯ್ಯ
ಏಡಿ	ನೋಂಡು
ಏಟು	ಪೆಟ್ಟು
ಒಂಟೆ	ಒಂಟ
ಒಗೆ	ಬೆಟು
ಒಟ್ಟಾರೆ	ಒಟ್
ಒದ್ದೆ	ತ್ಯಾಮು

ಒಣಗು	ನೊಡ್ಡು
ಒರಳುಕಲ್ಲು	ವರ್ಲಕೆಲ್ಲು
ಓಲೆ	ಅಡುಪು
ಔಷಧಿ	ಮೆರ್दು
ಕಚ್ಚು	ಕಡಿ
ಕಂಕುಳ	ಸಂಕ
ಕಂತೆ	ಸಿವುಡು
ಕಂಬಳಿಹುಳು	ಕಂಬಳಿಪುರುವು
ಕಡಲೆ	ಕಡ್ಲೆ
ಕತೆ	ಕತ
ಕನ್ಯೆ	ಸಿನಪೊಣ್ಣು
ಕಮ್ಮಿ	ತಕ್ವ
ಕಳವು	ತಿಗ್ಡು
ಕಿಚ್ಚು	ಮಂಟ
ಕಿವುಡು	ಸೆವುಟ
ಕಳೆವು	ಕಲುಪು
ಕಲಹ	ಜಗಡು
ಕಲಿಕೋ	ಕೆಚ್ಚಿಗೋ
ಕಲ್ಮಶ	ಕೊಳಕು
ಕಹಿ	ಕೆಚ್ಚು
ಕಳಚು	ಅಮ್ರು
ಕಳುಹಿಸು	ಅಂಪಿಕ್ಕಿ
ಕಳ್ಳಿ	ತೆಕ್ಕಿ
ಕಾಲವಾಗು	ಸತ್ತೋಸು

ಕಿತಾಪತಿ	ತರತಿಗಡಿ
ಕುಣಿ/ಕುಳಿ	ಗುಂತ
ಕುಳ್ಳ	ಗಿಡ್ಡ
ಕೂಗು	ಕೂಡು
ಕೂಡು	ಸೇರು
ಕೆನ್ನೆ	ಸೆಂಪ
ಕೆಳಗೆ	ದಿಗಲಿ
ಕೆರೆ	ಏರಿ
ಕೆಸರು	ಬುರ್ದ
ಕೈಮದ್ದು	ಕೈಮಸ್ಗು
ಕೊನೆ	ಕೊನ
ಕೊಬ್ಬು	ನೆಣ
ಕೊಳ್ಳು	ಕೊಂಡ್ಕೊ
ಕೊಡ	ದುತ್ತ
ಗದರು	ಗೆದ್ರು
ಗರತಿ	ಗರತಿ
ಗರ್ವ	ಪೊಗರು
ಗರ್ಭಿಣಿ	ದಿಮ್ಮನ್ಸಿ
ಗುಂಡುಕಲ್ಲು	ಗುಂಡ್ಕೆಲ್ಲು
ಗೋಚರಿಸು	ಕಾಂಗು
ಗೋಡೆ	ಗ್ವಾಡ
ಚಂದ್ರ	ನೆಲಾವು
ಚಿಂತೆ	ಸಿಂತ
ಚಿನ್ನಾಟ	ಸಿನ್ನಾಟ

ಚರ್ಮ	ತೊಲು
ಚಚ್ಚು	ಜಜ್ಜು
ಬಡಿ	ಮೊತು
ಚೂರು	ರೊತ್ನ
ಚಲಿಸು	ಕದ್ಲು
ಚನ್ನಾಗಿ	ನಲ್ಲಾದು
ಛತ್ರಿ	ಕೊಡಿ
ಜಂಬುಕ	ನಕ್ಕೂತು
ಜಿಪುಣ	ಜಿಬುಕಿ
ಜಿಗಿ	ನವ್ಲು
ಜರಗು	ಸರ್ದುಗು
ಟೋಪಿ	ಕುಲಾಯಿ
ಡಾಬು	ನಡುಪಟ್ಟಿ
ಡೊಗರು	ಬಕ್ಕ
ತಂಗಳು	ಸೆದ್ದಿ
ತಂಗು	ತೆಂಗು
ಹಣೆ	ನೆಚ್ಚಿ
ನೆನಪು	ಗ್ಯಾಪನೆ
ನೆಪ	ನೆವ
ನೆರೆಮನೆ	ಪಕ್ಕೋಡು
ನೆರಳು	ನೀಡ
ನೆರೆಹೊರೆ	ಸರಿಕರು
ಆಶ್ರಯ	ಆಶ್ರಾಯ
ನೇಸರ	ಪೊಗದು

ನೌಕರ	ಪಣಿಮೊಣಸು
ನಿಜ	ನೆಚಿದ್ದೆ
ಪಂಜೆ	ವಲ್ಲಿ
ಪಂಜರ	ಪಾಜಿ
ಪಂತಿ	ಪಂತಿ
ಪಕ್ಕ	ಪಕ್ಲೇ
ಪಕ್ಷಿ	ಕುಂಜ
ಪಾದ	ಹೆಜ್ಜ
ಸುಳಿವು	ಸುಳಿವು
ಹುಡುಕು	ದೇವು
ದಾರಿ	ಎಗಿ
ಪರದೇಶಿ	ಪರದೇಶಿ
ಪರಸ್ಪರ	ಒಂಡ್ಕೊಂಡು
ಭಯ	ಭೀತು
ಹುಚ್ಚು	ಪಿಚ್ಚೆ
ಹೆಡೆ	ಹೆಡ
ಹೆಣ	ಪಿಣೆಗಿ
ರುಮಾಲು	ತಲಗುಡ್ಡ
ಬಂಗ್ಲೆ	ಬಂಗ್ಲಿ
ಬಂಡೆ	ಬಂಡ
ಬಂಧು	ನೆಂಟ್ರು
ಬಡ್ಡಿ	ವಡ್ಡಿ
ಬಲಶಾಲಿ	ಗೆಟ್ಟಿಮೊಣಸು
ಬಿಸಿ	ಉಡ್ಕು

ಬಳೆ	ಗಾಂಜು
ಬಾಯಾರಿಕೆ	ದಗೆ
ಬಾಲ	ತ್ವಾಕ
ಬಿಚ್ಚು	ಅಮುರು
ಬೆಂಡೆಕಾಯಿ	ಬೆಂಡ್ಕಾಯಿ
ಬೇಸಾಡು	ಇಸಿರೀಡು
ಬೂದಿ	ಬುಡಿದಿ
ಬೆವರು	ಸೆಮಟ
ಬೆರಣಿ	ಪಿಡ್ಕ
ಬೆಳಗು	ಕೆವ್ವು
ಬೇಗ	ಬೀರನ್
ಬೇರೆ	ಎರೆ
ಬೇವು	ಏಪ್
ಬೊಂಬೆ	ಗೊಂಬಿ
ಭಾರ	ಬೊರುವು
ಮುದುಕಿ	ಕೇಂಬ
ಮುದುಕ	ಕೇಪಯ್ಯಿ
ಮಲಗು	ಬೂದ್ಗು
ಮಂಡಕ್ಕಿ	ಬೊರ್‌ಗು
ಮುಂದೆ	ಮಿನ್ನೇ
ಮಡಕೆ	ಕುಂಡ
ಮಡಿಚು	ಮಡ್ಚು
ಸತ್ತ	ಸೊತ್ತೂಸು
ಮಾತು	ವಾತ

ಕೊಳೆ	ಮುರಿಕ್ಯಾ
ಮೇಲೆ	ಮೇನಿ
ಯಜಮಾನ	ಬೆರಮಾಣ್ಸು
ಯೋಚನೆ	ಯೇಸನು
ರಣಬಿಸಿಲು	ರಣವೋಗ
ರವೆ	ರವ
ರವಿ	ಪೊಗದು
ರಸ್ತೆ	ಎಗಿ
ವರ್ಷ	ವಾಟ್ಗಾಲು
ವೈರಿ	ಪಗತಾರ್
ವಾಂತಿ	ಕಕ್ಕು(ವಾಂತಿ)
ವಾಸನೆ	ವಾಸ್ನ
ವೇಳೆ	ಪೊಗದು
ಶ್ರೀಮಂತ	ಸಾವುಕಾರ
ಸಂದೇಹ	ಅನುಮಾನ
ಬೆಳೆಸು	ವಳ್ತುಗೊ
ಸಾರಾಯಿ	ಕರ್ತನ್ನಿ
ಸಿಪ್ಪೆ	ಸಿಪ್ಪ
ಸೀಬೆ	ಪ್ಯಾರ್ಲ
ಸೀರೆ	ಕ್ವಾಕ
ಸುತ್ತು	ತಿರ್ಗು
ಸೌಟು	ಗ್ಯಾರಂಟ
ಸ್ನಾನ	ತನ್ನಿ ವಾತಗೋ
ಸ್ನೇಹಿತ	ಜತಗಾರು

ಹಂಚು	ಪೆಂಚು
ಹಗಲು	ಪಗಮಾರು
ಹಗ್ಗ	ಕರಗು
ಹಣೆ	ನೆಚ್ಚಿ
ಹತ್ತಿ	ಪೆತ್ತಿ
ಹಿಡಿ	ಪುಡುಸ್ಗೊ
ಹಿರಿಯವರು	ಬೇರಾಯ
ಹುಲ್ಲು	ಗೆಡ್ಡಿ
ಹುಳಿ	ಪುಲುಪು
ಹುಳು	ಪುರುವು
ಹೆದರು	ಬೀತ್ಗೊ
ಹೊಕ್ಕಳು	ಬೊಡ್ಡು
ಹೊಸ್ತಿಲು	ವಸಲುಕೊಳ್ಡು
ಹೌದು	ಅಂಬೋ
ಹೊಸ	ಪೀದಿದು
ಹೊಲಿ	ಕೊರ್ಸು
ಹೊರಗೆ	ಬೇಲಿ
ಹಿಟ್ಟು	ಮಾವು
ಹರಿವಾಣ	ಕೋಣಿಗಿ
ರೋಮ	ಮೆಗರು
ಅರಣ್ಯ	ಅಡವಿ
ಆತಂಕ	ಬೀತು
ಇನಿತು	(ಇಷ್ಟೇ) ಇತ್ನೆ
ಇತ್ತ	ಇತಟ್ಟ

ಚಟ್ನಿ	ಊರ್ಮಿಂಡಿ
ಗುಂಪು	ಗುಂಪು
ಉರಿ	ಉರಿ
ಉರುಲು	ಉರ್ಲು
ಉಕ್ಕು	ಉಕ್
ಉಬ್ಬು	ಉಬ್ಬು
ಒಳಗೆ	ಉಳ್ಳಿ
ಒಲೆಊದು	ಅಡಪವಿದು
ಊರು	ಊರು
ಹಳ್ಳಿ	ಪೆಳ್ಳಿ
ಎಣಿಸು	ಎಣ್ಸು
ಬೆಳಕು	ಪೋಳಸುರು
ದೀಪ	ಪೋಳುಕು
ಎಲ್ಲ	ಅಡ್ಡಿ
ಬರೆ	ಬರಿ
ಏನು	ಎಂದ
ಹೇಳು	ಸೊಣ್ಣು
ಒಪ್ಪಿಕೋ	ಒಪ್ಸಿಗೋ
ಮುರಿ	ವಡಿ
ಓಡು	ಓಡು
ಕಾಸು	ಲೆಕ್ಕ
ಕಟ್ಟು	ಕಟ್ಟಿ
ಗಟ್ಟಿ	ಗೆಟ್ಟಿ
ಕಿಂಡಿ	ಕಿಂಡಿ (ತೂಟು)

ಕಪ್ಪು	కరి
ಕರಿಯಂಡ	కర్తండ
ಕಲ್ಲು	కెల్లు
ಕಲಸು	కల్సు(కలుపు)
ಗವಿ	గవి
ಕನಸು	కేనావు
ಅಡಿವಿ (ಕಾಡು)	అడవి
ನೋಡು	పారు
ಗಾಲಿ	గాలి
ಕೊಡ	దుత్త
ಗುಡಿಸಲು	గుడిసి
ಛತ್ರಿ	కొడి
ಗುಡ್ಡ	గుట్ట
ಕುಂಟು	కుంట
ಗುದ್ದಲಿ	గుద్లి
ಗುರಿ	గురి (సోటు)
ಬಕ್ಕೆ (ಗುದ್ದ)	బక్కు (గుద్దు)
ಕುಣಿ	కుణి
ಕೆಡು	కెడు
ಕಟ್ಟು	కట్టు
ಮಾಡು	సేయ్
ಚಪ್ಪಲಿ	సెరుపు
ಗೆಲ್ಲು	గెది
ಮಾತಾಡು	వాస్తు

ಕೇಳು	ಕೇರು
ಕೊಕ್ಕಿ	ಕೊಕ್ಕಿ
ಕೊಡು	ಕುಡು
ಕೋಟೆ	ಕೋಟಿ
ದುಡ್ಡು	ಲೆಕ್ಕ
ಸುಂದರ	ನಲ್ಲಾದು
ಸಾಗು	ಸಾಗು
ಜಾರು	ಜಾರು
ಹೋಗಿ	ಬೇಟು
ಸೀಗು	ಸಿಕ್ಕು
ಸಣ್ಣ	ಸಿನ್ನೆ
ಕೆರೆತ	ಕೆರಿ
ಮಾಡಿದೆ	ಸೇಂದ
ಸೀಳು	ಸೀಳು
ಸಿಟ್ಟು	ರ್‍ವಾಸು
ಚಿಕ್ಕೆ	ಸುಕ್ಕ
ಸುಡು	ಸುಡು
ಸುತ್ತಿಗಿ	ಸುತ್ಗಿ
ಸಿಂಬೆ	ಸಿಂಬಿ
ಸುತ್ತು	ಸುತ್ತು
ಸುಡು	ಸುಡು
ಚೆಂಡು	ಸೆಂಡು
ಜೊಳ್ಳು	ಜೊಳ್ಳು
ಕಳ್ಳ	ತೆಕ್ಕು

ತಟ್ಟೆ	ಗಿನ್ನಿ
ತನು	ತನು
ದಂಟು	ದಂಟು
ಚೇಳು	ತೇಳು
ತೆಳ್ಳಗ	ತೆಳ್ಳಗ
ತಪ್ಪು	ತಪ್ಪು
ತಾಳಿ	ತಾಳಿ
ದಿನ್ನೆ	ದಿನ್ನಿ
ತಿರುಗು	ತಿರ್ಗು
ತೀಡು	ತೀಡು
ದೊಳು	ದೊಳು
ಕಸ	ಸೆದ
ತುಂಡು	ತುಂಡು
ನಡೆ	ನಡ
ದುಃಖ	ದುಕ್ಕ
ತೊಂದ್ರೆ	ತೊಂದ್ರೆ
ನಡುವೆ	ನೆಳ್ಳಿ
ನಂಬಿಕೆ	ನಂಬಿಕೆ
ಭೂಮಿ	ಭೂಮಿ
ನೆಲ	ತರ್ರ
ಮರ	ಮರ್ರ
ನೆಟ್ಟಗೆ	ನೆಟ್ಟಗ
ನೋವು	ನೆಪ್ಪಿ
ಹಗಲು	ಪಗಲು

ಕೆಲಸ	ಪಣಿ
ಹಬ್ಬ	ಪಂಡಗ
ಹೊರಗೆ	ಬೇಲಿ
ಬಟ್ಟೆ	ಬಟ್ಟ
ಹಾಡು	ಪಾಡು
ನೋಡು	ಪಾರು
ಹಾಡಿ	ಪುಡಿ
ಹೊಗೆ	ಪಗ
ಪುಟ್ಟಿ	ಗಂಪ
ತುಂಬು	ಮೆತ್ತು
ಹೂವು	ಪೂ
ಹೆಸರು	ಪೇರು
ಬಕ್ಕಣ	ಬಕ್ಕಣು
ಹೋಗು	ಪೋ
ಅರಿಶಿಣ	ಮಂಜಲು
ಮಣ್ಣು	ಮಣ್ಣು
ಕತ್ತಲು	ಮೊಬ್ಬು
ಮಳೆ	ಮಗ
ಮರೆ	ಅಸ್ತುಡು
ಮುಗಿಸು	ಮುಗ್ಸು
ಮುಗಿದಿಲ್ಲ	ಮುಗಿಲ್ಲ
ಮುಚ್ಚು	ಮೂಸು
ಮುಟ್ಟು	ಅಂಟು
ಮುತ್ತು	ಮುತು

ಮುಳ್ಳು	ಮುಳ್ಳು
ಮೊಳೆ	ಮಳಿ
ಮುಂದೆ	ಮಿನ್ನಿ
ಮೊಡ	ಮಾಡು
ಮೆತ್ತಗೆ	ಮೆತ್ತು
ಮೆಲ್ಲಗೆ	ಮೆನ್ನೆಗ
ಮೇಲೆ	ಮಸಿ
ಮಸಿ	ಮೌಸಿ
ನದಿ	ವಳಿ
ಬಡವ	ಬಡುವು
ಬಯಕೆ	ಬಯಕೆ
ಕುಟ್ಟು	ಎರಿ
ಬಲಗಡೆ	ಕಣಗಿವಡ್ತಗು
ಒಲೆ	ಒಲಿ
ಬಗ್ಗು	ವಂಗು
ವಣಗು	ಆರೋಟು
ಬಿಗಿ	ಬಿಗಿ
ಬಿಕ್ಕಳಿಕೆ	ಬಿಕ್ಕು
ಆಕಳಿಕೆ	ಆವಟಿಂಪು, ಎಗಿಂಪು
ಬಿಡು	ವುಡು
ಬೊಂಬು	ಬೊಂಬು
ಚೆಂಪು	ಸೆಂಬು
ಬೇರೆಯವರು	ಷಹನಾಯ/ಬೇರೆಯ
ಬೇಜಾರು	ಬೇಜಾರು

ಬೇಕು	ಬೇಕು
ಇಡು	ಎಕ್ಕಿ
ಎದುಕ	ಎಂತ್ಗು
ಸಂಜೆ	ಎಂದುವಳ್ಳಿ
ಉಗುಳು	ಉಯ್ಯಿ
ಎಂಜಲು	ಎಚ್ಚಿ
ಉಪ್ಪನ್ನಾಯಿ	ಉಪ್ಪಿನಕಾಯಿ
ಉತ್ತರ	ಗಂಗಿದಿಕ್ಕು
ದಕ್ಷಿಣ	ಹನುಮದಿಕ್ಕು
ಪೂರ್ವ	ತೂರ್ಪುಟು
ಪಶ್ಚಿಮ	ಪರ್ಮಟು
ಉದ್ದ	ವಸ್ತ್ರ
ಬೇಟೆ	ಓಟಿ
ಓದು	ಒದು
ಒಳಗಿಡು	ಉಳ್ಳೇಕ್ಕಿ
ಹೊರಗ	ಬೇಲಿ
ಒಳಗೆ	ಉಳ್ಳಿ

ಅಧ್ಯಾಯ : ಎಂಟು

ಸಮಾರೋಪ

ಅಧ್ಯಯನದ ಫಲಿತಗಳು

ಅಧ್ಯಾಯ: ಎಂಟು

ಸಮಾರೋಪ

ಭಾರತವು ಬಹು ಸಂಸ್ಕೃತಿಯ ನಾಡು ಇದರಲ್ಲಿ ಅನೇಕ ಬುಡಕಟ್ಟು ಸಮುದಾಯಗಳು ತಮ್ಮ ಅನನ್ಯತೆಯನ್ನು ಉಳಿಸಿಕೊಳ್ಳಲು ಸಾಮಾಜಿಕ ನಿಯಮಗಳನ್ನು ಕಟ್ಟುನಿಟ್ಟಿನಿಂದ ಪಾಲಿಸುತ್ತಲೇ ಬಂದಿರುವುದನ್ನು ನೋಡಬಹುದು. ಹೀಗಾಗಿ ಯಾವುದೇ ಒಂದು ಸಮುದಾಯ ತನ್ನ ರೂಢಿಗತ ಬದುಕಿನ ನಿಯಮಗಳನ್ನು ತಮ್ಮ ನೆರಳಿನಂತೆ ಪೋಷಿಸಿಕೊಂಡು ಬರುತ್ತವೆ. ಆದರೂ ನಾಗರಿಕತೆಯ ಸಂಸರ್ಗದಲ್ಲಿ ಎಷ್ಟೇ ಪರಿವರ್ತನೆಗಳಾದರೂ ಭಿನ್ನವಾದ ಪಾರಂಪರಿಕತೆಯನ್ನು ಉಳಿಸಿಕೊಂಡು ಬಂದಿರುವುದು ಕೌತುಕದ ಸಂಗತಿ. ಈ ಹಿನ್ನೆಲೆಯಲ್ಲಿ ಕೊರಚರು ಸಹ ತಮಗೆ ಎದುರಾದ ಬಿಕ್ಕಟ್ಟುಗಳ ನಡುವೆ ತಮ್ಮದೇ ಆದ ಸಾಂಸ್ಕೃತಿಕ ವಿಶಿಷ್ಟತೆ ಮತ್ತು ಭಾಷಿಕ ವೈಶಿಷ್ಟ್ಯತೆಯನ್ನು ರೂಢಿಸಿಕೊಂಡು ಬಂದಿರುವುದನ್ನು ನೋಡಬಹುದು. ಬ್ರಿಟೀಷರ ಆಳ್ವಿಕೆಯ ಸಂದರ್ಭದಲ್ಲಿ ತಮ್ಮ ಮೂಲ ನೆಲೆಯನ್ನು ಕಳೆದುಕೊಂಡು ಇತರೆ ಹಲವು ಸಮುದಾಯಗಳಂತೆ ತಮಿಳುನಾಡಿನ ಮೂಲ ನಿವಾಸಿಗಳಾದ ಕೊರಚರು ಆಂಧ್ರ-ಕರ್ನಾಟಕ ಮತ್ತಿತರ ರಾಜ್ಯಗಳಿಗೆ ವಲಸೆ ಬಂದು ನೆಲೆಸಿದ್ದಾರೆ. ಹೀಗೆ ವಲಸೆ ಬಂದ ಇವರು ಕರ್ನಾಟಕದಲ್ಲಿ ಬಳ್ಳಾರಿ, ದಾವಣಗೆರೆ, ಚಿತ್ರದುರ್ಗ, ಕೋಲಾರ, ರಾಯಚೂರು, ಶಿವಮೊಗ್ಗ ಮೊದಲಾದ ಜಿಲ್ಲೆಗಳಲ್ಲಿ ಬಂದು ನೆಲೆಸಿದ್ದಾರೆ. ಇವರು ಮಾತೃಭಾಷೆಯಾಗಿ 'ಕುಳುವಾತ' ಅಥವಾ 'ಕುಡ್ರುವಾತ' ಎಂಬ ತಮಿಳು, ತೆಲುಗು, ಕನ್ನಡ ಮತ್ತಿತರ ದ್ರಾವಿಡ ಪರಿವಾರದ ಭಾಷೆಯ ಪದಗಳನ್ನು ಒಳಗೊಂಡ ಭಾಷೆಯನ್ನು ಮಾತನಾಡುತ್ತಾರೆ. ತರುವಾಯ ಪ್ರಾದೇಶಿಕವಾಗಿ ಕನ್ನಡ ಕಲಿತು ವ್ಯವಹರಿಸುತ್ತಿದ್ದಾರೆ.

ಒಂದು ಜನಾಂಗ ವಾಚಿಯಾಗಿ ಬಳಕೆಯಾಗುತ್ತಿರುವ ಕೊರಚ ಶಬ್ದದ ನಿಷ್ಪತ್ತಿಯ ವಿಚಾರ ತುಸು ತೊಡಕಿನದಾಗಿದೆ. ಇವರು ಮೂಲತಃ ದ್ರಾವಿಡ ಹಿನ್ನೆಲೆಯ ಬುಡಕಟ್ಟು ಸಮುದಾಯವಾಗಿದ್ದು ದ್ರಾವಿಡ ಭಾಷಾ ಪರಿವಾರದಲ್ಲಿ ಈ ಶಬ್ದವು ವಿಭಿನ್ನ ಅರ್ಥಗಳನ್ನು ಹೊಂದಿದೆ ಎಂತಲೇ ಇದು ವೃತ್ತಿ ಮೂಲದ್ದೋ, ಭೌಗೋಳಿಕತೆಯ ಹಿನ್ನೆಲೆಯದ್ದೋ ಎಂಬ ಬಗ್ಗೆ ಸಾಕಷ್ಟು ಚರ್ಚೆಗಳು ನಡೆದಿವೆ. ಈ ಹಿನ್ನೆಲೆಯಲ್ಲಿ ನೋಡಿದರೆ ಕೊರಚ ಪದವೂ 'ಕುರು' ಪದದಿಂದ ನಿಷ್ಪತ್ತಿ ಹೊಂದಿದ್ದಾಗಿ ಅಂದರೆ ಇವರು ಬೆಟ್ಟಗುಡ್ಡಗಳಲ್ಲಿ, ಕುರುಚಲು ಕಾಡಿನಲ್ಲಿ ವಾಸಿಸುತ್ತಿದ್ದು ಜನ

ಎಂಬರ್ಥದ ಭೌಗೋಳಿಕ ಹಿನ್ನೆಲೆಯಿಂದ ಬಂದಿದ್ದಾಗಿದೆ. ಕೊರಚರು ಮೂಲತಃ ತಮಿಳುನಾಡಿನ ದಕ್ಷಿಣ ಆರ್ಕಾಡ್ ಪ್ರದೇಶದವರಾಗಿದ್ದು, ಅಲ್ಲಿನ ಕುರುಚಲು ಕಾಡಿನಲ್ಲಿದ್ದವರು, ಕುರು ಪದಕ್ಕೆ ತಮಿಳಿನಲ್ಲಿ ಗುಡ್ಡು, ಕಾಡು ಎಂಬ ಅರ್ಥವಿದೆ. ಈ ರೀತಿಯಲ್ಲಿ ಗುಡ್ಡಗಾಡುಗಳಲ್ಲಿ ವಾಸಿಸುತ್ತಿದ್ದರಿಂದ ಅವರ ಭಾಷೆ ತಮಿಳಿನ ಉಪಭಾಷೆಯಾಗಿರಬೇಕು. ನಂತರದಲ್ಲಿ ಅವರ ವಲಸೆಯ ಪ್ರವೃತ್ತಿಯಿಂದಾಗಿ ಭಾಷೆಯಲ್ಲಿ ತೆಲುಗು, ಕನ್ನಡ ಮತ್ತಿತರ ಪದಗಳು ಪ್ರಾದೇಶಿಕವಾಗಿ ಕಂಡುಬಂದಿರಬಹುದಾಗಿದೆ. ಎಡ್ಗರ್ ಥರ್ಸ್ಟನ್ ಅವರು ಕೊರಚರು ತಮಿಳು–ತೆಲುಗು–ಕನ್ನಡ ಮೂಲಗಳ ಒಂದು ಅಶುದ್ಧ ಭಾಷಾ ರೂಪವನ್ನು ತಮ್ಮ ನಡುವೆ ಮಾತನಾಡುತ್ತಾರೆಂದು ಹೇಳಿದ್ದಾರೆ. ಇದೇ ಅಭಿಪ್ರಾಯವನ್ನು ಎಚ್.ವಿ. ನಂಜುಂಡಯ್ಯ, ಅನಂತಕೃಷ್ಣ ಅಯ್ಯರ್, ಆರ್.ಇ. ಎಂಥೋವನ್ ಅವರು ಸಹ ಒಪ್ಪಿಗೆ ಸೂಚಿಸಿದ್ದಾರೆ. ಮತ್ತು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಗಮನಿಸಿದಂತೆ (ನಂಗ ಮೆಚ್ಚುನು ಸಾಲಿಗಿ ಹೋಸು, ಅಬ್ಬ ಕಳಿ ತಿಂಡ್ರುಟು ಪೊ, ಮಾಮ ಊರ್‌ಗು ಬಾ, ಇತ್ಯಾದಿ) ಕೊರಚರು ಮಾತನಾಡುವ ಭಾಷೆಯಲ್ಲಿ ತಮಿಳು, ತೆಲುಗು, ಕನ್ನಡ ಭಾಷೆಗಳಿಂದ ಮಿಶ್ರೀತವಾದ ಭಾಷಿಕಾಂಶಗಳು ಕಂಡುಬರುತ್ತದೆ.

ಭಾಷೆ ಒಂದು ಸಾಮಾಜಿಕ ಕ್ರಿಯೆ. ಭಾಷೆ ಇಲ್ಲದೆ ಇದ್ದರೆ ಸಮಾಜದಲ್ಲಿ ಜೀವನವೇ ಅಸಾಧ್ಯ. ಹಾಗೆ ಭಾಷೆ ಇಲ್ಲದ ಸಮುದಾಯಗಳನ್ನು ಊಹಿಸಿಕೊಳ್ಳುವುದು ಸಾಧ್ಯವಿಲ್ಲ. ಪ್ರತಿಯೊಂದು ಸಮುದಾಯವೂ ತಮ್ಮದೆ ಆದ ಭಾಷೆಯನ್ನು ರೂಪಿಸಿಕೊಂಡಿರುವುದನ್ನು ಕಾಣಬಹುದು. ಭಾಷೆ ಒಂದು ವೈಶಿಷ್ಟ್ಯಪೂರ್ಣ ಸಂಬಂಧವನ್ನು ದಾಖಲಿಸಿಕೊಡುವ ಅಪೂರ್ವ ಮಾಧ್ಯಮವಾಗಿದೆ. ಈ ನೆಲೆಯಲ್ಲಿ ಅಲೆಮಾರಿಗಳಾದ ಕೊರಚ ಜನಾಂಗವೂ ಆಚರಿಸುವ ಆಚರಣೆ, ಸಂಪ್ರದಾಯ, ನಂಬಿಕೆ, ನಿಷೇದ ಸಾಂಸ್ಕೃತಿಕ ವಿಚಾರಗಳು ಮತ್ತು ವೃತ್ತಿಗೆ ಸಂಬಂಧಿಸಿದಂತೆ ಅಧ್ಯಯನದಿಂದ ಭಾಷಿಕ ಪದಗಳ ಬಗೆಗೆ ತಿಳಿಯಲು ಸಾಧ್ಯವಾಗುತ್ತದೆ. ಕೊರಚರು ಜೀವನ ನಿರ್ವಹಣೆಗಾಗಿ ಕತ್ತಾಳೆ ನಾರಿನ ಹಗ್ಗ, ಈಚಲು ಗರಿಗಳಿಂದ ಪೊರಕೆ, ಚಾಪೆ ಮಾಡುವ ಕರಕುಶಲತೆಯನ್ನು ಹೊಂದಿದ್ದವರು. ಆದರೆ ಜಾಗತೀಕರಣ ಪ್ರಭಾವದಿಂದಾಗಿ ವ್ಯವಸಾಯ ಮತ್ತಿತರ ವ್ಯಾಪಾರದಂತಹ ವೃತ್ತಿಗಳನ್ನು ಮಾಡುತ್ತಿದ್ದಾರೆ. ಹೀಗೆ ವಲಸೆ ಬಂದಂತಹ ಕೊರಚರನ್ನು ಕರ್ನಾಟಕದಲ್ಲಿ ಹಗ್ಗದ ಕೊರಚರು ಮತ್ತು ಮಲೆನಾಡು ಪ್ರದೇಶಗಳಲ್ಲಿ ದಬ್ಬೆ ಕೊರಚರು ಎಂದು ಕರೆಯಲಾಗುತ್ತದೆ. ಈ ಹಿನ್ನೆಲೆಯಿಂದ ಕೊರಚ ಸಮುದಾಯದ ಕುರಿತು ಹಲವಾರು ದೃಷ್ಟಿಕೋನದಿಂದ ಅಧ್ಯಯನ ಮಾಡಬಹುದಾಗಿದೆ. ಆದರೆ ಕೆಲವೊಂದು ಮಾಹಿತಿಗಳು ದೊರೆಯುವುದು ಕಷ್ಟ. ಆದ್ದರಿಂದ ಈ ಸಮುದಾಯದ ಬಗೆಗೆ ಸಮಗ್ರವಾಗಿ ಅಧ್ಯಯನ ಮಾಡದಿದ್ದರೂ ಭಾಷೆಗೆ ಸಂಬಂಧಿಸಿದಂತೆ ಸಮಾಜೋಭಾಷಿಕ ನೆಲೆಯಲ್ಲಿ ಸಾಧ್ಯವಾದ ಮಟ್ಟಿಗೆ ಕ್ಷೇತ್ರಕಾರ್ಯದ ಮಾಹಿತಿಯ ಮೂಲಕ ಮತ್ತು ಸಮುದಾಯದ ಕುರಿತು ಈಗಾಗಲೇ ಬಂದಂತಹ ಕೆಲವೊಂದು ಆನುಷಂಗಿಕ ಕೃತಿಗಳಲ್ಲಿನ ಮಾಹಿತಿಯ ಮೂಲಕ ಮಾಹಿತಿಯನ್ನು (ವಿಷಯ) ಸಂಗ್ರಹಿಸಿ ವಿಶ್ಲೇಷಿಸಲಾಗಿದೆ.

ಅಧ್ಯಯನದ ಫಲಿತಗಳು

ಕೊರಚ ಸಮುದಾಯವು ತಮ್ಮದೇ ಆದ ಸಂಸ್ಕೃತಿ, ನಂಬಿಕೆ, ನಿಷೇದ, ಸಂಪ್ರದಾಯ ಆಚರಣೆಗಳನ್ನು ಇತರೆ ಸಮುದಾಯಗಳಿಗಿಂತ ವಿಭಿನ್ನವಾಗಿ ಅಳವಡಿಸಿಕೊಂಡಿರುವುದು ಅಧ್ಯಯನದಿಂದ ಸ್ಪಷ್ಟವಾಗುತ್ತದೆ. ಎಡ್ಗರ್ ಥರ್ಸ್ಟನ್‌ರ ಆದಿಯಾಗಿ ಅನೇಕ ಜನ ವಿದ್ವಾಂಸರು ತಿಳಿಸಿರುವಂತೆ ಕುಳುವರು ಅಥವಾ ಕುಳುವ್ರ ಜನಾಂಗದಲ್ಲಿ ಇತರೆ ಪಂಗಡಗಳಾದ ಕೊರವರು, ಕೊರಮರು, ಕುಂಚಿ ಕೊರವರು, ಕೊರಮಶೆಟ್ಟರು ಜೊತೆಗೆ ಕೊರಚರು ಸಾಕಷ್ಟು ಸಾಂಸ್ಕೃತಿಕ ಭಿನ್ನತೆಯನ್ನು ಹೊಂದಿದ್ದಾರೆ. ಇದು ಕ್ಷೇತ್ರಕಾರ್ಯ ಸಂದರ್ಭದಲ್ಲಿಯೂ ಕಂಡುಬಂದಿದೆ. ಇಲ್ಲಿ ಸಾಮಾನ್ಯವಾಗಿ ಕುಳುವ ಪದವನ್ನು ಕೊರವ, ಕೊರಮ, ಕೊರಚ, ಕೊರಮಶೆಟ್ಟಿ, ಕಂಚಿಕೊರವ ಪಂಗಡಗಳನ್ನು ಒಟ್ಟಾಗಿ ಕರೆಯುವಾಗ ಬಳಸುತ್ತಾರೆ.ಆದರೆ ಕೊರಚರು ತಮ್ಮ ಕೊರಚ ಭಾಷೆಯನ್ನು ಗುರುತಿಸುವಾಗ, ಹೇಳುವಾಗ ಕುಡ್ರುವಾ ಎಂದು ಬಳಸುವುದು ಕಂಡುಬರುತ್ತದೆ. ಮತ್ತು ಕೊರಚರು ಇಂದಿಗೂ ಪ್ರತ್ಯೇಕ ಹಟ್ಟಿಗಳಲ್ಲಿ ವಾಸಿಸುತ್ತಿರುವುದಲ್ಲದೆ, ಮೇನ್ಪಾಡಿ, ಮತ್ತು ಮೇಂಡ್ರಗುತ್ತಿ ಎಂಬ ಎರಡು ಗೋತ್ರಗಳನ್ನು ಹೊಂದಿದ್ದಾರೆ. ಇದಲ್ಲದೆ ಲೌಕಿಕ–ಧಾರ್ಮಿಕ ವಿಧಿ–ವಿಧಾನಗಳಿಂದಲೂ, ವೃತ್ತಿಯ ಸಂಬಂಧಿತ ವಿಷಯಗಳಿಂದಲೂ ಕೊರಚರು ಉಳಿದ ಪಂಗಡಗಳಿಗಿಂತ ಭಿನ್ನತೆಯನ್ನು ಹೊಂದಿರುವುದು ತಿಳಿದುಬರುತ್ತದೆ. ಈ ಕುರಿತು ಪ್ರಬಂಧದಲ್ಲಿ ವಿವರಣೆಯನ್ನು ನೀಡಲಾಗಿದೆ.

ಕೊರಚ ಪದವು ಕೊರಚರು ವಾಸಿಸುವ ಪ್ರದೇಶಗಳಾದ ಕುರುಚಲು ಕಾಡನ್ನು ಪ್ರತಿನಿಧಿಸುತ್ತಿದ್ದು ಈ ರೀತಿ ಕುರುಚಲು ಕಾಡಿನಲ್ಲಿ ವಾಸ ಮಾಡುವ ಕುರು, ಕೂರ್ಚ, ಕುರುಚ, ಕೊರಚ ಎಂದು ಹೇಳಿರುವುದು ಸೂಕ್ತವಾಗಿದೆ. ಕೊರಚರು ಮೂಲತಃ ತಮಿಳುನಾಡಿನ ಯಾವುದೋ ಒಂದು ಗುಡ್ಡಗಾಡು ನೆಲೆಯಿಂದ ಹೊರಟು ಆಂಧ್ರ ಪ್ರದೇಶ, ಕರ್ನಾಟಕಗಳಿಗೆ ವಲಸೆ ಬಂದಿರುವ ಸಾಧ್ಯತೆಗಳು ಇವೆ. ಹೀಗಾಗಿ ಕೊರಚ ಭಾಷೆಯು ಹೆಚ್ಚಾಗಿ ತಮಿಳು, ತೆಲುಗು, ಕನ್ನಡ, ಭಾಷೆಗಳ ಭಾಷಿಕಾಂಶಗಳ ಮೂಲಕ ಬಳಕೆಯಾಗುವುದು ತಿಳಿದುಬರುತ್ತದೆ.

ಕೊರಚ ಸಮುದಾಯದ ಸಂಪ್ರದಾಯ ಆಚರಣೆಗಳಂತಹ ಸಂದರ್ಭದಲ್ಲಿ ಬಳಸುವಂತಹ ವಿಶೇಷ ಪದಗಳನ್ನು ಗುರುತಿಸುವ ಜೊತೆಗೆ ವಿವರಣೆ ನೀಡುವುದರ ಮೂಲಕ ಸಮುದಾಯದ ಕೌಟುಂಬಿಕ ಸನ್ನಿವೇಶದಲ್ಲಿಯ ಭಾಷಿಕ ವಿಶೇಷತೆಯನ್ನು ಗುರುತಿಸಲಾಗಿದೆ. ಹಾಗೂ ಸಮುದಾಯದಲ್ಲಿ ಇಂದಿಗೂ ತಮ್ಮ ಸಾಂಸ್ಕೃತಿಕ ಆಚರಣೆಗಳ ಸಂದರ್ಭದಲ್ಲಿ ತಮ್ಮ ಮೂಲ ಭಾಷೆಯನ್ನು ಸಂರಕ್ಷಿಸಿಕೊಂಡು ಬಂದಿರುವುದನ್ನು ಕಾಣಬಹುದು ಮತ್ತು ಭಾಷಿಕತೆಯು ಸಮುದಾಯದ ಮೊದಲ ಮತ್ತು ಎರಡನೆ ತಲೆಮಾರಿನ ವ್ಯಕ್ತಿಗಳಲ್ಲಿ ಮಾತ್ರ ಹೆಚ್ಚಾಗಿ ಮೂಲ ಭಾಷಿಕ ರೂಪಗಳನ್ನು ಕಾಣಲು ಸಾಧ್ಯವಾಗಿದೆ.

ಅಲೆಮಾರಿ ಸಮುದಾಯದವರಾದ ಕೊರಚರು ಬೆಟ್ಟ ಗುಡ್ಡಗಳ ಹತ್ತಿರ, ಇಲ್ಲ ಹಳ್ಳಿಗಳಿಂದ ಒಂದೆರಡು ಕಿಲೋಮೀಟರಗಳ ಅಂತರದಲ್ಲಿ ಹಟ್ಟಿಗಳನ್ನು ನಿರ್ಮಿಸಿಕೊಂಡಿದ್ದರು. ಆರಂಭದಲ್ಲಿ

ಹಟ್ಟಿಗಳು ತಾತ್ಕಾಲಿಕವಾಗಿ ಕೊರಚರು ನೆಲೆ ನಿಲ್ಲುತಿದ್ದರಿಂದ ಗುಡಿಸಲುಗಳನ್ನು ಸಣ್ಣದಾಗಿ ಗಾಳಿಗೆ ಹಾರಿ ಹೋಗದಂತೆ ಇರಲು ಎತ್ತರ ಕಡಿಮೆ ಮಾಡಿ ನಿರ್ಮಿಸಿಕೊಳ್ಳುತ್ತಿದ್ದರು ಎಂಬ ವೈಜ್ಞಾನಿಕ ಅಂಶವನ್ನು ಗಮನಿಸಬಹುದು. ಹೀಗೆ ಒಂದಡೆ ಇರುವ ಹಟ್ಟಿಗಳಿಗೆ ಕೊರಚರು ಪೆಂಟಾ ಎಂದು ಕರೆಯುತ್ತಾರೆ. ಪೆಂಟಾ ಎಂದರೆ ಗುಂಪು ಎಂದರ್ಥ, ಹಾಗೇ ಪೆಂಟಾದ ಹಿರಿಯ ವ್ಯಕ್ತಿಯ ಹೆಸರಿನೊಂದಿಗೆ ಪೆಂಟಾಗಳನ್ನು ಗುರುತಿಸುವುದು ಇವರಲ್ಲಿದೆ. ಅದು ಬಕ್‌ನಾಗಪ್ಪಟ ಪೆಂಟಾ, ರಾಮಪ್ಪಟ ಪೆಂಟಾ, ಗೌಡಪ್ಪಟಪೆಂಟಾ, ಇತ್ಯಾದಿಯಾಗಿ ಕರೆಯುತ್ತಿದ್ದರೆಂದು ತಿಳಿದು ಬರುತ್ತದೆ. ಹಾಗೆಯೇ ಸಮುದಾಯದಲ್ಲಿ ಹಿರಿಯರಿಗೆ ಮೊದಲ ಆದ್ಯತೆ ಇರುವುದು ಕಂಡುಬರುತ್ತದೆ. ಹೀಗೆ ಕೊರಚರು ವಾಸ ಮಾಡುತ್ತಿದ್ದಂತಹ ಊರುಗಳಿಗೆ ಹಟ್ಟಿಗಳೆಂದು ಕರೆಯುತ್ತಾರೆ. ಅವು ಅಕ್ಕಪಕ್ಕದ ಊರಿನ ಹೆಸರುಗಳೊಂದಿಗೆ ಗುರುತಿಸಿಕೊಳ್ಳುತ್ತಿದ್ದವು. ತಿಮ್ಮಾಲಾಪುರ ಕೊರಚರ ಹಟ್ಟಿ, ನಿಂಗೆನಹಳ್ಳಿ ಕೊರಚರ ಹಟ್ಟಿ, ಅಂತಾಪುರ ಕೊರಚರ ಹಟ್ಟಿ ಇತ್ಯಾದಿ ಈಗಲೂ ಕೆಲವು ಊರುಗಳು ಪಕ್ಕದೂರಿನ ಹೆಸರಿನೊಂದಿಗೆ ಗುರುತಿಸಿಕೊಂಡರೆ ಕೆಲವು ಹಟ್ಟಿಗಳು ಆಧುನಿಕತೆಯಿಂದಾಗಿ ಬೇರೆ ಹೆಸರುಗಳನ್ನು (ಬತ್ತನಹಳ್ಳಿ, ಪವನಪುರ, ಕಸಾಪುರ, ಕಸನಳ್ಳಿ, ಬಿಕ್ಕಟ್ಟಿ ಇತ್ಯಾದಿ) ಇಟ್ಟುಕೊಂಡಿರುವುದು ಕಂಡುಬರುತ್ತದೆ. ಹೀಗೆ ಹೊಸದಾಗಿ ನಾಮಕರಣ ಮಾಡಿಕೊಂಡಿದ್ದರ ಬಗೆಗೆ ಕ್ಷೇತ್ರಕಾರ್ಯ ಸಂದರ್ಭದಲ್ಲಿ ಹಟ್ಟಿಗಳಲ್ಲಿ ವಿಚಾರಿಸಿದಾಗ ಚಾರಿತ್ರಕವಾದ ಅಂಶಗಳೇನಿಲ್ಲ ಎಂದು ಹೇಳಿದ್ದಾರೆ. ಕೊರಚರ ಹಟ್ಟಿ ಬದಲಿಗೆ ಪ್ರತ್ಯೇಕವಾದ ಹೆಸರಿರಬೇಕೆಂಬ ಉದ್ದೇಶದಿಂದ ಬೇರೆ ಹೆಸರುಗಳನ್ನು ಇಡಲಾಗಿದೆ.

ಕೊರಚರ ಭಾಷೆಯ ವೈಶಿಷ್ಟ್ಯಗಳನ್ನು ಗುರುತಿಸುತ್ತಾ ಧ್ವನಿ, ಪದ ಕುರಿತು ಮಾಹಿತಿಯನ್ನು ನೀಡಲಾಗಿದೆ. ಕೊರಚರ ಭಾಷೆಯಲ್ಲಿ ವಚನರೂಪ ವಿಶಿಷ್ಟವಾಗಿ ಕಂಡುಬರುತ್ತದೆ. ಬಹುವಚನ ರೂಪವು ಇವರಲ್ಲಿ ಸಮುದಾಯದ ಸಾಮಾಜಿಕ ಭಿನ್ನಾಂಶದಲ್ಲಿ ಬಹುವಚನ ಪ್ರತ್ಯಯವು ಸ್ತ್ರೀ-ಪುರುಷ ಲಿಂಗಗಳಿಗೆ 'ನಾಯ' ಎಂದು ನಪುಂಸಕ ಲಿಂಗಗಳಿಗೆ 'ಲಿಂಗ' ಎಂದು ಬಳಕೆಯಾಗುತ್ತದೆ. ಉದಾಹರಣೆಗೆ ಸ್ತ್ರೀ-ಪುರುಷ ಲಿಂಗಗಳಿಗೆ ಸಂಬಂಧಿಸಿದಂತೆ ಅಣ್ಣನಾಯ-ಅಣ್ಣಂದಿರು, ತೆಂಬಿನಾಯ-ತಮ್ಮಂದಿರು, ಅಕ್ಕನಾಯ-ಅಕ್ಕಂದಿರು, ತಪ್ಪಿನಾಯ-ತಂಗಿಯರು ಇತ್ಯಾದಿ ಬಳಕೆಯಾಗುತ್ತದೆ. ನಪುಂಸಕ ಲಿಂಗದಲ್ಲಿ ಸೆಂಡೆಂಗ-ಗಿಡಗಳು, ಮಾಡಂಗ-ದನಗಳು, ಊಡಂಗ-ಮನೆಗಳು ಇತ್ಯಾದಿಯಾಗಿ ಬಳಕೆಯಾಗುತ್ತದೆ. ಮತ್ತು ಲಿಂಗಗಳಿಗೆ ಸಂಬಂಧಿಸಿದಂತೆ ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕ ಲಿಂಗಗಳಿಗೆ ತಮಿಳು ಮತ್ತು ಕನ್ನಡಗಳಂತೆ ಪ್ರತ್ಯೇಕವಾದ ರೂಪಗಳನ್ನು ಅನುಸರಿಸದೆ ಮೂರು ಮಾದರಿಗೂ ಒಂದೇ ರೂಪವನ್ನು ಅನುಸರಿಸುವುದು ಕೊರಚರಲ್ಲಿ ಕಂಡುಬರುತ್ತದೆ. ಉದಾ. ಅವನ್, ಅವಳ್, ಅದು ಎಂಬ ಏಕವಚನಕ್ಕೆ ಮತ್ತು ಅವರು ಎಂಬ ಬಹುವಚನಕ್ಕೆ ಕೊರಚರಲ್ಲಿ ಮೂರು ಮಾದರಿಗೆ ಏಕವಚನ ಪ್ರತ್ಯಯಕ್ಕೆ 'ಅದು' ಎಂದು ಬಹುವಚನ ಪ್ರತ್ಯಯಕ್ಕೆ 'ಅಯ್ಯ' ಎಂದು ಬಳಕೆಯಾಗುವುದು ಕಂಡುಬರುತ್ತದೆ. ಆದರೆ ಉತ್ತಮ ಪುರುಷ ಹಾಗೂ ಮಧ್ಯಮ ಪುರುಷ ಸರ್ವನಾಮಗಳಲ್ಲಿ ಏಕವಚನ ಹಾಗೂ ಬಹುವಚನಗಳಲ್ಲಿ ಬಳಕೆಯಾಗುವ ನಾ-ನಾನು, ನೀ-

ನೀನು, ಎಂಬ ರೂಪಗಳಿಗೆ ಕೊರಚರಲ್ಲಿ ನಾ–ನಾನ್, ನೀ–ನೀನ್, ಎಂಬ ರೂಪಗಳಲ್ಲಿ ಪರಸ್ಪರ ಸಾಮ್ಯತೆಯಿರುವದನ್ನು ಗುರುತಿಸಲಾಗಿದೆ.

ಕೊರಚ ಸಮುದಾಯದ ಜನರ ಸಾಮಾಜಿಕ ಲಕ್ಷಣ, ಸಾಂಸ್ಕೃತಿಕ ಹಿನ್ನೆಲೆ ಹಾಗೂ ಬದುಕಿನ ಪರಿಸರದಲ್ಲಿ ಆಚರಿಸುವ ಚಟುವಟಿಕೆಗಳಲ್ಲಿ ಕೌಟುಂಬಿಕ ಮತ್ತು ಸಾಮಾಜಿಕ ಸನ್ನಿವೇಶಗಳಲ್ಲಿ ಸಮುದಾಯದ ಭಾಷೆಯ ಮುಖಾಂತರ ವ್ಯವಹರಿಸುವುದು ಕಂಡುಬರುತ್ತದೆ. ಹೀಗಾಗಿ ಸಮುದಾಯದ ಭಾಷಾ ರೂಪಗಳನ್ನು ಸಾಮಾಜಿಕ ಹಾಗೂ ಭಾಷಿಕ ಘಟಕಗಳಾದ ಗಾದೆ, ಒಗಟುಗಳು, ಒಡಪುಗಳು, ಸಂಬಂಧವಾಚಕಗಳು, ಸಂಬೋಧನಾರೂಪಗಳು, ವ್ಯಕ್ತಿನಾಮಗಳು ಮತ್ತು ವ್ಯವಹಾರಿಕ ಸಂದರ್ಭದ ಭಾಷಿಕಾಂಶಗಳ ಮೂಲಕ ಕೊರಚ ಜನಾಂಗದ ಸಮಾಜ, ಸಂಸ್ಕೃತಿ ಮತ್ತು ಭಾಷೆಯ ಕುರಿತು ಸಮಾಜೋಭಾಷಿಕ ನೆಲೆಯಲ್ಲಿ ವಿಶ್ಲೇಷಿಸಲಾಗಿದೆ.

ಸಾಮಾನ್ಯವಾಗಿ ಕೊರಚರು ಗಾದೆಗಳನ್ನು ಬಳಸುವಾಗ "ಅದೆಂದೋ ಇಂಗ್ಯಾದೆ ಅನುಗ" (ಅದೇನೋ ಅಂತರಲ್ಲ ಅಂಗೇ) ಅನ್ನುತ ಗಾದೆಗಳನ್ನು ತಮ್ಮ ಬದುಕಿನ ಭಾಗವಾಗಿ ಸಮುದಾಯದಲ್ಲಿ ಬಳಸುತ್ತಾರೆ. ಅವು 'ಊರಡ್ಡಿ ಹಾರೊಟಿ ಏರಿಗಿ ಹೋಗರಪ್ಪ ಈಗೆಲು ದುಬೇನುಗು ಮೊತಿಗುಂಡು ಸತ್ತಿಂಚೋನು' (ಊರೆಲ್ಲ ಹಳ್ಳುಗುಂಟ ಹರಿದು ಕೆರೆಗೆ ಹೋಗುವಾಗ ಸೀರುಣಿಕೆ ಬಿಸಣಿಕೆಗೆ ಸತ್ತಿದ್ದರಂತೆ), 'ತಾನು ತಿಂಗ್ರಿದೆ ತೌಡು ಜತಿಗಿ ದುಂಡ್ರು ಮಾಡಗ ಬೇರೆ'(ತಾನು ತನ್ನುವುದೆ ತೌಡು ಜೊತೆಗೆ ದನಗಳು ಬೇರೆ), 'ಕೇಟ್‌ಗುಂಡು ತಿಂಡ್ರಿಗೂ ಪೆಸ್ತುಗುಂಡು ತಿನು' (ಕೇಳಿ ತಿಂದ್ರೂ ಹಸಿದು ತಿನ್ನು), ಇತ್ಯಾದಿಯಾಗಿ ಗಾದೆಗಳನ್ನು ಬಳಸುತ್ತಾರೆ ಹಾಗೆಯೇ ಕೇಲವು ಕನ್ನಡ ಗಾದೆಗಳನ್ನು ರೂಪಾಂತರಿಸಿಕೊಂಡು ಬಳಕೆ ಮಾಡುವುದು ಕಂಡುಬರುತ್ತದೆ. ಹಾಗೂ ಇತರೆ ಸಮುದಾಯದವರು ಗಾದೆಗಳಲ್ಲಿ ಕೊರಚರ ಕುರಿತು 'ಕೊರಚ ಕೂಡಿ ಕೆಟ್ಟ ದೊಂಬಿ ಅಗಲಿ ಕೆಟ್ಟ', 'ಕೊರಚನಿಗೆ ಒಂದೂರಲ್ಲ ಕೊಕ್ರೆಗರ ಒಂದೂರಲ್ಲ', 'ಕೊರಚನಿಗೇಕೆ ಕೋಲು ಕುಕ್ಕೆ ಎಣಿದೊಡ್ಮೇಲೆ' ಇತ್ಯಾದಿಯಾಗಿ ಬಳಸುವುದು ಕಂಡುಬರುವುದನ್ನು ಈ ಕುರಿತು ಅಧ್ಯಯನದಲ್ಲಿ ವಿವರಿಸಲಾಗಿದೆ. ಹಾಗೆಯೇ ಜನಸಾಮಾನ್ಯರ ಕುತೂಹಲ ಮತ್ತು ಬೌದ್ಧಿಕ ಜಾಣ್ಮೆಯನ್ನು ಪರೀಕ್ಷಿಸುವ ಒಗಟುಗಳನ್ನ ಕೊರಚರು ಕನ್ನಡ ಪರಿಸರದಲ್ಲಿ ಬಳಕೆಯಾಗುವ ಒಗಟುಗಳನ್ನ ನೇರವಾಗಿ ಮತ್ತು ಕೆಲವನ್ನು ರೂಪಾಂತರಿಸಿ ಬಳಕೆ ಮಾಡುವುದನ್ನು ನೋಡಬಹುದು. ಉದಾ. 'ಒಂಡೊಳಿಗೆ ನೂರಾಳಗು ಮಿಗಲನಾದು ತಲ್ಲಾರಿಗೆ' (ಒಂದು ಒಳಿಗೆ ನೂರಾಳಿಗೆ ಉಳಿದಿದ್ದು ನಾಳೆಗೆ) = ವಿಭೂತಿ ಹುಂಡೆ, 'ವಸರೇನ ಗೆಣಿಕಾರ ಪಂಡಿ ಪಂಡಿಕ್ಕಿ ವಾರದು' (ಉದ್ದನ ಗೆಣಿಕಾರ ಹಬ್ಬ ಹಬ್ಬಕ್ಕ ಬರ್ತಾನ) = ಅಗರ ಬತ್ತಿ, 'ಕಣ್ಣಗ್ ಪಕ್ಕಲೆ ಕಾಲಗ್ ತೂರ' (ಕಣ್ಣಿಗೆ ಸಮೀಪ ಕಾಲಿಗೆ ದೂರ) = ದೂರದ ಬೆಟ್ಟ. ಹೀಗೆ ರೂಪಾಂತರಿಕೊಂಡು ಬಳಕೆಯಾಗುವ ಒಗಟುಗಳಲ್ಲಿ ಕನ್ನಡ, ತೆಲುಗು, ತಮಿಳು ಪದಗಳು ಕಂಡುಬರುತ್ತವೆ.

ಸಂಬಂಧವಾಚಕಗಳಲ್ಲಿ ಅಮ್ಮ, ಅಕ್ಕ, ಅಣ್ಣ, ಎಂಬ ಪದಗಳು ಕನ್ನಡ, ತೆಲುಗು, ತಮಿಳು ಮತ್ತು ಕೊರಚರ ಭಾಷೆಯಲ್ಲಿ ಒಂದೆ ಮಾದರಿಯಲ್ಲಿ ಬಳಕೆಯಾಗುತ್ತದೆ. ಕೊರಚರಲ್ಲಿ ಅಪ್ಪ

ಎಂಬುವುದಕ್ಕೆ ಅಬ್ಬ, ಆವ, ಅಯ್ಯ ಎಂದು ಕರೆಯುತ್ತಾರೆ. ಇವರಲ್ಲಿ ಅಬ್ಬ, ಆವ, ಅಯ್ಯ, ಗಳು ಸಂಬಂಧವಾಚಕವಾಗಿ, ಸಂಬೋಧನಾ ರೂಪವಾಗಿ ಮಾತ್ರ ಬಳಕೆಯಾತ್ತದೆ ಹೊರತು ಎಲ್ಲಿಯೂ ವಾರ್ಗಿಕವಾಗಿ ಬಳಕೆಯಾಗುವುದಿಲ್ಲ ಆದರೆ ಕನ್ನಡದಲ್ಲಿ ಬಳಕೆಯಾಗುವ ಅಪ್ಪ ಎಂಬ ರೂಪ ಕೊರಚರಲ್ಲಿ ವ್ಯಕ್ತಿನಾಮಗಳ ಜೊತೆ ವಾರ್ಗಿಕವಾಗಿ ಗಂಗ + ಅಪ್ಪ =ಗಂಗಪ್ಪ, ಪುಟ್ಟ + ಅಪ್ಪ = ಪುಟ್ಟಪ್ಪ, ಎಂದು ಬಳಕೆಯಾಗುವುದು ಕಂಡುಬರುತ್ತದೆ. ಹಾಗೆಯೇ ಸಮುದಾಯದಲ್ಲಿ ಅಜ್ಜ, ಅಜ್ಜಿ ಗಳಿಗೆ ಸಂಬಂಧಿಸಿದಂತೆ ಜೇಮ, ಜೇಜಿ, ಎಂದು ಬಳಕೆಯಾಗುತ್ತದೆ, ಈ ರೂಪಗಳಿಗೆ ತೆಲುಗಿನಲ್ಲಿ ತಾತಾ, ಅಮ್ಮಮ್ಮ, ಎಂದು ತಮಿಳಿನಲ್ಲಿ ಪಾಟ, ಪಾಟಿ ಎಂದು ಬಳಕೆಯಾಗುತ್ತದೆ. ಇಲ್ಲಿ ಜೇಜಿ, ಜೇಮ ಎಂಬುವುದು ಕೊರಚರಲ್ಲಿ ವಿಶಿಷ್ಟವಾಗಿ ಬಳಕೆ ಕಂಡುಬರುತ್ತದೆ.

ಕೊರಚರಲ್ಲಿ ಬಳಕೆಯಾಗುವ ತಸ್ಸಿ (ತಂಗಿ).ತೆಂಬಿ(ತಮ್ಮ) ಎಂಬ ರೂಪಗಳಿಗೆ ಸಂಬಂದಿಸಿದಂತೆ 'ತೆಂಬಿ' ಎಂಬುದು ತಮಿಳಿನ 'ತಂಬಿ'ಯಂತೆ ಪದಾದಿಯ 'ಅ' ಕಾರದ ಬದಲಿಗೆ 'ಎ' ಕಾರವನ್ನು ಬಳಸುತ್ತಾರೆ. ಹಾಗೆಯೇ 'ತಸ್ಸಿ' ಎಂಬ ರೂಪಕ್ಕೆ 'ತಂಗಚ್ಚಿ' ಎಂದು ತಮಿಳಿನಲ್ಲಿ ಕರೆಯುತ್ತಾರೆ. ಕೊರಚರು ವಲಸೆ ಬಂದತೆ ತಮಿಳಿನ 'ತಂಗಚ್ಚಿ'ಯ ಮದ್ಯದ ಅನುಸಾರ (ಂ), 'ಗ' ಕಾರ ಲೋಪವಾಗಿ ಸಜಾತಿ ಒತ್ತಕ್ಷರದ 'ಚ' ಕಾರದ ಬದಲಿಗೆ 'ಸ' ಕಾರವು ಆಗಿರುವ ಸಾಧ್ಯತೆಯಿದೆ.

ಕೊರಚರಲ್ಲಿ ದೊಡ್ಡಪ್ಪ ಎಂಬುದಕ್ಕೆ ಬೆರಾವ/ಬೆರಬ್ಬ ಎಂದು ಬಳಕೆಯಾಗುತ್ತದೆ. ಇಲ್ಲಿ ದೊಡ್ಡವ ಎಂಬ ಪದಕ್ಕೆ ಕನ್ನಡ ದೊಡ್ಡ ಎಂದು ತೆಲುಗಿನಲ್ಲಿ ಪೆದ್ದ ಎಂದು ಮತ್ತು ತಮಿಳಿನಲ್ಲಿ ಪೆರು ಎಂಬ ಪದಗಳು ಬಳಕೆಯಾಗಿವೆ. ಈ ಪದಗಳಿಗೆ ಕೊರಚರಲ್ಲಿ ಬೆರು ಎಂಬ ಪದ ಬಳಕೆಯಲ್ಲಿರುವುದು ಗಮನಾರ್ಹವಾದುದು ಇಲ್ಲಿ ಬಹುಮುಖ್ಯವಾಗಿ ಗಮನಿಸಬೇಕಾದುದು. ಅಂದರೆ ತೆಲುಗು ,ತಮಿಳಿನ ಪದಾದಿ ಪರಿಸರದ 'ಪ' ಕಾರದ ಬದಲಿಗೆ 'ಬ' ಕಾರ ಬಳಕೆಯಾಗಿರುವುದು ಕಂಡುಬರುತ್ತದೆ.

ಕೊರಚರಲ್ಲಿ ಚಿಕ್ಕಪ್ಪನಿಗೆ ನಾಯನ್ನ ಎಂದು ಬಳಕೆ ಮಾಡುತ್ತಾರೆ. ಈ ಪದಕ್ಕೆ ಸಂಬದಿಸಿದಂತೆ ತೆಲುಗಿನ ಚಿನ್ನಯ್ಯ ಚಿನ್ನಾಯನ ಎಂಬುದರ ಪ್ರಭಾವ ಆಗಿರುವ ಸಾಧ್ಯತೆಗಳು ಕಂಡುಬರುತ್ತದೆ. ಆದರೆ ಚಿಕ್ಕಮ್ಮನಿಗೆ 'ಸೋಡಮ' ಎಂಬ ರೂಪವನ್ನು ಬಳಸುತ್ತಾರೆ. ಈ 'ಸೋಡಮ' ಎಂಬ ರೂಪವು ತೆಲುಗು, ತಮಿಳು, ಕನ್ನಡ ಭಾಷಿಕ ರೂಪಗಳಲ್ಲಿ ಕಂಡುಬರದೆ ಕೊರಚರಲ್ಲಿ ಮಾತ್ರ ಕಂಡುಬರುತ್ತದೆ. ಹಾಗೆಯೇ ಇವರಲ್ಲಿ ಚಿಕ್ಕಪ್ಪ, ಚಿಕ್ಕಮ್ಮಗೆ ಸಂಬದಿಸಿದಂತೆ ಸಿನ್ನಯ್ಯ ಮತ್ತು ಸಿನ್ನಮ್ಮ ಎಂಬ ರೂಪಗಳು ಬಳಕೆಯಲ್ಲಿರುವುದನ್ನು ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

ಮೈದುನ ಎಂಬುದಕ್ಕೆ ಮೆಚ್ಚುನು ಎಂದು ನಾದಿನಿ ಎಂಬುದಕ್ಕೆ ಮೆಚ್ಚಿನ್ಸಿ ಎಂಬುದು ಸಂಬಂದಸೂಚಕವಾಗಿ ಬಳಕೆಯಾಗುತ್ತದೆ. ಆದರೆ ಬೇರೆಯವರಿಗೆ ಪರಿಚಯಿಸುವಾಗ ಮೆಚ್ಚುನು ಮೆಚ್ಚುನ್ಸಿ ಎಂದು ಸಂಬೋಧಿಸುತ್ತಾರೆ. ಈ ರೀತಿಯಾಗಿ ಕನ್ನಡ, ತಮಿಳು, ತೆಲುಗಿನಲ್ಲಿ ಕಂಡುಬರದೆ ಕೊರಚರಲ್ಲಿ ಮಾತ್ರ ಕಂಡುಬರುತ್ತದೆ. ಸಂಬೋದನವಾಗಿ ಕೊರಚರಲ್ಲಿ ಮೈದುನನಿಗೆ 'ಅಬ್ಬ'

ಎಂದು ನಾದಿನಿಗೆ 'ತಸ್ಸಿ' ಎಂದು ಬಳಕೆ ಮಾಡುತ್ತಾರೆ. ಕೊರಚರಲ್ಲಿ ಮೈದುನ ಮತ್ತು ನಾದಿನಿಯರನ್ನು ಹೆಸರಿಡಿದು ಕರೆಯದೆ ಅಬ್ಬ, ತಸಿ, ಎಂದು ಬಳಕೆಮಾಡುವುದು ಕೊರಚರಲ್ಲಿ ವಿಶೇಷವಾಗಿ ಕಂಡುಬರುತ್ತದೆ.

ಕೊರಚರ ಕೌಟುಂಬಿಕ ಪರಿಸರದಲ್ಲಿ ಅತ್ತಿಗೆಗೆ ತಾಯಿಯಷ್ಟೆ ಸ್ಥಾನಮಾನ ಇದೆ. ಇವರಲ್ಲಿ ಅತ್ತಿಗೆಯನ್ನು ಹೆಸರಿಡಿದು ಕರೆಯುವ ಪದ್ಧತಿ ಇಲ್ಲ. ಇವರು ನಂಗ (ಅತ್ತಿಗೆ) ಎಂದು ಕರೆಯುತ್ತಾರೆ. ಬೇರೆಯವರಿಗೆ ಪರಿಚಯಿಸುವಾಗಲೂ ಅಥವಾ ಸಂಬೋಧಿಸುವಾಗಲು 'ನಂಗ' ಎಂದೇ ಬಳಕೆ ಮಾಡುವುದು ಕಂಡುಬರುತ್ತದೆ. ನಂಗ ಎಂಬ ರೂಪವು ಕೊರಚರಲ್ಲಿ ಮಾತ್ರ ಕಂಡುಬರುತ್ತದೆ.

ಆಧುನಿಕತೆ ಮತ್ತು ಶೈಕ್ಷಣಿಕ ಪ್ರಭಾವದಿಂದಾಗಿ ಬಂಧುಸೂಚಕಗಳ ಮೇಲೆ ಇಂಗ್ಲಿಷಿನ (ಮಮ್ಮಿ, ಡ್ಯಾಡಿ, ಅಂಕಲ್, ಆಂಟಿ, ಬ್ರದರ್, ಸಿಸ್ಟರ್, ಇತ್ಯಾದಿ) ಬಂಧುಸೂಚಕ ಪದಗಳು ಪ್ರಭಾವ ಬೀರಿವೆ. ಇದು ಸಮಾಜದ ಎಲ್ಲ ಸಮುದಾಯಗಳು ಮೇಲು ಪ್ರಭಾವ ಬೀರಿದೆ. ಇದಕ್ಕೆ ಕೊರಚ ಸಮುದಾಯವೂ ಹೊರತಲ್ಲ, ಕಾರಣ ಇತ್ತೀಚಿನ ತಲೆಮಾರುಗಳಲ್ಲಿ ಪ್ರತಿಷ್ಠತೆಯ ಮತ್ತು ಸಾಮಾಜಿಕ ಮೇಲಿರಿಮೆಯಿಂದ ಉಚ್ಚಾರಣೆ ಮತ್ತು ಬಳಕೆ ಎರಡು ಸನ್ನಿವೇಶಗಳಲ್ಲಿಯೂ ಇಂಗ್ಲಿಷಿನ ಬಂಧುಸೂಚಕ ಪದಗಳು ಬಳಕೆಯಾಗುವುದು ಕಂಡುಬರುತ್ತದೆ.

ಕೊರಚ ಸಮುದಾಯದಲ್ಲಿ ಹಿರಿಯರು ಕಿರಿಯರನ್ನು ಸಂಬೋಧಿಸುವಾಗ ಏಕವಚನದಿಂದ ವಾಳ, ಪೋಳಾ, ಪೋಳೇ, ಪೋಯೇ, ಪಾರಳೇ ಎಂದು ಸಂಬೋಧಿಸುತ್ತಾರೆ ಇಲ್ಲಿ ಕನ್ನಡ ಪರಿಸರದಲ್ಲಿ 'ಲೇ' ಬಳಕೆಯಾದಂತೆ ಕೊರಚರಲ್ಲಿ 'ಳೇ' ಎಂದು ಬಳಕೆಯಾಗುವುದು ಕಂಡುಬರುತ್ತದೆ. ಹಾಗೇ ಸಮಾನ ವಯಸ್ಕರಲ್ಲಿಯೂ ಇದೆ ಮಾದರಿಯಲ್ಲಿ ಬಳಕೆಯಾಗುತ್ತದೆ. ಆದರೆ ಕಿರಿಯರು ಹಿರಿಯರನ್ನ ಸಂಬೋಧಿಸುವಾಗ ಗೌರವಸೂಚಕವಾಗಿ ಸಂಬಂಧಸೂಚಕಗಳಾದ ಅಬ್ಬ, ಅಮ್ಮ, ಅಕ್ಕ, ಅಣ್ಣ, ಅತ್ತ, ಮಾಮ, ಮೊದಲಾದ ರೂಪಗಳನ್ನು ಬಳಸಿ ಸಂಬೋಧಿಸುವುದು ಕಾಣಬರುತ್ತದೆ. ಹಾಗೂ ಕೊರಚರ ಸಂಬೋಧನಾ ರೂಪಗಳಲ್ಲಿ ಪರಸ್ಪರ ಗಂಡ ಹೆಂಡತಿಯರು ಸಂಬೋಧಿಸುವಾಗ ಏ, ಎಂದ, ಇದ, ಓಯ್, ಮೊಣಸನೆ, ಮೊಣುಸೆ, ಎಂದು ಏಕವಚನದಲ್ಲಿಯೇ ಬಳಕೆಯಾಗುವುದು ಕಂಡುಬರುತ್ತದೆ.

ಕೊರಚ ಸಮುದಾಯದಲ್ಲಿ ವ್ಯಕ್ತಿನಾಮಗಳು ಸ್ವರೂಪವನ್ನು ಗಮನಿಸುವುದಾದರೆ ಮೊದಲು ಮತ್ತು ಎರಡನೆ ತಲೆಮಾರು ಸ್ತ್ರೀ–ಪುರುಷರ ಹೆಸರುಗಳು ಒಂದೇ ಹೆಸರಿನಿಂದ ವಾರ್ಗಿಕವಾಗಿ ಪುರುಷರಿಗೆ 'ಅಪ್ಪ' ಸ್ತ್ರೀಯರಿಗೆ 'ಅಮ್ಮ' ಮತ್ತು ಅಕ್ಕ ಬಳಕೆಗೊಂಡು ಇರುವಂತಹದ್ದು ಕಂಡುಬರುತ್ತದೆ. ಆದರೆ ಮೂರನೆ ತಲೆಮಾರಿನಲ್ಲಿ ಅದು ಬದಲಾಗಿರುವುದು ಕಂಡುಬರುತ್ತದೆ. ಉದಾಹರಣೆಗೆ

ಮೊದಲ ತಲೆಮಾರು	**ಎರಡನೆ ತಲೆಮಾರು**	**ಮೂರನೆ ತಲೆಮೂರು**
ಕೊರಕಲಪ್ಪ	ಕಪ್ಪತಪ್ಪ	ಕುಬೇರ
ಕೊರಕಲಮ್ಮ	ಕಪ್ಪತಮ್ಮ	ನಾಗರಾಜ
ಕೊಕ್ಕಡೆಪ್ಪ	ದುರುಗಪ್ಪ	ಅನಿತ

ಕೊಕ್ಕಡೆಮ್ಮ	ದುರುಗಮ್ಮ	ಸುನಿತ
ಲಾಲಕ್ಕ	ತಾಯಕ್ಕ	ತಾರ
ಬಾಟಕ್ಕ	ಬಳ್ಳಕ್ಕ	ಸಂಧ್ಯಾ ಇತ್ಯಾದಿ

ಕೊರಚರು ಪ್ರಾದೇಶಿಕವಾಗಿ, ಆಡಳಿತಾತ್ಮಕವಾಗಿ ಕನ್ನಡ ನೆಲದಲ್ಲಿ ನೆಲೆಯೂರಿದ್ದರೂ ಕೂಡ ಕೌಟುಂಬಿಕ ವಲಯದಲ್ಲಿ ಕೊರಚ ಭಾಷೆಯನ್ನು ಸಂಗೋಪನೆ ಮಾಡುವುದು ಈ ಅಧ್ಯಯನದಿಂದ ತಿಳಿದುಬರುತ್ತದೆ. ಮತ್ತು ಕ್ಷೇತ್ರಕಾರ್ಯ ಸಂದರ್ಭದಲ್ಲಿ ತಿಳಿದುಬಂದಂತೆ ಹೊಸ ತಲೆಮಾರಿನವರು ಆಡಳಿತಾತ್ಮಕ ನಿರ್ಧಾರಗಳಿಂದ, ರಾಜಕೀಯ, ಶೈಕ್ಷಣಿಕ, ಆರ್ಥಿಕ, ಸಾಮಾಜಿಕ ಒತ್ತಡಗಳಿಂದ ಮೂಲ ಸೌಲಭ್ಯಗಳನ್ನು ಪಡೆಯುವ ಸಲುವಾಗಿ ಕನ್ನಡ ಭಾಷೆಗೆ ಪಲ್ಲಟಗೊಳ್ಳುತ್ತಿರುವುದು ಕಂಡುಬರುತ್ತದೆ. ಈ ನೆಲೆಯಲ್ಲಿ ಕೊರಚರು ಬಳಸುವಾಗ ಆಗುವಂತಹ ನುಡಿಬೆರಕೆ, ನುಡಿಜಿಗಿತಗಳ ಕುರಿತು ವಿಶ್ಲೇಷಿಸಲಾಗಿದೆ. ಮತ್ತು ಕೊರಚರು ಭಾಷೆಯ ಬಗೆಗೆ ಹೊಂದಿದ ಮನೋಭಾವದ ಜೊತೆಗೆ ಕೊರಚರಲ್ಲಿಯ ಆಣೆ, ಪ್ರಮಾಣಗಳ, ಬೈಗುಳಗಳ, ಸಂದರ್ಭಗಳ ಭಾಷಿಕಾಂಶಗಳ ಕುರಿತು ವಿಶ್ಲೇಷಿಸಲಾಗಿದೆ.

ಕೊರಚರ ಭಾಷೆಯಲ್ಲಿ ತಮಿಳು, ತೆಲುಗು, ಕನ್ನಡ ಭಾಷಿಕಾಂಶಗಳ ಮಿಶ್ರಣಗಳಿಂದ ವಾಕ್ಯಗಳು ನಿರ್ಮಾಣ ಆಗುತ್ತದೆ. ಇದು ಸಹಜವೂ ಆಗಿದೆ ಏಕೆಂದರೆ ಕೊರಚ ಭಾಷೆಯೇ ಒಂದು ಮಿಶ್ರ ಭಾಷೆಯಂತಿದೆ. ಇದನ್ನು ನುಡಿಬೆರಕೆ ಎನ್ನಬೇಕೆ ಎನ್ನಬೇಕೆ ಎಂಬ ಸಂದೇಹವೂ ಇದೆ. ಆದರೂ ಈ ಸಂಬಂಧವಾಗಿ ಕೆಲವು ಮಾದರಿಗಳನ್ನ ನೀಡಲಾಗಿದೆ. 'ಗರಗತ್ಕೋರು ಸೇನಾ ಗಲಾಟೆ ಕೀದು', 'ಪಾಪಯ್ಯನುಗು ನೂರ ರೂಪಾಯಿ ಕುಡು' ಇಲ್ಲಿ ಗರಗತ್ಕೋರು ಎಂಬವು ತೆಲುಗು ಪದಗಳು, ಗಲಾಟೆ ಎಂಬುದು ಕನ್ನಡದ್ದು, ಕೀದು ಎಂಬುದು ತಮಿಳಿನ ಪದ ಮತ್ತು ಎರಡನೇ ವಾಕ್ಯದಲ್ಲಿ ನೂರು ರೂಪಾಯಿ ಎಂಬುದು ಕನ್ನಡದ್ದು, ಕುಡು ಎಂಬುದು ತಮಿಳಿನದ್ದು, ಪಾಪಯ್ಯನುಗು ಎಂಬಲ್ಲಿ ನುಗು ಎಂಬುದು ಕೊರಚರ ಮೂಲ ಪ್ರತ್ಯಯವಾಗಿದೆ. ಹೀಗೆ ಕೊರಚರಲ್ಲಿ ನುಡಿಬೆರಕೆಯ ಪ್ರಕ್ರೀಯೆಗಳು ನಡೆಯುತ್ತಾವೆ. ಹಾಗೂ ಇತರೆ ಸಮುದಾಯದವರಂತೆ ಆಧುನಿಕತೆಯ ಪರಿಣಾಮವಾಗಿ ಆಂಗ್ಲ ಭಾಷಾ ವ್ಯಾಮೋಹ ಇವರಲ್ಲಯೂ ಕಂಡುಬರುತ್ತದೆ. ಹಾಗಾಗಿ ಇವರಲ್ಲಿಯೂ ಆಂಗ್ಲ ಭಾಷೆಯ ಪದಗಳು ಇವೆ.ಆದರೆ ಇದು ಕೆಲವು ಸಾಮಾನ್ಯ ಪದಗಳಿಗೆ ಸೀಮಿತವಾಗಿದೆ. ಹಾಗೂ ಶಿಕ್ಷಣ ಪಡೆದವರಲ್ಲಿ ಈ ಬಗೆಯ ಪದಗಳ ಬೆರಕೆ ಕಂಡುಬರುತ್ತದೆ. ವಾಂಗೋ ವಾಂಗೋ ಕೊಂದಗಂಗೊ ಪ್ಲೀಸ್, ನಿಂಗ್ಳಗಾಗೆ ವೆಯ್ಟ್ ಸೇಯಂದೊ, ಟೈಂ ಎತ್ನ, ಕಾಲೇಜ್‌ಗು ವಾರಮಾಟ್ಯಾ ಇತ್ಯಾದಿಯಾಗಿ ಬಳಸುವುದು ಕಂಡುಬರುತ್ತದೆ. ಪ್ರಸ್ತುತ ಸಮಾಜದಲ್ಲಿ ನುಡಿಬೆರಕೆ ಪ್ರಕ್ರಿಯೆಯು ಒಂದು ವರ್ಗಕ್ಕೆ ಸೀಮಿತವಾಗದೆ ಎಲ್ಲಾ ಸಮುದಾಯದವರಲ್ಲಿಯೂ ಕಂಡುಬರುತ್ತದೆ.

ಭಾಷೆಯ ಬೆಳವಣಿಗೆಯಲ್ಲಿ ಸಾಂಸ್ಕೃತಿಕ ಪದಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ. ಭಾಷೆಯ ಪದಗಳ ಅರ್ಥಕ್ಕೂ, ಸಂಸ್ಕೃತಿಗೂ ಬಿಡಿಸಲಾರದ ನಂಟು ಇರುತ್ತದೆ. ಹೀಗಾಗಿ

ಕೊರಚರು ಇತರೆ ಸಮುದಾಯಗಳಿಗೆ ಬೇಕಾದಂತಹ, ಕೃಷಿಗೆ ಸಂಬಂಧಿಸಿದಂತ ಮತ್ತು ಮನೆಗೆ ಸಂಬಂಧಿಸಿದ ಉಪಕರಣಗಳನ್ನು ತಯಾರಿಸಿಕೊಡುವಲ್ಲಿ ತೊಡಗಿದರು. ಹೀಗೆ ಉಪಕರಣ ವಸ್ತುಗಳನ್ನು ತಯಾರು ಮಾಡಲು ಮುಖ್ಯವಾಗಿ ಪ್ರತಿಭೆ ಪರಿಶ್ರಮ ಬೇಕು, ಅಂತಹ ಪ್ರತಿಭೆ ಪರಿಶ್ರಮದಿಂದ ಉಪಕರಣ ವಸ್ತುಗಳನ್ನು ತಯಾರಿಸುವಲ್ಲಿ ಮುಂಚೂಣಿಯಲ್ಲಿದ್ದವರು ಆದರೆ ಆಧುನಿಕತೆಯ ಪ್ರಭಾವದಿಂದ ವೃತ್ತಿಗಳು ಸ್ಥಿರತೆಯನ್ನು ಕಾಣಲಾಗುತ್ತಿಲ್ಲ. ಇದರಿಂದ ಕೊರಚರ ವೃತ್ತಿ ಪದಗಳು ಬಳಕೆಯಿಂದ ದೂರವಾಗುತ್ತವೆ. ಹಾಗೂ ಆ ಉಪಕರಣಗಳಿಗೆ ಹೊಸ ಬಗೆಯ ಪದಗಳು ಸೇರ್ಪಡೆಯಾಗುತ್ತವೆ. ಅದೇ ರೀತಿ ಆಚರಣೆಗೆ ಸಂಬಂಧಿಸಿದ ಪದಗಳು ಆಧುನಿಕತೆಯ ಪ್ರಭಾವಕ್ಕೆ ಒಳಗಾಗಿದ್ದರು ಸಮುದಾಯದ ಮೂಲ ಭಾಷಾ ರೂಪಗಳ ಮೇಲೆ ಆಧುನಿಕತೆಯ ಪ್ರಭಾವ ಆಗಿದ್ದರೂ ಸಹ ಸಮುದಾಯ ತಮ್ಮ ಮೂಲ ಭಾಷಾ ವೈಶಿಷ್ಟ್ಯತೆಯನ್ನು ಉಳಿಸಿಕೊಂಡು ಬಂದಿರುವುದನ್ನು ಕಾಣಬಹುದು.

ಕೊರಚರಲ್ಲಿ ವಿದ್ಯಾವಂತ ಸ್ತ್ರೀ-ಪುರುಷರನ್ನು ಗಮನಿಸಿದಾಗ ಕನ್ನಡಕ್ಕೆ ಹತ್ತಿರವಾಗಿರುಗುವುದು ಕ್ಷೇತ್ರಕಾರ್ಯ ಸಂದರ್ಭದ ಮಾಹಿತಿಯ ಮೂಲಕ ಕಂಡುಕೊಳ್ಳಲಾಗಿದೆ. ಹಾಗೂ ಇವರು ಬಳಸುವ ವ್ಯವಹಾರಿಕ ಕನ್ನಡ ಭಾಷೆಯ ಸ್ವರೂಪವನ್ನು ಮತ್ತು ಧ್ವನಿಯನ್ನು ಗಮನಿಸಿದಾಗ ಆಡುಮಾತಿನ (ಪ್ರಾದೇಶಿಕ ಉಪಭಾಷೆಯ) ಸ್ವರೂಪವನ್ನ ಹೊಂದಿರುವುದು ಕಂಡುಬರುತ್ತದೆ. ಲಿಂಗಾಧಾರಿತ(ಗಂಡು-ಹೆಣ್ಣು)ವಾಗಿ ಭಾಷಾ ಬಳಕೆಯಲ್ಲಿ ವ್ಯತ್ಯಾಸಗಳಿವೆ, ಸ್ತ್ರೀಯರು ಕೌಟುಂಬಿಕ ಪರಿಸರದಲ್ಲಿ ಕೊರಚರ ಭಾಷೆಯನ್ನೆ ಹೆಚ್ಚಾಗಿ ಬಳಸುತ್ತಾರೆ. ಆದರೆ ಪುರುಷರು ಕೊರಚ ಭಾಷೆಯೊಂದಿಗೆ ಪ್ರಾದೇಶಿಕವಾಗಿ ಬಳಕೆಯಾಗುವ ಕನ್ನಡ ಭಾಷೆಯೊಂದಿಗೆ ಬಹುಬೇಗ ಪಲ್ಲಟಗೊಳ್ಳುವುದನ್ನು ಕಂಡುಕೊಳ್ಳಲಾಗಿದೆ. ಹಾಗೆಯೇ ವಯೋಮಾನ ಆಧಾರಿತವಾಗಿ ವಿಭಿನ್ನ ವಯಸ್ಸಿನವರಲ್ಲಿ ಮತ್ತು ಅಕ್ಷರಸ್ಥ ಮತ್ತು ಅನಕ್ಷರಸ್ಥರ ಭಾಷಾ ಬಳಕೆಯಲ್ಲಿ ವ್ಯತ್ಯಾಸಗಳು ಕಂಡುಬರುತ್ತದೆ.

ಕೊರಚ ಸಮುದಾಯದಲ್ಲಿ ಇತ್ತೀಚಿನ ತಲೆಮಾರಿನವರು ಕೊರಚ ಭಾಷೆಯನ್ನು ಕೇವಲ ಅರ್ಥಮಾಡಿಕೊಳ್ಳಬಲ್ಲರು. ಆದರೆ ಕೊರಚ ಭಾಷೆಯನ್ನು ತಮ್ಮ ಕೌಟುಂಬಿಕ ಪರಿಸರದಲ್ಲಿ ಬಳಸಲು ಬರುವುದಿಲ್ಲ. ಹೀಗಾಗಿ ಕೊರಚ ಭಾಷೆಯು ಪ್ರಸ್ತುತ ದಿನಮಾನದಲ್ಲಿ ಅವನತಿಯ ಹಾದಿಯಲ್ಲಿದೆ. ಹಾಗಾಗಿ ಈ ಭಾಷೆಯನ್ನು ಕುರಿತು ಇನ್ನು ಹೆಚ್ಚಿನ ಅಧ್ಯಯನ ಮಾದರಿಗಳಲ್ಲಿ ಅಧ್ಯಯನ ನಡೆಯಬೇಕಿದೆ.

ಒಟ್ಟಾರೆ ಕೊರಚರ ಭಾಷೆಯು ತಮಿಳು, ತೆಲುಗು, ಕನ್ನಡ ಭಾಷಿಕಾಂಶಗಳಿಂದ ಕೂಡಿದ್ದು, ಇದೊಂದು ಸ್ವತಂತ್ರ ಕೊರಚ ಸಮುದಾಯದ ಅಸ್ತಿತ್ವದ ಭಾಷೆಯಾಗಿ ಮತ್ತು ದ್ರಾವಿಡ ಭಾಷಾ ರೂಪವಾಗಿಯೂ ಬಳಕೆಯಾಗುವುದನ್ನು ಈ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ. ಮತ್ತು ಕೊರಚ ಸಮುದಾಯ ಕರ್ನಾಟಕ ಪರಿಸರದಲ್ಲಿ ವಾಸವಾಗಿರುವುದರಿಂದ ಅವರು ಹೆಚ್ಚು ಕನ್ನಡ ಭಾಷೆಗೆ ಪಲ್ಲಟವಾಗಿರುವುದನ್ನು ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ.

ಅನುಬಂಧಗಳು

ಪ್ರಶ್ನಾವಳಿ

೧. ಹೆಸರು:

೨. ವಯಸ್ಸು:

೩. ವೃತ್ತಿ:

೪. ಊರು:

೫. ಜಾತಿ:

೬. ಮನೆ ಮಾತು:

೭. ಶಿಕ್ಷಣ:

೮. ನೀವು ವಲಸಿಗರೇ: ಹೌದಾದರೆ

೧. ಎಲ್ಲಿಂದ ಬಂದಿದ್ದೀರಿ:

೨. ಕಾರಣ ಉದ್ದೇಶ:

೩. ಯಾವಾಗ

೯. ವಲಸೆಯ ಬಗೆ: ೧. ವ್ಯಕ್ತಿಗತ ೨. ಸಮಾಜ

೧೦. ಕೌಟುಂಬಿಕ ವ್ಯವಸ್ಥೆ: ೧. ವಿಭಕ್ತ ಕುಟುಂಬ ೨. ಅವಿಭಕ್ತ ಕುಟುಂಬ

೧೧. ನಿಮ್ಮ ಭಾಷಾ ಸಮುದಾಯದಲ್ಲಿ ಕಂಡುಬರುವ ಸಂಘ ಸಂಸ್ಥೆಗಳು ಯಾವುವು?

೧. ಸಮಾಜಿಕ ೨. ರಾಜಕಿಯ

೩. ಸಾಂಸ್ಕೃತಿಕ ೪. ಧಾರ್ಮಿಕ

೧೨. ನಿಮ್ಮ ಭಾಷಾ ಸಮುದಾಯದಲ್ಲಿರುವ ಇತರೆ ಭಾಷಿಕ ಸಮುದಾಯ ಯಾವುವು?

೧. ಭಾಷಾ ಸಮುದಾಯ ೨. ಧಾರ್ಮಿಕ ಸಮುದಾಯ

೩. ಜಾತಿ/ಬುಡಕಟ್ಟು/ಉಪಜಾತಿ

೧೩. ನಿಮ್ಮ ಮನೆಯಲ್ಲಿ ಬಳಸುವ ಭಾಷೆಗಳು

೧.................................... ೨.. ೩....................................

೧೪. ಮದುವೆ ಭೇಟಿ, ಉಳಿತಾಯ ವೆಚ್ಚ ಇತ್ಯಾದಿ ಕೌಟುಂಬಿಕ ವಿಚಾರಗಳಿಗೆ ಸಂಬಂಧಿಸಿದಂತೆ ಮನೆಯಲ್ಲಿ ಬಳಸುವ ಭಾಷೆ.

ವಕ್ತೃವಿನ ಸಂಬಂಧ	**ನಿರಂತರ**	**ಕೆಲವೊಮ್ಮೆ**
ಅಜ್ಜ–ಅಜ್ಜಿ		
ತಂದೆ–ತಾಯಿ		
ಗಂಡ–ಹೆಂಡತಿ		
ಮಕ್ಕಳು		

೧೫. ಹಬ್ಬ ಸಂಪ್ರದಾಯ, ಆಚರಣೆ, ಚುನಾವಣೆ, ಸಾಮಾಜಿಕ ಸನ್ನಿವೇಶಗಳಿಗೆ ಸಂಬಂಧಿಸಿದಂತೆ ಮನೆಯಲ್ಲಿ ಮಾತನಾಡುವಾಗ ಬಳಸುವ ಭಾಷೆ.

ವಕ್ತೃವಿನ ಸಂಬಂಧ	**ನಿರಂತರ**	**ಕೆಲವೊಮ್ಮೆ**
ಅಜ್ಜ–ಅಜ್ಜಿ :		
ತಂದೆ–ತಾಯಿ :		
ಗಂಡ–ಹೆಂಡತಿ:		
ಮಕ್ಕಳು		

೧೬. ಶೈಕಣಿಕ ವಿಚಾರಗಳಿಗೆ ಸಂಬಂಧಿಸಿದಂತೆ ಶಾಲೆಯ ಪ್ರವೇಶ, ಅಧ್ಯಯನ, ಶಿಕ್ಷಕರು, ಇವುಗಳಿಗೆ ಸಂಬಂಧಿಸಿದಂತೆ ಮನೆಯಲ್ಲಿ ಮಾತನಾಡುವಾಗ ಬಳಸುವ ಭಾಷೆ.

ವಕ್ತೃವಿನ ಸಂಬಂಧ	**ನಿರಂತರ**	**ಕೆಲವೊಮ್ಮೆ**
ಅಜ್ಜ–ಅಜ್ಜಿ:		
ತಂದೆ–ತಾಯಿ:		
ಗಂಡ–ಹೆಂಡತಿ:		
ಮಕ್ಕಳು		

೧೭. ಮನೆಯಲ್ಲಿ ಮಕ್ಕಳಿಗೆ ಕಥೆಯನ್ನು ಹೇಳುವಾಗ ಬಳಸುವ ಭಾಷೆ ಯಾವುದು?

೧. ನೀವು ಕಥೆ ಹೇಳುವಾಗ

೨. ಅಜ್ಜ–ಅಜ್ಜಿ ಕಥೆ ಹೇಳುವಾಗ

೩. ತಾಯಿ ಕಥೆ ಹೇಳುವಾಗ

೧೮ ಬೇರೆ ಭಾಷೆಯನ್ನಾಡುವ ಜನರು ನಿಮ್ಮ ಮನೆಗೆ ಭೇಟಿ ನೀಡಿದಾಗ ನೀವು ಅವರೊಂದಿಗೆ ಮಾತನಾಡುಲು ಬಳಸುವ ಭಾಷೆ.

೧. ನಿಮ್ಮ ಭಾಷೆಯಲ್ಲಿ ಮಾತನಾಡುತ್ತೀರಾ?

೨. ಅವರ ಭಾಷೆಯಲ್ಲಿ ಮಾತನಾಡುತ್ತೀರಾ?

೧೯. ಇತರೆ ಭಾಷಿಕರೊಂದಿಗೆ ಮಾತನಾಡುವಾಗ ಯಾವ ಭಾಷೆಯಲ್ಲಿ ಮಾತನಾಡುವಿರಿ.

೧. ಅವರ ಭಾಷೆಯಲ್ಲಿ

೨. ನಿಮ್ಮ ಭಾಷೆಯಲ್ಲಿ

೩. ಎರಡರಲ್ಲೂ

೨೦. ನಿಮ್ಮ ಬಾಲ್ಯ ಸ್ನೇಹಿತರೋಂದಿಗೆ ಬಳಸುವ ಭಾಷೆ.

೧. ಇತರ ಸ್ನೇಹಿತರು

೨. ಬಾಲ್ಯ ಸ್ನೇಹಿತರು

೨೧. ನಿಮ್ಮ ಮಕ್ಕಳು ಅವರ ಬಾಲ್ಯ ಸ್ನೇಹಿತರೊಂದಿಗೆ ಮಾತನಾಡುವಾಗ ಬಳಸುವ ಭಾಷೆ ಯಾವುದು?

೧. ಇತರೆ ಭಾಷೆಯವರೊಂದಿಗೆ

೨. ಸಮುದಾಯ ಭಾಷೆಯವರೊಂದಿಗೆ.

೨೨. ಬೇರೆ ಭಾಷೆಯನ್ನು ಎಂತಹ ಸಂದರ್ಭದಲ್ಲಿ ಬಳಸುತ್ತೀರಿ?

೧. ವ್ಯಾಪಾರ ಸಂದರ್ಭದಲ್ಲಿ

೨. ಕೆಲಸದವರ ಜೊತೆ

೩. ಕತೆ ಸಿನಿಮಾ ಹೇಳುವಾಗ

೪. ಬೇರೆ ಭಾಷೆ ಗೊತ್ತು ಎಂದು ತೋರಿಸಲು

೫. ನಿಮ್ಮ ಭಾಷೆಯಲ್ಲಿ ಪದಗಳು ಸಿಗದೆ ಹೋದಾಗ

೨೩. ಇತರೆ ಭಾಷೆಯ ಜನರೊಂದಿಗೆ ಮಾತನಾಡುವಾಗ ಕನ್ನಡವನ್ನು ಬಳಸುವಿರಾ?

೨೪.ಕನ್ನಡ ಭಾಷೆಯನ್ನು ಹೇಗೆ ಕಲಿತಿರಿ?

೧. ಮನೆಯಲ್ಲಿ

೨. ಕೆಲಸ ಮಾಡುವಲ್ಲಿ

೩. ಅಕ್ಕ ಪಕ್ಕದವರಿಂದ

೪. ಶಾಲೆಯಲ್ಲಿ

೨೫. ಕನ್ನಡ ಭಾಷೆಯ ಬಗೆಗೆ ನಿಮ್ಮ ಅಭಿಪ್ರಾಯ

೧. ಕಲಿಯಲು ಇಷ್ಟ

೨. ಸುಲಭವಾಗಿ ಅರ್ಥಮಾಡಿಕೊಳ್ಳಬಹುದು

೩. ಕಲಿಯಲು ಕಷ್ಟ

೨೬. ಕನ್ನಡ ಭಾಷೆಯನ್ನು ಸಮುದಾಯದಲ್ಲಿ ಹೆಚ್ಚಾಗಿ ಬಳಸುವುದು ಯಾರು?

೧. ಹಿರಿಯರು

೨. ಮಧ್ಯ ವಯಸ್ಸಿನವರು

೩. ಕಿರಿಯರು

೨೭. ನಿಮ್ಮ ಸಮುದಾಯ ಭಾಷೆಯನ್ನು ನಿಮ್ಮಲ್ಲಿ ಹೆಚ್ಚಾಗಿ ಬಳಸುವವರು?

೧. ಹಿರಿಯರು

೨. ಮಧ್ಯ ವಯಸ್ಸಿನವರು

೩. ಕಿರಿಯರು

೨೮. ನೀವು ನಿಮ್ಮ ಭಾಷೆಯನ್ನು ಅಥವಾ ಮಾತನಾಡುವುದನ್ನು ಇತರರು ನಿಮ್ಮ ಪ್ರದೇಶವನ್ನು ಗುರುತಿಸುತ್ತಾರೆಯೇ?

೨೯. ನೀವು ಮಾತನಾಡುವಾಗ ಇತರರು ನಿಮ್ಮ ಜಾತಿಯನ್ನು ಗುರುತಿಸುತ್ತಾರೆಯೇ?

೩೦. ಆಚರಿಸುವ ಹಬ್ಬಗಳು ಯಾವುವು?

೩೧. ನಿಮ್ಮಲ್ಲಿರುವ ವಿಧಿ-ನಿಷೇದಗಳು ಯಾವುವು?

೩೨. ನೀವು ಬಳಸುವ ಬೈಗುಳಗಳು

೩೩. ಸಂಬಂಧಗಳ ಹೆಸರು(ಸಂಬಂಧವಾಚಕಗಳನ್ನು ಹೇಳಿ ಕೇಳಬೇಕು)

ಕನ್ನಡ	**ಕೊರಚರ ಭಾಷೆ**
ಅಮ್ಮ,	
ಅಪ್ಪ,	

ಅಜ್ಜ,

ಅಜ್ಜಿ,

ಅಣ್ಣ.

ತಮ್ಮ,

ಅಕ್ಕ,

ತಂಗಿ,

ಅತ್ತಿಗೆ,

ಚಿಕ್ಕಮ್ಮ,

ಚಿಕ್ಕಪ್ಪ,

ದೊಡ್ಡಮ್ಮ,

ದೊಡ್ಡಪ್ಪ.

ಇತ್ಯಾದಿ

೩೪. ಸಮುದಾಯದಲ್ಲಿ ಸಂದರ್ಭಕ್ಕೆ ತಕ್ಕಂತೆ ಬಳಸುವ, ಹೇಳುವ ಗಾದೆ ಮಾತುಗಳು, ಒಡಪುಗಳು, ಒಗಟುಗಳು.

೩೫. ಭಾಷಾ ಬಳಕೆಯ ಸಂದರ್ಭಗಳು

ಸಂದರ್ಭಗಳು	**ಕೊರಚರಭಾಷೆ**	**ಪ್ರಾದೇಶಿಕ ಕನ್ನಡ**
೧. ತಂದೆಯ ಬಳಿ		
೨. ತಾಯಿಯ ಬಳಿ		
೩. ಗಂಡನೊಡನೆ		
೪. ಹೆಂಡತಿಯೊಡನೆ		
೫. ಸ್ನೇಹಿತರ ಬಳಿ		
೬. ಅಪರಿಚಿತರೊಡನೆ		
೭. ಬೈಯುವಾಗ		
೮. ಪೂಜಾರಿಯೊಡನೆ		

೯. ಅಕ್ಕ ಪಕ್ಕದವರೊಡನೆ

೧೦. ಹೊಲ ಗದ್ದೆಗಳಲ್ಲಿ

೧೧. ಆಚರಣೆಗಳಲ್ಲಿ

೧೨. ಸಮುದಾಯಗಳಲ್ಲಿ

೧೩. ಸಮಾರಂಭಗಳಲ್ಲಿ

೧೪. ಇತರೆ ಸಮುದಾಯಗಳೊಂದಿಗೆ

೧೫. ಮಾರುಕಟ್ಟೆಯಲ್ಲಿ

೧೬. ಅಂಗಡಿಯಲ್ಲಿ

೧೭. ಕಛೇರಿಯಲ್ಲಿ

೧೮. ಸಾರ್ವಜನಿಕ ಸಮಾರಂಭಗಳಲ್ಲಿ

ಕಥೆಗಳು

ಅಡವಿ ಪಂಡ್ರಿ ಕಥಾ

ಏಗೋರು ಗದ್ದಿ, ಏಗೂರು ಮಾಗಾಣೆತ್ತೆಂದು ಒಂಡು ಪಂಡ್ರಿ ತಿಂಡ್ರು ಪಾಡು ಸೆಂದಿಂಚು ಅತ್ತೆಂದು ಏದು ಪಾಕುಲ್ಲ ಅದು ಎಂತ ಪಂಡ್ರಿ ಇಕ್ಕೆನ್ನು ಇಂಡು ಏಗೋರು ಜನಂಗ ಸೇರಿಗುಂಡು ಬೈಯಣ್ಣ ಇಂದ್ರಿಗ್ರ್ಯಾಳ್ ಓಟಿಗಾರನ ಪಾತುಟು ವಾ ಇಂಡು ಅಂಪ್ಸು ಬೈಯಣ್ಣ ಅಡಿವಿಗಿ ಪೋಯಿ ಪಂಡ್ರೆತ್ತೆಂದು ದೇವಿ ಪಾತು ಅದು ಬಾರೀ ಬೆರು ಪರಸುರಾಮನಟ ಪಂಡ್ರಿಂಡು ಬೀತ್ತುಗ್ಗಂಡು ಅಬಾಬಾ ಇದು ಎಂತ ಬೆರು ಪಂಡ್ರಿಂಡ ನಿಂಡ್ರುಗುಂಡಿಂಚು. ಅಪ್ಪ ಪಂಡ್ರಿ ಬೈಯಣ್ಣನ ಪಕ್ಕಿಗಿ ವಂದು ಬೈಯಣ್ಣ ಎಂದತ ದೇವಕ್ಕಾರ ನಿನ್ನತೆಂದು ಏಗೋರಾಯ ನನ್ನತ್ತೆಂದು ಪಾತುಟು ವಾ ಇಂಡು ಅಂಪ್ಸ ಇಂಡು ಕೇಟ್ಸು ಅಪ್ಪ ಬೈಯಣ್ಣ ಬೀತ್ತುಗ್ಗಂಡು ಒಡುಮಡ್ಡಿ ಸೆಮಟುರುಕಿಗುಂಡು ಇಲ್ಲ ಇಲ್ಲ ನಾ ನಿನ್ನ ಪಾಕಂಗ ವಾರುಲ್ಲ ಕುಂದೇಲಿ(ಮೊಲ) ಓಟಿಗಿ ವಂದಿಂದೆ ಕುಂದೆಲಿಟ ಹೆಜ್ಜಲ ಪಾಕತ ಇಂದೆ. ನಿನ್ನ ಮಾತ್ರ ಪಾಕಂಗ ವಾರುಲ್ಲವುಡು ಅಪ್ಪ ಪಂಡ್ರಿ ಏ ಬೈಯಣ್ಣ ನೇಸು ನಿಂಗ್ವ ಏಗೋರು ಜನಂಗಡ್ಡಿ ಸೇರಿಕೊಂಡು ನನ್ನ ಓಟಿ ಆಡಬೇಕು ಇಂಡು ವಾಸ್ತಿಗುಂಡಾದು ಸುಳ್ಳಂದು? ಅಯ್ಯಲೇ ನಿನ್ನತ್ತೆಂದು ನನ್ನ ಪಾತುಟು ವಾ ಇಂಡು ಇಟಗು ಅಂಪಿಕೀದು ನೀನು ಸುಳ್ಳು ಸೊಣ್ಣಕ್ಕರ–ಇಂಡಿಂಡ್ಸು ಬೈಯಣ್ಣ ಇಲ್ಲ ನಾನು ನಿನ್ನ ಪಾಕಂಗ ವಾರುಲ್ಲ ಇಂಡಿಗೋ ಒಪ್ಪಮಾಟರ ಪಂಡ್ರಿ ವಾಂಕ್ಯೋ ನಟ ಒಂಡು ಮೆಗರ ಪೆಚ್ಚಿಗುಂಡು ಪೊಯಿ ನಿಂಗಟ್ಟೂರು ಜನಂಗಳಗು ಕಾಟಕ್ಕಿ ಇಂಡು ಸೊಣ್ಣೇ ತನಟು ಒಂಡು ಮೆಗರ ಪಿಚ್ಚು ಇಸ್ರುಸು ಅಪ್ಪ ಬೈಯಣ್ಣ ಆ ಮೆಗರತ್ತೆಂದು ಪೆಚ್ಚಿಗಂಗ ಪೋಸು ಆಗುಲ್ಲ ಅಪ್ಪ ಪಂಡ್ರಿ ನಟ ಒಂಡು ಮೆಗರ ಪೆಚ್ಚಂಗ ಯೋಗ್ಯತೆ ನಿಕೇಟಿಕೀದು

ವಾಂಕ್ಯೋ ಇಂಡು ತನಟು ಕ್ವಾರೀಟಿ ಮಗರೆತ್ತೆಂದು ಮೂಡು ತುಂಡು ಸೆಂದು ಒಂಡು ತುಂಡೆತ್ತೆಂದು ಪೆಚ್ಚಿಗುಂಡು ಪೋ ಸ್ಯಾನ ಇಂಡು ಸೊಣ್ಣಾಸು ಜತಿಗಿ ನಾನು ಮಂಗ್ಯಾರ ಮಧ್ಯಾನು ಏಗೋರು ಗದ್ದೆಂಗಳೆತ್ತೆಂದು ಇನ್ನೊಂಡ್ರಕ್ಕೆ ಮೆಂಜುಟು ನಿಂಗ್ಯೋರು ಅಗಸಿಗೋರು ವಂದು ನಿಂಡ್ರಗಾರೆ ಅಪ್ಪ ಏಗೋರು ನಾಯಂಗ ಏಗೋರು ಜನಂಗೂ ವಂದು ನನ್ನೋಟಿ ಕಾದಾಟತ ಸೇಯಿಂಗೋ ಇಂಡು ಯಲಾಮ (ಸವಾಲ್) ಸೆಂಚು. ಬೈಯಣ್ಣ ಆ ಮೆಗರುಟಿ ತುಂಡು ಎಡ್ತಗುಂಡು ಊರುಗು ವಂಚು ಊರು ಮಿನ್ನಗಳ್ಳಿ ಜನಗಡ್ಡಿ ಬೈಯಣ್ಣ ವಾರದು ಇಂಡು ಪಾತು ನಿಂಡ್ರಗುಂಡಿಂಚು ಅಬಾಬಾ ಎಂದಾಳೇ ಬೈಯಣ್ಣು ಅಡವಿ ಪಂಡ್ರಿಟ ಹೆಜ್ಜ ಪಾತುಟು ವಾರತುಟುಗು ಅಡವಿಪಂಡ್ರಿ ದೇವಿಗುಂಡು ಹೋಯಿ ಅದಟ ಹೆಜ್ಜ ಪಾತುಟು ವಾರತುಟುಗು ಅತ್ತೆತ್ತೆಂದು ಮೌತಿ ಕೊಂಡ್ರಗುಂಡು ಪೆಚ್ಚಿಗುಂಡು ವಂಚು ಇಂಡು ಜನಗಡ್ಡಿ ಆಶ್ಚಾರ್ಯಪಟ್ಟು ಅಪ್ಪ ಬೈಯಣ್ಣ ಊರ ಅಗಸೆಂಚುಗು ವಂದು ಬುಜು ಮೇನಿಂದ ಮೆಗರತ್ತೆಂದು ದೊಪ್ಪಂಡು ಇಸ್ರಸು ಅತ್ತೆತ್ತೆಂದು ಪಾತ್ ಊರ ಜನಗಡ್ಡಿ ಮಿನ್ನಿ ಎನುಗ ಇಂಡು ಬೀತುಗುಂಡು ಅಪ್ಪ ಬೈಯಣ್ಣು ಮಿನ್ನ ಮಂಗ್ಯಾರು ಮದ್ಯಾನ ಪರಸುರಾಮಟ ಪಂಡ್ರಿ ಕಾದಾಟತಗು ವಾರದ ಇಂಡು ಸೊಣ್ಣಾಸು.

ಮಂಗ್ಯಾರ ಮದ್ಯಾನ ಊರು ಮಿನ್ನಿಕ್ರ ಆಗಸೆಂಚ್ಗು ವಂದು ಬಾವಿ ಪಕ್ಲಿ ನಿಂಡ್ರಗುಂಡು ಪಂಡ್ರಿ ನನ್ನ ಜತಿಗಿ ಕಾದಾಟತ್ಗು ವಾರಯ್ಯ ಏದು ವಾರಗೋ ವಾಂಗೋ ಇಂಡು ಕೂಟ್ಸು ಏದು ವಾರುಲ್ಲ ಅಡ್ಡೇರು ಬೀತ್ಗುಂಡು ಊಟ್ ಗೋರು ಕೊಂದ್ಗುಂಡುಟೀಕಿದು ರ್‍ವಸಗೊಂದ್ ಪಂಡ್ರಿ ಏ ಹೇಡೆಂಗಳ್ಯಾ ಇಂಡು ಒಂಡೊಂಡಾಳನ ಪುಡ್ಸುಗುಂಡು ವಂದು ತನುಟು ಕ್ವಾಂಟೆ ತಿವ್ವು ಕೊಂಡ್ರಸು ಪೊಂಬುಳಾಸ್ ತಾಳಿ ಪಿಚ್ಚು ಬೆಟ್ಸು ಇದಡ್ಡಿ ಪಾತ್ಗುಂಡಿಂದ ಬುದ್ಧವಂತು ಬೈಯಣ್ಣ ತನಟುಟೇರಿ ಅಪ್ಪ ಪಂಡ್ರಿ ತನುಟೂಟು ದಾಟಗು ವಂದಪ್ಪ ಮರೀಗಿ ನಿಂಡ್ರಗುಂಡು ಬಂದೂಕುಟಿ ಬೇಟ್ಸು ದೆವ್ವನಂತ ಪರಸುರಾಮಟ ಪಂಡ್ರಿ ಗುಂಡು ಬೂದುದಾಟ್ಗೆ ಪಾತ್ ಏ ಬೈಯಣ್ಣ ನೀನು ಮೊಸುಸೆಂದು ಮರೀಗಿ ನಿಂಡ್ರಗುಂಡು ಬೇಟನೆಲೇ ಮೊಸುತುಟೆ ಕೊಂಡ್ರ ನಿಟ ವಂಶ ನಿರ್ವವಂಶ ಆಗೋಟು ಇಂಡು ಸ್ಯಾಪತ ಕುಡ್ತು ದೊಪ್ಪಿಂಡು ತರ್‍ರಿಗಿ ಬೂದು ಸತ್ತೊತು. ಅಪ್ಪ ಬೈಯಣ್ಣ ಊಟ್ ಮೇನಿಂಡು ದಿಕ್ಕು ವಂದು ಪಾಕದು ಊರುಗೋಕು ಒಂಡಾಳು ಅವಣಿಕೇರಗ, ಪೊಂಬುಳ್ಯಾ ಮತ್ತೆ ಮಕ್ಕ್ಯಂಗ ಏದು ಮಿಗಿಲಿಕ್ಕಿಲ್ಲ ಅಡ್ಡೇರು ಸತ್ತು ಬೂದಿಂಚು ಅದು ಬೈಯಣ್ಣಟ ವಂಶ ಒಂಡೇ ಅಲ್ಲ ಇಡಿ ಊರ್‍ಗು ಊರೇ ಪರಸುರಾಮಟ ಪಂಡ್ರಿಟ ಶಾಪತೋಟಿ ನಿರ್ವವಂಸಾಯಿಂಚು.

ಕಾಡು ಹಂದಿಯ ಕತೆ ಕನ್ನಡ ಅನುವಾದ:

ಏಳೂರು ಗದ್ದೀನ ಏಳೂರಿನ ಮಾಗಾಣೀಸ ಒಂದು ಹಂದಿ ಮೇದು ಹಾಳು ಮಾಡುತಿತ್ತು. ಅದನ್ನು ಯಾರೂ ನೋಡಿರಲಿಲ್ಲ ಅದು ಎಂತ ಹಂದಿ ಇರಬಹುದು ಅಂತಾ ಹೇಳಿ ಏಳೂರು ಜನಾನು ಸೇರಿ ಬೈಯಣ್ಣ ಅನ್ನ ಬ್ಯಾಟಿಗಾರನು ಅದು ಎಂತ ಹಂದಿ ಇರಬಹುದು ನೋಡಿಬಾ. ಅಂತ ಕಳಿಸಿದ್ರು ಬೈಯಣ್ಣ ಕಾಡಿಗೆ ಹೋಗಿ ಹುಡುಕಾಡ್ತಾ ಹಂದಿ ಕಂಡಿತು ನೋಡ್ತಾನೆ ಅದು ಬಾರಿ ದೊಡ್ಡ ಪರಶುರಾಮನ ಹಂದಿ ಅಬಾಬಾಬ ಇದು ಭಾರೀ ದೊಡ್ಡ ಹಂದಿ ಅಂತೇಳಿ

ಹೆದರ್ದ. ಹಂದಿ ಬೈಯಣ್ಣನ ಹತ್ತಿರ ಬಂತು ಯೇ ಬೈಯಣ್ಣ ಏನು ಹುಡುಕುತ್ತ ಇದ್ದಿ ನನ್ನ ನೋಡಿ ಬರಾಕ ನಿನ್ನ ಏಳೂರು ಮಂದಿ ಕಳಿಸ್ಯಾರ ಹೌದೋ ಅಲ್ಲೋ ಅಂತಾ ಕೇಳ್ತು ಬೈಯಣ್ಣ ಹೆದರಿ ಬೆವ್ತು ಇಲ್ಲಾ ನಾನು ನಿನ್ನ ನೋಡಾಕ ಬಂದಿಲ್ಲ ಕುಂದೇಲಿ(ಮೊಲ) ಬ್ಯಾಟಗಿ ಬಂದಿದ್ದೆ ಕುಂದೇಲಿ ಹೆಜ್ಜಿ ಹುಡುಕ್ತಾ ಇದ್ದೀನಿ ನಿನ್ನ ನೋಡಾಕೆ ಬಂದಿಲ್ಲ ಅಂದ ಅವಾಗ ಹಂದಿ ಏ ಬೈಯಣ್ಣ ನಿನ್ನೆ ನೀವು ಏಳೂರು ಮಂದೀನು ಸೇರಿ ನನ್ನ ಬ್ಯಾಟಿ ಆಡಬೇಕು ಅಂತಾ ಮಾತಾಡಿದ್ದು ಸುಳ್ಳೇನು ಅವರೇ ನಿನ್ನ ನನ್ನ ನೋಡಿ ಬರಾಕೆ ಇಲ್ಲಿಗೆ ಕಳಿಸ್ಯಾರೆ ನೀನು ಸುಳ್ಳು ಹೇಳ್ತಿ ಅಂತು. ಬೈಯಣ್ಣ ಇಲ್ಲಾ ನಾನು ನಿನ್ನ ನೋಡಾಕ ಬಂದಿಲ್ಲ ಅಂದ್ರೂನು ಒಪ್ಪಲಾರದ ಹಂದಿ ತಗೋ ಈ ನನ್ನ ಒಂದು ರೋಮ (ಕೂದಲು) ಹೊತ್ಗೊಂಡು ಹೋಗಿ ನಿಮ್ಮೂರು ಮಂದೀಗೆ ತೋರ್ಸು ಅಂತ ಹೇಳಿ ತನ್ನ ಒಂದು ರೋಮ ಕಿತ್ತು ಒಗಿತು.ಬೈಯಣ್ಣ ಆ ರೋಮ ಎತ್ತಿಕೊಳ್ಳಾಕ ಹೋದ ಅಗಲಿಲ್ಲ ನನ್ನ ರೋಮ ಹೊರಾ ಯೋಗ್ಯತಿ ನಿನಗೆಲ್ಲೈತಿ ತಗೋ ಅಂತಾ ಹೇಳಿ ಕಾಡಂದಿ ತನ್ನ ಕ್ವಾರಿಲೇ ಆ ರೋಮನ ಮೂರು ತುಂಡು ಮಾಡಿ ಒಂದು ತುಂಡ್ನ ಹೊತ್ಗಂಡು ಹೋಗು ಸಾಕು ಅಂತ ಹೇಳ್ತು ಜೊತೆಗೆ ನಾನು ಮದ್ಯಾನ್ನ ಏಳೂರು ಗದ್ದಿನೂ ಇನ್ನೊಮ್ಮೆ ಮೇದು ನಿಮ್ಮೂರು ಅಗಸೀ ಬಾಗ್ಲ ಹತ್ರ ಬರುತೀನಿ ಏಳೂರು ನಾಯಿ ಏಳೂರು ಮಂದೀನು ಬಂದು ನನ್ನ ಜೊತೆಗೆ ಕಾಳ್ಗ ಮಾಡ್ರಿ ಅಂತ ನವಾಲೆ ಹಾಕ್ತು. ಬೈಯಣ್ಣ ಆ ರೋಮದ ತುಂಡನ್ನು ಹೊತ್ಗೊಂಡು ಊರಿಗೆ ಬಂದ ಊರ್ಮಂದೆ ಜನ ಬೈಯಣ್ಣ ಬರ್ತಾನೆ ಅಂತಾ ಕಾದು ನಿಂತ್ತಿದ್ರು ಎಲಾ ಇವನ ಬೈಯಣ್ಣ ಕಾಡಂದಿ ಹುಡುಕಿ ನೋಡಿಬಾ ಅಂದಾ ಅದರ ಹೆಜ್ಜೆ ನೋಡಿ ಬರದು ಬಿಟ್ಟು ಅದನ್ನು ಹೋಡಗೊಂಡು ಹೊತಗೊಂಡು ಬಂದ್ನಲ್ಲ ಅಮತಾ ಅಶ್ಚರ್ಯ ಪಟ್ರು ಬೈಯಣ್ಣ ಊರ್ಮಂದಿನ ಅಗಸಿ ಬಾಗಿಲಿಗೆ ಬಂದು ಹೆಗಲ ಮ್ಯಾಲಿಂದ ಒಗ್ದ ಆ ಹಂದಿ ರೋಮ ದೊಪ್ಪಂತ ಬಿತ್ತು ಅದನ್ನ ನೋಡಿ ಊರ್ಮಂದೆಲ್ಲಾ ಮುಂದೆ ಹೆಂಗಪ್ಪ ಅಂತಾ ಹೆದರಿದ್ರು ಬೈಯಣ್ಣ ಮುಂದಿನ ಮಂಗಳವಾರ ಮದ್ಯಾನ್ನ ಪರಸುರಾಮನ ಹಂದಿ ಕಾಳಗಕ್ಕೆ ಬರ್ತದೆ ಅಂತ ಹೇಳ್ದ.

ಮಂಗಳವಾರ ಮದ್ಯಾನ್ನ ಊರ್ಮಂದಿನ ಅಗಸೀ ಬಾಗಿಲತ್ರ ಇದ್ದು ಹೊಕ್ಕ ತುಂಬೋ ಬಾವಿ ಹತ್ರ ಹಂದಿ ಬಂತು ನಿಂತು ನನ್ನ ಜೊತೆಗೆ ಕಾಳಗಾಕ್ಕೆ ಬರೋರು ಯಾರು ಬಂದೀರಿ ಬರ್ರಿ ಅಂತ ಕೂಗ್ತು ಯಾರು ಬರಲಿಲ್ಲ ಎಲ್ಲಾರು ಹೆದರಿ ಮನೀ ಹೊಕ್ಕು ಕುಂತುಬಿಟ್ಟಿದ್ರು ಸಿಟ್ಟಿಗೆದ್ದ ಹಂದಿ ಎಲಾ ಹೇಡಿಗಳೆ ಅಂತೇಳಿ ಮನೀ ಹೊಕ್ಕು ಜನ್ರನ್ನ ಒಬ್ಬಬ್ರುನ್ನಾ ಹಿಡುಕೊಂಡು ಬಂದು ತನ್ನ ಕ್ವಾರಿಲೇ ತಿವ್ಡು ಊರ್ಮಂದೆಕೊಂದಾಕ್ತು ಹೆಂಗಸ್ರ ತಾಳಿಕಿತ್ತು ಒಗಿತು, ಬುದ್ದಿವಂತ ಬೈಯಣ್ಣ ಇದ್ನೆಲ್ಲಾ ನೋಡುನೋಡ್ತಾ ತನ್ನ ಮನೀ ಉಪ್ಪರ್ಗಿ ಏರಿ ಅಡಕ್ಯಂಡಿದ್ದ ಹಂದಿ ತನ್ನ ಮನೀ ಕಡೆಗೆ ಬಂದ ಕೂಡ್ಲೆ ಮರೀಗೆ ನಿಂತು ಹಂದೀಗೆ ಬಂದೂಕಿಲೆ ಗಂಡು ಹಾರಿಸಿದ ದೆವ್ವನಾಂತಪರಸುರಾಮನ ಹಂದಿ ಗುಂಡು ಬಡಿದ ಕೂಡಲೆ ಆ ಕಡೀಗೆ ನೋಡಿ ಏ ಬೈಯಣ್ಣ ನೀನು ನನಗೆ ಮೋಸ ಮಾಡಿ ಮರೀಗೆ ನಿಂತು ಗುಂಡು ಹಾರ್ಸಿದಿ ಗಣಮಗ ಆಗಿದ್ರೆ ನಂಜೊತಿಗೆ ಕಾಳಗಾ ಮಾಡಬೇಕಿತ್ತು ನೀನು ನನ್ನ ಮೋಸದಲ್ಲೇ ನನ್ನ ಕೊಂದಿ ನಿನ್ನ ವಂಶ ನಿರ್ವಂಶವಾಗಲಿ ಅಂತ ಶಾಪ ಕೊಟ್ಟು

ದೊಪ್ಪಂತ ನೆಲಕ್ಕೆ ಬಿದ್ದು ಸತ್ತಿತು. ಬೈಯಣ್ಣ ಉಪ್ಪರಿಗಿಯಿಂದ ಇಳಿದು ಬಂದು ನೋಡ್ತಾನೆ ಊರಾಗೆ ಮನ್ಯಾಗೆ ಒಬ್ರು ಗಂಡಸ್ರು ಹೆಂಗಸ್ರು ಮಕ್ಳು ಉಳಿದಿದ್ದಿಲ್ಲ ಎಲ್ಲಾರೂ ಸತ್ತು ಬಿದ್ದಿದ್ರು ವಂಶ ಒಂದೆ ಅಲ್ಲ ಇಡೀ ಊರಿಗೂರೇ ಪರಸುರಾಮನ ಹಂದಿ ಶಾಪದೆದ್ಲೆ ನಿರ್ವಂಶವಾಗಿತ್ತು.

ಬಾಲ ನಾಗಮ್ಮನಟ ಕಥಾ:

ಅಕ್ಕ ತೆಂಬಿನುಗು ನೀನು ಕಣ್ಣೇಳು ಆಗಬೇಕಿಂಗಿರ ಸಿನುಮುಂಡುಂಟು ತಲಕಾಯಿಗೋರು ಮೂಡು ಸುಳಿಕೀಡು ಅತ್ತೆತ್ತೆಂದು ಕಣ್ಣೇಳು ಸೆಂಧ್ಗಮಾಣ ಇಂಡು ಬುದ್ಧಿವಾತ ಸೋಣ್ಣುನಿಗು ಕೇಕ ಮಾಟದೆ ತೆಂಬಿ ಆತ್ತು ಆರು ಸುಳಿ ಇಂದಿಗೂ ಸರಿ, ಮೂಡುಸುಳಿ ಇಂದಿಗೂ ಸರಿ ನಾ ಅತ್ತೆ ಕಣ್ಣೇಳು ಆಗ್ರದು ಇಂಡು ಅಟತ ಪುಡಿಸಿಕೀದು ಅಪ್ಪ ಅಕ್ಕ ಅದುಟ ಸವಾಸನೇ ಮೊಣಾ ಅತ್ ಕಣ್ಣೇಳು ಆಗುಂಗುದು ನಾನು ನಂಬುಳ್ಳೆತ್ತೆಂದು ಪದ್ಧತಿತೀರಿ ನೀಕು ಕಣ್ಗೇಳತ ಸೆಂದು ತಾರಂಗ ತಯ್ಯಾರಕೀರಿ ಇಂಡು ಪರಿಪರಿಯಾಗಿ ಎಂತನು ತೆಂಬಿನುಗು ಬುದ್ಧಿವಾತ್ತೆಂದು ಸೊಣ್ಣಸು ಅತ್ತಗೊ ತೆಂಬಿ ಅತ್ತತ್ತೆಂದು ಕಣ್ಣೇಳು ಆನ್ ದಿನೇ ನಾನು ಸತ್ತಿಗೂ ಸರಿ ನಾನು ಅತ್ತೇ ಕಣ್ಗೇಳು ಆಗ್ರುದು ಇಂಡು ಅಟತ್ ಪುಡ್ಸುಸು ನಾಕ್ ನೀನಿಕ್ಕಿರುದು ಒಂಡೇ ತೆಂಬಿ ನಟು ವಾತಿಕೇರು ಪೊಂಬುಳ್ಯಾ (ಸಿನುಮಂಡ್ಯ) ಪಾಕಂಗ ಹೋಗ್ರಪ್ಪ ಒರಗು ಅಡ್ಡ ವಂಚು ಅತ್ತೆತ್ತೆಂದು ಹುಟ್ಟಡು ನೀಕು ಅದಟ ಸವಾಸ ಮಾಣ ಇಂಡು ಪರಿಪರಿಯಾಗಿ ಸೊಣ್ಣನಿಗೂ ಕೇಕಮಾಟರಪ್ಪ ಅನಿವಾರ್ಯವಾಗಿ ಅದಕ ಅಕ್ಕ ಒಂಡು ಸೆಟ್ಟು ಎಲಾಕು ಒಕ್ಕುಪೋಡು ಮಡಿಗೋರು ಎಚ್ಚುಗುಂಡು ತೆಂಬಿ ಮೆಚ್ಚಿನ ಸಿನುಮುಂಡನೆತ್ತೆಂದು ಖಾಯಂ ಸೇಯ್ಯಂಗ್ ಹೋಕದು ಅಪ್ಪ ಸೆಲ್ಕಿ ಗುದ್ಲಿ ಎದುರು ವಾರದು ಅಪ್ಪದೊ ವಾತ್ತೆತ್ತೆಂದು ಮೀರಿ ಹೋಕದು ಸೌವ್ರಿಗಿ ಸೌವ್ರಿ ಹೋಗುಟು ನಾನು ಅತ್ತೆತ್ತೆಂದೆ ಕಣ್ಯೇಳು ಆಗ್ರದು ಇಂಡು ತೆಂಬಿ ಅಟುತ್ ಪುಡಿಕ್ಯಾದು. ಸಿನುಮುಂಡ ಖಾಯಂ ಆಸು ಕೊನೆಗೊಂಡನಾಳ್ ಕಣ್ಗೇಳು ಆಕದು ತಾಲಿ ಕಟ್ಟಿನ ರೊತ್ನತಗೋರೆ ತೆಂಬಿ ತಲಕನೆಪ್ಪಿ ವಂದು ಜರು ವಾರದು ಅಪ್ಪ ಮದುಮಗ ಅಕ್ಕನುಗು ಅಕ್ಕ ನಿಟ ತ್ವಡುಮೇನಿ ತಲಕಾಯ ಎಚ್ಚು ಬೂದ್ಗುಂಡು ರೂತ್ನಗೋರೆ ಅಂದ್ರತಗೋರೆ ಸತ್ತೊಕದು ತನುಟು ತ್ವಡ ಮೇನಿ ತೆಂಬಿಟ ಪಾಣು ಹೋನು ಪೀಣಿಗಿ ಮೇನಿ ಅಕ್ಕ ನಿಟ ಆಸ್ತಿ ಸಾವ್ರಿ ಗೋರ್ರಿ ಮಾಡಗ ಅಡ್ಡಿ ಜನಂಗಳಟ ಪಾಲಕದು ನಂಬುಳ್ಳೇ ನೀ ಕಣ್ಣೇಳು ಆಯಂದಿಗೆ ನೀಕೆಂತ್ತುಗ ಈ ಸಾವು ವಾರಂಚು ನಾನು ಸೊಣ್ಣನ ವಾತ್ ನೀನು ಕೇಕುಲ್ಲ ಇಂದ್ದೊಂಡು ತೆಂಬಿ ಸುತ್ತೊಯಿ ನಾನು ದಿಕ್ಕಿಲ್ಲರದು ಆಬೇನೆ ಇಂಡು ಬೋರಾಡಿ ಆಗಾದು ಅಪ್ಪುದು ಕಣ್ಗೇಳು ಆನ ಸಿನುಮುಂಡ ನಟದೆಂದ ಕರ್ಮ ಕಣ್ಗೇಳು ಆನ ಮಣಗು ಕೀಗೂ ಸಿಕ್ಕುಲ್ಲ ವಾಯಿಗೂ ಸಿಕ್ಕುಲ್ಲ ಇಂಡು ಸೊಣ್ಣೆಗುಂಡು ಗೋಳಾಡಿ ಗೋಗರದು ಮಣಗನ ಜತಿಗಿ ತಾನು ಅಟೇ ಪಾಣತ ಹುಟ್ಸು.

ಬಾಲನಾಗಮ್ಮನ ಕತೆ ಕನ್ನಡ ಅನುವಾದ

ತಮ್ಮ ಪದ್ಧತಿಯಂತೆ ಅಕ್ಕ ತನ್ನ ತಮ್ಮನಿಗೆ ಮಗಳನ್ನು ಮದುವೆ ಮಾಡಿಕೊಡಲು ಮುಂದಾಗುತ್ತಾಳೆ.

ಆದರೆ ಆಕೆಯ ತಮ್ಮ ಇದಕ್ಕೆ ಒಪ್ಪದೇ ತಾನು ಈಗಾಗಲೇ ಒಂದು ಹುಡುಗಿಯನ್ನು ಬೇರೆಹಟ್ಟಿಯಲ್ಲಿ ನೋಡಿರುವುದಾಗಿಯೂ ಆಕೆಯನ್ನೇ ಮದುವೆ ಅಗುತ್ತೇನೆಂದು ಹೇಳುತ್ತಾನೆ. ಅಕ್ಕ ನಿನ್ನ ತಮ್ಮನು ಮದುವೆಯಾಗುವ ಹುಡುಗಿಯ ತಲೆಯಲ್ಲಿ ಮೂರು ಸುಳಿ ಇದೆ. ಅಕೆಯನ್ನು ಮದುವೆ ಮಾಡಿಕೊಳ್ಳಬೇಡ ಎಂದೂ ಅಕ್ಕ ಬುದ್ದಿವಾದ ಹೇಳಿದರೂ ಕೇಳದೇ ಆರು ಸುಳಿ ಇದ್ದರೂ ಸರಿ ಮೂರು ಸುಳಿ ಇದ್ದರೂ ಸರಿ ನಾನು ಆಕೆಯನ್ನು ಮದುವೆಯಾಗುತ್ತೇನೆ ಎಂದು ತಮ್ಮ ಹಟ ಹಿಡಿಯುತ್ತಾನೆ. ಆಕೆಯ ಸಹವಾಸನೆ ಬೇಡ ಆಕೆಯನ್ನು ಮದುವೆಯಾದರೆ ನಿನಗೆ ಅವತ್ತೆ ಮರಣ ನೀನು ಆಕೆಯನ್ನು ಮದುವೆಯಾಗಬಾರದು, ನಾನು ನನ್ನ ಮಗಳನ್ನು ಪದ್ಧತಿಯಂತೆ ನಿನಗೆ ಕೊಟ್ಟು ಮದುವೆ ಮಾಡಲು ಸಿದ್ಧಳಿದ್ದೇನೆ ಎಂದು ಅಕ್ಕ ತಮ್ಮನಿಗೆ ಪರಿಪರಿಯಾಗಿ ಬುದ್ಧಿವಾದ ಹೇಳುತ್ತಾಳೆ. ತಮ್ಮ ಆಕೆಯನ್ನು ಮದುವೆಯಾದ ದಿನವೇ ನಾನು ಸತ್ತರೂ ಸರಿ ಆಕೆಯನ್ನೆ ಮದುವೆಯಾಗುವುದು ಎಂದು ಹಠ ಹಿಡಿಯುತ್ತಾನೆ.

ನನಗೆ ನೀನೊಬ್ಬನೇ ತಮ್ಮ. ನನ್ನ ಮಾತು ಕೇಳು ಹೆಣ್ಣು ನೋಡಲು ಹೋಗುವಾಗ ಕಟ್ಟಿಗೆ ಹೊರೆ ಅಡ್ಡ ಬಂದಿದೆ. ಆಕೆಯನ್ನು ಬಿಟ್ಟುಬಿಡು ನಿನಗೆ ಅಕೆ ಸಹವಾಸವೆ ಬೇಡ ಎಂದು ಮತ್ತೆ ಮತ್ತೆ ಹೇಳಿ ತಮ್ಮ ಕೇಳದಿದ್ದಾಗ ಅನಿವಾರ್ಯವಾಗಿ ಅಕ್ಕ ಓಮದು ಚಟ್ಟಿ ಎಲೆ ಅಡಿಕೆಯನ್ನು ಉಡಿಯಲ್ಲಿಂಡುಕೊಂಡು ತಮ್ಮ ಮೆಚ್ಚಿದ ಹುಡುಗಿಯನ್ನು ಖಾಯಂ ಮಾಡಲು ಹೊರಡುತ್ತಾಳೆ. ಸಾವಿರಕ್ಕೆ ಸಾವಿರ ಹೋಗಲಿ ನಾನು ಆಕೆಯನ್ನು ಮದುವೆಯಾಗುತ್ತೇನೆ ಎಂದು ತಮ್ಮ ಹಟ ಹಿಡಿಯುತ್ತಾನೆ. ಹೆಣ್ಣು ಖಾಯಂ ಆಗಿ ಕೊನೆಗೊಂದು ದಿನ ಮದುವೆಯಾಗುತ್ತದೆ. ತಾಳಿ ಕಟ್ಟಿದ ಸ್ವಲ್ಪ ಹೊತ್ತಿಗೆ ತಮ್ಮನಿಗೆ ತಲೆನೋವು ಹಾಗಿ ಜ್ವರ ಬರುತ್ತದೆ. ಆಗ ಆತ ಅಕ್ಕಾ ನಿನ್ನ ತೊಡೆಯ ಮೇಲೆ ತಲೆಯಿಟ್ಟು ಮಲುಗುತ್ತಾನೆ ಎಂದು ಹೇಳಿ ಅಕ್ಕನ ತೊಡೆಯ ಮೇಲೆ ತಲೆ ಇಟ್ಟು ಮಲಗಿ ಸ್ವಲ್ಪ ಹೊತ್ತಿನಲ್ಲಿಯೇ ಹಂದರದಲ್ಲಿಯೇ ಸಾಯುತ್ತಾನೆ. ತನ್ನ ತೊಡೆಯ ಮೇಲೆ ಮಲಗಿ ಪ್ರಾಣ ಬಿಟ್ಟ ತನ್ನ ತಮ್ಮನ ಶವದ ಮುಂದೆ ಅಕ್ಕ ನಿನ್ನ ಆಸ್ತಿ ನಿನ್ನ ಸಾವಿರ ಕುರಿ ದನ, ಎಲ್ಲಾ ಮಂದೀ ಪಾಲಾಗುತ್ತದೆ. ನನ್ನ ಮಗಳನ್ನೆ ಮದುವೆಯಾಗಿದ್ದರೆ ನಿನಗೆಲ್ಲಿ ಸಾವು ಬರುತ್ತಿತ್ತು. ನಾನು ಹೇಳಿದ ಮಾತು ನೀನು ಕೇಳಲಿಲ್ಲ ಇದ್ದೊಬ್ಬ ತಮ್ಮನು ಸತ್ತೋಗಿ ಈಗ ನಾನು ದಿಕ್ಕಿಲ್ಲದವಳಾದೆ. ಎಂದು ಹೇಳಿ ಬೋರಾಡಿ ಅಳುತ್ತಾಳೆ. ನನ್ನದೇನು ಕರ್ಮ ಇದು ಮದುವೆಯಾದ ಗಂಡ ನನ್ನ ಕೈಗೂ ಸಿಗಲಿಲ್ಲ ಬಾಯಿಗೂ ಸಿಗಲಿಲ್ಲ ಅಂತಾ ಹೇಳಿ ಮದುಮಗಳು ಗೋಳಾಡಿ ಗಂಡನ ಜೊತೆಗೆ ಆಕೆಯೂ ಅಲ್ಲಿಯೇ ಪ್ರಾಣ ಬಿಡುತ್ತಾಳೆ.

ಕೊರಚರಲ್ಲಿಯ ವಿವಾಹ ಪದ್ದತಿಗಳಲ್ಲಿ ಅಕ್ಕ ತನ್ನ ತಮ್ಮನಿಗೆ ಮಗಳನ್ನು ಮದುವೆ ಮಾಡಿಕೊಡಲು ಪದ್ದತಿಯಿದೆ. ಆದರೆ ತಮ್ಮ ಇದಕ್ಕೆ ಒಪ್ಪಿದೆ ತಾನು ಈಗಾಗಲೇ ಬೇರೊಂದು ಹುಡುಗಿಯನ್ನು ಬೇರೆ ಹಟ್ಟಿಯಲ್ಲಿ ನೋಡಿರುವುದಾಗಿಯೂ ಆಕೆಯನ್ನೆ ಮದುವೆಯಾಗುವುದಾಗಿ ಹೇಳುವ ಕಥೆ. ಬಾಲನಾಗಮ್ಮನ ಕಥೆ ಎಂಬ ಹೆಸರು ಏಕೆ ಬಂದಿದೆ ಎಂಬುದರ ಬಗ್ಗೆ ಮಾಹಿತಿ ಇಲ್ಲ. ಈ ಕಥೆಯನ್ನು ಕೊರಚರಲ್ಲಿ ಹಾಡುತ್ತಿದ್ದರಂತೆ ಇದರ ಹಾಡಿನ ಸಂಗ್ರಹ ಸಾಧ್ಯವಾಗದೇ

ಇದ್ದು (ಹಾಡಲು ಬರುತ್ತಿದ್ದವರು ಸಾವನ್ನಪ್ಪಿದ್ದಾರೆ.) ಹಾಡಿನ ರೂಪವನ್ನು ಕಥೆಯ ಮೂಲಕ ಕೇಳಿಸಲು ಪ್ರಯತ್ನಿಸಲಾಗಿದೆ. ಕಥೆಯ ಕೊರಚರ ಕುಟುಂಬ ಪದ್ಧತಿಯ ಸೋದರಮಾವನ ಮದುವೆಯಾಗುವ ಹಕ್ಕನ್ನು ಕುರಿತು ತಿಳಿಸುವುದಲ್ಲದೇ ತನ್ನ ಹಕ್ಕನ್ನು ಬಿಟ್ಟು ಆತ ಬೇರೆ ಬೇರೆ ಕಡೆ ಮದುವೆ ಯಾವುದು ಸರಿಯಿಲ್ಲ ಎಂಬ ರೀತಿಯನ್ನು ತಿಳಿಸುತ್ತದೆ. ಹಾಗೆಯೇ ಮೂರು ಸುಳಿ ಇರುವಾಕೆಯನ್ನು ಮದುವೆಯಾಗಬಾರದೆಂದು ನಂಬಿಕೆಯು ಕೊರಚರಲ್ಲಿ ಗಟ್ಟಿಯಾಗಿರುವುದು ಕಂಡುಬರುತ್ತದೆ.

ಏಗು ಪದರ ತೇನಿ ಕಥಾ

ಒಂಡು ಊರುಗೋಕು ಮೂಡಾಳು ಅಣ್ಣ ತೆಂಬಿನಾಯ ಇಕ್ಯಾದು ಕ್ವನಿ ತೆಂಬಿ ಪುದಿಗಿ ಕಣ್ಣೇಳತ ಸೇರಿದ್ಗುಂಡಿಕ್ಯಾದು ಬೇರಣ್ಣ ಮೊಂಡು ಬಾರೀ ಆಸಿಬುರಿಕೆ ಆಯಿಕ್ಯಾದು ಮಣಗುನುಗು ನಿಂಗ ತೆಂಬಿನೆತ್ತೆಂದು ಕೊಂಡ್ರುಟಿಗೆ ಅದಟ ಆಸ್ತಿಯೂ ನಂಬ್ರಗೆ ವಾರದು ಇಂಡು ಸೊಣ್ಣದು ಅಪ್ಪ ಬೇರಣ್ಣನುಗು ಅದು ಸರಿ ಕಾಂಬಿಕ್ಯಾದು ರೊಂಡಾಳು ಸೇರಿ ಒಂಡೂಪಾಯತ್ ಸೆಯ್ಯದು ಏನುಗಿಂಡಿಗೆ ಏಗೋರು ಸಾವ್ರಕಾರ ಮಗಟ ಕಣ್ಗೇಳತಗು ತೇನಿ ಬೇಕು ಅದು ಏಗು ಪದರ ಇಕ್ಕಿರುದು ಅತ್ತೆತ್ತೆಂದು ವಡುಸ್ಗುಂಡು ವಾ ಇಂಡು ತೆಂಬಿನುಗು ಸೊಣ್ಗದು ಅಪ್ಪ ತೆಂಬಿ ಮೊಂಡು ನಂಗ್ಪ ಕಣ್ಯೇಳು ಆಯಿ ಇನ್ ಮಾಡ್ನಾಳು ಸತಿಗಿ ಆಗುಲ್ಲ ಇನ್ನು ಕಂಕಣತ ಅಮುಕುಲ್ಲ ಪಚ್ಚಿ ಒಡಮು ಆರುಲ್ಲ ಅಪ್ಪದೇ ನಂಗ ಮಣಗನಗು ತೇನಿ ಹೋಡಿಕೆಂಗ ಪೋ ಇಂಡಿಗೇನುಗ? ಅತ್ತೆತ್ತೆಂದು ಅಂಪ ಮಾಣಂಗ ಇಂಡು ಕೇಕದು. ಆನಿಗೂ ಕೇಕದೆ ತೆಂಬಿನೆತ್ತೆಂದು ತೇನಿ ಎಡ್ತಗುಂಡುವಾರಂಗ ಅಂಪದು ಅಪ್ಪ ತೆಂಬಿ.

ಏಗು ಗುಟ್ಟ, ಏಗು ಸಮುದ್ರತ, ಏಗು ಸಿಗಿಪಳಿ ದಾಟಿ ದೇವುನಿಗೊ ಏಟಿ ತೇನಿ ಕಾಂಗುಲ್ಲ, ಇಂಡು ತೆಂಬಿ ದೇವಂಗೋನದು ಊಟಗು ಪೆರುಕ್‌ವಾರದು ಅಪ್ಪ ಊಟ್ಲಿಂದ ರೊಂಡಾಳ್ ಅಣ್ಣನಾಯ, ನಂಗನಾಯ ಸಾವುಕಾರಟ ಮಗಟ ಕಣ್ಗೇಳು ಪಕ್ಲಿಗಿ ವಂಚು ದಬಾನ ಹೋಯಿ ತೇನಿ ಎಡ್ತಗುಂಡು ವಾರಬೇಕು ನಿನ್ನ ಪೆರುಗೋಟಿ ನಂಗ್ಳು ವಾರಕೊ ದೇವಂಗ ಹೋಂಬಾ ಇಂಡು ಅತ್ತೆತ್ತೆಂದು (ತೆಂಬಿನೆತ್ತೆಂದು) ತಿರಿಗೆ ತೇನಿ ದೇವಂಗ ಅಸುಗುಂಡು ಹೋಕದು ಅಪ್ಪದು ಸತಿಗಿತೆಂಬಿಮೊಂಡು ತನ್ನ ಮಣಗನೆತ್ತೆಂದು ಹೋಗ್ರದು ಮೊಣ ಇಂಡು ಕೇಟಗದು ತೆಂಬಿ ಕೇಕುದಿಲ್ಲ ಅಣ್ಣ ನಂಗ ನಾಯ್ಲು ಜತಿಗೆ ತಿರಿಗೆ ಏಗು ಸಮುದ್ರತ ಏಗು ಗುಟ್ಯಾದಾಟಿ ಸಿಗಿಪಳಿ ಇಕ್ಕೀರ ದಾಟುಗು ಹೋಕ್ಕುದು ಸೀಗಿ ಪಳಿತಗೋರು ಭಾರೀ ಮನಿ ತೇನಿ ಕಾಂಗದು ಅಪ್ಪ ಆ ಸಿಗಿ ಪಳಿ ಏರಂಗ ಒಂಡು ನೂರು ಪೆಲ್ಲು ಏಣೆತ್ತೆಂದು ಸೆಂದು ವೋಟು ತೆಂಬಿನಿಗು ನೀನು ಏಣಿ ಏರಿ ತೇನಿನೆತ್ತೆಂದು ಹೋಡುಸುಡು ಇಂಡು ಸೊಣ್ಣಿ ಏಣಿತ್ತೆಂದು ಏರಿಪಿಕ್ಯಾದು ಅಪ್ಪ ತೆಂಬಿ ಅಣ್ಣ ನಂಗನಾಸ ವಾತ್ಯಕೇಟು ನೂರು ಪೆಲ್ಲು ಏಣಿ ಏರಿ ಸಿಗಿ ಪಳಿಗೋರು ತೇನೆತ್ತೆಂದು ಹೋಡ್ಸುಟು ಬೆರು ನಂಗನಗಿಟ ಕಿಯಿಗಿ ಕುಡುಕಾದು ತೇನಿ ಕಿಯಿಗಿ ವಂದ ತಕ್ಷಣ್ತಗೆ ಬೆರನಂಗ ಏಣೆತ್ತೆಂದು

ಕಾಲುಟಿ ಒಚ್ಚುಡಾದು ಸಿನ್ನ ತೆಂಬಿ (ಮೆಚ್ಚುನು-ಮ್ಯದನ) ಮೇನುಂಡು ಬೂದು ಸತ್ತೋಕದು ಅತ್ತ ಪಾತ್ ಅಣ್ಣನಾಯ-ನಂಗನಾಯ ಕುಸಿಮೇನಿಕ್ಯಾದು ಮೇನುಂಡು ಬೂದು ಸತ್ತೋನತ್ತೆತ್ತೆಂದು ಗದ್ದ-ಕಾಕಗ ತಿಂಗೋಟು ಇಂಡು ಆಟೆ ಉಟ್ಟುಟು ಪೆರುಕು ವಾರದು

ಊರುಗು ವಂದ ಪಟ್ಲೇ ತೆಂಬಿಮೊಂಡು ನಂಗ ಮಣಗು ಏಟಿ? ವಾರಿಲ್ಲೇ ಇಂಡು ಕೇಕದು ಅಪ್ಪ ಬೆರುನಂಗ ನಿಂಗ ಮಣಗು ಪೆರ್ಲಿ ವಾರಕುದು ಇಂಡು ಸೊಣ್ಣಾದು ತಿರಿಗ್ಯಾ ರೊಂಡನೆ ನಂಗ ಇಲ್ಲ ನಿನ್ನೆತ್ತೆಂದು ನಳಸ್ಗುಂಡು ನಂಗ್ಯಗಿಂತ ಮಿನ್ನೆ ಓಡಿ ಗುಂಡು ವಂಚು ಇಂಡು ಸೊಣ್ಣಾದು ಅಪ್ಪ ತೆಂಬಿ ಮೊಂಡು ನಂಗ ಮಣಗು ತೇನಿ ಹೋಡುಸುಗುಂಡು ವಾರಳಗು ಆರತಿ ಬೆಳಗಂಗ ಆರತಿ ಗಿನ್ನ ಪುಡುಸುಗುಂಡು ಪಾತುಗುಂಡು ನಿಂಡ್ರಗದು ಅಪ್ಪ ತೆಂಬಿ ಮೊಂಡುಗು ಮಾಳ್ ಮೇಕಿರ್ ಸಿನ್ನೆಯ್ಲುಂಡು ತನ ಮಣಗು ಸತ್ತಿಕ್ರ ಸುದ್ದಿ ತಡವಾಯಿ ತೆಳೆದು ಕಣ್ಣೇಲು ಆಯಿ ಒಂಡು ಮಾದ್ದ ಕೂಡ ಆಗುಲ್ಲ ನಂಗ ಮಣಗುಟ ಆಸ್ತಿಗಾಗಿ ನಿಂಗಡ್ಡಿ ಸೇರಿಕೊಂಡು ಕೊಂಡ್ರುಟಂಗೆಳೇ ಇಂಡು ತೆಂಬಿ ಮೊಂಡು ಗೋಳಾಡುದು

ಏಳು ಹುಟ್ಟಿನ ಜೇನಿನ ಕಥೆಯ ಕನ್ನಡ ಅನುವಾದ:

ಒಂದು ಊರಿನಲ್ಲಿ ಮೂರು ಜನ ಅಣ್ಣತಮ್ಮಂದಿರು ಇದ್ದರು ಕೊನೆಯ ತಮ್ಮನಿಗೆ ಹೊಸದಾಗಿ ಮದುವೆಯಾಗಿರುತ್ತದೆ. ಮೊದಲ ಅಣ್ಣನ ಹೆಂಡತಿ ಆಸೆಬುರುಕಿ ಯಾಗಿದ್ದು, ಕೊನೆಯ ತಮ್ಮನನ್ನು ಕೊಂದು ಬಿಟ್ಟರೆ ಆತನ ಆಸ್ತಿಯೂ ನಮಗೆ ಬರುತ್ತದೆ ಎಂದು ಗಂಡನಿಗೆ ಹೇಳುತ್ತಾಳೆ. ಆತನಿಗೂ ಅದು ಸರಿ ಎನಿಸಿ ಇಬ್ಬರೂ ಸೇರಿ ಉಪಾಯ ಮಾಡುತ್ತಾರೆ. ಏಳು ಊರ ಸಾಹುಕಾರನ ಮಗನ ಮದುವೆಗೆ ಜೇನು ಬೇಕೆಂದು, ಏಳು ಹುಟ್ಟಿನ ಜೇನು ಮುರಿದುಕೊಂಡು ಬಾ ಅಂತ ತಮ್ಮನಿಗೆ ಹೇಳುತ್ತಾರೆ. ಆಗ ತಮ್ಮನ ಹೆಂಡತಿ ತಮ್ಮ ಮದುವೆಯಾಗಿ ಇನ್ನೂ ಮೂರು ದಿನ ಆಗಿಲ್ಲ ಇನ್ನೂ ಕಂಕಣ ಬಿಚ್ಚಿಲ್ಲ ಹಸಿ ಮೈ ಆರಿಲ್ಲ ಈಗಲೇ ನನ್ನ ಗಂಡನಿಗೆ ಜೇನು ಮುರಿಯಲು ಹೋಗು ಅಂದರೆ ಹೇಗೆ ಆತನನ್ನು ಕಳುಹಿಸಬೇಡವೆಂದು ಕೇಳುತ್ತಾಳೆ. ಏಳು ಗುಡ್ಡ ಏಳು ಸಮುದ್ರ ಏಳು ಸೀಗಿಪಳೆ ದಾಟಿ ಹೋಗಿ ಹುಡುಕಾಡಿದರೂ ಎಲ್ಲೂ ಜೇನು ಕಾಣ್ತಿಲ್ಲಂತ ಜೇನು ಹುಡುಕಲು ಹೋದ ತಮ್ಮ ವಾಪಾಸ ಬರುತ್ತಾನೆ. ಆಗ ಇಬ್ಬರು ಅಣ್ಣ ಅತ್ತಿಗೆಯರು ಸಾಹುಕಾರನ ಮಗನ ಹತ್ತಿರ ಬಂತು ಬೇಗ ಹೋಗಿ ಜೇನು ತರಬೇಕು ನಾವುಬರುತ್ತೇವೆ. ಜೇನು ಹುಡುಕಲು ಹೋಗೋಣ ಎಂದು ಮತ್ತೆ ಜೇನು ಹುಡುಕಲು ತಮ್ಮನ್ನನ್ನೂ ಕರೆದೊಯ್ಯುತ್ತಾರೆ. ತಮ್ಮನ ಹೆಂಡತಿ ಆಗಲೂ ತನ್ನ ಗಂಡನನ್ನೂ ಹೋಗುವುದು ಬೇಡವೆಂದು ತಡೆಯುತ್ತಾಳೆ.

ಅಣ್ಣ ಅತ್ತಿಗೆಯರ ಜೊತೆ ತಮ್ಮ ಏಳು ಸಮುದ್ರ ಏಳು ಗುಡ್ಡ ದಾಟಿ ಏಳು ಸೀಗಿಪಳಿ ಇದ್ದಲ್ಲಿಗೆ ಹೋಗುತ್ತಾರೆ. ಸೀಗಿಪಳಿಯ ಬಹು ಎತ್ತರದಲ್ಲಿ ಜೇನು ಕಾಣಿಸುತ್ತದೆ. ಸೀಗಿಪಳಿ ಏರಲು ಒಂದು ನೂರು ಮೆಟ್ಟಿಲಿನ ಏಣಿ ಹಾಕಿ ತಮ್ಮನಿಗೆ ನೀನು ಏಣಿ ಹತ್ತಿ ಜೇನು ಬಿಡಿಸು ಎಂದು ಹೇಳಿ ಏಣಿ ಹತ್ತಿಸಿಬಿಡುತ್ತಾರೆ. ತಮ್ಮ ಅಣ್ಣ ಅತ್ತಿಗೆಯರ ಮಾತು ಕೇಳಿ ನೂರು ಮೆಟ್ಟಿಲಿನ

ಏಣಿಯನ್ನು ಹತ್ತಿ ಸೀಗಿಪಳಿಯಲ್ಲಿದ್ದ ಜೇನು ಕೊಯ್ದು ತನ್ನ ದೊಡ್ಡ ಅತ್ತಿಗೆಯ ಕೈಗೆ ಕೊಡುತ್ತಾನೆ. ಜೇನು ಕೈಗೆ ಬಂದ ನಂತರ ದೊಡ್ಡ ಅತ್ತಿಗೆ ಏಣಿಯನ್ನು ಕಾಲಿನಿಂದ ಒದಿಯುತ್ತಾಳೆ. ಮೈದುನ ಮೇಲಿನಿಂದ ಬಿದ್ದು ಸಾಯುವುದನ್ನು ನೊಡಿ ಖುಷಿ ಪಡುತ್ತಾಳೆ. ಮೇಲಿನಿಂದ ಬಿದ್ದ ಆತನ ಕೈ ಕಾಲುಗಳು ನುಚ್ಚು ನುಚ್ಚಾಗಿ ಹೋಗಿರುತ್ತವೆ. ಆತನ ಹೆಣವನ್ನು ಹದ್ದು ಕಾಗೆಗಳು ತಿನ್ನಲೆಂದು ಅಲ್ಲಿಯೇ ಬಿಟ್ಟು ವಾಪಾಸ್ ಬರುತ್ತಾರೆ. ಮನೆಗೆ ಬಂದ ಕೂಡಲೇ ತಮ್ಮನ ಹೆಂಡತಿ ನನ್ನ ಗಂಡ ಎಲ್ಲಿ? ಬರಲಿಲ್ಲವಲ್ಲಾ ಎಂದು ಕೇಳುತ್ತಾಳೆ. ಆಗ ದೊಡ್ಡ ಅತ್ತಿಗೆ ನಿನ್ನ ಗಂಡ ಹಿಂದೆ ಬರುತ್ತಾನೆ ಎಂದು ಹೇಳುತ್ತಾಳೆ. ನಿನ್ನ ಗಂಡ ನಮಗಿಂತ ಮೊದಲೇ ನಿನ್ನನ್ನು ನೆನೆಸಿಕೊಂಡು ಓಡಿಬಂದ ಎಂದು ಇನ್ನೊಬ್ಬ ಅತ್ತಿಗೆ ಹೇಳುತ್ತಾಳೆ. ಖುಷಿಯಲ್ಲಿ ಆಕೆ ಜೇನು ಬಿಡಿಸಿಕೊಂಡು ಬರುವ ತನ್ನ ಗಂಡನಿಗೆ ಆರತಿ ಎತ್ತಲು ಆರತಿ ತಟ್ಟೆಯನ್ನು ಹಿಡಿದುಕೊಂಡು ಬಾಗಿಲ ಬಳಿ ಬಂದು ಕಾಯತೊಡಗುತ್ತಾಳೆ. ದನ ಕಾಯುವ ಹುಡುಗರಿಂದ ತನ್ನ ಗಂಡ ಏಣಿಮೇಲಿನಿಂದ ಬಿದ್ದು ಸತ್ತ ಸುದ್ದಿ ತಡವಾಗಿ ತಿಳಿಯುತ್ತದೆ. ಮದುವೆಯಾಗಿ ತಿಂಗಳು ಕೂಡಾ ಆಗಿಲ್ಲ ನನ್ನ ಗಂಡನನ್ನು ಆಸ್ತಿ ಆಸೆಗಾಗಿ ನೀವೆಲ್ಲರೂ ಸೇರಿ ಕೊಂದಿರಿ ಎಂದು ಗೋಳಾಡುತ್ತಾಳೆ.

ಈ ಕಥೆಯನ್ನು ಕೊರಚರ ಹಟ್ಟಿಗಳಲ್ಲಿ ಹಾಡಿನ ರೂಪದಲ್ಲಿಯೂ ಹಾಡುತ್ತಿದ್ದರಂತೆ ಆಸ್ತಿಗಾಗಿ ತನ್ನ ಮೈದುನನ್ನು ಕೊಂದು ಅತ್ತಿಗೆಯಂತೆ ಬೇರೆ ಯಾರು ಮಾಡಬಾರದು ಎಂಬ ನೀತಿ ಭೋದಕವಾಗಿ ಬಳಸಿಸುತ್ತಿದ್ದರಂತೆ. ಆದರೆ ಇದು ಈಗ ಹಾಡಿನ ರೂಪದಲ್ಲಿ ದೊರೆಯುವುದಿಲ್ಲ ಕಥೆ ಮಾತ್ರ ಹೇಳುತ್ತಾರೆ.

ಪಂಡ್ರಿ ತಿರಿಗ್ಯಾ ಸೋಮಾರಿ ನಕ್ಕಟ ಕಥಾ

"ಒಂಡೂರ್‌ಗೋರು ಒಂಡ್ ಸಾವ್‌ಕಾರು. ಆ ಸಾವಾಕರಂಚಿ ಒಂಡ್ ನಕ್ಪೋತು, ಒಂಡ್ ಪಂಡ್ರಿ ಕೂಲಿಗಿಕ್ಯಾ. ಈ ರೊಂಡಾಳ್ಗು ಬೇಸಾಯತ ಸೇಯಿಂಗ್ ಕೊಲ್ಲಿಗಿ ಅಂಪಿ ಸಾವ್ಕಾರು ಊಟ್ಲಿ ಇಂಕ್ಯಾದು. ಈ ರೊಂಡಾಳ್ ಓಸು. ಕೊಲ್ಲಡ್ಡಿ ಪಾತ್ಸು, ಪಂಡ್ರಿ ಸೊಣ್ಸು: ಏ ಬಾಳಾ ನಕ್‌ಪೋತಾ, ಕೊಲ್ಲೆ ದುನ್ನಂಬು. ನಕ್‌ಪೋತು ಪಾತ್ಸು. ಸುಮ್ಮಾದೆ ಕೊಂದ್‌ಗುಂಡ್ಸು. ಆಪೋದೆ, ಸಾನಾಸೇಪ್ ಆಸಿಂಡು... ಪಂಡ್ರಿ ಬಿರ್‌ಬಿರ್‌ನೆ ಹೋಸು. ಅದಟ ವಾಯ್‌ಕೊರು ಕೊಲ್ಲೆಡ್ಡಿ ದುನ್ಸು, ನಕ್‌ಪೋತು ಆರಾಮಾಗಿ ಮರದಿಗಲಿ ಬೂದುಗುಂಡ್ಸು. ಪೊಗದು ಮುಳುಗ್ಸು. ಪಂಡ್ರಿ ಕೊಲ್ಲೆಡ್ಡಿ ದುನ್ನಿ ಸುಸ್ತಾಯಿ ಹಾರ್‌ಕೋರು ಕೀಕಾಲಡ್ಡಿ ಕೆವ್ವಿಗುಂಡ್ ಊಟ್ಕ್ ಹೊಗುತ್ಕ್ ಕದಲ್ಸು. ಬೂದುಗುಂಡಿದ್ ನಕ್‌ಪೋತು ಎದ್ದಿಂದ್ ಕೊಲ್ಲೆಡ್ಡಿ ದುನ್ನಿಕ್ಕಿತ ಪಾತ್ಸು. ಕೀಕಾಲಡ್ಡಿ ಬುರ್‌ದಾ ಮಣ್ ಸೇಂದ್‌ಗುಂಡು ಅದೂ ಊಟ್‌ತಟ್ಗು ಕದಲ್ಸು. ರೊಂಡ್ಯಾಳು ಊಟ್ಯಾಂಚಿಗಿ ವಂಚು ಸಾವ್ಕಾರು ಪಾತ್ಸು. ನಕ್‌ಪೋತು ಪಾತು ಸಾವ್ಕಾರು: ಭಲೆ! ಭಲೆ! ಇಂಡು ಬಾರೀ ಕಷ್ಟಬುದಿಕೀದು ನಕ್‌ಪೋತು. ಅದ್‌ಟ ಕೈಕಾಲ್ ಎತ್ನ ಬುರ್ದಾಕೀದು: ಪಾಪೋ! ಇಂಡುಗುಂಡು ಪಂಡ್ರಿ ಪಾತ್‌ಗೆ ಒಂಡು ರೊತ್ನನು ಮುಕ್ಕಾಗಿಲ್ಲ. ಒಹೋ ಪಂಡ್ರಿ. ತೆಕ್‌ನಾಯಿ! ಪಣಿ ಯೆಂದೂ ಸೈಯಿಲ್ಲ. ಇಂಡುಟು ಅತ್ಗು ಎಂಜೂಟು ಮೂಡ್‌ಕಾಸು ಕುಡ್ತು. ನಕ್‌ಪೋತ್‌ಗು ಬಾರಿ ಕಷ್ಟ ಬೂದಿಕದು ಇಂಡುಟು ಆರುಕಾಸು ಕುಡ್ತು.

ಇನಿಗ ಕಥ. ಗೂದಲ್ಲ ಪಣಿಸೇಂದ ಆಳ್‌ಗು ಮೂಡ್ಡಾಕಾಸು. ಎಂದ ಪಣಿ ಸೇಯಾ ಮಾಟರಾಳ್‌ಗು ಅರ್‌ಕಾಸು. ಇನ್‌ಗಾವ ಏಟಿಕೀದು ನ್ಯಾಯ ಈ ಕಾಲುತ್‌ಕೋರು. ಅನ್ಯಾಯಿತ್‌ಗೇ ಕಾಲ."

ಕಥೆಯ ಕನ್ನಡ ಅನುವಾದ ಈ ರೀತಿ ಇದೆ:

ಒಂದೂರಲ್ಲಿ ಒಬ್ಬ ಸಾವ್ಕಾರ ಇರ್ತಾನೆ. ಆ ಸಾವ್ಕಾರನ ಹತ್ತಿರ ಒಂದು ನರಿ, ಒಂದು ಹಂದಿ ಕೆಲಸಕ್ಕೆ ಇರ್ತವೆ. ಇವೆರಡನ್ನ ಬೇಸಾಯ ಮಾಡಕ್ಕೆ ಅಂತ ಹೊಲಕ್ಕೆ ಕಳಿಸಿ ಸಾವ್ಕಾರ ಮನೆಯಲ್ಲಿ ಇರುತ್ತಾನೆ. ಎರಡೂ ಹೊಲಕ್ಕೆ ಹೋಗ್ತಾವೆ. ಹೊಲವನ್ನೆಲ್ಲ ನೋಡಿ ಹಂದಿ ನರಿಗೆ ಹೇಳುತ್ತೆ ; ಬಾರಪ್ಪ ನರಿಯಣ್ಣ, ಹೊಲ ಉಳುಮೆ ಮಾಡೋಣ ಅಂತ. ನರಿ ಹಂದಿ ಕರೆಯೋದನ್ನು ನೋಡಿ ಸುಮ್ನೆ ಕೂತ್ಕೊಂಬುಡು. ಹಂದಿ ಮಾತ್ರ ಆಗಲೇ ತುಂಬಾ ಹೊತ್ತಾಯ್ತು ಅಂತ ಬಾಯಲ್ಲೇ ಹೊಲವನ್ನೆಲ್ಲ ಉಳುಮೆ ಮಾಡಲು ಶುರುಮಾಡ್ತು. ನರಿ ಆರಾಮವಾಗಿ ಮರದ ನೆರಲಲ್ಲಿ ಮಲಗ್ತು. ಹಂದಿ ಹೊಲವನ್ನೆಲ್ಲ ಉಳಮೆ ಮಾಡಿ ಸುಸ್ತಾಗಿ ಹಳ್ಳದಲ್ಲಿ ಕೈಕಾಲು ತೊಳೆದುಕೊಂಡು ಮನೆಗೆ ಹೋಗಲು ತಯಾರಾಯ್ತು. ಆಗ ಮಲಗಿದ್ದ ನರಿ ಎದ್ದು ಉಳುಮೆ ಮಾಡಿದ ಹೊಲವನ್ನೆಲ್ಲ ಒಮ್ಮೆ ಕಣ್ಣಾಡಿಸಿ ಕೈಕಾಲು ಮುರಿದು ಆಕಳಿಸಿ ಹೊಲದಲ್ಲೆಲ್ಲಾ ಉಳ್ಳಾಡಿತು. ಕೈಕಾಲಿಗೆಲ್ಲ ಮಣ್ಣು ಕೆಸರು ಮೆತ್ತಿಕೊಂಡು ಮನೆಗೆ ಹೋಯಿತು. ಹಂದಿ ನರಿ ಎರಡೂ ಮನೆಗೆ ಬಂದಿದ್ದನ್ನ ಸಾವ್ಕಾರ ನೋಡಿದ. ನರಿಯ ಅವತಾರ ನೋಡಿದ ಸಾವ್ಕಾರ: ಥೇ... ಥೇ... ನರಿ ಎಷ್ಟೊಂದು ಕಷ್ಟ ಬಿದ್ದಿದೆ. ಪಾಪ ಕೈಕಾಲೆಲ್ಲ್ ಕೆಸರು ಮಾಡಿಕೊಂಡು ಹೊಲ ಉಳುಮೆ ಮಾಡಿದೆ. ಈ ಹಂದಿ ಕೈಕಾಲು ಮಣ್ಣಾಗಿಲ್ಲ. ಇದಾವುದೋ ಸೋಂಬೇರಿ, ಮೈಗಳ್ಳ, ಏನೂ ಕೆಲಸ ಮಾಡಿಲ್ಲ. ಅಂತೇಳಿ ಅದಕ್ಕೆ ಕೂಲಿ ಅಂತ ಮೂರು ಕಾಸು ಕೊಟ್ಟ. ನರಿ ಬಹಳ ಕಷ್ಟ ಬಿದ್ದಿದೆ ಅಂತ ಅದಕ್ಕೆ ಆರು ಕಾಸು ಕೊಟ್ಟ. ಇಷ್ಟು ಕಥೆ. ಮೈಮುರಿದು ಕೆಲಸ ಮಾಡಿದವನಿಗೆ ಆರು ಕಾಸು. ಈ ಕಾಲದಲ್ಲಿ ನ್ಯಾಯ ಅನ್ನೋದು ಇಲ್ಲ. ಅನ್ಯಾಯಾಯದ ಕಾಲ ಇದು.

ಈ ಸಣ್ಣ ಕಥೆಯ ಶರೀರವನ್ನು ಸೂಕ್ಷ್ಮವಾಗಿ ಗಮನಿಸಿದರೆ, ಇದು ತನ್ನ ಆದಿಮ ಕಾಡುವಾಸಿ ಸ್ಥಿತಿಯನ್ನು ದಾಟಿ, ಕಾಡಂಚಿನ ಕುಮ್ರಿ ಬೇಸಾಯಕ್ಕೆ ಅಂಟಿಕೊಂಡ ಸಂದರ್ಭದಲ್ಲಿ ಹುಟ್ಟಿಕೊಂಡಂತೆ ಕಾಣುತ್ತದೆ. ಪ್ರಾಣಿ ರೂಪಕಗಳ ಮೂಲಕ ಇದು ಮನುಷ್ಯ ಕಟ್ಟಿಕೊಂಡ ವ್ಯವಸ್ಥೆಯು ಆಚರಿಸುವ ಮೋಸ–ವಂಚನೆಯನ್ನು ವಿಮರ್ಶಿಸುತ್ತದೆ. ತಂತ್ರಕ್ಕೆ ಸಂಬಂಧಿಸಿದ ಹಾಗೆ ಕನ್ನಡದ ಸುಪ್ರಸಿದ್ಧ 'ಪಂಚತಂತ್ರ' ಕಥೆಗಳನ್ನು ನೆನಪಿಸುತ್ತದೆ.

ಮಕ್ಕಳ ಹಾಡು:

ಪತ್ತು ಪಾಡು ಪತ್ತು ಪಾಡು ಪಾಟು ಕುಂಜಾ
ನಾನೇಟಿ ಪಾಡ್ರೇ ಪೀಯ್ ಕುಂಜಾ
ದಡ್ಡಲೆ ಮಡ್ಡಲೆ ಕರ್ತ ಕ್ಯಾಸುಗ
ಡೊಳ್ಳು ಮೊತು ವಾ ದೊಣೆಕಾಟ ಯೇ
ಪಾಲು ಕುಡಿ ವಾ ಮಂಗಣ್ಣನೇ

ಕನ್ನಡದಲ್ಲಿ ಅರ್ಥ:

ಹಾಡು ಹಾಡು ಹಾಡು ಹಾಡು ಚಿಕ್ಕ ಗುಬ್ಬಿಯೇ
ನಾನೆಲ್ಲಿ ಹಾಡಲೇ ಹೊಲಸು ಗುಬ್ಬಿಯೇ
ದಡ್ಡ ಮಂದ ಬುದ್ಧಿಯ ಕರಿ ಗುಬ್ಬಿಯೇ
ಡೊಳ್ಳು ಹೊಡೆಯಲೇ ಒತಿ ಕಾಟವೇ
ಹಾಲು ಕಡಿ ಬಾ ಮಂಗಣ್ಣನೇ

(ಪಕ್ಷಿಗಳ ಮಧ್ಯದ ಸಂಭಾಷಣೆಯ ರೂಪದಲ್ಲಿ ಈ ಹಾಡನ್ನು ಮಕ್ಕಳು ಸಂಜೆಯ ಹೊತ್ತಿನಲ್ಲಿ ಗುಂಪಾಗಿ ಸೇರಿಕೊಂಡು ಹಾಡುತ್ತಾರೆ.)

ಸೆಂದಮಾಮಟ ಪತ್ತ:

ಸೆಂದಮಾಮ ಚಂದಮಾಮ
ಏಟ್‌ಗ್ ವೋಕ್ರಾ

ಸೆಂದಮಾಮ ಚಂದಮಾಮ
ನಾ ಮಣ್‌ಗ್ ವೋಕ್ರೆ

ಸೆಂದಮಾಮ ಚಂದಮಾಮ
ಮಣ್ಣೆಂದಾತ್‌ಗು

ಸೆಂದಮಾಮ ಚಂದಮಾಮ
ಮಣ್ಣು ಕುಂಡಸೇಯ್ರತ್ತುಗ್ಗ

ಸೆಂದಮಾಮ ಚಂದಮಾಮ
ಕುಂಡ್ ಎಂದಾತ್ತುಗ್ಗ

ಸೆಂದಮಾಮ ಚಂದಮಾಮ
ಕುಂಡ್ ಕಳಿ ಸೇಯ್ರತ್ತುಗ್ಗ

ಸೆಂದಮಾಮ ಚಂದಮಾಮ
ಕಳಿ ಎಂದಾತ್ತುಗ್ಗ

ಸೆಂದಮಾಮ ಚಂದಮಾಮ
ಕಳಿ ತಿಂಗ್ರೀತ್ತುಗ್ಗ

ಕನ್ನಡದಲ್ಲಿ ಅನುವಾದ:

ಚಂದಮಾಮ ಚಂದಮಾಮ
ಎಲ್ಲಿಗೆ ಹೋಗುವೆ

ಚಂದಮಾಮ ಚಂದಮಾಮ
ಮಣ್ಣನು ತರಲು ಹೋಗುವೆ

ಚಂದಮಾಮ ಚಂದಮಾಮ
ಮಣ್ಣು ಏತಕ್ಕೆ

ಚಂದಮಾಮ ಚಂದಮಾಮ
ಮಣ್ಣು ಮಡಕೆ ಮಾಡಲು
ಚಂದಮಾಮ ಚಂದಮಾಮ
ಮಡಕೆ ಏತಕ್ಕೆ

ಚಂದಮಾಮ ಚಂದಮಾಮ
ಮಡಕೆ ಮುದ್ದೆ ಮಾಡಲು
ಚಂದಮಾಮ ಚಂದಮಾಮ
ಮುದ್ದೆ ಏತಕ್ಕೆ

ಚಂದಮಾಮ ಚಂದಮಾಮ
ಮುದ್ದೆ ತಿನ್ನೋದಕ್ಕೆ

ದೇವರ ಪೂಜೆ ಹಾಡು:

ಏನು ಮೀಸಲು ಮಾಡಲೇ ಈ ದೇವರಿಗೆ
ಏನು ಮೀಸಲು ಮಾಡಲೇ ಈ ದೇವರಿಗೆ ॥ಪಲ್ಲವಿ॥

ನೀರು ಮೀಸಲು ಎಂದು ನದಿಯಾ ನೀರಿಗೆ ಹೋದೆ
ನದಿಯಲ್ಲಿನ ಕಪ್ಪೆ ಮೊಸಳೆ ಎಂಜಲು ಮಾಡಿದ ನೀರು ॥ಪ॥

ಹಾಲು ಮೀಸಲು ಎಂದು ಆಕಳಿಂಡಲು ಹೋದೆ
ಆಕಳಿನಾ ಕರಾ ಬಂದು ಎಂಜಲು ಮಾಡಿದ ಹಾಲು ॥ಪ॥

ಹಣ್ಣು ಮೀಸಲು ಎಂದು ಬಾಳೆ ತೋಟಕ್ಕೆ ಹೋದೆ
ಪಕ್ಕದ ಗೀಳೆಯೇ ಬಂದು ಎಂಜಲು ಮಾಡಿದ ಹಣ್ಣು ॥ಪ॥

ಹೂವು ಮೀಸಲು ಎಂದ ಹೂವಿನ ತೋಟಕ್ಕೆ ಹೋದೆ
ಗುಂಗಾಡಿ ಹುಳ ಬಂದು ಎಂಜಲು ಮಾಡಿದ ಹೂವು ॥ಪ॥

ದೇಸಕ್ಕೆ ಹಿತವಾಗಿ ವಾಸಿಸುವ ಪಂಡರಪುರ
ಇಟ್ಟಿನಲ್ಲಿ ಈ ದೇವಾ ಮಾಡಿದ ಮೀಸಲು ನಾನೂ

ಏನು ಮೀಸಲು ಮಾಡಲೇ ಈದೇವರಿಗೆ
ಏನು ಮೀಸಲು ಮಾಡಲೇ ಈದೇವರಿಗೆ

ಆರತಿ ಹಾಡು:

ಮೈನೆರತು ನಾನು ಕುಂತೇ ಹಡೆದವ್ವ
ಮನೆ ಸಿರಿ ನನ್ಗಿಲ್ಲೇ ಹಡೆದವ್ವ, ಮನೆ ಸಿರಿ ನನಗಿಲ್ಲೇ
ಎರವಾರ ಸೀರಿ ತಂದು ಅರಳೇಲೆ ಬಂಗಾರ
ಮಂಟಾಪಕೋಗಿಗಿಳಿಯೇ ಮಗಳೇ.

ಮೈನೆರತು ನಾನು ಕುಂತೇ ಹಡೆದವ್ವ
ಮನೆ ಜೋಲಿ ನನ್ನಗಿಲ್ಲೇ ಹಡೆದವ್ವ, ಮನೆ ಜೋಲಿ ನನ್ನಗಿಲ್ಲೇ
ಎರವಾರ ಜೋಲಿ ತಂದು ಅರಳೇಲೆ ಬಂಗಾರ
ಮಂಟಾಪಕೋಗಿಗಿಳಿಯೇ ಮಗಳೇ.

ಮೈನೆರತು ನಾನು ಕುಂತೇ ಹಡೆದವ್ವ
ಮನೆ ಬೆಂಡೋಲಿ ನನ್ನಗಿಲ್ಲೇ ಹಡೆದವ್ವ, ಮನೆ ಬೆಂಡೋಲಿ ನನ್ನಗಿಲ್ಲೇ
ಎರವಾರ ಬೆಂಡೋಲಿ ತಂದು ಅರಳೇಲೆ ಬಂಗಾರ
ಮಂಟಾಪಕೋಗಿಗಿಳಿಯೇ ಮಗಳೇ.

ಮೈನೆರತು ನಾನು ಕುಂತೇ ಹಡೆದವ್ವ
ಮನೆ ಬುಗುಡಿ ನನ್ನಗಿಲ್ಲೇ ಹಡೆದವ್ವ, ಮನೆ ಬುಗುಡಿ ನನ್ನಗಿಲ್ಲೇ
ಎರವಾರ ಬುಗುಡಿ ತಂದು ಅರಳೇಲೆ ಬಂಗಾರ
ಮಂಟಾಪಕೋಗಿಗಿಳಿಯೇ ಮಗಳೇ.

ಮೈನೆರತು ನಾನು ಕುಂತೇ ಹಡೆದವ್ವ
ಮನೆ ಪಟ್ಟಿ ನನ್ನಗಿಲ್ಲೇ ಹಡೆದವ್ವ, ಮನೆ ಪಟ್ಟಿ ನನ್ನಗಿಲ್ಲೇ
ಎರವಾರ ಪಟ್ಟಿ ತಂದು ಅರಳೇಲೆ ಬಂಗಾರ
ಮಂಟಾಪಕೋಗಿಗಿಳಿಯೇ ಮಗಳೇ.

ಮೈನೆರತು ನಾನು ಕುಂತೇ ಹಡೆದವ್ವ
ಮನೆ ಚೈನು ನನ್ನಗಿಲ್ಲೇ ಹಡೆದವ್ವ, ಮನೆ ಚೈನು ನನ್ನಗಿಲ್ಲೇ
ಎರವಾರ ಚೈನು ತಂದು ಅರಳೇಲೆ ಬಂಗಾರ
ಮಂಟಾಪಕೋಗಿಗಿಳಿಯೇ ಮಗಳೇ.

ಹಂಡೇಲಿ ನೀರು ಕಾಸೇ ಹಡೆದವ್ವ
ಗಿಂಡೀಲಿ ತುಪ್ಪ ತಾರೇ, ಹಡೆದವ್ವ ಗಿಂಡೀಲಿ ತುಪ್ಪ ತಾರೇ
ಈ ತುಪ್ಪ ಮಗಳೀಗೆ ಸಾಯವಗಲೆಂದು

ಅಕ್ಕಿ ಶಾಸ್ತ್ರದ ಹಾಡು:

॥ಸೋಬಾನೆ॥ ॥ಪ॥
ಮೂಡಲ ಬೀದಿಯಿಂದ ಮುತ್ತೈದೆರ ಬರಹೇಳಿ

ಮುತ್ತಿನ ಒನಕೆ ತರಹೇಳಿ ಮುತ್ತೈದೆರು
ಸ್ವಾರೆ ಹೂನಾಗೆ ತೊಳಸೀರೊ ॥ಸೋಬಾನೆ॥

ಪಡಲು ಬೀದಿಯಿಂದ ಮುತ್ತೈದೆರ ಬರಹೇಳಿ
ಬೀಡೆಯ ವನಕೆ ತರಹೇಳಿ ಮುತ್ತೈದೆರು
ಎತ್ತಿ ಬುಟ್ಟಾರು ಗಕುನಾಕೆ ಮುತ್ತೈದೆರು
ಮಲ್ಲೆ ಹೂನಾಗೆ ತೊಳಸೀರೊ ॥ಸೋಬಾನೆ॥

ತೆಂಕಲ ಬೀದಿಯಿಂದ ಮುತ್ತೈದೆರ ಬರಹೇಳಿ
ತೇಗದ ವನಕೆ ತರಹೇಳಿ ಮುತ್ತೈದೆರು
ಎತ್ತಿ ಬುಟ್ಟಾರು ಗಕುನಾಕೆ ಮುತ್ತೈದೆರು
ತಾಳೆ ಹೂನಾಗೆ ತೊಳಸೀರೊ ॥ಸೋಬಾನೆ॥

ಬಡಗಲ ಬೀದಿಯಿಂದ ಮುತ್ತೈದೆರ ಬರಹೇಳಿ
ಬೆಡಗಿನ ವನಕೆ ತರಹೇಳಿ ಮುತ್ತೈದೆರು
ಎತ್ತಿ ಬುಟ್ಟಾರು ಗಕುನಾಕೆ ಮುತ್ತೈದೆರು
ಮಲ್ಲಿಗೆ ಹೂನಾಗೆ ತೊಳಸೀರೊ ॥ಸೋಬಾನೆ॥

ನಡುವೆ ಬೀದಿಯಿಂದ ಮುತ್ತೈದೆರು ಬರಹೇಳಿ
ಚಿನ್ನದ ವನಕೆ ತರಹೇಳೀ ಮತ್ತೈದೆರು
ಎತ್ತಿ ಬುಟ್ಟಾರು ಗಕುನಾಕೆ ಮುತ್ತೈದೆರು
ಮಲಂದರಾಜ ಹೂನಾಗೆ ತೊಳಸೀರೊ ॥ಸೋಬಾನೆ॥

ಕಂಕಣದ ಹಾಡು:

ಕಂಕಣ ಕಟ್ಟುವಾಗ ಕೊಂಕದಿರಿ ಮಲ್ಲೀಗೆ
ಕೊಂಕಿದಾಕೆ ನಿಮ್ಮ ಸಿವನಾಣೆ – ಗುರುವಾಣೆ
ಮುಟ್ಟಿ ಕಂಕಣವ ದರಿಸೀರೆ ॥ಸೋಬಾನೆ॥

ಪಟ್ಟೆದಾರಾದಲ್ಲಿ ಕಟ್ಟಿರೋ ಕಂಕಣವ
ದೃಷ್ಟಿ ಈಸ್ಪರನ ನೆನೆವೆನು ! ಕುಲಸ್ವಾಮಿ
ಅವರು ಮುಟ್ಟಿ ಕಂಕಣ ದರಿಸೀರೊ ॥ಸೋಬಾನೆ॥

ಉರುಗು ದಾರಾದಲ್ಲಿ ಅರಡೀರೊ ಕಂಕಣವ
ಆವ್ವದುಂಗುರವ ತೆಗೆದಿರಿಸಿ ! ಕುಲಸ್ವಾಮಿ
ಅವರು ಅರಸಿ ಕಮಕಣವ ದರಿಸೀರೊ ॥ಸೋಬಾನೆ॥

ಮುತ್ತೈದೆರೈವರು ಮುಟ್ಟಿ ಕಂಕಣವ
ಅರಸೀನ ಕುಂಕುಮ ಅಕ್ಷತೆಯಿಟ್ಟು ! ಕುಲಸ್ವಾಮಿ
ಅವರು ಅರಸಿ ಕಂಕಣವ ದರಿಸೀರೊ ॥ಸೋಬಾನೆ॥

ಕೋಲಾಟದ ಹಾಡುಗಳು:

೧

ಕೊರ್ರ್ರಾನ್ನ ಕೊಲ್ಲಕೋರು ಸಿನ್ನಾವ ವಳ್ಳಾನ ದುಬುಟಿ ಮೊಣುಸು
ಸಿನ್ನಾವ ವಳ್ಳಾನ ದುಬುಟಿ ಮೊಣುಸು
ದೋಮಾರಿ ದಾಗರೇನಾ ಸಿನ್ನಾವ ದೋಮಾರಿ ದಾಗರೇನಾ
ಸಿನ್ನಾವ ದೋಮಾರಿ ದಾಗರೇನಾ
ನಿನ್ನಾನ ಮಾಡನೆಳ್ಳಿ ಸಿನ್ನಾವ ಬಳ್ಳಾರಿ ಬಂಡನೆಳ್ಳಿ
ಸಿನ್ನಾವ ಬಳ್ಳಾರಿ ಬಂಡನೆಳ್ಳಿ
ಪೆರುಗಾನ ಮಾಡನೆಳ್ಳಿ ಸಿನ್ನಾವ ಬೆರುಗುಟ್ಟ ದೇಡಿನೆಳಿ
ಸಿನ್ನಾವ ಬೆರುಗುಟ್ಟ ದೇಡಿನೆಳ್ಳಿ
ನಂಬೂಟ ಮಾಡನೆಳ್ಳಿ ಸಿನ್ನಾವ ಸದಲನ್ನ ಪುಡ್ಸಕೀದು
ಸಿನ್ನಾವ ಸದಲನ್ನ ಪುಡ್ಸಕೀದು ॥ಕೊರ್ರಾನ್ನ॥
ನಿನ್ನಾನ ಮಾಡನೆಳ್ಳಿ ಸಿನ್ನಾವ ಸಿದಲನ್ನ ಪುಡ್ಸಕೀದು
ಸಿನ್ನಾವ ಸಿದಲನ್ನ ಪುಡ್ಸಕೀದು
ಪೆರುಗಾನ ಮಾಡನೆಳ್ಳಿ ಸಿನ್ನಾವ ಬೆರುಗುಟ್ಟ ದೇದಿನೆಳ್ಳಿ
ಸಿನ್ನಾವ ಬೆರುಗುಟ್ಟ ದೇದಿನೆಳ್ಳಿ
ನಂಬೂಟ ಮಾಡನೆಳ್ಳಿ ಸಿನ್ನಾವ ಬಳ್ಳಾರಿ ಬಂಡಿನೆಳ್ಳಿ
ಸಿನ್ನಾವ ಬಳ್ಳಾರಿ ಬಂಡಿನೆಳ್ಳಿ
ನಿನ್ನಾನ ಮಾಡನೆಳ್ಳಿ ಸಿನ್ನಾವ ಹರಪನಳ್ಳಿ ಗುಟ್ಟನೆಳ್ಳಿ
ಸಿನ್ನಾವ ಹರಪನಳ್ಳಿ ಗುಟ್ಟನೆಳ್ಳಿ
ನಂಬೂಟ ಮಾಡನೆಳ್ಳಿ ಸಿನ್ನಾವ ಸಿದಲನ್ನ ಪುಡ್ಸಕೀದು
ಸಿನ್ನಾವ ಸಿದಲನ್ನ ಪುಡ್ಸಕೀದು ॥ಕೊರ್ರಾನ್ನ॥

(ಈ ಹಾಡನ್ನು ಕಾವಾಡಿ ಸಣ್ಣಕ್ಕ ನವರು ಹಾಡಿ ಅವರೆ ಅರ್ಥ ಹೇಳಿರುವಂತೆ, ಒಂದು ಹುಡುಗಿ ಮೇಯಿಸುವ ಆಕಳನ್ನು ಹೊಗಳುತ್ತ ಈ ಹಾಡನ್ನು ತನ್ನ ಚಿಕ್ಕಪ್ಪನಿಗೆ ಹೇಳುತ್ತಾಳೆ. (ಗಿರಿಧರರಾವ್ ಹವಾಲ್ದಾರ್, ೨೦೦೦, 'ಕೊರಚರು ಒಂದು ಅಧ್ಯಯನ'ದ ಅನುಬಂಧದಿಂದ) ಇಲ್ಲಿ ಸಿನ್ನಾವ–ಚಿಕ್ಕಪ್ಪ, ಕೊಲ್ಲ– ಹೊಲ, ಕೊರ್ರ–ನವಣೆ, ದೊಮಾರಿ– ನೊಣ, ಗುಟ್ಟ–ಗುಡ್ಡ, ವಳ್ಳನ– ಬಿಳಿಯ, ಪೆರುಗಾನ– ಹಿಂದಿನ, ಮಾಡ–ಎತ್ತು, ನಂಬೂಟ– ನಮ್ಮ)

೨

ಮಾವನ ಮಗಳೇ ಮಾರುದ್ದ ಜಡೆಯವಳೇ
ಬಾಯಾರಿ ಬಂದೀನಿ ಕೊಡ ನೀರಾ–ಕೋಲೆನ್ನ ಕೋಲೆ
ಮಾವನ ಮಗಳೇ ಮಾರುದ್ದ ಜಡೆಯವಳೇ
ಬಾಯಾರಿ ಬಂದೀನಿ ಕೊಡ ನೀರಾ–ಕೋಲೆನ್ನ ಕೋಲೆ ॥ಪ॥
ನಾ ನೀರಾ ಕೊಡಲಿಕ್ಕೆ ನೀನ್ಯರೋ ನಾನ್ಯಾರೋ
ಹೋಗಯ್ಯ ಹರಿಯುವಾ ಜಲಧೀಗೇ– ಕೋಲೆನ್ನ ಕೋಲೆ ॥ಪ॥
ಹಳ್ಳಾದ ನೀರು ಹೆಚ್ಚಾಗಿ ಬಾವ್ಯಾಳ ನೀರು ಬೆಚ್ಚಾಗಿ
ನೀ ಕೊಟ್ಟ ನೀರು ಬಲುರುಚಿಯು–ಕೋಲೆನ್ನ ಕೋಲೆ ॥ಪ॥

೩

ನೋಡಿ ನೋಡಿ ಹೋಗ ಬ್ಯಾಡಿರೋ ನನ್ನ ಗಂಡ
ಹೊಡಿತಾನ ಬಿಡಿಸಿಕೊಳ್ಳಿರೋ ॥ಪ॥
ನೋಡಿ ನೋಡಿ ಹೋಗ ಬ್ಯಾಡಿರೋ ನನ್ನ ಗಂಡ
ಹೊಡಿತಾನ ಬಿಡಿಸಿಕೊಳ್ಳಿರೋ ॥ಪ॥
ಸಜ್ಜಿಯ ಹೊಲದಾಗ ನನ್ನ ಗಂಡ
ಜಜ್ಜಿ ಜಜ್ಜಿ ಹೊಡೀತಾನಾ
ನೋಡಿ ನೋಡಿ ಹೋಗ ಬ್ಯಾಡಿರೋ ನನ್ನ ಗಂಡ
ಹೊಡಿತಾನ ಬಿಡಿಸಿಕೊಳ್ಳಿರೋ
ನವಣಿಯ ಹೊಲದಾಗ ನನ್ನ ಗಂಡ
ಉಳ್ಯಾಡಿಸಿ ಹೊಡೀತಾನಾ
ನೋಡಿ ನೋಡಿ ಹೋಗ ಬ್ಯಾಡಿರೋ ನನ್ನ ಗಂಡ
ಹೊಡಿತಾನ ಬಿಡಿಸಿಕೊಳ್ಳಿರೋ

೪

ಬೆಲ್ಲ ಕೊಟ್ಟು ಸನ್ನೆ ಮಾಡಿ ಬಲ್ಲರೇನೆ
ಜಾಣೆ ಬಲ್ಲರೇನೆ

ಮಲ್ಲೀಗಿ ಹೂವಾಗಿ ಹೋಗತೀನಿ ವನವಾ ಸೇರತೀನಿ
ಮಲ್ಲೀಗಿ ಹೂವಾಗಿ ಹೋದಾರೆ ವನವಾ ಸೇರಿದರೆ
ತೋಟಗಾರ ಮಗನಾಗಿ ಬರತೀನೀ ಹೂವಾ ಕೊಯ್ಯತೀನೀ
ತೋಟಗಾರ ಮಗನಾಗಿ ಹೋದಾರೆ ಹೂವಾ ಕೊಯ್ದಾರೇ
ಬಾಳೀಯ ಕಾಯಾಗಿ ಹೋಗತೀನೀ ತೋಟ ಸೇರತೀನೀ
ಬಾಳೀಯ ಕಾಯಾಗಿ ಹೋದಾರೇ ತೋಟ ಸೇರಿದರೇ
ರೈತಾರಾ ಮಗನಾಗಿ ಬರತೀನಿ ಕಾಯ ಕೊಯ್ಯತೀನಿ
ರೈತಾರಾ ಮಗನಾಗಿ ಬಂದಾರೇ ಕಾ ಕೊಯ್ದಾರೆ
ಬಾಳೀಯ ಮೀನಾಗಿ ಹೋಗತೀನಿ ಹೊಳೆಯ ಸೇರತೀನಿ
ಬಾಳೀಯ ಮೀನಾಗಿ ಹೋದಾರೆ ಹೊಳೆಯ ಸೇರಿದರೇ
ಜಲಗಾರ ಮಗನಾಗಿ ಬರತೀನಿ ಬಲೆಯ ಬೀಸತೀನಿ
ಜಲಗಾರ ಮಗನಾಗಿ ಬಂದರೇ ಬಲೆಯ ಬೀಸಿದರೇ
ನಾಗಾರ ಹಾವಾಗಿ ಹೋಗತೀನಿ ಹುತ್ತ ಸೇರತೀನಿ
ನಾಗಾರ ಹಾವಾಗಿ ಬಂದರೇ ಹುತ್ತ ಸೇರಿದರೇ
ಹಾವಗಾರಾ ಮಗನಾಗೀ ಬರತೀನಿ ಕೋಳಲೂದತೀನಿ
ಹಾವಗಾರಾ ಮಗನಾಗೀ ಬಂದರೇ ಕೋಳಲೂದಿದರೇ
ಬಾಳೀಯ ಕಾಯಾಗೀ ಬರತೀನೀ ಊರ ಸೇರತೀನಿ
ಬೆಲ್ಲ ಕೊಟ್ಟು ಸನ್ನೆ ಮಾಡಿ ಬಲ್ಲರೇನೆ
ಜಾಣೆ ಬಲ್ಲರೇನೆ.

೫

ದೇವರ ಗುಡ್ಡಕ್ಕೆ ಹೋಗಿದ್ನವ್ವ ನಾನೂ
ನನ್ನ ಗೆಣಿಯ ಬರ್ಲಿಲ್ಲ
ಗೆಣಿಯ ಬರ್ಲಿಲ್ಲ, ಸಣ್ಣ ಹುಡುಗಾ ಬರ್ಲಿಲ್ಲ
ಗೆಣಿಯ ಬರ್ಲಿಲ್ಲ, ಸಣ್ಣ ಹುಡುಗಾ ಬರ್ಲಿಲ್ಲ
ದೇವರ ಗುಡ್ಡಕ್ಕೆ ಹೋಗಿದ್ನವ್ವ ನಾನೂ

ನನ್ನ ಗೆಣೆಯ ಬರ್ಲಿಲ್ಲ ॥ಪ॥

ಯಾರ ಕೂಟ ಮಾತಾಡ್ಲವ್ವ ನಾನೂ
ನನ್ನ ಗೆಣೆಯ ಬರ್ಲಿಲ್ಲ
ಗೆಣೆಯ ಬರ್ಲಿಲ್ಲ, ಸಣ್ಣ ಹುಡುಗ ಬರ್ಲಿಲ್ಲ ॥ಪ॥

ಸೇರು ಬ್ಯಾಳಿ ಹಾಕಿದ್ನವ್ವಾ ನಾನೂ
ನನ್ನ ಗೆಣೆಯ ಬರ್ಲಿಲ್ಲ
ಗೆಣೆಯ ಬರ್ಲಿಲ್ಲ, ಸಣ್ಣ ಹುಡುಗ ಬರ್ಲಿಲ್ಲ ॥ಪ॥

ಯಾರಿಗಂತ ನೀಡಲವ್ವ ನಾನೂ
ನನ್ನ ಗೆಣೆಯ ಬರ್ಲಿಲ್ಲ
ಗೆಣೆಯ ಬರ್ಲಿಲ್ಲ, ಸಣ್ಣ ಹುಡುಗ ಬರ್ಲಿಲ್ಲ ॥ಪ॥

ದೇವರ ಗುಡ್ಡಕ್ಕೆ ಹೋಗಿದ್ನವ್ವ ನಾನೂ
ನನ್ನ ಗೆಣೆಯ ಬರ್ಲಿಲ್ಲ
ಗೆಣೆಯ ಬರ್ಲಿಲ್ಲ, ಸಣ್ಣ ಹುಡುಗಾ ಬರ್ಲಿಲ್ಲ
ಗೆಣೆಯ ಬರ್ಲಿಲ್ಲ, ಸಣ್ಣ ಹುಡುಗಾ ಬರ್ಲಿಲ್ಲ
ದೇವರ ಗುಡ್ಡಕ್ಕೆ ಹೋಗಿದ್ನವ್ವ ನಾನೂ
ನನ್ನ ಗೆಣೆಯ ಬರ್ಲಿಲ್ಲ

ವಕ್ತೃವಿವರ

ಕ್ರ.ಸಂ.	ಹೆಸರು	ವಯಸ್ಸು	ವೃತ್ತಿ	ಊರು	ತಾಲೂಕು
೧.	ಅಂಜಿನಪ್ಪ	೭೫	ವ್ಯವಸಾಯ	ಚಿಕ್ಕ ಅಬ್ಬಿಗೆರೆ	ಚನ್ನಗಿರಿ
೨	ಅಣ್ಣಪ್ಪ	೨೮	ರೈಲ್ವೆ ವೃತ್ತಿ	ಮಾಚಿಹಳ್ಳಿ	ಹರಪನಹಳ್ಳಿ
೩.	ಈಸ್ಪುರಪ್ಪ	೪೦	ಕೂಲಿ	ತಿಮ್ಮಾಲಾಪುರ	ಸಂಡೂರು
೪.	ಈರಪ್ಪ	೪೫	ವ್ಯಾಪಾರ	ಅಗಸನಹಳ್ಳಿ	ಜಗಳೂರು
೫.	ಉಚ್ಚಂಗೆಮ್ಮ	೪೦	ವ್ಯವಸಾಯ	ಬತ್ತನಹಳ್ಳಿ	ಕೂಡ್ಲಿಗಿ
೬.	ಉಮಾಪತಿ	೩೫	ಕೂಲಿ	ಅಂತಪುರ	ಸಂಡೂರು
೭.	ಉಮೇಶ್	೩೫	ಕೂಲಿ/ ವ್ಯವಸಾಯ	ಕಸಾಪುರ	ಕೂಡ್ಲಿಗಿ
೮.	ಓಬಣ್ಣ	೬೦	ವ್ಯಾಪಾರ	ಮಾಚಿಹಳ್ಳಿ	ಹರಪನಹಳ್ಳಿ
೯.	ಓಂಕೇಶಿ	೨೦	ವಿದ್ಯಾರ್ಥಿ	ಗರಗ	ಹೊಸಪೇಟೆ
೧೦.	ಕಪ್ಪತಪ್ಪ	೬೦	ವ್ಯವಸಾಯ	ಗರಗ	ಹೊಸಪೇಟೆ
೧೧.	ಕಾಳಮ್ಮ	೪೨	ವ್ಯವಸಾಯ	ಗರಗ	ಹೊಸಪೇಟೆ
೧೨.	ಕಿಷ್ಟಪ್ಪ	೭೦	ವ್ಯವಸಾಯ	ಕಸಾಪುರ	ಕೂಡ್ಲಿಗಿ
೧೩.	ಕುಂಜಪ್ಪ	೪೫	ಕೂಲಿ	ಮಾಚಿಹಳ್ಳಿ	ಹರಪನಹಳ್ಳಿ
೧೪.	ಕುಮಾರ	೩೬	ಉಪನ್ಯಾಸಕ	ಕಸವನಹಳ್ಳಿ	ಜಗಳೂರು
೧೫.	ಕುಮಾರ ಸ್ವಾಮಿ	೩೦	ಶಿಕ್ಷಕರು	ಗರಗ	ಹೊಸಪೇಟೆ
೧೬.	ಕುಬೇರ	೩೩	ಕೂಲಿ/ ವ್ಯವಸಾಯ	ಗರಗ	ಹೊಸಪೇಟೆ
೧೭.	ಕೊಂಡಕ್ಕ	೫೦	ಕೂಲಿ	ಅಂತಪುರ	ಸಂಡೂರು
೧೮.	ಕೊಟ್ರೇಶ	೫೦	ವ್ಯವಸಾಯ	ಬತ್ತನಹಳ್ಳಿ	ಕೂಡ್ಲಿಗಿ

೧೯.	ಗಂಗಮ್ಮ	૩೮	ವ್ಯವಸಾಯ	ತಿಮ್ಮಾಲಾಪುರ	ಸಂಡೂರು
೨೦.	ಗಂಗಪ್ಪ	೪೨	ಕೂಲಿ	ಮಾಚಿಹಳ್ಳಿ	ಹರಪನಹಳ್ಳಿ
೨೩.	ಗಿಡ್ಡಪ್ಪ	೬೮	ನಿವೃತ್ತ ರೈಲ್ವೆ ನೌಕರ	ಚಿಕ್ಕಬೆನ್ನೂರು	ಚನ್ನಗಿರಿ
೨೪.	ಗೋಣೆಪ್ಪ	೬೦	ವ್ಯವಸಾಯ	ಕಸವನಹಳ್ಳಿ	ಜಗಳೂರು
೨೫.	ಚಂದನ	೨೦	ವಿದ್ಯಾರ್ಥಿನಿ	ಬತ್ತನಹಳ್ಳಿ	ಕೂಡ್ಲಿಗಿ
೨೬.	ಜಂಪ್ಲಕ್ಕ	೪೦	ಕೂಲಿ	ಚಿಕ್ಕ ಅಬ್ಬಿಗೆರೆ	ಚನ್ನಗಿರಿ
೨೭.	ಜಯಕ್ಕ	೫೪	ವ್ಯವಸಾಯ	ತಿಮ್ಮಾಲಾಪುರ	ಸಂಡೂರು
೨೮.	ಜಯಪ್ಪ	೪೫	ಜವಾನ	ನಿಂಗೆನಹಳ್ಳಿ	ಕೂಡ್ಲಿಗಿ
೨೯.	ಜಗನ್ನಾಥ	೩೫	ಕೂಲಿ	ಅಗ್ರಹಾರ	ಹರಪನಹಳ್ಳಿ
೩೦.	ಜಾತಪ್ಪ	೩೩	ಕೂಲಿ	ಗರಗ	ಹೊಸಪೇಟೆ
೩೧.	ಜೀವನಾಗ	೬೦	ವ್ಯಾಪಾರ	ಗೂಬನಹಳ್ಳಿ	ಜಗಳೂರು
೩೨.	ಟಂಗಪ್ಪ	೩೭	ಕೂಲಿ/ ವ್ಯವಸಾಯ	ಗರಗ	ಹೊಸಪೇಟೆ
೩೩.	ತಾಟವ್ವ	೩೦	ಕೂಲಿ	ಮರೂಟ್ಲ	ಸಂಡೂರು
೩೪.	ತಿಮ್ಮಣ್ಣ	೪೫	ಕೂಲಿ	ಶಿವಪುರ	ಹೂವಿನ ಹಡಗಲಿ
೩೫.	ತಿಪ್ಪಣ್ಣ	೪೦	ಕೂಲಿ	ಹುಲಿಕಟ್ಟೆ	ಹರಪನಹಳ್ಳಿ
೩೬.	ತಿರುಮಲ	೪೦	ಕೂಲಿ	ಗೂಬನಹಳ್ಳಿ	ಜಗಳೂರು
೩೭.	ದುರುಗಪ್ಪ	೬೦	ವ್ಯವಸಾಯ	ಬಿಕ್ಕಿಕಟ್ಟೆ	ಹೊನ್ನಳ್ಳಿ
೩೮.	ದೇವಮ್ಮ	೫೦	ವ್ಯವಸಾಯ	ಪವನಪುರ	ಹರಪನಹಳ್ಳಿ
೩೯.	ನಾಗಮ್ಮ	೬೫	ವ್ಯವಸಾಯ	ಗರಗ	ಹೊಸಪೇಟೆ
೪೦.	ನಾಗರಾಜ	೩೬	ವ್ಯವಸಾಯ	ಗರಗ	ಹೊಸಪೇಟೆ
೪೧.	ನಾಗರಾಜ	೪೦	ಕೂಲಿ	ಗುಗ್ರಿಪಟ್ಟ	ಬಳ್ಳಾರಿ
೪೨.	ನಾಗಪ್ಪ	೪೫	ಕೂಲಿ/ ವ್ಯಾಪಾರ	ಸಿಂಗ್ರೆಹಳ್ಳಿ	ದಾವಣಗೆರೆ
೪೩.	ನಾಗಪ್ಪ	೭೨	ವ್ಯಾಪಾರ	ಬಂದ್ರಕಿ ಕ್ಯಾಂಪ್	ದಾವಣಗೆರೆ
೪೪.	ನಿರಂಜನ	೩೦	ಶಿಕ್ಷಕರು	ನಿಂಗೆನಹಳ್ಳಿ	ಕೂಡ್ಲಿಗಿ

೪೫.	ನಿರಂಜನ	೩೨	ಪೋಲೀಸ್	ಅಗಸನಹಳ್ಳಿ	ಜಗಳೂರು
೪೬.	ನಿಂಗಪ್ಪ	೩೩	ನೌಕರ	ಗರಗ	ಹೊಸಪೇಟೆ
೪೭.	ನಾಗೇಂದ್ರ	೩೫	ಕೂಲಿ	ಗರಗ	ಹೊಸಪೇಟೆ
೪೮.	ನಾರಾಯಣ	೩೬	ನೌಕರ	ಗರಗ	ಹೊಸಪೇಟೆ
೪೯.	ನೀಲಮ್ಮ	೨೮	ವಿದ್ಯಾರ್ಥಿನಿ	ಪವನಪುರ	ಹರಪನಹಳ್ಳಿ
೫೦.	ಪೆನ್ನಕ್ಕ	೩೮	ಕೂಲಿ	ಚಿಕ್ಕಬೆನ್ನೂರು	ಚನ್ನಗಿರಿ
೫೧.	ಪುಟ್ಟಪ್ಪ	೬೫	ವ್ಯವಸಾಯ	ಅಗ್ರಹಾರ	ಹರಪನಹಳ್ಳಿ
೫೨.	ಪೂರ್ಣಿಮ	೨೦	ವಿದ್ಯಾರ್ಥಿನಿ	ತಿಮ್ಮಾಲಾಪುರ	ಸಂಡೂರು
೫೩.	ಪ್ರಕಾಶ	೨೬	ವಿದ್ಯಾರ್ಥಿ	ಗರಗ	ಹೊಸಪೇಟೆ
೫೪.	ಬಳ್ಳಕ್ಕ	೪೮	ವ್ಯವಸಾಯ	ಗರಗ	ಹೊಸಪೇಟೆ
೫೫.	ಬಕ್ಕಣ್ಣ	೭೦	ವ್ಯವಸಾಯ	ಬತ್ತನಹಳ್ಳಿ	ಕೂಡ್ಲಿಗಿ
೫೬	ಮಲ್ಲಕ್ಕ	೪೮	ಕೂಲಿ	ಚಿಲಕನಹಟ್ಟಿ	ಹೊಸಪೇಟೆ
೫೭.	ಮಾಂತೇಶ	೩೦	ವಿದ್ಯಾರ್ಥಿ	ಮಾಚಿಹಳ್ಳಿ	ಹರಪನಹಳ್ಳಿ
೫೮.	ಮಾರಗದಪ್ಪ	೪೫	ಶಿಕ್ಷಕರು	ಚಿಲಕನಹಟ್ಟಿ	ಹೊಸಪೇಟೆ
೫೯.	ಮುರಿಗೇಶಿ	೪೦	ಕೂಲಿ	ಗಜಾಪುರ	ಕೂಡ್ಲಿಗಿ
೬೦.	ಮೈಲಕ್ಕ	೫೪	ವ್ಯವಸಾಯ	ಗರಗ	ಹೊಸಪೇಟೆ
೬೧.	ಮೈಲಪ್ಪ	೫೫	ವ್ಯಾಪಾರ	ಗೂಬನಹಳ್ಳಿ	ಜಗಳೂರು
೬೨.	ಯಂಕಪ್ಪ	೪೦	ಕೂಲಿ	ಮರೂಟ್ಲ	ಸಂಡೂರು
೬೩.	ಯಂಕಟಮ್ಮ	೬೦	ಗೃಹಿಣಿ	ದಾವಣಗೆರೆ	ದಾವಣಗೆರೆ
೬೪.	ರಂಗಮ್ಮ	೭೦	ವ್ಯವಸಾಯ	ಅಗಸನಹಳ್ಳಿ	ಜಗಳೂರು
೬೫.	ರಾಜಪ್ಪ	೪೮	ಕೂಲಿ	ಚಿಕ್ಕಬೆನ್ನೂರು	ಚನ್ನಗಿರಿ
೬೬.	ರಾಮಣ್ಣ	೬೦	ವ್ಯವಸಾಯ	ಎಸ್.ಬಿ.ಆರ್.ಕಾಲೋನಿ	ಚನ್ನಗಿರಿ
೬೭.	ರವಿಕುಮಾರ	೩೪	ಶಿಕ್ಷಕರು	ಬತ್ತನಹಳ್ಳಿ	ಕೂಡ್ಲಿಗಿ
೬೮.	ರುದ್ರಣ್ಣ	೪೮	ಕೂಲಿ/ವ್ಯಾಪಾರ	ಚಿಕ್ಕಬೆನ್ನೂರು	ಚನ್ನಗಿರಿ
೬೯.	ರೇವಪ್ಪ	೩೬	ಕೂಲಿ	ತೆಲಿಗಿ	ಹರಿಹರ
೭೦.	ಲಕ್ಷ್ಮೀ	೨೪	ವಿದ್ಯಾರ್ಥಿನಿ	ಬತ್ತನಹಳ್ಳಿ	ಕೂಡ್ಲಿಗಿ
೭೧.	ಲಿಂಗಪ್ಪ	೩೮	ಕೂಲಿ	ಯಲ್ಲಾಪುರ	ಹರಪನಹಳ್ಳಿ

೭೨.	ವರಲಕ್ಷ್ಮಿ	३೫	ಕೂಲಿ	ಅಂತಪುರ	ಸಂಡೂರು
೭೩.	ವಿರೇಶ	೨೮	ಕೂಲಿ	ಗುಗ್ರಿಹಟ್ಟಿ	ಬಳ್ಳಾರಿ
೭೪.	ಶಾರದಮ್ಮ	೩೩	ಕೂಲಿ	ಗಜಾಪುರ	ಕೂಡ್ಲಿಗಿ
೭೫.	ಸಂಜೀವ	೨೪	ವಿದ್ಯಾರ್ಥಿ	ಗೆದ್ದಹಟ್ಟಿ	ಚನ್ನಗಿರಿ
೭೬.	ಸತ್ಯಪ್ಪ	೪೦	ವ್ಯವಸಾಯ	ಜಗಳೂರು	ಜಗಳೂರು
೭೭.	ಸುಂಕಪ್ಪ	೫೫	ವ್ಯವಸಾಯ	ಅಗಸನಹಳ್ಳಿ	ಜಗಳೂರು
೭೮.	ಸುಂಕಮ್ಮ	೬೦	ವ್ಯವಸಾಯ	ನಿಂಗೆನಹಳ್ಳಿ	ಕೂಡ್ಲಿಗಿ
೭೯.	ಸುಬ್ಬಣ್ಣ	೬೫	ವ್ಯವಸಾಯ	ಕುರುಬನಹಳ್ಳಿ	ಹೊನ್ನಳ್ಳಿ
೮೦.	ಸುರೇಶ	೨೬	ವಿದ್ಯಾರ್ಥಿ	ತಿಮ್ಮಾಲಾಪುರ	ಸಂಡೂರು
೮೧.	ಸುರೇಶ	೩೩	ವ್ಯವಸಾಯ	ಮರೂಟ್ಲ	ಸಂಡೂರು
೮೨.	ಸೌಡಕ್ಕ	೪೮	ಕೂಲಿ	ಬತ್ತನಹಳ್ಳಿ	ಕೂಡ್ಲಿಗಿ
೮೩.	ಸೌಡಪ್ಪ	೭೦	ವ್ಯವಸಾಯ	ಕುರುಬನಹಳ್ಳಿ	ಹೊನ್ನಳ್ಳಿ
೮೪.	ಹನುಮಂತಪ್ಪ	೬೦	ವ್ಯಾಪಾರ	ಪವನಪುರ	ಹರಪನಹಳ್ಳಿ
೮೫.	ಹನುಮಂತ	೩೫	ವ್ಯವಸಾಯ	ಅಗಸನಹಳ್ಳಿ	ಜಗಳೂರು
೮೬.	ಹನುಮಂತಪ್ಪ	೫೫	ಶಿಕ್ಷಕರು	ಹರಪನಹಳ್ಳಿ	ಹರಪನಹಳ್ಳಿ
೮೭.	ಹಾಲಪ್ಪ	೩೫	ಕೂಲಿ	ಕಲ್ಲಳ್ಳಿ	ಕೂಡ್ಲಿಗಿ
೮೮.	ಹೇಮಣ್ಣ	೫೦	ವ್ಯವಸಾಯ	ಗರಗ	ಹೊಸಪೇಟೆ
೮೯.	ಮಾರಕ್ಕ	೨೮	ವಿದ್ಯಾರ್ಥಿನಿ	ಬತ್ತನಹಳ್ಳಿ	ಕೂಡ್ಲಿಗಿ
೯೦.	ಕೊಮಾರಪ್ಪ	೬೩	ನಿವೃತ್ತ ರೈಲ್ವೆ ನೌಕರ	ಹರಿಹರ	ಹರಿಹರ
೯೧.	ಗುರಪ್ಪ	೪೯	ವ್ಯವಸಾಯ	ಚಿಕ್ಕ ಅಬ್ಬಿಗೆರೆ	ಚನ್ನಗಿರಿ
೯೨.	ತಿಮ್ಮಪ್ಪ	೬೫	ವ್ಯಾಪಾರ	ಕೂನಬೇವು	ಜಗಳೂರು

ಪರಮರ್ಶನಾ ಗ್ರಂಥಗಳು

೧. ಅಂಗಡಿ ಎಸ್.ಎಸ್., ೧೯೯೬, **ಭಾಷಾ ಕ್ಷೇತ್ರಕಾರ್ಯ**, ಸಮಾಜ ಪುಸ್ತಕಾಲಯ, ಧಾರವಾಡ

೨. ಅಂಗಡಿ ಎಸ್.ಎಸ್., ೨೦೦೨, **ಕನ್ನಡ ಕ್ರಿಯಾರೂಪಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩. ಅಂಗಡಿ ಎಸ್.ಎಸ್., ೨೦೦೨, **ಸಂಬಂಧವಾಚಕಗಳು ಮತ್ತು ಸಂಬೋಧನೆಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೪. ಅಂಗಡಿ ಎಸ್.ಎಸ್., ೨೦೦೮, **ಕರ್ನಾಟಕ ಬುಡಕಟ್ಟು ಭಾಷೆ**, ಸೃಷ್ಟಿ ಪಬ್ಲಿಕೇಷನ್ಸ್, ಬೆಂಗಳೂರು

೫. ಅಕ್ಕಮಹಾದೇವಿ., (ಅನು), ೧೯೮೪, **ಬುಡಕಟ್ಟು ನ್ಯಾಯ**, ಮೈಸೂರು ವಿಶ್ವವಿದ್ಯಾಲಯ, ಮೈಸೂರು

೬. ಕೆಂಪೇಗೌಡ ಕೆ., ೧೯೯೬, **ತೌಲನಿಕ ದ್ರಾವಿಡ ಭಾಷಾ ವಿಜ್ಞಾನ**, ಭಾರತಿ ಪ್ರಕಾಶನ, ಮೈಸೂರು

೭. ಕೆಂಪೇಗೌಡ ಕೆ., ೨೦೦೯, **ಭಾಷೆ–ಸಮಾಜ ಸಂಸ್ಕೃತಿ**, ಲೇಖಕ ಪ್ರಕಾಶನ, ಮೈಸೂರು

೮. ಕೆಂಪೇಗೌಡ ಕೆ., ೨೦೦೩, **ಕನ್ನಡ ಉಪಭಾಷೆಗಳ ಅಧ್ಯಯನ**, ನವಭಾರತಿ ಪ್ರಕಾಶನ, ಮೈಸೂರು

೯. ಕೆಂಪೇಗೌಡ ಕೆ., **ಉಪಭಾಷೆಗಳ ತೌಲನಿಕ ಅಧ್ಯಯನ**, ಭಾರತಿ ಪ್ರಕಾಶನ, ಮೈಸೂರು

೧೦. ಕೆಂಪೇಗೌಡ ಕೆ., ೧೯೯೩, **ಸಾಮಾನ್ಯ ಭಾಷಾವಿಜ್ಞಾನ**, ಭಾರತಿ ಪ್ರಕಾಶನ, ಮೈಸೂರು

೧೧. ಕಟ್ಟಿ ಎ.ಆರ್., ೧೯೮೦, **ಸಮಾಜ ಶಾಸ್ತ್ರದ ಮೂಲತತ್ವಗಳು**, ವಿಜಯ ಬುಕ್ ಡಿಪೋ, ಗದಗ

೧೨. **ಕರ್ನಾಟಕದ ಗ್ರಾಮಸೂಚಿ**, ೧೯೮೫, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು

೧೩. ಕಲಬುರ್ಗಿ ಎಂ.ಎಂ., ೧೯೯೯, **ಕನ್ನಡ ನಾಮವಿಜ್ಞಾನ**, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

೧೪. ಕಿಕ್ಕೇರಿ ನಾರಾಯಣ., ೨೦೧೧, **ಬುಡಕಟ್ಟು ಸಂಸ್ಕೃತಿ**, ಅರುಹು ಕುರುಹು ಪ್ರಕಾಶನ, ಮೈಸೂರು

೧೫. ಕೀರ್ತಿನಾಥ ಕುರ್ತಕೋಟಿ, ೨೦೦೬, **ಭಾಷೆ ಮತ್ತು ಸಂಸ್ಕೃತಿ,** ಕುರ್ತಕೋಟಿ ಮೆಮೋರಿಯಲ್ ಟ್ರಸ್ಟ್, ಧಾರವಾಡ

೧೬. ಕುಶಾಲಪ್ಪಗೌಡ ಕೆ., ೧೯೯೧, **ಕನ್ನಡ ತಿರುಳಕನ್ನಡ ಮತ್ತು ಸಮಾಜ,** ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

೧೭. ಕೇಶವನ್ ಪ್ರಸಾದ್ ಕೆ., ೨೦೦೫, **ಬುಡಕಟ್ಟು ವಿಸ್ಮಯ,** ಅಭಿರುಚಿ ಪ್ರಕಾಶನ, ಮೈಸೂರು

೧೮. ಕೃಷ್ಣಯ್ಯ ಎಂ.ಎಚ್., ೧೯೯೯, **ಸಂಕ್ಷಿಪ್ತ ಕನ್ನಡ ಭಾಷೆಯ ಚರಿತ್ರೆ,** ಅಂಕಿತ ಪುಸ್ತಕ, ಬೆಂಗಳೂರು

೧೯. ಕೃಷ್ಣಪರಮೇಶ್ವರಭಟ್ಟ., ೧೯೯೫, **ಕನ್ನಡ–ತೆಲುಗು ದ್ವಿಭಾಷಿಕ ಅಧ್ಯಯನ,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೨೦. ಕೃಷ್ಣಪರಮೇಶ್ವರಭಟ್ಟ., ೨೦೧೩, **ಭಾಷೆ ಮತ್ತು ಸಾಮಾಜಿಕ ಸಂದರ್ಭ,** ಅಭಿನವ ಪ್ರಕಾಶನ, ಬೆಂಗಳೂರು

೨೧. ಗೊರವರ ಬ.ಸೋ., ೨೦೦೮, **ಕನ್ನಡ ರಚನಾತ್ಮಕ ಮತ್ತು ಸಮಾಜೋಭಾಷಿಕ ಅಧ್ಯಯನ,** ಲಡಾಯಿ ಪ್ರಕಾಶನ, ಗದಗ

೨೨. ಚಿದಾನಂದಮೂರ್ತಿ ಎಂ., ೨೦೦೦, **ಸಂಶೋಧನೆ,** ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು

೨೩. ಜಯಪ್ಪ ಕೆ.ವಿ., ೨೦೧೬, **ಕೊರಚರ ಭಾಷೆ: ವರ್ಣನಾತ್ಮಕ, ತೌಲನಿಕ ಅಧ್ಯಯನ,** ರೂಪರಶ್ಮಿ ಪ್ರಕಾಶನ, ಧಾರವಾಡ

೨೪. ತಂಗ ಮಣಿಯನ್., ೨೦೦೩, **ದ್ರಾವಿಡ ಭಾಷೆಗಳ ತೌಲನಿಕ ಅಧ್ಯಯನ,** ರಾಜೇಂದ್ರ ಪ್ರಕಾಶನ, ಮೈಸೂರು

೨೫. ತಪಸ್ವೀಕುಮಾರ್ ನಂ., ೨೦೦೦, **ಸಂಸ್ಕೃತಿ ವಿಕಾಸ,** ಚಿಂತನ ಬುಕ್ ಹೌಸ್, ಮೈಸೂರು

೨೬. **ದ್ರಾವಿಡ ನಿಘಂಟು,** ೨೦೦೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೭. ನಾಗರಾಜಯ್ಯ ಹಂ.ಪ., ೨೦೧೩, **ದ್ರಾವಿಡ ಭಾಷಾ ವಿಜ್ಞಾನ,** ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು

೨೮. ನಾರಾಯಣ ಕೆ.ವಿ., ೧೯೯೮, **ದ್ವಿಭಾಷಿಕತೆ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೯. ನಾರಾಯಣ ಕೆ.ವಿ., ೧೯೯೯, **ಸ್ಥಳನಾಮಗಳು ಪರಿವರ್ತನೆ ಮತ್ತು ಪ್ರಭಾವ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩೦. ನಾರಾಯಣ ಕೆ.ವಿ., ೨೦೦೦, **ಭಾಷೆ ವಿಶ್ವಕೋಶ–೧,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩೧. ನಾರಾಯಣ ಕೆ.ವಿ., ೨೦೦೫, **ನಮ್ಮೊಡನೆ ನಮ್ಮನುಡಿ,** ಲೋಹಿಯಾ ಪ್ರಕಾಶನ, ಬಳ್ಳಾರಿ

೩೨. ನಾರಾಯಣ ಕೆ.ವಿ., ೨೦೦೮, **ವ್ಯಕ್ತಿನಾಮಗಳ ಸ್ವರೂಪ ಮತ್ತು ವಿಶ್ಲೇಷಣೆ,** ಪ್ರಸಾರಾಂಗ, ಕನ್ನಡವಿಶ್ವವಿದ್ಯಾಲಯ,ಹಂಪಿ

೩೩. ಪರಶುರಾಮಯ್ಯ ಸಿ.ಕೆ., ೨೦೧೪, **ಗಾದೆಗಳ ಅಂತರಂಗ,** ಅಭಿಮುಖ ಪ್ರಕಾಶನ, ಬೆಂಗಳೂರು

೩೪. ಪಾಂಡುರಂಗ ಬಾಬು ಡಿ., ೨೦೦೫, **ನುಡಿ–ನೋಟ,** ಆಕಾಶ ಪ್ರಕಾಶನ, ಹೊಸಪೇಟೆ

೩೫. ಪಾಣ್ಯಂ ರಾಮಶೇಷಶಾಸ್ತ್ರಿ, ೨೦೦೫, **ತೆಲುಗು–ಕನ್ನಡ ನಿಘಂಟು,** ಸಾಹಿತ್ಯ ಅಕಾಡೆಮಿ, ಬೆಂಗಳೂರು

೩೬. ಪ್ರಭಾಕರ ಎ.ಎಸ್., ೨೦೦೬, **ಆದಿವಾಸಿ ಆಖ್ಯಾನ,** ಸಿದ್ದಾರ್ಥ ಪ್ರಕಾಶನ, ಹೊಸಪೇಟೆ

೩೭. ಪ್ರಭಾಕರ ಎ.ಎಸ್., ೨೦೦೪, **ಬುಡಕಟ್ಟು ಅಭಿವೃದ್ಧಿ ಮೀಮಾಂಸೆ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩೮. ಪ್ರಭಾಕರ ಎ.ಎಸ್., ೨೦೦೦, **ಬುಡಕಟ್ಟು ಸ್ಥಿತ್ಯಂತರಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩೯. ಪ್ರಶಾಂತ ಎಚ್.ಡಿ., (ಸಂ), ೨೦೦೦, **ಜನಸಮುದಾಯ ಸಂಪುಟ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೪೦. ಬರಗೂರು ರಾಮಚಂದ್ರಪ್ಪ (ಸಂ), **ಕನ್ನಡ ಜಾನಪದ ವಿಶ್ವಕೋಶ,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೪೧. ಭಾಗ್ಯಲಕ್ಷ್ಮೀ ಎಂ., ೨೦೦೭, **ದ್ವಿಭಾಷಿಕರು,** ಸಖಿ ಪ್ರಕಾಶನ, ಹೊಸಪೇಟೆ

೪೨. ಬೋರಲಿಂಗಯ್ಯ ಹಿ.ಚಿ., ೨೦೦೩, **ಬುಡಕಟ್ಟು ಅಧ್ಯಯನ–೧,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೪೩. ಬೋರಲಿಂಗಯ್ಯ ಹಿ.ಚಿ., ೨೦೦೧, **ವಿಸ್ಮೃತಿ ಮತ್ತು ಸಂಸ್ಕೃತಿ,** ಸಿವಿಜಿ ಪಬ್ಲಿಕೇಶನ್ಸ್, ಬೆಂಗಳೂರು

೪೪. ಬೋರಲಿಂಗಯ್ಯ ಹಿ.ಚಿ., ೧೯೯೫, **ಕಾಡು, ಕಾಂಕ್ರೀಟ್ ಮತ್ತು ಜಾನಪದ,** ಹರ್ಷ ಪ್ರಕಾಶನ, ಹೆಗ್ಗೋಡ ಸಾಗರ

೪೫. ಮಂಜುನಾಥ ಬೇವಿನಕಟ್ಟಿ, ೨೦೦೦, **ಸಾಸ್ಕೃತಿಕ ಪದಕೋಶ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೪೬. ಮಲ್ಲಾಪುರ ಬಿ.ವಿ., **ಕೊರವರು ಕೊರವಂಜಿ,** ಜನಪದ ಸಾಹಿತ್ಯ ದರ್ಶನ ಭಾಗ–೬.

೪೭. ಮಹದೇವಯ್ಯ ಪಿ., ೨೦೦೦, **ಸಾಮಾಜಿಕ ಉಪಭಾಷೆ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೪೮. ಮಹದೇವಯ್ಯ ಪಿ., ೨೦೧೪, **ಕನ್ನಡ ನುಡಿ ಬಳಕೆಯ ನೆಲೆಗಳು.**

೪೯. ಮಲ್ಲಿಕಾರ್ಜುನ ಬಿ. ಮಾನ್ವಡಿ, ೨೦೦೮, **ಕೊರಮ,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

೫೦. ಮಾನಸ, ೧೯೯೩, **ಕೊರವರ ಸಂಸ್ಕೃತಿ,** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

೫೧. ಮುತ್ತಯ್ಯ ಎಸ್.ಎಂ., ೨೦೧೧, **ಬುಡಕಟ್ಟು ಬೆರಗು,** ಅನ್ನಪೂರ್ಣ ಪಬ್ಲಿಷಿಂಗ್ ಹೌಸ್, ಬೆಂಗಳೂರು

೫೨. ಮೇತ್ರಿ ಕೆ.ಎಂ., ೨೦೦೨, **ಬುಡಕಟ್ಟು ಕುಲಕಸುಬುಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೫೩. ಮೇತ್ರಿ ಕೆ.ಎಂ., ೨೦೧೨, **ಮರಗು ಭಾಷೆ,** ಕನ್ನಡ ಭಾಷಾಭಿವೃದ್ಧಿ ಯೋಜನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೫೪. ರಮೇಶ ಸ.ಚಿ., ೨೦೦೫, **ಅಲೆಮಾರಿಗಳ ಸ್ಥಿತಿಗತಿ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೫೫. ರಹಮತ್ ತರಿಕೆರೆ, ೧೯೯೯, **ಬಹುಭಾಷಿಕ ಸಂಸ್ಕೃತಿ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೫೬. ರಾಜಪುರೋಹಿತ ಬಿ.ಬಿ., ೨೦೦೫, **ಭಾಷೆ ಮತ್ತು ಅರ್ಥಗಳ ಗುಟ್ಟು,** ಪ್ರಕಾಶಕರು ಬಿ.ಬಿ. ರಾಜಪುರೋಹಿತ, ಮೈಸೂರು

೫೭. ರಾಜೇಶ್ವರಿ ಆರ್. ವಸ್ತ್ರದ್, ೧೯೮೨, **ಭಾಷೆ ಮತ್ತು ಸಂಸ್ಕೃತಿ,** ಸಾಧನಕೇರಿ ರಸ್ತೆ, ಧಾರವಾಡ

೫೮. ರಾಜೇಶ್ವರಿ ಮಹೇಶ್ವರಯ್ಯ, ೧೯೮೭, **ಆಧುನಿಕ ವರ್ಣಾನಾತ್ಮಕ ಭಾಷಾವಿಜ್ಞಾನ,** ಸಮಾಜ ಪುಸ್ತಕಾಲಯ, ಧಾರವಾಡ

೫೯. ರಾಮಕೃಷ್ಣ ಆರ್., ೨೦೦೭, **ಕರ್ನಾಟಕದ ಬುಡಕಟ್ಟುಗಳು,** ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು

೬೦. ರಾಮಚಂದ್ರ ಸಿ.ಎಸ್., ೧೯೯೨, **ಸಂಕೇತಿ ಜನಾಂಗ ಸಂಸ್ಕೃತಿ ಮತ್ತು ಭಾಷೆ,** ಚರಿತ್ರೆ ಪಲ್ಲವಿ ಪ್ರಕಾಶನ, ಮೈಸೂರು

೬೧. ರಾಮಯ್ಯ ಬಿ.ಪಿ., ೨೦೦೪, **ಕೊರಮರ ಗಾದೆ ಕಥೆಗಳು,** ಸಿವಿಜಿ ಪಬ್ಲಿಕೇಷನ್, ಬೆಂಗಳೂರು

೬೨. ರಾಮಯ್ಯ ಬಿ.ಪಿ., ೨೦೦೨, **ದಕ್ಷಿಣ ಕರ್ನಾಟಕದ ಕೊರಮರು ಒಂದು ಸಾಂಸ್ಕೃತಿಕ ಅಧ್ಯಯನ,** ಮಾನಸ ಪ್ರಕಾಶನ, ಕುಮಟಾ

೬೩. ರೇವಣ ಮೈಲಹಳ್ಳಿ, ೨೦೧೨, **ಜನಪದ ಗಾದೆ ಮತ್ತು ಒಗಟುಗಳು,** ಪ್ರೇಮ ಪ್ರಕಾಶನ, ದಾವಣಗೆರೆ

೬೪. ಲಕ್ಕಪ್ಪಗೌಡ ಎಚ್.ಜಿ.(ಸಂ), ೨೦೦೦, **ಕರ್ನಾಟಕದ ಬುಡಕಟ್ಟುಗಳು, ಸಂಪುಟ–೨,** ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು

೬೫. ವಾಲಿ ಎಂ.ಎಸ್., ೧೯೯೧, **ಸಿರಿಗನ್ನಡ ಒಡಪುಗಳು,** ಭುವನೇಶ್ವರ ಪ್ರಕಾಶನ, ವಿಜಾಪುರ

೬೬. ವಿಲ್ಯಂ ಮಾಡ್ತಾ, ೧೯೭೫, **ಕನ್ನಡ ಭಾಷೆಯ ರೂಪರೇಷೆಗಳು,** ಕರ್ನಾಟಕ ಭಾರತಿ–೧ ಮತ್ತು ೨, ಧಾರವಾಡ

೬೭. ವೀಣಾ ಎಂ.ಪಿ., ೨೦೦೦, **ಮನೆ, ಸಮಾಜ ಮತ್ತು ಸಂಸ್ಕೃತಿ,** ನೆಲೆಮನೆ ಪ್ರಕಾಶನ, ಬೆಂಗಳೂರು

೬೮. ವೆಂಕಟೇಶ ಜಿ. ಮಲ್ಲೆಪುರಂ, ೨೦೦೩, **ದ್ರಾವಿಡಶಾಸ್ತ್ರ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೬೯. ವೆಂಕಟಸುಬ್ಬಯ್ಯ ಜಿ., ೧೯೯೮, **ಎರವಲು ಪದಕೋಶ,** ನವಕರ್ನಾಟಕ ಪಬ್ಲಿಕೇಶನ್ಸ್ ಪ್ರೈವೇಟ್ ಲಿಮಿಟೆಡ್ ಏಜೆನ್ಸಿ ಸೆಂಟರ್, ಬೆಂಗಳೂರು

೭೦. ಶಂಕರಾನಂದ ಉತ್ಲಾಸರ, ೧೯೮೧, **ಜನಪದ ಒಡಪುಗಳು,** ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು

೭೧. ಶಂಕರನಾರಾಯಣ ತೀ.ನಂ., ವೆಂಕಟೇಶ ಎಂ.ಎನ್., (ಸಂ). ೨೦೦೪, **ಜನಪದ ಸಾಹಿತ್ಯ ಪ್ರಕಾರಗಳು,** ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು

೭೨. ಶಾಂತ ಇಮ್ರಾಪುರ, (ಸಂ). ೨೦೦೬, **ಕನ್ನಡ ಗಾದೆಗಳು,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು

೭೩. ಶಿರೂರು ಬಿ.ವಿ., ೨೦೦೦, **ಸಂಶೋಧನಾ ಸ್ವರೂಪ,** ಅನ್ನಪೂರ್ಣ ಪ್ರಕಾಶನ, ಹುಬ್ಬಳ್ಳಿ

೭೪. ಸಂಗಮೇಶ ಸವದತ್ತಿ ಮಠ, ೧೯೭೬, **ತೌಲನಿಕ ದ್ರಾವಿಡ ಭಾಷಾ ವಿಜ್ಞಾನ,** ರೂಪರಶ್ಮಿ ಪ್ರಕಾಶನ, ಧಾರವಾಡ

೭೫. ಸಂಗಮೇಶ ಸವದತ್ತಿ ಮಠ, ೧೯೭೯, **ಕನ್ನಡ ಭಾಷಾ ವ್ಯಾಸಂಗ,** ರೂಪರಶ್ಮಿ ಪ್ರಕಾಶನ, ಧಾರವಾಡ

೭೬. ಸಂಗಮೇಶ ಸವದತ್ತಿ ಮಠ, ೧೯೯೮, **ಕನ್ನಡ ಭಾಷಾ ಪ್ರಭೇದಗಳು,** ಮಂಟಪಮಾಲೆ-೪೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೭೭. ಸಂಗಮೇಶ ಸವದತ್ತಿ ಮಠ, ೨೦೦೮, **ಕನ್ನಡ ಭಾಷಾ ಸ್ವರೂಪ,** ರೂಪರಶ್ಮಿ ಪ್ರಕಾಶನ, ಕಲಬುರ್ಗಿ

೭೮. ಸಂಪಟೂರು ವಿಶ್ವನಾಥ, ೨೦೦೮, **ಜನಪ್ರಿಯ ನೂರಾರು ಅರ್ಥಸಹಿತ ಗಾದೆಗಳು,** ವಸಂತ ಪ್ರಕಾಶನ, ಬೆಂಗಳೂರು

೭೯. ಸಣ್ಣರಾಮ, ೨-೦೦೧, **ಬುಡಕಟ್ಟು ಸಂಸ್ಕೃತಿ,** ಪ್ರಸಾರಾಂಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ

೮೦. ಸಾಂಬಮೂರ್ತಿ, ೨೦೦೪, **ಭಾಷೆ ಅಶಾಬ್ದಿಕ ಸಂವಹನ,** ಸಿವಿಜಿ ಪಬ್ಲಿಕೇಶನ್ಸ್, ಬೆಂಗಳೂರು

೮೧. ಸಾಂಬಮೂರ್ತಿ, ೨೦೦೬, **ಕನ್ನಡದಲ್ಲಿ ಪ್ರತ್ಯಯಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೮೨. ಸಾಂಬಮೂರ್ತಿ, ೨೦೧೧, **ಕನ್ನಡ ಕ್ರಿಯಾರಚನೆ ಬಗೆಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೮೩. ಸುಧಾಕರ, ೧೯೭೩, **ನಮ್ಮ ಸುತ್ತಿನ ಗಾದೆಗಳು,** ಕಾವ್ಯಾಶ್ರೀ ಪ್ರಕಾಶನ, ಮೈಸೂರು

೮೪. ಸೋಮಶೇಖರಗೌಡ, ೧೯೮೦, **ಆಡು ಮಾತಿನ ಕನ್ನಡ,** ಕನ್ನಡ ಸಾಹಿತ್ಯ ಪತ್ರಿಕೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೮೫. ಸೋಮಶೇಖರಗೌಡ, ೨೦೦೭, **ಸಾಮಾಜಿಕ ಭಾಷಾ ವಿಜ್ಞಾನ,** ಪ್ರಸಾರಾಂಗ, ಮಾನಸ ಗಂಗೋತ್ರಿ, ಮೈಸೂರು

೮೬. ಸ್ವಾಮಿ ಎಚ್.ಆರ್., ೨೦೧೦, **ಕೊರಚ ಜನಾಂಗ ಒಂದು ಅಧ್ಯಯನ,** ಸಚಿನ್ ಗ್ರಾಫಿಕ್, ಮೈಸೂರು

ಸಂಶೋಧನಾ ಪ್ರಬಂಧಗಳು (ಎಂ.ಫಿಲ್., ಪಿಎಚ್.ಡಿ. ಮತ್ತು ಡಿ.ಲಿಟ್)

೧. ಆಂಜನೇಯ, ೨೦೦೬, **ಮ್ಯಾಸಬೇಡರ ಕನ್ನಡ ಸಮಜೋಭಾಷಿಕ ಅಧ್ಯಯನ,** ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨. ಓಂಪ್ರಕಾಶ ನಾಯಕ ಬಿ., ೨೦೦೨, **ಬಳ್ಳಾರಿ ವ್ಯವಹಾರಿಕ ಕನ್ನಡದ ಉಚ್ಚಾರಣೆ ಮತ್ತು ಧ್ವನಿ ನಿಯಮಗಳು,** ಎಂ.ಫಿಲ್. ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩. ಕರಿಬಸಪ್ಪ ಎ., ೨೦೦೩, **ಬಳ್ಳಾರಿ ಜಿಲ್ಲೆಯ ಐತಿಹ್ಯಗಳು,** ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೪. ಕೃಷ್ಣಮೂರ್ತಿ ಎನ್., ೨೦೦೩, **ಒಡಿಗ ಬುಡಕಟ್ಟು ಸಮುದಾಯ; ಒಂದು ಅಧ್ಯಯನ,** ಪಿಎಚ್.ಡಿ. ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೫. ಗಿರಿಧರ ರಾವ್ ಹವಲ್ದಾರ, ೨೦೦೦, **ಕೊರಚರು ಒಂದು ಸಾಂಸ್ಕೃತಿಕ ಅಧ್ಯಯನ,** ಡಿ.ಲಿಟ್. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೬. ಛಾಯ ಆರ್.ಪಿ., ೨೦೦೮, **ದ್ರಾವಿಡ ಭಾಷಾ ಪರಿವಾರ,** ಎಂ.ಫಿಲ್. ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೭. ಜಗದೇವಿ, ೨೦೧೩, **ಕಿಳ್ಳೇಕ್ಯಾತ ಜನಾಂಗದ ಒಂದು ಸಂಕ್ಷಿಪ್ತ ಅಧ್ಯಯನ,** ಎಂ.ಫಿಲ್. ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೮. ಬೋರಲಿಂಗಯ್ಯ ಹಿ.ಚಿ., ೨೦೦೦, **ಒಂದು ಬುಡಕಟ್ಟಿನ ಲೋಕ ದೃಷ್ಟಿ,** ಪಿಎಚ್.ಡಿ. ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೯. ಮಧು ಎಂ.ಎನ್., ೨೦೦೭, **ಹೊಸಪೇಟೆ ಪ್ರದೇಶ ಚಾರಿತ್ರಿಕ ಅಧ್ಯಯನ,** ಎಂ.ಫಿಲ್. ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೦. ಮರಿಸ್ವಾಮಿ ಆರ್., ೨೦೧೪, **ಸೋಲಿಗ ಸಮಾಜೋಭಾಷಿಕ ಅಧ್ಯಯನ,** ಪಿಎಚ್.ಡಿ. ಮಹಾಪ್ರಬಂಧ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು

೧೧. ಮಾರೆಪ್ಪ, ೨೦೦೯, **ಹಂಪಿ ಪರಿಸರದ ಬುಡಕಟ್ಟು ಸಮುದಯಗಳ ಸಾಮಾಜಿಕ ಅಧ್ಯಯನ,** ಎಂ.ಫಿಲ್. ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೨. ಮಹಾದೇವ ೨೦೦೮, **ಕನ್ನಡ ಭಾಷೆಗಳ ಪ್ರಭಾವ ಒಂದು ಅಧ್ಯಯನ,** ಎಂ.ಫಿಲ್. ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೩. ಮಾರುತಿ ವಿ.ಸಿ., ೨೦೦೨, **ಗೋಸಂಗಿ ಸಮುದಾಯ: ಒಂದು ಅಧ್ಯಯನ,** ಪಿಎಚ್.ಡಿ. ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೪. ತಿಪ್ಪೆಸ್ವಾಮಿ ಎಚ್., ೨೦೦೦, **ದಾವಣಗೆರೆ ಜಿಲ್ಲೆಯ ದೇವಾಲಯಗಳು,** ಪಿಎಚ್.ಡಿ. ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೫. ರಾಧಮ್ಮ ೨೦೦೯, **ಕೊರವರ ಸಮುದಾಯದ ಮಹಿಳೆ,** ಪಿಎಚ್.ಡಿ. ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೬. ಲಾವಣ್ಯ ಸಿ.ಪಿ., ೨೦೧೬, **ಕೊಡಗಿನ ಗೌಡ ಕನ್ನಡದ ಭಾಷಿಕ ನೆಲೆಗಳು,** ಪಿಎಚ್.ಡಿ. ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೭. ಶ್ರೀನಿವಾಸ ಎನ್., ೧೯೯೭, **ಮೇದರು ಮತ್ತು ಕೊರಚರ ವೃತ್ತಿ ಪದಕೋಶ,** ಎಂ.ಫಿಲ್. ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೮. ಶ್ರೀನಿವಾಸ ಎಂ.ಸಿ., ೨೦೦೪, **ಗಿರಿಜನ ಉಪಯೋಜನೆಯಡಿಯಲ್ಲಿ ಬಳ್ಳಾರಿ ಜಿಲ್ಲೆಯ ಬುಡಕಟ್ಟು ಅಭಿವೃದ್ದಿ ಅಧ್ಯಯನ,** ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೯. ಶೇಖರಾಚಾರಿ ಕೆ., ೨೦೧೦, **ಪಾಂಚಾಳರ ಭಾಷೆ ಮತ್ತು ಸಂಸ್ಕೃತಿ,** ಪಿಎಚ್.ಡಿ. ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೦. ಸಣ್ಣ ಒಬಯ್ಯ ಕೆ.ಎಸ್., ೨೦೦೨, **ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟುಗಳು: ಒಂದು ಸಮಾಜಶಾಸ್ತ್ರೀಯ ಅಧ್ಯಯನ,** ಪಿಎಚ್.ಡಿ. ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೧. ಸುದರ್ಶನ್ ಕುಮಾರ ಎಂ., ೨೦೦೮, **ಕರ್ನಾಟಕದ ಮೂಲನಿವಾಸಿ ಬುಡಕಟ್ಟು ಸಮುದಾಯಗಳ ಪರಿಸರ ಮತ್ತು ಅಭಿವೃದ್ಧಿ: ಅರ್ಥಶಾಸ್ತ್ರೀಯ ಅಧ್ಯಯನ,** ಪಿಎಚ್.ಡಿ. ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಇಂಗ್ಲಿಷ್ ಗ್ರಂಥಗಳು

1. Abbe Dubois., 1908, **Hindu Manners, Customs and Ceremonies,** 3rd Edition at The Clarendon Press, Oxford

2. Ananthakrishna Iyar L.K., 1930, **The Mysore Tribes and Castes Part-3,** Mysore University, Mysore

3. Andre Batelle, 1965, **Caste Class and Power,** University Of California Los Angels

4. Bailey F.G., 1960,Tribe, **Caste and Nation,** University Of Manchester, Manchester

5. Bhajanthri M.Y., 2008, **The Study Of Korama Speech spoken at Mundaragi taluk and Influence of Other Language On it, un published** Ph.D. theses, Karnataka University, Dharwad

6. Burrow T. And Emaneau M.B., 1986, **Dravidian Etymological Dictionarty,** Clarendon Press, Oxford

7. Enthovan R.E., 1922, **The Tribes and Castes Of Bombay Government,** Central Press, Bombay

8. Hudson R.A., 1980, **Sociolinguistics,** Cambradge University Press

9. Jakka Parthasarthy, 1988, **The Yerakula-an Ethnographic study,** Anthropological Survey Of India, Calcutta

10. Majumdar D.N., 1944, **The Fortuens Of Primitive Tribes,** The Universel Publishers, Lucknow

11. Michael Kenedy, 1908, **Criminal class In The Bombay Presidency,** Government Central Press, Bombay

12. Pandith P.B., 1972, **India as A sociolinguistuic Area, (gune Memorial culture),** Ganeshindi University Of Poona Press

13. Peter Tredgil, 1978, **Sociolinguistic Patterns in British English,** London, Arnold

14. Simhadri V.C., 1979, **Ex Criminal Tribes Of India,** National Publishing House, New Delhi

15. Shivananda V., 1997, **Sociolinguistics In Indian Context,** Vidyanidhi Prakashana, Gadaga

16. William Bright, 1990, **Language Variation In South Asia,** Oxford University Press, New York

ನಿಘಂಟುಗಳು

೧. ಕನ್ನಡ ನಿಘಂಟು, ಸಂಪುಟ-೨

೨. ಕನ್ನಡ ರತ್ನಕೋಶ

೩. ಕಿಟಲ್ ನಿಘಂಟು ಸಂಪುಟ-೨

೪. ಸಿರಿಗನ್ನಡ ಅರ್ಥಕೋಶ



ಕನ್ನಡ ಭಾಷಾಧ್ಯಯನ ವಿಭಾಗ